ವಿಷಯಾನುಕ್ರಮಣಿಕೆ

ಶ್ರೀಶಾಂಕರಭಾಷ್ಯಸಮೇತ

# ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್

(ಶಾಂಕರಭಾಷ್ಯ ಮೂಲ, ಅನುವಾದ, ಟಿಪ್ಪಣಿ – ಮುಂತಾದವುಗಳೊಡನೆ)

(ಪ್ರಕರಣಗಳು ಸಂಪುಟ – ೬)

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ.

2000

ಅಧ್ಯಾತ್ಮಗ್ರಂಥಾವಳಿ

ಶ್ರೀಶಾಂಕರಭಾಷ್ಯಸಮೇತ

# ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್

(ಶಾಂಕರಭಾಷ್ಯ ಮೂಲ, ಅನುವಾದ, ಟಿಪ್ಪಣಿ – ಮುಂತಾದವುಗಳೊಡನೆ)

(ಪ್ರಕರಣಗಳು ಸಂಪುಟ – ೬)

ಬರೆದವರು:

ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಸಂಪಾದಕ:

ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ಕ್ರಮಾಂಕ: ೧೬೬

ಪ್ರಕಾಶಕರು:

ಅಧ್ಯಾತ್ಮಪ್ರಕಾಶಕಾರ್ಯಾಲಯ

ಹೊಳೆನರಸೀಪುರ.

ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ.

2000

ಮೊದಲನೆಯ ಮುದ್ರಣ - 1974 (1000 ಪ್ರತಿಗಳು)
ಎರಡನೆಯ ಮುದ್ರಣ - 1986 (1000 ಪ್ರತಿಗಳು)
ಮೂರನೆಯ ಮುದ್ರಣ - 2000 (2000 ಪ್ರತಿಗಳು)

ಇದರ ಹಕ್ಕುಗಳೆಲ್ಲವೂ ಅಧ್ಯಾತ್ಮಪ್ರಕಾಶಕಾರ್ಯಾಲಯದವು
ALL RIGHTS RESERVED

ಮುದ್ರಣಸ್ಥಾನ:
**ಶ್ರೀ ಗಣೇಶಮಾರುತಿ ಪ್ರಿಂಟರ್ಸ್**
76, ಮೂರನೇ ಬ್ಲಾಕ್, 6ನೇ ಮೇನ್
ತ್ಯಾಗರಾಜನಗರ, ಬೆಂಗಳೂರು - 560 028
6528542

# ಮುನ್ನುಡಿ

ಬ್ರಹ್ಮೀಭೂತ ಪೂಜ್ಯ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ತಮ್ಮ ಜೀವಮಾನದ ಅತ್ಯಂತ ಕಡೆಯ ಭಾಗದಲ್ಲಿ ಅನುವಾದಿಸಿ ಅಧ್ಯಾತ್ಮಪ್ರಕಾಶಕಾರ್ಯಾಲಯದ ಮೂಲಕ ಪ್ರಕಟಿಸಿದ್ದ ಶ್ರೀವಿಷ್ಣುಸಹಸ್ರನಾಮಶಾಂಕರಭಾಷ್ಯ ಗ್ರಂಥವು ಜನಪ್ರಿಯವಾಗಿದ್ದು ಪ್ರಥಮ ದ್ವಿತೀಯ ಮುದ್ರಣಗಳ ಪ್ರತಿಗಳೆಲ್ಲ ಮಾರಾಟವಾಗಿಬಿಟ್ಟಿದ್ದರಿಂದ ಈಗ ಮೂರನೆಯಬಾರಿಗೆ ಪುನರ್ಮುದ್ರಿಸಿ ವಾಚಕರಿಗೆ ಸಮರ್ಪಿಸಲಾಗಿದೆ.

ಶ್ರೀ ಶಂಕರಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯಗಳ ಕನ್ನಡಾನುವಾದ ಗ್ರಂಥಗಳ ಪ್ರಕಟನೆಯು ಪೂರೈಸಿದ ಅನಂತರ ಆ ಮಹನೀಯರ ಹೆಸರಿನಲ್ಲಿ ಪ್ರಸಿದ್ಧವಾಗಿರುವ ಪ್ರಕರಣಗ್ರಂಥಗಳು, ಸ್ತೋತ್ರಗಳು, ಹಾಗೂ ಭಾಷ್ಯಗಳನ್ನೂ ಪೂಜ್ಯ ಶ್ರೀಶ್ರೀಗಳವರೇ ಅನುವಾದಿಸಿ ಹಿಂದೆ ಪ್ರಕಟಿಸಿದ್ದರು. ಈ ಪ್ರಕರಣಗ್ರಂಥಮಾಲೆಯಲ್ಲಿ ಶ್ರೀ ವಿಷ್ಣುಸಹಸ್ರನಾಮಭಾಷ್ಯವೂ ಸೇರಿದ್ದು ಮೂರನೆಯ ಬಾರಿಗೆ ಪುನರ್ಮುದ್ರಿತವಾಗಿ ಹೊರಬಂದಿರುವದು ನನಗೆ ಸಂತೋಷವುಂಟುಮಾಡಿದೆ.

ಪೂಜ್ಯ ಶ್ರೀಗಳವರು ಹಿಂದಿನ ಸಂಸ್ಕರಣಕ್ಕೆ ಬರೆದಿದ್ದ ಪೀಠಿಕೆಯನ್ನು ಮುಂದೆ ಕೊಡಲಾಗಿದೆ. ಸಹಸ್ರನಾಮಗಳ ಅರ್ಥಾನುಸಂಧಾನವೇ ಮುಖ್ಯಗುರಿಯಾಗಿ ಉಳ್ಳ ಭಕ್ತರಾದ ಸಹೃದಯರಾದ ವಾಚಕರಿಗೆ ಈ ಕೃತಿಯ ಕರ್ತೃಗಳ ವಿಷಯದಲ್ಲಿ ಮಂಡಿಸಿರುವ ಭಿನ್ನಾಭಿಪ್ರಾಯಗಳಿಂದ ಮತಿವಿಕ್ಷೇಪವೇನೂ ಆಗುವಂತಿಲ್ಲ. ಆದರೆ ಗ್ರಂಥಶೋಧಕರಿಗೂ ವಿಮರ್ಶಕರಿಗೂ ಉಪಯುಕ್ತವಾದ ಕೆಲವು ವಿಷಯಗಳನ್ನೂ ಇಲ್ಲಿ ಎಂದಿನಂತೆ ಅಳವಡಿಸಿದೆ. ವಾಚಕರು ಈ ಗ್ರಂಥವನ್ನು ಪ್ರೋತ್ಸಾಹಿಸಿ ಬರಮಾಡಿಕೊಳ್ಳುವರೆಂದು ನಂಬಿದ್ದೇನೆ.

ಇತಿ

ಸಜ್ಜನವಿಧೇಯ,

ಹೆಚ್.ಎಸ್. ಲಕ್ಷ್ಮೀನರಸಿಂಹಮೂರ್ತಿ

ಅಧ್ಯಾತ್ಮಗ್ರಂಥಾವಳಿಯ ಸಂಪಾದಕ.

ವಿಕ್ರಮ ಸಂ॥

ಚೈತ್ರ ಶುಕ್ಲ ಪಾಡ್ಯ

5 - 4 - 2000

# ಪೀಠಿಕೆ

ಮಹಾಭಾರತದ ಆನುಶಾಸನಿಕಪರ್ವದಲ್ಲಿ ಅಂತರ್ಗತವಾಗಿರುವ ಈ ವಿಷ್ಣುಸಹಸ್ರನಾಮಸ್ತೋತ್ರವು ಪೌರಾಣಿಕವಾದ್ದರಿಂದ ಇದರ ಪಠನದಲ್ಲಿ ಎಲ್ಲರಿಗೂ ಅಧಿಕಾರವಿದೆ- ಎಂದು ಹೇಳಬೇಕಾಗಿದೆ. ಇದಕ್ಕನುಗುಣವಾಗಿ ಈ ಸ್ತೋತ್ರದ ಫಲಶ್ರುತಿಯಲ್ಲಿಯೂ ಹೀಗಿದೆ:-

**ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್।**
**ನಾಶುಭಂ ಪ್ರಾಪ್ನುಯಾತ್ ಕಿಂಚಿತ್ ಸೋಽಮುತ್ರೇಹ ಚ ಮಾನವಃ॥**
**ವೇದಾಂತಗೋ ಬ್ರಾಹ್ಮಣಃ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್।**
**ವೈಶ್ಯೋ ಧನಸಮೃದ್ಧಃ ಸ್ಯಾತ್ ಶೂದ್ರಃ ಸುಖಮವಾಪ್ನುಯಾತ್॥**

ಯಾವನು ಈ ಸ್ತೋತ್ರವನ್ನು ಕೇಳುವನೋ ಹಾಗೂ ಯಾವನು ಕೀರ್ತನೆಮಾಡುವನೋ ಆ ಮಾನವನು ಇಲ್ಲಿ ಮತ್ತು ಪರಲೋಕದಲ್ಲಿ ಸ್ವಲ್ಪವೂ ಕೆಟ್ಟದ್ದನ್ನು ಹೊಂದುವದಿಲ್ಲ - ಎಂದು ಮನುಷ್ಯಸಾಮಾನ್ಯನನ್ನು ಕುರಿತು ಫಲಕೀರ್ತನೆಮಾಡಿರುತ್ತದೆ. ಅನಂತರ ಆಯಾ ವರ್ಣದವರಿಗೆ ಲಭಿಸುವ ವಿಶೇಷಫಲಗಳನ್ನೂ ಹೇಳಿದೆ. ಇದಕ್ಕೆ ತಕ್ಕಂತೆಯೇ ಪ್ರಸ್ಥಾನತ್ರಯಭಾಷ್ಯಕಾರರಾದ ಶ್ರೀಶಂಕರಭಗವತ್ಪಾದರು ತಮ್ಮ ಬ್ರಹ್ಮಸೂತ್ರಭಾಷ್ಯದಲ್ಲಿ ಒಂದು ಕಡೆಯಲ್ಲಿ ಹೀಗೆ ಬರೆದಿದ್ದಾರೆ: `ಶ್ರಾವಯೇತ್ ಚತುರೋ ವರ್ಣಾನ್, ಇತಿ ಚ ಇತಿಹಾಸಪುರಾಣಾಧಿಗಮೇ ಚಾತುರ್ವರ್ಣ್ಯಸ್ಯ ಅಧಿಕಾರಸ್ಮರಣಾತ್' (`ನಾಲ್ಕು ವರ್ಣಗಳವರಿಗೂ ಶ್ರವಣಮಾಡಿಸತಕ್ಕದ್ದು'- ಎಂದು ಇತಿಹಾಸ ಪುರಾಣಗಳ ಜ್ಞಾನದಲ್ಲಿ ಎಲ್ಲ ವರ್ಣದವರಿಗೂ ಅಧಿಕಾರವಿದೆ - ಎಂದು ಸ್ಮೃತಿಯಿದೆ) ಎಂಬ ವಾಕ್ಯದಲ್ಲಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. 'ವೇದಪೂರ್ವಕಸ್ತು ನಾಸ್ತಿ ಅಧಿಕಾರಃ ಶೂದ್ರಾಣಾಮ್' (ವೇದದ ಮೂಲಕ ನೇರಾಗಿ ಜ್ಞಾನವನ್ನು ಪಡೆದುಕೊಳ್ಳಲು ಶೂದ್ರನಿಗೆ ಅಧಿಕಾರವಿಲ್ಲ) ಎಂದೂ ಸ್ಫುಟಗೊಳಿಸಿರುತ್ತಾರೆ. ಆದರೆ ಈ ಭಾಷ್ಯದಲ್ಲಿ ಮಾತ್ರ `ಶೂದ್ರಃ ಸುಖಮವಾಪ್ನುಯಾತ್ ಶ್ರವಣೇನೈವ । ನ ತು ಜಪಯಜ್ಞೇನ । ತಸ್ಮಾತ್ ಶೂದ್ರೋ ಯಜ್ಞೇಽನವಕ್ಲೃಪ್ತಃ' ಇತಿ ಶ್ರುತೇಃ (ಶೂದ್ರನಿಗೆ ಇದರ ಜಪದಲ್ಲಿ ಅಧಿಕಾರವಿಲ್ಲ) ಎಂದು ಅಧಿಕಾರಸಂಕೋಚವನ್ನು ಮಾಡಿರುತ್ತಾರೆ.

ಹೀಗೆ ಸೂತ್ರಭಾಷ್ಯಕ್ಕೂ ಸ್ತೋತ್ರಭಾಷ್ಯಕ್ಕೂ ಪರಸ್ಪರವಿರೋಧವು ಕಾಣಬರುವದಲ್ಲದೆ ಮೋಕ್ಷಧರ್ಮದಲ್ಲಿ ೩೪೧ನೆಯ ಅಧ್ಯಾಯದಲ್ಲಿ ಶ್ರೀಕೃಷ್ಣಭಗವಂತನು ಅರ್ಜುನನಿಗೆ ತನ್ನ ನಾಮಗಳು ಬಂದಿರುವ ನಿಮಿತ್ತಗಳನ್ನು ವಿವರಿಸಿರುವದನ್ನು ಈ ಸ್ತೋತ್ರಭಾಷ್ಯದಲ್ಲಿ ಪರಾಮರ್ಶಮಾಡಿಯೇ ಇಲ್ಲ. ಹೀಗಿರುವದರಿಂದ ಸ್ತೋತ್ರಭಾಷ್ಯವು ಸೂತ್ರಭಾಷ್ಯವನ್ನು ಬರೆದ

ಶಂಕರಾಚಾರ್ಯರದ್ದೇ ಕೃತಿಯಾಗಿರಬಹುದೆ? ಎಂಬ ವಿಷಯದಲ್ಲಿ ಶಂಕೆಯೇಳುವದು ಸ್ವಾಭಾವಿಕವಾಗಿದೆ.

ಈ ವಿಷಯದಲ್ಲಿ ಸ್ತೋತ್ರಭಾಷ್ಯವು ಪ್ರಸ್ಥಾನತ್ರಯಭಾಷ್ಯಕರ್ತೃಗಳಾದ ಶಂಕರಾಚಾರ್ಯರ ಕೃತಿಯಾಗಿರಲಾರದು - ಎಂಬ ಪಕ್ಷದವರ ಪರವಾಗಿ ಈ ಮುಂದಿನ ವಾದಗಳನ್ನು ಇಲ್ಲಿ ಉದಾಹರಿಸಬಹುದಾಗಿದೆ:-

(೧) ಭಾಷ್ಯಕಾರರ ಮಂಗಳಶ್ಲೋಕದಲ್ಲಿ `ಸಚ್ಚಿದಾನಂದರೂಪಾಯ' ಎಂಬ ವಿಶೇಷಣವನ್ನು ಶ್ರೀಕೃಷ್ಣಭಗವಂತನಿಗೆ ಕೊಟ್ಟಿದೆ. ಈ ಅನುಪೂರ್ವಿಯ ವಿಶೇಷಣವು ಮಿಕ್ಕ ಭಾಷ್ಯಗಳಲ್ಲಿ ಕಾಣಬರುವದಿಲ್ಲ. ಭಗವದ್ಗೀತಾಭಾಷ್ಯಾದಿಗಳಲ್ಲಿ ವೇದವ್ಯಾಸರನ್ನು ಸರ್ವಜ್ಞರೆಂದೂ ಆಧಿಕಾರಿಕಪುರುಷರೆಂದೂ ಸಂಬೋಧಿಸಿರುವದನ್ನು ಇಲ್ಲಿ ಅನುಸರಿಸದೆ `ವೇದಾನ್ತಾಬ್ಜಭಾಸ್ಕರಮ್' ಎಂಬ ವಿಶೇಷಣವನ್ನು ಪ್ರಯೋಗಿಸಿರುವದನ್ನು ನೋಡಿದರೆ ಬಾದರಾಯಣರೂ ಕೃಷ್ಣದ್ವೈಪಾಯನರೂ ಒಂದೇ ವ್ಯಕ್ತಿಯೆಂದು ಇಲ್ಲಿ ಸೂಚಿಸಿರುವಂತೆ ತೋರುತ್ತಿದೆ. ಸೂತ್ರಕಾರರನ್ನು (ಪುಟ ೨೩೬ರಲ್ಲಿ) ವ್ಯಾಸರೆಂದೇ ಕರೆದಿರುತ್ತದೆ. ಕೆಲವುಕಡೆಗಳಲ್ಲಿ (ಉದಾ: ೯೩ನೆಯ ಪುಟದಲ್ಲಿ) ಸೂತ್ರಭಾಷ್ಯದ ವಾಕ್ಯಗಳನ್ನೇ ಇದ್ದಂತೆಯೇ ಇಲ್ಲಿ ಅನಿಮಿತ್ತವಾಗಿ ತೆಗೆದುಕೊಂಡು ಉದಾಹರಿಸಿರುವದು ಕಂಡುಬರುತ್ತದೆ. ಇದಕ್ಕೆ ಆಧಾರವು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಎಲ್ಲಿಯೂ ಕಾಣಬರುವದಿಲ್ಲ. ೩ನೆಯ ಶ್ಲೋಕದಲ್ಲಿ `ಸಹಸ್ರನಾಮ್ನಾಂ ಸ್ತವನಂ ಪ್ರಶಸ್ತಂ ನಿರುಚ್ಯತೇ' ಎಂಬ ವಾಕ್ಯಭಾಗವು ಆಚಾರ್ಯರ ಅಸಾಧಾರಣವಾದ ಬಿಗಿಯಾದ ಶೈಲಿಗೆ ಅಷ್ಟು ಹೊಂದಿಕೆಯಾಗಿರುವಂತೆ ಕಾಣುವದಿಲ್ಲ.

(೨) ಇಲ್ಲಿನ ಭಾಷ್ಯದಲ್ಲಿ ಉದಾಹರಿಸಿರುವ ಕೆಲವು ಪ್ರಮಾಣವಚನಗಳು ಮಿಕ್ಕ ಭಾಷ್ಯಗಳಲ್ಲಿ ಎಲ್ಲಿಯೂ ಉದಾಹರಿಸದೆ ಇರುವ ಪುರಾಣಾದಿಗಳಿಂದ ತೆಗೆದುಕೊಂಡವುಗಳಾಗಿವೆ. ಆಚಾರ್ಯರು ಸಾಮಾನ್ಯವಾಗಿ ಭಾಷ್ಯಗಳಲ್ಲಿ ಉದಾಹರಿಸದೆ ಇರುವ ಲಿಂಗಪುರಾಣವೇ ಮುಂತಾದವುಗಳ ವಾಕ್ಯಗಳನ್ನು (ಉದಾ: ಪುಟ ೫೬, ೧೦೮) ಪ್ರಮಾಣವಾಗಿ ಇಲ್ಲಿ ಉದಾಹರಿಸಿರುವದು ಕಂಡುಬರುತ್ತದೆ. ಕೆಲವುಕಡೆಗಳಲ್ಲಿ ಉದಾಹರಿಸಿರುವ (ಉದಾ: ಪುಟ ೧೮೮) ಪ್ರಮಾಣವಚನಗಳ ಮೂಲವು ಸಿಕ್ಕಿರುವದಿಲ್ಲ. ಇನ್ನೂ ಕೆಲವುಕಡೆ (ಪುಟ ೭೩) ಪ್ರಮಾಣವಚನಗಳನ್ನು ಎರಡುಮೂರು ಸಲ ಉದಾಹರಿಸಿದೆ. ವೇದಾಂತಾಭಿಯುಕ್ತರು, ಸಂಪ್ರದಾಯವಿದರು - ಎಂದು ಮುಂತಾಗಿ ಗೌರವಸೂಚಕವಾಗಿ ಸಾಮಾನ್ಯವಿಶೇಷಣಗಳಿಂದ ಸಂಬೋಧಿಸಿರುವ ಶ್ರೀಗೌಡಪಾದಾಚಾರ್ಯರನ್ನು ಇಲ್ಲಿ ನೇರವಾಗಿ (ಪುಟ ೪೪) ಉಲ್ಲೇಖಿಸಿ ಕಾರಿಕೆಗಳನ್ನು ಉದಾಹರಿಸಿದೆ. ಆಗಮಪ್ರಕರಣದ ಗೌಡಪಾದಕಾರಿಕೆಗಳನ್ನು ಮಾಂಡೂಕ್ಯೋಪನಿಷತ್ತೆಂದೇ (ಪುಟ ೬೧ರಲ್ಲಿ) ಭಾವಿಸಿರುವಂತೆ ಕಾಣುತ್ತಿದೆ.

ಗೌಡಪಾದರ ಕಾರಿಕೆಗಳಿಗೇ `ಗೌಡಪಾದ' ಎಂದೇ ಹೆಸರನ್ನಿಟ್ಟಿದೆ !

ಶ್ರೀಶಂಕರಾಚಾರ್ಯರು ಭಗವದ್ಗೀತೆಯನ್ನು `ಈಶ್ವರಗೀತಾಸು'- ಎಂದು ಇತರಭಾಷ್ಯಗಳಲ್ಲಿ ಪರಾಮರ್ಶಿಸಿರುತ್ತಾರೆ. ಆದರೆ ಈ ಭಾಷ್ಯದಲ್ಲಿ (ಪುಟ ೨೮) `ಗೀತೋಪನಿಷತ್ಸು' ಎಂದು ಪರಾಮರ್ಶಿಸಿರುತ್ತದೆ.

ಮಹಾಭಾರತವನ್ನು (ಪುಟ ೮೧) `ಪಂಚಮವೇದೇ' (ಐದನೆಯ ವೇದದಲ್ಲಿ) ಎಂದು ಭಾಷ್ಯದಲ್ಲಿ ರೂಢಿಯಲ್ಲಿಲ್ಲದ ಹೆಸರಿನಿಂದ ಇಲ್ಲಿ ಪರಾಮರ್ಶಿಸಿದೆ.

(೩) ಈ ಭಾಷ್ಯದಭಾಷಾಶೈಲಿ,ವಿಚಾರಸರಣಿ-ಇವುಗಳು ಪ್ರಸ್ಥಾನತ್ರಯಭಾಷ್ಯಗಳಲ್ಲಿರುವಂತೆ ಒಂದು ಹಿಡಿತದಲ್ಲಿರುವಂತೆ ತೋರುತ್ತಿಲ್ಲ. ಯುಧಿಷ್ಠಿರನ ಪ್ರಶ್ನೆ, ಭೀಷ್ಮರ ಉತ್ತರ ಈ ರೂಪವಾಗಿರುವ ಅವತರಣಿಕೆಯು ಸುಮಾರು 70 ಪುಟಗಳಷ್ಟು ದೀರ್ಘವಾಗಿದ್ದು ವಿವಿಧಪುರಾಣಾದಿಗ್ರಂಥಗಳ ಪ್ರಮಾಣವಚನಗಳಿಂದಲೂ ಅವಶ್ಯವೆಂದು ಕಾಣದ ವಿಚಾರಸರಣಿಯಿಂದಲೂ ತುಂಬಿತುಳುಕುತ್ತಿದೆ. ಉದಾಹರಣೆಗೆ **`ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್'** ಎಂಬ ಯುಧಿಷ್ಠಿರನ ಪ್ರಶ್ನೆಗಳಿಗೆ ಉತ್ತರವಾಗಿ ಹೇಳಿರುವ ಶ್ರೀ ಭೀಷ್ಮರ ವಚನದ ವಿವರದಲ್ಲಿ (ಪುಟ ೨೪ರಲ್ಲಿ) **"ನನು ಕಥಮೇಕೋ ದೇವಃ ಜೀವಪರಯೋರ್ಭೇದಾತ್"** ಎಂದು ಪ್ರಾರಂಭಿಸಿರುವ ಆತ್ಮೈಕತ್ವದ ವಿಷಯವಾದ ವಿಚಾರವು ಅತಿದೀರ್ಘವಾಗಿ ಲಂಬಿಸಿದೆ.

ಕೊನೆಯದಾಗಿ ಪ್ರಸ್ಥಾನತ್ರಯಭಾಷ್ಯದಿಂದೀಚೆಗೆ ವ್ಯಾಖ್ಯಾನಕಾರರುಗಳು ಹೊಸದಾಗಿ ತಂದಿರುವ ವಾದಗಳು ಮತ್ತು ಪಾರಿಭಾಷಿಕಶಬ್ದಗಳು ಇದರಲ್ಲಿ ಅಲ್ಲಲ್ಲಿ ಕಾಣುತ್ತಿರುವದು ಇದು ಆದಿಶಂಕರಾಚಾರ್ಯರ ಕೃತಿಯಲ್ಲ- ಎಂಬುದಕ್ಕೆ ಹೆಚ್ಚಿನ ಪುಷ್ಟಿಯನ್ನು ಕೊಡುತ್ತಿದೆ. ಉದಾ: (ಪುಟ ೪೭ ರಲ್ಲಿ) `ನಿಯೋಗಕ್ಕೆ ಪ್ರವರ್ತಕತ್ವವಿಲ್ಲ' ಎಂಬ ವಾದ, (ಪುಟ ೩೯ ರಲ್ಲಿ) **`ಅವಿದ್ಯೋಪಾಧಿಪಕ್ಷೇಽಪಿ ಪ್ರಮಾಣವಾದಃ ಸಮಸ್ತಿ'** (ಅವಿದ್ಯೋಪಾಧಿಪಕ್ಷದಲ್ಲಿಯೂ ಪ್ರಮಾಣವಿದೆ), **`ಸಿದ್ಧೇಽರ್ಥೇ'** (ಪುಟ ೪೬), **`ಪ್ರಪಂಚಸ್ಯ ಅಧಿಷ್ಠಾನತ್ವೇನ ಭರಣಾತ್'** (ಪುಟ ೮೯ ರಲ್ಲಿ)- ಇಂಥ ಪ್ರಯೋಗಗಳು ವ್ಯಾಖ್ಯಾನಗ್ರಂಥಗಳಲ್ಲಿ ಪ್ರಚುರವಾಗಿವೆ. ಆಚಾರ್ಯರ ಭಾಷ್ಯದಲ್ಲಿ `ಭೂತಂ ವಸ್ತು', `ವಿಕಲ್ಪಾಸ್ಪದಮ್'- ಎಂದು ಮುಂತಾಗಿರುವಲ್ಲಿ ಅದಕ್ಕೆ ಬದಲಾಗಿ ಬೇರೆ ಪ್ರಯೋಗಗಳೇ ಇಲ್ಲಿ ಕಂಡುಬರುತ್ತವೆ. ವ್ಯಾಖ್ಯಾನಕಾರರಿಗೆ ಸಮ್ಮತವಾಗಿರುವಂತೆ ಜೀವನ ಬ್ರಹ್ಮಸ್ವರೂಪವನ್ನು ಮುಚ್ಚಿ ಸಾಂಸಾರಿಕಸ್ವರೂಪವನ್ನು ಹೊರತೋರಿಸುವ ಆವರಣವಿಕ್ಷೇಪಗಳೆಂಬ ಎರಡು ಶಕ್ತಿಗಳನ್ನುಳ್ಳ ಅಧ್ಯಾಸಕಾರಣವಾದ ಅವಿದ್ಯಾಶಕ್ತಿಯನ್ನು (ಪುಟ ೧೨೭ರಲ್ಲಿ) ಪರಾಮರ್ಶಿಸಿದೆ. **`ಶ್ರುತಿಸ್ಮೃತೀ ಮಮೈವಾಜ್ಞೇ'** ಎಂಬ ಸ್ಮೃತಿವಾಕ್ಯವನ್ನು (ಪುಟ ೧೯೮ ರಲ್ಲಿ) ಪ್ರಮಾಣವಾಗಿ ತೆಗೆದುಕೊಂಡು **`ಕೃತಾಗಮಃ'** ಎಂಬ ನಾಮದ ನಿರ್ವಚನವನ್ನು ಮಾಡುವಾಗ **`ಶ್ರುತಿಸ್ಮೃತಿಗಳ ಕರ್ತನು'** ಎಂಬ ಅಭಿಪ್ರಾಯವನ್ನು ತೆಗೆದಿದೆ. ಇದು **`ಅತಏವ ಚ ನಿತ್ಯತ್ವಮ್'** (ವೇ. ಸೂ. ೧-೩-೨೯) ಎಂಬ ಬಾದರಾಯಣೀಯಸೂತ್ರದ ಭಾಷ್ಯಕ್ಕೆ ವಿರುದ್ಧವೆಂಬುದು ಅಭಿಜ್ಞರಿಗೆ ಗೊತ್ತೇ ಇದೆ.

ಒಟ್ಟಿನಲ್ಲಿ ಮೇಲೆ ಹೇಳಿದ ಕಾರಣಗಳಿಂದ ಪ್ರಕೃತಭಾಷ್ಯವು ಶ್ರೀಶಂಕರ ಭಗವತ್ಪಾದಾಚಾರ್ಯಕೃತವೆ? - ಎಂಬ ಬಗ್ಗೆ ಆತಂಕಗಳಿವೆ. ಇದು ಹೇಗೇ ಇರಲಿ, ಈ ಸ್ತೋತ್ರಭಾಷ್ಯವು ಶ್ರೀಶಂಕರಾಚಾರ್ಯಕೃತವೆಂದು ಎಲ್ಲೆಲ್ಲಿಯೂ ಪ್ರಸಿದ್ಧವಾಗಿರುವದರಿಂದ ಈ ಸಹಸ್ರನಾಮಸ್ತೋತ್ರವನ್ನು ಅರ್ಥಾನುಸಂಧಾನಪೂರ್ವಕವಾಗಿ ಭಕ್ತಿಯಿಂದ ಪಠಿಸುವ ಶಂಕರಾನುಯಾಯಿಗಳಿಗೆ ಉಪಯೋಗವಾಗಲೆಂದು ಮೂಲಭಾಷ್ಯಸಮೇತವಾಗಿ ಪ್ರಕಟಿಸಿದೆ. ಈ ಭಾಷ್ಯದಲ್ಲಿ ಉದಾಹರಿಸಿರುವ ಅನೇಕ ಪುರಾಣವಚನಗಳೂ ಸಾಧನವಿಚಾರದ ಉಪದೇಶಗಳೂ ಶ್ರದ್ಧಾಳುಗಳಿಗೆ ಪ್ರಯೋಜನಕರವಾಗಿರುತ್ತವೆ. ಪಾಣಿನೀಯಸೂತ್ರಗಳ ಆಧಾರದಿಂದ ಹೇರಳವಾಗಿ ಬರೆದಿರುವ ನಾಮನಿರ್ವಚನಗಳು ಸಾಮಾನ್ಯಪಾಠಕರಿಗೆ ಅಷ್ಟು ಫಲಕಾರಿಯಾಗಿರಲಾರವು. ಆದರೂ ಅವುಗಳ ತಾತ್ಪರ್ಯವನ್ನು ಸಂಗ್ರಹಿಸುವದಕ್ಕೆ ಸಹಾಯವಾಗಲೆಂದು ಇಲ್ಲಿ ನಾವು ಅಲ್ಲಲ್ಲಿ ಅಡಿಟಿಪ್ಪಣಿಗಳಲ್ಲಿ ಕೆಲವು ವಿವರಗಳನ್ನು ಕೊಟ್ಟಿರುತ್ತೇವೆ. ಭಾಷ್ಯವು **"ಸಹಸ್ರನಾಮಸಂಬಂಧಿ ವ್ಯಾಖ್ಯಾ ಸರ್ವಸುಖಾವಹಾ ! ಶ್ರುತಿಸ್ಮೃತಿನ್ಯಾಯಮೂಲಾ ರಚಿತಾ ಹರಿಪಾದಯೋಃ"** ಎಂಬ ಶ್ಲೋಕದೊಡನೆ ಸಾಮಾನ್ಯವಾಗಿ ಪರಿಸಮಾಪ್ತವಾಗಿದ್ದರೂ ಕೆಲವು ಹಸ್ತಪ್ರತಿ (Manu-scripts) ಗಳಲ್ಲಿ ಇನ್ನೂ ಕೆಲವು ಉಪಸಂಹಾರಶ್ಲೋಕಗಳು ಇರುವದಾಗಿ ಮೈಸೂರಿನಲ್ಲಿ ಪ್ರಕಟವಾಗಿರುವ ಭಾಷ್ಯದ ಸಂಪಾದಕರಿಂದ ತಿಳಿದುಬರುತ್ತದೆ.

ಶ್ರೀಮನ್ನಾರಾಯಣನು ಈ ನನ್ನ ಅಲ್ಪಸೇವೆಯನ್ನು ಸ್ವೀಕರಿಸಿ ಅನುಗ್ರಹಿಸಲೆಂದು ಪ್ರಾರ್ಥಿಸಿ ಈ ಪೀಠಿಕೆಯನ್ನು ಪೂರ್ಣಗೊಳಿಸುವೆನು.

**ಬೆಂಗಳೂರು ಶಾಖಾ ಕಾರ್ಯಾಲಯ** **ಅನುವಾದಕ.**

**ತಾ \|\| 5-5-1974**

# ವಿಷಯಾನುಕ್ರಮಣಿಕೆ


| | | ಪುಟಸಂಖ್ಯೆ |
|---|---|---|
| ೧. | ಭಾಷ್ಯಕಾರರ ಮಂಗಲ | ೧ |
| ೨. | ಅವತರಣಿಕೆ | ೨ |
| ೩. | ನಾಮಗಳ ವಿಷಯದ ಸಮಾಲೋಚನೆ | ೫೬ |
| ೪. | ನಾಮಭಾಷ್ಯಪ್ರಾರಂಭಃ | ೫೯ |
| | (1) ಪ್ರಥಮಶತಕ | ೫೯ |
| | (2) ದ್ವಿತೀಯಶತಕ | ೧೦೫ |
| | (3) ತೃತೀಯಶತಕ | ೧೨೪ |
| | (4) ಚತುರ್ಥಶತಕ | ೧೪೦ |
| | (5) ಪಂಚಮಶತಕ | ೧೫೮ |
| | (6) ಷಷ್ಠಶತಕ | ೧೭೫ |
| | (7) ಸಪ್ತಮಶತಕ | ೧೯೨ |
| | (8) ಅಷ್ಟಮಶತಕ | ೨೦೮ |
| | (9) ನವಮಶತಕ | ೨೨೫ |
| | (10) ದಶಮಶತಕ | ೨೪೪ |
| ೫. | ಉಪಸಂಹಾರ | ೨೬೬ |
| ೬. | ಫಲಶ್ರುತಿ | ೨೬೬ |
| ೭. | ಶ್ಲೋಕಾನುಕ್ರಮಣಿಕೆ | ೨೭೮ |
| ೮. | ನಾಮಗಳ ಅಕ್ಷರಾನುಕ್ರಮ | ೨೮೧ |


❖ ❖ ❖ ❖

# ಸಂಕೇತಾಕ್ಷರಗಳ ವಿವರಣೆ

| ಸಂಕೇತ | ವಿವರ | | |
|---|---|---|---|
| ಅಯೋ. | ವಾಲ್ಮೀಕಿರಾಮಾಯಣ; ಅಯೋಧ್ಯಾಕಾಂಡ | ಪು. ಸೂ. | ಪುರುಷಸೂಕ್ತ |
| | | ಪ್ರ. | ಪ್ರಶ್ನೋಪನಿಷತ್ತು |
| ಆಪ. | ಆಪಸ್ತಂಬಧರ್ಮಸೂತ್ರಗಳು | ಬೃ. | ಬೃಹದಾರಣ್ಯಕೋಪನಿಷತ್ತು |
| ಈ. | ಈಶಾವಾಸ್ಯೋಪನಿಷತ್ತು | ಬೃಹನ್ನಾರ. | ಬೃಹನ್ನಾರದೀಯ ಮಹಾಪುರಾಣ |
| ಋ. | ಋಗ್ವೇದಸಂಹಿತೆ | ಬ್ರ. ಸೂ. | ಬಾದರಾಯಣೀಯ ಬ್ರಹ್ಮಸೂತ್ರಗಳು |
| ಐ. | ಐತರೇಯೋಪನಿಷತ್ತು | | |
| ಐ. ಆ. | ಐತರೇಯಾರಣ್ಯಕ | ಬ್ರಹ್ಮ. | ಬ್ರಹ್ಮಮಹಾಪುರಾಣ |
| ಕ; ಕಾ; | ಕಾಠಕೋಪನಿಷತ್ತು | ಮನು. | ಮನುಸ್ಮೃತಿ |
| ಗರುಡ. | ಗರುಡಮಹಾಪುರಾಣ | ಮ. ಭಾ. | ಮಹಾಭಾರತ |
| ಗ.ಸೂ. | ಪಾಣಿನೀಯಗಣಸೂತ್ರ | ಮಹಾ. ಶಾಂತಿ. | ಮಹಾಭಾರತ; ಶಾಂತಿಪರ್ವ |
| ಗೀ\|\| | ಶ್ರೀಮದ್ಭಗವದ್ಗೀತೆ | ಮಾಂ. | ಮಾಂಡೂಕ್ಯೋಪನಿಷತ್ತು |
| ಗೌ. ಕಾ. | ಗೌಡಪಾದೀಯ ಮಾಂಡೂಕ್ಯಕಾರಿಕೆಗಳು | ಮುಂ. | ಮುಂಡಕೋಪನಿಷತ್ತು |
| | | ಮೋ.ಧ. | ಮಹಾಭಾರತ-ಮೋಕ್ಷಧರ್ಮಪರ್ವ |
| ಛಾಂ. | ಛಾಂದೋಗ್ಯೋಪನಿಷತ್ತು | | |
| ತೈ. | ತೈತ್ತಿರೀಯೋಪನಿಷತ್ತು | ಯಾಜ್ಞ. ಪ್ರಾ. | ಯಾಜ್ಞವಲ್ಕ್ಯಸ್ಮೃತಿ; ಪ್ರಾಯಶ್ಚಿತ್ತಾಧ್ಯಾಯ |
| ತೈ. ಆ. | ತೈತ್ತಿರೀಯಾರಣ್ಯಕ | | |
| ತೈ.ನಾ; ಮ ನಾ. | ತೈತ್ತಿರೀಯನಾರಾಯಣಪನ್ನ ಅಥವಾ ತೈತ್ತಿರೀಯ– ಮಹಾನಾರಾಯಣೋಪನಿಷತ್ತು | ಲಿಂಗ. | ಲಿಂಗಮಹಾಪುರಾಣ |
| | | ವಾ. ರಾ. | ವಾಲ್ಮೀಕಿರಾಮಾಯಣ |
| | | ವಿ. ಧ. | ವಿಷ್ಣುಧರ್ಮೋತ್ತರಪುರಾಣ |
| ತೈ. ಬ್ರಾ. | ತೈತ್ತಿರೀಯಬ್ರಾಹ್ಮಣ | ವಿ. ಪು. | ವಿಷ್ಣುಮಹಾಪುರಾಣ |
| ತೈ. ಸಂ. | ತೈತ್ತಿರೀಯಸಂಹಿತೆ | ವಿ. ಸ್ಮೃ. | ವಿಷ್ಣುಸ್ಮೃತಿ |
| ನಿರು. | ಯಾಸ್ಕಮುನಿಪ್ರಣೀತ ನಿರುಕ್ತ | ವೇ. ಸೂ. | ಬಾದರಾಯಣವಿರಚಿತ ವೇದಾಂತಸೂತ್ರಗಳು |
| ನೃ. ಪು. | ನೃಸಿಂಹಪುರಾಣ | | |
| ಪದ್ಮ. ಪು. | ಪದ್ಮಪುರಾಣ | ಶ್ವೇ. | ಶ್ವೇತಾಶ್ವತರೋಪನಿಷತ್ತು |
| ಪಾ. | ಪಾಣಿನಿಮಹರ್ಷಿಪ್ರಣೀತ ವ್ಯಾಕರಣಸೂತ್ರಗಳು | ಹರಿ. | ಹರಿವಂಶಪುರಾಣ |

॥ಓಮ್॥

ಓಂ ನಮೋ ಭಗವತೇ ವಾಸುದೇವಾಯ

# ಶ್ರೀವಿಷ್ಣುಸಹಸ್ರನಾಮಸ್ತೋತ್ರಮ್

## ಶಾಙ್ಕರಭಾಷ್ಯಸಮೇತಮ್

### ಭಾಷ್ಯಕಾರರ ಮಂಗಲ

[1] ಸಚ್ಚಿದಾನನ್ದರೂಪಾಯ ಕೃಷ್ಣಾಯಾಕ್ಲಿಷ್ಟಕಾರಿಣೇ।
ನಮೋ ವೇದಾನ್ತವೇದ್ಯಾಯ ಗುರವೇ ಬುದ್ಧಿಸಾಕ್ಷಿಣೇ ॥೧॥

ಕೃಷ್ಣದ್ವೈಪಾಯನಂ ವ್ಯಾಸಂ ಸರ್ವಲೋಕಹಿತೇ ರತಮ್।
ವೇದಾಬ್ಜಭಾಸ್ಕರಂ ವನ್ದೇ ಶಮಾದಿನಿಲಯಂ ಮುನಿಮ್ ॥೨॥

ಸಹಸ್ರಮೂರ್ತೇಃ ಪುರುಷೋತ್ತಮಸ್ಯ ಸಹಸ್ರನೇತ್ರಾನನಪಾದಬಾಹೋಃ।
ಸಹಸ್ರನಾಮ್ನಾಂ ಸ್ತವನಂ ಪ್ರಶಸ್ತಂ ನಿರುಚ್ಯತೇ ಜನ್ಮಜರಾದಿಶಾನ್ತ್ಯೈ ॥೩॥

(ಭಾಷ್ಯಾರ್ಥ)

ಸಚ್ಚಿದಾನಂದ (ಇರವು, ಅರಿವು, ಆನಂದ - ಇವುಗಳ) ಸ್ವರೂಪವಾಗಿರುವ, ಅನಾಯಾಸದಿಂದ ತನ್ನ ಕರ್ಮವನ್ನು ಮಾಡುವ, ವೇದಾಂತವೇದ್ಯನಾದ [2] ಬುದ್ಧಿಸಾಕ್ಷಿಯಾದ ಗುರುವಾದ ಕೃಷ್ಣನಿಗೆ ನಮಸ್ಕಾರ. ॥೧॥ ಎಲ್ಲಾ ಜನರ ಹಿತವನ್ನೆಸಗುವದರಲ್ಲಿಯೇ ನಿರತನಾದ, ವೇದಗಳೆಂಬ ಕಮಲಗಳಿಗೆ ಸೂರ್ಯನಾದ, ಶಾಂತ್ಯಾದಿಗಳಿಗೆ ಆವಾಸಸ್ಥಾನವಾಗಿರುವ ಮುನಿಯಾದ ಕೃಷ್ಣದ್ವೈಪಾಯನವ್ಯಾಸನನ್ನು ವಂದಿಸುತ್ತೇನೆ. ॥೨॥ ಸಾವಿರಾರು ರೂಪಗಳುಳ್ಳ, ಸಾವಿರಾರು ಕಣ್ಣುಗಳೂ ಮುಖಗಳೂ ಕಾಲುಗಳೂ ಭುಜಗಳೂ ಇರುವ ಪುರುಷೋತ್ತಮನ, ಪ್ರಶಸ್ತವಾದ ಸಹಸ್ರನಾಮಗಳ ಸ್ತೋತ್ರವನ್ನು - ಹುಟ್ಟು, ಮುಪ್ಪು ಮುಂತಾದವುಗಳ ನಾಶಕ್ಕಾಗಿ[3] ನಿರ್ವಚನ ಮಾಡಲಾಗುತ್ತದೆ.[4]

1. ಪ್ರಾರಂಭದ ಶ್ಲೋಕಗಳ ವಿಷಯಕ್ಕೆ ಪೀಠಿಕೆಯನ್ನು ನೋಡಿ.

2. ಉಪನಿಷತ್ತುಗಳಿಂದ ಮಾತ್ರವೇ ಅರಿತುಕೊಳ್ಳಬಹುದಾದ.

3. ಮೋಕ್ಷಪ್ರಾಪ್ತಿಗಾಗಿ, ಈ ಸ್ತೋತ್ರದ ಅರ್ಥವನ್ನು ಅನುಸಂಧಾನಮಾಡುವವರಿಗೆ ಪರಮಪುರುಷಾರ್ಥವು ದೊರಕುವದು - ಎಂದು ಇಲ್ಲಿ ಸ್ತೋತ್ರಪಠನದ ಪರಮ ಪ್ರಯೋಜನವನ್ನು ಹೇಳಲಾಗಿದೆ.

4. ಅಭಿಪ್ರಾಯವನ್ನು ವಿವರಿಸಲಾಗುವದು.

## ಅವತರಣಿಕೆ

## ಯುಧಿಷ್ಠಿರನ ಪ್ರಶ್ನೆ

(ಮೂಲಮ್)

**ಶ್ರೀವೈಶಂಪಾಯನ ಉವಾಚ -**

**ಶ್ರುತ್ವಾ ಧರ್ಮಾನಶೇಷೇಣ ಪಾವನಾನಿ ಚ ಸರ್ವಶಃ ।**

**ಯುಧಿಷ್ಠಿರಃ ಶಾನ್ತನವಂ ಪುನರೇವಾಭ್ಯಭಾಷತ ॥೧॥**

೧. ಶ್ರೀವೈಶಂಪಾಯನನಿಂತೆಂದನು : ಪಾವನವಾಗಿರುವ ಧರ್ಮಗಳನ್ನು ಅಶೇಷವಾಗಿ ಕೇಳಿದ ಯುಧಿಷ್ಠಿರನು ಶಾಂತನವ (ಭೀಷ್ಮ)ನನ್ನು ಎಲ್ಲಾ ಬಗೆಯಿಂದಲೂ ಮತ್ತು (ಹೀಗೆಂದು) ಕೇಳಿದನು,

### (ಭಾಷ್ಯ)

ಶ್ರೀವೈಶಂಪಾಯನಃ ಜನಮೇಜಯಮುವಾಚ ......

ಧರ್ಮಾನ್ ಅಭ್ಯುದಯನಿಃಶ್ರೇಯಸೋತ್ಪತ್ತಿಹೇತುಭೂತಾನ್ ಚೋದನಾಲಕ್ಷಣಾನ್ ಅಶೇಷೇಣ ಕಾರ್ತ್ಸ್ನ್ಯೇನ ಪಾವನಾನಿ ಪಾಪಕ್ಷಯಕರಾಣಿ ಧರ್ಮರಹಸ್ಯಾನಿ ಚ ಸರ್ವಶಃ ಸರ್ವಪ್ರಕಾರೈಃ ಶ್ರುತ್ವಾ ಯುಧಿಷ್ಠಿರೋ ಧರ್ಮಪುತ್ರಃ ಶಾನ್ತನವಂ ಶನ್ತನುಸುತಂ ಭೀಷ್ಮಂ ಸಕಲಪುರುಷಾರ್ಥಸಾಧನಂ ಸುಖಸಂಪಾದ್ಯಂ ಅಲ್ಪಪ್ರಯಾಸಮ್ ಅನಲ್ಪಫಲಮ್ ಅನುಕ್ತಮಿತಿ ಕೃತ್ವಾ ಪುನಃ ಭೂಯ ಏವ ಅಭ್ಯಭಾಷತ ಪ್ರಶ್ನಂ ಕೃತವಾನ್ ॥

### (ಭಾಷ್ಯಾರ್ಥ)

ಶ್ರೀವೈಶಂಪಾಯನನು ಜನಮೇಜಯನನ್ನು ಕುರಿತು ಇಂತೆಂದನು :

ಚೋದನಾಪ್ರಮಾಣವುಳ್ಳ, ಅಭ್ಯುದಯನಿಃಶ್ರೇಯಸಗಳುಂಟಾಗುವದಕ್ಕೂ[1] ಕಾರಣವಾದ ಧರ್ಮಗಳನ್ನು ಅಶೇಷವಾಗಿ ಪರಿಪೂರ್ಣವಾಗಿ ಪಾಪವು ನಾಶವಾಗುವದಕ್ಕೂ ಕಾರಣವಾಗಿರುವ ಪವಿತ್ರವಾದ ಎಲ್ಲಾ ಧರ್ಮರಹಸ್ಯಗಳನ್ನೂ ಎಲ್ಲಾ ಬಗೆಯಿಂದಲೂ ಎಲ್ಲಾ ಪ್ರಕಾರಗಳಿಂದಲೂ (ಕೇಳಿ) ಯುಧಿಷ್ಠಿರನು, ಧರ್ಮಪುತ್ರನು ಶಾಂತನವನನ್ನು ಶಂತನುವಿನ ಮಗನಾದ (ಭೀಷ್ಮನನ್ನು) ಸಕಲಪುರುಷಾರ್ಥಸಾಧನವಾಗಿರುವ ಸುಲಭವಾಗಿ ಪಡೆದುಕೊಳ್ಳಬಹುದಾದ, ಸ್ವಲ್ಪವೇ ಪ್ರಯಾಸವುಳ್ಳ, ಹೆಚ್ಚಿನ ಫಲವುಳ್ಳ (ಧರ್ಮವನ್ನು) ಹೇಳಿಲ್ಲವೆಂದುಕೊಂಡು[2] ಮತ್ತೆ ಇನ್ನೊಮ್ಮೆಯೂ ಕೇಳಿದನು. (ಹೀಗೆಂದು) ಪ್ರಶ್ನೆಯನ್ನು ಮಾಡಿದನು.

---

1. ಅಭ್ಯುದಯವೆಂದರೆ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಆಗುವ ಏಳಿಗೆ, ನಿಃಶ್ರೇಯಸವೆಂದರೆ ಮೋಕ್ಷ. 'ಇವುಗಳುಂಟಾಗುವದಕ್ಕೆ ಸಾಧನವನ್ನು' ಎಂದಿರುವದು ವ್ಯವಹಾರದ ದೃಷ್ಟಿಯಿಂದ. ಏಕೆಂದರೆ ಮೋಕ್ಷವು ಉತ್ಪಾದ್ಯವಲ್ಲ, ನಿತ್ಯಸಿದ್ಧವಾಗಿರುತ್ತದೆ ಎಂಬುದೇ ಪರಮಾರ್ಥ

2. ಭೀಷ್ಮನು ಈವರೆಗೆ ಹೇಳಿರುವ ಧರ್ಮಗಳು ಅನೇಕವಾಗಿದ್ದರೂ ಅವುಗಳೆಲ್ಲಕ್ಕಿಂತಲೂ ಸುಲಭಸಾಧ್ಯವಾಗಿ ಸಕಲಪುರುಷಾರ್ಥಗಳಿಗೂ ಸಾಧಕವಾದ ಧರ್ಮವು ಯಾವದಾದರೂ ಇರಬಹುದೆ, ತಿಳಿಯಬೇಕು - ಎಂಬ ಉದ್ದೇಶದಿಂದ.

(ಮೂಲಮ್)

**ಯುಧಿಷ್ಠಿರ ಉವಾಚ -**
**ಕಿಮೇಕಂ ದೈವತಂ ಲೋಕೇ ಕಿಂ ವಾಪ್ಯೇಕಂ ಪರಾಯಣಮ್ ।**
**ಸ್ತುವನ್ತಃ ಕಂ ಕಮರ್ಚನ್ತಃ ಪ್ರಾಪ್ನುಯುರ್ಮಾನವಾಃ ಶುಭಮ್ ॥೨॥**

೨. ಯುಧಿಷ್ಠಿರನಿಂತೆಂದನು : ಲೋಕದಲ್ಲಿ (ರುವ) ಒಂದೇ ಒಂದು ದೈವತವು ಯಾವದು? ಒಂದೇ ಒಂದಾಗಿರುವ ಪರಾಯಣವಾದರೂ ಯಾವದು? ಯಾವನನ್ನು ಸ್ತುತಿಸುತ್ತಲೂ ಯಾವನನ್ನು ಅರ್ಚಿಸುತ್ತಲೂ (ಇದ್ದರೆ) ಮಾನವರು ಶುಭವನ್ನು ಹೊಂದಿಯಾರು?

(ಭಾಷ್ಯ)

ಕಿಮೇಕಂ ದೈವತಂ ದೇವಃ ಇತ್ಯರ್ಥಃ। ಸ್ವಾರ್ಥೇ ತದ್ಧಿತಪ್ರತ್ಯಯವಿಧಾನಾತ್। ಲೋಕೇ ಲೋಕನಹೇತುಭೂತೇ ಸಮಸ್ತವಿದ್ಯಾಸ್ಥಾನೇ ಉಕ್ತಮ್; 'ಯದಾಜ್ಞಯಾ ಪ್ರವರ್ತನ್ತೇ ಸರ್ವೇ' ಇತಿ ಪ್ರಥಮಃ ಪ್ರಶ್ನಃ। ಕಿಂ ವಾಪ್ಯೇಕಂ ಪರಾಯಣಮ್, ಏತಸ್ಮಿನ್ ಲೋಕೇ ಏಕಂ ಪರಾಯಣಂ ಚ ಕಿಮ್? ಪರಮ್ ಅಯನಂ ಪ್ರಾಪ್ಯಂ ಸ್ಥಾನಮ್ ಪರಾಯಣಮ್; ಯಸ್ಮಿನ್ ಈಕ್ಷಿತೇ 'ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ। ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ' (ಮುಂ. ೨-೨-೮) ಇತಿ ಶ್ರುತೇಃ ಹೃದಯಗ್ರನ್ಥಿರ್ಭಿದ್ಯತೇ॥

(ಭಾಷ್ಯಾರ್ಥ)

ಒಂದೇ ಒಂದಾದ ದೈವತವು ಯಾವದು? (ದೈವತವೆಂದರೆ) ದೇವನು ಎಂದರ್ಥ; ಏಕೆಂದರೆ (ಈ) ತದ್ಧಿತಪ್ರತ್ಯಯವನ್ನು ಸ್ವಾರ್ಥದಲ್ಲಿ ವಿಧಿಸಿರುತ್ತದೆ.[1] ಲೋಕದಲ್ಲಿ ಎಂದರೆ ನೋಡುವದಕ್ಕೆ ತಕ್ಕ ಕಾರಣವಾಗಿರುವ ಎಲ್ಲಾ ವಿದ್ಯಾಸ್ಥಾನದಲ್ಲಿಯೂ[2] (ಯಾವದೊಂದೇ ದೈವತವು) ಉಕ್ತವಾಗಿದೆ? ಯಾವದರ ಅಪ್ಪಣೆಯಂತೆ ಎಲ್ಲರೂ ನಡೆದುಕೊಳ್ಳುತ್ತಿರುವರೋ (ಆ ದೈವತವು ಯಾವದು?) - ಎಂಬುದು **ಒಂದನೆಯ ಪ್ರಶ್ನೆ.**

'ಒಂದೇ ಒಂದಾಗಿರುವ ಪರಾಯಣವಾದರೂ ಯಾವದು?' ಈ ಲೋಕದಲ್ಲಿ ಮುಖ್ಯವಾದ ಪರಾಯಣವಾದರೂ ಯಾವದು? ಹೆಚ್ಚಿನ ಅಯನವು ಎಂದರೆ ಪಡೆಯಬಹುದಾದ ಸ್ಥಾನವು ಪರಾಯಣವು, ಯಾವದನ್ನು ಕಂಡರೆ ಹೃದಯಗ್ರಂಥಿಯು ಬಿಚ್ಚಿಕೊಳ್ಳುವದೋ (ಅದು ಯಾವದು?) (ಎಂದಭಿಪ್ರಾಯ); ಏಕೆಂದರೆ 'ಆ ಪರಾವರನಾದ (ಆತ್ಮನನ್ನು) ಕಂಡುಕೊಂಡರೆ, ಹೃದಯಗ್ರಂಥಿಯು ಬಿಚ್ಚಿಕೊಳ್ಳುವದು,

1. ರಕ್ಷಃ ಏವ ರಾಕ್ಷಸಃ ; ವಯಃ ಏವ ವಾಯಸಃ - ಎಂಬಂತೆ ಇಲ್ಲಿ 'ದೇವ ಏವ ದೈವತಮ್' ಎಂದು ಒಂದೇ ಅರ್ಥವನ್ನು ತೋರಿಸುವ ತದ್ಧಿತಪ್ರತ್ಯಯವು ಬಂದಿದೆ - ಎಂದು ಅಭಿಪ್ರಾಯ.
2. ಲೋಕ, ವೇದ - ಎಂದು ಸ್ಮೃತಿಯನ್ನೂ ಶ್ರುತಿಯನ್ನೂ ಪರಾಮರ್ಶಿಸುವ ಪದ್ಧತಿಯಿದೆ.

ಸರ್ವಸಂಶಯುಗಳೂ ಕತ್ತರಿಸಿಹೋಗುವವು, ಈತನ ಸರ್ವಕರ್ಮಗಳೂ ಕ್ಷಯವಾಗುವವು' ಎಂದು ಶ್ರುತಿಯಿದೆ.

## (ಭಾಷ್ಯ)

ಯಸ್ಯ ವಿಜ್ಞಾನಮಾತ್ರೇಣ ಆನನ್ದಲಕ್ಷಣೋ ಮೋಕ್ಷಃ ಪ್ರಾಪ್ಯತೇ। 'ಯದ್ವಿದ್ವಾನ್ ನ ಬಿಭೇತಿ ಕುತಶ್ಚನ', 'ಯತ್ಪ್ರವಿಷ್ಟಸ್ಯ ನ ವಿದ್ಯತೇ ಪುನರ್ಭವಃ' ಯಸ್ಯ ಚ ವೇದನಾತ್ತದೇವ ಭವತಿ 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮುಂ.೩-೨-೯) ಇತಿ ಶ್ರುತೇಃ; ಯದ್ವಿಹಾಯ ಅಪರಃ ಪನ್ಥಾಃ ನೃಣಾಂ ನಾಸ್ತಿ 'ನಾನ್ಯಃ ಪನ್ಥಾ ವಿದ್ಯತೇಽಯನಾಯ' (ಶ್ವೇ.೬-೧೫) ಇತಿ ಶ್ರುತೇಃ, ತದುಕ್ತಮ್ ಏಕಂ ಪರಾಯಣಂ ಲೋಕೇ, ತತ್ ಕಿಮ್? ಇತಿ ದ್ವಿತೀಯಃ ಪ್ರಶ್ನಃ॥

## (ಭಾಷ್ಯಾರ್ಥ)

ಯಾವದನ್ನು ಅರಿತುಕೊಂಡಮಾತ್ರದಿಂದ ಆನಂದರೂಪವಾದ ಮೋಕ್ಷವು ದೊರಕುವದೋ, ಯಾವದನ್ನು ಅರಿತುಕೊಂಡಾತನು ಏತಕ್ಕೂ ಅಂಜುವದಿಲ್ಲವೋ,[1] ಯಾವದನ್ನು ಒಳಹೊಕ್ಕಾತನಿಗೆ ಮತ್ತೆ ಜನ್ಮವು ಇರುವದಿಲ್ಲವೋ, ಯಾವದನ್ನು ಅರಿತುಕೊಳ್ಳುವದರಿಂದ (ಅವನು) ಅದೇ ಆಗುವನೋ 'ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗುವನು' ಎಂಬ ಶ್ರುತಿಯಂತೆ ಬ್ರಹ್ಮವೇ (ಆಗಿಬಿಡುವನೋ) ಯಾವದನ್ನು ಬಿಟ್ಟರೆ ಮತ್ತೊಂದು ಹಾದಿಯು ಜನರಿಗೆ ಇರುವದಿಲ್ಲವೋ, '(ಆತ್ಮನ) ಪ್ರಾಪ್ತಿಗೆ ಬೇರೊಂದು ದಾರಿಯು ಇರುವದಿಲ್ಲ' ಎಂಬ ಶ್ರುತಿಯಂತೆ (ತಿಳಿಯಬರುವದೋ) ಯಾವದು ಪರಾಯಣವೆಂದು ಲೋಕದಲ್ಲಿ ಉಕ್ತವಾಗಿದೆಯೋ ಅದು ಯಾವದು? ಎಂಬುದು ಎರಡನೆಯ ಪ್ರಶ್ನೆ.

## (ಭಾಷ್ಯ)

ಕಂ ಕತಮಂ ದೇವಂ ಸ್ತುವನ್ತಃ ಗುಣಕೀರ್ತನಂ ಕುರ್ವನ್ತಃ ಕಂ ಕತಮಂ ದೇವಂ ಅರ್ಚನ್ತಃ ಬಾಹ್ಯಮ್ ಆಭ್ಯನ್ತರಂ ಚ ಅರ್ಚನಂ ಬಹುವಿಧಂ ಕುರ್ವನ್ತಃ ಮಾನವಾಃ ಮನುಸುತಾಃ ಶುಭಂ ಕಲ್ಯಾಣಂ ಸ್ವರ್ಗಾಪವರ್ಗಾದಿಫಲಂ ಪ್ರಾಪ್ನುಯುಃ ಲಭೇರನ್ ಇತಿ ಪುನಃ ಪ್ರಶ್ನದ್ವಯಮ್॥

## (ಭಾಷ್ಯಾರ್ಥ)

ಯಾವಾತನನ್ನು, ಯಾವ ಜೀವನು ಸ್ತುತಿಸುತ್ತಾ ಗುಣಸಂಕೀರ್ತನೆಯನ್ನು ಮಾಡುತ್ತಾ ಯಾವಾತನನ್ನು ಯಾವ ದೇವನನ್ನು ಅರ್ಚಿಸುತ್ತಾ ಹೊರಗಿನ ಮತ್ತು ಒಳಗಿನ

1. ಈ ಶ್ರುತಿಯಲ್ಲಿ ಜ್ಞಾನದ ಪ್ರಶಂಸೆಯಿದೆ, ಅದರಿಂದಲೇ ಬ್ರಹ್ಮದ ಸ್ತುತಿಯನ್ನೂ ಮಾಡಿದಂತೆ ಆಯಿತು ಎಂಬ ಕಾರಣದಿಂದ ಇಲ್ಲಿ ಇದನ್ನು ಉದಾಹರಿಸಬಹುದು.

ಬಹುವಿಧವಾದ[1] ಅರ್ಚನೆಯನ್ನು ಮಾಡುತ್ತಾ (ಇದ್ದರೆ) ಮಾನವರು ಮನುವಿನ ಮಕ್ಕಳು ಶುಭವನ್ನು ಎಂದರೆ ಕಲ್ಯಾಣವನ್ನು ಸ್ವರ್ಗಮೋಕ್ಷಾದಿಫಲವನ್ನು[2] ಹೊಂದಿಯಾರು, ಪಡೆದುಕೊಂಡಾರು? ಎಂದು **ಮತ್ತೆರೆಡು ಪ್ರಶ್ನೆಗಳು.**[3]

## (ಮೂಲಮ್)

**ಕೋ ಧರ್ಮಃ ಸರ್ವಧರ್ಮಾಣಾಂ ಭವತಃ ಪರಮೋ ಮತಃ।**
**ಕಿಂ ಜಪನ್ ಮುಚ್ಯತೇ ಜನ್ತುಃ ಜನ್ಮಸಂಸಾರಬನ್ಧನಾತ್ ॥೩॥**

೩. ಧರ್ಮಗಳಲ್ಲೆಲ್ಲ ಯಾವ ಧರ್ಮವು ಹೆಚ್ಚಿನದು - ಎಂಬುದು ನಿನ್ನ ಮತವು? ಯಾವದನ್ನು ಜಪಿಸುತ್ತಿರುವ ಜೀವನು ಹುಟ್ಟು, ಸಂಸಾರ - ಇವುಗಳ ಬಂಧದಿಂದ ಮುಕ್ತನಾಗುತ್ತಾನೆ?

## (ಭಾಷ್ಯ)

ಕೋ ಧರ್ಮಃ ಪೂರ್ವೋಕ್ತಲಕ್ಷಣಃ, ಸರ್ವಧರ್ಮಾಣಾಂ ಸರ್ವೇಷಾಂ ಧರ್ಮಾಣಾಮಪಿ ಮಧ್ಯೇ ಭವತಃ ಪರಮಃ ಪ್ರಕೃಷ್ಟಃ ಧರ್ಮಃ ಮತಃ ಅಭಿಪ್ರೇತಃ? - ಇತಿ ಪಞ್ಚಮಃ ಪ್ರಶ್ನಃ । ಕಿಂ ಜಪನ್, ಕಿಂ ಜಪ್ಯಂ ಜಪನ್ ಉಚ್ಚೋಪಾಂಶುಮಾನಸಲಕ್ಷಣಂ ಜಪಂ ಕುರ್ವನ್ ಜನ್ತುಃ ಜನನಧರ್ಮಾ। ಅನೇನ ಜನ್ತುಶಬ್ದೇನ ಜಪಾರ್ಚನಸ್ತವನಾದಿಷು, ಯಥಾಯೋಗ್ಯಂ (ಗಂ?) ಸರ್ವಪ್ರಾಣಿನಾಮಧಿಕಾರಂ ಸೂಚಯತಿ । ಜನ್ಮಸಂಸಾರಬನ್ಧನಾತ್। ಜನ್ಮ ಅಜ್ಞಾನವಿಜೃಮ್ಭಿತಾನಾಮವಿದ್ಯಾಕಾರ್ಯಾಣಾಮ್ ಉಪಲಕ್ಷಣಮ್, ಸಂಸಾರಃ ಅವಿದ್ಯಾ; ತಾಭ್ಯಾಂ ಜನ್ಮಸಂಸಾರಾಭ್ಯಾಂ ಯದ್ ಬನ್ಧನಮ್ ತಸ್ಮಾತ್ ಮುಚ್ಯತೇ ಮುಕ್ತೋ ಭವತಿ? ಇತಿ ಷಷ್ಠಃ ಪ್ರಶ್ನಃ॥

'ಮುಚ್ಯತೇ ಜನ್ಮಸಂಸಾರಬನ್ಧನಾತ್' ಇತೀದಮುಪಲಕ್ಷಣಮ್ ಇತರೇಷಾಂ ಫಲಾನಾಮಪಿ। ಏತತ್ ಗ್ರಹಣಂ ಮೋಕ್ಷಸ್ಯ ಪ್ರಾಧಾನ್ಯಪ್ರಖ್ಯಾಪನಾರ್ಥಮ್॥

## (ಭಾಷ್ಯಾರ್ಥ)

(೧) ಹಿಂದೆ ಹೇಳಿರುವ ಲಕ್ಷಣವುಳ್ಳ[4] ಯಾವ ಧರ್ಮವು ಸರ್ವಧರ್ಮಗಳೊಳಗೆ - ಎಲ್ಲಾ ಧರ್ಮಗಳ ಒಳಗೆ ನಿಮಗೆ ಪರಮವೆಂದು ಹೆಚ್ಚಿನದೆಂದು ಒಪ್ಪಾಗಿದೆ?

---

1. ಬಲುಬಗೆಯ ಅರ್ಚನೆ - ಎಂಬಲ್ಲಿ ವಿಭೂತಿಭಾವನೆ, ಶಾಲಗ್ರಾಮ ವಿಷ್ಣುಪ್ರತಿಮಾದ್ಯರ್ಚನೆ, ಮಾನಸಪೂಜೆ, ಸಾಕಾರದ ಅರ್ಚನೆ, ಕೇವಲ ಗುಣದ ಭಾವನೆ - ಇವುಗಳೆಲ್ಲ ಸೇರಿವೆ.

೨. ಸ್ವರ್ಗ, ಮೋಕ್ಷ ಇವೆರಡು ಆಮುಷ್ಮಿಕಫಲಗಳು; ದೃಷ್ಟವಾದ ಪುತ್ರಪಶುಧನಾದಿಗಳೂ ಫಲಗಳೇ - ಎಂಬ ಅಭಿಪ್ರಾಯದಿಂದ 'ಸರ್ಗಾಪವರ್ಗಾದಿ' ಎಂದು ಬರೆದಿರಬಹುದು.

೩. ಇವು ಮೂರುನಾಲ್ಕನೆಯ ಪ್ರಶ್ನೆಗಳು.

4. ಸರ್ವಪುರುಷಾರ್ಥಗಳಿಗೂ ಸಾಧನವೂ ಮತ್ತು ಸುಲಭವಾಗಿ ಅನುಷ್ಠಾನ ಮಾಡುವುದಕ್ಕೆ ಸಾಧನವೂ ಆಗಿರುವ.

(ಅಂಥ ಧರ್ಮವು ಯಾವದೆಂದು ನಿಮ್ಮ) ಅಭಿಪ್ರಾಯ? ಎಂದು **ಐದನೆಯ ಪ್ರಶ್ನೆ.** (೬) ಯಾವದನ್ನು ಜಪಿಸುತ್ತಿದ್ದರೆ, ಜಪಿಸುವದಕ್ಕೆ ಯೋಗ್ಯವಾದ ಯಾವದನ್ನು ಜಪಿಸುತ್ತಿದ್ದರೆ **ಉಚ್ಚ, ಉಪಾಂಶು, ಮಾನಸ** - ಎಂಬ ಸ್ವರೂಪದ ಜಪವನ್ನು ಮಾಡುತ್ತಿದ್ದರೆ[1] ಜಂತುವು, ಹುಟ್ಟುವ ಸ್ವಭಾವವುಳ್ಳ ಜೀವನು, ಈ ಜಂತು ಎಂಬ ಶಬ್ದವನ್ನು ಪ್ರಯೋಗಿಸಿರುವದರಿಂದ **ಜಪ, ಅರ್ಚನ, ಸ್ತೋತ್ರವೇ ಮುಂತಾದವುಗಳಲ್ಲಿ ಎಲ್ಲ ಜೀವರುಗಳಿಗೂ ಅಧಿಕಾರವಿದೆಯೆಂಬುದನ್ನು** ಸೂಚಿಸಿದಂತೆ ಆಗಿರುತ್ತದೆ - ಜನ್ಮಸಂಸಾರಬಂಧನದಿಂದ, ಎಂಬಲ್ಲಿ ಜನ್ಮ **ಎಂಬುದು ಅಜ್ಞಾನದಿಂದ ಹೊರಹೊಮ್ಮಿದ ಅವಿದ್ಯಾಕಾರ್ಯಗಳಿಗೆಲ್ಲ ಉಪಲಕ್ಷಣವು;**[2] **ಸಂಸಾರವೆಂದರೆ** ಅವಿದ್ಯೆ.[3] ಈ ಜನ್ಮಸಂಸಾರಗಳಿಂದ ಆಗುವ ಬಂಧನವಿದೆಯಲ್ಲ, ಅದರಿಂದ ಮುಕ್ತನಾಗುತ್ತಾನೆ; (ಯಾವದನ್ನು ಜಪಿಸಿದರೆ ಬಂಧನದಿಂದ) ಬಿಡುಗಡೆಯನ್ನು ಹೊಂದುತ್ತಾನೆ? - ಎಂಬುದು **ಆರನೆಯ ಪ್ರಶ್ನೆ.** 'ಜನ್ಮ ಸಂಸಾರಬಂಧನದಿಂದ ಮುಕ್ತನಾಗುತ್ತಾನೆ' ಎಂಬುದು ಉಳಿದ ಫಲಗಳಿಗೂ ಉಪಲಕ್ಷಣವಾಗಿರುತ್ತದೆ. ಇಲ್ಲಿ ಇದನ್ನು ಹೇಳಿರುವದು ಮೋಕ್ಷವು ಮುಖ್ಯವೆಂಬುದನ್ನು ತಿಳಿಯಿಸುವದಕ್ಕೆ.

### (ಭಾಷ್ಯ)

'ಕಿಮೇಕಮ್' ಇತಿ ಷಟ್‌ಪ್ರಶ್ನಾಃ ಕಥಿತಾಃ, ತೇಷು ಪಾಶ್ಚಾತ್ಯೋಽನನ್ತರೋ ಜಪ್ಯವಿಷಯಃ ಷಷ್ಠಃ ಪ್ರಶ್ನೋಽನೇನ ಶ್ಲೋಕೇನ ಪರಿಹ್ರಿಯತೇ॥

### (ಭಾಷ್ಯಾರ್ಥ)

'ಕಿಮೇಕಮ್' (ಒಂದೇ ಆಗಿರುವ ದೈವತವು ಯಾವುದು?) ಎಂದು ಮುಂತಾದ **ಆರು ಪ್ರಶ್ನೆಗಳನ್ನು** ಹೇಳಿದ್ದಾಯಿತು. ಅವುಗಳಲ್ಲಿ ಇದರ ಹಿಂದೆಯೇ ಇರುವ - ಜಪಿಸುವದಕ್ಕೆ ತಕ್ಕದ್ದಾದ ವಿಷಯವಾದ - **ಆರನೆಯ ಪ್ರಶ್ನೆಗೆ** ಈ (ಮುಂದಿನ) ಶ್ಲೋಕದಲ್ಲಿ ಉತ್ತರವನ್ನು ಹೇಳಲಾಗುವದು:-

### ಭೀಷ್ಮರ ಉತ್ತರ

**ಭೀಷ್ಮ ಉವಾಚ -**

**ಜಗತ್ಪ್ರಭುಂ ದೇವದೇವಮನನ್ತಂ ಪುರುಷೋತ್ತಮಮ್।**
**ಸ್ತುವನ್ನಾಮಸಹಸ್ರೇಣ ಪುರುಷಃ ಸತತೋತ್ಥಿತಃ** ॥೪॥

1. ಜಪಮಾತ್ರದಿಂದ ಉತ್ತಮಫಲವೆಂದು ಇಲ್ಲಿ ಸೂಚಿಸಿದೆ.

2. ಜನ್ಮ ಎಂಬ ಶಬ್ದವನ್ನು ಇಲ್ಲಿ ಅವಿದ್ಯಾಕಾರ್ಯವಾಗಿರುವ ಅನರ್ಥಗಳಿಗೆಲ್ಲ ಹೆಗ್ಗುರುತಾಗಿರುವ ಹುಟ್ಟನ್ನು ಹೇಳುವುದಕ್ಕೆ ಬಳಸಿದೆ - ಎಂದರ್ಥ.

3. ಸಂಸಾರವೆಂದರೆ ಹುಟ್ಟುವದು, ಸಾಯುವದು, ಸುಖದುಃಖಗಳನ್ನು ಅನುಭವಿಸುವದು ಮತ್ತೆ ಮತ್ತೆ ದುಃಖದಲ್ಲಿ ತೊಳಲುತ್ತಿರುವದು. ಇವೆಲ್ಲ ಅವಿದ್ಯೆಯ ಕಾರ್ಯವಾದ್ದರಿಂದ ಅವಿದ್ಯೆ ಎಂದು ಭಾಷ್ಯದಲ್ಲಿ ವ್ಯಾಖ್ಯಾನಮಾಡಿರಬಹುದು.

೪. ಜಗತ್ತಿಗೆ ಪ್ರಭುವೂ ದೇವದೇವನೂ ಅನಂತನೂ ಆಗಿರುವ ಪುರುಷೋತ್ತಮನನ್ನು ಮನುಷ್ಯನು ಸಹಸ್ರನಾಮಗಳಿಂದ ಯಾವಾಗಲೂ ಎದ್ದ ಬಳಿಕ ಸ್ತುತಿಸುತ್ತಿದ್ದರೆ -

(ಭಾಷ್ಯ)

ಭೀಷ್ಮ ಉವಾಚೇತಿ[1]। ಸರ್ವೇಷಾಂ ಬಹಿರನ್ತಃಶತ್ರೂಣಾಂ ಭಯಹೇತುಃ ಭೀಷ್ಮಃ, ಮೋಕ್ಷಧರ್ಮಾದೀನಾಂ ಪ್ರವಕ್ತಾ ಸರ್ವಜ್ಞಃ ॥

ಜಗತ್ಪ್ರಭುಮಿತಿ । ಜಗತ್ ಸ್ಥಾವರಜಙ್ಗಮಾತ್ಮಕಮ್; ತಸ್ಯ ಪ್ರಭುಂ ಸ್ವಾಮಿನಮ್। ದೇವದೇವಂ ದೇವಾನಾಂ ಬ್ರಹ್ಮಾದೀನಾಂ ದೇವಮ್ ಅನನ್ತಂ ದೇಶತಃ ಕಾಲತಃ ವಸ್ತುತಶ್ಚ ಅಪರಿಚ್ಛಿನ್ನಮ್; ಪುರುಷೋತ್ತಮಮ್ - ಕ್ಷರಾಕ್ಷರಾಭ್ಯಾಂ ಕಾರ್ಯಕಾರಣಾಭ್ಯಾಮುತ್ಕೃಷ್ಟಮ್; ನಾಮಸಹಸ್ರೇಣ ನಾಮ್ನಾಂ ಸಹಸ್ರೇಣ ಸ್ತುವನ್ ಗೃಣನ್ ಸಂಕೀರ್ತಯನ್ ಸತತೋತ್ಥಿತಃ - ನಿರನ್ತರಮ್ ಉದ್ಯುಕ್ತಃ ಪುರುಷಃ ಪೂರ್ಣತ್ವಾತ್ ಪುರಿ ಶಯನಾದ್ವಾ ಪುರುಷಃ, "ಸರ್ವದುಃಖಾತಿಗೋ ಭವೇತ್" ಇತಿ ಸರ್ವತ್ರ ಸಂಬಧ್ಯತೇ[2]॥

(ಭಾಷ್ಯಾರ್ಥ)

'ಭೀಷ್ಮ ಉವಾಚ' (ಭೀಷ್ಮನಿಂತೆಂದನು) - (ಎಂಬಲ್ಲಿ) "ಭೀಷ್ಮ"ನೆಂದರೆ ಹೊರಗಿನ, ಒಳಗಿನ - ಎಲ್ಲಾ ಶತ್ರುಗಳಿಗೂ ಭಯಕ್ಕೆ ಕಾರಣನಾಗಿರುವದರಿಂದ ಭೀಷ್ಮನೆಂದು (ಆತನಿಗೆ ಹೆಸರೆಂದು ತಿಳಿಯಬೇಕು). ಮೋಕ್ಷಧರ್ಮವೇ ಮುಂತಾದವುಗಳನ್ನು ತಿಳಿಯಿಸಿಕೊಟ್ಟ ಸರ್ವಜ್ಞನಾತನು.

**'ಜಗತ್ಪ್ರಭುಮ್'** ಎಂಬಲ್ಲಿ ಚಿದಚಿದಾತ್ಮಕವಾಗಿರುವದು ಜಗತ್ತು; ಅದಕ್ಕೆ ಪ್ರಭುವಾಗಿರುವ ಎಂದರೆ ಒಡೆಯನಾಗಿರುವವನೂ, ದೇವದೇವನೂ ಎಂದರೆ ಬ್ರಹ್ಮಾದಿದೇವತೆಗಳಿಗೂ ದೇವನಾಗಿರುವವನೂ, ಅನಂತನೂ - ಎಂದರೆ ದೇಶದಿಂದಲೂ ಕಾಲದಿಂದಲೂ ವಸ್ತುವಿನಿಂದಲೂ ಕಟ್ಟುವಡೆಯದೆ ಇರುವಾತನೂ ಆಗಿರುವ, ಪುರುಷೋತ್ತಮನನ್ನು (ಎಂದರೆ) ಕ್ಷರ, ಅಕ್ಷರ - ಎಂಬ ಕಾರ್ಯಕಾರಣಗಳಿಗಿಂತಲೂ ಉತ್ಕೃಷ್ಟನಾಗಿರುವ[3] (ಹೆಚ್ಚಿನ ಪುರುಷನನ್ನು), ನಾಮಸಹಸ್ರದಿಂದ ಸಾವಿರನಾಮಗಳ ಸ್ತೋತ್ರದಿಂದ ಸ್ತುತಿಸುತ್ತಿದ್ದರೆ, ಗುಣಗಳ

1. ಮೂಲಸ್ತೋತ್ರದಲ್ಲಿ 'ಭೀಷ್ಮ ಉವಾಚ' ಎಂದೂ ಭಾಷ್ಯದಲ್ಲಿ 'ಭೀಷ್ಮ ಉವಾಚೇತಿ' ಎಂಬುದನ್ನೂ ಸೇರಿಸಿಕೊಂಡಿದೆ. ಮುಂದೆ ಭಾಷ್ಯದಲ್ಲಿ ಭೀಷ್ಮಶಬ್ದದ ನಿರ್ವಚನವಿರುವದರಿಂದ ಈ ಪಾಠವೇ ಉತ್ತಮವೆನ್ನಬೇಕಾಗಿದೆ.

2. ಈ ಭಾಷ್ಯಭಾಗವನ್ನು ನೋಡಿದರೆ ೬ನೆಯ ಶ್ಲೋಕದವರೆಗೆ ಎಲ್ಲಾ ಶ್ಲೋಕಗಳನ್ನೂ ಒಟ್ಟಿಗೆ ಭಾಷ್ಯಕಾರರು ಬರೆದುಕೊಂಡಿದ್ದರೇನೋ ಎನಿಸುತ್ತಿದೆ. ಆದರೆ ಗೀ॥ ವ್ಯಾ॥ ಪಾ॥ ಪಾಠಗಳೆಲ್ಲದರಲ್ಲೂ ಶ್ಲೋಕಸಂಖ್ಯೆಗಳನ್ನು ಬೇರೆಬೇರೆಯಾಗಿ ಕೊಟ್ಟು ಬೇರೆ ಬೇರೆಯಾಗಿ ಭಾಷ್ಯವನ್ನು ಬರೆದುಕೊಂಡಿದೆ.

3. ಗೀ.೧೫-೧೮ರಲ್ಲಿ ಹೇಳಿರುವಂತೆ ಪ್ರಾಕೃತಾಪ್ರಾಕೃತಗಳ ಸಂಬಂಧವಿಲ್ಲದ ಶುದ್ಧರೂಪನಾದ.

ಕೀರ್ತನೆಯನ್ನು ಮಾಡುತ್ತಿದ್ದರೆ, ಯಾವಾಗಲೂ ಎದ್ದು ಉದ್ಯುಕ್ತನಾಗಿರುವ[1] ಪುರುಷನು, ಪೂರ್ಣನಾಗಿರುವದರಿಂದಲೂ[2] ಪುರದಲ್ಲಿರುವವನಾದ್ದರಿಂದಲೂ[3] ಪುರುಷನೆನಿಸಿರುವ ಮನುಷ್ಯನು ('ಸರ್ವದುಃಖಾತೀತನಾಗುವನು') ಎಲ್ಲಾ ದುಃಖಗಳನ್ನೂ ದಾಟಿದವನಾಗುವನು ಎಂದು (೭ನೆಯ ಶ್ಲೋಕದಲ್ಲಿರುವ ವಾಕ್ಯದೊಡನೆ ಇಲ್ಲಿರುವ) ಎಲ್ಲಾ ಶ್ಲೋಕಗಳನ್ನೂ ಅನ್ವಯಿಸಿಕೊಳ್ಳಬೇಕು.

**ತಮೇವ ಚಾರ್ಚಯನ್ನಿತ್ಯಂ ಭಕ್ತ್ಯಾ ಪುರುಷಮವ್ಯಯಮ್ ।**
**ಧ್ಯಾಯನ್ ಸ್ತುವನ್ ನಮಸ್ಯಂಶ್ಚ ಯಜಮಾನಸ್ತಮೇವ ಚ ॥೫॥**

೫. ಆತನನ್ನೇ ಅರ್ಚಿಸುತ್ತಲೂ ಅವ್ಯಯನಾದ (ಆ) ಪುರುಷನನ್ನೇ ನಿತ್ಯವೂ ಭಕ್ತಿಯಿಂದ ಧ್ಯಾನಿಸುತ್ತಲೂ ಸ್ತುತಿಸುತ್ತಲೂ ನಮಸ್ಕರಿಸುತ್ತಲೂ ಆತನನ್ನೇ ಪೂಜಿಸುತ್ತಲೂ ಇದ್ದರೆ

### (ಭಾಷ್ಯ)

ಉತ್ತರೇಣ ಶ್ಲೋಕೇನ **ಚತುರ್ಥಃ ಪ್ರಶ್ನಃ** ಪರಿಹ್ರಿಯತೇ । ತಮೇವ ಚ ಅರ್ಚಯನ್ ಬಾಹ್ಯಾರ್ಚನಂ ಕುರ್ವನ್ ನಿತ್ಯಂ - ಸರ್ವೇಷು ಕಾಲೇಷು ಭಕ್ತಿಃ ಭಜನಂ ತಾತ್ಪರ್ಯಮ್; ತಯಾ ಭಕ್ತ್ಯಾ। ಪುರುಷಮ್ ಅವ್ಯಯಮ್ - ವಿನಾಶವಿಕ್ರಿಯಾರಹಿತಮ್, ತಮೇವ ಚ ಧ್ಯಾಯನ್ ಅಭ್ಯಂತರಾರ್ಚನಂ ಕುರ್ವನ್ ಸ್ತುವನ್ - ವ್ಯಾಖ್ಯಾತಮ್। ನಮಸ್ಯನ್ ನಮಸ್ಕಾರಂ ಕುರ್ವನ್। ಪೂಜಾಶೇಷಭೂತಂ ಉಭಯಂ ಸ್ತುತಿನಮಸ್ಕಾರಲಕ್ಷಣಮ್, ಯಜಮಾನಃ - ಪೂಜಕಃ ಫಲಭೋಕ್ತಾ। ಅಥವಾ ಅರ್ಚಯನ್ ಇತ್ಯನೇನ ಉಭಯವಿಧಮರ್ಚನಮ್ ಉಚ್ಯತೇ। 'ಧ್ಯಾಯನ್ ಸ್ತುವನ್ ನಮಸ್ಯಂಶ್ಚ' ಇತ್ಯನೇನ ಮಾನಸಂ ವಾಚಿಕಂ ಕಾಯಿಕಂ ಚ ಉಚ್ಯತೇ॥

### (ಭಾಷ್ಯಾರ್ಥ)

ಮುಂದಿನ ಶ್ಲೋಕದಿಂದ **ನಾಲ್ಕನೆಯ ಪ್ರಶ್ನೆಗೆ** ಉತ್ತರವನ್ನು ಹೇಳಿರುತ್ತದೆ. ಆತನನ್ನೇ ಅರ್ಚಿಸುತ್ತಲೂ ಎಂದರೆ ಹೊರಗಿನ ಅರ್ಚನೆಯನ್ನು ಮಾಡುತ್ತಲೂ ನಿತ್ಯವೂ ಎಲ್ಲಾ ಕಾಲಗಳಲ್ಲಿಯೂ ಭಕ್ತಿಯಿಂದ - ಭಕ್ತಿ ಎಂದರೆ ಭಜಿಸುವದು, ತತ್ಪರನಾಗಿರುವದು, ಅದರಿಂದ - ಅವ್ಯಯನಾದ ವಿನಾಶವೆಂಬ (ಕೊನೆಯ) ವಿಕಾರ[4] ವಿಲ್ಲದವನಾದ (ಆ) ಪುರುಷನನ್ನು ಒಳಗಿನ ಅರ್ಚನೆಯಾದ ಧ್ಯಾನವನ್ನು ಮಾಡುತ್ತಲೂ 'ಸ್ತುತಿಸುತ್ತಲೂ' (ಇದರ ಅರ್ಥವನ್ನು ಹಿಂದೆಯೇ) ವಿವರಿಸಿದ್ದಾಗಿದೆ.

1. ಬೆಳಗ್ಗೆ ಏಳುತ್ತಲೂ ಸ್ತೋತ್ರವನ್ನು ಹೇಳಿಕೊಳ್ಳಬೇಕು ಎಂದೂ ಅರ್ಥಮಾಡಿಕೊಳ್ಳಬಹುದಾಗಿತ್ತು.
2. 'ಸರ್ವಗತನಾಗಿರುವದರಿಂದ' ಎಂಬುದು ಪರಮಾತ್ಮನಿಗೇ ಹೆಚ್ಚು ಒಪ್ಪುತ್ತದೆಯಾದರೂ ಜೀವನೂ ಸರ್ವವ್ಯಾಪಿ - ಎಂಬರ್ಥವನ್ನು ಇಲ್ಲಿ ಸೂಚಿಸಿದೆ.
3. ಶರೀರದಲ್ಲಿ ಅಥವಾ ಹೃದಯದಲ್ಲಿ.
4. ಇದೆ, ಉಂಟಾಗುತ್ತದೆ - ಮುಂತಾದ ಆರು ಭಾವವಿಕಾರಗಳಲ್ಲಿ ನಾಶವಾಗುವದೆಂಬುದು ಆರನೆಯ ವಿಕಾರವು. ಗೀತೆಯ (೨-೨೦) ಭಾಷ್ಯವನ್ನು ನೋಡಿ.

ನಮಸ್ಕರಿಸುತ್ತಲೂ - ನಮಸ್ಕಾರವನ್ನು ಮಾಡುತ್ತಲೂ - ಸ್ತುತಿ, ನಮಸ್ಕಾರ - ಈ ಎರಡೂ ಪೂಜೆಗೆ ಅಂಗವಾಗಿರುವವುಗಳು[1]. ಯಜಮಾನನು - ಎಂದರೆ ಪೂಜಿಸುವವನು - ಸಾಧನೆಯ ಫಲವನ್ನು ಅನುಭವಿಸುವಾತನು - ಎಂದರ್ಥ. 'ಅರ್ಚಿಸುತ್ತಲೂ' ಎಂಬುದರಿಂದ (ಬಾಹ್ಯ,ಅಂತರ - ಈ) ಎರಡು ವಿಧವಾದ ಅರ್ಚನೆಯನ್ನೂ ಹೇಳಿದೆ. ಧ್ಯಾನಿಸುತ್ತಲೂ ಸ್ತುತಿಸುತ್ತಲೂ ನಮಸ್ಕರಿಸುತ್ತಲೂ ಎಂಬುದರಿಂದ ಮಾನಸ, ವಾಚಿಕ, ಶಾರೀರಕ (ಸಾಧನವನ್ನು) ಹೇಳಿದೆ (ಎಂದಾದರೂ[2] ವಿವರಿಸಬಹುದಾಗಿದೆ).

(ಭಾಷ್ಯ)

'ತೃತೀಯಂ ಪ್ರಶ್ನಂ' ಪರಿಹರತಿ ಉತ್ತರೈಸ್ತ್ರಿಭಿಃ ಪಾದೈಃ -

(ಭಾಷ್ಯಾರ್ಥ)

ಮುಂದಿನ (ಶ್ಲೋಕದ) ಮೂರು ಪಾದಗಳ ಅರ್ಥದಿಂದ ಮೂರನೆಯ ಪ್ರಶ್ನೆಗೆ ಉತ್ತರವನ್ನು ಹೇಳಲಾಗುತ್ತದೆ:

**ಅನಾದಿನಿಧನಂ ವಿಷ್ಣುಂ ಸರ್ವಲೋಕಮಹೇಶ್ವರಮ್ ।**
**ಲೋಕಾಧ್ಯಕ್ಷಂ ಸ್ತುವನ್ನಿತ್ಯಂ ಸರ್ವದುಃಖಾತಿಗೋ ಭವೇತ್ ॥೬॥**

೬. ಅನಾದ್ಯನಂತನೂ ಸರ್ವಲೋಕಮಹೇಶ್ವರನೂ ಲೋಕಾಧ್ಯಕ್ಷನೂ ಆದ ವಿಷ್ಣುವನ್ನು ನಿತ್ಯವೂ ಸ್ತುತಿಸುತ್ತಿದ್ದರೆ ಸರ್ವದುಃಖಾತೀತನಾಗುವನು.

(ಭಾಷ್ಯ)

ಅನಾದಿನಿಧನಂ ಷಡ್ಭಾವವಿಕಾರವರ್ಜಿತಮ್; ವಿಷ್ಣುಂ ವ್ಯಾಪನಶೀಲಮ್ (ಸರ್ವಲೋಕಮಹೇಶ್ವರಮ್)[3] ಸರ್ವಸ್ಯ, ಲೋಕ್ಯತ ಇತಿ ಲೋಕಃ ದೃಶ್ಯವರ್ಗಃ, ತಸ್ಯ ನಿಯನ್ತೄಣಾಂ ಬ್ರಹ್ಮಾದೀನಾಮಪಿ ಈಶ್ವರತ್ವಾತ್ ಸರ್ವಲೋಕಮಹೇಶ್ವರಮ್ ತಮ್; ಲೋಕಂ ದೃಶ್ಯವರ್ಗಂ ಸ್ವಾಭಾವಿಕೇನ ಬೋಧೇನ ಸಾಕ್ಷಾತ್ ಪಶ್ಯತೀತಿ ಲೋಕಾಧ್ಯಕ್ಷಃ, ತಂ ನಿತ್ಯಂ ನಿರನ್ತರಂ ಸ್ತುವನ್ 'ದುಃಖಾತಿಗೋ ಭವೇತ್' ಇತಿ ತ್ರಯಾಣಾಂ ಸ್ತವಾರ್ಚನಜಪಾನಾಂ ಸಾಧಾರಣಂ ಫಲವಚನಮ್ । ಸರ್ವಾಣಿ

1. 'ಸ್ತುತಿಸುತ್ತಲೂ, ನಮಸ್ಕರಿಸುತ್ತಲೂ' ಎಂದು ಹೇಳಿರುವದರಿಂದ ಅವು ಅರ್ಚನೆಯಲ್ಲಿಯೇ ಸೇರಿರುವ ಅಂಗಗಳೆಂದು ತಿಳಿಯಬೇಕು. ಸ್ವತಂತ್ರವಾದ ಅರ್ಚನೆಗಳಲ್ಲ.

2. ಮೊದಲನೆಯ ವ್ಯಾಖ್ಯಾನದಲ್ಲಿ 'ಅರ್ಚಿಸುತ್ತಲೂ' ಎಂಬುದು ಬಾಹ್ಯಾರ್ಚನೆ, 'ಧ್ಯಾನಿಸುತ್ತಲೂ' ಮುಂತಾದದ್ದು ಒಳಗೆ ಮಾಡುವ ಅರ್ಚನೆ. ಎರಡನೆಯ ವ್ಯಾಖ್ಯಾನದಲ್ಲಿ 'ಅರ್ಚನೆ'ಯಲ್ಲಿಯೇ ಎರಡು ವಿಧವಾದ ಅರ್ಚನೆಗಳನ್ನೂ ಸೇರಿಸಿದೆ; ಧ್ಯಾನಾದಿಗಳಿಂದ ಮಾನಸಾದಿನಿತ್ಯಸಾಧನವನ್ನು ಹೇಳಿದೆ ಎಂದು ಅಭಿಪ್ರಾಯ. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.

3. ಇದನ್ನು ಇಲ್ಲಿಟ್ಟಿದ್ದರೆ ಬೇಗನೆ ಅರ್ಥವಾಗುತ್ತಿತ್ತು ಆದರೆ ಅಚ್ಚಿನ ಪಾಠಗಳಲ್ಲಿ ಹಾಗಿಲ್ಲ. ಮುಂದೆಯೂ ಹೀಗೆಯೇ ಊಹಿಸಿಕೊಳ್ಳಬೇಕು.

ಆಧ್ಯಾತ್ಮಿಕಾದೀನಿ ದುಃಖಾನಿ ಅತೀತ್ಯ ಗಚ್ಛತೀತಿ ಸರ್ವದುಃಖಾತಿಗಃ ಭವೇತ್ ಸ್ಯಾತ್ ॥

(ಭಾವಾರ್ಥ)

ಅನಾದ್ಯನಂತನೂ ಎಂದರೆ ಭಾವಗಳ ಆರು ವಿಕಾರಗಳೂ[1] ಇಲ್ಲದವನೂ ವಿಷ್ಣುವೂ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವ ಸ್ವಭಾವದವನೂ (ಸರ್ವಲೋಕ ಮಹೇಶ್ವರನೂ) - ಎಲ್ಲಾ (ಲೋಕಕ್ಕೂ) - (ಲೋಕ್ಯತೇ) ಕಾಣಲ್ಪಡುತ್ತದೆಯಾದ್ದರಿಂದ ದೃಶ್ಯಸಮೂಹಕ್ಕೆ ಲೋಕ (ವೆಂದು ಹೆಸರು); ಆ ಲೋಕಕ್ಕೆ ನಿಯಂತೃಗಳಾಗಿರುವ [2] ಬ್ರಹ್ಮಾದಿಗಳಿಗೂ ಈಶ್ವರನಾಗಿರುವದರಿಂದ ಸರ್ವಲೋಕಮಹೇಶ್ವರನೂ[3] (ಲೋಕಾಧ್ಯಕ್ಷನೂ) - ಲೋಕವೆಂದರೆ ದೃಶ್ಯಸಮೂಹವು, ಆ ಲೋಕವನ್ನು (ತನಗೆ) ಸ್ವಭಾವದಿಂದಲೇ ಇದ್ದುಕೊಂಡಿರುವ ಅರಿವಿನಿಂದ[4] ನೇರಾಗಿ ನೋಡುತ್ತಾನಾದ್ದರಿಂದ[5] ಲೋಕಾಧ್ಯಕ್ಷನೂ; ಅಂಥವನೂ ಆದ ಆ (ದೇವನನ್ನು)[6] ನಿತ್ಯವೂ ನಿರಂತರವಾಗಿ[7] ಸ್ತುತಿಸುತ್ತಿದ್ದರೆ 'ಸರ್ವದುಃಖಾತಿಗನಾಗುವನು' - ಎಂಬ (ನಾಲ್ಕನೆಯ ಪಾದದ ಅರ್ಥವು) ಸ್ತೋತ್ರ ಮಾಡುವದು, ಅರ್ಚಿಸುವದು, ಜಪಿಸುವದು - ಎಂಬ ಮೂರಕ್ಕೂ ಸಮಾನವಾಗಿರುವ ಫಲವಚನವಿದು. ಆಧ್ಯಾತ್ಮಿಕವೇ ಮುಂತಾದ[8] ಎಲ್ಲಾ ದುಃಖಗಳನ್ನೂ ಮೀರಿ ಹೋಗುವವನಾದ್ದರಿಂದ 'ಸರ್ವದುಃಖಾತಿಗ'ನಾಗುವನು.[9]

**ಬ್ರಹ್ಮಣ್ಯಂ ಸರ್ವಧರ್ಮಜ್ಞಂ ಲೋಕಾನಾಂ ಕೀರ್ತಿವರ್ಧನಮ್।**
**ಲೋಕನಾಥಂ ಮಹದ್ಭೂತಂ ಸರ್ವಭೂತಭವೋದ್ಭವಮ್ ॥೭॥**

---

1. ಹುಟ್ಟುವದು, ಇರುವದು, ಬೆಳೆಯುವದು, ಮಾರ್ಪಡುವದು, ಸವೆಯುವದು, ನಾಶವಾಗುವದು - ಎಂದು ಪದಾರ್ಥಗಳಿಗೆ ಆರು ವಿಕಾರಗಳಿರುವವು; ಪರಮಾತ್ಮನಿಗೆ ಇವು ಇರುವದಿಲ್ಲವೆಂಬುದನ್ನು 'ಅನಾದಿನಿಧನಂ' ಎಂಬ ವಿಶೇಷಣದಿಂದ ಸೂಚಿಸಿದೆ - ಎಂದು ಭಾವ.

2. ಲೋಕಕ್ಕೆ ನಿಯಂತೃಗಳಾದವರು ಅದನ್ನು ಕಟ್ಟಿನಲ್ಲಿಟ್ಟುಕೊಂಡಿರುವವರಾದ್ದರಿಂದ ಬ್ರಹ್ಮಾದಿಗಳು ಈಶ್ವರರು.

3. ಅವರನ್ನೂ ಕಟ್ಟಿನಲ್ಲಿಟ್ಟುಕೊಂಡಿರುವದರಿಂದ ಈತನು ಸರ್ವಲೋಕಮಹೇಶ್ವರನು. ಶ್ವೇ. ೬-೭ನ್ನು ನೋಡಿ.

4. ತನ್ನ ಸ್ವರೂಪವೇ ಆಗಿರುವ ಕೂಟಸ್ಥಚೈತನ್ಯಸ್ವರೂಪವಾದ ಅರಿವಿನಿಂದ.

5. ಯಾವ ಕರಣವನ್ನೂ ಬಯಸದೆ ಬೆಳಗಿ ತೋರುತ್ತಿರುವ ಸಾಕ್ಷಿಯಾಗಿರುವದರಿಂದ.

6. ವಿಷ್ಣುಮ್ (ವಿಷ್ಣುವನ್ನು) ಎಂಬುದನ್ನೇ ವಿಶೇಷ್ಯವಾಗಿಟ್ಟುಕೊಂಡಿದ್ದರೂ ಆಗುತ್ತಿತ್ತು. ಭಾಷ್ಯದಲ್ಲಿ ಅದನ್ನು 'ವ್ಯಾಪನಶೀಲನಾದ' ಎಂದು ವ್ಯಾಖ್ಯಾನಮಾಡಿ ವಿಶೇಷಣವಾಗಿಟ್ಟುಕೊಂಡಿರುವದರಿಂದ 'ದೇವನನ್ನು' ಎಂಬ ವಿಶೇಷ್ಯವನ್ನು ಅಧ್ಯಾಹಾರಮಾಡಿಕೊಳ್ಳಬೇಕಾಗಿದೆ.

7. 'ದಿನದಿನವೂ' ಎಂದೂ ನಿತ್ಯಶಬ್ದಕ್ಕೆ ಅರ್ಥವನ್ನು ಮಾಡಿಕೊಳ್ಳಬಹುದು. 'ನಿರಂತರವಾಗಿ' (ಎಂದರೆ ಎಡೆಬಿಡದೆ) ಎಂದು ಭಾಷ್ಯದಲ್ಲಿ ಇದನ್ನು ವಿವರಿಸಿದೆ.

8. ಆಧ್ಯಾತ್ಮಿಕ (ಶರೀರದಲ್ಲಾಗುವ),ಆಧಿಭೌತಿಕ (ಭೂತಗಳಿಂದಾಗುವ),ಆಧಿದೈವಿಕ (ಸೂರ್ಯಚಂದ್ರಾದಿಗಳಿಂದಾಗುವ) ದುಃಖಗಳನ್ನು ಎಂದರ್ಥ.

9. ಭಾಷ್ಯದಲ್ಲಿ 'ಭವೇತ್' ಎಂಬುದಕ್ಕೆ 'ಸ್ಯಾತ್' ಎಂದು ವ್ಯಾಖ್ಯಾನವನ್ನು ಬರೆದಿದೆ. ಇವೆರಡಕ್ಕೂ 'ಆಗುವನು' ಎಂದೇ ಅರ್ಥ.

೭. ಬ್ರಹ್ಮಣ್ಯನೂ, ಸರ್ವಧರ್ಮಜ್ಞನೂ, ಲೋಕಗಳ ಕೀರ್ತಿಯನ್ನು ಬೆಳೆಯಿಸುವಾತನೂ, ಲೋಕನಾಥನೂ ಮಹದ್ಭೂತವೂ ಸರ್ವಭೂತಗಳ ಭವಕ್ಕೆ ಉತ್ಪತ್ತಿಕಾರಣನೂ (ಆಗಿರುವ ದೇವನನ್ನು ಸ್ತುತಿಸುತ್ತಿದ್ದರೆ ಸರ್ವ ದುಃಖಾತೀತನಾಗುವನು).

## (ಭಾಷ್ಯ)

ಪುನರಪಿ ತಮೇವ ಸ್ತುತ್ಯಂ ವಿಶಿನಷ್ಟಿ - ಬ್ರಹ್ಮಣ್ಯಂ ಬ್ರಹ್ಮಣೇ ಬ್ರಾಹ್ಮಣಾಯ ತಪಸೇ ಶ್ರುತಯೇ ವಾ ಹಿತಮ್। ಸರ್ವಾನ್ ಧರ್ಮಾನ್ ಜಾನಾತೀತಿ ಸರ್ವಧರ್ಮಜ್ಞಃ ತಮ್; ಲೋಕಾನಾಂ ಪ್ರಾಣಿನಾಂ ಕೀರ್ತಯಃ ಯಶಾಂಸಿ ತಾಃ ಸ್ವಶಕ್ತ್ಯಾನುಪ್ರವೇಶೇನ ವರ್ಧಯತೀತಿ ತಮ್; ಲೋಕೈಃ ನಾಥ್ಯತೇ ಲೋಕಾನ್ ಉಪತಪತಿ ಆಶಾಸ್ತೇ, ಲೋಕಾನ್ ಈಷ್ಟೇ ಇತಿ ವಾ ಲೋಕನಾಥಃ, ತಮ್ ಮಹದ್ ಭೂತಮ್ - ಮಹದ್ ಬ್ರಹ್ಮ ವಿಶ್ವೋತ್ಕರ್ಷೇಣ ವರ್ತಮಾನತ್ವಾತ್ ಭೂತಂ ಪರಮಾರ್ಥಸತ್ಯಮ್। ಸರ್ವಭೂತಭವೋದ್ಭವಮ್ - ಸರ್ವಭೂತಾನಾಂ ಭವಃ ಸಂಸಾರಃ ಯತ್ಸಕಾಶಾದ್ ಭವತಿ ತಮ್ ॥

## (ಭಾಷ್ಯಾರ್ಥ)

ಮತ್ತೂ ಅದೇ ಸ್ತುತಿಸಬೇಕಾದ (ದೇವನನ್ನೇ) ವಿಶೇಷಣಗಳಿಂದ ತಿಳಿಸುತ್ತಿದ್ದಾರೆ: ಬ್ರಹ್ಮಣ್ಯನೂ - ಬ್ರಹ್ಮನಿಗೂ, ಬ್ರಾಹ್ಮಣನಿಗೂ, ತಪಸ್ಸಿಗೂ, ಶ್ರುತಿಗೂ, ಹಿತವನ್ನುಂಟುಮಾಡುವ, ಎಲ್ಲಾ ಧರ್ಮಗಳನ್ನೂ ಬಲ್ಲವನಾದ್ದರಿಂದ ಸರ್ವಧರ್ಮಜ್ಞನೂ, ಲೋಕಗಳ ಎಂದರೆ ಜೀವರುಗಳ ಕೀರ್ತಿಗಳನ್ನು ಎಂದರೆ ಒಳ್ಳೆಯ ಹೆಸರುಗಳನ್ನು ತನ್ನ ಶಕ್ತಿಯಿಂದ[1] ಒಳಹೊಕ್ಕಿರುವದರಿಂದ ಹೆಚ್ಚುವಂತೆ ಮಾಡುತ್ತಿರುವದರಿಂದ ಬೆಳೆಯಿಸುವಾತನು; ಲೋಕಗಳಿಂದ ಪ್ರಾರ್ಥಿಸಲ್ಪಡುವದರಿಂದ, ಲೋಕಗಳನ್ನು (ನಾಥ್ಯತೇ) ಸಂಕಟಗೊಳಿಸುತ್ತಿರುವದರಿಂದ; (ಅವರನ್ನು) ಆಳುತ್ತಿರುವದರಿಂದ[2] ಲೋಕನಾಥನು; ಆ ಮಹಾಭೂತವನ್ನು ಮಹತ್ತೆಂದರೆ ಎಲ್ಲಕ್ಕಿಂತಲೂ ಹೆಚ್ಚಿನದಾಗಿರುವ ಬ್ರಹ್ಮವು; ಭೂತವೆಂದರೆ ಪರಮಾರ್ಥವಾಗಿಯೂ ಸತ್ಯವಾಗಿರುವದು (ಅಂಥದ್ದು); (ಸರ್ವಭೂತಭವೋದ್ಭವನೂ) ಎಲ್ಲಾ ಪ್ರಾಣಿಗಳ ಭವ ಎಂದರೆ ಸಂಸಾರವು (ಅದು), ಯಾವಾತನ ದೆಸೆಯಿಂದ ಉಂಟಾಗುತ್ತಿರುವದೋ[3] ಆತನನ್ನು (ಸ್ತುತಿಸುತ್ತಿದ್ದರೆ ಸರ್ವದುಃಖಾತೀತನಾಗುವನು).

---

1. ಇಲ್ಲಿ ಶಕ್ತಿಯೆಂದರೇನೆಂಬುದು ಗೊತ್ತಾಗುವಂತಿಲ್ಲ. ತನ್ನ ಅಂಶವಾದ ಜೀವರೂಪವೆಂದಿರಬಹುದು

2. 'ನಾಥ್' ಎಂಬ ಧಾತುವಿಗೆ ನಾಲ್ಕು ಬೇರೆಬೇರೆಯ ಅರ್ಥಗಳನ್ನು ಇಲ್ಲಿ ಕೊಟ್ಟಿರುತ್ತದೆ.

3. ಯಾವಾತನನ್ನು ಅರಿತುಕೊಳ್ಳುವದರಿಂದ ಉಂಟಾಗುತ್ತಿರುವದೋ.

**ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ।**
**ಯದ್ಭಕ್ತ್ಯಾ ಪುಣ್ಡರೀಕಾಕ್ಷಂ ಸ್ತವೈರರ್ಚೇನ್ನರಃ ಸದಾ ॥೮॥**

೮. ನರನಾದವನು ಭಕ್ತಿಯಿಂದ ಪುಂಡರೀಕಾಕ್ಷನನ್ನು ಯಾವಾಗಲೂ ಸ್ತೋತ್ರಗಳಿಂದ ಅರ್ಚಿಸುತ್ತಿರುವದಿದೆಯಲ್ಲ, ಇದೇ ಸರ್ವಧರ್ಮಗಳಿಗಿಂತಲೂ ಹೆಚ್ಚಿನ ಧರ್ಮವೆಂದು ನನ್ನ ಮತವು.

(ಭಾಷ್ಯ)

**ಪಞ್ಚಮಂ ಪ್ರಶ್ನಂ** ಪರಿಹರತಿ - ಸರ್ವೇಷಾಂ ಚೋದನಾಲಕ್ಷಣಾನಾಂ ಧರ್ಮಾಣಾಮ್ ಏಷಃ ವಕ್ಷ್ಯಮಾಣಃ ಧರ್ಮಃ, ಅಧಿಕತಮಃ ಇತಿ ಮೇ ಮಮ ಮತಃ ಅಭಿಮತಃ ಅಭಿಪ್ರೇತಃ। ಯದ್ ಭಕ್ತ್ಯಾ ತಾತ್ಪರ್ಯೇಣ ಪುಣ್ಡರೀಕಾಕ್ಷಂ ಹೃದಯಪುಣ್ಡರೀಕೇ ಪ್ರಕಾಶಮಾನಂ ವಾಸುದೇವಂ ಸ್ತವೈಃ ಗುಣಸಂಕೀರ್ತನಲಕ್ಷಣೈಃ ಸ್ತುತಿಭಿಃ ಸದಾ ಅರ್ಚೇತ್, ಸತ್ಕಾರಪೂರ್ವಕಂ ಅರ್ಚನಂ ಕರೋತಿ ಸದಾ ನರಃ ಮನುಷ್ಯಃ, ಇತಿ ಯತ್ ಏಷ ಧರ್ಮ ಇತಿ ಸಂಬನ್ಧಃ॥

(ಭಾಷ್ಯಾರ್ಥ)

**ಐದನೆಯ ಪ್ರಶ್ನೆಯನ್ನು** (ಉತ್ತರದಿಂದ) ಪರಿಹರಿಸುತ್ತಿದ್ದಾರೆ :

ಚೋದನಾಲಕ್ಷಣವಾದ [1] ಎಲ್ಲ ಧರ್ಮಗಳೊಳಗೆ, ಇದು ಈ ಮುಂದೆ ಹೇಳುವ ಧರ್ಮವು ತೀರ ಹೆಚ್ಚಿನದು, ಎಂದು ನನಗೆ ಮತವಾಗಿದೆ, ಒಪ್ಪಾಗಿದೆ (ನನ್ನ) ಅಭಿಪ್ರಾಯವಾಗಿದೆ. ಯಾವದೆಂದರೆ ಭಕ್ತಿಯಿಂದ, ತತ್ಪರನಾಗಿರುವದರಿಂದ ಪುಂಡರೀಕಾಕ್ಷನನ್ನು -ಹೃದಯಕಮಲದಲ್ಲಿ ಹೊಳೆಯುತ್ತಿರುವ [2] ವಾಸುದೇವನನ್ನು ಗುಣಗಳನ್ನು ಗಟ್ಟಿಯಾಗಿ ಹೇಳುತ್ತಿರುವ ಲಕ್ಷಣದ ಸ್ತೋತ್ರಗಳಿಂದ ಸ್ತುತಿಗಳಿಂದ, ಯಾವಾಗಲೂ ನರನು ಮನುಷ್ಯನು, ಯಾವಾಗಲೂ ಅರ್ಚಿಸುತ್ತಿರುವನು, ಸತ್ಕಾರಪೂರ್ವಕವಾಗಿ ಅರ್ಚಿಸುತ್ತಿರುವನು - ಎಂಬಿದೇ ಧರ್ಮವು ಎಂದು ಸಂಬಂಧವು.

(ಭಾಷ್ಯ)

ಅಸ್ಯ ಸ್ತುತಿಲಕ್ಷಣಸ್ಯಾರ್ಚನಸ್ಯ ಆಧಿಕ್ಯೇ ಕಿಂ ಕಾರಣಮ್? ಉಚ್ಯತೇ - ಹಿಂಸಾದಿಪುರುಷಾನ್ತರದ್ರವ್ಯಾನ್ತರದೇಶಕಾಲಾದಿನಿಯಮಾನಪೇಕ್ಷತ್ವಮ್ ಆಧಿಕ್ಯೇ ಕಾರಣಮ್-

ಧ್ಯಾಯನ್ ಕೃತೇ ಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್ ॥

ಇತಿ ವಿಷ್ಣುಪುರಾಣೇ ॥ ವಿ.ಪು. ೬-೨-೧೭

1. ಚೋದನಾ ಎಂಬುದಕ್ಕೆ ವೇದ ಎಂದು ಮೈ॥ ಪಾಠಾಂತರ. ಎರಡಕ್ಕೂ ಒಂದೇ ಅರ್ಥ.
2. ಸಾಕ್ಷಿಚೈತನ್ಯರೂಪವಾಗಿರುವ.

ಜಪ್ಯೇನೈವ ತು ಸಂಸಿದ್ಧ್ಯೇದ್ ಬ್ರಾಹ್ಮಣೋ ನಾತ್ರ ಸಂಶಯಃ।
ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥
ಇತಿ ಮಾನವಂ ವಚನಮ್ ॥ ಮನು. ೨ - ೮೭
ಜಪಸ್ತು ಸರ್ವಧರ್ಮೇಭ್ಯಃ ಪರಮೋ ಧರ್ಮ ಉಚ್ಯತೇ।
ಅಹಿಂಸಯಾ ಚ ಭೂತಾನಾಂ ಜಪಯಜ್ಞಃ ಪ್ರವರ್ತತೇ॥ (ಮ.ಭಾ)
ಇತಿ ಮಹಾಭಾರತೇ ॥

'ಯಜ್ಞಾನಾಂ ಜಪಯಜ್ಞೋಽಸ್ಮಿ' (ಗೀ.೧೦-೨೫) ಇತಿ ಭಗವದ್ವಚನಮ್। ಏತತ್ ಸರ್ವಮಭಿಪ್ರೇತ್ಯ 'ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ' ಇತ್ಯುಕ್ತಮ್॥

## (ಭಾಷ್ಯಾರ್ಥ)

(ಪ್ರಶ್ನೆ :-) ಈ ಸ್ತುತಿರೂಪವಾದ ಅರ್ಚನೆಯು (ಎಲ್ಲಕ್ಕಿಂತಲೂ) ಹೆಚ್ಚಿನದೆಂಬುದಕ್ಕೆ ಕಾರಣವೇನು ?

(ಉತ್ತರ :-) ಹೇಳುತ್ತೇವೆ. ಹಿಂಸೆಯೇ ಮುಂತಾದವುಗಳಾಗಲಿ,[1] ಮತ್ತೊಬ್ಬ ಪುರುಷನಾಗಲಿ ಮತ್ತೊಂದು ದ್ರವ್ಯವಾಗಲಿ, ದೇಶಕಾಲಾದಿನಿಯಮಗಳಾಗಲಿ[2] - ಇಲ್ಲಿ ಅವಶ್ಯವಿಲ್ಲದಿರುವದೇ (ಇದರ) ಹೆಚ್ಚುಗಾರಿಕೆಗೆ ಕಾರಣವು. (ಏಕೆಂದರೆ) - "ಕೃತಯುಗದಲ್ಲಿ ಧ್ಯಾನಿಸುವದರಿಂದಲೂ, ತ್ರೇತಾಯುಗದಲ್ಲಿ ಯಜ್ಞಗಳಿಂದ ಪೂಜಿಸುವದರಿಂದಲೂ, ದ್ವಾಪರದಲ್ಲಿ ಅರ್ಚನೆಯನ್ನು ಮಾಡುವದರಿಂದಲೂ ಯಾವ ಫಲವನ್ನು ಪಡೆಯುತ್ತಾನೋ ಆ (ಫಲವನ್ನು) ಕಲಿಯುಗದಲ್ಲಿ ಕೇಶವನನ್ನು ಸಂಕೀರ್ತನೆ ಮಾಡುವದರಿಂದ(ಲೇ) ಪಡೆದುಕೊಳ್ಳುತ್ತಾನೆ" ಎಂದು **ವಿಷ್ಣುಪುರಾಣದ** ವಾಕ್ಯವಿದೆ. "ಬ್ರಾಹ್ಮಣನು ಜಪದಿಂದಲೇ[3] ಸಿದ್ಧನಾಗುವನು, ಇದರಲ್ಲಿ ಸಂಶಯವಿಲ್ಲ. ಮತ್ತೊಂದನ್ನು ಮಾಡಲಿ, ಅಥವಾ ಮಾಡದೆ ಇರಲಿ, ಮೈತ್ರನು[4] ಬ್ರಾಹ್ಮಣನೆನಿಸಿಕೊಳ್ಳುತ್ತಾನೆ" ಎಂದು **ಮನುವಚನ**. "ಜಪವಾದರೊ, ಎಲ್ಲಾ ಧರ್ಮಗಳಿಗಿಂತಲೂ ಶ್ರೇಷ್ಠವಾದ ಧರ್ಮವೆನಿಸುತ್ತದೆ. (ಏಕೆಂದರೆ) ಪ್ರಾಣಿಗಳ ಹಿಂಸೆಯನ್ನು ಮಾಡದೆ ಇರುವದರಿಂದೊಡಗೂಡಿ ಜಪಯಜ್ಞವು ಸಾಗುತ್ತದೆ" (?) ಎಂದು **ಮಹಾಭಾರತ**. "ಯಜ್ಞಗಳೊಳಗೆ ಜಪಯಜ್ಞವಾಗಿರುವೆನು" ಎಂಬುದು **ಭಗವಂತನ ವಚನ**.[5] ಇದೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡು, ಇದೇ ಧರ್ಮಗಳೊಳಗೆಲ್ಲ ಅಧಿಕವಾದ ಧರ್ಮವೆಂಬುದು ನನ್ನ ಮತವು ಎಂದು (ಇಲ್ಲಿ) ಹೇಳಲಾಗಿದೆ.

---

1. ಇಲ್ಲಿ 'ಮುಂತಾದ' ಎಂಬುದರಿಂದ ಏನನ್ನು ಇಟ್ಟುಕೊಳ್ಳಬೇಕೆಂದು ತಿಳಿಯಲಿಲ್ಲ. ವ್ಯಾಖ್ಯಾನದಲ್ಲಿ ಇಂಥ ಅಧಿಕಾರಿಯೇ ಬೇಕೆಂಬ ನಿಯಮವೇ ಮುಂತಾದದ್ದು ಎಂದಿದೆ.
2. ಇಂಥ ದಿಕ್ಕಿಗೇ ತಿರುಗಿಕೊಂಡು ಸ್ತುತಿಸಬೇಕೆಂಬ ನಿಯಮವಿಲ್ಲ ಎಂದು ಅಭಿಪ್ರಾಯವಿರಬೇಕು.
3. ಇಲ್ಲಿ ಜಪ್ಯ (ಜಪಿಸತಕ್ಕದ್ದು) ಎಂದು ಯಾವದನ್ನು ಹೇಳಿದೆ ಎಂಬುದನ್ನು ಸ್ಪಷ್ಟವಾಗಿ ಭಾಷ್ಯದಲ್ಲಿ ತಿಳಿಸಿಲ್ಲ.
4. ಮೈತ್ರನು ಬಾಹ್ಮಣನೆನಿಸುತ್ತಾನೆ - ಎಂದಿರುವದರಿಂದ ಇಲ್ಲಿ ಗಾಯತ್ರೀಜಪದ ಪರಾಮರ್ಶವಿದೆ ಎಂದು ಊಹಿಸುವದಕ್ಕೆ ಅವಕಾಶವಿದೆ.
5. ಆದ್ದರಿಂದ ಸ್ತೋತ್ರರೂಪವಾದ ಜಪವೂ ಭಗವಂತನ ವಿಭೂತಿ ಎಂದು ಭಾವ.

**ಪರಮಂ ಯೋ ಮಹತ್ತೇಜಃ ಪರಮಂ ಯೋ ಮಹತ್ತಪಃ।**
**ಪರಮಂ ಯೋ ಮಹದ್ಬ್ರಹ್ಮ ಪರಮಂ ಯಃ ಪರಾಯಣಮ್ ॥೯॥**

೯. ಯಾವಾತನು ಪರಮವಾದ ಮಹಾತೇಜಸ್ಸಾಗಿರುವನೋ, ಯಾವಾತನು ಪರಮವಾದ ಮಹಾತಪಸ್ಸಾಗಿರುವನೋ, ಯಾವಾತನು ಪರಮವಾದ ಮಹಾಬ್ರಹ್ಮವಾಗಿರುವನೋ, ಯಾವಾತನು ಪರಮವಾದ ಪರಾಯಣನಾಗಿ ಇರುವನೋ-

## (ಭಾಷ್ಯ)

**ದ್ವಿತೀಯಂ ಪ್ರಶ್ನಂ** ಸಮಾಧತ್ತೇ - ಪರಮಂ ಪ್ರಕೃಷ್ಟಂ ಮಹತ್ ಬೃಹತ್ ತೇಜಃ - ಚೈತನ್ಯಲಕ್ಷಣಂ ಸರ್ವಾವಭಾಸಕಮ್, 'ಯೇನ ಸೂರ್ಯಸ್ತಪತಿ ತೇಜಸೇದ್ಧಃ' (ತೈ.ಬ್ರಾ. ೩-೧೨-೭), 'ತದ್ದೇವಾ ಜ್ಯೋತಿಷಾಂ ಜ್ಯೋತಿ ರಾಯುರ್ಹೋಪಾಸತೇಽಮೃತಮ್' (ಬೃ.೪-೪-೧೬), 'ನ ತತ್ರ ಸೂರ್ಯೋ ಭಾತಿ ನ ಚನ್ದ್ರತಾರಕಂ ನೇಮಾ ವಿದ್ಯುತೋ ಭಾನ್ತಿ ಕುತೋಽಯಮಗ್ನಿಃ। ತಮೇವ ಭಾನ್ತಮನುಭಾತಿ ಸರ್ವಂ ತಸ್ಯ ಭಾಸಾ ಸರ್ವಮಿದಂ ವಿಭಾತಿ' (ಮುಂ. ೨-೨-೧೦) ಇತ್ಯಾದಿಶ್ರುತೇಃ। 'ಯದಾದಿತ್ಯಗತಂ ತೇಜಃ' (ಗೀ. ೧೫-೧೨) ಇತ್ಯಾದಿಸ್ಮೃತೇಶ್ಚ। ಪರಮಂ ತಪಃ ತಪತೇ (?) ಆಜ್ಞಾಪಯತೀತಿ ತಪಃ। 'ಯ ಇಮಂ ಚ ಲೋಕಂ ಪರಂ ಚ ಲೋಕಂ ಸರ್ವಾಣಿ ಚ ಭೂತಾನಿ ಯೋಽನ್ತರೋ ಯಮಯತಿ' (ಬೃ.೩-೭-೧) ಇತ್ಯನ್ತರ್ಯಾಮಿಬ್ರಾಹ್ಮಣೇ ಸರ್ವನಿಯನ್ತೃತ್ವಂ ಶ್ರೂಯತೇ। 'ಭೀಷಾಽಸ್ಮಾದ್ವಾತಃ ಪವತೇ' (ತೈ.೨-೮) ಇತ್ಯಾದಿ ತೈತ್ತಿರೀಯಕೇ। ತಪತಿ ಈಷ್ಟೇ ಇತಿ ವಾ ತಪಃ। ತಸ್ಯೈಶ್ವರ್ಯಮನವಚ್ಛಿನ್ನಮ್ ಇತಿ ಮಹತ್ತ್ವಮ್। 'ಏಷ ಸರ್ವೇಶ್ವರಃ' (ಮಾಂ. ೬; ಬೃ. ೪-೪-೨೨) ಇತ್ಯಾದಿಶ್ರುತೇಃ। ಪರಮಂ ಸತ್ಯಾದಿಲಕ್ಷಣಂ ಪರಂ ಬ್ರಹ್ಮ ಮಹನೀಯತಯಾ ಮಹತ್; ಪರಮಂ ಪ್ರಕೃಷ್ಟಂ ಪುನರಾವೃತ್ತಿಶಙ್ಕಾವರ್ಜಿತಮ್; ಪರಾಯಣಂ ಪರಮ್ ಅಯನಂ ಪರಾಯಣಮ್॥

## (ಭಾಷ್ಯಾರ್ಥ)

**ಎರಡನೆಯ ಪ್ರಶ್ನೆಗೆ** ಉತ್ತರವನ್ನು ಹೇಳುತ್ತಾರೆ; ಪರಮವೆಂದರೆ ಉತ್ಕೃಷ್ಟವಾದ, ಮಹತ್ - ಎಂದರೆ ದೊಡ್ಡ ತೇಜಸ್ಸು - ಚೈತನ್ಯರೂಪವಾದ, ಎಲ್ಲವನ್ನೂ ಬೆಳಗಿತೋರಿಸುವ (ಬೆಳಕು) : 'ಯಾವ ತೇಜಸ್ಸಿನಿಂದ ಹೊತ್ತಿಕೊಂಡಿರುವ ಸೂರ್ಯನು ತಪಿಸುತ್ತಿರುವನೋ', ' ಆ ಬೆಳಕುಗಳಿಗೆಲ್ಲ ಬೆಳಕನ್ನು ಕೊಡುವ ಅಮೃತಸ್ವರೂಪವಾದ ಅದನ್ನು ಆಯುಸ್ಸೆಂದು ಉಪಾಸನೆ ಮಾಡುತ್ತಿರುವರು,' 'ಅಲ್ಲಿ ಸೂರ್ಯನೂ ಬೆಳಗುವದಿಲ್ಲ, ಚಂದ್ರನಕ್ಷತ್ರಗಳ ಸಮೂಹವೂ (ಬೆಳಗುತ್ತಿಲ್ಲ), ಈ ಮಿಂಚುಗಳೂ ಬೆಳಗುತ್ತಿಲ್ಲ, (ಇನ್ನು) ಈ ಬೆಂಕಿಯು ಹೇಗೆ ತಾನೆ (ಬೆಳಗೀತು)? ಬೆಳಗುತ್ತಿರುವ

ಆತನನ್ನೇ ಅನುಸರಿಸಿಕೊಂಡು ಎಲ್ಲವೂ ಬೆಳಗುತ್ತಿರುವದು, ಆತನ ಬೆಳಕಿನಿಂದಲೇ ಇದೆಲ್ಲವೂ ಹೊಳೆಯುತ್ತಿರುವದು, 'ಯಾವದು ಆದಿತ್ಯನಲ್ಲಿರುವ ಬೆಳಕೋ .... (ಅದು ನನ್ನದೆಂದು ತಿಳಿ)' - ಎಂಬ ಸ್ಮೃತಿಯ ಪ್ರಮಾಣದಿಂದಲೂ (ಹೀಗೆಂದು ತಿಳಿಯಬೇಕು).

'ಪರಮವಾದ ತಪಸ್ಸು' (ಎಂಬಲ್ಲಿ) ಆಜ್ಞಾಪಿಸುತ್ತಾನಾದ್ದರಿಂದ[1] ತಪಸ್ಸು 'ಯಾವಾತನು ಈ ಲೋಕವನ್ನೂ ಪರಲೋಕವನ್ನೂ ಎಲ್ಲಾ ಪ್ರಾಣಿಗಳನ್ನೂ ಒಳಗಿದ್ದುಕೊಂಡು ನಿಯಮಿಸುತ್ತಿರುವನೋ' ಎಂದು ಎಲ್ಲವನ್ನೂ ನಿಯಮನ ಮಾಡುತ್ತಾನೆಂದು[2] **ಅಂತರ್ಯಾಮಿಬ್ರಾಹ್ಮಣ**ದಲ್ಲಿ ಹೇಳಿರುತ್ತದೆ. 'ಈತನ ಅಂಜಿಕೆಯಿಂದ ಗಾಳಿಯು ಬೀಸುತ್ತಿರುವದು' ಎಂದು ಮುಂತಾಗಿ **ತೈತ್ತಿರೀಯಕ**ದಲ್ಲಿದೆ. ಅಥವಾ ತಪಿಸುತ್ತಾನೆ, ಆಳುತ್ತಾನೆ[3] - ಆದ್ದರಿಂದ ತಪಸ್ಸು - ಎಂದಾದರೂ (ತಪಶ್ಯಬ್ದಕ್ಕೆ ವ್ಯುತ್ಪತ್ತಿಯನ್ನು ಹೇಳಬಹುದು). ಆತನ ಆಳುವಿಕೆಗೆ ಎಲ್ಲೆಕಟ್ಟಿಲ್ಲವಾದ್ದರಿಂದ 'ಮಹತ್ತಪಃ' ಎಂದಿದೆ. 'ಈತನು ಸರ್ವೇಶ್ವರನು' ಮುಂತಾಗಿರುವ ಶ್ರುತಿಯು (ಇದಕ್ಕೆ ಪ್ರಮಾಣ).

ಪರಮವಾದ - ಎಂದರೆ ಸತ್ಯವೇ ಮುಂತಾದ[4] ಸ್ವರೂಪದ ಪರಬ್ರಹ್ಮವು ಪೂಜ್ಯವಾಗಿರು[5]ವದರಿಂದ 'ಮಹತ್' ಎಂದಿದೆ. (ಪರಮಂ ಯಃ ಪರಾಯಣಮ್) ಎಂಬಲ್ಲಿ ಪರಮವೆಂದರೆ ಹಿಂತಿರುಗಿ (ಸಂಸಾರಕ್ಕೆ) ಬಂದೀತೆಂಬ ಶಂಕೆಯಿಲ್ಲದ್ದು (ಎಂದರ್ಥ). 'ಪರಾಯಣವು' ಎಂದರೆ ಹೆಚ್ಚಿನ ಗತಿಯು.

## (ಭಾಷ್ಯ)

ಪರಮಗ್ರಹಣಾತ್ ಸರ್ವತ್ರ ಅಪರಮಂ ತೇಜಃ ಆದಿತ್ಯಾದಿಕಂ ವ್ಯಾವರ್ತ್ಯತೇ। ಸರ್ವತ್ರ 'ಯೋ ದೇವಃ' ಇತಿ ವಿಶೇಷ್ಯತೇ ಚ। ಯೋ ದೇವಃ ಪರಮಂ ತೇಜಃ ಪರಮಂ ತಪಃ, ಪರಮಂ ಬ್ರಹ್ಮ ಪರಮಂ ಪರಾಯಣಮ್, ಸ ಏಕಃ ಪರಾಯಣಮ್ - ಇತಿ ವಾಕ್ಯಾರ್ಥಃ॥

## (ಭಾಷ್ಯಾರ್ಥ)

**ಪರಮ**ಶಬ್ದವನ್ನು ಇಟ್ಟುಕೊಂಡಿರುವದರಿಂದ (ಈ) ಎಲ್ಲಾ ಕಡೆಯಲ್ಲಿಯೂ ಅಪರಮತೇಜಸ್ಸಾದ ಆದಿತ್ಯನೇ ಮುಂತಾದದ್ದನ್ನು ಕೈಬಿಟ್ಟಂತಾಯಿತು. ಮತ್ತು (ಈ)

1. ಇದು ಯಾವ ಧಾತುವೋ ತಿಳಿಯಲಿಲ್ಲ; ಐಶ್ವರ್ಯಾರ್ಥಕವಾದರೆ 'ತಪ್ಯತೇ' ಎಂದಿರಬೇಕಾಗಿತ್ತು.
2. ತಪ್‌ಧಾತುವಿಗೆ ಆಜ್ಞಾಪಿಸುತ್ತಾನೆ ಎಂಬರ್ಥವು ಇದೆಯೆ? - ಎಂಬುದು ವಿಚಾರಣೀಯ. ಪರಮಾತ್ಮನ ತಪಸ್ಸೆಂಬುದು ಜ್ಞಾನಮಯವಾಗಿರುತ್ತದೆ - ಎಂದು ಮುಂಡಕದಲ್ಲಿದೆ.
3. ಮೂಲದಲ್ಲಿರುವ 'ತಪತಿ' ಬರೆದವರ ಕೈತಪ್ಪಿನಿಂದ ಬಿದ್ದಿದ್ದರೂ ಇರಬಹುದು.
4. ಸತ್ಯಜ್ಞಾನಾನಂತರೂಪವಾದ. ತೈ.೨-೧ರಸೂಚನೆ
5. ದೊಡ್ಡದು ಎಂಬರ್ಥವು ಬ್ರಹ್ಮಶಬ್ದದಿಂದಲೇ ಬಂದುಬಿಟ್ಟಿರುವದರಿಂದ 'ಮಹತ್' ಎಂಬುದಕ್ಕೆ ಪೂಜ್ಯವಾದ ಎಂಬರ್ಥವನ್ನು ಇಲ್ಲಿ ಬರೆದಿದೆ ಎಂದು ವಿವೃತಿ.

ಎಲ್ಲಾ ಕಡೆಯಲ್ಲಿಯೂ 'ಯಾವ ದೇವನು' ಎಂಬುದೇ ವಿಶೇಷ್ಯರಾಗಿರುತ್ತದೆ. 'ಯಾವ ದೇವನು ಪರಮತೇಜಸ್ಸೋ, ಪರಮತಪಸ್ಸೋ, ಪರಮಬ್ರಹ್ಮವೋ, ಪರಮಪರಾಯಣವೋ, ಆ ದೇವನೊಬ್ಬನೇ ಪರಾಯಣನು' ಎಂಬುದು ವಾಕ್ಯದ ಒಟ್ಟರ್ಥ.

**ಪವಿತ್ರಾಣಾಂ ಪವಿತ್ರಂ ಯೋ ಮಙ್ಗಲಾನಾಂ ಚ ಮಙ್ಗಲಮ್।**
**ದೈವತಂ ದೇವತಾನಾಂ ಚ ಭೂತಾನಾಂ ಯೋಽವ್ಯಯಃ ಪಿತಾ ॥೧೦॥**

೧೦. ಯಾವಾತನು ಪವಿತ್ರಗಳಿಗೆಲ್ಲಕ್ಕೂ ಪವಿತ್ರನಾಗಿರುವನೋ ಮಂಗಲಗಳಿಗೆಲ್ಲ ಮಂಗಲನೋ ದೇವತೆಗಳಿಗೆಲ್ಲ ದೈವತನಾಗಿರುವನೋ, ಭೂತಗಳಿಗೆಲ್ಲ ಅವ್ಯಯನಾದ ತಂದೆಯಾಗಿರುವನೋ -

(ಭಾಷ್ಯ)

ಇದಾನೀಂ **ಪ್ರಥಮಪ್ರಶ್ನಸ್ಯ** ಉತ್ತರಮಾಹ। ಪವಿತ್ರಾಣಾಂ ಪಾವನಾನಾಂ ತೀರ್ಥಾದೀನಾಂ ಪವಿತ್ರಮ್। ಪರಮಸ್ತು ಪುಮಾನ್ ಧ್ಯಾತೋ ದೃಷ್ಟಃ ಕೀರ್ತಿತಃ ಸ್ತುತಃ ಸಂಪೂಜಿತಃ ಸ್ಮೃತಃ ಪ್ರಣತಃ ಪಾಪ್ಮನಃ ಸರ್ವಾನ್ ಉನ್ಮೂಲಯತೀತಿ ಪರಮಂ ಪವಿತ್ರಮ್। ಸಂಸಾರಹೇತುಭೂತಂ ಪುಣ್ಯಾಪುಣ್ಯಾತ್ಮಕಂ ಕರ್ಮ ತತ್ಕಾರಣಂ ಚಾಜ್ಞಾನಂ ಸರ್ವಂ ನಾಶಯತಿ ಸ್ವಯಾಥಾತ್ಮ್ಯಜ್ಞಾನೇನೇತಿ ವಾ ಪವಿತ್ರಾಣಾಂ ಪವಿತ್ರಮ್।

[1]ರೂಪಮಾರೋಗ್ಯಮರ್ಥಾಂಶ್ಚ ಭೋಗಾಂಶ್ಚೈವಾನುಷಙ್ಗಿಕಾನ್ ।
ದದಾತಿ ಧ್ಯಾಯತೋ ನಿತ್ಯಮಪವರ್ಗಪ್ರದೋ ಹರಿಃ॥
ಚಿನ್ತ್ಯಮಾನಃ ಸಮಸ್ತಾನಾಂ ಕ್ಲೇಶಾನಾಂ ಹಾನಿದೋ ಹಿ ಯಃ ।
ಸಮುತ್ಸೃಜ್ಯಾಖಿಲಂ ಚಿನ್ತ್ಯಂ ಸೋಽಚ್ಯುತಃ ಕಿಂ ನ ಚಿನ್ತ್ಯತೇ॥
ಧ್ಯಾಯೇನ್ನಾರಾಯಣಂ ದೇವಂ ಸ್ನಾನಾದಿಷು[2] ಚ ಕರ್ಮಸು।
ಪ್ರಾಯಶ್ಚಿತ್ತಂ ಹಿ ಸರ್ವಸ್ಯ ದುಷ್ಕೃತಸ್ಯೇತಿ ವೈ ಶ್ರುತಿಃ॥
(ಗರುಡ. ೧-೨೨೨-೨೮)

ಸಂಸಾರಸರ್ಪಸನ್ದಷ್ಟನಷ್ಟಚೇಷ್ಟೈಕಭೇಷಜಮ್।
ಕೃಷ್ಣೇತಿ ವೈಷ್ಣವಂ ಮನ್ತ್ರಂ ಶ್ರುತ್ವಾ ಮುಕ್ತೋ ಭವೇನ್ನರಃ॥
ಅತಿಪಾತಕಯುಕ್ತೋಽಪಿ ಧ್ಯಾಯನ್ನಿಮಿಷಮಚ್ಯುತಮ್।
ಭೂಯಸ್ತಪಸ್ವೀ ಭವತಿ ಪಙ್ಕ್ತಿಪಾವನಪಾವನಃ॥

---

1. ಇಲ್ಲಿಂದ ಮುಂದಕ್ಕೆ ಇರುವ ವಾಕ್ಯಗಳು ಮೈ॥ ಪಾಠದಲ್ಲಿ ಬೇರೆ ಅನುಕ್ರಮದಲ್ಲಿವೆ. ಪರಿಶಿಷ್ಟವನ್ನು ನೋಡಿ. ನಾವು ಗೋ॥ ಪಾಠವನ್ನೇ ಅನುಸರಿಸುತ್ತೇವೆ. ಅಡ್ಯಾರ್ ಇಂಗ್ಲೀಷು ಅನುವಾದದಲ್ಲಿ ಈ ಅನುಕ್ರಮವೇ ಕಾಣಬರುತ್ತದೆ.
2. ಮೂಲದಲ್ಲಿ 'ಸ್ನಾನದಾನಾದಿ' ಎಂದೂ, 'ಪ್ರಾಯಶ್ಚಿತ್ತೇಷು ಸರ್ವೇಷು ದುಷ್ಕೃತೇಷು ವಿಶೇಷತಃ' ಎಂದು ಉತ್ತರಾರ್ಧವೂ ಇದೆ.

ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ।
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ॥
(ಲಿಂಗ. ೨-೭-೧೧)

ಹರಿರೇಕಃ ಸದಾ ಧ್ಯೇಯಃ ಭವದ್ಭಿಃ ಸತ್ತ್ವಸಂಸ್ಥಿತೈಃ। [1]
ಓಮಿತ್ಯೇವಂ ಸದಾ ವಿಪ್ರಾಃ ಪಠತ ಧ್ಯಾತ ಕೇಶವಮ್॥
(ಹರಿ.೩-೮೯-೮,೯)

[2]ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವಸಂಶಯಾಃ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ॥
(ಮುಂ.೨-೨.೮)

ಯನ್ನಾಮಕೀರ್ತನಂ ಭಕ್ತ್ಯಾ ವಿಲಾಪನಮನುತ್ತಮಮ್। [3]
ಮೈತ್ರೇಯಾಶೇಷಪಾಪಾನಾಂ ಧಾತೂನಾಮಿವ ಪಾವಕಃ॥
(ವಿಷ್ಣು. ೬-೮-೨೦)

ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ।
ಪುಮಾನ್ ವಿಮುಚ್ಯತೇ ಸದ್ಯಃ ಸಿಂಹತ್ರಸ್ತೈರ್ವೃಕೈರಿವ॥
(ವಿಷ್ಣು. ೬-೮-೧೯)

ಧ್ಯಾಯನ್ ಕೃತೇ ಯಜನ್ ಯಜ್ಞೈಸ್ತ್ರೇತಾಯಾಂ ದ್ವಾಪರೇಽರ್ಚಯನ್।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಮ್॥
(ವಿಷ್ಣು.೬-೨-೧೭)

ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ।
ಅನಿಚ್ಛಯಾಪಿ ಸಂಸ್ಪೃಷ್ಟೋ ದಹತ್ಯೇವ ಹಿ ಪಾವಕಃ॥
(ಬೃ.ನಾರದ.೧-೧೧-೧೦೦)

ಜ್ಞಾನತೋಽಜ್ಞಾನತೋ ವಾಪಿ ವಾಸುದೇವಸ್ಯ ಕೀರ್ತನಾತ್।
ತತ್ಸರ್ವಂ ವಿಲಯಂ ಯಾತಿ ತೋಯಸ್ಥಂ ಲವಣಂ ಯಥಾ॥
ಯಸ್ಮಿನ್ನ್ಯಸ್ತಮತಿರ್ನ ಯಾತಿ ನರಕಂ ಸ್ವರ್ಗೋಽಪಿ ಯಚ್ಚಿನ್ತನೇ।
ವಿಘ್ನೋ ಯತ್ರ ನಿವೇಶಿತಾತ್ಮಮನಸೋ ಬ್ರಾಹ್ಮೋಽಪಿ ಲೋಕೋಽಲ್ಪಕಃ॥
ಮುಕ್ತಿಂ ಚೇತಸಿ ಯಃ ಸ್ಥಿತೋಽಮಲಧಿಯಾಂ ಪುಂಸಾಂ ದದಾತ್ಯವ್ಯಯಃ।
ಕಿಂ ಚಿತ್ರಂ ಯದಘಂ ಪ್ರಯಾತಿ ವಿಲಯಂ ತತ್ರಾಚ್ಯುತೇ ಕೀರ್ತಿತೇ॥
(ವಿಷ್ಣು.೬-೮-೫೬)

1. 'ಸತ್ತ್ವಮಾಸ್ಥಿತೈಃ' ಎಂದು ಮೂಲಪಾಠ.
2. ಈ ಮಂತ್ರವನ್ನು ಹಿಂದೆ (ಪು.೩) ಒಂದು ಸಲ ಆಗಲೆ ಉದಾಹರಿಸಿದ್ದಾಗಿದೆ.
3. 'ವಿಲಾಯನಮನುತ್ತಮಮ್' ಎಂದು ವಿಷ್ಣು ಪುರಾಣದಲ್ಲಿದೆ.

ಶಮಾಯಾಲಂ ಜಲಂ ವಹ್ನೇಸ್ತಮಸೋ ಭಾಸ್ಕರೋದಯಃ।
ಶಾನ್ತ್ಯೈ ಕಲೌ ಹ್ಯಘೌಘಸ್ಯ ನಾಮಸಂಕೀರ್ತನಂ ಹರೇಃ॥
ಹರೇರ್ನಾಮೈವ ನಾಮೈವ ನಾಮೈವ ಮಮ ಜೀವನಮ್।
ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ॥
(ಬೃ.ನಾರದ. ೧-೪೧-೧೫)

ಸ್ತುತ್ವಾ ವಿಷ್ಣುಂ ವಾಸುದೇವಂ ವಿಪಾಪೋ ಜಾಯತೇ ನರಃ।
ವಿಷ್ಣೋಃ ಸಂಪೂಜನಾನ್ನಿತ್ಯಂ ಸರ್ವಪಾಪಂ ಪ್ರಣಶ್ಯತಿ॥
ಸರ್ವದಾ ಸರ್ವಕಾರ್ಯೇಷು ನಾಸ್ತಿ ತೇಷಾಮಮಙ್ಗಲಮ್।
ಯೇಷಾಂ ಹೃದಿಸ್ಥೋ ಭಗವಾನ್ ಮಙ್ಗಲಾಯತನಂ ಹರಿಃ॥
(ಸ್ಕಾಂದ. ೫-೩-೧೫೭-೭)

ನಿತ್ಯಂ ಸಂಚಿನ್ತಯೇದ್ದೇವಂ ಯೋಗಯುಕ್ತೋ ಜನಾರ್ದನಮ್।
ನಾಸ್ಯ ಮನ್ಯೇ ಪರಾ ರಕ್ಷಾ ಕೋ ಹಿನಸ್ತ್ಯಚ್ಯುತಾಶ್ರಯಮ್॥
ಗಙ್ಗಾಸ್ನಾನಸಹಸ್ರೇಷು ಪುಷ್ಕರಸ್ನಾನಕೋಟಿಷು।
ಯತ್ಪಾಪಂ ವಿಲಯಂ ಯಾತಿ ಸ್ಮೃತೇ ನಶ್ಯತಿ ತದ್ಧರೌ॥
(ಗರುಡ.೧-೨೨೨-೧೮)

ಮುಹೂರ್ತಮಪಿ ಯೋ ಧ್ಯಾಯೇನ್ನಾರಾಯಣಮನಾಮಯಮ್।
ಸೋಽಪಿ ಸಿದ್ಧಿಮವಾಪ್ನೋತಿ ಕಿಂ ಪುನಸ್ತತ್ಪರಾಯಣಃ॥
ಪ್ರಾಯಶ್ಚಿತ್ತಾನ್ಯಶೇಷಾಣಿ ತಪಃಕರ್ಮಾತ್ಮಕಾನಿ ವೈ।
ಯಾನಿ ತೇಷಾಮಶೇಷಾಣಾಂ ಕೃಷ್ಣಾನುಸ್ಮರಣಂ ಪರಮ್॥
(ವಿಷ್ಣು. ೨-೬-೩೭)

ಕಲಿಕಲ್ಮಷಮತ್ಯುಗ್ರಂ ನರಕಾರ್ತಿಪ್ರದಂ ನೃಣಾಮ್।
ಪ್ರಯಾತಿ ವಿಲಯಂ ಸದ್ಯಃ ಸಕೃದ್ಯತ್ರಾಪಿ[1] ಸಂಸ್ಮೃತೇ॥ (ವಿಷ್ಣು.೬-೮-೨೧)

ಸಕೃತ್ ಸ್ಮೃತೋಽಪಿ ಗೋವಿನ್ದೋ ನೃಣಾಂ ಜನ್ಮಶತೈಃ ಕೃತಮ್।
ಪಾಪರಾಶಿಂ ದಹತ್ಯಾಶು ತೂಲರಾಶಿಮಿವಾನಲಃ॥
ಯಥಾಗ್ನಿರುದ್ಧತಶಿಖಃ ಕಕ್ಷಂ ದಹತಿ ಸಾನಿಲಃ।
ತಥಾ ಚಿತ್ತಸ್ಥಿತೋ ವಿಷ್ಣುರ್ಯೋಗಿನಾಂ ಸರ್ವಕಿಲ್ಬಿಷಮ್॥
(ವಿಷ್ಣು. ೬-೭-೭೪)

ಏಕಸ್ಮಿನ್ನಪ್ಯತಿಕ್ರಾನ್ತೇ ಮುಹೂರ್ತೇ ಧ್ಯಾನವರ್ಜಿತೇ।
ದಸ್ಯುಭಿರ್ಮುಷಿತೇನೇವ ಯುಕ್ತಮಾಕ್ರನ್ದಿತುಂ ಭೃಶಮ್॥

1. 'ಯತ್ರ ಚ' ಎಂದು ವಿಷ್ಣು ಪುರಾಣದಲ್ಲಿದೆ.

ಜನಾರ್ದನಂ ಭೂತಪತಿಂ ಜಗದ್ಗುರುಂ
ಸ್ಮರನ್ ಮನುಷ್ಯಃ ಸತತಂ ಮಹಾಮುನೇ।
ದುಃಖಾನಿ ಸರ್ವಾಣ್ಯಪಹಸ್ತಿ ಸಾಧಯ
ತ್ಯಶೇಷಕಾರ್ಯಾಣಿ ಚ ಯಾನ್ಯಭೀಪ್ಸತೇ॥

ಏವಮೇಕಾಗ್ರಚಿತ್ತಃ ಸನ್ ಸಂಸ್ಮರನ್ ಮಧುಸೂದನಮ್।
ಜನ್ಮಮೃತ್ಯುಜರಾಗ್ರಾಹಂ ಸಂಸಾರಾಬ್ಧಿಂ ತರಿಷ್ಯತಿ॥
ಕಲಾವತ್ರಾಪಿ ದೋಷಾಢ್ಯೇ ವಿಷಯಾಸಕ್ತಮಾನಸಃ।
ಕೃತ್ವಾಪಿ ಸಕಲಂ ಪಾಪಂ ಗೋವಿನ್ದಂ ಸಂಸ್ಮರನ್ ಶುಚಿಃ॥
ವಾಸುದೇವೇ ಮನೋ ಯಸ್ಯ ಜಪಹೋಮಾರ್ಚನಾದಿಷು।
ತಸ್ಯಾನ್ತರಾಯೋ ಮೈತ್ರೇಯ ದೇವೇನ್ದ್ರತ್ವಾದಿಕಂ ಫಲಮ್॥
(ವಿಷ್ಣು. ೨-೬-೪೧)

ಲೋಕತ್ರಯಾಧಿಪತಿಮಪ್ರತಿಮಪ್ರಭಾವಂ
ಈಷತ್ ಪ್ರಣಮ್ಯ ಶಿರಸಾ ಪ್ರಭವಿಷ್ಣುಮೀಶಮ್।
ಜನ್ಮಾನ್ತರಪ್ರಲಯಕಲ್ಪಸಹಸ್ರಜಾತ -
ಮಾಶು ಪ್ರಣಾಶಮುಪಯಾತಿ ನರಸ್ಯ ಪಾಪಮ್॥

ಏಕೋಽಪಿ ಕೃಷ್ಣಸ್ಯ ಕೃತಃ ಪ್ರಣಾಮೋ।
ದಶಾಶ್ವಮೇಧಾವಭೃಥೇನ ತುಲ್ಯಃ।
ದಶಾಶ್ವಮೇಧೀ ಪುನರೇತಿ ಜನ್ಮ
ಕೃಷ್ಣಪ್ರಣಾಮೀ ನ ಪುನರ್ಭವಾಯ॥ (ಮಹಾ.ಶಾನ್ತಿ.೪೭-೯)

ಅತಸೀಪುಷ್ಪಸಂಕಾಶಂ ಪೀತವಾಸಸಮಚ್ಯುತಮ್।
ಯೇ ನಮಸ್ಯನ್ತಿ ಗೋವಿನ್ದಂ ನ ತೇಷಾಂ ವಿದ್ಯತೇ ಭಯಮ್॥
(ಮಹಾ.ಶಾನ್ತಿ. ೪೭-೯೮)

ಶಾಠ್ಯೇನಾಪಿ ನಮಸ್ಕಾರಃ ಪ್ರಯುಕ್ತಶ್ಚಕ್ರಪಾಣಯೇ।
ಸಂಸಾರಸ್ಥೂಲಬನ್ಧಾನಾಮುದ್ವೇಜನಕರೋ ಹಿ ಸಃ॥
ಇತ್ಯಾದಿಶ್ರುತಿಸ್ಮೃತೀತಿಹಾಸಪುರಾಣವಚನೇಭ್ಯಃ॥

## (ಭಾಷ್ಯಾರ್ಥ)

ಈಗ ಒಂದನೆಯ ಪ್ರಶ್ನೆಗೆ[1] ಉತ್ತರವನ್ನು ಹೇಳುತ್ತಾರೆ: ಪವಿತ್ರಗಳಿಗೂ ಪವಿತ್ರವಾದ ಪಾವನವಾದ ತೀರ್ಥವೇ ಮುಂತಾದವುಗಳೊಳಗೆಲ್ಲ[2] ಯಾವನು ಪವಿತ್ರನಾಗಿರುವನೋ,

1. ಲೋಕದಲ್ಲಿ ಒಂದೇ ಆಗಿರುವ ದೇವತೆಯು ಯಾವುದು? - ಎಂಬ ಪ್ರಶ್ನೆಗೆ.
2. ಮುಂತಾದ ಎಂದರೆ ವೇದಾಧ್ಯಯನ, ವ್ರತ, ಉಪವಾಸ, - ಮುಂತಾದವುಗಳೆಂದು ವ್ಯಾಖ್ಯಾನ.

ಪರಮಪುರುಷನಾದರೊ,[1] ಧ್ಯಾನಮಾಡಿದರೆ, ದರ್ಶನಮಾಡಿದರೆ[2] (ಗುಣ) ಕೀರ್ತನೆ ಮಾಡಿದರೆ, ಸ್ತುತಿಸಿದರೆ,ಸರಿಯಾಗಿ ಪೂಜಿಸಿದರೆ, ಸ್ಮರಿಸಿದರೆ, ನಮಸ್ಕರಿಸಿದರೆ - ಪಾಪಗಳೆಲ್ಲವನ್ನೂ ಬೇರುಸಹಿತವಾಗಿ ಕಿತ್ತುಹಾಕುತ್ತಾನೆ; ಆದ್ದರಿಂದ ಪವಿತ್ರವಾದವುಗಳೆಲ್ಲಕ್ಕಿಂತ ಪರಮಪವಿತ್ರವು. **ಸಂಸಾರಕ್ಕೆ ಕಾರಣವಾಗಿರುವ ಪುಣ್ಯಪಾಪರೂಪವಾದ ಕರ್ಮವನ್ನೂ; ಅದಕ್ಕೆ ಕಾರಣವಾದ ಅಜ್ಞಾನವನ್ನೂ ಎಲ್ಲವನ್ನೂ ತನ್ನ ತತ್ತ್ವವನ್ನು ಅರಿತುಕೊಳ್ಳುವದರಿಂದ ನಾಶಗೊಳಿಸುತ್ತಾನಾದ್ದರಿಂದ "ಪವಿತ್ರವಾದವುಗಳಲ್ಲೆಲ್ಲ ಪವಿತ್ರವು" ಎಂದಾದರೂ (ವ್ಯಾಖ್ಯಾನಮಾಡಬಹುದು).**[3] 'ರೂಪವನ್ನೂ ಆರೋಗ್ಯವನ್ನೂ ಅರ್ಥಗಳನ್ನೂ (ಅವುಗಳಿಂದಾಗುವ) ಭೋಗಗಳನ್ನೂ, ಮೋಕ್ಷವನ್ನೂ ಕೊಡುವ ಹರಿಯು (ತನ್ನನ್ನು) ನಿತ್ಯವೂ ಧ್ಯಾನಮಾಡುವವರಿಗೆ ಕೊಡುತ್ತಾನೆ (?);[4] ಚಿಂತನೆಮಾಡಿದರೆ, ಎಲ್ಲಾ ಕ್ಲೇಶಗಳನ್ನೂ ನಾಶಮಾಡುವವನು ಹರಿಯು; ಮಿಕ್ಕಿದ್ದೆಲ್ಲವನ್ನೂ ಚಿಂತಿಸುವದನ್ನು ಬಿಟ್ಟು ಆ ಅಚ್ಯುತನನ್ನೇ ಏಕೆ ಚಿಂತಿಸಬಾರದು (?) ಸ್ನಾನವೇ ಮುಂತಾದ ಕರ್ಮಗಳಲ್ಲಿಯೂ ನಾರಾಯಣದೇವನನ್ನು ಧ್ಯಾನಮಾಡಬೇಕು, (ಅದು) ಎಲ್ಲಾ ಪಾಪಕ್ಕೂ ಪ್ರಾಯಶ್ಚಿತ್ತವು - ಎಂದು ಶ್ರುತಿಯು ಹೇಳುತ್ತದೆಯಷ್ಟೆ? "ಸಂಸಾರವೆಂಬ ಸರ್ಪವು ಕಚ್ಚಿದ್ದರಿಂದ, ತನ್ನ ವ್ಯಾಪಾರವನ್ನು ಕಳೆದುಕೊಂಡಿರುವ ಚಿತ್ತವುಳ್ಳಾತನಿಗೆ 'ಕೃಷ್ಣ!' ಎಂಬ ವೈಷ್ಣವಮಂತ್ರವೇ ವೈದ್ಯವು; ಅದನ್ನು ಕೇಳಿದರೆ ನರನು ಮುಕ್ತನಾಗುವನು" (?) "ಅತಿಪಾತಕದಿಂದೊಡಗೂಡಿದವನಾಗಿದ್ದರೂ, ಅಚ್ಯುತನನ್ನು (ಒಂದು)ನಿಮಿಷ ಧ್ಯಾನಮಾಡಿದರೂ ಮತ್ತೆ ತಪಸ್ವಿಯಾಗುವನು, ಪಙ್ಕ್ತಿಪಾವನನನ್ನು (ಕೂಡ) ಪಾವನ ಗೊಳಿಸುವನಾಗುವನು"[5](?) 'ಸಕಲಶಾಸ್ತ್ರಗಳನ್ನೂ ಕಡೆದು, ಮತ್ತೆ ಮತ್ತೆ ವಿಚಾರವನ್ನು ಮಾಡಿದಮೇಲೂ ಇದೊಂದೇ ಸಿದ್ಧವಾಗುತ್ತದೆ; (ಅದೇನೆಂದರೆ) ನಾರಾಯಣನನ್ನು ಯಾವಾಗಲೂ ಧ್ಯಾನಿಸುತ್ತಿರಬೇಕು', 'ನೀವು ಸತ್ತ್ವಗುಣವನ್ನು ಅವಲಂಬಿಸಿಕೊಂಡು ಯಾವಾಗಲೂ ಹರಿಯೊಬ್ಬನನ್ನೇ ಸೇವಿಸುತ್ತಿರಬೇಕು; ವಿಪ್ರರೆ, 'ಓಮ್' ಎಂದಿಂತು ಯಾವಾಗಲೂ ಪಠಿಸುತ್ತಿರಿ, ಕೇಶವನನ್ನು ಧ್ಯಾನಿಸುತ್ತಿರಿ', 'ಆ ಪರಾವರನಾದ

---

1. ತೀರ್ಥವೇ ಮುಂತಾದವುಗಳು ಪಾಪವನ್ನು ಕಳೆಯುತ್ತವೆಯಷ್ಟೆ? ಆದರೆ ಅವುಗಳಿಂದ ಪಾಪವು ತೀರ ಹೋಗುವದಿಲ್ಲ - ಎಂಬ ಭಾವವನ್ನು (ಪರಮಸ್ತು) 'ಪರಮಾತ್ಮನಾದರೊ, ಎಂಬಲ್ಲಿರುವ 'ಆದರೊ' ಎಂಬ ಶಬ್ದವು ಸೂಚಿಸುತ್ತದೆ.

2. ಇಲ್ಲಿ "ದೃಷ್ಟಃ' ಎಂಬ ಮಾತಿಗೆ, ಸಾಕ್ಷಾತ್ಕಾರಮಾಡಿಕೊಂಡರೆ ಎಂಬ ಅರ್ಥಕ್ಕಿಂತಲೂ ಪ್ರತೀಕ ರೂಪದಿಂದ ದರ್ಶನಮಾಡಿದರೆ ಎಂದಷ್ಟೇ ಅರ್ಥವನ್ನು ತೆಗೆದುಕೊಳ್ಳಬೇಕೆಂದು ತೋರುತ್ತದೆ.

3. ಇದು ಜ್ಞಾನದಿಂದಾಗುವ ಫಲದ ಕೀರ್ತನೆ.

4. ಇದು ಎಲ್ಲಿಂದ ಉದಾಹೃತವಾದ ವಾಕ್ಯವೋ ತಿಳಿಯಲಿಲ್ಲ.

5. ತ್ರಿಸುಪರ್ಣಮಂತ್ರವನ್ನು ಬ್ರಾಹ್ಮಣನಾದವನು ತನ್ನನ್ನು ಮತ್ತೊಬ್ಬರು ಕೇಳಿಕೊಳ್ಳದೆ ಇದ್ದರೂ ಹೇಳಿಕೊಟ್ಟರೆ ಅಂಥವನು ತನ್ನ ಪಾಪಗಳನ್ನೆಲ್ಲ ಕಳೆದುಕೊಂಡು ಭೋಜನದಲ್ಲಿ ತನ್ನ ಪಙ್ಕ್ತಿಯಲ್ಲಿ ಕೂತಿರುವ ಸಾವಿರಾರು ಜನರನ್ನು ಪವಿತ್ರಗೊಳಿಸುವನೆಂದು ಶ್ರುತಿಯಿದೆ. ವಿಷ್ಣುವನ್ನು ಧ್ಯಾನಿಸುವವನು ಅಂಥವನನ್ನೂ ಪಾವನಗೊಳಿಸುತ್ತಾನೆ - ಎಂದರ್ಥ.

(ಪರಮಾತ್ಮನನ್ನು) ಕಂಡುಕೊಂಡರೆ ಹೃದಯದ ಗಂಟು[1] ಬಿಚ್ಚಿಕೊಳ್ಳುವದು, ಸಕಲಸಂಶಯಗಳೂ ಕತ್ತರಿಸಿಹೋಗುವವು; ಈತನ ಕರ್ಮಗಳೆಲ್ಲ ಸವೆದುಹೋಗುವವು', 'ಮೈತ್ರೇಯನೆ, ಹೇಗೆ ಬೆಂಕಿಯು ಧಾತುಗಳನ್ನು ಕರಗಿಸುವದೋ ಹಾಗೆ ಆತನ ನಾಮಕೀರ್ತನೆಯು ಎಲ್ಲಾ ಪಾಪಗಳನ್ನೂ ಇನ್ನಿಲ್ಲವೆನ್ನುವಷ್ಟು (ಪೂರ್ಣವಾಗಿ) ಕರಗಿಸುವ ಸಾಧನವಾಗಿರುತ್ತದೆ', 'ಪರವಶನಾಗಿ ಆತನ ನಾಮವನ್ನು ಕೀರ್ತನಮಾಡಿದರೂ ಸರ್ವಪಾಪಗಳಿಂದಲೂ ಕೂಡಲೆ ಮನುಷ್ಯನು ಮುಕ್ತನಾಗುತ್ತಾನೆ. ಸಿಂಹಕ್ಕೆ ಅಂಜಿದ ತೋಳಗಳಿಂದ ಹೇಗೆ (ಜನರು) ಬಿಡುಗಡೆಯಾಗುವರೋ ಹಾಗೆಯೇ (ಇದು)', 'ಕೃತಯುಗದಲ್ಲಿ ಧ್ಯಾನಮಾಡುವವನಿಗೂ, ತ್ರೇತಾಯುಗದಲ್ಲಿ ಯಜ್ಞಗಳನ್ನು ಮಾಡುವವನಿಗೂ, ದ್ವಾಪರಯುಗದಲ್ಲಿ ಅರ್ಚನೆಮಾಡುವವನಿಗೂ ಯಾವ (ಫಲವು) ದೊರಕುವದೋ, ಅದೇ ಫಲವು ಕಲಿಯುಗದಲ್ಲಿ ಕೇಶವನನ್ನು ಕೀರ್ತನೆಮಾಡುವವರಿಂದ ದೊರಕುವದು', 'ದೋಷದಿಂದ ಕೂಡಿರುವ ಚಿತ್ತವುಳ್ಳವರು ಸ್ಮರಿಸಿದರೂ ಹರಿಯು ಪಾಪಗಳನ್ನು ಪರಿಹರಿಸುತ್ತಾನೆ. ಬೇಕಿಲ್ಲದೆ ಮುಟ್ಟಿದರೂ ಬೆಂಕಿಯು ಸುಟ್ಟೇ ಸುಡುವದಲ್ಲದೆ?' 'ವಾಸುದೇವನನ್ನು ತಿಳಿದು ಅಥವಾ ತಿಳಿಯದೆ ಕೀರ್ತನೆಮಾಡಿದರೂ ಆ (ಪಾಪ)ವೆಲ್ಲವೂ ನೀರಿನಲ್ಲಿ ಉಪ್ಪು ಕರಗುವಂತೆ ಕರಗಿಹೋಗುವದು'(?), 'ಯಾವಾತನಲ್ಲಿ ಮನಸ್ಸನ್ನಿಟ್ಟವನು (ಎಂದಿಗೂ) ನರಕಕ್ಕೆ ಹೋಗುವದಿಲ್ಲವೋ, ಯಾವನ ಚಿಂತನೆಯಲ್ಲಿ ತೊಡಗಿರುವ ಚಿತ್ತವುಳ್ಳವನಿಗೆ ಸ್ವರ್ಗಪ್ರಾಪ್ತಿಯೂ ವಿಘ್ನವೆನಿಸುವದೋ, ಬ್ರಹ್ಮಲೋಕವು ಕೂಡ ಅಲ್ಪವಾಗಿ ಕಾಣಿಸುವದೋ, ಪರಿಶುದ್ಧವಾದ ಮನಸ್ಸುಳ್ಳ ಮಾನವರಿಗೆ ಚಿತ್ತದಲ್ಲಿರುವ ಯಾವ ಅವ್ಯಯನಾದ (ವಿಷ್ಣುವು) ಮುಕ್ತಿಯನ್ನು ಕೊಡುವನೋ, ಅಂಥ ಆ ಅಚ್ಯುತನನ್ನು ಕೀರ್ತನಮಾಡಿದರೆ ಪಾಪವು ಹೋಗಿಬಿಡುವದೆಂಬುದರಲ್ಲಿ ಆಶ್ಚರ್ಯವೇನು?' 'ನೀರು ಬೆಂಕಿಯನ್ನು ಆರಿಸುವದಕ್ಕೆ ಸಾಕು, ಕತ್ತಲೆಯನ್ನು (ನೀಗುವದಕ್ಕೆ) ಸೂರ್ಯೋದಯವು ಸಾಕು; (ಅದರಂತೆ) ಕಲಿಯುಗದಲ್ಲಿ ಪಾಪಸಮೂಹವನ್ನು ನಾಶಗೊಳಿಸುವದಕ್ಕೂ ಹರಿಯ (ನಾಮ) ಕೀರ್ತನೆಯೊಂದೇ (ಸಾಕು) (?). 'ಹರಿಯ ನಾಮವೇ, ನಾಮವೇ, ನಾಮವೇ ನನ್ನ ಜೀವನಸಾಧನವು; ಕಲಿಯುಗವಲ್ಲಿ ಬೇರೊಂದು ಗತಿಯು ಇಲ್ಲವೇ ಇಲ್ಲ, ಇಲ್ಲವೇ ಇಲ್ಲ, ಇಲ್ಲವೇ ಇಲ್ಲ', 'ಸರ್ವವ್ಯಾಪಕನಾದ ವಾಸುದೇವನನ್ನು ಸ್ತುತಿಸಿದರೆ ನರನು ಪಾಪರಹಿತನಾಗುವನು, ನಿತ್ಯವೂ ವಿಷ್ಣುವನ್ನು ಸರಿಯಾಗಿ ಪೂಜಿಸುವದರಿಂದ ಎಲ್ಲಾ ಪಾಪವೂ ಸಂಪೂರ್ಣವಾಗಿ ನಾಶವಾಗುವದು' (?) 'ಯಾರ ಹೃದಯವಲ್ಲಿ ಮಂಗಲಗಳಿಗೆ ಮನೆಯಾದ ಹರಿಯಿರುವನೋ ಅವರಿಗೆ ಎಂದಿಗೂ ಯಾವ ಕಾರ್ಯಗಳಲ್ಲಿಯೂ ಅಮಂಗಲವಾಗುವದಿಲ್ಲ', 'ಯಾವಾಗಲೂ ಹೀಗೆ ಯೋಗಯುಕ್ತನಾಗಿ ಜನಾರ್ದನನನ್ನು ಸರಿಯಾಗಿ

1. ಅವಿದ್ಯೆಯಿಂದಾಗಿರುವ ಕಾಮದ ಬಿಗಿತವು.

ಚಿಂತಿಸುತ್ತಿರಬೇಕು, ಅದೇ ಹೆಚ್ಚಿನ ರಕ್ಷೆ ಎಂದು ನನ್ನ ಮತವು, ಅಚ್ಯುತನನ್ನು ಆಶ್ರಯಿಸಿದ ನರನನ್ನು ಯಾವನು ತಾನೆ ಹಿಂಸಿಸಿಯಾನು'(?) 'ಸಾವಿರಾರು ಗಂಗಾಸ್ನಾನಗಳಿಂದಲೂ, ಕೋಟಿಗಟ್ಟಲೆ ಮಾಡಿದ ಪುಷ್ಕರತೀರ್ಥಸ್ನಾನಗಳಿಂದಲೂ ಎಷ್ಟು ಪಾಪವು ನಾಶವಾಗುತ್ತದೆಯೋ, ಅಷ್ಟೂ ಹರಿಯನ್ನು ಸ್ಮರಿಸುವದರಿಂದ ಹೋಗುವದು', 'ನಿರ್ದುಷ್ಟನಾದ ನಾರಾಯಣನನ್ನು ಯಾವನು ಒಂದು ಮುಹೂರ್ತವಾದರೂ ಧ್ಯಾನಮಾಡುತ್ತಾನೋ, ಅವನಿಗೂ ಸಿದ್ಧಿಯು ದೊರಕುತ್ತದೆ; ಇನ್ನು ಆತನಲ್ಲಿಯೇ ತತ್ಪರನಾಗಿರುವವನಿಗೆ ದೊರಕುವದೆಂಬುದನ್ನು ಹೇಳುವದೇನಿದೆ' (?) 'ತಪಸ್ಸು, ಕರ್ಮಗಳು - ಈ ರೂಪವಾದ ಪ್ರಾಯಶ್ಚಿತ್ತಗಳು ಯಾವಯಾವವು ಇರುವವೋ, ಅವುಗಳೆಲ್ಲಕ್ಕಿಂತಲೂ ಕೃಷ್ಣನನ್ನು ಸ್ಮರಿಸುತ್ತಿರುವದು ಹೆಚ್ಚಿನದು', 'ಜನರಿಗೆ ನರಕದ ಯಾತನೆಗಳನ್ನು ಕೊಡುವ ಕಲ್ಮಷವು ಅತ್ಯುಗ್ರವಾಗಿದ್ದರೂ, ಆತನನ್ನು ಒಂದು ಬಾರಿ ಸಂಸ್ಮರಣೆಮಾಡಿದರೆ ಕೂಡಲೆ ಅದು ಹೋಗಿಬಿಡುವದು', 'ಗೋವಿಂದನನ್ನು ಒಮ್ಮೆ ಸ್ಮರಣೆಮಾಡಿದರೆ ಸಾಕು. ಜನರು ನೂರಾರು ಜನ್ಮಗಳಲ್ಲಿ ಮಾಡಿರುವ ಪಾಪರಾಶಿಯನ್ನು - ಅರಳೆಯ ರಾಶಿಯನ್ನು ಬೆಂಕಿಯು (ಸುಟ್ಟುಹಾಕುವಂತೆ) (ಆ ದೇವನು) ಸುಟ್ಟುಹಾಕುವನು'.

'ಹೇಗೆ ಮೇಲಕ್ಕೆದ್ದ ಜ್ವಾಲೆಯಿಂದ ಅಗ್ನಿಯು, ಗಾಳಿಯೊಡನೆ (ಸೇರಿದರೆ) ಬಣವೆಯನ್ನು ಸುಟ್ಟುಹಾಕುವದೋ, ಹಾಗೆಯೇ ಯೋಗಿಗಳ ಚಿತ್ತದಲ್ಲಿರುವ ವಿಷ್ಣುವು ಸಕಲದೋಷಗಳನ್ನೂ ನಾಶಗೊಳಿಸುವನು' ಧ್ಯಾನವಿಲ್ಲದೆ ಒಂದು ಮುಹೂರ್ತವು ಕಳೆದುಹೋದರೂ ದರೋಡೆಯನ್ನು ಮಾಡುವ ಜನರಿಂದ ಲೂಟಿಮಾಡಲ್ಪಟ್ಟ ಮನುಷ್ಯನಂತೆ ಗೋಳೊ! - ಎಂದು ಗಟ್ಟಿಯಾಗಿ ಅಳುವದು ಯುಕ್ತ (?); 'ಎಲೈ ಮಹಾಮುನಿಯೆ, ಪ್ರಾಣಿಗಳಿಗೆಲ್ಲ ಒಡೆಯನಾದ, ಜಗದ್ಗುರುವೂ ಆಗಿರುವ ಜನಾರ್ದನನನ್ನು ಸಂತತವಾಗಿ ಸ್ಮರಿಸುವ ಮನುಷ್ಯನು ಸರ್ವದುಃಖಗಳನ್ನೂ ತೊಲಗಿಸಿಕೊಳ್ಳುವನು; ಯಾವ ಕಾರ್ಯಗಳನ್ನು ಮಾಡಬೇಕೆಂದು ಇಚ್ಛಿಸುತ್ತಾನೋ, ಆ ಕಾರ್ಯಗಳನ್ನೆಲ್ಲ (ಅವನು) ಸಾಧಿಸಬಲ್ಲವನಾಗುತ್ತಾನೆ' (?) 'ಹೀಗೆ ಏಕಾಗ್ರಚಿತ್ತನಾಗಿ ಮಧುಸೂದನನನ್ನು ಸ್ಮರಿಸುತ್ತಿರುವಾತನು ಹುಟ್ಟು, ಸಾವು, ಮುಪ್ಪು - ಎಂಬ ಮೊಸಳೆಗಳುಳ್ಳ ಸಂಸಾರಸಾಗರವನ್ನು ದಾಟುವನು' (?), 'ದೋಷವು ಬಹುವಾಗಿರುವ ಈ ಕಲಿಯುಗದಲ್ಲಿಯೂ ವಿಷಯಗಳಲ್ಲಿ ಆಸಕ್ತನಾಗಿರುವ ಮನಸ್ಸುಳ್ಳ ಮನುಷ್ಯನು ಸಕಲಪಾಪವನ್ನು ಮಾಡುತ್ತಿದ್ದರೂ ಗೋವಿಂದನನ್ನು ಸ್ಮರಣೆಮಾಡಿದರೆ ಶುಚಿಯಾಗುವನು'(?), 'ಮೈತ್ರೇಯನೆ, ಜಪ, ಹೋಮ, ಅರ್ಚನ - ಮುಂತಾದವುಗಳನ್ನು ಮಾಡುತ್ತಿರುವಲ್ಲಿ, ವಾಸುದೇವನಲ್ಲಿಯೇ ಯಾವನ ಮನಸ್ಸು ಇರುವದೋ, ಅವನಿಗೆ ದೇವೇಂದ್ರನ ಸ್ಥಾನವನ್ನು ಪಡೆಯುವದೇ ಮುಂತಾದ ಫಲವೂ ವಿಘ್ನವಾಗಿರುವದು', 'ಮೂರುಲೋಕಕ್ಕೂ ಒಡೆಯನಾಗಿರುವ, ನಿರುಪಮ

ಪ್ರಭಾವವುಳ್ಳ, ಪ್ರಭುವಾದ ಈಶ್ವರನನ್ನು ಒಂದಿಷ್ಟು ತಲೆಬಾಗಿ ನಮಸ್ಕರಿಸಿದರೂ, ಸಾವಿರಾರುಕಲ್ಪಗಳಲ್ಲಿ ಜನ್ಮಾಂತರಗಳಲ್ಲಿ ಮನುಷ್ಯನು ಮಾಡಿರಬಹುದಾದ ಪಾಪವೂ ಕೂಡಲೆ ನಾಶವಾಗಿಬಿಡುವದು' (?), 'ಕೃಷ್ಣನಿಗೆ ಒಂದೇ ಸಲ ಮಾಡಿದ ನಮಸ್ಕಾರವೂ ಕೂಡ ಹತ್ತು ಅಶ್ವಮೇಧಯಾಗಗಳನ್ನು ಮಾಡಿದ ಫಲಕ್ಕೆ ಸಮಾನವಾಗಿರುತ್ತದೆ. ಹತ್ತು ಅಶ್ವಮೇಧಗಳನ್ನು ಮಾಡುವವನು ಮತ್ತೊಂದು ಜನ್ಮವನ್ನು ಪಡೆಯಬಹುದು, ಆದರೆ ಕೃಷ್ಣನಿಗೆ ನಮಸ್ಕಾರಮಾಡಿದವನಿಗೆ ಪುನರ್ಜನ್ಮವಿರುವದಿಲ್ಲ', 'ಅಗಸೆ ಹೂವಿನ ಬಣ್ಣವುಳ್ಳ, ಪೀತಾಂಬರಧಾರಿಯೂ ಆದ ಅಚ್ಯುತನಾದ ಗೋವಿಂದನನ್ನು ಯಾರು ನಮಸ್ಕರಿಸುವರೋ ಅವರಿಗೆ (ಯಾವ) ಅಂಜಿಕೆಯೂ ಇರದು', 'ಚಕ್ರಪಾಣಿಯಾದ ಶ್ರೀಕೃಷ್ಣನಿಗೆ ವಂಚನೆಯ ಬುದ್ಧಿಯಿಂದ ಮಾಡುವ ನಮಸ್ಕಾರವೂ ಕೂಡ ಸಂಸಾರದ ಸ್ಥೂಲಬಂಧನಗಳಿಗೆ ಉದ್ವೇಗವನ್ನುಂಟುಮಾಡುವದು'(?) - ಇವೇ ಮುಂತಾದ ಶ್ರುತಿಸ್ಮೃತೀತಿಹಾಸಪುರಾಣವಚನಗಳು[1] ಇದಕ್ಕೆ ಪ್ರಮಾಣವು.

## (ಭಾಷ್ಯ)

'ಮಙ್ಗಲಾನಾಂ ಚ ಮಙ್ಗಲಮ್' - ಮಙ್ಗಲಂ ಸುಖಂ ತತ್ಸಾಧನಂ ತಜ್ಜ್ಞಾಪಕಂ ಚ। ತೇಷಾಮಪಿ ಪರಮಾನನ್ದಲಕ್ಷಣಮ್ ಪರಂ ಮಙ್ಗಲಮ್ ಇತಿ ಮಙ್ಗಲಾನಾಂ ಚ ಮಙ್ಗಲಮ್॥

ದೈವತಂ ದೇವತಾನಾಂ ಚ-ದೇವಾನಾಮಪಿ ದೇವಃ, ದ್ಯೋತನಾದಿಭಿಃ ಸಮುತ್ಕರ್ಷೇಣ ವರ್ತಮಾನತ್ವಾತ್॥

ಭೂತಾನಾಂ ಯೋಽವ್ಯಯಃ (ಪಿತಾ)[2] ವ್ಯಯರಹಿತಃ ಪಿತಾ - ಜನಕಃ ಸ ಏಕಂ ದೈವತಂ ಲೋಕೇ ಇತಿ ವಾಕ್ಯಾರ್ಥಃ॥

'ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ। ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ॥' (ಶ್ವೇ.೬-೧೧)

ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ। ತಗ್ಂ ಹ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ॥ (ಶ್ವೇ.೬-೧೮)

ಇತಿ ಶ್ವೇತಾಶ್ವತರಾಣಾಂ ಮನ್ತ್ರೋಪನಿಷದಿ॥

'ಸೇಯಂ ದೇವತೈಕ್ಷತ' (ಛಾಂ. ೬-೩-೨) 'ಏಕಮೇವಾದ್ವಿತೀಯಮ್' *(ಛಾಂ.೬-೨-೧) ಇತಿ ಛಾನ್ದೋಗ್ಯೇ॥*

1. ಶ್ರುತಿವಚನಗಳು ಇಲ್ಲಿ ಬಹಳ ಕಡಿಮೆ ಇದೆ.
2. ಈ ಶಬ್ದವು ಇಲ್ಲಿದ್ದರೆ ಚೆನ್ನಾಗಿರುತ್ತದೆಯಂತ ತೋರುತ್ತದೆ.

## (ಭಾಷ್ಯಾರ್ಥ)

ಮಂಗಲಗಳಿಗೆಲ್ಲ ಮಂಗಲನು :- ಮಂಗಲವೆಂದರೆ ಸುಖ, ಅದಕ್ಕೆ ಸಾಧನವು. ಅದನ್ನು ತಿಳಿಯಿಸಿಕೊಡತಕ್ಕದ್ದು, ಅಂಥ (ಮಂಗಲ)ಗಳಿಗೆಲ್ಲ ಪರಮಾನಂದರೂಪವಾದ ಪರಮಮಂಗಲನಾತನು, (ಎಂಬರ್ಥದಲ್ಲಿ) 'ಮಂಗಲಾನಾಂ ಚ ಮಂಗಲಮ್' (ಎಂದಿದೆ). ದೇವತೆಗಳಿಗೆಲ್ಲ ದೈವತವು - ದೇವರುಗಳಿಗೂ ದೇವನಾದವನು; ಏಕೆಂದರೆ ಬೆಳಗುವದೇ ಮುಂತಾದ (ಗುಣಗಳಿಂದ ಎಲ್ಲರಿಗಿಂತಲೂ) ಹೆಚ್ಚುಗಾರಿಕೆಯಿಂದ ಇರುತ್ತಾನೆ. ಭೂತಗಳಿಗೆಲ್ಲ ಯಾವಾತನು ಅವ್ಯಯನಾದ ಪಿತನೋ - ನಾಶವಿಲ್ಲದ ಪಿತನೋ ಎಂದರೆ ತಂದೆಯೋ[1] ಆತನೊಬ್ಬನೇ ಲೋಕಕ್ಕೆಲ್ಲ ದೈವತವು ಎಂದು ಒಟ್ಟರ್ಥ. 'ಸರ್ವಭೂತಗಳಲ್ಲಿಯೂ ಒಬ್ಬನೇ ದೇವನು ಹುದುಗಿಕೊಂಡಿರುತ್ತಾನೆ. (ಆತನು) ಸರ್ವವ್ಯಾಪಿಯೂ ಎಲ್ಲಾ ಪ್ರಾಣಿಗಳಿಗೂ ಒಳಗಿನ ಆತ್ಮನೂ, ಕರ್ಮಗಳಿಗೆ ಫಲದಾತೃವೂ, ಎಲ್ಲಾ ಪ್ರಾಣಿಗಳೊಳಗೆ ವಾಸಮಾಡಿಕೊಂಡಿರುವಾತನೂ, ಸಾಕ್ಷಿಯೂ ಚೈತನ್ಯರೂಪನೂ ತಾನೊಬ್ಬನೇ ಇರುವಾತನೂ ನಿರ್ಗುಣನೂ (ಆಗಿರುತ್ತಾನೆ)', 'ಯಾವಾತನು (ಹಿರಣ್ಯಗರ್ಭನಾದ) ಬ್ರಹ್ಮನನ್ನು ಮೊದಲು ಸೃಷ್ಟಿಸುವನೋ, ಯಾವಾತನು ಅವನಿಗೆ ವೇದಗಳನ್ನು ಕಳುಹಿಸಿಕೊಡುವನೋ, ಆ ಆತ್ಮಬುದ್ಧಿಯನ್ನು ಬೆಳಗುವ ದೇವನನ್ನು ಮುಮುಕ್ಷುವಾಗಿ ನಾನು ಶರಣುಬಂದಿರುತ್ತೇನೆ' ಎಂದು ಶ್ವೇತಾಶ್ವತರದ ಮಂತ್ರೋಪನಿಷತ್ತಿನಲ್ಲಿ (ರುವದೂ), 'ಆ ಈ ದೇವತೆಯು ನೋಡಿತು', 'ತನಗೆರಡನೆಯದಿಲ್ಲದ ಒಂದೇ......' ಎಂದು ಛಾಂದೋಗ್ಯ (ದಲ್ಲಿರುವದೂ ಇದಕ್ಕೆ ಪ್ರಮಾಣವು).

## (ಭಾಷ್ಯ)

ನನು ಕಥಮೇಕೋ ದೇವಃ, ಜೀವಪರಯೋರ್ಭೇದಾತ್। ನ, 'ತತ್ಸೃಷ್ಟ್ವಾ । ತದೇವಾನುಪ್ರಾವಿಶತ್' (ತೈ. ೨-೬), 'ಸ ಏಷ ಇಹ ಪ್ರವಿಷ್ಟಃ' (ಬೃ.೧-೪-೭) ಇತ್ಯಾದಿಶ್ರುತಿಭ್ಯೋಽವಿಕೃತಸ್ಯ ಪರಸ್ಯ ಬುದ್ಧಿತದ್ವೃತ್ತಿಸಾಕ್ಷಿತ್ವೇನ ಪ್ರವೇಶಶ್ರವಣಾದಭೇದಃ।

## (ಭಾಷ್ಯಾರ್ಥ)

(ಆಕ್ಷೇಪ) :- ದೇವನು ಒಬ್ಬನೇ - ಎಂಬುದು ಹೇಗೆ? ಜೀವ, ಪರಮಾತ್ಮ (-ಇವರಿಬ್ಬ)ರಿಗೂ ಭೇದವಿದೆಯಲ್ಲ![2]

(ಪರಿಹಾರ) :- ಹಾಗಲ್ಲ, 'ಅದನ್ನು ಸೃಷ್ಟಿಸಿ, ಅದನ್ನೇ ಹಿಂದಿನಿಂದ ಪ್ರವೇಶಿಸಿದನು', 'ಆ ಈತನು ಇಲ್ಲಿ ಹೊಕ್ಕನು' ಮುಂತಾದ ಶ್ರುತಿಗಳ (ಪ್ರಮಾಣ)ದಿಂದ ಯಾವ

---

1. ಮಿಕ್ಕ ತಂದೆಗಳು ನಾಶವಾದರೂ ನಾಶವಾಗದವನು.
2. ಈ ಚರ್ಚೆಯು ಇಲ್ಲಿ ಎಷ್ಟರಮಟ್ಟಿಗೆ ಸಂಗತವೆಂಬುದಕ್ಕೆ ಪೀಠಿಕೆಯನ್ನು ನೋಡಿರಿ.

ವಿಕಾರವೂ ಇಲ್ಲದ ಪರಮಾತ್ಮನು ಬುದ್ಧಿಗೂ, ಬುದ್ಧಿವೃತ್ತಿಗೂ ಸಾಕ್ಷಿಯಾಗಿ (?) ಒಳಹೊಕ್ಕಿರುವನೆಂದು ಹೇಳಿರುವದರಿಂದ (ಅವರಿಬ್ಬರಿಗೂ) ಭೇದವಿಲ್ಲ.

## (ಭಾಷ್ಯ)

ಪ್ರವಿಷ್ಟಾನಾಮಿತರೇತರಭೇದಾತ್ ಪರಾತ್ಮೈಕತ್ವಂ ಕಥಮಿತಿ ಚೇತ್, ನ। 'ಏಕೋ ದೇವೋ ಬಹುಧಾ ಸಂನಿವಿಷ್ಟಃ' (ತೈ.ಆ.೩-೧೪), 'ಏಕಸ್ಸನ್ ಬಹುಧಾ ವಿಚಾರಃ । (ತೈ. ಆ.೩-೧೧) ತ್ವಮೇಕೋಽಸಿ ಬಹೂನನು ಪ್ರವಿಷ್ಟಃ'' (ತೈ. ಆ. ೩-೧೪) ಇತ್ಯೇಕಸ್ಯೈವ ಬಹುಧಾ ಪ್ರವೇಶಶ್ರವಣಾತ್ ಪ್ರವಿಷ್ಟಾನಾಂ ಪರಸ್ಯ ಚ ನ ಭೇದಃ। 'ಹಿರಣ್ಯಗರ್ಭಃ' (ಋ.೧೦-೧೦-೧೨೧-೧) ಇತ್ಯಷ್ಟೌ ಮನ್ತ್ರಾಃ 'ಕಸ್ಮೈ ದೇವಾಯ' (ತೈ.ಸಂ ೪-೧-೮) ಇತ್ಯತ್ರ ಏಕಾರಲೋಪೇನ ಏಕದೈವತಪ್ರತಿಪಾದಕಾಸ್ತೈತ್ತಿರೀಯಕೇ। 'ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ। ಏಕಸ್ತಥಾ ಸರ್ವಭೂತಾನ್ತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ॥' 'ವಾಯುರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ। ಏಕಸ್ತಥಾ ಸರ್ವಭೂತಾನ್ತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ॥' 'ಸೂರ್ಯೋ ಯಥಾ ಸರ್ವಲೋಕಸ್ಯ ಚಕ್ಷುಃ ನ ಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ । ಏಕಸ್ತಥಾ ಸರ್ವಭೂತಾನ್ತರಾತ್ಮಾ ನ ಲಿಪ್ಯತೇ ಲೋಕದುಃಖೇನ ಬಾಹ್ಯಃ॥' ' ಏಕೋ ವಶೀ ಸರ್ವಭೂತಾನ್ತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ। ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್॥', 'ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್। ತಮಾತ್ಮಸ್ಥಂ ಯೇಽನುಪಶ್ಯನ್ತಿ ಧೀರಾಸ್ತೇಷಾಂ ಶಾನ್ತಿಃ ಶಾಶ್ವತೀ ನೇತರೇಷಾಮ್' (ಕಾ.೨-೨-೯ ಪ್ರಭೃತಿ ೧೩ ಪರ್ಯನ್ತಮ್) ಇತಿ ಕಾಠಕೇ। 'ಬ್ರಹ್ಮ ವಾ ಇದಮಗ್ರ ಆಸೀದೇಕಮೇವ ತದೇಕಂ ಸನ್ನ ವ್ಯಭವತ್' (ಬೃ. ೧-೪-೧೧) 'ನಾನ್ಯೋಽತೋಽಸ್ತಿ ದ್ರಷ್ಟಾ' (ಬೃ. ೩-೭-೨೩) ಇತ್ಯಾದಿ ಬೃಹದಾರಣ್ಯಕೇ। 'ಅನೇಜದೇಕಂ ಮನಸೋ ಜವೀಯೋ ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್' (ಈ. ೪), 'ಯಸ್ಮಿನ್ ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ। ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ' (ಈ.೭) ಇತಿ ಈಶಾವಾಸ್ಯೇ। 'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್ ನಾನ್ಯತ್ ಕಿಞ್ಚನ ಮಿಷತ್' (ಐ.೧-೧-೧), 'ಸರ್ವೇಷಾಂ ಭೂತಾನಾಮನ್ತರಃ ಪುರುಷಃ ಸ ಮ ಆತ್ಮೇತಿ ವಿದ್ಯಾತ್' (ಐ.ಆ.೩-೨-೪-೧೦) 'ಏಕಂ ಸದ್ ವಿಪ್ರಾ ಬಹುಧಾ ವದನ್ತಿ' (ಋ.೧-೨೨-೧೬೪-೪೬) 'ಏಕಂ ಸನ್ತಂ ಬಹುಧಾ ಕಲ್ಪಯನ್ತಿ' (ಋ.೧೦-೧೦-೧೧೪-೫),'ದ್ಯಾವಾಪೃಥಿವೀ ಜನಯನ್ ದೇವ ಏಕಃ (ತೈ.ನಾ.೧) 'ಏಕೋ ದಾಧಾರ ಭುವನಾನಿ ವಿಶ್ವಾ'

(ಋ.೧-೨೧-೧೫೪-೪), 'ಏಕ ಏವಾಗ್ನಿರ್ಬಹುಧಾ ಸಮಿದ್ಧಃ' (ಋ.೬-೪-೧೬) ಇತಿ ಋಗ್ವೇದೇ। 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' (ಛಾಂ.೬-೨-೧) ಇತಿ ಛಾನ್ದೋಗ್ಯೇ॥

## (ಭಾಷ್ಯಾರ್ಥ)

(ಆಕ್ಷೇಪ):- (ಸೃಷ್ಟಿಯಲ್ಲಿ) ಒಳಹೊಕ್ಕ ಜೀವರುಗಳು ಒಬ್ಬರಿಗಿಂತ ಒಬ್ಬರು ಬೇರೆಯಾಗಿರುವದರಿಂದ ಪರಮಾತ್ಮನು ಒಬ್ಬನೇ ಎಂಬುದು ಹೇಗೆ?

(ಪರಿಹಾರ) :- ಹಾಗಲ್ಲ. 'ಒಬ್ಬ ದೇವನೇ ಅನೇಕಪ್ರಕಾರಗಳಿಂದ ಹೊಕ್ಕಿರುತ್ತಾನೆ', 'ಒಬ್ಬನೇ ಆಗಿದ್ದು, ಬಹುಪ್ರಕಾರವಾಗಿ ಚರಿಸುತ್ತಿದ್ದಾನೆ', 'ನೀನು ಒಬ್ಬನೇ ಆದರೂ ಅನೇಕರಲ್ಲಿ ಅನುಪ್ರವೇಶಮಾಡಿರುವೆ' - ಎಂದು ಒಬ್ಬನೇ ಬಹುಪ್ರಕಾರವಾಗಿ ಒಳಹೊಕ್ಕಿರುತ್ತಾನೆಂದು ಶ್ರುತಿಯಲ್ಲಿರುವದರಿಂದ ಒಳಹೊಕ್ಕಿರುವವರಿಗೂ ಪರ(ಮಾತ್ಮ)ನಿಗೂ (ಪರಸ್ಪರ) ಭೇದವಿರುವದಿಲ್ಲ.

'ಹಿರಣ್ಯಗರ್ಭ' ಮುಂತಾದ ಎಂಟು ಮಂತ್ರಗಳು (ಇವೆ, ಅಲ್ಲಿ) 'ಕಸ್ಮೈ ದೇವಾಯ' ಎಂಬಲ್ಲಿ ಏಕಾರವು ಲೋಪ[1] ವಾಗಿರುವದರಿಂದ (ಅಲ್ಲಿ ಈ ಮಂತ್ರಗಳು) ತೈತ್ತಿರೀಯಕದಲ್ಲಿ ಏಕದೇವನನ್ನೇ ಪ್ರತಿಪಾದಿಸುತ್ತವೆ.

"ಹೇಗೆ ಬೆಂಕಿಯು ಒಂದೇ ಆಗಿದ್ದರೂ ಈ ಲೋಕವನ್ನು ಹೊಕ್ಕು ಒಂದೊಂದು ರೂಪಕ್ಕೂ ಪ್ರತಿರೂಪವಾಗುತ್ತದೆಯೋ[2] (ಅವುಗಳಿಗಿಂತ) ಹೊರಕ್ಕೂ ಇರುತ್ತದೆಯೋ, ಹಾಗೆಯೇ ಸರ್ವಪ್ರಾಣಿಗಳ ಒಳಗೂ ಇರುವ ಆತ್ಮನು, ಒಂದೊಂದು ರೂಪಕ್ಕೂ ಪ್ರತಿರೂಪನಾಗಿಯೂ (ಅವುಗಳ) ಹೊರಗೂ ಇರುತ್ತಾನೆ; ವಾಯುವು ಹೇಗೆ ಒಂದೇ ಆಗಿದ್ದರೂ ಈ ಲೋಕವನ್ನು ಹೊಕ್ಕು ಒಂದೊಂದು ಪ್ರತಿರೂಪವಾಗಿ (ಆ ಪದಾರ್ಥಗಳಿಗಿಂತ) ಹೊರಗೂ ಇರುತ್ತದೆಯೋ, ಹಾಗೆಯೇ ಸರ್ವಪ್ರಾಣಿಗಳಿಗೂ ಒಳಗಿರುವ ಆತ್ಮನು ಒಂದೊಂದು ರೂಪಕ್ಕೂ ಪ್ರತಿರೂಪನಾಗಿಯೂ ಹೊರಗೂ (ಇರುತ್ತಾನೆ). ಎಲ್ಲಾ ಲೋಕಕ್ಕೂ ಚಕ್ಷುರಿಂದ್ರಿಯವಾಗಿರುವ ಸೂರ್ಯನು ಹೇಗೆ ಚಕ್ಷುಸ್ಸಿಗೆ ಗೋಚರವಾಗುವ ಹೊರಗಿನ ಪದಾರ್ಥಗಳ ದೋಷದಿಂದ ಲಿಪ್ತನಾಗುವದಿಲ್ಲವೋ, ಹಾಗೆಯೇ ಸರ್ವಪ್ರಾಣಿಗಳಿಗೂ ಒಳಗಿರುವ ಆತ್ಮನು (ಎಲ್ಲಕ್ಕೂ) ಹೊರಬ್ಬಾಗಿರುವನಾದ್ದರಿಂದ ಜನರ ದುಃಖದಿಂದ ಲಿಪ್ತನಾಗದೆ ಇರುತ್ತಾನೆ; 'ಒಬ್ಬನೇ ಆಗಿ ಸ್ವತಂತ್ರನಾಗಿರುವ ಸರ್ವಭೂತಗಳೊಳಗಿನ ಆತ್ಮನಾಗಿ, ಒಂದೇ ರೂಪವನ್ನು

1. 'ಕಸ್ಮೈ ದೇವಾಯ' ಎಂಬುದು 'ಏಕಸ್ಮೈ ದೇವಾಯ' ಎಂಬರ್ಥದಲ್ಲಿ ಪ್ರಯೋಗವಾಗಿರುವುದರಿಂದ ಈ ಮಂತ್ರಗಳಲ್ಲಿ ಏಕದೇವತೆಯನ್ನೇ ಹೇಳಿದೆ.

2. ಬೆಂಕಿಗೆ ತನ್ನದೇ ಆದ ರೂಪವಿಲ್ಲದಿದ್ದರೂ ಕಟ್ಟಿಗೆ ಮುಂತಾದವುಗಳನ್ನು ಸುಡುವಾಗ, ಆಯಾ ಪದಾರ್ಥದ ರೂಪವನ್ನೇ ಹೊಂದುತ್ತದೆಯೋ, ಮತ್ತು ರೂಪರಹಿತವಾದ ತನ್ನ ಸ್ವರೂಪದಿಂದಲೂ ಹೇಗೆ ಇರುತ್ತದೆಯೋ ಹಾಗೆ ಎಂದರ್ಥ. ಮುಂದಿನ ಮಂತ್ರಗಳಿಗೂ ಹೀಗೆಯೇ ಅರ್ಥವನ್ನು ಮಾಡಿಕೊಳ್ಳಬೇಕು.

ಯಾವಾತನು ಬಹುಪ್ರಕಾರವಾಗಿ ಮಾಡಿಕೊಂಡಿರುವನೋ, ಆತನನ್ನು ತಮ್ಮೊಳಗೆ ಇರುವನೆಂದು ಯಾವ ವಿವೇಕಿಗಳು ಕಂಡುಕೊಂಡಿರುವರೋ, ಅವರಿಗೇ ಶಾಶ್ವತವಾದ ಸುಖವು, ಮಿಕ್ಕವರಿಗಿಲ್ಲ; 'ನಿತ್ಯರಾಗಿರುವವರಿಗೆ[1] ನಿತ್ಯನಾಗಿ, ಚೇತನರುಗಳಿಗೆಲ್ಲ ಚೇತನನಾಗಿ, ಒಬ್ಬನೇ ಅನೇಕರಿಗೆ ಯಾವಾತನು ಕಾಮಿತಫಲಗಳನ್ನು ಕೊಡುತ್ತಿರುವನೋ, ಆತನನ್ನು ತಮ್ಮೊಳಗೇ ಇರುವವನೆಂದು ಯಾವ ವಿವೇಕಿಗಳು ಕಂಡುಕೊಂಡಿರುವರೋ ಅವರಿಗೇ ಶಾಶ್ವತವಾದ ಶಾಂತಿ, ಮಿಕ್ಕವರಿಗಿಲ್ಲ' ಎಂದು **ಕಾಠಕದಲ್ಲಿದೆ.** 'ಇದು ಬ್ರಹ್ಮವೊಂದೇ'[2] ಆಗಿತ್ತು, ಅದು ಒಂದಾಗಿದ್ದದ್ದರಿಂದ ಸಾಕಾಗಿರಲಿಲ್ಲ' 'ಇವನಿಗಿಂತ ಬೇರೆಯಾದ ದ್ರಷ್ಟೃವಿಲ್ಲ' ಎಂದು ಮುಂತಾಗಿ **ಬೃಹದಾರಣ್ಯಕದಲ್ಲಿದೆ.** 'ಅಲುಗಾಡದೆ, ಒಂದೇ ಆಗಿ, ಮನಸ್ಸಿಗಿಂತಲೂ (ಹೆಚ್ಚು) ವೇಗವುಳ್ಳದ್ದಾಗಿದೆ. ಇದನ್ನು ದೇವತೆಗಳು (ಇಂದ್ರಿಯಗಳು) ಪಡೆಯಲಾರದೆ ಇವೆ; ಏಕೆಂದರೆ ಇದು ಮೊದಲೇ ಹೋಗಿರುತ್ತದೆ. 'ಯಾವದರಲ್ಲಿ ಅರಿತಾತನಿಗೆ ಎಲ್ಲಾ ಭೂತಗಳೂ ಆತ್ಮನೇ ಆಗಿರುತ್ತದೆಯೋ, ಅಲ್ಲಿ ಏಕತ್ವವನ್ನು ಕಂಡುಕೊಂಡವನಿಗೆ ಮೋಹವೆಂದರೆ ಯಾವದು, ಶೋಕವೆಂದರೆ ಯಾವದು?' - ಎಂದು **ಈಶಾವಾಸ್ಯದಲ್ಲಿ ಇದೆ.** 'ಇದು ಮೊದಲು ಆತ್ಮನೊಬ್ಬನೇ ಆಗಿತ್ತು, ಅವನಿಗಿಂತ ಬೇರೆಯಾದ ಚಲನೆಯುಳ್ಳದ್ದು ಮತ್ತೇನೂ ಇರಲೇ ಇಲ್ಲ' 'ಎಲ್ಲಾ ಪ್ರಾಣಿಗಳ ಒಳಗಿರುವವನು ಪುರುಷನು, ಆತನೇ ನನ್ನ ಆತ್ಮನು ಎಂದು ಅರಿತುಕೊಳ್ಳಬೇಕು' "ಇರುವದು ಒಂದು, (ಅದನ್ನು) ವಿಪ್ರರು ಬಹುಪ್ರಕಾರವಾಗಿ ಕರೆಯುತ್ತಾರೆ" "ಒಬ್ಬನೇ ಆಗಿರುವಾತನನ್ನು ಬಹುಪ್ರಕಾರವಾಗಿ ಕಲ್ಪಿಸಿರುತ್ತಾರೆ"[3] "ಭೂಮ್ಯಂತರಿಕ್ಷಗಳನ್ನು ಹುಟ್ಟಿಸುವ ದೇವನು ಒಬ್ಬನೇ" "ಒಬ್ಬನೇ ಎಲ್ಲಾ ಭುವನಗಳನ್ನು ಧರಿಸಿರುತ್ತಾನೆ" "ಬಹುಪ್ರಕಾರದಿಂದ ಹೊತ್ತಿಸಿದ ಅಗ್ನಿಯು ಒಬ್ಬನೇ" - ಎಂದು **ಋಗ್ವೇದದಲ್ಲಿದೆ.** "ಅಪ್ಪ, ಇದು ಮೊದಲು ತನಗೆಡರನೆಯದಿಲ್ಲದ ಸತ್ತೊಂದೇ ಆಗಿತ್ತು" ಎಂದು **ಛಾಂದೋಗ್ಯದಲ್ಲಿದೆ.**[4]

---

1. 'ಅನಿತ್ಯಾನಾಮ್' ಎಂದು ಬಿಡಿಸಿ ವಿನಾಶಿಗಳಾದವರಿಗೆ ಎಂಬರ್ಥವನ್ನು ಕಠಭಾಷ್ಯದಲ್ಲಿ ಕೊಟ್ಟಿದೆ; ಅನಿತ್ಯವಾದವುಗಳ ನಿಜವಾದ ಸ್ವರೂಪವೂ ನಿತ್ಯನಾದ ಆತ್ಮನದೇ-ಎಂದು ಅಲ್ಲಿ ಅರ್ಥ; ನಿತ್ಯವೆಂದು ವ್ಯವಹಾರದಲ್ಲಿ ಕರೆಯುವ ವಸ್ತುಗಳ ನಿತ್ಯತ್ವವನ್ನು ಕೊಡುವಾತನು ಎಂದು ಇಲ್ಲಿ ಅರ್ಥಮಾಡಬೇಕು.
2. ಈ ಶ್ರುತಿಯಲ್ಲಿ ಬ್ರಹ್ಮದ ನಿತ್ಯತ್ವವನ್ನು ಹೇಳಿಲ್ಲ, ಬ್ರಾಹ್ಮಣಜಾತಿಯೊಂದೇ ಕಾರ್ಯಕಾರಿಯಲ್ಲ ಎಂದು ಹೇಳಿದೆ. 'ಆದ್ದರಿಂದ ಇದು ಬ್ರಹ್ಮವೊಂದೇ ಆಗಿತ್ತು' (೧-೪-೨) ಎಂಬ ಶ್ರುತಿಯನ್ನು ಉದಾಹರಿಸಿದ್ದರೆ ಚೆನ್ನಾಗಿತ್ತೆನಿಸುತ್ತದೆ.
3. ಇಲ್ಲಿ 'ಏಕೋ ವಿಮಮೇ ತ್ರಿಭಿರಿತ್ಪದೇಭಿಃ' (ಋ.೧೫-೪-೩) ಒಬ್ಬ ವಿಷ್ಣುವೇ ಮೂರೇ ಹೆಜ್ಜೆಗಳಿಂದ ಮೂರು ಲೋಕಗಳನ್ನೂ ಅಳೆದನು ಎಂಬ ಋಗ್ವೇದವಾಕ್ಯವೊಂದು ವಾ॥ ಮೈ॥ ಪಾಠಗಳಲ್ಲಿ ಹೆಚ್ಚಾಗಿದೆ.
4. ಇಲ್ಲಿಯವರೆಗೆ ಪರಮಾತ್ಮನು ಒಬ್ಬನೇ ಆಗಿದ್ದರೂ ಅನೇಕ ಪ್ರಕಾರವಾಗಿ ಕಾಣುತ್ತಾನೆ ಎಂಬುದಕ್ಕೆ ಅನೇಕ ಶ್ರುತಿಗಳನ್ನು ಉದಾಹರಿಸಿದಂತೆ ಆಯಿತು. ಲೋಕದಲ್ಲಿ ಒಂದೇ ದೈವತವೆಂಬುದು ಹೇಗೆ? - ಎಂಬ ಪ್ರಶ್ನೆಗೆ ಅದ್ವಿತೀಯನಾಗಿರುವ ಪರಮಾತ್ಮನೊಬ್ಬನೇ ಪರಮಾರ್ಥ - ಎಂಬ ಉತ್ತರವನ್ನು ಭೀಷ್ಮರು ಕೊಟ್ಟಿರುತ್ತಾರೆಂದು ಕಲ್ಪಿಸಿದ್ದರಿಂದ ಈ ಚರ್ಚೆಯು ಎದ್ದುಕೊಂಡಿತೆಂಬುದು ಸ್ಪಷ್ಟ.

(ಭಾಷ್ಯ)

ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ।
ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ॥ (ಗೀ.೬-೩೧)
ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ।
ಶುನಿ ಚೈವ ಶ್ವಪಾಕೇ ಚ ಪಣ್ಡಿತಾಃ ಸಮದರ್ಶಿನಃ ॥ (ಗೀ.೫-೧೮)
ಅಹಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ।
ಅಹಮಾದಿಶ್ಚ ಮಧ್ಯಂ ಚ ಭೂತಾನಾಮನ್ತ ಏವ ಚ॥ (ಗೀ.೧೦-೨೦)
ಯದಾ ಭೂತಪೃಥಗ್ಭಾವಮೇಕಸ್ಥಮನುಪಶ್ಯತಿ।
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇ ತದಾ॥ (ಗೀ.೧೩-೩೦)
ಯಥಾ ಪ್ರಕಾಶಯತ್ಯೇಕಃ ಕೃತ್ಸ್ನಂ ಲೋಕಮಿಮಂ ರವಿಃ।
ಕ್ಷೇತ್ರಂ ಕ್ಷೇತ್ರೀ ತಥಾ ಕೃತ್ಸ್ನಂ ಪ್ರಕಾಶಯತಿ ಭಾರತ॥ (ಗೀ. ೧೩-೩೩)
ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ॥
ಇತಿ ಗೀತೋಪನಿಷತ್ಸು [1] ॥ (ಗೀ.೧೮-೬೬)

(ಭಾಷ್ಯಾರ್ಥ)

'ಸರ್ವಪ್ರಾಣಿಗಳಲ್ಲಿಯೂ ಇರುವ ನನ್ನನ್ನು ಯಾವನು ಏಕತ್ವವನ್ನು ಆಶ್ರಯಿಸಿ ಭಜಿಸುತ್ತಿರುವನೋ, ಆ ಯೋಗಿಯು ಯಾವ ಪ್ರಕಾರದಿಂದ ಇರುತ್ತಿದ್ದರೂ ನನ್ನಲ್ಲಿರುತ್ತಾನೆ' 'ವಿದ್ಯಾವಿನಯಗಳಿಂದೊಡಗೂಡಿರುವ ಬ್ರಾಹ್ಮಣನಲ್ಲಿಯೂ ಗೋವಿನಲ್ಲಿಯೂ ಆನೆಯಲ್ಲಿಯೂ ನಾಯಿಯಲ್ಲಿಯೂ ಚಂಡಾಲನಲ್ಲಿಯೂ ಪಂಡಿತರು ಒಬ್ಬನೇ ಪರಮಾತ್ಮನನ್ನು ಕಾಣುತ್ತಿರುವರು' 'ಎಲೈ ಅರ್ಜುನನೆ, ಸರ್ವಪ್ರಾಣಿಗಳ ಹೃದಯಲ್ಲಿರುವ ಆತ್ಮನು ನಾನು; ಪ್ರಾಣಿಗಳ ಆದಿ, ಮಧ್ಯ, ಅಂತ - ಇವೆಲ್ಲವೂ ನಾನೇ' 'ಯಾವಾಗ ಪ್ರಾಣಿಗಳ ಬೇರೆ ಬೇರೆಯಾಗಿರುವಿಕೆಯು ಒಂದೇ ತತ್ತ್ವದಲ್ಲಿದ್ದುಕೊಂಡಿದೆ - ಎಂದು (ಶಾಸ್ತ್ರಾಚಾರ್ಯರ ಯುಕ್ತಿಗಳಿಗೆ) ಅನುಸಾರವಾಗಿ ಕಂಡುಕೊಳ್ಳುತ್ತಲೂ, ಆ (ಒಂದು ತತ್ತ್ವದಿಂದಲೇ) ಹೊರಬಂದು ತೋರಿಕೊಂಡಿದೆಯೆಂಬುದನ್ನೂ (ಕಂಡುಕೊಳ್ಳುವನೋ) ಆಗ ಬ್ರಹ್ಮದಲ್ಲಿ ಬೆರೆತುಹೋಗುತ್ತಾನೆ' 'ಎಲೈ ಭರತಕುಲೋತ್ಪನ್ನನೆ, ಹೇಗೆ ಸೂರ್ಯನು ಈ ಇಡಿಯ ಲೋಕವನ್ನು ಬೆಳಗುತ್ತಿರುವನೋ, ಹಾಗೆಯೇ ಕ್ಷೇತ್ರಿ (ಯಾದ ಪರಮಾತ್ಮನೂ) ಈ ಇಡಿಯ ಕ್ಷೇತ್ರವನ್ನು ಬೆಳಗುತ್ತಿರುವನು' "ಸರ್ವಧರ್ಮಗಳನ್ನೂ ಬಿಟ್ಟು ಏಕನಾದ ನನ್ನನ್ನು ಶರಣುಹೊಂದು; ನಾನು ನಿನ್ನನ್ನು ಎಲ್ಲಾ ಪಾಪಗಳಿಂದಲೂ ಬಿಡುಗಡೆಮಾಡುವೆನು, ಶೋಕಿಸದಿರು" - ಎಂದು ಗೀತೋಪನಿಷತ್ತುಗಳಲ್ಲಿದೆ.

---

1. 'ಭಗವದ್ಗೀತಾಸೂಪನಿಷತ್ಸು' ಎಂಬ ಪ್ರತ್ಯಧ್ಯಾಯದ ಸಮಾಪ್ತಿವಾಕ್ಯದಲ್ಲಿರುವುದನ್ನನುಸರಿಸಿ 'ಗೀತೋಪನಿಷತ್ತುಗಳಲ್ಲಿ' ಎಂದಿದೆ. ಇದು ಗೀ॥ ಪಾಠ.

(ಭಾಷ್ಯ)

ಹರಿರೇಕಃ ಸದಾ ಧ್ಯೇಯೋ ಭವದ್ಭಿಃ ಸತ್ತ್ವಸಂಸ್ಥಿತೈಃ।
ಓಮಿತ್ಯೇವಂ ಸದಾ ವಿಪ್ರಾಃ ಪಠಧ್ವಂ ಧ್ಯಾತ ಕೇಶವಮ್॥ [1]
(ಹರಿ. ೩-೮೯-೯)

ಆಶ್ಚರ್ಯಂ ಖಲು ದೇವಾನಾಮೇಕಸ್ತ್ವಂ ಪುರುಷೋತ್ತಮ।
ಧನ್ಯಶ್ಚಾಸಿ ಮಹಾಬಾಹೋ ಲೋಕೇ ನಾನ್ಯೋಽಸ್ತಿ ಕಶ್ಚನ॥
- ಇತಿ ಹರಿವಂಶೇ॥ (ಹರಿ.ಅ.೨೮೦)

(ಭಾಷ್ಯಾರ್ಥ)

"ಎಲೈ ವಿಪ್ರರೆ, ನೀವು ಯಾವಾಗಲೂ ಸತ್ತ್ವಗುಣವನ್ನಾಶ್ರಯಿಸಿಕೊಂಡು ಹರಿಯೊಬ್ಬನನ್ನೇ ಧ್ಯಾನಿಸುತ್ತಿರಬೇಕು. (ಆ) ಕೇಶವನನ್ನು ಯಾವಾಗಲೂ ಓಮ್ ಎಂದು ಪಠಿಸುತ್ತಿರಿ, ಧ್ಯಾನಿಸುತ್ತಿರಿ", "ಪುರುಷೋತ್ತಮನೆ, ದೇವತೆಗಳಲ್ಲೆಲ್ಲ ನೀನೊಬ್ಬನೇ ಆಶ್ಚರ್ಯ (ತತ್ತ್ವವಾಗಿರುವೆ); ಮಹಾಬಾಹುವೆ, ಧನ್ಯನೂ ಆಗಿರುವೆ; ಮತ್ತೆ ಯಾವನೂ (ಇಂಥವನು) ಇರುವದಿಲ್ಲ".

(ಭಾಷ್ಯ)

ಭವತಿ (ಚ) ಮನೋರ್ಮಾಹಾತ್ಮ್ಯಖ್ಯಾಪಿನೀ ಶ್ರುತಿಃ :- 'ಯದ್ವೈ ಕಿಞ್ಚ ಮನುರವದತ್ ತದ್ಭೇಷಜಮ್' (ತೈ.ಸಂ.೨-೨-೧೦) ಇತಿ[2] । ಮನುನಾ ಚೋಕ್ತಮ್ - 'ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ। ಸಂಪಶ್ಯನ್ನಾತ್ಮಯಾಜೀ ವೈ ಸ್ವಾರಾಜ್ಯಮಧಿಗಚ್ಛತಿ॥' (ಮನು. ೧೨-೯೧) ಇತಿ॥

(ಭಾಷ್ಯಾರ್ಥ)

ಮನುವಿನ ಮಾಹಾತ್ಮ್ಯವನ್ನು ಪ್ರಸಿದ್ಧಿಗೊಳಿಸುವ ಶ್ರುತಿಯೂ ಇದೆ :- "ಮನುವು ಯಾವದೊಂದನ್ನೇ ಹೇಳಿರಲಿ, ಅದು ಔಷಧಿ ಎಂದು ತಿಳಿಯಬೇಕು" (ಆ) ಮನುವು ಹೇಳಿರುವದೇನೆಂದರೆ : "ಸರ್ವಭೂತಗಳಲ್ಲಿಯೂ ಆತ್ಮನನ್ನೂ, ಆತ್ಮನಲ್ಲಿ ಸರ್ವಭೂತಗಳನ್ನೂ ಕಂಡುಕೊಂಡ ಆತ್ಮಯಾಜಿಯು ಸ್ವಾರಾಜ್ಯವನ್ನು ಪಡೆದುಕೊಳ್ಳುತ್ತಾನೆ".

(ಭಾಷ್ಯ)

ಸೃಷ್ಟಿಸ್ಥಿತ್ಯನ್ತಕರಣೀಂ ಬ್ರಹ್ಮವಿಷ್ಣುಶಿವಾತ್ಮಿಕಾಮ್।
ಸ ಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ॥ (ವಿ.ಪು.೧-೨-೬೬)
ತಸ್ಮಾನ್ನ ವಿಜ್ಞಾನಮೃತೇಽಸ್ತಿ ಕಿಞ್ಚಿತ್
ಕ್ವಚಿತ್ ಕದಾಚಿತ್ ದ್ವಿಜ ವಸ್ತುಜಾತಮ್ ।

---
1. ಈ ವಾಕ್ಯವು ಒಂದೊಮ್ಮೆ ಉದಾಹೃತವಾಗಿದೆ (ಪು.೧೭)
2. ಇದು ಕೆಲವು ಮೂಲಕೋಶಗಳಲ್ಲಿಲ್ಲವೆಂದು ತಿಳಿಯಬಂದಿದೆ.

ವಿಜ್ಞಾನಮೇಕಂ ನಿಜಕರ್ಮಭೇದಾದ್[1]
ವಿಭಿನ್ನಚಿತ್ತೈರ್ಬಹುಧಾಽಭ್ಯುಪೇತಮ್॥ (ವಿ.ಪು.೨-೧೨-೪೩)
ಜ್ಞಾನಂ ವಿಶುದ್ಧಂ ವಿಮಲಂ ವಿಶೋಕ -
ಮಶೇಷಲೋಭಾದಿನಿರಸ್ತಸಙ್ಗಮ್।
ಏಕಃ ಸದೈಕಃ[2] ಪರಮಃ ಪರೇಶಃ
ಸ ವಾಸುದೇವೋ ನ ಯತೋಽನ್ಯದಸ್ತಿ ॥(ವಿ.ಪು. ೨-೧೨-೪೪)
ಯದಾ ಸಮಸ್ತದೇಹೇಷು ಪುಮಾನೇಕೋ ವ್ಯವಸ್ಥಿತಃ।
ತದಾ ಹಿ ಕೋ ಭವಾನ್ ಸೋಽಹಮಿತ್ಯೇತದ್ವಿಫಲಂ ವಚಃ॥
(ವಿ.ಪು. ೨-೧೩-೯೧)

ಸಿತನೀಲಾದಿಭೇದೇನ ಯಥೈಕಂ ದೃಶ್ಯತೇ ನಭಃ।
ಭ್ರಾನ್ತ[3]ದೃಷ್ಟಿಭಿರಾತ್ಮಾಪಿ ತಥೈಕಃ ಸನ್ ಪೃಥಕ್ ಪೃಥಕ್ ॥
(ವಿ.ಪು. ೨-೧೬-೨೨)

ಏಕಃ ಸಮಸ್ತಂ ಯದಿಹಾಸ್ತಿ ಕಿಞ್ಚಿತ್
ತದಚ್ಯುತೋ ನಾಸ್ತಿ ಪರಂ ತತೋಽನ್ಯತ್।
ಸೋಽಹಂ ಸ ಚ ತ್ವಂ ಸ ಚ ಸರ್ವಮೇತ -
ದಾತ್ಮಸ್ವರೂಪಂ ತ್ಯಜ ಭೇದಮೋಹಮ್॥ (ವಿ.ಪು. ೨-೧೬-೨೩)
ಇತೀರಿತಸ್ತೇನ ಸ ರಾಜವರ್ಯ -
ಸ್ತತ್ಯಾಜ ಭೇದಂ ಪರಮಾರ್ಥದೃಷ್ಟಿಃ ॥ (ವಿ.ಪು. ೨-೧೬-೨೪)

ಯಮೇನೋಕ್ತಮ್॥

ಸಕಲಮಿದಮಹಂ ಚ ವಾಸುದೇವಃ
ಪರಮಪುಮಾನ್ ಪರಮೇಶ್ವರಃ ಸ ಏಕಃ।
ಇತಿ ಮತಿರಚಲಾ ಭವತ್ಯನನ್ತೇ
ಹೃದಯಗತೇ ವ್ರಜ ತಾನ್ ವಿಹಾಯ ದೂರಾತ್॥
(ವಿ.ಪು. ೩-೭-೩೨)

ಯದಾಹ ವಸುಧಾ ಸರ್ವಂ ಸತ್ಯಮೇವ ದಿವೌಕಸಃ।
ಅಹಂ ಭವೋ ಭವನ್ತಶ್ಚ ಸರ್ವಂ ನಾರಾಯಣಾತ್ಮಕಮ್॥

ವಿಭೂತಯಸ್ತು ಯಾಸ್ತಸ್ಯ ತಾಸಾಮೇವ ಪರಸ್ಪರಮ್ ।
ಆಧಿಕ್ಯಂ ನ್ಯೂನತಾ ಬಾಧ್ಯಬಾಧಕತ್ವೇನ ವರ್ತತೇ॥ (ವಿ.ಪು.೫-೧-೨೯,೩೦)

1. ಅಚ್ಚಿನ ಪಾಠದಲ್ಲಿ 'ನಿಜಕರ್ಮಭೇದವಿಭಿನ್ನ.....' ಎಂದಿದೆ.
2. ಅಚ್ಚಿನ ಪಾಠದಲ್ಲಿ 'ಏಕಂ ಸದೈಕಂ' ಎಂದಿದೆ.
3. 'ಭ್ರಾನ್ತಿ' ಎಂದು ವಿಷ್ಣುಪುರಾಣದ ಅಚ್ಚಿನ ಪಾಠ.

## (ಭಾಷ್ಯಾರ್ಥ)

'ಆ ಜನಾರ್ದನಭಗವಂತನೊಬ್ಬನೇ (ಯಥಾಕ್ರಮವಾಗಿ) ಸೃಷ್ಟಿ, ಸ್ಥಿತಿ, ಪ್ರಲಯ - ಇವುಗಳನ್ನು ಮಾಡುವ ಬ್ರಹ್ಮ ವಿಷ್ಣು ಶಿವ - ಎಂಬ ರೂಪದ ಹೆಸರನ್ನು ಪಡೆಯುತ್ತಾನೆ' 'ಆದ್ದರಿಂದ ಎಲೈ ಬ್ರಾಹ್ಮಣನೆ, ವಿಜ್ಞಾನವನ್ನು ಬಿಟ್ಟರೆ ಮತ್ತೇನೂ ವಸ್ತುವೂ ಎಲ್ಲಿಯೂ ಇಂದಿಗೂ ಇರುವದಿಲ್ಲ, ವಿಜ್ಞಾನವೊಂದೇ ತನ್ನ ಕರ್ಮಗಳ ಭೇದದಿಂದ ಬಗೆಬಗೆಯಾಗಿರುವ ಚಿತ್ತವುಳ್ಳವರಿಗೆ, ಬಹುಪ್ರಕಾರವಾಗಿ ಕಾಣುತ್ತಿರುತ್ತದೆ' ಜ್ಞಾನವು ವಿಶುದ್ಧವಾಗಿ, ನಿರ್ಮಲವಾಗಿ, ಶೋಕರಹಿತವಾಗಿ, ಲೋಭವೇ ಮುಂತಾದ ಯಾವ ದೋಷಗಳ ಸಂಗವಿಲ್ಲದೆ ಇರುತ್ತದೆ. ಪರಮನಾದ ಪರಮೇಶ್ವರನು, ಒಬ್ಬನೇ, ಯಾವಾಗಲೂ ಒಬ್ಬನೇ; ಅವನೇ ವಾಸುದೇವನು; ಅವನಿಗಿಂತ ಬೇರೆ (ಯಾವದೂ) ಇರುವದಿಲ್ಲ' 'ಯಾವಾಗ ಎಲ್ಲಾ ದೇಹಗಳಲ್ಲಿಯೂ ಒಬ್ಬ ಪುರುಷನೇ ಇದ್ದುಕೊಂಡಿರುವನೆಂದು ನಿಶ್ಚಿತವಾಯಿತೋ, ಆಗ 'ನೀನು ಯಾರು?', 'ಅವನು ನಾನು' ಎಂಬ ಮಾತು ನಿಷ್ಫಲವಾಯಿತು, "ಹೇಗೆ ಒಂದೇ ಮೋಡವು ಬಿಳಿಯದು ಕರಿಯದು - ಎಂದು ಮುಂತಾಗಿ ಬೇರೆಬೇರೆಯಾಗಿ ಕಾಣುತ್ತಿರುವದೋ ಹಾಗೆಯೇ ಆತ್ಮನು ಒಬ್ಬನೇ ಆಗಿರುತ್ತಿದ್ದರೂ ಭ್ರಾಂತಿಯ ದೃಷ್ಟಿಯುಳ್ಳವನಿಗೆ ಬೇರೆಬೇರೆಯಾಗಿ (ಕಾಣುತ್ತಿರುವನು)" "ಇಲ್ಲಿ ಏನೇನಿದೆಯೋ, ಅದೆಲ್ಲವೂ ಒಬ್ಬನೇ, ಅದೇ ಅಚ್ಯುತನು; ಆತನಿಗಿಂತ ಬೇರೆಯಾಗಿ ಮತ್ತೇನೂ ಇರುವದಿಲ್ಲ, ನಾನು ಆತನೇ, ನೀನೂ ಆತನೇ, ಇದೆಲ್ಲವೂ ಆತನೇ, (ಎಲ್ಲವೂ) ಆತ್ಮಸ್ವರೂಪವೇ; ಭೇದಭ್ರಾಂತಿಯನ್ನು ಬಿಟ್ಟುಬಿಡು[1] ಎಂದು ಆತನು ಹೇಳಲಾಗಿ ಆ ರಾಜಶ್ರೇಷ್ಠನು ಪರಮಾರ್ಥವನ್ನು ಕಂಡುಕೊಂಡು ಭೇದವನ್ನು ಬಿಟ್ಟುಬಿಟ್ಟನು" "ಇದೆಲ್ಲವೂ ನಾನೂ ವಾಸುದೇವನೇ. ಪರಮಪುರಷನಾದ ಆ ಪರಮೇಶ್ವರನು ಆತನೊಬ್ಬನೇ ಎಂದಿಂತು ಅಚಲವಾದ ಬುದ್ಧಿಯು ಅನಂತನಲ್ಲಿಯೇ (ಯಾರ) ಹೃದಯದಲ್ಲಿರುವದೋ, ಅವರನ್ನು ದೂರದಿಂದಲೇ ಬಿಟ್ಟುಹೋಗು',[2] 'ದೇವತೆಗಳಿರ, ಭೂದೇವಿಯು ಹೇಳಿದಳಲ್ಲ, ಇದೆಲ್ಲವೂ ಸತ್ಯವೇ. ನಾನು, ಶಿವನು, ನೀವೂಗಳೂ - ಎಲ್ಲರೂ ನಾರಾಯಣ ಸ್ವರೂಪರೇ, ಆತನ ವಿಭೂತಿಗಳಿರುವವಲ್ಲ, ಅವುಗಳಿಗೇ ಅನ್ಯೋನ್ಯವಾಗಿ ಹೆಚ್ಚು, ಕಡಿಮೆ, ಬಾಧ್ಯಬಾಧಕಭಾವ (ಎಂಬ ತಾರತಮ್ಯವು) ಇರುತ್ತದೆ.[3]

## (ಭಾಷ್ಯ)

ಭವಾನಹಂ ಚ ವಿಶ್ವಾತ್ಮನ್ ಏಕ ಏವ ಹಿ ಕಾರಣಮ್।
ಜಗತೋಽಸ್ಯ ಜಗತ್ಯರ್ಥೇ ಭೇದೇನಾವಾಂ ವ್ಯವಸ್ಥಿತೌ ॥

(ವಿ.ಪು.೫-೯-೩೨)

---

1. 'ಯಥಾಹ' ಎಂದು ಅಚ್ಚಿನ ಪಾಠ.
2. 'ಸರ್ವೇ ನಾರಾಯಣಾತ್ಮಕಾಃ' - ಅಚ್ಚಿನಪಾಠ.
3. ಜಡಭರತನು ಸೌವೀರರಾಜನಿಗೆ ಹೇಳಿದ ಮಾತಿದು.

ತ್ವಯಾ ಯದಭಯಂ ದತ್ತಂ ತದ್ದತ್ತಮಖಿಲಂ ಮಯಾ।
ಮತ್ತೋ ವಿಭಿನ್ನಮಾತ್ಮಾನಂ ದ್ರಷ್ಟುಂ ನಾರ್ಹಸಿ ಶಙ್ಕರ ॥

ಯೋಽಹಂ ಸ ತ್ವಂ ಜಗಚ್ಚೇದಂ ಸದೇವಾಸುರಮಾನುಷಮ್।
ಮತ್ತೋ ನಾನ್ಯದಶೇಷಂ ಯತ್ತತ್ತ್ವಂ ಜ್ಞಾತುಮಿಹಾರ್ಹಸಿ॥

ಅವಿದ್ಯಾಮೋಹಿತಾತ್ಮಾನಃ ಪುರುಷಾ ಭಿನ್ನದರ್ಶಿನಃ।
ವದನ್ತಿ ಭೇದಂ ಪಶ್ಯನ್ತಿ ಚಾವಯೋರನ್ತರಂ ಹರ॥
ಇತಿ ಶ್ರೀವಿಷ್ಣುಪುರಾಣೇ॥ (ವಿ.ಪು.೫-೩೩-೪೭ ರಿಂದ ೪೯)

## (ಭಾಷ್ಯಾರ್ಥ)

ಎಲೈ ವಿಶ್ವಾತ್ಮನಾದ (ಬಲರಾಮನೆ), ನೀನೂ ನಾನೂ ಈ ಜಗತ್ತಿಗೆ (ಇರುವ) ಒಂದೇ ಕಾರಣವಲ್ಲವೆ? ಈ ಭೂಲೋಕದವರ ಸ್ಥಿತಿಯ ಪ್ರಯೋಜನಕ್ಕಾಗಿ ನಾವಿಬ್ಬರೂ ಬೇರೆ ಬೇರೆಯಾಗಿ ಇದ್ದುಕೊಂಡಿರುತ್ತೇವೆ','ಶಂಕರನೆ, ನೀನು ಅಭಯವನ್ನು ಕೊಟ್ಟಿದ್ದೆಂಬುದು[3] ನಾನು ಅಭಯವನ್ನು ಕೊಟ್ಟಂತೆಯೇ, ನನಗಿಂತ ನೀನು ಅಭಿನ್ನನೆಂದೇ ತಿಳಿದುಕೊಳ್ಳಬೇಕು. ಈ ನಾನು ಯಾವನೋ ಆತನೇ ನೀನು, ದೇವತೆಗಳಿಂದಲೂ ಅಸುರರಿಂದಲೂ ಮನುಷ್ಯರಿಂದಲೂ ಕೂಡಿರುವ ಈ ಜಗತ್ತು ಆತನೇ. (ಇನ್ನೂ, ಏನೇನು ಇದೆಯೋ ಅದೆಲ್ಲವೂ ಆತನಿಗಿಂತ ಬೇರೆಯಾಗಿಲ್ಲ, ಇಲ್ಲಿ ನೀನು ಹೀಗೆಂದು ತಿಳಿಯಬೇಕು. ಅವಿದ್ಯೆಯಿಂದ ಭ್ರಾಂತರಾಗಿರುವ ಜನರಿಗೆ (ಇಲ್ಲಿ) ಭೇದವು ಕಾಣುತ್ತಿರುವದು. ಎಲೈ ಹರನೆ, (ಅವರು) ನಮ್ಮಿಬ್ಬರಿಗೂ ಭೇದವಿದೆಯೆಂದು ಹೇಳುತ್ತಿರುವರು; ಮತ್ತು ನಮ್ಮಿಬ್ಬರಲ್ಲಿಯೂ ಭೇದವನ್ನು ಕಾಣುತ್ತಲೂ ಇರುವರು' ಹೀಗೆಂದು ಶ್ರೀವಿಷ್ಣುಪುರಾಣದಲ್ಲಿದೆ.

## (ಭಾಷ್ಯ)

ವಿಷ್ಣೋರನ್ಯಂ ತು ಪಶ್ಯನ್ತಿ ಯೇ ಮಾಂ ಬ್ರಹ್ಮಾಣಮೇವ ವಾ।
ಕುತರ್ಕಮತಯೋ ಮೂಢಾಃ ಪಚ್ಯನ್ತೇ ನರಕೇಷ್ವಧಃ॥

ಯೇ ಚ ಮೂಢಾ ದುರಾತ್ಮಾನೋ ಭಿನ್ನಂ ಪಶ್ಯನ್ತಿ ಮಾಂ ಹರೇಃ।
ಬ್ರಹ್ಮಾಣಂ ಚ ತತಸ್ತಸ್ಮಾದ್ ಬ್ರಹ್ಮಹತ್ಯಾಸಮಂ ತ್ವಘಮ್॥
- ಇತಿ ಭವಿಷ್ಯೋತ್ತರಪುರಾಣೇ ಮಹೇಶ್ವರವಚನಮ್॥

## (ಭಾಷ್ಯಾರ್ಥ)

1. ಇದು ಯಮನು ದೂತನಿಗೆ ಹೇಳಿದ ಮಾತು.
2. (ಅಚ್ಚಿನ ಪಾಠದ ಸಂಖ್ಯೆ ೫-೧-೨೯,೩೦). ಇದು ಬ್ರಹ್ಮನು ದೇವತೆಗಳಿಗೆ ಹೇಳಿದ್ದು.
3. 'ತದಖಿಲಂ' ಎಂಬ ಅಚ್ಚಿನ ಪಾಠಕ್ಕೆ 'ಎಂಬುದೆಲ್ಲವೂ' ಎಂದು ಅನುವಾದ.

'ಯಾವ ಕುತರ್ಕಬುದ್ಧಿಯ ಮೂಢರು ನನ್ನನ್ನು ಅಥವಾ ಬ್ರಹ್ಮನನ್ನು ವಿಷ್ಣುವಿಗಿಂತ ಬೇರೆಯೆಂದು ತಿಳಿಯುವರೋ, (ಅವರು) ಕೆಳಗಿರುವ ನರಕದಲ್ಲಿ ನರಳುವರು!' 'ಆದರೆ ಯಾವ ಮೂಢರು ದೋಷದಿಂದ ಕೂಡಿದ ಅಂತಃಕರಣವುಳ್ಳವರಾಗಿ ನನ್ನನ್ನೂ ಬ್ರಹ್ಮನನ್ನೂ ಹರಿಗಿಂತ ಬೇರೆಯೊಬ್ಬನೆಂದು ತಿಳಿಯುವರೋ ಅವರಿಗೆ ಬ್ರಹ್ಮಹತ್ಯೆಗೆ ಸಮಾನವಾದ ಪಾಪ (ವುಂಟಾಗುವದು) (?)' - ಎಂದು **ಭವಿಷ್ಯತ್ಪುರಾಣದಲ್ಲಿ** ಶ್ರೀ ಮಹೇಶ್ವರನ ವಚನವಿದೆ.

## (ಭಾಷ್ಯ)

ತಥಾ ಚ ಹರಿವಂಶೇ ಕೈಲಾಸಯಾತ್ರಾಯಾಂ ಮಹೇಶ್ವರವಚನಮ್ -

ಆದಿಸ್ತ್ವಂ ಸರ್ವಭೂತಾನಾಂ ಮಧ್ಯಮನ್ತಸ್ತಥಾ ಭವಾನ್ ।
ತ್ವತ್ತಃ ಸಮಭವದ್ವಿಶ್ವಂ ತ್ವಯಿ ಸರ್ವಂ ಪ್ರಲೀಯತೇ॥ (ಹರಿ.೩-೮೮-೫೧)

ಅಹಂ ತ್ವಂ ಸರ್ವಗೋ ದೇವ ತ್ವಮೇವಾಹಂ ಜನಾರ್ದನ।
ಆವಯೋರನ್ತರಂ ನಾಸ್ತಿ ಶಬ್ದೈರರ್ಥೈರ್ಜಗತ್ತ್ರಯೇ॥

ನಾಮಾನಿ ತವ ಗೋವಿನ್ದ ಯಾನಿ ಲೋಕೇ ಮಹಾನ್ತಿ ಚ।
ತಾನ್ಯೇವ ಮಮ ನಾಮಾನಿ ನಾತ್ರ ಕಾರ್ಯಾ ವಿಚಾರಣಾ ॥

ತ್ವದುಪಾಸಾ ಜಗನ್ನಾಥ ಸೈವಾಸ್ತು ಮಮ ಗೋಪತೇ।
ಯಶ್ಚ ತ್ವಾಂ ದ್ವೇಷ್ಟಿ ಭೋ ದೇವ ಸ ಮಾಂ ದ್ವೇಷ್ಟಿ ನ ಸಂಶಯಃ॥

ತ್ವದ್ವಿಸ್ತಾರೋ ಯತೋ ದೇವ ಹ್ಯಹಂ ಭೂತಪತಿಸ್ತತಃ।
ನ ತದಸ್ತಿ ವಿಭೋ ದೇವ ಯತ್ತೇ ವಿರಹಿತಂ ಕ್ವಚಿತ್॥

ಯದಾಸೀದ್ವರ್ತತೇ ಯಚ್ಚ ಯಚ್ಚ ಭಾವಿ ಜಗತ್ಪತೇ।
ಸರ್ವಂ ತ್ವಮೇವ ದೇವೇಶ ವಿನಾ ಕಿಞ್ಚಿತ್ ತ್ವಯಾ ನ ಹಿ॥
(ಹರಿ. ೩-೮೮-೬೦ ಪ್ರಭೃತಿ ೬೪)

ಇತ್ಯಾದಿವಾಕ್ಯಾನ್ಯೈಕತ್ವಪ್ರತಿಪಾದಕಾನಿ॥[1]

1. ಇಲ್ಲಿರುವ 'ಇತ್ಯಾದಿವಾಕ್ಯಾನ್ಯೈಕತ್ವಪ್ರತಿಪಾದಕಾನಿ' ಎಂಬವರೆಗಿನ ಭಾಗವು ಮೈ॥ ಪಾಠದಲ್ಲಿಲ್ಲ, ಅದು ಗ್ರಂಥಕಾರರಿಂದಲೇ ಬಿಟ್ಟುಬಿಟ್ಟದೆ - ಎಂದು ಅಲ್ಲಿ ಟಿಪ್ಪಣಿಯನ್ನು ಕೊಟ್ಟಿದೆ.

## (ಭಾಷ್ಯಾರ್ಥ)

ಹಾಗೂ **ಹರಿವಂಶದಲ್ಲಿ** ಕೈಲಾಸಯಾತ್ರೆಯ ಸಂದರ್ಭದಲ್ಲಿ (ಹೀಗೆಂದು) **ಮಹೇಶ್ವರನ ವಚನವಿದೆ:** "ನೀನೇ ಸರ್ವವಸ್ತುಗಳಿಗೂ ಆದಿ, ಮಧ್ಯ ಮತ್ತು ಅಂತವಾಗಿರುವೆ! ನಿನ್ನಿಂದಲೇ ವಿಶ್ವವೆಲ್ಲವೂ ಆಗಿರುತ್ತದೆ, ನಿನ್ನಲ್ಲಿಯೇ ಎಲ್ಲವೂ ಒಂದಾಗುತ್ತದೆ" "ಎಲೈ ದೇವನೆ, ನಾನೇ ನೀನು, ಜನಾರ್ದನನೆ, ನೀನೇ ನಾನು, ಜಗತ್ಪತಿಯೆ, ನಮ್ಮಿಬ್ಬರಿಗೂ ಶಬ್ದಗಳಿಂದಲಾಗಲಿ ಅರ್ಥಗಳಿಂದಲಾಗಲಿ (ಯಾವ)ಭೇದವೂ ಇರುವದಿಲ್ಲ. ಗೋವಿಂದನೆ, ಲೋಕದಲ್ಲಿ ನಿನ್ನ ಯಾವ ಮಹಾನಾಮಗಳಿರುತ್ತವೆಯೋ ಅವೇ ನನ್ನ ನಾಮಗಳು, ಈ ವಿಷಯದಲ್ಲಿ (ಯಾವ) ವಿಚಾರವನ್ನೂ ಮಾಡತಕ್ಕದ್ದಿರುವದಿಲ್ಲ. ಎಲೈ ಜಗನ್ನಾಥನೆ, ನಿನ್ನ ಉಪಾಸನೆಯೆಂಬುದು ಯಾವದೋ, ಅದೇ ನನ್ನ ಉಪಾಸನೆಯಾಗಲಿ! ಮತ್ತು ಎಲೈ ದೇವನೆ, ಯಾವನು ನಿನ್ನನ್ನು ದ್ವೇಷಿಸುತ್ತಾನೋ, ಅವನು ನನ್ನನ್ನೂ ದ್ವೇಷಿಸುತ್ತಾನೆ, ಇದರಲ್ಲಿ ಸಂಶಯವಿಲ್ಲ. ಎಲೈ ದೇವನೆ, ಭೂತಪತಿಯಾದ ನಾನು ನಿನ್ನ ವಿಭೂತಿಯೇ ಅಲ್ಲವೆ?

ಎಲೈ (ಸರ್ವವ್ಯಾಪಕನಾದ) ದೇವನೆ, ನಿನ್ನನ್ನು ಬಿಟ್ಟು (ಸ್ವತಂತ್ರವಾಗಿರುವ)ದೆಂಬ ಯಾವ ವಸ್ತುವೂ ಎಲ್ಲಿಯೂ ಇರುವದೇ ಇಲ್ಲ. ಯಾವಯಾವದು ಹಿಂದೆ ಇದ್ದಿತೋ, ಯಾವಯಾವದು ಈಗ ಇದೆಯೋ, ಯಾವಯಾವದು ಮುಂದೆ ಇರುವದೋ, ಎಲೈ ಜಗತ್ಪತಿಯೆ, ದೇವೇಶ್ವರನೆ, ಅದೆಲ್ಲವೂ ನೀನೇ, ನಿನ್ನನ್ನು ಬಿಟ್ಟು ಮತ್ತೆ ಯಾವದೂ ಇಲ್ಲವೇ ಇಲ್ಲ".

.... ಇವೇ ಮುಂತಾದ ವಾಕ್ಯಗಳು ಏಕತ್ವವನ್ನೇ ಪ್ರತಿಪಾದಿಸುತ್ತವೆ.

## (ಭಾಷ್ಯ)

ಅಪಿ ಚ 'ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ' (ವೇ.ಸೂ.೪-೧-೩) ಆತ್ಮೇತ್ಯೇವಂ ಶಾಸ್ತ್ರೋಕ್ತಲಕ್ಷಣಃ ಪರಮಾತ್ಮಾ ಪ್ರತಿಪತ್ತವ್ಯಃ। ತಥಾ ಹಿ ಪರಮಾತ್ಮಪ್ರಕ್ರಿಯಾಯಾಂ ಜಾಬಾಲಾಃ ಆತ್ಮತ್ವೇನೈವೈನಮುಪಗಚ್ಛನ್ತಿ[1] - 'ತ್ವಂ ವಾ ಅಹಮಸ್ಮಿ ಭಗವೋ ದೇವತೇ ಅಹಂ ವೈ ತ್ವಮಸಿ'[2] ಇತಿ। ತಥಾ ಅನ್ಯೇಽಪಿ 'ಯದೇವೇಹ ತದಮುತ್ರ ಯದಮುತ್ರ ತದನ್ವಿಹ' (ಕಠ.೪-೧೦), 'ಸ ಯಶ್ಚಾಯಂ ಪುರುಷೇ । ಯಶ್ಚಾಸಾವಾದಿತ್ಯೇ। ಸ ಏಕಃ (ತೈ.೩-೧೧). 'ತದಾತ್ಮಾನಮೇವಾವೇದಹಂ ಬ್ರಹ್ಮಾಸ್ಮೀತಿ' (ಬೃ.೧-೪-೧೦), 'ತದೇತದ್ಬ್ರಹ್ಮಾಪೂರ್ವಮನಪರಮನನ್ತರಮ

1. 'ಅಭ್ಯುಪಗಚ್ಛನ್ತಿ' ಎಂಬ ಪಾಠವೇ ಅಚ್ಚಿನ ಪುಸ್ತಗಳಲ್ಲಿದೆಯಾದರೂ ಸೂತ್ರಾಕ್ಷರಕ್ಕನುಗುಣವಾಗಿ 'ಉಪಗಚ್ಛನ್ತಿ' ಎಂದಿರುವದೇ ಯುಕ್ತ; ಈ ಗ್ರಂಥಭಾಗವು ಸೂತ್ರಭಾಷ್ಯವನ್ನು ಬಲುಮಟ್ಟಿಗೆ ಅಕ್ಷರಶಃ ಅನುಸರಿಸಿದೆ; ಮುಂದಕ್ಕೆ 'ಅನುಗಮು'ಃ ಎಂದೇ ಉಪಸಂಹಾರಮಾಡಿದೆ. ಆದ್ದರಿಂದ ಈ ಪಾಠವನ್ನೇ ನಾವು ಇಟ್ಟುಕೊಂಡಿದ್ದೇವೆ.

2. ಈ ವಾಕ್ಯದ ಮೂಲವು ನಮಗೆ ಸಿಕ್ಕಿಲ್ಲ; ಮೈ॥ ಪಾಠದಲ್ಲಿ ವರಾಹೋಪನಿಷತ್ತನ್ನು ಪರಾಮರ್ಶಿಸಿರುವದು ಅಯುಕ್ತವೆಂಬುದು ಸ್ಪಷ್ಟ.

ಬಾಹ್ಯಮಯಮಾತ್ಮಾ ಬ್ರಹ್ಮ ಸರ್ವಾನುಭೂಃ' (ಬೃ.೨-೫-೧೯), 'ಸ ವಾ ಏಷ ಮಹಾನಜ ಆತ್ಮಾಜರೋಽಮರೋಽಮೃತೋಽಭಯೋ ಬ್ರಹ್ಮ' (ಬೃ.೪-೪-೨೫) - ಇತ್ಯೇವಮಾದಯಃ ಆತ್ಮತ್ವೋಪಗಮಾ ದ್ರಷ್ಟವ್ಯಾಃ॥

ಗ್ರಾಹಯನ್ತಿ ಚ ಬೋಧಯನ್ತಿ ಚಾತ್ಮತ್ವೇನೇಶ್ವರಂ ವೇದಾನ್ತವಾಕ್ಯಾನಿ 'ಏಷ ತ ಆತ್ಮಾನ್ತರ್ಯಾಮ್ಯಮೃತಃ' (ಬೃ.೩-೭-೩), 'ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್। ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ' (ಕೇ.೧-೫), 'ತತ್ಸತ್ಯಂ ಸ ಆತ್ಮಾ ತತ್ತ್ವಮಸಿ' (ಛಾಂ. ೬-೮-೭) ಇತ್ಯೇವಮಾದೀನಿ॥

## (ಭಾಷ್ಯಾರ್ಥ)

ಇದಲ್ಲದೆ 'ಆತ್ಮೇತಿ ತೂಪಗಚ್ಛನ್ತಿ ಗ್ರಾಹಯನ್ತಿ ಚ' (ಆತ್ಮನೆಂದೇ ಒಪ್ಪಿರುತ್ತಾರೆ, ಮತ್ತೆ ತಿಳಿಸುತ್ತಾರೆ ಎಂಬ ಸೂತ್ರವೂ ಇದೆ). ಇದರ ವಿವರಣೆಯು ಹೇಗೆಂದರೆ[1] - ತನ್ನ ಆತ್ಮನೆಂದೇ ಶಾಸ್ತ್ರೋಕ್ತವಾದ ಲಕ್ಷಣಗಳುಳ್ಳ ಪರಮಾತ್ಮನನ್ನು ಅರಿಯಬೇಕು. ಆದ್ದರಿಂದಲೇ ಜಾಬಾಲಶಾಖೆಯವರು ಪರಮೇಶ್ವರ ಪ್ರಕರಣದಲ್ಲಿ ಈತನನ್ನು (ತಮ್ಮ) ಆತ್ಮನೆಂದೇ ಒಪ್ಪಿರುತ್ತಾರೆ. "ಭಗವಂತನೆ, ದೇವನೆ, ನೀನೇ ನಾನಾಗಿರುತ್ತೇನೆ, ನಾನೇ ನೀನಾಗಿರುತ್ತೀಯೆ" (?) ಎಂದು (ಅಪರ ವಚನ). ಹೀಗೆಯೇ ಇನ್ನು ಬೇರೆಯಾಗಿಯೂ "ಇಲ್ಲಿ ಯಾವದಿದೆಯೋ ಅದೇ ಅಲ್ಲಿದೆ, ಯಾವದು ಅಲ್ಲಿದೆಯೋ ಅದೇ ಇಲ್ಲಿಯೂ ಇದೆ", "ಪುರುಷನಲ್ಲಿರುವ ಈತನು ಯಾರೋ, ಆ ಆದಿತ್ಯನಲ್ಲಿರುವಾತನು ಯಾರೋ, ಆತನು ಒಬ್ಬನೇ", " ಆ (ಬ್ರಹ್ಮವು) ತನ್ನನ್ನೇ 'ನಾನು ಬ್ರಹ್ಮವಾಗಿರುವೆನು' ಎಂದು ಅರಿತುಕೊಂಡಿತು" "ಆ ಈ ಬ್ರಹ್ಮವೇ ಕಾರಣವಿಲ್ಲದ್ದು, ಕಾರ್ಯವಿಲ್ಲದ್ದು, ನಡುವೆ ಇರುವದಿಲ್ಲದ್ದು, ಹೊರಗಿಲ್ಲದ್ದು, ಈ ಆತ್ಮನೇ ಸರ್ವವನ್ನೂ ಅನುಭವಿಸುವವನು", "ಆ ಈತನೇ ಮಹಾಂತನು, ಜನ್ಮರಹಿತನು, ಮುಪ್ಪಿಲ್ಲದವನು, ಸಾವಿಲ್ಲದವನು, ಅಮೃತಸ್ವರೂಪನು, ಅಂಜಿಕೆಯಿಲ್ಲದವನು, ಬ್ರಹ್ಮವು" - ಇವೇ ಮುಂತಾದ ಆತ್ಮನೆಂದೇ ಸ್ವೀಕರಿಸುವ ವಾಕ್ಯಗಳನ್ನು ಇಲ್ಲಿ ಊಹಿಸಿಕೊಳ್ಳಬೇಕು.

ಮತ್ತು ಈ ಈಶ್ವರನು ಆತ್ಮನೆಂದು ವೇದಾಂತವಾಕ್ಯಗಳು ಗ್ರಹಣಮಾಡಿಸುತ್ತಲೂ - ಎಂದರೆ ಬೋಧಿಸುತ್ತಲೂ - ಇವೆ. (ಅವು ಯಾವವೆಂದರೆ) 'ಇವನೇ ನಿನ್ನ ಆತ್ಮನಾದ ಅಮೃತಸ್ವಭಾವದವನಾದ ಅಂತರ್ಯಾಮಿಯು' 'ಯಾವದನ್ನು ಮನಸ್ಸಿನಿಂದ ಮನನಮಾಡಲಾರರೋ, ಯಾವದರಿಂದ ಮನಸ್ಸು ಅರಿಯಲ್ಪಡುತ್ತದೆಯೆನ್ನುವರೋ, ಅದನ್ನೇ ಬ್ರಹ್ಮವೆಂದು ನೀನು ಅರಿತುಕೊ. "ಇದು" ಎಂದು ಯಾವದನ್ನು

1. ಸೂತ್ರವಿದೆಂದು ಏಕೆ ಉಲ್ಲೇಖಿಸಿಲ್ಲವೆಂಬುದು ತಿಳಿಯಲಿಲ್ಲ. ಬಲುಮಟ್ಟಿಗೆ ಸೂತ್ರಭಾಷ್ಯ ಶೈಲಿಯನ್ನೇ ಅನುಸರಿಸಿದ್ದರೂ ಅಲ್ಲಿಲ್ಲದ ಕೆಲವು ಹೆಚ್ಚಿಗೆಯ ವಾಕ್ಯಗಳನ್ನೂ ಇಲ್ಲಿ ಸೇರಿಸಿಕೊಂಡಿರುತ್ತದೆ.

ಉಪಾಸನೆಮಾಡುತ್ತಾರೋ, ಅದಲ್ಲ. "ಅದೇ ಸತ್ಯವು, ಅದೇ ಆತ್ಮನು, ಅದೇ ನೀನಾಗಿರುವೆ" ಇವೇ ಮುಂತಾದವುಗಳು.

## (ಭಾಷ್ಯ)

ನನು ಪ್ರತೀಕದರ್ಶನಮಿದಂ ವಿಷ್ಣುಪ್ರತಿಮಾನ್ಯಾಯೇನ ಭವಿಷ್ಯತಿ। ತದಯುಕ್ತಮ್। ಗೌಣತ್ವಪ್ರಸಙ್ಗಾತ್। ವಾಕ್ಯವೈರೂಪ್ಯಾಚ್ಚ। ಯತ್ರ ಹಿ ಪ್ರತೀಕದೃಷ್ಟಿರಭಿಪ್ರೇಯತೇ, ಸಕೃದೇವ ತತ್ರ ವಚನಂ ಭವತಿ। ಯಥಾ - "ಮನೋ ಬ್ರಹ್ಮ" (ಛಾಂ.೩-೧೮-೧), "ಆದಿತ್ಯೋ ಬ್ರಹ್ಮ" (ಛಾಂ.೩-೧೯-೧) - ಇತಿ । ಇಹ ಪುನಃ 'ತ್ವಮಹಮಸ್ಮಿ', 'ಅಹಂ ವೈ ತ್ವಮಸಿ' ಇತ್ಯಾಹ। ಅತಃ ಪ್ರತೀಕಶ್ರುತಿವೈರೂಪ್ಯಾದಭೇದಪ್ರತಿಪತ್ತಿಃ॥

ಭೇದದೃಷ್ಟ್ಯಪವಾದಾಚ್ಚ। ತಥಾ ಹಿ - "ಅಥ ಯೋಽನ್ಯಾಂ ದೇವತಾಮುಪಾಸ್ತೇ ಅನ್ಯೋಽಸಾವನ್ಯೋಽಹಮಸ್ಮೀತಿ ನ ಸ ವೇದ ಯಥಾ ಪಶುಃ" (ಬೃ. ೧-೪-೧೦), "ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ" (ಕಾ.೪-೧೦), "ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ। ಏವಂ ಧರ್ಮಾನ್ ಪೃಥಕ್ ಪಶ್ಯಂಸ್ತಾನೇವಾನುವಿಧಾವತಿ" (ಕಾ. ೪-೧೪), "ದ್ವಿತೀಯಾದ್ವೈ ಭಯಂ ಭವತಿ" (ಬೃ.೧-೪-೨), "ಯದಾ ಹ್ಯೇವೈಷ ಏತಸ್ಮಿನ್ನುದರಮನ್ತರಂ ಕುರುತೇ। ಅಥ ತಸ್ಯ ಭಯಂ ಭವತಿ। ತತ್ತ್ವೇವ ಭಯಂ ವಿದುಷೋಽಮನ್ವಾನಸ್ಯ" (ತೈ.೨-೭), "ಸರ್ವಂ ತಂ ಪರಾದಾದ್ಯೋಽನ್ಯತ್ರಾತ್ಮನಃ ಸರ್ವಂ ವೇದ" (ಬೃ.೨-೪-೬) - ಇತ್ಯೇವಮಾದ್ಯಾ ಭೂಯಸೀ ಶ್ರುತಿಃ ಭೇದದೃಷ್ಟಿಮಪವದತಿ॥

## (ಭಾಷ್ಯಾರ್ಥ)

(ಶಂಕೆ):- ಇದು ವಿಷ್ಣುಪ್ರತಿಮಾನ್ಯಾಯದಿಂದ [1] ಪ್ರತೀಕೋಪಾಸನೆಯಾಗ ಬಹುದಲ್ಲ?

(ಪರಿಹಾರ) :- ಅದು ಸರಿಯಲ್ಲ, ಏಕೆಂದರೆ, ಆಗ (ಪದಕ್ಕೆ) ಗೌಣಾರ್ಥ[2] ವೆಂದಾಗಿಬಿಟ್ಟೀತು! ಇದಲ್ಲದೆ ವಾಕ್ಯವು ಬೇರೆಯ ರೂಪದಲ್ಲಿರುವದರಿಂದಲೂ (ಹೀಗೆಂದು ತಿಳಿಯಬೇಕು. ಹೇಗೆಂದರೆ) : ಎಲ್ಲಿ ಪ್ರತೀಕೋಪಾಸನೆ (ಇದು ಎಂಬ) ಅಭಿಪ್ರಾಯವಿರುವದೋ ಅಲ್ಲಿ ಒಂದೇ ಸಲ ಹೇಳಿರುತ್ತದೆ; ಉದಾಹರಣೆಗೆ "ಮನಸ್ಸು ಬ್ರಹ್ಮ (ವೆಂದು ಉಪಾಸನೆಮಾಡಬೇಕು" "ಆದಿತ್ಯನು ಬ್ರಹ್ಮವೆಂದು ಉಪಾಸನೆಮಾಡಬೇಕು)" - ಎಂಬೀ (ವಾಕ್ಯಗಳಲ್ಲಿ ಪ್ರತೀಕೋಪಾಸನೆ). ಆದರೆ ಇಲ್ಲಿ "ನೀನೇ ನಾನಾಗಿರುತ್ತೇನೆ", "ನಾನೇ ನೀನಾ (ಗಿರುವೆ)" - ಎಂದು (ಶ್ರುತಿ) ಹೇಳುತ್ತದೆ. ಆದ್ದರಿಂದ (ಇದು) ಪ್ರತೀಕಶ್ರುತಿಗಿಂತ ಬೇರೆಯ ರೂಪವುಳ್ಳದ್ದಾಗಿರುವದರಿಂದ ಇಲ್ಲಿ ಅಭೇದ (ವೇ ವಿವಕ್ಷಿತವೆಂದು) ತಿಳಿಯಬೇಕು. ಭೇಧದೃಷ್ಟಿಯನ್ನು

1. ಪ್ರತಿಮೆಯನ್ನು ವಿಷ್ಣುವೆಂದು ಭಾವಿಸಬೇಕೆಂದು ವಚನದಲ್ಲಿರುವಂತೆ.
2. ಪದಗಳಿಗೆ ಮುಖ್ಯಾರ್ಥವೇ ವಿವಕ್ಷಿತ. ಮುಖ್ಯಾರ್ಥವು ಹೊಂದದೆ ಇರುವಾಗ ಗೌಣಾರ್ಥವನ್ನು ತೆಗೆದುಕೊಳ್ಳಬೇಕು.

ಅಲ್ಲಗಳೆದಿರುವದರಿಂದಲೂ (ಇದು ಪ್ರತೀಕದರ್ಶನವೆಂಬುದು ಸರಿಯಲ್ಲ). ಹೇಗೆಂದರೆ : "ಇನ್ನು ಯಾವನು 'ಆ (ದೇವತೆಯೇ) ಬೇರೆ, ನಾನೇ ಬೇರೆ' ಎಂದು. (ತನಗಿಂತ) ಬೇರೆಯಾದ ದೇವತೆಯನ್ನು ಉಪಾಸನೆಮಾಡುತ್ತಾನೋ ಅವನು ಅರಿಯನು. (ಅವನು) ಪಶುವಿನಂತೆ ದೇವತೆಗಳಿಗೆ (ದುಡಿಯುತ್ತಿರುತ್ತಾನೆ") "ಯಾವನು ಇಲ್ಲಿ ನಾನಾತ್ವವಿರುವಂತೆ ಕಾಣುತ್ತಾನೋ, ಅವನು ಸಾವಿನ ಮೇಲೆ ಸಾವನ್ನು ಪಡೆಯುತ್ತಾನೆ" "ಹೇಗೆ ದುರ್ಗಮವಾದ (ಎತ್ತರವಾದ ಸ್ಥಳದಲ್ಲಿ) ಬಿದ್ದ ಮಳೆಯ ನೀರು ಪರ್ವತಗಳಲ್ಲಿ ಚೆಲ್ಲಾಪಿಲ್ಲಿಯಾಗುತ್ತದೆಯೋ ಹಾಗೆ, ಆತ್ಮರುಗಳನ್ನು ಬೇರೆ ಬೇರೆ ಎಂದು ಅರಿತವನು ಅವುಗಳನ್ನೇ ಹಿಂಬಾಲಿಸಿ (ಹುಟ್ಟುತ್ತಿರುತ್ತಾನೆ)" "ತನಗೆರಡನೆಯದಿರುವದರಿಂದಲ್ಲವೆ, ಅಂಜಿಕೆಯಾಗುತ್ತದೆ?" "ಯಾವಾಗ ಇವನು ಇದರಲ್ಲಿ ಒಂದಿಷ್ಟಾದರೂ ಭೇದವನ್ನು ಮಾಡಿಕೊಳ್ಳುತ್ತಾನೋ, ಆಗಲಲ್ಲವೆ, ಅವನಿಗೆ ಅಂಜಿಕೆಯಾಗುತ್ತದೆ?[1] (ಬ್ರಹ್ಮತತ್ತ್ವವನ್ನು) ಅರಿಯದವನಿಗೆ ಅದೇ ಭಯ (ಕಾರಣವಾಗಿರುತ್ತದೆ)" "ಯಾವನು ಆತ್ಮನಿಗಿಂತ ಎಲ್ಲವನ್ನೂ ಬೇರೆಯಾಗಿ ಅರಿಯುತ್ತಾನೋ, ಅವನನ್ನು ಪ್ರತಿಯೊಂದೂ ತಿರಸ್ಕರಿಸುತ್ತದೆ" **- ಇವೇ ಮುಂತಾದ ಹೇರಳವಾದ ಶ್ರುತಿಯು ಭೇದದೃಷ್ಟಿಯನ್ನು ನಿಂದಿಸುತ್ತದೆ.**

## (ಭಾಷ್ಯ)

ತಥಾ "ಆತ್ಮೈವೇದಂ ಸರ್ವಮ್" (ಛಾಂ. ೭-೨೫-೨), "ಆತ್ಮನಿ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತಿ" (ಬೃ.೪-೫-೬), "**ಇದಂ ಸರ್ವಂ** ಯದಯಮಾತ್ಮಾ" (ಬೃ.೨-೪-೬), "ಬ್ರಹ್ಮೈವೇದಂ ವಿಶ್ವಮ್" (ಮುಂ. ೨-೨-೧೧) - ಇತಿ **ಶ್ರುತಿಃ।**

ತಥಾ **ಸ್ಮೃತಿರಪಿ** -

ಯಜ್ಜ್ಞಾತ್ವಾ ನ ಪುನರ್ಮೋಹಮೇವಂ ಯಾಸ್ಯಸಿ ಪಾಣ್ಡವ ।
ಯೇನ ಭೂತಾನ್ಯಶೇಷೇಣ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ॥ (ಗೀ.೪-೩೫)

ಕ್ಷೇತ್ರಜ್ಞೇಶ್ವರೈಕತ್ವಂ ಸರ್ವೋಪನಿಷತ್ಪ್ರಸಿದ್ಧಂ ದ್ರಕ್ಷ್ಯಸಿ - ಇತ್ಯರ್ಥಃ।

ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ।
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ತ್ವಿಕಮ್ ॥ (ಗೀ. ೧೮-೨೦) ಇತಿ ಅದ್ವೈತಜ್ಞಾನಂ ಸಮ್ಯಗ್ದರ್ಶನಮಿತ್ಯುಕ್ತಂ ಭಗವತಾಪಿ। ತಸ್ಮಾತ್ ಆತ್ಮೇತ್ಯೇವೇಶ್ವರೇ ಮನೋ ದಧೀತ॥

## (ಭಾಷ್ಯಾರ್ಥ)

1. ಇದು ಶ್ರುತಿಯ ಅರ್ಥಮಾತ್ರ.

ಹಾಗೂ 'ಇದೆಲ್ಲವೂ ಆತ್ಮನೇ', 'ಆತ್ಮನನ್ನು ಅರಿತುಕೊಂಡರೆ ಇದೆಲ್ಲವನ್ನೂ ಅರಿತಂತೆ ಆಗುವದು', 'ಇದೆಲ್ಲವೂ ಈ ಆತ್ಮನೆಂಬುದೇ', 'ಇದೆಲ್ಲವೂ ಬ್ರಹ್ಮವೇ' - ಎಂದು ಶ್ರುತಿಯು (ಇದೆ).

ಹಾಗೂ ಸ್ಮೃತಿಯೂ (ಈ ವಿಷಯದಲ್ಲಿದೆ) : 'ಇದನ್ನು ಅರಿತುಕೊಂಡರೆ, ಎಲೈ ಪಾಂಡುಪುತ್ರನೆ, ಹೀಗೆ ಮತ್ತೆ ಮೋಹವನ್ನು (ನೀನು) ಹೊಂದುವದಿಲ್ಲ; ಅದರಿಂದ ಎಲ್ಲಾ ಪ್ರಾಣಿಗಳನ್ನೂ ನಿನ್ನಲ್ಲಿಯೇ ಕಂಡುಕೊಳ್ಳುವೆ, ಮತ್ತು ನನ್ನಲ್ಲಿಯೂ ಕಾಣುವೆ', ಸರ್ವೋಪನಿಷತ್ತುಗಳಲ್ಲಿಯೂ ಪ್ರಸಿದ್ಧವಾಗಿರುವ ಕ್ಷೇತ್ರಜ್ಞ ಮತ್ತು ಈಶ್ವರ - ಇವರ ಏಕತ್ವವನ್ನು ಕಂಡುಕೊಳ್ಳುವೆ - ಎಂದರ್ಥ. 'ಯಾವದರಿಂದ ಸರ್ವಪ್ರಾಣಿಗಳಲ್ಲಿಯೂ ಒಂದೇ ಅವ್ಯಯವಾದ ತತ್ತ್ವವನ್ನು ಕಂಡುಕೊಳ್ಳುತ್ತಾನೋ, (ಅವು)ವಿಂಗಡವಾಗಿದ್ದರೂ (ಯಾವ) ತತ್ತ್ವವು ವಿಭಾಗವಿಲ್ಲದ್ದೇ ಆಗಿರುವದೋ (ಅದನ್ನು ಯಾವದರಿಂದ ಕಾಣುತ್ತಾನೋ) ಆ ಜ್ಞಾನವು ಸಾತ್ತ್ವಿಕವೆಂದು ಅರಿತುಕೊ' - ಎಂದು ಅದ್ವೈತನಾಗಿರುವ ಆತ್ಮನ ಜ್ಞಾನವೇ ಸರಿಯಾದ ಜ್ಞಾನವೆಂದು ಭಗವಂತನಿಂದಲೂ ಉಕ್ತ(ವಾಗಿದೆ). ಆದ್ದರಿಂದ ಆತ್ಮನೆಂದೇ ಈಶ್ವರನಲ್ಲಿ ಮನಸ್ಸನ್ನು ಇಡಬೇಕು.

### (ಭಾಷ್ಯ)

ಭೂತಾತ್ಮಾ ಚೇನ್ದ್ರಿಯಾತ್ಮಾ ಚ ಪ್ರಧಾನಾತ್ಮಾ ತಥಾ ಭವಾನ್।
ಆತ್ಮಾ ಚ ಪರಮಾತ್ಮಾ ಚ ತ್ವಮೇಕಃ ಪಞ್ಚಧಾ ಸ್ಥಿತಃ॥
ಇತಿ ಚ - ವಿಷ್ಣು. ಪು. (೫-೧೮-೫೦)

ಅಥವಾ ಬಹುನೈತೇನ ಕಿಂ ಜ್ಞಾತೇನ ತವಾರ್ಜುನ।
ವಿಷ್ಟಭ್ಯಾಹಮಿದಂ ಕೃತ್ಸ್ನಮ್ ಏಕಾಂಶೇನ ಸ್ಥಿತೋ ಜಗತ್ ॥
ಇತಿ ಚ - (ಗೀ.೧೦-೪೨)

### (ಭಾಷ್ಯಾರ್ಥ)

ಮತ್ತು 'ಭೂತಾತ್ಮ ಇಂದ್ರಿಯಾತ್ಮ ಪ್ರಧಾನಾತ್ಮ (ಇವೆಲ್ಲವೂ) ನೀನೇ, ಆತ್ಮನೂ ಪರಮಾತ್ಮನೂ (ನೀನೇ); ಒಬ್ಬನೇ ಆದರೂ ನೀನು (ಹೀಗೆ) ಐದು ಬಗೆಯಾಗಿರುವೆ' ಎಂದೂ (ಅಕ್ರೂರನ ವಚನವಿದೆ). 'ಅರ್ಜುನನೆ, ಇದನ್ನು ಈ (ಬಹು ಪ್ರಕಾರವಾದದ್ದನ್ನು) ಅರಿತುಕೊಂಡದ್ದರಿಂದ ನಿನಗೆ (ಆಗಬೇಕಾದದ್ದು) ಏನು? ನಾನು ಇದೆಲ್ಲವನ್ನೂ ಎತ್ತಿಹಿಡಿದುಕೊಂಡು ಒಂದೇ ಅಂಶದಿಂದ (ಈ) ಜಗತ್ತಾಗಿರುವೆನು' ಎಂದು (ಭಗವಂತನ ವಚನವೂ ಇದೆ).

### (ಭಾಷ್ಯ)

ಅವಿದ್ಯೋಪಾಧಿಪಕ್ಷೇऽಪಿ ಪ್ರಮಾಣವಾದಃ ಸಮಸ್ತಿ -
ಏಕ ಏವ ಮಹಾನಾತ್ಮಾ ಸೋऽಹಂಕಾರೋऽಭಿಧೀಯತೇ।
ಸ ಜೀವಃ ಸೋऽನ್ತರಾತ್ಮೇತಿ ಗೀಯತೇ ತತ್ತ್ವಚಿನ್ತಕೈಃ॥ (?)

ತಥಾ **ಶ್ರೀವಿಷ್ಣುಪುರಾಣೇ** -

ವಿಭೇದಜನಕೇಽಜ್ಞಾನೇ ನಾಶಮಾತ್ಯನ್ತಿಕಂ ಗತೇ।
ಆತ್ಮನೋ ಬ್ರಹ್ಮಣೋ ಭೇದಮಸನ್ತಂ ಕಃ ಕರಿಷ್ಯತಿ ॥ (ವಿ.ಪು.೬-೭-೯೬)
ಪರಾತ್ಮನೋ ಮನುಷ್ಯೇನ್ದ್ರ ವಿಭಾಗೋಽಜ್ಞಾನಕಲ್ಪಿತಃ।
ಕ್ಷಯೇ ತಸ್ಯಾತ್ಮಪರಯೋರ್ವಿಭಾಗೋಽಭಾಗ ಏವ ಹಿ॥ (?)

ಇತಿ॥

(ಭಾಷ್ಯಾರ್ಥ)

**ಅವಿದ್ಯೋಪಾಧಿಪಕ್ಷದಲ್ಲಿಯೂ**[1] ಪ್ರಮಾಣವಾದವಿದೆ :- 'ಮಹಾನಾತ್ಮನು ಒಬ್ಬನೇ, ಆತನನ್ನೇ **'ಅಹಂಕಾರ'** ವೆನ್ನುವರು, ಅವನನ್ನೇ ಜೀವನೆಂದೂ, ಅವನನ್ನೇ ಅಂತರಾತ್ಮನೆಂದೂ ತತ್ತ್ವಚಿಂತಕರು ಹೇಳುತ್ತಿರುವರು (?)[2] ಹೀಗೆಯೇ **ವಿಷ್ಣುಪುರಾಣದಲ್ಲಿಯೂ** ಇದೆ : 'ವಿವಿಧವಾದ ಭೇದವನ್ನುಂಟುಮಾಡುವ **ಅಜ್ಞಾನವು** ಅತ್ಯಂತವಾಗಿ ನಾಶವನ್ನು ಹೊಂದಿದರೆ, ಇಲ್ಲದೆ ಇರುವ, ಆತ್ಮನ ಮತ್ತು ಬ್ರಹ್ಮದ ಭೇದವನ್ನು ಯಾವನು ಮಾಡಿಯಾನು?', 'ಎಲೈ ಮನುಷ್ಯಾಧಿಪತಿಯೆ, ಪರಮಾತ್ಮನಿಗೂ (ಜೀವಾತ್ಮನಿಗೂ) ವಿಭಾಗವು ಅಜ್ಞಾನಕಲ್ಪಿತವಾಗಿರುತ್ತದೆ. ಅದು ಕ್ಷಯವಾದರೆ ಆತ್ಮ ಮತ್ತು ಪರಮಾತ್ಮ - ಇವರುಗಳಿಗೆ ವಿಭಾಗವು ಇರುವದೇ ಇಲ್ಲ.

**(ಭಾಷ್ಯ)**

**ವಿಷ್ಣುಧರ್ಮೇ** :-

ಯಥೈಕಸ್ಮಿನ್ ಘಟಾಕಾಶೇ ರಜೋಧೂಮಾದಿಭಿರ್ಯುತೇ।
ನಾನ್ಯೇ ಮಲಿನತಾಂ ಯಾನ್ತಿ ದೂರಸ್ಥಾಃ ಕುತ್ರಚಿತ್ ಕ್ವಚಿತ್।
ತಥಾ ದ್ವನ್ದ್ವೈರನೇಕೈಸ್ತು ಜೀವೇ ಚ ಮಲಿನೇ ಕೃತೇ।
ಏಕಸ್ಮಿನ್ನಾಪರೇ ಜೀವಾ ಮಲಿನಾಃ ಸನ್ತಿ ಕುತ್ರಚಿತ್ ॥ - ಇತಿ॥

**ಬ್ರಹ್ಮಯಾಜ್ಞವಲ್ಕ್ಯೇ** -

ಆಕಾಶಮೇಕಂ ಹಿ ಯಥಾ ಘಟಾದಿಷು ಪೃಥಗ್ ಭವೇತ್।
ತಥಾತ್ಮೈಕೋಽಪ್ಯನೇಕೇಷು ಜಲಾಧಾರೇಷ್ವಿವಾಂಶುಮಾನ್ ॥ (?)[3]

---

1. ಶಂಕರಾಚಾರ್ಯರ ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ 'ಅವಿದ್ಯೋಪಾಧಿಪಕ್ಷ'ವೆಂಬ ಶಬ್ದವು ಕಾಣಬರುವದಿಲ್ಲ. ಇದು ವ್ಯಾಖ್ಯಾನಕಾರರಲ್ಲಿ ಕೆಲವರ ಪಕ್ಷ.
2. ಈ ವಚನವು ಎಲ್ಲಿರುವದೋ ಇದರ ನಿಜವಾದ ಅರ್ಥವು ಏನೋ - ಎಂಬುದನ್ನು ನಿಶ್ಚಿತವಾಗಿ ಹೇಳುವದಕ್ಕೆ ಬರುವಂತಿಲ್ಲ.
3. ಇಲ್ಲಿ (?) ಹೀಗೆ ಪ್ರಶ್ನಚಿಹ್ನೆಯನ್ನು ಹಾಕಿರುವ ಶ್ಲೋಕಗಳಿಗೆ ಮೂಲಸ್ಥಾನವು ಸಿಕ್ಕಿರುವದಿಲ್ಲ. ಈ ಶ್ಲೋಕವು ಗೌಡಪಾದಕಾರಿಕೆಯೊಂದನ್ನು ನೆನಪಿಗೆ ತರುತ್ತದೆ. ಇಲ್ಲಿರುವ ಶ್ಲೋಕಗಳು ಸರಿಯಾಗಿ ಉದ್ಧೃತವಾಗಿವೆಯೆ - ಎಂಬುದೂ ಸಂಶಯಗ್ರಸ್ತ; ಪ್ರಸ್ಥಾನತ್ರಯಭಾಷ್ಯದಲ್ಲಿ ಇವುಗಳ ಸುಳಿವೇ ಇಲ್ಲ. ಈ ವಿಷಯಕ್ಕೆ ಪೀಠಿಕೆಯನ್ನು ನೋಡಿ.

### (ಭಾಷ್ಯಾರ್ಥ)

**ವಿಷ್ಣುಧರ್ಮದಲ್ಲಿ** 'ಒಂದು ಘಟಾಕಾಶವು ಧೂಳು, ಹೊಗೆ - ಮುಂತಾದವುಗಳಿಂದ ಮುಸುಕಲ್ಪಟ್ಟರೆ ದೂರದಲ್ಲಿರುವ ಮಿಕ್ಕವು ಎಲ್ಲಿಯೂ ಎಂದಿಗಾದರೂ (ಹೇಗೆ) ಮಾಲಿನ್ಯವನ್ನು ಹೊಂದುವದಿಲ್ಲವೋ, ಹಾಗೆಯೇ ಒಬ್ಬ ಜೀವನು ಅನೇಕ ದ್ವಂದ್ವಗಳಿಂದ ಮಲಿನವಾಗಿ ಮಾಡಲ್ಪಟ್ಟರೆ, (ಉಳಿದ) ಬೇರೆಯ ಜೀವರುಗಳು ಎಲ್ಲಿಯೂ ಮಲಿನವಾಗಿರುವದಿಲ್ಲ.

**ಬೃಹದ್ಯಾಜ್ಞವಲ್ಕ್ಯದಲ್ಲಿಯೂ** (?)[1] - 'ಒಂದೇ ಆಕಾಶವು ಹೇಗೆ ಗಡಿಗೆಯೇ ಮುಂತಾದವುಗಳಲ್ಲಿ ಬೇರೆಬೇರೆಯಾಗಿರುವದೋ, ಹಾಗೆಯೇ ಆತ್ಮನೊಬ್ಬನೇ ಆದರೂ ಅನೇಕ ಜಲಾಧಾರಗಳಲ್ಲಿ ಸೂರ್ಯನಂತೆ ಬೇರೆಬೇರೆಯಾಗಿರುವನು' (?).

### (ಭಾಷ್ಯ)

'ಕ್ಷರಾತ್ಮಾನಾವೀಶತೇ ದೇವ ಏಕಃ' (ಶ್ವೇ. ೧-೧೦), ಇತಿ ಶ್ವೇತಾಶ್ವತರೇ। ಛಾನ್ದೋಗ್ಯೇ - 'ಸ ಏಕಧಾ ಭವತಿ' (ಛಾಂ. ೭-೨೬-೨) ಇತ್ಯಾದಿ । 'ಸ ತತ್ರ ಪರ್ಯೇತಿ' (ಛಾಂ. ೮-೧೨-೩), 'ಸ ವಾ ಏಷ ಏತೇನ ದೈವೇನ ಚಕ್ಷುಷಾ ಮನಸೈತಾನ್ ಕಾಮಾನ್ ಪಶ್ಯನ್ ರಮತೇ' (ಛಾಂ. ೮-೧೨-೫).

### (ಭಾಷ್ಯಾರ್ಥ)

'ಕ್ಷರ,[2] ಆತ್ಮ - ಇವೆರಡನ್ನೂ ಒಬ್ಬನೇ ದೇವನು ಆಳುತ್ತಿರುತ್ತಾನೆ" ಎಂದು **ಶ್ವೇತಾಶ್ವತರದಲ್ಲಿದೆ. ಛಾಂದೋಗ್ಯದಲ್ಲಿ** (ಹೀಗಿದೆ) : 'ಅವನು ಒಂದೇ ಬಗೆಯಾಗಿರುತ್ತಾನೆ' ಎಂದು ಮುಂತಾಗಿರುತ್ತದೆ; ಅವನು ಅಲ್ಲಿ ಸುತ್ತಾಡುತ್ತಿರುತ್ತಾನೆ', 'ಆ ಈತನೇ ಈ ದೈವಚಕ್ಷುಸ್ಸಾದ ಮನಸ್ಸಿನಿಂದ, ಈ ಕಾಮುಗಳನ್ನು ಕಾಣುತ್ತಾ ರಮಿಸುತ್ತಿರುತ್ತಾನೆ'.

### (ಭಾಷ್ಯ) [3]

ಪರೋಽವಿಕೃತ ಏವಾತ್ಮಾ ಸ್ವಾತ್ಮನಾ[4] ಜೀವಃ ಇತಿ ಶ್ರುತಿಃ। 'ಸ ಏಷ ಇಹ ಪ್ರವಿಷ್ಟಃ' (ಬೃ. ೧-೪-೭) ಇತಿ ಬೃಹದಾರಣ್ಯಕಶ್ರುತಿಃ। 'ಆತ್ಮೇತ್ಯೇವೋಪಾಸೀತ' (ಬೃ.೧-೪-೭) ಇತಿ ಚ। 'ತದೇತದ್ಬ್ರಹ್ಮಾಪೂರ್ವಮ್' (ಬೃ.೨-೫-೧೯) ಇತ್ಯಾದಿ।

---

1. ಇದು ಯಾವ ಗ್ರಂಥವೆಂಬುದು ತಿಳಿಯಲಿಲ್ಲ.

2. ಕ್ಷರ(ಅಚೇತನ), ಆತ್ಮ(ಚೇತನ)-ಇವೆರಡನ್ನೂ ಈಶ್ವರನೊಬ್ಬನೇ ಆಳುತ್ತಿರುತ್ತಾನೆ ಎಂದರ್ಥ.

3. ಇಲ್ಲಿ ಭಾಷ್ಯವಾಕ್ಯಗಳು ಉದಾಹೃತವಾಗಿರುವದೇಕೆಂಬುದು ಗೊತ್ತಾಗುವಂತೆ ನಾವು ಭಾಗಭಾಗವಾಗಿ ವಿಂಗಡಿಸಿರುತ್ತೇವೆ.

4. 'ಸ್ವಾತ್ಮಾಯಂ' ಎಂಬ ಅಚ್ಚಿನಪಾಠವನ್ನು ಹೀಗೆ ತಿದ್ದಿಕೊಂಡಿದೇವೆ; 'ಶ್ರುತೇಃ' ಎಂಬುದನ್ನು 'ಶ್ರುತಿಃ' ಎಂದೂ ರೂಪಾಂತರಿಸಿಕೊಂಡಿರುತ್ತೇವೆ. ಇದರಿಂದ ಮುಂದೆ ಉದಾಹೃತವಾಗಿರುವವುಗಳು ಜೀವಪರಮಾತ್ಮೈಕತ್ವಕ್ಕೆ ಪ್ರಮಾಣವಾದ ಶ್ರುತಿವಚನಗಳೆಂದು ಸಂಗ್ರಹವಾಕ್ಯವಾಗುವದು. ಸೂ.ಭಾ. ೧-೪-೨೨ನ್ನು ನೋಡಿ.

'ನಾನ್ಯೋಽತೋಽಸ್ತಿ ದ್ರಷ್ಟಾ ..... ನಾನ್ಯೋಽತೋಽಸ್ತಿ ವಿಜ್ಞಾತಾ' (ಬೃ.೩-೭-೨೩), 'ಸ ವಾ ಏಷ ಮಹಾನಜ ಆತ್ಮಾ ಯೋಽಯಂ ವಿಜ್ಞಾನಮಯಃ' (ಬೃ. ೪-೪-೨೨) ಇತ್ಯಾದಿ। 'ಅಥ ಯೋಽನ್ಯಾಂ ದೇವತಾಮುಪಾಸ್ತೇ' (ಬೃ.೧-೪-೧೦), 'ಐತದಾತ್ಮ್ಯಮಿದಂ ಸರ್ವಮ್' (ಛಾಂ. ೬-೮-೭) - ಇತ್ಯಾದಿ ॥

## (ಭಾಷ್ಯಾರ್ಥ)

ಪರಮಾತ್ಮನು ಯಾವ ವಿಕಾರವೂ ಆಗದೆ ತನ್ನ ರೂಪದಿಂದಲೇ ಜೀವನು - ಎಂದು ಶ್ರುತಿ ; (ಹೇಗೆಂದರೆ) :- 'ಆ ಈತನು ಇಲ್ಲಿ ಒಳಹೊಕ್ಕಿರುತ್ತಾನೆ' ಎಂದು ಬೃಹದಾರಣ್ಯಕಶ್ರುತಿ. 'ಆತ್ಮನೆಂದೇ ಅರಿಯಬೇಕು', ಎಂದೂ (ಬೃ. ಶ್ರುತಿ), 'ಆ ಈ ಬ್ರಹ್ಮವು ಹಿಂದಿಲ್ಲದ್ದು.....' ಎಂದು ಮುಂತಾಗಿ (ಬೃ. ಶ್ರುತಿ), 'ಈತನಿಗಿಂತ ವ್ಯತಿರಿಕ್ತವಾದ ದ್ರಷ್ಟೃವಿಲ್ಲ, ಈತನಿಗಿಂತ ಬೇರೆಯಾದ ವಿಜ್ಞಾತೃವಿಲ್ಲ', 'ಈ ವಿಜ್ಞಾನಮಯನಿದಾನಲ್ಲ ಆ ಈ ಆತ್ಮನೇ ಮಹಾಂತನು, ಅಜನು', 'ಇನ್ನು ನಾನು ಬೇರೆ, (ಇದು ಬೇರೆ ಎಂದು) ಯಾವನು ಬೇರೆಯಾದ ದೇವತೆಯನ್ನು ಉಪಾಸನೆ ಮಾಡುತ್ತಿರುವನೋ .....', 'ಇದೆಲ್ಲಕ್ಕೂ ಇದೇ ಆತ್ಮನು, (ಅದೇ ಸತ್ಯವು, ಅದೇ ಆತ್ಮನು').

## (ಭಾಷ್ಯ)

ನಿಶ್ಚರನ್ತಿ ಯಥಾ ಲೋಹಪಿಣ್ಡಾತ್ತಪ್ತಾತ್ ಸ್ಫುಲಿಙ್ಗಕಾಃ।
ಸಕಾಶಾದಾತ್ಮನಸ್ತದ್ವತ್ ಪ್ರಭವನ್ತಿ ಜಗನ್ತಿ ಹಿ॥
(ಯಾಜ್ಞ. ಪ್ರಾ. ಅ. ಶ್ಲೋ. ೬೯)[1]

ಇತಿ **ಯೋಗಯಾಜ್ಞವಲ್ಕ್ಯೇ**। "ಅಜಃ ಶರೀರಗ್ರಹಣಾತ್ ಸ ಜಾತ ಇತಿ ಕೀರ್ತ್ಯತೇ" (?) ಇತಿ **ಬ್ರಾಹ್ಮೇ**॥

ಸರ್ಪವದ್ರಜ್ಜುಖಣ್ಡಸ್ತು ನಿಶಾಯಾಂ ವೇಶ್ಮಮಧ್ಯಗಃ।
ಏಕೋ ಹಿ ಚನ್ದ್ರೋ ದ್ವೌ ವ್ಯೋಮ್ನಿ ತಿಮಿರಾಹತಚಕ್ಷುಷಃ॥
ಆಭಾತಿ ಪರಮಾತ್ಮಾ ಚ ಸರ್ವೋಪಾಧಿಷು ಸಂಸ್ಥಿತಃ।
ನಿತ್ಯೋದಿತಃ ಸ್ವಯಂಜ್ಯೋತಿಃ ಸರ್ವಗಃ ಪುರುಷಃ ಪರಃ॥
ಅಹಙ್ಕಾರಾವಿವೇಕೇನ ಕರ್ತಾಽಹಮಿತಿ ಮನ್ಯತೇ॥
ಇತಿ॥

## (ಭಾಷ್ಯಾರ್ಥ)

"ಕಾದ ಕಬ್ಬಿಣದ ತುಂಡಿನಿಂದ ಕಿಡಿಗಳು ಹೇಗೆ ಹೊರಕ್ಕೆ ಸಿಡಿಯುತ್ತವೆಯೋ, ಅದರಂತೆಯೇ ಆತ್ಮನ ದೆಸೆಯಿಂದ ಜಗತ್ತುಗಳು ಉಂಟಾಗುತ್ತವೆಯಲ್ಲವೆ?" ಎಂದು **ಯೋಗಯಾಜ್ಞವಲ್ಕ್ಯದಲ್ಲಿದೆ.** 'ಜನ್ಮರಹಿತನಾದ ಆತನು ಶರೀರವನ್ನು

1. ಈ ಸಂಖ್ಯೆ ಮೈ॥ಪಾಠದಲ್ಲಿದೆ. ಪ್ರಾ. ಎಂದರೆ 'ಪ್ರಾಸ್ತಾವಿಕಾಧ್ಯಾಯ' ಎಂಬ ಅಭಿಪ್ರಾಯವಿರಬಹುದು.

ಪಡೆದುಕೊಳ್ಳುವದರಿಂದ ಹುಟ್ಟಿದನು ಎನಿಸಿಕೊಳ್ಳುತ್ತಾನೆ' (?) ಎಂದು **ಬ್ರಾಹ್ಮ (ಪುರಾಣದಲ್ಲಿದೆ).** 'ಮನೆಯಲ್ಲಿರುವ ಹಗ್ಗದ ತುಂಡು ಕತ್ತಲೆಯಲ್ಲಿ ಹಾವಿನಂತೆ ಕಾಣಿಸುತ್ತದೆ. ಒಬ್ಬ (ಚಂದ್ರನೇ) ಪರೆಯಿಂದ ಪೀಡಿತವಾದ ಕಣ್ಣುಳ್ಳವನಿಗೆ ಇಬ್ಬರು (ಚಂದ್ರ)ರಾಗಿರುತ್ತಾರಲ್ಲವೆ? (ಹಾಗೆಯೇ ನಿತ್ಯಸಿದ್ಧನೂ ಸ್ವಯಂಪ್ರಕಾಶನೂ ಸರ್ವವ್ಯಾಪಿಯೂ ಆಗಿರುವ ಪರಮಪುರುಷನೂ ಆದ ಪರಮಾತ್ಮನು ಎಲ್ಲಾ ಉಪಾಧಿಗಳಲ್ಲಿಯೂ ಇರುವಂತೆ ತೋರುತ್ತಿರುತ್ತಾನೆ). ಅಹಂಕಾರದಿಂದ ವಿಂಗಡಿಸಿ ಅರಿತುಕೊಳ್ಳದೆ ಇರುವದರಿಂದ 'ನಾನು ಕರ್ತನು' ಎಂದು ಅರಿತುಕೊಳ್ಳುತ್ತಾನೆ''(?) ಎಂದು (ವಚನವಿದೆ).

## (ಭಾಷ್ಯ)

'ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ, (ಬೃ.೪-೩-೨೧), ಇತಿ 'ಸತಾ ಸೋಮ್ಯ ತದಾ ಸಂಪನ್ನೋ ಭವತಿ' (ಛಾಂ. ೬-೮) ಇತಿ॥

ಏವಮ್

ಸ್ವಮಾಯಯಾ ಸ್ವಮಾತ್ಮಾನಂ ಮೋಹಯನ್ ದ್ವೈತಮಾಯಯಾ।
ಗುಣಾಪಹತಂ ಸ್ವಮಾತ್ಮಾನಂ ಲಭತೇ ಚ ಸ್ವಯಂ ಹರಿಃ॥

ತಥಾ - 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' (ಗೀ. ೧೩-೨), 'ಉತ್ಕ್ರಾಮನ್ತಂ ಸ್ಥಿತಂ ವಾಪಿ' (ಗೀ.೧೫-೧೦) - ಇತಿ । 'ಅಜ್ಞಾನೇನಾವೃತಂ ಜ್ಞಾನಮ್' (ಗೀ. ೫-೧೫), 'ಅವ್ಯಕ್ತಾದಿವಿಶೇಷಾನ್ತಮವಿದ್ಯಾಲಕ್ಷಣಂ ಸ್ಮೃತಮ್' (?), 'ಆಸೀದಿದಂ ತಮೋಭೂತಮ್' (ಮನು. ೧-೫), 'ವಾಚಾರಮ್ಭಣಮ್' (ಛಾಂ. ೬-೧-೪), 'ಯತ್ರ ಹಿ ದ್ವೈತಮಿವ ಭವತಿ ತದಿತರ ಇತರಂ ಪಶ್ಯತಿ - ಯತ್ರ ತ್ವಸ್ಯ ಸರ್ವಮಾತ್ಮೈವಾಭೂತ್ ತತ್ ಕೇನ ಕಂ ಪಶ್ಯೇತ್ ತತ್ ಕೇನ ಕಂ ಜಿಘ್ರೇತ್' (ಬೃ.೪-೫-೧೫), 'ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ। ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ' (ಈ. ೭)

## (ಭಾಷ್ಯಾರ್ಥ)

'ಹೀಗೆಯೇ ಈ ಪುರುಷನು ಪ್ರಾಜ್ಞನಾದ ಆತ್ಮನಿಂದ (ಆಲಿಂಗಿತನಾಗಿ ಇರುವದರಿಂದ ಹೊರಗನ್ನಾಗಲಿ ಒಳಗನ್ನಾಗಲಿ ಅರಿಯದೆ ಇರುತ್ತಾನೆ' ಎಂದೂ, 'ಅಪ್ಪ, ಆಗ (ಜೀವನು) ಸದ್ಬ್ರಹ್ಮದೊಡನೆ ಬೆರೆತವನಾಗಿರುತ್ತಾನೆ' ಎಂದೂ, ಹೀಗೆಯೇ 'ತನ್ನ ಮಾಯೆಯಿಂದ ತನ್ನ ಆತ್ಮನನ್ನು ದ್ವೈತಮಾಯೆಯಿಂದ ಮೋಹಗೊಳಿಸಿಕೊಳ್ಳುತ್ತಾ ಹರಿಯು ಗುಣಗಳಿಂದ ಕೂಡಿದ ತನ್ನ ಸ್ವರೂಪವನ್ನು ತಾನೇ ಪಡೆದುಕೊಳ್ಳುತ್ತಾನೆ' (?), ಎಂದೂ, 'ಮತ್ತು ಕ್ಷೇತ್ರಜ್ಞನನ್ನು ನಾನೆಂದೇ ತಿಳಿ' '(ಶರೀರವನ್ನು),

ಬಿಟ್ಟುಹೋಗುತ್ತಿರುವ (ಮತ್ತು ಶರೀರದಲ್ಲಿ) ಇರುತ್ತಿರುವ ..... ಈ ಜೀವಾತ್ಮನನ್ನು ಮೂಢರು ಅರಿಯುರು','ಅಜ್ಞಾನದಿಂದ ಜ್ಞಾನವು ಮುಚ್ಚಿಹೋಗಿರುತ್ತದೆ. (ಆದ್ದರಿಂದ) ಜೀವರು ಮೋಹಿತರಾಗಿರುತ್ತಾರೆ', 'ಅವ್ಯಕ್ತದಿಂದ ಹಿಡಿದು ವಿಶೇಷಗಳವರೆಗೆ ಅವಿದ್ಯಾಕಲ್ಪಿತವೆನಿಸಿರುತ್ತದೆ, (?)[1], 'ಇದೆಲ್ಲವೂ ತಮೋಮಯವಾಗಿತ್ತು', 'ಕಾರ್ಯವು ಬರಿಯ ವಾಕ್ಕಿನಿಂದ ಆದದ್ದು', 'ಎಲ್ಲಿ ದ್ವೈತದಂತೆ ಇರುವದೋ ಅಲ್ಲಿ ಒಬ್ಬನು ಇನ್ನೊಬ್ಬನನ್ನು ಕಾಣುತ್ತಾನೆ ..... ಎಲ್ಲಿ ಇವನಿಗೆ ಎಲ್ಲವೂ ಆತ್ಮನೇ ಆಯಿತೋ ಅಲ್ಲಿ ಏತರಿಂದ ಏನನ್ನು ಕಂಡಾನು, ಅಲ್ಲಿ ಏತರಿಂದ ಏನನ್ನು ಮೂಸಿಯಾನು......', 'ಯಾವ ಅವಸ್ಥೆಯಲ್ಲಿ ಅರಿತಾತನಿಗೆ ಎಲ್ಲವೂ ಆತ್ಮನೇ ಆಗಿರುವದೋ, ಅಲ್ಲಿ ಏಕತ್ವವನ್ನು ಕಂಡುಕೊಂಡಿರುವ ಅವನಿಗೆ ಯಾವ ಮೋಹ, ಯಾವ ಶೋಕ?'

## (ಭಾಷ್ಯ)

'ಯತ್ರ ನಾನ್ಯತ್ ಪಶ್ಯತಿ ...... ನಾನ್ಯದ್ ವಿಜಾನಾತಿ' (ಛಾಂ. ೭-೨೪-೧), 'ಭೇದೋಽಯಮಜ್ಞಾನನಿಬನ್ಧನಃ'(?), 'ನೇಹ ನಾನಾಸ್ತಿ ಕಿಞ್ಚನ' (ಕಾ.೪-೧೧), 'ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ' (ಕಾ.೪-೧೧). 'ವಿಶ್ವತಶ್ಚಕ್ಷುಃ' (ಶ್ವೇ.೩-೩), 'ಯೋ ಯೋನಿಮಧಿತಿಷ್ಠತ್ಯೇಕೋ ವಿಶ್ವಾನಿ ರೂಪಾಣಿ ಯೋನೀಶ್ಚ ಸರ್ವಾಃ' (ಶ್ವೇ.೫-೨), 'ಅಜಾಮೇಕಾಂ ಲೋಹಿತಶುಕ್ಲಕೃಷ್ಣಾಂ[2] ಬಹ್ವೀಃ ಪ್ರಜಾಃ ಸೃಜಮಾನಾಂ ಸರೂಪಾಃ। ಅಜೋ ಹ್ಯೇಕೋ ಜುಷಮಾಣೋಽನುಶೇತೇ ಜಹಾತ್ಯೇನಾಂ ಭುಕ್ತಭೋಗಾಮಜೋಽನ್ಯಃ (ಶ್ವೇ.೪-೫), 'ದೇವಾತ್ಮಶಕ್ತಿಂ ವಿಧಧೇ' (?), 'ನ ತು ತದ್ದ್ವಿತೀಯಮಸ್ತಿ ತತೋಽನ್ಯದ್ವಿಭಕ್ತಂ ಯತ್ ಪಶ್ಯೇತ್' (ಬೃ. ೪-೩-೨೩), 'ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥೌ' (ಶ್ವೇ. ೩-೨) ಇತ್ಯಾದಿ॥

## (ಭಾಷ್ಯಾರ್ಥ)

'ಎಲ್ಲಿ ಮತ್ತೊಂದನ್ನು ಕಾಣುವದಿಲ್ಲವೋ ಮತ್ತೊಂದನ್ನು ಅರಿಯುವದಿಲ್ಲವೋ (ಅದು ಭೂಮವು)', 'ಈ ಭೇದಕ್ಕೆ ಅಜ್ಞಾನವೇ ಕಾರಣವು' (?), 'ಇಲ್ಲಿ ಸ್ವಲ್ಪವೂ ನಾನಾತ್ವವಿರುವದಿಲ್ಲ', 'ಇಲ್ಲಿ ನಾನಾತ್ವವಿರುವಂತೆ ಯಾವನು ಕಾಣುವನೋ ಅವನು ಸಾವಿನ ಮೇಲೆ ಸಾವನ್ನು ಪಡೆದುಕೊಳ್ಳುವನು', 'ಎಲ್ಲೆಲ್ಲಿಯೂ ಚಕ್ಷುರಿಂದ್ರಿಯವುಳ್ಳವನಾತನು', 'ಯಾವಾತನು ಒಂದೊಂದು ಯೋನಿಗೂ (ಕಾರಣಕ್ಕೂ) ಅಧಿಷ್ಠಾತೃವಾಗಿರುವನೋ ಎಲ್ಲಾ ರೂಪಗಳಿಗೂ ಸರ್ವಕಾರಣಗಳಿಗೂ

1. ಈ ಭಾಷ್ಯಭಾಗದಲ್ಲಿ ಉದಾಹೃತವಾಗಿರುವ ಕೆಲವು ವಾಕ್ಯಗಳಿಗೆ ಮೂಲವು ಸಿಕ್ಕಿಲ್ಲ. ಮತ್ತೆ ಕೆಲವು ಪದಗಳಿಗೆ ನಿಜವಾದ ಅರ್ಥವು ಗೊತ್ತಾಗಿಲ್ಲ(?) ಹೀಗೆ ಪ್ರಶ್ನೆ ಚಿಹ್ನೆಯನ್ನು ಹಾಕಿ ಅಕ್ಷರಾರ್ಥವನ್ನು ಮಾತ್ರ ಬರೆದಿದೆ.

2. ವಾ॥ಮೈ॥ಪಾಠಗಳಲ್ಲಿ 'ಬಹ್ವೀಃ' ಎಂಬಲ್ಲಿಂದ ಮುಂದಿನ ಮಂತ್ರಭಾಗವು ಇಲ್ಲ. ಆದರೆ 'ಅಜೋ ಹ್ಯೇಕೋ ಜುಷಮಾಣೋಽನುಶೇತೇ' - ಎಂಬ ವಾಕ್ಯವು ಮಾತ್ರ ಇದೆ.

ಅಧಿಷ್ಠಾತೃವಾಗಿರುವನೋ', 'ಕೆಂಪು, ಬಿಳುಪು, ಕಪ್ಪು - (ಹೀಗೆ ಮೂರು ಬಣ್ಣಗಳುಳ್ಳ) ತನ್ನ ರೂಪವೇ ಇರುವ ಬಹಳ ಮರಿಗಳನ್ನು ಹಡೆಯುತ್ತಿರುವ ಒಂದು ಆಡನ್ನು ಒಂದು ಮೇಕೆಯು ಅನುಸರಿಸಿಕೊಂಡು ಮಲಗಿರುತ್ತದೆ, (ಮತ್ತೊಬ್ಬನು) ಭೋಗಿಸಿರುವ (ಈ) ಆಡನ್ನು ಮತ್ತೊಂದು ಮೇಕೆಯು ಬಿಟ್ಟುಬಿಡುತ್ತದೆ', 'ದೇವಾತ್ಮಶಕ್ತಿಯನ್ನು ವಿಧಾನಮಾಡಿದನು' (?) 'ಅದಕ್ಕಿಂತ ವಿಂಗಡವಾಗಿರುವ ಮತ್ತೊಂದು ಇರುವದಿಲ್ಲ; (ಇದ್ದರಲ್ಲವೆ) ಅದನ್ನು ಕಂಡಾನು?' 'ಒಬ್ಬನೇ ರುದ್ರನು, ಎರಡನೆಯವನಿಗಾಗಿ ಅವನಿಲ್ಲ' - ಇತ್ಯಾದಿ.

### (ಭಾಷ್ಯ)

ಮನೋದೃಶ್ಯಮಿದಂ ದ್ವೈತಂ ಯತ್ಕಿಞ್ಚಿತ್ ಸಚರಾಚರಮ್।
ಮನಸೋ ಹ್ಯಮನೀಭಾವೇ ದ್ವೈತಂ ನೈವೋಪಲಭ್ಯತೇ॥ (ಗೌ.ಕಾ.೩-೩೧)

ಪ್ರಪಞ್ಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ।
ಮಾಯಾಮಾತ್ರಮಿದಂ ದ್ವೈತಮದ್ವೈತಂ ಪರಮಾರ್ಥತಃ॥ (ಗೌ.ಕಾ.೧-೧೭)

ಯಥಾ ಸ್ವಪ್ನೇ ದ್ವಯಾಭಾಸಂ ಸ್ಪನ್ದತೇ ಮಾಯಯಾ ಮನಃ।
ತಥಾ ಜಾಗ್ರದ್ದ್ವಯಾಭಾಸಂ ಸ್ಪನ್ದತೇ ಮಾಯಯಾ ಮನಃ॥ (ಗೌ.ಕಾ.೩-೨೯)
- ಇತ್ಯಾದಿ ಗೌಡಪಾದೇ॥

### (ಭಾಷ್ಯಾರ್ಥ)

'ಈ ಸ್ಥಾವರಜಂಗಮಾತ್ಮಕವಾದ ದ್ವೈತವೆಲ್ಲವೂ ಮನಸ್ಸಿಗೆ ಗೋಚರವಾಗಿರತಕ್ಕದ್ದೇ; ಏಕೆಂದರೆ ಮನಸ್ಸು ಅಮನಸ್ಸಾದರೆ ದ್ವೈತವು ಕಾಣುವದೇ ಇಲ್ಲ', 'ಪ್ರಪಂಚವು (ನಿಜವಾಗಿ) ಇದ್ದಿದ್ದರೆ (ಅದು) ನಿವೃತ್ತವಾಗಬೇಕಾಗಿತ್ತು; ಇದಕ್ಕೆ ಸಂಶಯವಿಲ್ಲ. ಆದರೆ ಈ ದ್ವೈತವು ಮಾಯಾಮಾತ್ರವು, ನಿಜವಾಗಿ ಅದ್ವೈತವೇ (ಇದೆ)', 'ಹೇಗೆ ಕನಸಿನಲ್ಲಿ ಮನಸ್ಸು ಮಾಯೆಯಿಂದ (ಗ್ರಾಹ್ಯಗ್ರಾಹಕರೂಪ) ದ್ವಯದಂತೆ ಅಲುಗಾಡುತ್ತಿರುವದೋ, ಹಾಗೆಯೇ ಎಚ್ಚರದಲ್ಲಿಯೂ ಮನಸ್ಸು **(ಗ್ರಾಹ್ಯ ಗ್ರಾಹಕರೂಪ)**ದ್ವಯದಂತೆ ಮಾಯೆಯಿಂದ ಅಲುಗಾಡುತ್ತಿರುವದು' - ಎಂದು **ಗೌಡಪಾದ**(ಗ್ರಂಥದಲ್ಲಿದೆ).[1]

### (ಭಾಷ್ಯ)

ತರ್ಕೇಣಾಪಿ ಪ್ರಪಞ್ಚಸ್ಯ ಮನೋಮಾತ್ರತ್ವಮಿಷ್ಯತಾಮ್।
ದೃಶ್ಯತ್ವಾತ್ ಸರ್ವಭೂತಾನಾಂ ಸ್ವಪ್ನಾದಿವಿಷಯೋ ಯಥಾ ॥ (?)

'ದ್ವಿತೀಯಾದ್ವೈ ಭಯಂ ಭವತಿ' (ಬೃ.೧-೪-೨), 'ಜ್ಞಾತೇ ತ್ವಾತ್ಮನಿ ನಾಸ್ತ್ಯೇತತ್ ಕಾರ್ಯಕಾರಣತಾತ್ಮನಃ'(?), 'ಏಕೋ ದೇವಃ ಸರ್ವಭೂತೇಷು ಗೂಢಃ' (ಶ್ವೇ.೬-೧೧), 'ಅಸಙ್ಗೋ ಹ್ಯಯಂ ಪುರುಷಃ' (ಬೃ. ೪-೩-೧೫) - ಇತಿ ಚ॥

1. ಗೌಡಪಾದರ ಹೆಸರನ್ನೆತ್ತಿ ಶಂಕರಭಗವತ್ಪಾದರು ಕಾರಿಕೆಯ ವಾಕ್ಯಗಳನ್ನು ಉದಾಹರಿಸುವ ಪದ್ಧತಿಯಿಲ್ಲ.

(ಭಾಷ್ಯಾರ್ಥ)

'ತರ್ಕದಿಂದಲೂ ದ್ವೈತವು ಮನೋಮಾತ್ರವೆಂದು ತಿಳಿಯಬೇಕು. ಎಲ್ಲಾ ಪ್ರಾಣಿಗಳಿಗೂ ಕನಸೇ ಮುಂತಾದ (ಅವಸ್ಥೆಗಳಲ್ಲಿರುವ) ವಿಷಯಗಳಂತೆ (ಅದು) ದೃಶ್ಯವಾಗಿರುವದರಿಂದ' (?), 'ಎರಡನೆಯದರಿಂದಲ್ಲವೆ, ಅಂಜಿಕೆಯಾಗುವದು', 'ಆದರೆ ಆತ್ಮನನ್ನು ಅರಿತುಕೊಂಡರೆ, ಆತ್ಮನಲ್ಲಿ ಈ ಕಾರ್ಯಕಾರಣತ್ವವೆಂಬುದು ಇರುವದಿಲ್ಲ'(?) 'ಒಬ್ಬ ದೇವನೇ ಸರ್ವಭೂತಗಳಲ್ಲಿಯೂ ಹುದುಗಿಕೊಂಡಿರುವನು', 'ಈ ಪುರುಷನು ಅಸಂಗನಲ್ಲವೆ?' ಎಂದೂ (ಇದೆ).

(ಭಾಷ್ಯ)

ವಿಸ್ತಾರಃ ಸರ್ವಭೂತಸ್ಯ ವಿಷ್ಣೋಃ ಸರ್ವಮಿದಂ ಜಗತ್।
ದ್ರಷ್ಟವ್ಯಮಾತ್ಮವತ್ತಸ್ಮಾದಭೇದೇನ ವಿಚಕ್ಷಣೈಃ॥ (ವಿ.ಪು.೧-೧೭-೮೪)
ಸರ್ವತ್ರ ದೈತ್ಯಾಃ ಸಮತಾಮುಪೇತ ಸಮತ್ವಮಾರಾಧನಮಚ್ಯುತಸ್ಯ॥
(ವಿ.ಪು.೧-೧೭-೯೦)
ಸರ್ವಭೂತಾತ್ಮಕೇ ತಾತ ಜಗನ್ನಾಥೇ ಜಗನ್ಮಯೇ।
ಪರಮಾತ್ಮನಿ ಗೋವಿನ್ದೇ ಮಿತ್ರಾಮಿತ್ರಕಥಾ ಕುತಃ॥ (ವಿ.ಪು.೧-೧೯-೩೭)
ಇತಿ ವಿಷ್ಣು ಪುರಾಣೇ -

(ಭಾಷ್ಯಾರ್ಥ)

'ಈ ಜಗತ್ತೆಲ್ಲವೂ ಸರ್ವವೂ ಆಗಿರುವ ವಿಷ್ಣುವಿನ ವಿಸ್ತಾರವೇ, ಆದ್ದರಿಂದ ಜಾಣನಾದವನು ತನ್ನಂತೆಯೇ ಎಲ್ಲವೂ - ಎಂದು ಅಭೇಧರೂಪದಿಂದಲೇ ಕಾಣಬೇಕು', 'ಎಲೈ ಅಸುರಬಾಲಕರೆ, ಎಲ್ಲೆಲ್ಲೂ ಸಮಭಾವವನ್ನು ಕಾಣಿರಿ; (ಈ) ಸಮ (ದರ್ಶನ) ವೇ ವಿಷ್ಣುವಿನ ಪೂಜೆಯು' ತಂದೆಯೆ, ಜಗನ್ಮಯನೂ, ಜಗನ್ನಾಥನೂ ಆದ ಸರ್ವಭೂತಾತ್ಮಕನಾಗಿರುವ ಗೋವಿಂದಪರಮಾತ್ಮನಲ್ಲಿ ಮಿತ್ರನು, ಅಮಿತ್ರನು - ಎಂಬ ಮಾತು ಎಲ್ಲಿಂದ (ಬಂದೀತು)?' - ಎಂದು (ವಿಷ್ಣುಪುರಾಣದಲ್ಲಿದೆ)

(ಭಾಷ್ಯ)

'ತತ್ತ್ವಮಸಿ' (ಛಾಂ. ೬-೮-೭), 'ಅಹಂ ಬ್ರಹ್ಮಾಸ್ಮಿ' (ಬೃ.೧-೪-೧೦), 'ಇದಂ ಸರ್ವಂ ಯದಯಮಾತ್ಮಾ' (ಬೃ.೨-೪-೬), 'ಅಯಮಾತ್ಮಾ ಬ್ರಹ್ಮ', (ಬೃ.೨-೫-೧೯), 'ತರತಿ ಶೋಕಮಾತ್ಮವಿತ್' (೭-೧-೩), 'ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ' (ಈ.೭) - ಇತ್ಯಾದಿ ಶ್ರುತಿಸ್ಮೃತೀತಿಹಾಸಪುರಾಣಲೌಕಿಕೇಭ್ಯಶ್ಚ॥

(ಭಾಷ್ಯಾರ್ಥ)

'ಆ (ಸದ್ಬ್ರಹ್ಮವೇ) ನೀನಾಗಿರುತ್ತೀಯೆ', 'ನಾನು ಬ್ರಹ್ಮನಾಗಿರುತ್ತೇನೆ' 'ಇದೆಲ್ಲವೂ ಈ ಆತ್ಮನೆಂಬುದೇ', 'ಈ ಆತ್ಮನು ಬ್ರಹ್ಮವು', 'ಆತ್ಮನನ್ನು ಅರಿತುಕೊಂಡವನು ಶೋಕವನ್ನು ದಾಟುವನು', 'ಏಕತ್ವವನ್ನು ಕಂಡುಕೊಂಡವನಿಗೆ ಆಗ ಯಾವ

ಮೋಹವು? ಯಾವ ಶೋಕವು?' - ಇವೇ ಮುಂತಾದ ಶ್ರುತಿಸ್ಮೃತೀತಿಹಾಸಪುರಾಣ (ವಚನ)ಗಳಿಂದ (ಇದು ಸಿದ್ಧವಾಗುತ್ತದೆ).

(ಭಾಷ್ಯ)

ಸಿದ್ಧೇಽರ್ಥೇಽಪಿ ವೇದಸ್ಯ ಪ್ರಾಮಾಣ್ಯಮೇಷ್ಟವ್ಯಮ್ -
ಸ್ವಪಕ್ಷಸಾಧನೈರಕಾರ್ಯಮರ್ಥಜಾತಮಾಹ ಚೇತ್।
ತಥಾ ಪರೋಽಪಿ ವೇದ ಚೇತ್ ಶ್ರುತೇಃ ಪರಾತ್ಮದೃಙ್ ನ ಕಿಮ್॥(?)
ಇತ್ಯಭಿಯುಕ್ತೈರುಕ್ತಮ್।

(ಭಾಷ್ಯಾರ್ಥ)

**ಸಿದ್ಧವಾಗಿರುವ**[1] ವಸ್ತುವಿನಲ್ಲಿಯೂ ವೇದಕ್ಕೆ ಪ್ರಾಮಾಣ್ಯವಿದೆಯೆಂದು ಒಪ್ಪಬೇಕು; 'ತನ್ನ ಪಕ್ಷವನ್ನು ಸಾಧಿಸುವ (ಹೇತ್ವಾದಿ)ಗಳಿಂದ ಕಾರ್ಯವಲ್ಲದ್ದನ್ನು ಹೇಳುತ್ತಾನಾದರೆ, ಹಾಗೆಯೇ ಮತ್ತೊಬ್ಬನೂ ತಿಳಿಯುತ್ತಾನೆಂದರೆ, ಶ್ರುತಿಯಿಂದ ಪರಮಾತ್ಮಜ್ಞಾನವು ಏಕೆ (ಆಗು)ವದಿಲ್ಲ?' ಎಂದು ಬಲ್ಲವರು ಹೇಳಿರುತ್ತಾರೆ.[2]

(ಭಾಷ್ಯ)

ಅನ್ಯಾನ್ವಿತಸ್ವಾರ್ಥೇ ಪದಾನಾಂ ಸಾಮರ್ಥ್ಯಂ, ನ ಕಾರ್ಯಾನ್ವಿತಸ್ವಾರ್ಥೇ; ತಥಾ ಸತಿ ಅರ್ಥವಾದಾನಾಮನನ್ವಯಪ್ರಸಙ್ಗಾತ್, ಅನ್ವಯಬುದ್ಧೇಃ ಸ್ತುತಿತ್ವಾತ್। ನ ಹಿ ಭವತಿ 'ವಾಯುವ್ಯಂ ಶ್ವೇತಮಾಲಭೇತ ಭೂತಿಕಾಮೋ ವಾಯುರ್ವೈ ಕ್ಷೇಪಿಷ್ಠಾ ದೇವತಾ' (ತೈ.ಸಂ ೨-೧-೧) ಇತಿ॥

(ಭಾಷ್ಯಾರ್ಥ)

ಮತ್ತೊಂದರೊಡನೆ ಸಂಬದ್ಧವಾಗಿರುವ ತಮ್ಮ ಅರ್ಥದಲ್ಲಿಯೇ ಪದಾರ್ಥಗಳಿಗೆ ಸಾಮರ್ಥ್ಯವಿರುವದೇ ಹೊರತು, ಕಾರ್ಯಕ್ಕೆ ಸಂಬಂಧಪಟ್ಟ ತಮ್ಮ ಅರ್ಥವನ್ನು ತಿಳಿಸುವದರಲ್ಲಿಯೇ (ಸಾಮರ್ಥ್ಯ)ವೆಂಬುದಿಲ್ಲ. ಏಕೆಂದರೆ ಹಾಗಿದ್ದರೆ, ಅರ್ಥವಾದಗಳಿಗೆ ಅನ್ವಯವೇ ಇಲ್ಲವೆಂದಾದೀತು. ಏಕೆಂದರೆ ಅನ್ವಯಬುದ್ಧಿಯು ಸ್ತುತಿಯಾಗಿರುತ್ತದೆ. 'ಭೂತಿಕಾಮನಾದವನು ವಾಯುವಿಗಾಗಿ ಬಿಳಿಯ ಪಶುವನ್ನು ಬಲಿಕೊಡಬೇಕು; ವಾಯುವು ಕ್ಷಿಪ್ರತಮವಾದ ದೇವತೆಯಷ್ಟೆ' ಎಂದಾಗಲಾರದಷ್ಟೆ?[3]

---

1. ಆಚಾರ್ಯರ ಸೂತ್ರಭಾಷ್ಯದಲ್ಲಿ 'ಭೂತವಸ್ತು'ವೆಂಬ ಶಬ್ದವೇ ಇದೆ; ವ್ಯಾಖ್ಯಾನಗಳಲ್ಲಿ 'ಸಿದ್ಧ' ಎಂಬ ಶಬ್ದವನ್ನು ಬಳಸುವದು ಪ್ರಚುರವಾಗಿರುತ್ತದೆ.

2. ಇದು ಯಾವ ವಚನವೆಂದು ಗೊತ್ತಾಗಲಿಲ್ಲ; ಇಂಥ ವಚನವನ್ನು ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ ಉದಾಹರಿಸಿಲ್ಲ.

3. ಇಲ್ಲಿ ಬರೆದಿರುವ ಭಾಗದ ಸರಣಿಯ ವಾದವು ವ್ಯಾಖ್ಯಾನಗಳಲ್ಲಿ ಸಿಕ್ಕುತ್ತದೆ. ಪ್ರಸ್ಥಾನತ್ರಯಭಾಷ್ಯದಲ್ಲಿ ಸಿಕ್ಕುವದಿಲ್ಲ. ಅರ್ಥವಾದವು ಸ್ತುತಿಯನ್ನು ವಿಧಿಯೊಡನೆ ಹೇಳುತ್ತದೆಯೇ ಹೊರತು ಕಾರ್ಯವನ್ನು ಹೇಳುವದಿಲ್ಲ. ಕಾರ್ಯಾನ್ವಿತವಾಗಿರುವ ಸ್ವಾರ್ಥವನ್ನೇ ಪದಗಳು ಹೇಳುವವು - ಎಂಬ ಪಕ್ಷದಲ್ಲಿ ಈ ವಾಕ್ಯಕ್ಕೆ ಅನ್ವಯವೇ ಆಗಬಾರದಾಗಿತ್ತು ಎಂದರ್ಥ. ಕ್ಷಿಪ್ರಗತಿಯುಳ್ಳ ದೇವತೆಯಾದ ವಾಯುವಿಗೆ ಪಶುವನ್ನು ಬಲಿಕೊಟ್ಟ ಯಾಗದಿಂದ ಬೇಗನೆ ಐಶ್ವರ್ಯಪ್ರಾಪ್ತಿಯಾಗುವುದು - ಎಂದು ಇಲ್ಲಿರುವ ಅರ್ಥವಾದದ ಅಭಿಪ್ರಾಯ.

## (ಭಾಷ್ಯ)

ರಾಗಸ್ಯೈವ ಪ್ರವರ್ತಕತ್ವಮ್, ನ ನಿಯೋಗಸ್ಯ। ತಥಾ ಚ ಶ್ರುತಿಃ - 'ಅಥೋ ಖಲ್ವಾಹುಃ ಕಾಮಮಯ ಏವಾಯಂ ಪುರುಷಃ ಇತಿ ಸ ಯಥಾಕಾಮೋ ಭವತಿ ತತ್ಕ್ರತುರ್ಭವತಿ ಯತ್ಕ್ರತುರ್ಭವತಿ ತತ್ಕರ್ಮ ಕುರುತೇ ಯತ್ಕರ್ಮ ಕುರುತೇ ತದಭಿಸಂಪದ್ಯತೇ' (ಬೃ.೪-೪-೫) ಇತಿ। ತಥಾ ಚ ಸ್ಮೃತಿರಪಿ - 'ಅಕಾಮತಃ ಕ್ರಿಯಾ ಕಾಚಿದ್ದೃಶ್ಯತೇ ನೇಹ ಕಸ್ಯಚಿತ್। ಯದ್ಯದ್ಧಿ ಕುರುತೇ ಕರ್ಮ ತತ್ತತ್ಕಾಮಸ್ಯ ಚೇಷ್ಟಿತಮ್' (ಮನು.೨-೪) ಇತಿ। "ಕಾಮ ಏಷಃ ಕ್ರೋಧಃ ಏಷಃ" (ಗೀ. ೩-೩೭) ಇತಿ॥

## (ಭಾಷ್ಯಾರ್ಥ)

ರಾಗಕ್ಕೇ ಪ್ರವರ್ತಕತ್ವವಿದೆಯೇ ಹೊರತು "ನಿಯೋಗ"ಕ್ಕಲ್ಲ;[1] ಹಾಗೆಯೇ ಶ್ರುತಿ ಹೇಳುತ್ತಿದೆ. 'ಈ ಮನುಷ್ಯನು ಕಾಮಮಯನೇ ಎಂದು (ಹೇಳುತ್ತಾರೆ). ಅವನು ಎಂಥ ಕಾಮವುಳ್ಳವನಾಗುತ್ತಾನೋ ಅದಕ್ಕೆ ತಕ್ಕಂತೆ ನಿಶ್ಚಯವುಳ್ಳವನಾಗುತ್ತಾನೆ, ಎಂಥ ನಿಶ್ಚಯವುಳ್ಳವನಾಗುತ್ತಾನೋ ಅದಕ್ಕೆ ತಕ್ಕ ಕರ್ಮವನ್ನು ಮಾಡುತ್ತಾನೆ, ಯಾವ ಕರ್ಮವನ್ನು ಮಾಡುತ್ತಾನೋ ಅದನ್ನು ಪಡೆದುಕೊಳ್ಳುತ್ತಾನೆ, ಹಾಗೆಯೇ ಸ್ಮೃತಿಯೂ ಇದೆ : "ಕಾಮವಿಲ್ಲದೆ ಯಾವ ಕ್ರಿಯೆಯೂ ಈ ಲೋಕದಲ್ಲಿ (ಆಗುವದು) ಕಂಡುಬರುವದಿಲ್ಲ; ಯಾವಯಾವ ಕರ್ಮವನ್ನು ಮಾಡುತ್ತಾನೋ ಅದೆಲ್ಲವೂ ಕಾಮದ ವ್ಯಾಪಾರವೇ" ಎಂದೂ, "ಇದೇ ಕಾಮವು ಇದೇ ಕ್ರೋಧವು" ಎಂದೂ (ಪ್ರಮಾಣವಚನ).

## (ಭಾಷ್ಯ)

ಅನ್ಯಪರಾಣಾಮಪಿ ಮನ್ತ್ರಾರ್ಥವಾದಾನಾಂ ಪ್ರಾಮಾಣ್ಯಮಙ್ಗೀಕರ್ತವ್ಯಮ್। ತೇಷಾಮಪ್ರಾಮಾಣ್ಯಕಥನೇನ ಉರಗತ್ವಂ ಪ್ರಾಪ್ತವಾನ್ ನಹುಷಃ। ತತ್ಕಥಮ್-

ಋಷಯಸ್ತು ಪರಿಶ್ರಾನ್ತಾ ವಾಹ್ಯಮಾನಾ ದುರಾತ್ಮನಾ।
ದೇವರ್ಷಯೋ ಮಹಾಭಾಗಾಸ್ತಥಾ ಬ್ರಹ್ಮರ್ಷಯೋಽಮಲಾಃ॥

ಪಪ್ರಚ್ಛುಃ ಸಂಶಯಂ ತೇ ತು ನಹುಷಂ ಪಾಪಚೇತಸಮ್।
ಯ ಇಮೇ ಬ್ರಹ್ಮಣಾ ಪ್ರೋಕ್ತಾ ಮನ್ತ್ರಾ ವೈ ಪ್ರೋಕ್ಷಣೇ ಗವಾಮ್।

ಏತೇ ಪ್ರಮಾಣಂ ಭವತ ಉತಾಹೋ ನೇತಿ ವಾಸವ।
ನಹುಷೋ ನೇತಿ ತಾನಾಹ ಸಹಸಾ ಮೂಢಚೇತನಃ॥

ಋಷಯ ಊಚುಃ -

ಅಧರ್ಮೇ ಸಂಪ್ರವೃತ್ತಸ್ತ್ವಂ ಧರ್ಮಂ ಚ ವಿಜಿಘೃಕ್ಷಸಿ।
ಪ್ರಮಾಣಮೇತದಸ್ಮಾಕಂ ಪೂರ್ವೈಃ ಪ್ರೋಕ್ತಂ ಮಹರ್ಷಿಭಿಃ॥

---

1. ಈ ವಾದಶೈಲಿಯೂ ವ್ಯಾಖ್ಯಾನಪ್ರಸ್ಥಾನದ ಗ್ರಂಥಗಳಲ್ಲಿಯೇ ಪ್ರಚುರವಾಗಿದೆ.

ಅಗಸ್ತ್ಯ ಉವಾಚ -

ತತೋ ವಿವದಮಾನಃ ಸನ್ ಋಷಿಭಿಃ ಸಹ ಪಾರ್ಥಿವಃ।
ಅಥ ಮಾಮಸ್ಪೃಶನ್ಮೂರ್ಧ್ನಿ ಪಾದೇನಾಧರ್ಮಪೀಡಿತ॥

ತೇನಾಭೂದ್ಧತಚೇತಾಃ ಸನ್ ನಿಶ್ರೀಕಶ್ಚ ಶಚೀಪತೇ।
ತತಸ್ತಮಹಮುದ್ವಿಗ್ನಮವೋಚಂ ಭಯಪೀಡಿತಮ್॥

ಯಸ್ಮಾತ್ ಪೂರ್ವೈಃ ಕೃತಂ ಮಾರ್ಗಂ ಮಹರ್ಷಿಭಿರನುಷ್ಠಿತಮ್।
ಅದುಷ್ಟಂ ದೂಷಯಸಿ ವೈ ಯಚ್ಚ ಮೂರ್ಧ್ನಸ್ಪೃಶಃ ಪದಾ॥

ಯಚ್ಚಾಪಿ ತ್ವಮೃಷೀನ್ ಮೂಢ ಬ್ರಹ್ಮಕಲ್ಪಾನ್ ದುರಾಸದಾನ್।
ವಾಹಾನ್ ಕೃತ್ವಾ ವಾಹಯಸಿ ತೇನ ಸ್ವರ್ಗಾದ್ಧತಪ್ರಭಃ॥

ತ್ವಂ ಸ್ವಪಾಪಪರಿಭ್ರಷ್ಟಃ ಕ್ಷೀಣಪುಣ್ಯೋ ಮಹೀಪತೇ।
ದಶವರ್ಷಸಹಸ್ರಾಣಿ ಸರ್ಪರೂಪಧರೋ ಮಹೀಮ್॥

ವಿಚರಿಷ್ಯಸಿ ಶೀರ್ಣಶ್ಚ ಪುನಃ ಸ್ವರ್ಗಮವಾಪ್ಸ್ಯಸಿ।
- ಇತಿ ಶ್ರೀ ಮಹಾಭಾರತೇ ॥ (ಉದ್ಯೋಗ.೧೭)

(ಭಾಷ್ಯಾರ್ಥ)

**ಮತ್ತೊಂದು (ಅರ್ಥವನ್ನು) ಹೇಳುವದರಲ್ಲಿ ತಾತ್ಪರ್ಯವುಳ್ಳ ಮಂತ್ರಗಳಿಗೂ ಅರ್ಥವಾದಗಳಿಗೂ ಪ್ರಾಮಾಣ್ಯವಿದೆ - ಎಂದು ಒಪ್ಪಬೇಕು.** ಅದಕ್ಕೆ ಪ್ರಮಾಣವಿಲ್ಲವೆಂದು ಹೇಳಿದ್ದರಿಂದ **ನಹುಷನು** ಹಾವಿನ ಜನ್ಮವನ್ನು ಪಡೆದನು. ಅದು ಹೇಗೆಂದರೆ :-

"(ಆ) ದುರಾತ್ಮನಾದ (ನಹುಷನು) ಹೊರಿಸಿದ್ದರಿಂದ ಬಳಲಿದ ದೇವರ್ಷಿಗಳಾದರೋ, ಮಹಾಭಾಗರೂ, ಬ್ರಹ್ಮರ್ಷಿಗಳೂ ನಿರ್ಮಲಚಿತ್ತರೂ (ಆಗಿದ್ದರು). ಅವರು (ಒಂದು) ಸಂಶಯವನ್ನು (ಪರಿಹರಿಸಬೇಕೆಂದು) ಪಾಪಚಿತ್ತನಾದ ನಹುಷನನ್ನು ಕೇಳಿಕೊಂಡರು. 'ಇವು ಗೋಪ್ರೋಕ್ಷಣಕ್ಕಾಗಿ ವೇದದಲ್ಲಿ ಹೇಳಿರುವ ಮಂತ್ರಗಳು.[1] ಇವು ನಿನಗೆ ಪ್ರಮಾಣವೊ, ಅಲ್ಲವೊ? ಇಂದ್ರನೆ'. (ಹೀಗೆ ಕೇಳಿದ್ದಕ್ಕೆ) ಮೂಢಬುದ್ಧಿಯಾದ ನಹುಷನು ತಟ್ಟನೆ 'ಅಲ್ಲ!' ಎಂದುಬಿಟ್ಟನು.

(ಆಗ) ಋಷಿಗಳಿಂತೆಂದರು : "ನೀನು ಅಧರ್ಮದಲ್ಲಿ ಪ್ರವೃತ್ತನಾಗಿರುವೆ, ಧರ್ಮವನ್ನು ಬಿಡುವದಕ್ಕೆ ಉದ್ಯುಕ್ತನಾಗಿರುವೆ. ಹಿಂದಿನ ಮಹಾತ್ಮರು ಇದು ಪ್ರಮಾಣವೆಂದೇ ನಮಗೆ ಹೇಳಿರುತ್ತಾರೆ".

ಅಗಸ್ತ್ಯರಿಂತೆಂದರು : "ಆಗ ಋಷಿಗಳೊಡನೆ ವಿವಾದವನ್ನು ಮಾಡುತ್ತಾ ಆ ನಹುಷರಾಜನು, ಅಧರ್ಮದ ಫಲವಾಗಿ ನನ್ನನ್ನು ತಲೆಯ ಮೇಲೆ ಕಾಲಿನಿಂದ

1. ಈ ಮಂತ್ರಗಳ ತಾತ್ಪರ್ಯವನ್ನು ವ್ಯಾಖ್ಯಾನಕಾರರು ಎರಡುಬಗೆಯಾಗಿ ವರ್ಣಿಸಿರುತ್ತಾರೆ. ಗೋಗಳನ್ನು ಯಾಗದಲ್ಲಿ ಪಶುಗಳಾಗಿ ಉಪಯೋಗಿಸುವ ಮಂತ್ರಗಳನ್ನು ಕುರಿತ ಪ್ರಶ್ನೆಯಿದೆಂದು ಒಂದು ವ್ಯಾಖ್ಯಾನ, ಮಧುಪರ್ಕವಿಷಯದ ಸಂಜ್ಞೆಯಿದೆಂದು ಇನ್ನೊಂದು ವ್ಯಾಖ್ಯಾನ.

ಸ್ಪರ್ಶಮಾಡಿದನು. ಎಲೈ ಇಂದ್ರನೆ, ಇದರಿಂದ ಅವನು ಬುದ್ಧಿಹೀನನೂ ಶ್ರೀಹೀನನೂ ಆದನು. ಆಗ ಭಯದಿಂದ ಪೀಡಿತನೂ ಉದ್ವಿಗ್ನಚಿತ್ತನೂ ಆಗಿದ್ದ ಅವನನ್ನು ಕುರಿತು ಇಂತೆಂದರು : 'ಎಲಾ ಮೂಢ! ನೀನು ಹಿಂದಿನವರು ಅನುಸರಿಸಿದ ಮಹರ್ಷಿಗಳು ಅನುಷ್ಠಾನಮಾಡಿದ ದೋಷರಹಿತವಾದ (ಮಾರ್ಗ)ವನ್ನು ನಿಂದಿಸುತ್ತಿರುವೆಯಾದ್ದರಿಂದಲೂ ಕಾಲಿನಿಂದ ನನ್ನ ತಲೆಯನ್ನು ಮುಟ್ಟಿರುವದರಿಂದಲೂ ಮತ್ತು ಯಾರು ಸಿಕ್ಕುವದು ಕಷ್ಟವೋ ಅಂಥ ಬ್ರಹ್ಮಸಮಾನರಾದ ಋಷಿಗಳನ್ನು ವಾಹಕರನ್ನಾಗಿ ಮಾಡಿಕೊಂಡು ಪಲ್ಲಕ್ಕಿಯನ್ನು ಹೊರುವದಕ್ಕೆ ವಿನಿಯೋಗಿಸಿರುವದರಿಂದಲೂ, ನಿನ್ನ ಪಾಪದ ಫಲವಾಗಿ ಕೆಳಕ್ಕುರುಳಿ, ಪುಣ್ಯವನ್ನೆಲ್ಲ ಸವೆಯಿಸಿಕೊಂಡು, ಎಲೈ ರಾಜನೆ, ಹತ್ತುಸಾವಿರವರ್ಷಗಳ ಕಾಲ ಸರ್ಪರೂಪವನ್ನು ಧರಿಸಿ ಭೂಮಿಯ ಮೇಲೆ ಹರಿದಾಡುತ್ತಿರುವೆ, ಆ ಬಳಿಕ ಶಾಪಮುಕ್ತನಾಗಿ ಮತ್ತೆ ಸ್ವರ್ಗಕ್ಕೆ ಬರುವೆ!' ಹೀಗೆಂದು ಮಹಾಭಾರತದಲ್ಲಿ ಇದೆ.

## (ಭಾಷ್ಯ)

ಅತಃ ಶ್ರದ್ಧೇಯಮಾತ್ಮಜ್ಞಾನಮ್ -

ಅಶ್ರದ್ದಧಾನಾಃ ಪುರುಷಾ ಧರ್ಮಸ್ಯಾಸ್ಯ ಪರನ್ತಪ।
ಅಪ್ರಾಪ್ಯ ಮಾಂ ನಿವರ್ತನ್ತೇ ಮೃತ್ಯುಸಂಸಾರವರ್ತ್ಮನಿ॥ (ಗೀ.೯-೩)
ಇತಿ ಶ್ರೀ ಭಗವದ್ವಚನಾತ್॥

## (ಭಾಷ್ಯಾರ್ಥ)

ಆದ್ದರಿಂದ ಆತ್ಮಜ್ಞಾನದಲ್ಲಿ ಶ್ರದ್ಧೆಯನ್ನಿಡಬೇಕು :-

ಏಕೆಂದರೆ : 'ಎಲೈ ಶತ್ರುತಾಪನನೆ, ಈ ಧರ್ಮದಲ್ಲಿ ಶ್ರದ್ಧೆಯಿಲ್ಲದ ಮನುಷ್ಯರು ನನ್ನನ್ನು ಪಡೆಯದೇ ಮೃತ್ಯುಯುಕ್ತವಾದ ಸಂಸಾರಕ್ಕೆ ಹಿಂತಿರುಗುವರು' ಎಂದು ಭಗವಂತನ ವಚನವಿರುತ್ತದೆ.

## (ಭಾಷ್ಯ)

ಐತರೇಯಕೇ ಚ - 'ಏಷ ಪನ್ಥಾ ಏತತ್ಕರ್ಮೈತದ್ಬ್ರಹ್ಮೈತತ್ಸತ್ಯಂ ತಸ್ಮಾನ್ನ ಪ್ರಮಾದ್ಯೇತ್ತಾನ್ನಾತೀಯಾನ್ನ ಹ್ಯತ್ಯಾಯನ್ ಪೂರ್ವೇ ಯೇಽತ್ಯಾಯಂಸ್ತೇ ಪರಾಬಭೂವುಃ।' ತದುಕ್ತಮೃಷಿಣಾ - 'ಪ್ರಜಾ ಹ ತಿಸ್ರೋ ಅತ್ಯಾಯಮೀಯುರ್ನ್ಯನ್ಯಾ ಅರ್ಕಮಭಿತೋ ವಿವಿಶ್ರೇ। ಬೃಹದ್ಧ ತಸ್ಥೌ ಭುವನೇಷ್ವನ್ತಃ ಪವಮಾನೋ ಹರಿತ ಆ ವಿವೇಶ' (ಐ.ಆ.೨-೧-೧) ಇತಿ। 'ಪ್ರಜಾ ಹ ತಿಸ್ರೋ ಅತ್ಯಾಯಮೀಯುರಿತಿ ಯಾ ವೈ ತಾ ಇಮಾಃ ಪ್ರಜಾಃ ತಿಸ್ರೋಽತ್ಯಾಯಮಾಯಂಸ್ತಾನೀಮಾನಿ ವಯಾಂಸಿ ವಙ್ಗಾ ವಗಧಾಶ್ಚೇರಪಾದಾಃ' (ಐ.ಆ.೨-೧-೧) ಇತಿ ಶ್ರುತಮ್। ವಙ್ಗಾ ವನಗಾ ವೃಕ್ಷಾಃ। ವಗಧಾ ಓಷಧಯಶ್ಚ। ಇರಪಾದಾ ಉರಃಪಾದಾಃ ಸರ್ಪಾದಯಃ॥

ತಥಾ ಚ ಈಶಾವಾಸ್ಯೇ ಅವಿದ್ವನ್ನಿನ್ದಾರ್ಥೋ ಮನ್ತ್ರಃ -

ಅಸುರ್ಯಾ ನಾಮ ತೇ ಲೋಕಾ ಅನ್ಧೇನ ತಮಸಾಽಽವೃತಾಃ।
ತಾಗ್ಂಸ್ತೇ ಪ್ರೇತ್ಯಾಭಿಗಚ್ಛನ್ತಿ ಯೇ ಕೇ ಚಾತ್ಮಹನೋ ಜನಾಃ॥ (ಈ.೩)

ಇತಿ ॥ 'ಅಸನ್ನೇವ ಸ ಭವತಿ। ಅಸದ್ಬ್ರಹ್ಮೇತಿ ವೇದ ಚೇತ್' (ತೈ. ೨-೬) ಇತಿ ತೈತ್ತಿರೀಯಕೇ। ತಥಾ ಶಕುನ್ತಲೋಪಾಖ್ಯಾನೇ-

ಯೋಽನ್ಯಥಾ ಸನ್ತಮಾತ್ಮಾನಮ್ ಅನ್ಯಥಾ ಪ್ರತಿಪದ್ಯತೇ।
ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ॥

(ಮ.ಭಾ.ಆದಿ.೭೯-೨೭)

ಇತ್ಯಲಮತಿವಿಸ್ತರೇಣ॥

## (ಭಾಷ್ಯಾರ್ಥ)

**ಐತರೇಯಾರಣ್ಯಕ**ದಲ್ಲಿಯೂ 'ಇದೇ ಹಾದಿಯು, ಇದೇ ಕರ್ಮವು, ಇದೇ ಬ್ರಹ್ಮವು, ಇದೇ ಸತ್ಯವು. ಆದ್ದರಿಂದ ಎಚ್ಚರತಪ್ಪದೆ ಇರಬೇಕು. ಇದನ್ನು ಮೀರಬಾರದು, ಹಿಂದಿನವರು ಇದನ್ನು ಮೀರಿಹೋಗಲೇ ಇಲ್ಲ; ಯಾರು ಮೀರಿಹೋದರೋ ಅವರು ಪರಾಭೂತರಾದರು" ಎಂದು ಮಂತ್ರದಲ್ಲಿ ಹೇಳಿರುತ್ತದೆ. "ಮೂರು ಪ್ರಜೆಗಳು ಮೀರಿಹೋದರು; ಉಳಿದವರು ಅರ್ಕನನ್ನು ಎಲ್ಲೆಲ್ಲಿಯೂ ತತ್ಪರರಾಗಿದ್ದರು. ಲೋಕಗಳಲ್ಲಿ ಸೂರ್ಯನು ಮಹಾಂತನಾಗಿರುತ್ತಿದ್ದನು; ವಾಯುವು ದಿಕ್ಕುಗಳನ್ನು ವ್ಯಾಪಿಸಿಕೊಂಡಿದ್ದನು" (ಇದನ್ನು ಬ್ರಾಹ್ಮಣವು ವಿವರಿಸಿರುವದು ಹೇಗೆಂದರೆ:) 'ಮೂರು ಪ್ರಜೆಗಳು ಮೀರಿಹೋದರು' ಎಂಬುದರರ್ಥವೇನೆಂದರೆ, (ಇಲ್ಲಿ) ಮೀರಿಹೋದ ಆ ಮೂರು ಪ್ರಜೆಗಳು ಯಾವವೆಂದರೆ ಅವೇ ಇವು, ವಂಗಗಳು, ವಗಧಗಳು, ಇರಪಾದಗಳು - ಎಂದು (ಐತರೇಯಕದಲ್ಲಿ) ಹೇಳಿರುತ್ತದೆ. (ಇಲ್ಲಿ) ವಂಗಗಳೆಂದರೆ, ವನದಲ್ಲಿರುವ ವೃಕ್ಷಗಳು; ವಗಧಗಳು ಎಂದರೆ ಗಿಡಗಳು; ಇರಪಾದಗಳು ಎಂದರೆ ಎದೆಯ ಮೇಲೆ ಹರಿದಾಡಿಕೊಂಡು ಸಂಚರಿಸುವ ಸರ್ಪಾದಿಗಳು.[1]

ಆದ್ದರಿಂದಲೇ **ಈಶಾವಾಸ್ಯೋಪನಿಷತ್ತಿನಲ್ಲಿ** ಆತ್ಮಜ್ಞಾನಿಗಳಲ್ಲದವರನ್ನು ನಿಂದಿಸುವದಕ್ಕಾಗಿ (ಈ) ಮಂತ್ರವು ಬಂದಿರುತ್ತದೆ "ಯಾರು ಯಾರು ಆತ್ಮಹತ್ಯೆ ಮಾಡಿಕೊಳ್ಳುವರೋ[2] ಅವರು ಸತ್ತಬಳಿಕ 'ಅಸುರ್ಯ'ಗಳೆಂಬ ಅಂಧತಮಸ್ಸಿನಿಂದ ಮುಸುಕಿದ ಲೋಕಗಳಿರುವವಲ್ಲ ಅವುಗಳನ್ನೇ ಹೊಂದುವರು"- ಎಂದಿದೆ. 'ಬ್ರಹ್ಮವು ಇಲ್ಲವೆಂದು ತಿಳಿಯುತ್ತಾನಾದರೆ ಅವನು ತಾನೂ ಅಸತ್ (ಇಲ್ಲದವನೂ,

1. ಗಿಡಮರ, ಹರಿದಾಡುವ ಹಾವುಹಲ್ಲಿ - ಮುಂತಾದವುಗಳು ಧರ್ಮಜ್ಞಾನಗಳನ್ನು ಮೀರಿ ನಡೆದದ್ದರಿಂದ ಅತ್ಯಂತ ಕೀಳುಜನ್ಮವನ್ನು ಪಡೆದುಕೊಂಡರು. ಆದ್ದರಿಂದ ಧರ್ಮವನ್ನು ಮೀರಬಾರದು ಎಂದರ್ಥ.
2. ಆತ್ಮಜ್ಞಾನವಿಲ್ಲದವರು ಆತ್ಮಹತ್ಯೆ ಮಾಡಿಕೊಂಡ ದೋಷದಿಂದ 'ಅಸುರ'ರಿಗೆ ತಕ್ಕ ಅಜ್ಞಾನಯುಕ್ತವಾದ ಜನ್ಮಗಳನ್ನು ಹೊಂದುವರು - ಎಂದು ಮಂತ್ರದ ಅರ್ಥ.

ಪುರುಷಾರ್ಥಕ್ಕೆ ತಕ್ಕವನಲ್ಲದವನೂ) ಆಗುವನು' ಎಂದು **ತೈತ್ತಿರೀಯೋಪನಿಷತ್ತಿನಲ್ಲಿದೆ.** ಹೀಗೆಯೇ **ಶಕುಂತಲೋಪಾಖ್ಯಾನದಲ್ಲಿ** 'ಯಾವನು ಬೇರೆಯ ಪ್ರಕಾರದಲ್ಲಿರುವ ತನ್ನ ಆತ್ಮನನ್ನು ಬೇರೊಂದು ಪ್ರಕಾರದಿಂದ ಅರಿತುಕೊಳ್ಳುತ್ತಾನೋ - ಆತ್ಮನನ್ನು ಕದ್ದ ಆ ಚೋರನು ಮಾಡದೆ ಇರುವ ಪಾಪವು ಯಾವದು?'' ಎಂದಿದೆ.[1] ಇಲ್ಲಿ ಹೆಚ್ಚು ವಿಸ್ತರವಾಗಿ ಹೇಳುವದನ್ನು ಇಲ್ಲಿಗೆ ನಿಲ್ಲಿಸೋಣ.

## (ಭಾಷ್ಯ)

ಸಹಸ್ರನಾಮಜಪಸ್ಯಾನುರೂಪಂ ಮಾನಸಂ ಸ್ನಾನಮುಚ್ಯತೇ -

'ಯಸ್ಮಿನ್ ದೇವಾಶ್ಚ ವೇದಾಶ್ಚ ಪವಿತ್ರಂ ಕೃತ್ಸ್ನಮೇಕತಾಮ್ ।
ವ್ರಜೇತ್ತನ್ಮಾನಸಂ ತೀರ್ಥಂ ತತ್ರ ಸ್ನಾತ್ವಾಽಮೃತೋ ಭವೇತ್॥

ಜ್ಞಾನಹ್ರದೇ ಧ್ಯಾನಜಲೇ ರಾಗದ್ವೇಷಮಲಾಪಹೇ।
ಯಃ ಸ್ನಾತಿ ಮಾನಸೇ ತೀರ್ಥೇ ಸ ಯಾತಿ ಪರಮಾಂ ಗತಿಮ್॥

ಸರಸ್ವತೀ ರಜೋರೂಪಾ ತಮೋರೂಪಾ ಕಲಿನ್ದಜಾ।
ಸತ್ತ್ವರೂಪಾ ಚ ಗಙ್ಗಾ ಚ ನ ಯಾನ್ತಿ ಬ್ರಹ್ಮ ನಿರ್ಗುಣಮ್॥

ಆತ್ಮಾ ನದೀ ಸಂಯಮತೋಯಪೂರ್ಣಾ।
ಸತ್ಯಹ್ರದಾ ಶೀಲತಟಾ ದಯೋರ್ಮಿಃ॥
ತತ್ರಾಭಿಷೇಕಂ ಕುರು ಪಾಣ್ಡುಪುತ್ರ।
ನ ವಾರಿಣಾ ಶುಧ್ಯತಿ ಚಾನ್ತರಾತ್ಮಾ'॥

ಇತಿ ಮಹಾಭಾರತೇ। 'ಮಾನಸಂ ಸ್ನಾನಂ ವಿಷ್ಣುಚಿನ್ತನಮ್' ಇತಿ ವಿಷ್ಣುಸ್ಮೃತೌ। 'ಜಪ್ಯೇನೈವ ತು ಸಂಸಿದ್ಧ್ಯೇದ್ ಬ್ರಾಹ್ಮಣೋ ನಾತ್ರ ಸಂಶಯಃ। ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ'॥ (ಮನು. ೨-೮೭) ಇತಿ ಮಾನವಂ ವಚನಂ॥ ಜಪಸ್ತು ಸರ್ವಧರ್ಮೇಭ್ಯಃ ಪರಮೋ ಧರ್ಮ ಉಚ್ಯತೇ। ಅಹಿಂಸಯಾ ಚ ಭೂತಾನಾಂ ಜಪಯಜ್ಞಃ ಪ್ರವರ್ತತೇ॥ ಇತಿ ಮಹಾಭಾರತೇ । 'ಯಜ್ಞಾನಾಂ ಜಪಯಜ್ಞೋಽಸ್ಮಿ' (ಗೀ. ೧೦-೨೫) ಇತಿ ಶ್ರೀಗೀತಾಸು॥

"ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ।
ಯಃ ಸ್ಮರೇತ್ ಪುಣ್ಡರೀಕಾಕ್ಷಂ ಸ ಬಾಹ್ಯಾಭ್ಯನ್ತರಃ ಶುಚಿಃ"॥
ಇತ್ಯಾದಿ (ವಿ.ಧ.೧೦೯-೬೬[2] )

---

1. ಇದು ಭಾರತದಲ್ಲಿ ಶಕುಂತಳೆಯು ಭರತನಿಗೆ ತಾನು ಏನನ್ನೂ ಅರಿಯೆನೆಂದು ಹೇಳಿದ್ದಕ್ಕಾಗಿ ಆಡಿದ ಉತ್ತರವು. ಆದ್ದರಿಂದ ವಂಚಕತನವು ಸಲ್ಲದು ಎಂದು ಶ್ಲೋಕಕ್ಕೆ ಆಶಯವಾದರೂ ತಾನು ಇರುವ ಸ್ಥಿತಿಯನ್ನೇ ಇದ್ದಂತೆ ಆತ್ಮಸ್ವರೂಪವನ್ನು ಅರಿತುಕೊಂಡು ಅದರಂತೆ ವ್ಯವಹರಿಸಬೇಕೆಂದು ಹೇಗೋ ಅರ್ಥವನ್ನು ಕಲ್ಪಿಸಬೇಕು. ಮನು. ೪-೨೫೫ರಲ್ಲಿಯೂ ಇದೇ ಅರ್ಥದ ಶ್ಲೋಕವಿದೆ.
2. ನಮ್ಮಲ್ಲಿರುವ ವಿಷ್ಣುಧರ್ಮೋತ್ತರಪುರಾಣದಲ್ಲಿ ಈ ಸಂಖ್ಯೆಗಳನ್ನು ಪರಿಶೀಲಿಸಿದಾಗ ಈ ಶ್ಲೋಕವು ದೊರೆತಿಲ್ಲ.

(ಭಾಷ್ಯಾರ್ಥ)

**ಸಹಸ್ರನಾಮದ ಜಪಕ್ಕೆ ಅನುರೂಪವಾದ ಮಾನಸಸ್ನಾನವನ್ನು ಹೇಳುವೆವು:** "ಯಾವದರಲ್ಲಿ ದೇವತೆಗಳೂ ವೇದಗಳೂ ಪೂರ್ಣವಾಗಿ ಐಕ್ಯವನ್ನು ಹೊಂದಿರುತ್ತವೆಯೋ, ಅದೇ ಮಾನಸತೀರ್ಥವು. ಪವಿತ್ರವಾದ ಅದನ್ನು ಹೊಗಬೇಕು. ಅದರಲ್ಲಿ ಸ್ನಾನಮಾಡಿದರೆ ಅಮೃತನಾಗುವನು" (?) "ಮಾನಸತೀರ್ಥದಲ್ಲಿ ಜ್ಞಾನವೆಂಬ ಸರೋವರದಲ್ಲಿರುವ, ರಾಗದ್ವೇಷಗಳೆಂಬ ಮಲವನ್ನು ನೀಗಿಸುವ ಧ್ಯಾನವೆಂಬ ಜಲದಲ್ಲಿ ಯಾವನು ಸ್ನಾನಮಾಡುತ್ತಾನೋ ಅವನು ಪರಮಗತಿಯನ್ನೈದುವನು" (?),'ಸರಸ್ವತಿಯು ರಜೋಮಯಳು, ಯಮುನೆಯು ತಮೋಮಯಳು, ಮತ್ತು ಗಂಗೆಯು ಸತ್ತ್ವರೂಪವಾಗಿರುತ್ತದೆ. (ಆದ್ದರಿಂದ) ಅವು ನಿರ್ಗುಣಬ್ರಹ್ಮವನ್ನು ಸೇರಲಾರವು' (?); ಎಲೈ ಪಾಂಡುಪುತ್ರನೆ, **ಆತ್ಮನೇ** ನದಿ, ಅದು ಸಂಯಮವೆಂಬ ನೀರಿನಿಂದ ತುಂಬಿರುತ್ತದೆ. **ಸತ್ಯವೆಂಬುದು** ಅದರಲ್ಲಿರುವ ಹ್ರದವು (ಜಲಾಶಯವು); **ಶೀಲವೇ** ಅದಕ್ಕೆ ದಡ, **ದಯೆ** ಎಂಬ ಹೆದ್ದೆರಗಳು. ಅದರಲ್ಲಿ ಸ್ನಾನವನ್ನು ಮಾಡು. **ಅಂತಃಕರಣವು** ನೀರಿನಿಂದ ಶುದ್ಧವಾಗದು' (?) - ಎಂದು **ಮಹಾಭಾರತದಲ್ಲಿದೆ.**[1] ಮಾನಸಸ್ನಾನವೆಂದರೆ ವಿಷ್ಣುಚಿಂತನೆ - ಎಂದು ವಿಷ್ಣುಸ್ಮೃತಿ (?).

"ಜಪ (ಮಾತ್ರ)ದಿಂದಲೇ ಬ್ರಾಹ್ಮಣನು ಸಂಸಿದ್ಧಿಯನ್ನು ಹೊಂದುವನು, ಇದಕ್ಕೆ ಸಂಶಯವಿಲ್ಲ, ಮತ್ತೊಂದನ್ನು ಮಾಡಲಿ, ಮಾಡದೆ ಇರಲಿ, ಮೈತ್ರನಾದವನು[2] ಬ್ರಾಹ್ಮಣನೆನಿಸುತ್ತಾನೆ" ಎಂದು **ಮನುವಚನ.** "ಜಪವಾದರೊ, ಎಲ್ಲಾ ಧರ್ಮಗಳಿಗಿಂತಲೂ ಪರಮಧರ್ಮವೆನಿಸಿರುತ್ತದೆ. (ಏಕೆಂದರೆ) ಪ್ರಾಣಿಗಳ ಹಿಂಸೆಯಿಲ್ಲದೆಯೇ ಜಪಯಜ್ಞವು ಹೊರಟಿರುತ್ತದೆ"(?), "ಯಜ್ಞಗಳೊಳಗೆ ಜಪಯಜ್ಞವಾಗಿರುವೆನು" ಎಂದು **ಶ್ರೀಗೀತೆಗಳಲ್ಲಿ** (ಹೇಳಿದೆ). "ಅಶುದ್ಧನಾಗಿರಲಿ, ಪವಿತ್ರನಾಗಿರಲಿ, ಯಾವ ಅವಸ್ಥೆಯನ್ನೇ ಹೊಂದಿರಲಿ, ಕಮಲನೇತ್ರನಾದ ವಿಷ್ಣುವನ್ನು ಯಾವನು ಸ್ಮರಿಸುತ್ತಾನೋ, ಅವನು ಹೊರಗೂ ಒಳಗೂ ಶುಚಿ" ಎಂದು ಮುಂತಾಗಿ ಸ್ಮೃತಿಯಿದೆ.

(ಮೂಲಮ್)

**ಯತಃ ಸರ್ವಾಣಿ ಭೂತಾನಿ ಭವನ್ತ್ಯಾದಿಯುಗಾಗಮೇ।**
**ಯಸ್ಮಿಂಶ್ಚ ಪ್ರಲಯಂ ಯಾನ್ತಿ ಪುನರೇವ ಯುಗಕ್ಷಯೇ ॥೧೧॥**

---

1. ಈ ಶ್ಲೋಕಗಳು ಮಹಾಭಾರತದಲ್ಲಿ ಎಲ್ಲಿವೆ? - ಎಂಬುದು ವ್ಯಾಖ್ಯಾನದಿಂದಲೂ ಗೊತ್ತಾಗಿಲ್ಲ.
2. ಮೈತ್ರನೆಂದರೆ ಮಿತ್ರದೇವತೆಯ ಉಪಾಸಕನು - ಎಂದರೆ ಗಾಯತ್ರೀ ಜಪವನ್ನು ಮಾಡುವವನು - ಎಂದರ್ಥ.

**ತಸ್ಯ ಲೋಕಪ್ರಧಾನಸ್ಯ ಜಗನ್ನಾಥಸ್ಯ ಭೂಪತೇ।**
**ವಿಷ್ಣೋರ್ನಾಮಸಹಸ್ರಂ ಮೇ ಶೃಣು ಪಾಪಭಯಾಪಹಮ್ ॥೧೨॥**

೧೧-೧೨. ಆದಿಯುಗವು ಬರಲಾಗಿ ಸರ್ವಭೂತಗಳೂ ಯಾವನಿಂದ ಉಂಟಾಗುವವೋ, ಮತ್ತು ಯುಗವು ಕ್ಷಯವಾಗಲಾಗಿ ಯಾವಾತನಲ್ಲಿ ಪ್ರಲಯವನ್ನು ಹೊಂದುವವೋ ಆ ಲೋಕಕ್ಕೆಲ್ಲ ಮುಖ್ಯನಾಗಿರುವ ಜಗನ್ನಾಥನಾದ ವಿಷ್ಣುವಿನ, ಪಾಪದ ಅಂಜಿಕೆಯನ್ನು ನಾಶಪಡಿಸುವ ನಾಮಸಹಸ್ರವನ್ನು, ಎಲೈ ಭೂಪತಿಯೆ, ನನ್ನಿಂದ ಕೇಳಿ (ತಿಳಿದು)ಕೊ.

## (ಭಾಷ್ಯ)

ಯದೇಕಂ ದೈವತಮ್ ಪ್ರಸ್ತುತಂ ತಸ್ಯ ಉಪಲಕ್ಷಣಮುಚ್ಯತೇ -

ಯತಃ ಯಸ್ಮಾತ್ ಸರ್ವಾಣಿ ಭೂತಾನಿ, ಭವನ್ತಿ ಉದ್ಭವನ್ತಿ ಆದಿಯುಗಾಗಮೇ ಕಲ್ಪಾದೌ; ಯಸ್ಮಿಂಶ್ಚ ಪ್ರಲಯಂ ವಿಲಯಂ ಯಾನ್ತಿ ವಿನಾಶಂ ಗಚ್ಛನ್ತಿ ಪುನಃ ಭೂಯಃ। ಏವ ಇತ್ಯವಧಾರಣಾರ್ಥಃ। ನಾನ್ಯಸ್ಮಿನ್ ಇತ್ಯರ್ಥಃ। ಯುಗಕ್ಷಯೇ ಮಹಾಪ್ರಲಯೇ। ಚಕಾರಾತ್ ಮಧ್ಯೇಽಪಿ ಯಸ್ಮಿನ್ ತಿಷ್ಠನ್ತಿ 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ। ಯೇನ ಜಾತಾನಿ ಜೀವನ್ತಿ। ಯತ್ಪ್ರಯನ್ತ್ಯಭಿಸಂವಿಶನ್ತಿ' (ತೈ. ೩-೧) ಇತಿ ಶ್ರುತೇಃ॥

ತಸ್ಯ ಏವಂಲಕ್ಷಣಲಕ್ಷಿತಸ್ಯ ಏಕದೈವತಸ್ಯ, ಲೋಕಪ್ರಧಾನಸ್ಯ, ಲೋಕನಹೇತುಭಿಃ ವಿದ್ಯಾಸ್ಥಾನೈಃ ಪ್ರತಿಪಾದ್ಯಮಾನಸ್ಯ ಜಗನ್ನಾಥಸ್ಯ ಜಗತೋ ನಾಥಃ ಸ್ವಾಮೀ ಮಾಯಾಶಬಲಃ ಪರಮಾತ್ಮಾ ನಿರ್ಲೇಪಶ್ಚ ತಸ್ಯ, ಭೂಪತೇ ಮಹೀಪಾಲ, ವಿಷ್ಣೋಃ ವ್ಯಾಪನಶೀಲಸ್ಯ ನಾಮಸಹಸ್ರಂ ನಾಮ್ನಾಂ ಸಹಸ್ರಮ್ ಅಶುಭಕರ್ಮಕೃತಂ ಪಾಪಂ ಸಂಸಾರಲಕ್ಷಣಂ ಭಯಂ ಚ ಅಪಹನ್ತೀತಿ ಪಾಪಭಯಾಪಹಂ ತ್ವಂ ಮೇ ಮಮ ಮತ್ತಃ ಶೃಣು ಏಕಾಗ್ರಮನಾ ಭೂತ್ವಾ ಅವಧಾರಯ ಇತ್ಯರ್ಥಃ॥

## (ಭಾಷ್ಯಾರ್ಥ)

ಒಂದೇ ದೈವತವೆಂದು (ಪು.೩) ಪ್ರಾರಂಭಿಸಿ ಹೇಳಿದೆಯಲ್ಲ, ಅದರ ಉಪಲಕ್ಷಣವನ್ನು ಹೇಳಲಾಗುತ್ತದೆ :[1] ಯಾವನಿಂದ ಯಾವ (ವಿಷ್ಣುವಿನಿಂದ) ಆದಿಯುಗವು ಬಂದಾಗ, ಎಂದರೆ ಕಲ್ಪದ ಆದಿಯಲ್ಲಿ ಎಲ್ಲಾ ಭೂತಗಳೂ ಉಂಟಾಗುವವೋ, ಹುಟ್ಟುವವೋ, ಮತ್ತು ಯಾವಾತನಲ್ಲಿಯೇ ಪ್ರಲಯವನ್ನು ವಿನಾಶವನ್ನು ಮತ್ತೆ, ಇನ್ನೊಮ್ಮೆ (ಪುನರೇವ,

1. 'ಒಂದೇ ದೈವತವು ಯಾವದು?' ಎಂದು ಪ್ರಕೃತವಾಗಿದೆಯಲ್ಲ, ಯಾವದರಿಂದ ಸರ್ವಭೂತಗಳೂ (ಉಂಟಾಗುವವೋ) ಎಂದು ಅದಕ್ಕೆ ಉಪಲಕ್ಷಣವನ್ನು (ಈಗ) ಹೇಳಲಾಗುತ್ತದೆ - ಎಂದು ಪಾಠಾಂತರಕ್ಕೆ ಅರ್ಥ. ಇಲ್ಲಿ ಎರಡು ಕಡೆಯಲ್ಲಿಯೂ 'ಉಪಲಕ್ಷಣ'ವೆಂದೇ ಇರುವದರಿಂದ ಇದು 'ತಟಸ್ಥಲಕ್ಷಣ' ಎಂಬ ಅಭಿಪ್ರಾಯವಿರಬಹುದೆಂದು ಕಲ್ಪಿಸಬೇಕು. ವ್ಯಾಖ್ಯಾನಕಾರರು ಹಾಗೆಯೇ ಬರೆದಿರುತ್ತಾರೆ.

ಮತ್ತೊಮ್ಮೆಯೂ) ಎಂದು ಏವಕಾರವನ್ನು (ಪ್ರಯೋಗಿಸುವದು) ಒತ್ತಿಹೇಳುವದಕ್ಕಾಗಿ, ಮತ್ತೇತರಲ್ಲಿಯೂ (ಪ್ರಲಯವಾಗು)ವದಿಲ್ಲವೋ ಎಂದರ್ಥ. ಯುಗಕ್ಷಯದಲ್ಲಿ (ವಿನಾಶವಾಗುವವೋ) ಎಂದರೆ ಮಹಾಪ್ರಲಯದಲ್ಲಿ[1] (ಎಂದರ್ಥ); (ಮತ್ತು ಎಂಬರ್ಥದ) ಚಕಾರವನ್ನುಪಯೋಗಿಸಿರುವಪರಿಂದ ನಡುವಣ (ಕಾಲ)ದಲ್ಲಿಯೂ ಯಾಪಾತನಲ್ಲಿರುತ್ತಿರುವವೋ (ಎಂದು ಸೇರಿಸಿಕೊಳ್ಳಬೇಕು). ಏಕೆಂದರೆ 'ಈ ಭೂತಗಳು ಯಾವದರಿಂದ ಹುಟ್ಟುವವೋ ಹುಟ್ಟಿದ ಮೇಲೆ ಯಾವದರಿಂದ ಜೀವಿಸಿಕೊಂಡಿರುವವೋ, ಯಾವದನ್ನು ಕುರಿತು ಹೋಗಿ ಸೇರಿಕೊಳ್ಳುವವೋ' ಎಂದು ಶ್ರುತಿಯಿದೆ. ಇಂಥ ಲಕ್ಷಣದಿಂದೊಡಗೂಡಿದ ಆ ಒಂದೇ ಒಂದಾದ ದೈವತದ, ಲೋಕಕ್ಕೆಲ್ಲ ಮುಖ್ಯವಾಗಿರುವ - (ಲೋಕವೆಂದರೆ) ಅರಿತುಕೊಳ್ಳುವದಕ್ಕೆ ಸಾಧನವಾಗಿರುವ ವಿದ್ಯಾಸ್ಥಾನಗಳು ; (ಅವುಗಳಿಂದ) ಪ್ರತಿಪಾದ್ಯವಾಗಿರುವ, ಜಗನ್ನಾಥನಾದ - ಜಗತ್ತಿಗೆ ನಾಥ, ಒಡೆಯನಾದ ಎಂದರೆ ಮಾಯಾಶಬಲನಾದ,[2] ಮತ್ತು ನಿರ್ಲೇಪನಾದ ಪರಮಾತ್ಮನು (ಎಂದರ್ಥ). ಭೂಪತಿಯೆ, ನೆಲದೊಡೆಯನೆ, (ಆ) ವಿಷ್ಣುವಿನ, ಎಂದರೆ ವ್ಯಾಪಿಸಿಕೊಂಡಿರುವ ಸ್ವಭಾವದ (ಪರಮಾತ್ಮನ) ನಾಮಸಹಸ್ರವನ್ನು ಸಾವಿರನಾಮಗಳನ್ನು ಪಾಪಭಯಾಪಹವಾದ - ಪಾಪವನ್ನು ಸಂಸಾರರೂಪವಾದ ಭಯವನ್ನು ನಾಶಗೊಳಿಸುವ (ಸಹಸ್ರನಾಮವನ್ನು) ನೀನು ನನ್ನಿಂದ ಶ್ರವಣಮಾಡು, ಏಕಾಗ್ರಮನಸ್ಸಿನಿಂದೊಡಗೂಡಿ ನಿಶ್ಚಯಿಸಿಕೊ ಎಂದರ್ಥ.

(ಭಾಷ್ಯ)

ಏಕಸ್ಯೈವ ಸಮಸ್ತಸ್ಯ ಬ್ರಹ್ಮಣೋ ದ್ವಿಜಸತ್ತಮ।
ನಾಮ್ನಾಂ ಸಹಸ್ರಂ ಲೋಕಾನಾಮುಪಕಾರಕರಂ ಶೃಣು॥
ನಿಮಿತ್ತಶಕ್ತಯೋ ನಾಮ್ನಾಂ ಭೇದಿನ್ಯಸ್ತದುದೀರಣಾತ್।
ವಿಭಿನ್ನಾನ್ಯೇವ ಸಾಧ್ಯಂತೇ ಫಲಾನಿ ದ್ವಿಜಸತ್ತಮ॥
ಯಚ್ಛಕ್ತಿ ನಾಮ ಯತ್ತಸ್ಯ ತತ್ತಸ್ಮಿನ್ನೇವ ವಸ್ತುನಿ।
ಸಾಧಕಂ ಪುರುಷವ್ಯಾಘ್ರ ಸೌಮ್ಯಕ್ರೂರೇಷು ವಸ್ತುಷು॥

(ವಿ.ಧ. ೪೧-೧೦-೧೧, ೧೨(?))

- ಇತಿವಿಷ್ಣುಧರ್ಮೇ.

ಭಾಷ್ಯಾರ್ಥ

ಎಲೈ ದ್ವಿಜಶ್ರೇಷ್ಠನೆ,[3] ಸಮಸ್ತ (ರೂಪ)ವಾಗಿ ಒಂದೇ ಆಗಿರುವ ಬ್ರಹ್ಮಕ್ಕೆ ನಾಮಗಳ ಸಾವಿರವನ್ನು ಜನರಿಗೆ ಉಪಕಾರಕವಾಗಿರುವದನ್ನು (ಹೇಳುವೆನು);

1. ಮಹಾಪ್ರಲಯವೆಂದರೆ ಅತ್ಯಂತವಾಗಿ ಎಲ್ಲವೂ ನಾಶವಾಗುವ ಕಾಲ.
2. ಈ ಶಬ್ದವು ವ್ಯಾಖ್ಯಾನಪ್ರಸ್ಥಾನಗಳಲ್ಲಿ ಪ್ರಚುರವಾಗಿದೆ.
3. ಇದು ದಾಲ್ಭ್ಯನಿಗೆ ಹೇಳಿದ ವಾಕ್ಯವೆಂದು ಪೈ॥ ವ್ಯಾಖ್ಯಾನದಲ್ಲಿದೆ.

ಕೇಳು. ನಾಮಗಳ ನಿಮಿತ್ತಶಕ್ತಿಗಳು ಭೇದವನ್ನುಂಟುಮಾಡುತ್ತವೆ; ಅವುಗಳನ್ನು ಉಚ್ಚರಿಸುವದರಿಂದ ಎಲೈ ದ್ವಿಜವರ್ಯನೆ, ಬೇರೆಬೇರೆಯಾಗಿಯೇ ಇರುವ ಫಲಗಳು ದೊರಕುತ್ತವೆ. ಎಲೈ ಪುರುಷಶ್ರೇಷ್ಠನೆ - ಯಾವ ಹೆಸರು ಯಾವ ಶಕ್ತಿಯುಳ್ಳದ್ದಾಗಿದೆಯೋ ಅದೇ ಸಾತ್ವಿಕ ಅಥವಾ ಕ್ರೂರವಸ್ತುಗಳ (ಪ್ರಾಪ್ತಿಗೆ) ಸಾಧಕವಾಗಿದೆ - ಎಂದು ವಿಷ್ಣುಧರ್ಮದಲ್ಲಿದೆ.

(ಭಾಷ್ಯ)

ಯದ್ಯಪಿ ಪರಸ್ಯ ಬ್ರಹ್ಮಣಃ ಷಷ್ಠೀಗುಣಕ್ರಿಯಾಜಾತಿರೂಢೀನಾಂ ಶಬ್ದ-ಪ್ರವೃತ್ತಿಹೇತುಭೂತಾನಾಂ ನಿಮಿತ್ತಶಕ್ತೀನಾಂ ಚಾಸಂಭವಃ, ತಥಾಪಿ ಸಗುಣೇ ಬ್ರಹ್ಮಣಿ ಸವಿಕಾರೇ ಚ ಸರ್ವಾತ್ಮಕತ್ವಾತ್ ತೇಷಾಂ ಶಬ್ದಪ್ರವೃತ್ತಿಹೇತೂನಾಂ ಸಂಭವಾತ್ ಸರ್ವೇ ಶಬ್ದಾಃ ಪರಸ್ಮಿನ್ ಪುಂಸಿ ಪ್ರವರ್ತನ್ತೇ॥

(ಭಾಷ್ಯಾರ್ಥ)

ಪರಬ್ರಹ್ಮಕ್ಕೆ ಶಬ್ದಪ್ರವೃತ್ತಿಗೆ ಹೇತುವಾಗಿರುವ ಷಷ್ಠಿ, ಗುಣ, ಕ್ರಿಯೆ, ಜಾತಿ, ರೂಢಿ - ಎಂಬಿವೂ ನಿಮಿತ್ತಶಕ್ತಿಗಳೂ ಇರುವಂತಿಲ್ಲವಾದರೂ ಸಗುಣವಾಗಿಯೂ ವಿಕಾರಯುಕ್ತವಾಗಿಯೂ ಇರುವ ಬ್ರಹ್ಮದಲ್ಲಿ (ಅದು) ಸರ್ವಾತ್ಮಕವಾಗಿರುವದರಿಂದ ಆ ಶಬ್ದಪ್ರವೃತ್ತಿ ಹೇತುಗಳು ಇರಬಹುದಾದ್ದರಿಂದ, ಎಲ್ಲಾ ಶಬ್ದಗಳೂ ಪರಮಪುರುಷನಲ್ಲಿ ವರ್ತಿಸಬಹುದಾಗಿರುತ್ತವೆ.

**ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ।**
**ಋಷಿಭಿಃ ಪರಿಗೀತಾನಿ ತಾನಿ ವಕ್ಷ್ಯಾಮಿ ಭೂತಯೇ ॥೧೩॥**

೧೩. ಯಾವ ಗೌಣನಾಮಗಳು (ಆ) ಮಹಾತ್ಮನಿಗೆ (ಇವೆಯೆಂದು) ಪ್ರಸಿದ್ಧವಾಗಿರುತ್ತವೆಯೋ, ಋಷಿಗಳಿಂದಲೂ ಸಂಗೀತವಾಗಿ ಇರುತ್ತವೆಯೋ ಅವುಗಳನ್ನು ಭೂತಿಗಾಗಿ ಹೇಳುವೆನು.

(ಭಾಷ್ಯ)

ತತ್ರ - ಯಾನಿ ನಾಮಾನಿ ಗೌಣಾನಿ ಗುಣಸಂಬನ್ಧೀನಿ ಗುಣಯೋಗಾತ್ ಪ್ರವೃತ್ತಾನಿ, ತೇಷು ಚ ಯಾನಿ ವಿಖ್ಯಾತಾನಿ ಪ್ರಸಿದ್ಧಾನಿ ಋಷಿಭಿಃ ಮನ್ತ್ರೈಸ್ತದ್ದರ್ಶಿಭಿಶ್ಚ ಪರಿಗೀತಾನಿ ಪರಿತಃ ಸಮನ್ತತಃ ಪರಮೇಶ್ವರಾಖ್ಯಾನೇಷು ತತ್ರ ತತ್ರ ಗೀತಾನಿ। ಮಹಾಂಶ್ಚಾಸೌ ಆತ್ಮಾ ಚ ಇತಿ ಮಹಾತ್ಮಾ; 'ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ। ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ'॥ (?) ಇತಿ ವಚನಾತ್। ಅಯಮೇವ ಮಹಾನಾತ್ಮೇತಿ ಮಹತ್ಮಾ; ತಸ್ಯ ಅಚಿನ್ತ್ಯ ಪ್ರಭಾವಸ್ಯ ತಾನಿ ವಕ್ಷ್ಯಾಮಿ ಭೂತಯೇ ಪುರುಷಾರ್ಥಚತುಷ್ಟಯಸಿದ್ಧಯೇ ಪುರುಷಾರ್ಥಾರ್ಥಿನಾಮಿತಿ॥

## (ಭಾಷ್ಯಾರ್ಥ)

ಅವುಗಳೊಳಗೆ ಯಾವ ನಾಮಗಳು ಗೌಣಗಳೋ, ಗುಣಕ್ಕೆ ಸಂಬಂಧಿಸಿದವುಗಳಾಗಿರುವವೋ, ಗುಣಗಳ ಯೋಗದಿಂದ ಪ್ರವೃತ್ತವಾಗಿರುವವೋ [1] ಮತ್ತು ಅವುಗಳಲ್ಲಿ ಯಾವವು ವಿಖ್ಯಾತವಾಗಿರುವವೋ ಎಂದರೆ ಪ್ರಸಿದ್ಧವಾಗಿರುವವೋ, ಋಷಿಗಳಿಂದ, ಎಂದರೆ ಮಂತ್ರಗಳಿಂದಲೂ ಅವುಗಳನ್ನು ಕಂಡುಕೊಂಡವರಿಂದಲೂ[2] ಸಂಗೀತವಾಗಿರುವವೋ, ಎಲ್ಲಾ ಕಡೆಯಲ್ಲಿಯೂ ಎಂದರೆ ಪರಮೇಶ್ವರನನ್ನು ಹೇಳುವ ಕಡೆಗಳೆಲ್ಲೆಲ್ಲ ಅಲ್ಲಲ್ಲಿ ಹೇಳಲ್ಪಟ್ಟಿವೆಯೋ - (ಯಾವ) ಮಹಾತ್ಮನ (ನಾಮಗಳು ಉಕ್ತವಾಗಿವೆಯೋ) ಮಹಾತ್ಮನು ಎಂದರೆ ವ್ಯಾಪಕನಾದ ಆತ್ಮನು; ಏಕೆಂದರೆ, 'ವ್ಯಾಪಿಸಿಕೊಂಡಿರುವದರಿಂದಲೂ ತನ್ನೊಳಗೆ ತೆಗೆದುಕೊಂಡು ಸೇರಿಸಿ ಕೊಳ್ಳುವದರಿಂದಲೂ, ಇಲ್ಲಿ ವಿಷಯಗಳನ್ನು ಭೋಗಿಸುತ್ತಿರುವದರಿಂದಲೂ, ಮತ್ತು ಇವನ ಅರಿವು ಕಡಿವಡೆಯದೆ ಇರುವದರಿಂದಲೂ, (ಈ ಕಾರಣಗಳಿಂದ) ಆತ್ಮನೆಂದು ಹೇಳಲ್ಪಟ್ಟಿರುತ್ತಾನೆ'[3] ಎಂದು (ಪುರಾಣ) ವಚನವಿದೆ. ಈತನೇ ಮಹಾನಾತ್ಮನು. ಆ ಅಚಿಂತ್ಯವಾದ ಮಹಿಮೆಯುಳ್ಳ (ವಿಷ್ಣುವಿನ) ಅವುಗಳನ್ನು ಭೂತಿಗಾಗಿ ಪುರುಷಾರ್ಥವನ್ನು ಬಯಸುವವರಿಗಾಗಿ ನಾಲ್ಕು ಪುರುಷಾರ್ಥಗಳ ಸಿದ್ಧಿಗಾಗಿ ಹೇಳುವೆನು.

## ನಾಮಗಳ ವಿಷಯದ ಸಮಾಲೋಚನೆ

### (ಭಾಷ್ಯ)

ಅತ್ರ ನಾಮಸಹಸ್ರೇ ಆದಿತ್ಯಾದಿಶಬ್ದಾನಾಮ್ ಅರ್ಥಾನ್ತರೇ ಪ್ರಸಿದ್ಧಾನಾಮ್ ಆದಿತ್ಯಾದ್ಯರ್ಥಾನಾಂ ತದ್ವಿಭೂತಿತ್ವೇನ ತದಭೇದಾತ್ ತಸ್ಯೈವ ಸ್ತುತಿರಿತಿ ಪ್ರಸಿದ್ಧಾರ್ಥಗ್ರಹಣೇಽಪಿ ತತ್‌ಸ್ತುತಿತ್ವಮ್॥

'ಭೂತಾತ್ಮಾ ಚೇನ್ದ್ರಿಯಾತ್ಮಾ ಚ ಪ್ರಧಾನಾತ್ಮಾ ತಥಾ ಭವಾನ್।
ಆತ್ಮಾ ಚ ಪರಮಾತ್ಮಾ ಚ ತ್ವಮೇಕಃ ಪಞ್ಚಧಾ ಸ್ಥಿತಃ'॥

(ವಿ.ಪು. ೫-೧೮-೫೦), 'ಜ್ಯೋತೀಂಷಿ ವಿಷ್ಣುರ್ಭುವನಾನಿ ವಿಷ್ಣುರ್ವನಾನಿ ವಿಷ್ಣುರ್ಗಿರಯೋ ದಿಶಶ್ಚ। ನದ್ಯಃ ಸಮುದ್ರಾಶ್ಚ ಸ ಏವ ಸರ್ವಂ ಯದಸ್ತಿ ಯನ್ನಾಸ್ತಿ ಚ ವಿಪ್ರವರ್ಯ' (ವಿ.ಪು.೨-೧೨-೩೮) ಇತಿ ವಿಷ್ಣುಪುರಾಣೇ। 'ಆದಿತ್ಯಾನಾಮಹಂ ವಿಷ್ಣುಃ' (ಗೀ. ೧೦-೨೧) ಇತ್ಯಾರಭ್ಯ 'ಅಥವಾ ಬಹುನೈತೇನ

1. ಭಗವಂತನು ಸ್ವತಃ ನಾಮರೂಪರಹಿತನಾದ್ದರಿಂದ ಸಾಧಕಾನುಗ್ರಹಕ್ಕಾಗಿ ಮಾಯಾರೂಪಗಳನ್ನು ಧರಿಸಿದಾಗ ಋಷಿಗಳು ಅವನ ಗುಣಕರ್ಮಗಳಿಗೆ ಅನುಗುಣವಾಗಿ ವ್ಯವಹರಿಸಿದ ನಾಮಗಳು; ಇವೇ ಗೌಣನಾಮಗಳು ಎಂದರ್ಥ.

2. ಮಂತ್ರಗಳೂ ಆ ವೇದಮಂತ್ರಗಳನ್ನು ಕಂಡುಹಿಡಿದವರೂ ಋಷಿಗಳು.

3. ಇದನ್ನು ಶ್ರೀಲಿಂಗಪುರಾಣದಿಂದ ತೆಗೆದುಕೊಂಡಿದೆ ಎಂದು ಗೀ॥ ಪಾಠದಂತೆ ಬರೆದುಕೊಂಡಿದೆ. ಶಂಕರಭಗವತ್ಪಾದರು ಶೈವಪುರಾಣಗಳಿಂದ ವಚನಗಳನ್ನು ಪ್ರಸ್ಥಾನತ್ರಯಭಾಷ್ಯದಲ್ಲಿ ಉದಾಹರಿಸುವ ಪದ್ಧತಿಯಿಲ್ಲ.

ಕಿಂ ಜ್ಞಾತೇನ ತವಾರ್ಜುನ। ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್' (ಗೀ.೧೦-೪೨) ಇತಿಪರ್ಯನ್ತಂ ಗೀತಾಸು। 'ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್' (ಮುಂ. ೨-೨-೧೧), 'ಪುರುಷ ಏವೇದಂ ವಿಶ್ವಮ್' (ಮುಂ. ೨-೧-೧೦) ಇತಿ ಶ್ರುತಿಶ್ಚ॥

ವಿಷ್ಣ್ವಾದಿಶಬ್ದಾನಾಂ ಪುನರುಕ್ತಾನಾಮಪಿ ವೃತ್ತಿಭೇದೇನ ಅರ್ಥಭೇದಾತ್ ನ ಪೌನರುಕ್ತ್ಯಮ್। 'ಶ್ರೀಪತಿಃ', 'ಮಾಧವಃ' ಇತ್ಯಾದೀನಾಂ ವೃತ್ತ್ಯೇಕತ್ವೇಽಪಿ ಶಬ್ದಭೇದಾತ್ ನ ಪೌನರುಕ್ತ್ಯಮ್। ಅರ್ಥೈಕತ್ವೇಽಪಿ ನ ಪೌನರುಕ್ತ್ಯಂ ದೋಷಾಯ; ನಾಮ್ನಾಂ ಸಹಸ್ರಸ್ಯ 'ಕಿಮೇಕಂ ದೈವತಮ್' - ಇತಿ ಪೃಷ್ಟೇರೇಕದೈವತವಿಷಯತ್ವಾತ್॥

ಯತ್ರ ಪುಲ್ಲಿಙ್ಗಶಬ್ದಪ್ರಯೋಗಃ ತತ್ರ ವಿಷ್ಣುರ್ವಿಶೇಷ್ಯಃ। ಯತ್ರ ಸ್ತ್ರೀಲಿಙ್ಗಶಬ್ದಃ, ತತ್ರ ದೇವತಾ ವಿಶೇಷ್ಯತೇ। ಯತ್ರ ನಪುಂಸಕಲಿಙ್ಗಶಬ್ದಃ ತತ್ರ ಬ್ರಹ್ಮೇತಿ ವಿಶೇಷ್ಯತೇ॥

## (ಭಾಷ್ಯಾರ್ಥ)

ಈ ನಾಮಸಹಸ್ರದಲ್ಲಿ 'ಆದಿತ್ಯ' ಎಂಬುದೇ ಮುಂತಾದ ಶಬ್ದಗಳು ಬೇರೊಂದು ಅರ್ಥದಲ್ಲಿ ಪ್ರಸಿದ್ಧವಾಗಿ ಸೂರ್ಯನೇ ಮುಂತಾದ ಅರ್ಥಗಳುಳ್ಳವಾದರೂ (ಅವು) ಆ (ವಿಷ್ಣುವಿನ) ವಿಭೂತಿಯಾಗಿರುವದರಿಂದ (ಅವರೂ) ಅವನಿಗಿಂತ ಭಿನ್ನರಲ್ಲವಾಗಿ (ಅದೂ) ಆತನದೇ ಸ್ತುತಿ; ಆದ್ದರಿಂದ ಪ್ರಸಿದ್ಧವಾದ ಅರ್ಥವನ್ನು (ಈ ಶಬ್ದಗಳಿಗೆ) ಇಟ್ಟುಕೊಂಡರೂ ಆ (ವಿಷ್ಣುವಿನ) ಸ್ತುತಿಯೇ (ಆಗುತ್ತದೆ). 'ಭೂತಾತ್ಮನೂ ಇಂದ್ರಿಯಾತ್ಮನೂ ಪ್ರಧಾನಾತ್ಮನೂ, ಮತ್ತು ಆತ್ಮನೂ ಪರಮಾತ್ಮನೂ ನೀನು (ಆಗಿರುವೆ); ಹೀಗೆ ನೀನೊಬ್ಬನೇ ಐದು ಬಗೆಯಾಗಿರುವೆ', 'ನಕ್ಷತ್ರಗಳು ವಿಷ್ಣುವೇ, ಭುವನಗಳು ವಿಷ್ಣುವೇ, ವನಗಳು ವಿಷ್ಣುವೇ, ಬೆಟ್ಟಗಳೂ ದಿಕ್ಕುಗಳೂ ವಿಷ್ಣುವೇ, ನದಿಗಳೂ ಸಮುದ್ರಗಳೂ (ವಿಷ್ಣುವೇ), ಯಾವದು ಇದೆಯೋ, ಯಾವದು ಇಲ್ಲವೋ - ಅದೆಲ್ಲವೂ ಎಲೈ ವಿಪ್ರವರ್ಯನೆ, ಆತನೇ' ಎಂದು **ವಿಷ್ಣುಪುರಾಣದಲ್ಲಿದೆ.** 'ನಾನು ಆದಿತ್ಯರೊಳಗೆ ವಿಷ್ಣುವು' ಎಂದು ಪ್ರಾರಂಭಿಸಿ 'ಅರ್ಜುನನೆ, ಇದೆಲ್ಲವನ್ನೂ ಬಹುವಾಗಿ ಅರಿತುಕೊಂಡದ್ದರಿಂದ ನಿನಗೆ ಏನಾಗಬೇಕು? ನಾನು ನನ್ನ ಒಂದಂಶದಿಂದ ಇದೆಲ್ಲವನ್ನೂ ಹಿಡಿದಿಟ್ಟುಕೊಂಡು ಜಗತ್ತಾಗಿರುವೆನು' ಎಂಬವರೆಗೂ ಗೀತೆಗಳಲ್ಲಿ (ಹೀಗೆಂದು) ಹೇಳಿದೆ. 'ಇದೆಲ್ಲವೂ ವರಣೀಯತಮವಾದ ಬ್ರಹ್ಮವೇ' 'ಇದೆಲ್ಲವೂ ಪುರುಷನೇ' ಎಂದು ಶ್ರುತಿಯೂ (ಇದೆ).

'ವಿಷ್ಣು' ಮುಂತಾದ ಶಬ್ದಗಳನ್ನು ಮತ್ತೆ ಮತ್ತೆ ಹೇಳಿದ್ದರೂ ಬೇರೆಬೇರೆಯ ಶಬ್ದವೃತ್ತಿಯಿಂದ ಅರ್ಥವು ಬೇರೆಯಾಗಿರುವದರಿಂದ ಪುನರುಕ್ತಿದೋಷವಿಲ್ಲ. 'ಶ್ರೀಪತಿ', 'ಮಾಧವ' - ಮುಂತಾದವುಗಳ (ವಿಷಯದಲ್ಲಿ) ವೃತ್ತಿಯು ಒಂದೇ ಆದರೂ ಶಬ್ದಗಳು ಬೇರೆಬೇರೆಯಿರುವದರಿಂದ ಪುನರುಕ್ತಿ (ದೋಷ)ವಿಲ್ಲ. ಪದಾರ್ಥವು

ಒಂದೇ ಆದರೂ ಪುನರುಕ್ತಿದೋಷವಿಲ್ಲ; ಏಕೆಂದರೆ 'ನಾಮಗಳ ಸಹಸ್ರಕ್ಕೂ ಒಂದೇ ದೇವತೆ ಯಾವದು?' ಎಂಬ ಪ್ರಶ್ನೆಯು ಒಂದೇ ದೇವತೆಯ ವಿಷಯವಾಗಿರುತ್ತದೆ.

ಎಲ್ಲಿ ಪುಲ್ಲಿಂಗಶಬ್ದದ ಪ್ರಯೋಗವಿರುತ್ತದೆಯೋ ಅಲ್ಲಿ 'ವಿಷ್ಣು' ವಿಶೇಷ್ಯವು; ಎಲ್ಲಿ ಸ್ತ್ರೀಲಿಂಗಶಬ್ದ (ಪ್ರಯೋಗ)ವಿದೆಯೋ ಅಲ್ಲಿ ದೇವತೆಯೇ ವಿಶೇಷ್ಯವಾಗಿರುತ್ತದೆ; ಎಲ್ಲಿ ನಪುಂಸಕಲಿಂಗದ ಶಬ್ದವಿರುತ್ತದೆಯೋ ಅಲ್ಲಿ 'ಬ್ರಹ್ಮ' ಎಂಬುದು ವಿಶೇಷ್ಯ (ವಾಗಿರುತ್ತದೆ).

## ನಾಮಭಾಷ್ಯಪ್ರಾರಂಭಃ

(ಪ್ರಥಮಶತಕ)

(ಸ್ತೋತ್ರ)

**ಓಂ॥ ವಿಶ್ವಂ ವಿಷ್ಣುರ್ವಷಟ್ಕಾರೋ ಭೂತಭವ್ಯಭವತ್ಪ್ರಭುಃ।**
**ಭೂತಕೃದ್ಭೂತಭೃದ್ಭಾವೋ ಭೂತಾತ್ಮಾ ಭೂತಭಾವನಃ॥ ॥೧॥**

೧. ಓಂ. ವಿಶ್ವವು; ವಿಷ್ಣುವು; ವಷಟ್ಕಾರನು; ಭೂತಭವ್ಯಭವತ್ಪ್ರಭುವು; ಭೂತಕೃತ್ತು; ಭೂತಭೃತ್ತು; ಭಾವನು; ಭೂತಾತ್ಮನು; ಭೂತಭಾವನನು.

### (ಭಾಷ್ಯ)

'ಯತಃ, ಸರ್ವಾಣಿ ಭೂತಾನಿ' (ಶ್ಲೋ.೧೧) ಇತ್ಯಾರಭ್ಯ ಜಗದುತ್ಪತ್ತಿ ಸ್ಥಿತಿಲಯಕಾರಣಸ್ಯ ಬ್ರಹ್ಮಣಾ ಏಕದೈವತತ್ವೇನಾಭಿಹಿತತ್ವಾತ್ ಆದೌ ಉಭಯವಿಧಂ ಬ್ರಹ್ಮ ವಿಶ್ವಶಬ್ದೇನೋಚ್ಯತೇ। ವಿಶ್ವಸ್ಯ ಜಗತಃ ಕಾರಣತ್ವೇನ 'ವಿಶ್ವಮ್' ಇತ್ಯುಚ್ಯತೇ ಬ್ರಹ್ಮ। ಆದೌ ತು ವಿಶ್ವಮಿತಿ ಕಾರ್ಯಶಬ್ದೇನ ಕಾರಣಗ್ರಹಣಮ್, ಕಾರ್ಯಭೂತವಿರಿಞ್ಚ್ಯಾದಿನಾಮಭಿರಪಿ ಉಪಪನ್ನಾ ಸ್ತುತಿರ್ವಿಷ್ಣೋಃ - ಇತಿ ದರ್ಶಯಿತುಮ್॥

ಯದ್ವಾ ಪರಸ್ಮಾತ್ ಪುರುಷಾತ್ ನ ಭಿನ್ನಮಿದಂ ವಿಶ್ವಂ ಪರಮಾರ್ಥತಃ; ತೇನ ವಿಶ್ವಮಿತ್ಯಭಿಧೀಯತೇ ಬ್ರಹ್ಮ। 'ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್' (ಮುಂ. ೨-೨-೧೧), 'ಪುರುಷ ಏವೇದಂ ವಿಶ್ವಮ್' (ಮು. ೨-೧-೧೦) - ಇತ್ಯಾದಿಶ್ರುತಿಭ್ಯಃ ತದ್ಭಿನ್ನಂ ನ ಕಿಞ್ಚಿತ್ ಪರಮಾರ್ಥತಃ ಸದಸ್ತಿ।

ಅಥವಾ ವಿಶತೀತಿ ವಿಶ್ವಂ ಬ್ರಹ್ಮ। 'ತತ್ ಸೃಷ್ಟ್ವಾ। ತದೇವಾನುಪ್ರಾವಿಶತ್' (ತೈ. ೨-೬) ಇತಿ ಶ್ರುತೇಃ। ಕಿಂ ಚ ಸಂಹೃತೌ ವಿಶನ್ತಿ ಸರ್ವಾಣಿ ಭೂತಾನ್ಯಸ್ಮಿನ್ ಇತಿ 'ವಿಶ್ವಂ' ಬ್ರಹ್ಮ। 'ಯತ್ಪ್ರಯನ್ತ್ಯಭಿಸಂವಿಶನ್ತಿ' (ತೈ. ೩-೧) ಇತಿ ಶ್ರುತೇಃ। ತಥಾ ಹಿ - ಸಕಲಂ ಜಗತ್ ಕಾರ್ಯಭೂತಮೇಷ ವಿಶತಿ, ಅತ್ರ ಚಾಖಿಲಂ ವಿಶ್ವಂ ವಿಶತಿ - ಇತ್ಯುಭಯಥಾಪಿ ವಿಶ್ವಂ ಬ್ರಹ್ಮೇತಿ॥

### (ಭಾಷ್ಯಾರ್ಥ)

**'ಯತಃ ಸರ್ವಾಣಿ ಭೂತಾನಿ'** (ಯಾವದರಿಂದ ಎಲ್ಲಾ ಭೂತಗಳೂ ಕಲ್ಪಾದಿಯಲ್ಲಿ ಉಂಟಾಗುವವೋ) ಎಂದು ಮೊದಲಾಗಿರುವ (ಗ್ರಂಥಭಾಗದಲ್ಲಿ) ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣವಾದ ಬ್ರಹ್ಮವು ಒಂದೇ ದೈವತವೆಂದು ಹೇಳಿರುವದರಿಂದ **ಎರಡು ಬಗೆಯ ಬ್ರಹ್ಮವನ್ನೂ** ವಿಶ್ವಶಬ್ದದಿಂದ ಕರೆದಿರುತ್ತದೆ. ಎಲ್ಲಾ ಜಗತ್ತಿಗೂ ಕಾರಣವಾಗಿರುವದರಿಂದಲ್ಲವೆ, ಬ್ರಹ್ಮನನ್ನು 'ವಿಶ್ವ' ವೆಂದಿರುವದು? (ಸ್ತೋತ್ರದ)

ಆರಂಭದಲ್ಲಿಯೇ ಕಾರ್ಯವಾಚಕವಾದ ವಿಶ್ವಶಬ್ದದಿಂದ ಕಾರಣವನ್ನು ಹೇಳಿರುವದಾದರೋ, ಕಾರ್ಯವಾಗಿರುವ ವಿರಿಂಚಿ (ಬ್ರಹ್ಮನೇ) ಮುಂತಾದವರ ನಾಮಗಳಿಂದಲೂ ವಿಷ್ಣುವನ್ನು ಸ್ತುತಿಸಿರುವದು ಹೊಂದುತ್ತದೆ ಎಂದು ತಿಳಿಯಿಸುವದಕ್ಕೆ.

**ಅಥವಾ** ಪರಮಪುರುಷನಿಗಿಂತ ಈ ವಿಶ್ವವು ಪರಮಾರ್ಥವಾಗಿ ಭಿನ್ನವಲ್ಲ; ಆದ್ದರಿಂದ ವಿಶ್ವವೆಂದು ಬ್ರಹ್ಮವನ್ನು ಕರೆಯಲಾಗಿರುತ್ತದೆ. 'ಈ ವಿಶ್ವವು ಬ್ರಹ್ಮವೇ', 'ಈ ವಿಶ್ವವು ಪುರುಷನೇ' ಮುಂತಾದ ಶ್ರುತಿಗಳ ಪ್ರಮಾಣದಿಂದ ಆ ಬ್ರಹ್ಮಕ್ಕಿಂತ ಬೇರೆಯಾಗಿ ಪರಮಾರ್ಥವಾಗಿ ಯಾವದೊಂದೂ ಇರುವದೇ ಇಲ್ಲ.

ಅಥವಾ(ವಿಶತಿ) ಪ್ರವೇಶಿಸುತ್ತದೆಯಾದ್ದರಿಂದ ಬ್ರಹ್ಮವು ವಿಶ್ವವು ಎಂದಾದರೂ (ಈ ನಾಮಕ್ಕೆ ಅರ್ಥವನ್ನು ಹೇಳಬಹುದು). 'ಅದನ್ನು ಸೃಷ್ಟಿಸಿ ಅದನ್ನೇ ಪ್ರವೇಶಿಸಿತು' ಎಂಬು ಶ್ರುತಿಯು (ಇದಕ್ಕೆ ಪ್ರಮಾಣ). ಮತ್ತು ಪ್ರಲಯದಲ್ಲಿ ಎಲ್ಲಾ ಭೂತಗಳೂ ಇವನಲ್ಲಿ ಪ್ರವೇಶಿಸುತ್ತವೆಯಾಗಿ ವಿಶ್ವವು ಬ್ರಹ್ಮವು. 'ಯಾವದನ್ನು (ಎಲ್ಲವೂ ಪ್ರಲಯಕಾಲದಲ್ಲಿ) ಒಳಹೊಗುವವೋ' ಎಂದು ಶ್ರುತಿಯಿದೆ. ಹೇಗೆಂದರೆ, ಕಾರ್ಯವಾದ ಜಗತ್ತೆಲ್ಲವನ್ನೂ ಈತನು[1] ಹೊಕ್ಕಿರುತ್ತಾನೆ. ಈತನಲ್ಲಿ ವಿಶ್ವವೆಲ್ಲವೂ (ಪ್ರಲಯದಲ್ಲಿ) ಹೊಗುತ್ತದೆ - ಎಂದಿಂತು ಎರಡು ಪ್ರಕಾರದಿಂದಲೂ ಬ್ರಹ್ಮವು ವಿಶ್ವವೆನಿಸುತ್ತದೆ.

## (ಭಾಷ್ಯ)

'ಅನ್ಯತ್ರ ಧರ್ಮಾದನ್ಯತ್ರಾಧರ್ಮಾತ್' (ಕಾ.೧-೨-೧೪) ಇತ್ಯಾರಭ್ಯ, 'ಸರ್ವೇ ವೇದಾ ಯತ್ಪದಮಾಮನನ್ತಿ ತಪಾಂಸಿ ಸರ್ವಾಣಿ ಚ ಯದ್ವದನ್ತಿ। ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ ತತ್ತೇ ಪದಂ ಸಂಗ್ರಹೇಣ ಬ್ರವೀಮ್ಯೋಮಿತ್ಯೇತತ್॥ ಏತದ್ಧ್ಯೇವಾಕ್ಷರಂ ಬ್ರಹ್ಮ ಏತದ್ಧ್ಯೇವಾಕ್ಷರಂ ಪರಮ್। ಏತದ್ಧ್ಯೇವಾಕ್ಷರಂ ಜ್ಞಾತ್ವಾ ಯೋ ಯದಿಚ್ಛತಿ ತಸ್ಯ ತತ್'' (ಕಾ. ೧.೨.೧೫.೧೬) ಇತಿ ಕಾಠಕೇ। ಏತದ್ವೈ ಸತ್ಯಕಾಮ ಪರಂ ಚಾಪರಂ ಚ ಬ್ರಹ್ಮ ಯದೋಂಕಾರಃ' (ಪ್ರ. ೫-೨) ಇತ್ಯುಪಕ್ರಮ್ಯ 'ಯಃ ಪುನರೇತಂ ತ್ರಿಮಾತ್ರೇಣೋಮಿತ್ಯೇತೇನೈವಾಕ್ಷರೇಣ ಪರಂ ಪುರುಷಮಭಿಧ್ಯಾಯೀತ' (ಪ್ರ.೫-೫) ಇತಿ **ಪ್ರಶ್ನೋಪನಿಷದಿ**। 'ಓಮಿತಿ ಬ್ರಹ್ಮ । ಓಮಿತೀದಗ್ಂ ಸರ್ವಮ್' (ತೈ. ೧-೮) ಇತಿ **ಯಜುರ್ವೇದಾರಣ್ಯಕೇ**। 'ತದ್ಯಥಾ ಶಙ್ಕುನಾ ಸರ್ವಾಣಿ ಪರ್ಣಾನಿ ಸಂತೃಣ್ಣಾನ್ಯೇವಮೋಂಕಾರೇಣ ಸರ್ವಾ ವಾಕ್ ಸಂತೃಣ್ಣಾ', 'ಓಂಕಾರ ಏವೇದಂ ಸರ್ವಮ್' (ಛಾಂ.೨-೨೩-೩) ಇತಿ **ಛಾನ್ದೋಗ್ಯೇ**। 'ಓಮಿತ್ಯೇತದಕ್ಷರಮಿದಂ ಸರ್ವಮ್' (ಮಾಂ.೧) ಇತ್ಯುಪಕ್ರಮ್ಯ 'ಪ್ರಣವೋ ಹ್ಯಪರಂ ಬ್ರಹ್ಮ ಪ್ರಣವಶ್ಚ ಪರಃ ಸ್ಮೃತಃ। ಅಪೂರ್ವೋಽನನ್ತರೋಽಬಾಹ್ಯೋಽನಪರಃ ಪ್ರಣವೋಽವ್ಯಯಃ॥ ಸರ್ವಸ್ಯ ಪ್ರಣವೋ ಹ್ಯಾದಿರ್ಮಧ್ಯಮನ್ತಸ್ತಥೈವ ಚ । ಏವಂ ಹಿ ಪ್ರಣವಂ ಜ್ಞಾತ್ವಾ

1. ಮೂಲದಲ್ಲಿ 'ಏಷ' (ಈತನು) ಎಂದು ಪುಲ್ಲಿಂಗಶಬ್ದವನ್ನು ಪ್ರಯೋಗಮಾಡಿ ಕೊನೆಯಲ್ಲಿ ಬ್ರಹ್ಮಶಬ್ದವನ್ನು ಬರೆದಿರುವದು ಏಕೆಂಬುದನ್ನು ತಿಳಿಯಲಿಲ್ಲ.

ವ್ಯಶ್ನುತೇ ತದನನ್ತರಮ್॥ 'ಪ್ರಣವಂ ಹೀಶ್ವರಂ ವಿದ್ಯಾತ್ ಸರ್ವಸ್ಯ ಹೃದಯೇ ಸ್ಥಿತಮ್। ಸರ್ವವ್ಯಾಪಿನಮೋಙ್ಕಾರಂ ಜ್ಞಾತ್ವಾ ಧೀರೋ ನ ಶೋಚತಿ॥ ಅಮಾತ್ರೋಽನನ್ತಮಾತ್ರಶ್ಚ ದ್ವೈತಸ್ಯೋಪಶಮಃ ಶಿವಃ। ಓಙ್ಕರೋ ವಿದಿತೋ ಯೇನ ಸ ಮುನಿರ್ನೇತರೋ ಜನಃ॥' (ಗೌ.ಕಾ.೧-೨೬ ಪ್ರಭೃತಿ ೨೯ ಪರ್ಯನ್ತಮ್) ಇತಿ। 'ಓಂ ತದಾತ್ಮಾ। ಓಂ ತತ್ಸತ್ಯಮ್' (ತೈ.ನಾ.೨೯) ಇತ್ಯಾದಿಭ್ಯಃ ಶ್ರುತಿಭ್ಯಃ॥

'ಓಮಿತ್ಯೇಕಾಕ್ಷರಂ ಬ್ರಹ್ಮ ವ್ಯಾಹರನ್ ಮಾಮನುಸ್ಮರನ್। ಯಃ ಪ್ರಯಾತಿ ತ್ಯಜನ್ ದೇಹಂ ಸ ಯಾತಿ ಪರಮಾಂ ಗತಿಮ್॥' (ಗೀ. ೮-೧೩), "ಯದಕ್ಷರಂ ವೇದವಿದೋ ವದನ್ತಿ ವಿಶನ್ತಿ ಯದ್ಯತಯೋ ವೀತರಾಗಾಃ ಯದಿಚ್ಛನ್ತೋ ಬ್ರಹ್ಮಚರ್ಯಂ ಚರನ್ತಿ ತತ್ತೇ ಪದಂ ಸಂಗ್ರಹೇಣ ಪ್ರವಕ್ಷ್ಯೇ॥' (ಗೀ. ೮-೧೧), 'ರಸೋಽಹಮಪ್ಸು ಕೌನ್ತೇಯ ಪ್ರಭಾಸ್ಮಿ ಶಶಿಸೂರ್ಯಯೋಃ। ಪ್ರಣವಃ ಸರ್ವವೇದೇಷು ಶಬ್ದಃ ಖೇ ಪೌರುಷಂ ನೃಷು॥' (ಗೀ.೭-೮), 'ಮಹರ್ಷೀಣಾಂ ಭೃಗುರಹಂ ಗಿರಾಮಸ್ಮ್ಯೇಕಮಕ್ಷರಮ್। ಯಜ್ಞಾನಾಂ ಜಪಯಜ್ಞೋಽಸ್ಮಿ ಸ್ಥಾವರಾಣಾಂ ಹಿಮಾಲಯಃ (ಗೀ.೧೦-೨೫), 'ಆದ್ಯಂ (ಚ) ತ್ರ್ಯಕ್ಷರಂ ಬ್ರಹ್ಮ ತ್ರಯೀ ಯಸ್ಮಿನ್ ಪ್ರತಿಷ್ಠಿತಾ। ಏಕಾಕ್ಷರಂ ಪರಂ ಬ್ರಹ್ಮ ಪ್ರಾಣಾಯಾಮಃ ಪರಂ ತಪಃ[1]॥' (ಅತ್ರಿ. ೧-೧೧) 'ಪ್ರಣವಾದ್ಯಾಸ್ತ್ರಯೋ ವೇದಾಃ ಪ್ರಣವೇ ಪರ್ಯವಸ್ಥಿತಾಃ। ವಾಙ್ಮಯಂ ಪ್ರಣವಃ ಸರ್ವಂ ತಸ್ಮಾತ್ ಪ್ರಣವಮಭ್ಯಸೇತ್' (ಅತ್ರಿ. ೧-೯) - ಇತ್ಯಾದಿಸ್ಮೃತೇಶ್ಚ। ವಿಶ್ವಶಬ್ದೇನೋಙ್ಕಾರೋಽಭಿಧೀಯತೇ । ವಾಚ್ಯವಾಚಕಯೋರತ್ಯನ್ತಭೇದಾಭಾವಾತ್ ವಿಶ್ವಮಿತ್ಯೋಙ್ಕಾರ ಏವ ಬ್ರಹ್ಮ - ಇತ್ಯರ್ಥಃ॥

## (ಭಾಷ್ಯಾರ್ಥ)

**ಕಾಠಕೋಪನಿಷತ್ತಿನಲ್ಲಿ** 'ಧರ್ಮಕ್ಕಿಂತಲೂ ಬೇರೆಯಾಗಿ ಅಧರ್ಮಕ್ಕಿಂತಲೂ ಬೇರೆಯಾಗಿ ..... (ಇರುವ ಯಾವದನ್ನು ನೀನು ಅರಿತಿರುವೆಯೋ ಅದನ್ನು ಹೇಳು)' ಎಂದು ಆರಂಭಿಸಿ 'ಎಲ್ಲಾ ವೇದಗಳೂ ಯಾವ ಪದವಿಯನ್ನು ಹೇಳುತ್ತಿರುವವೋ, ಎಲ್ಲಾ ತಪಸ್ಸುಗಳೂ ಯಾವದನ್ನು (ಪಡೆಯುವದಕ್ಕಾಗಿ ಹೊರಟಿರುವೆನೆಂದು) ಹೇಳುತ್ತವೆಯೋ, ಯಾವದನ್ನು ಬಯಸಿ ಸಾಧಕರು ಬ್ರಹ್ಮಚರ್ಯವನ್ನು ಮಾಡುತ್ತಿರುವರೋ, ಆ ಸ್ಥಾನವನ್ನು ಸ್ವಲ್ಪದರಲ್ಲಿ ನಿನಗೆ ಹೇಳುತ್ತೇನೆ; ಓಮ್ ಎಂಬುದೇ ಇದು; 'ಈ ಅಕ್ಷರವೇ ಬ್ರಹ್ಮವು, ಈ ಅಕ್ಷರವೇ ಹೆಚ್ಚಿನದು (ಬ್ರಹ್ಮವು), ಈ ಅಕ್ಷರವನ್ನು ಅರಿತು ಯಾವನು, ಯಾವದನ್ನು ಇಚ್ಛಿಸುವನೋ ಅದು ಅವನಿಗೆ ಪ್ರಾಪ್ತವಾಗುವದು' ಎಂದಿರುತ್ತದೆ. **ಪ್ರಶ್ನೋಪನಿಷತ್ತಿನಲ್ಲಿ** 'ಸತ್ಯಕಾಮನೆ, ಪ್ರಸಿದ್ಧವಾದ ಈ ಓಂಕಾರ ಎಂಬುದೇ ಪರ ಮತ್ತು ಅಪರಬ್ರಹ್ಮವು' ಎಂದು

---

1. ಈ ಶ್ಲೋಕದ ಅನಂತರ 'ಓಂಕಾರಃ ಸ್ವರ್ಗದ್ವಾರಂ ತಸ್ಮಾದ್ ಬ್ರಹ್ಮಾಧ್ಯೇಷ್ಯಮಾಣ ಏತದಾದಿ ಪ್ರತಿಪದ್ಯೇತ। ವಿಕಥಾಂ ಚಾನ್ಯಾಂ ಕೃತ್ವಾ ಏವಂ ಲೌಕಿಕ್ಯಾ ವಾಚಾ ವ್ಯಾವರ್ತತೇ ಬ್ರಹ್ಮ' - ಎಂದು ವಾ॥ ಮೈ॥ ಪಾಠದಲ್ಲಿ ಅಧಿಕವಾಗಿದೆ.

ಆರಂಭಿಸಿ ''ಯಾವನಾದರೆ ಈ 'ಓಮ್' ಎಂಬ ಅಕ್ಷರವನ್ನು ಮೂರು ಮಾತ್ರೆಗಳ (ಅರ್ಥಾನುಸಂಧಾನಪೂರ್ವಕವಾಗಿ) ಪರಮಪುರುಷನನ್ನು ಅಭಿಧ್ಯಾನಮಾಡುತ್ತಿರುವನೋ[1] ಎಂದಿದೆ. 'ಓಮ್ ಎಂಬುದು ಬ್ರಹ್ಮವು, ಇದು ಓಮ್ ಎಂಬುದೇ' ಎಂದು **ಯಜುರಾರಣ್ಯಕದಲ್ಲಿದೆ.** 'ಹೇಗೆ ಎಲ್ಲಾ ಎಲೆಗಳೂ (ಒಳಗಿನ) ಶಂಕು (ವೆಂಬ) ನಾರಿನಿಂದ ಕೊರೆಯಲ್ಪಟ್ಟಿರುವವೋ, ಹಾಗೆಯೇ ಓಂಕಾರದಿಂದ ವಾಕ್ಕೆಲ್ಲವೂ ಕೊರೆಯಲ್ಪಟ್ಟಿದೆ. 'ಇದೆಲ್ಲವೂ ಓಂಕಾರವೇ' ಎಂದು ಛಾಂದೋಗ್ಯದಲ್ಲಿದೆ. '(ಇದೆಲ್ಲವೂ) ಓಮ್ ಎಂಬೀ ಅಕ್ಷರವೇ' ಎಂದು ಪ್ರಾರಂಭಿಸಿ 'ಪ್ರಣವವೇ ಅಪರಬ್ರಹ್ಮವಷ್ಟೆ! ಮತ್ತು ಪ್ರಣವವೇ ಪರಬ್ರಹ್ಮವೆನಿಸಿರುತ್ತದೆ. ಪ್ರಣವವೇ ಹಿಂದಿಲ್ಲದ ಒಳಗಿಲ್ಲದ ಹೊರಗಿಲ್ಲದ ಅವ್ಯಯ (ತತ್ತ್ವ)ವು. ಎಲ್ಲಕ್ಕೂ ಪ್ರಣವವೇ ಆದಿ, ನಡುವಿನ ಭಾಗವು ಮತ್ತು ಕೊನೆ. ಹೀಗೆಂದು ಪ್ರಣವವನ್ನು ಅರಿತಕೂಡಲೆ ಅದರಲ್ಲಿ ಪ್ರವೇಶಿಸುವನು. ಪ್ರಣವವನ್ನು ಪ್ರತಿಯೊಬ್ಬನ ಹೃದಯದಲ್ಲಿರುವ ಈಶ್ವರನೆಂದು ತಿಳಿಯಬೇಕು. ಓಂಕಾರವು ಸರ್ವವ್ಯಾಪಿಯೆಂದು ಅರಿತುಕೊಂಡ ವಿವೇಕಿಯು ಶೋಕಿಸುವದಿಲ್ಲ. ಮಾತ್ರೆ (ಅಳತೆ) ಯಿಲ್ಲದ್ದು, ಅನಂತಮಾತ್ರೆಯುಳ್ಳದ್ದು, ದ್ವೈತದ ನಾಶವೂ ಮಂಗಲಕರವೂ ಆಗಿರುವ ಓಂಕಾರವನ್ನು ಯಾವನು ಅರಿತುಕೊಂಡಿರುವನೋ ಆತನೇ ಮುನಿಯು, ಮತ್ತೊಬ್ಬನಲ್ಲ' ಎಂಬವರೆಗೂ **ಮಾಂಡೂಕ್ಯೋಪನಿಷತ್ತು**[2] (ಹೇಳುತ್ತಿದೆ).

'ಓಮ್ ಎಂಬ ಅದೇ ಬ್ರಹ್ಮವು; ಓಮ್ ಎಂಬುದೇ ವಾಯು, ಓಮ್ ಎಂಬುದು ಆತ್ಮನು; 'ಓಮ್' ಎಂಬುದೇ ಸತ್ಯವು - ಮುಂತಾದ ಶ್ರುತಿಗಳಿಂದಲೂ (ಹೀಗೆಂದು ತಿಳಿಯಬರುತ್ತದೆ).

''ಓಮ್ ಎಂಬ ಒಂದಕ್ಷರರೂಪವಾದ ಬ್ರಹ್ಮವನ್ನು ಉಚ್ಚರಿಸುತ್ತಾ, ನನ್ನನ್ನು ಅನುಸ್ಮರಣೆ ಮಾಡುತ್ತಲೂ, ಯಾವನು ದೇಹವನ್ನು ಬಿಟ್ಟು ತೆರಳುವನೋ ಆತನು ಪರಮಗತಿಯನ್ನೈದುತ್ತಾನೆ'' ಯಾವ (ಓಮ್ ಎಂಬ) ಅಕ್ಷರವನ್ನು ವೇದಜ್ಞರು ಹೇಳುತ್ತಿರುವರೋ, ವಿರಕ್ತರಾದ ಯತಿಗಳು ಯಾವದರಲ್ಲಿ ಪ್ರವೇಶಿಸುತ್ತಾರೋ, ಯಾವದನ್ನು ಇಚ್ಛಿಸುವವರು ಬ್ರಹ್ಮಚರ್ಯವನ್ನು ಆಚರಿಸುತ್ತಾರೋ ಆ ಸ್ಥಾನವನ್ನು ನಿನಗೆ ಸಂಗ್ರಹದಲ್ಲಿ ತಿಳಿಯಿಸುವೆನು' 'ಎಲೈ ಕುಂತೀಪುತ್ರನೇ, ನಾನು ನೀರಿನಲ್ಲಿ[3] ಸವಿಯು, ಚಂದ್ರಸೂರ್ಯರಲ್ಲಿ ಬೆಳಕು, ಸಕಲವೇದಗಳಲ್ಲಿಯೂ ಪ್ರಣವವು[4]; ಆಕಾಶದಲ್ಲಿ ಶಬ್ದವು, ಮನುಷ್ಯರಲ್ಲಿ ಪುರುಷತ್ವವು' 'ಮಹರ್ಷಿಗಳಲ್ಲಿ ಭೃಗುವು

1. ಅವನಿಗೆ ಕ್ರಮಮುಕ್ತಿಯೇ ಆಗುವದು ಎಂದು ಉಪನಿಷತ್ತಿನ ವಾಕ್ಯಶೇಷದಲ್ಲಿ ಇದೆ.
2. 'ಮಾಂಡೂಕ್ಯೋಪನಿಷತ್ತು' ಎಂಬ ಮಾತು ಮೈ॥ ಪಾಠದಲ್ಲಿಲ್ಲ; ಆದರೆ 'ಓಮಿತ್ಯೇತದಕ್ಷರಮ್' ಎಂದು ಪ್ರಾರಂಭಿಸಿರುವದರಿಂದ ಅಲ್ಲಿಯೂ ಇದು ಶ್ರುತಿಯೆಂದೇ ಒಪ್ಪಿದೆಯೆಂದು ಭಾವಿಸಬೇಕಾಗಿದೆ. ಪೀಠಿಕೆಯನ್ನು ನೋಡಿ.
3. ದ್ರವವಸ್ತುಗಳಲ್ಲಿ ಎಂಬುದಕ್ಕೆ ಉಪಲಕ್ಷಣವಾಗಿ 'ನೀರಿನಲ್ಲಿ' ಎಂದು ಅಭಿಪ್ರಾಯವಿರಬಹುದು.
4. ಓಂಕಾರವು

ನಾನು, ಶಬ್ದಗಳಲ್ಲಿ (ಓಂಕಾರವೆಂಬ) ಒಂದಕ್ಷರವು, ಯಜ್ಞಗಳಲ್ಲಿ ಜಪಯಜ್ಞವಾಗಿರುವೆನು, ಸ್ಥಾವರಗಳಲ್ಲಿ ಹಿಮಾಲಯವಾಗಿರುವೆನು' 'ಆದ್ಯವಾದ ತ್ರ್ಯಕ್ಷರವು ಬ್ರಹ್ಮವು, ಅದರಲ್ಲಿ ವೇದತ್ರಯವು ನೆಲೆನಿಂತಿರುವದು', ಏಕಾಕ್ಷರವು ಪರಬ್ರಹ್ಮವು, ಪ್ರಾಣಾಯಾಮವೇ ಪರಮತಪಸ್ಸು', 'ಮೂರು ವೇದಗಳೂ ಪ್ರಣವದಿಂದ ಮೊದಲಾಗಿರುವವು, ಪ್ರಣವದಲ್ಲಿಯೇ ಕೊನೆಗಾಣುವವು; ವಾಙ್ಮಯವೆಲ್ಲವೂ ಪ್ರಣವವೇ. ಆದ್ದರಿಂದ ಪ್ರಣವವನ್ನು ಅಭ್ಯಾಸಮಾಡಬೇಕು' - ಇವೇ ಮುಂತಾಗಿರುವ ಸ್ಮೃತಿಯ[1] ಪ್ರಮಾಣದಿಂದಲೂ 'ವಿಶ್ವ' ಎಂಬ ಶಬ್ದದಿಂದ ಓಂಕಾರವೇ ಉಕ್ತವಾಗಿರುತ್ತದೆ. ವಾಚ್ಯವಾಚಕಗಳಿಗೆ **ಅತ್ಯಂತಭೇಧವಿಲ್ಲವಾದ್ದರಿಂದ ವಿಶ್ವವೆಂದರೆ ಓಂಕಾರವು**, ಎಂದರೆ ಬ್ರಹ್ಮವೇ ಎಂದರ್ಥ.[2]

## (ಭಾಷ್ಯ)

'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾನ್ತ ಉಪಾಸೀತ' (ಛಾಂ. ೩-೧೪-೧), ಇತಿ। ಏತದುಕ್ತಂ ಭವತಿ - ಯಸ್ಮಾತ್ ಸರ್ವಮಿದಂ ವಿಕಾರಜಾತಂ ಬ್ರಹ್ಮ ತಜ್ಜತ್ವಾತ್, ತಲ್ಲಯತ್ವಾತ್, ತದನತ್ವಾಚ್ಚ। ನ ಚ ಸರ್ವಸ್ಯ ಏಕಾತ್ಮತ್ವೇ ರಾಗಾದಯಃ ಸಂಭವನ್ತಿ; ತಸ್ಮಾತ್ ಶಾನ್ತ ಉಪಾಸೀತ (ಇತಿ ಶ್ರುತೇಃ)।

ಶ್ರೂಯತಾಂ ಧರ್ಮಸರ್ವಸ್ವಂ ಶ್ರುತ್ವಾ ಚೈವಾವಧಾರ್ಯತಾಮ್ ।
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ॥ (ವಿ.ಧ.೩-೨೫೫-೪೪)

ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ ।
ಸುಖಂ ವಾ ಯದಿ ವಾ ದುಃಖಂ ಸ ಯೋಗೀ ಪರಮೋ ಮತಃ॥
(ಗೀ.೬-೩೨)

ನಿರ್ಗುಣಃ ಪರಮಾತ್ಮಾತ್ರ ದೇಹೇ ವ್ಯಾಪ್ಯ ವ್ಯವಸ್ಥಿತಃ।
ತಮಹಂ ಜ್ಞಾನವಿಜ್ಞೇಯಂ ನಾವಮನ್ಯೇ ನ ಲಙ್ಘಯೇ ॥

ಯದ್ವ್ಯಾಗಮೇನ ವಿನ್ದೇಯಂ ತಮಹಂ ಭೂತಭಾವನಮ್।
ಕ್ರಮೇಯಂ ತ್ವಾಂ ಗಿರಿಂ ಚೇಮಂ ಹನೂಮಾನಿವ ಸಾಗರಮ್॥
(ಮ.ಭಾ.ವನ. ೧೪೭-೮,೯)

---

1. 'ಸ್ಮೃತಿಃ' ಎಂದಿದ್ದರೆ 'ಸ್ಮೃತಿಯು ಹೇಳುತ್ತಿದೆ' - ಎಂದು ಕನ್ನಡಿಸಿಕೊಳ್ಳಬೇಕು. ನಿಜವಾಗಿ ಇದು ಬೇಕಿಲ್ಲ.
2. ಓಂಕಾರವನ್ನು ಸರ್ವವೆಂದು ಹೊಗಳುವ ಅರ್ಥವಾದವಾಕ್ಯಗಳ ಪ್ರಮಾಣದಿಂದ ವಿಷ್ಣುವಿಗೂ ಓಂಕಾರವೆಂದು ಹೆಸರು ಎಂಬ ಅಭಿಪ್ರಾಯವಿರಬಹುದು.

ಬದ್ಧವೈರಾಣಿ ಭೂತಾನಿ ದ್ವೇಷಂ ಕುರ್ವನ್ತಿ ಚೇತ್ ತತಃ।
ಶೋಚ್ಯಾನ್ಯಹೋಽತಿಮೋಹೇನ[1] ವ್ಯಾಪ್ತಾನೀತಿ ಮನೀಷಿಣಾಮ್॥

ಏತೇ ಭಿನ್ನದೃಶೋ ದೈತ್ಯಾ ವಿಕಲ್ಪಾಃ ಕಥಿತಾ ಮಯಾ।
ಕೃತ್ವಾಭ್ಯುಪಗಮಂ ತತ್ರ ಸಂಕ್ಷೇಪಃ ಶ್ರೂಯತಾಂ ಮಮ॥

ವಿಸ್ತಾರಃ ಸರ್ವಭೂತಸ್ಯ ವಿಷ್ಣೋಃ ಸರ್ವಮಿದಂ ಜಗತ್।
ದ್ರಷ್ಟವ್ಯಮಾತ್ಮವತ್ತಸ್ಮಾದಭೇದೇನ ವಿಚಕ್ಷಣೈಃ॥

ಸಮುತ್ಸೃಜ್ಯಾಸುರಂ ಭಾವಂ ತಸ್ಮಾದ್ಯೂಯಂ ತಥಾ ವಯಮ್।
ತಥಾ ಯತ್ನಂ ಕರಿಷ್ಯಾಮೋ ಯಥಾ ಪ್ರಾಪ್ಸ್ಯಾಮ ನಿರ್ವೃತಿಮ್॥
(ವಿ.ಪು. ೧-೧೭-೮೨ ಪ್ರಭೃತಿ ೮೫)

ಸರ್ವತ್ರ ದೈತ್ಯಾಃ ಸಮತಾಮುಪೇತ।
ಸಮತ್ವಮಾರಾಧನಮಚ್ಯುತಸ್ಯ ॥ (ವಿ.ಪು.೧-೧೭-೯೦)

ನ ಮನ್ತ್ರಾದಿಕೃತಸ್ತಾತ ನ ಚ ನೈಸರ್ಗಿಕೋ ಮಮ।
ಸ್ವಭಾವ ಏಷ ಸಾಮಾನ್ಯೋ ಯಸ್ಯ ಯಸ್ಯಾಚ್ಯುತೋ ಹೃದಿ॥

ಅನ್ಯೇಷಾಂ ಯೋ ನ ಪಾಪಾನಿ ಚಿನ್ತಯತ್ಯಾತ್ಮನೋ ಯಥಾ।
ತಸ್ಯ ಪಾಪಾಗಮಸ್ತಾತ ಹೇತ್ವಭಾವಾನ್ನ ವಿದ್ಯತೇ॥

ಕರ್ಮಣಾ ಮನಸಾ ವಾಚಾ ಪರಪೀಡಾಂ ಕರೋತಿ ಯಃ।
ತದ್ಬೀಜಂ ಜನ್ಮ ಫಲತಿ ಪ್ರಭೂತಂ ತಸ್ಯ ಚಾಶುಭಮ್॥

ಸೋಽಹಂ ನ ಪಾಪಮಿಚ್ಛಾಮಿ ನ ಕರೋಮಿ ವದಾಮಿ ವಾ।
ಚಿನ್ತಯನ್ ಸರ್ವಭೂತಸ್ಥಮಾತ್ಮನ್ಯಪಿ ಚ ಕೇಶವಮ್॥

ಶಾರೀರಂ ಮಾನಸಂ ವಾಗ್ಜಂ ದೈವಂ ಭೂತಭವಂ ತಥಾ।
ಸರ್ವತ್ರ ಸಮಚಿತ್ತಸ್ಯ ತಸ್ಯ ಮೇ ಜಾಯತೇ ಕುತಃ॥

ಏವಂ ಸರ್ವೇಷು ಭೂತೇಷು ಭಕ್ತಿರವ್ಯಭಿಚಾರಿಣೀ ।
ಕರ್ತವ್ಯಾ ಪಣ್ಡಿತೈರ್ಜ್ಞಾತ್ವಾ ಸರ್ವಭೂತಮಯಂ ಹರಿಮ್॥
(ವಿ.ಪು. ೧-೧೯-೪ ಪ್ರಭೃತಿ ೯)

ಸಾಮ ಚೋಪಪ್ರದಾನಂ ಚ ಭೇದದಣ್ಡೌ ತಥಾಪರೌ।
ಉಪಾಯಾಃ ಕಥಿತಾ ಹ್ಯೇತೇ ಮಿತ್ರಾದೀನಾಂ ಚ ಸಾಧಕಮ್॥

ತಾನೇವಾಹಂ ನ ಪಶ್ಯಾಮಿ ಮಿತ್ರಾದೀಂಸ್ತಾತ ಮಾ ಕ್ರುಧಃ।
ಸಾಧ್ಯಾಭಾವೇ ಮಹಾಬಾಹೋ ಸಾಧನೈಃ ಕಿಂ ಪ್ರಯೋಜನಮ್ ?॥

1. 'ಸುಶೋಚ್ಯಾನ್ಯತಿಮೋಹೇನ' ಎಂದು ಅಚ್ಚಿನ ಪುರಾಣದ ಪಾಠ.

ಸರ್ವಭೂತಾತ್ಮಕೇ ತಾತ ಜಗನ್ನಾಥೇ ಜಗನ್ಮಯೇ।
ಪರಮಾತ್ಮನಿ ಗೋವಿನ್ದೇ ಮಿತ್ರಾಮಿತ್ರಕಥಾ ಕುತಃ॥
(ವಿ.ಪು.೧-೧೯-೩೫ ಪ್ರಭೃತಿ ೩೭)

ಜಡಾನಾಮವಿವೇಕಾನಾಮಶೂರಾಣಾಮಪಿ ಪ್ರಭೋ।
ಭಾಗ್ಯಭೋಗ್ಯಾನಿ ರಾಜ್ಯಾನಿ ಸನ್ತ್ಯನೀತಿಮತಾಮಪಿ॥
ತಸ್ಮಾದ್ಯತೇತ ಪುಣ್ಯೇಷು ಯ ಇಚ್ಛೇನ್ಮಹತೀಂ ಶ್ರಿಯಮ್।
ಯತಿತವ್ಯಂ ಸಮತ್ವೇ ಚ ನಿರ್ವಾಣಮಪಿ ಚೇಚ್ಛತಾ॥
ದೇವಾ ಮನುಷ್ಯಾಃ ಪಶವಃ ಪಕ್ಷಿವೃಕ್ಷಸರೀಸೃಪಾಃ।
ರೂಪಮೇತದನನ್ತಸ್ಯ ವಿಷ್ಣೋರ್ಭಿನ್ನಮಿವ ಸ್ಥಿತಮ್॥
ಏತದ್ವಿಜಾನತಾ ಸರ್ವಂ ಜಗತ್ ಸ್ಥಾವರಜಙ್ಗಮಮ್।
ದ್ರಷ್ಟವ್ಯಮಾತ್ಮವದ್ ವಿಷ್ಣುರ್ಯತೋಽಯಂ ವಿಶ್ವರೂಪಧೃಕ್॥
ಏವಂ ಜ್ಞಾತೇ ಸ ಭಗವಾನನಾದಿಃ ಪರಮೇಶ್ವರಃ।
ಪ್ರಸೀದತ್ಯಚ್ಯುತಸ್ತಸ್ಮಿನ್ ಪ್ರಸನ್ನೇ ಕ್ಲೇಶಸಂಕ್ಷಯಃ॥
(ವಿ.ಪು. ೧-೧೯-೪೫ ಪ್ರಭೃತಿ ೪೯)

ಬಹೂನಾಂ ಜನ್ಮನಾಮನ್ತೇ ಜ್ಞಾನವಾನ್ ಮಾಂ ಪ್ರಪದ್ಯತೇ।
ವಾಸುದೇವಃ ಸರ್ವಮಿತಿ ಸ ಮಹಾತ್ಮಾ ಸುದುರ್ಲಭಃ॥ (ಗೀ. ೭-೧೯)

ಇತ್ಯಾದಿವಚನೈಶ್ಚ ಹಿಂಸಾದಿರಹಿತೇನ ಸ್ತುತಿನಮಸ್ಕಾರಾದಿ ಕರ್ತವ್ಯಮಿತಿ ದರ್ಶಯಿತು ವಿಶ್ವಶಬ್ದೇನ ಬ್ರಹ್ಮಾಭಿಧೀಯತ ಇತಿ ವಾ॥

## (ಭಾಷ್ಯಾರ್ಥ)

'ಇದೆಲ್ಲವೂ ಬ್ರಹ್ಮವೇ ಸರಿ; ಏಕೆಂದರೆ (ಇದು) ತಜ್ಜಲಾನ್ ಆಗಿರುತ್ತದೆ. ಆದ್ದರಿಂದ ಶಾಂತನಾಗಿ ಉಪಾಸನೆ ಮಾಡಬೇಕು' ಎಂದು ಶ್ರುತಿ. ಇಲ್ಲಿ ಇಷ್ಟನ್ನು ಹೇಳಿದಂತೆ ಆಗಿರುತ್ತದೆ; ಈ ಕಾರ್ಯಸಮೂಹವೆಲ್ಲವೂ ಬ್ರಹ್ಮವೇ, ಏಕೆಂದರೆ (ಇದು) ಅದರಿಂದ ಹುಟ್ಟಿರುತ್ತದೆ, ಆದರಲ್ಲಿ ಲಯವಾಗುತ್ತದೆ, ಅದರಲ್ಲಿಯೇ (ಇದ್ದು) ವ್ಯಾಪಾರವನ್ನು ಮಾಡುತ್ತಿರುತ್ತದೆ. ಎಲ್ಲವೂ ಒಂದೇ ಸ್ವರೂಪದ್ದಾಗಿರುವಲ್ಲಿ ರಾಗಾದಿಗಳು ಸಂಭವಿಸುವಂತಿರುವದಿಲ್ಲ; ಆದ್ದರಿಂದ ಶಾಂತನಾಗಿ ಉಪಾಸನೆ ಮಾಡಬೇಕು.

'ಧರ್ಮದ ಸ್ವರೂಪವನ್ನು ಕೇಳಿರಿ, ಶ್ರವಣಮಾಡಿ (ಅದರ ಅರ್ಥವನ್ನು) ನಿಶ್ಚಯಮಾಡಿಕೊಳ್ಳಿರಿ. (ಅದೇನೆಂದರೆ): ತನಗೆ ಪ್ರತಿಕೂಲವಾಗಿರುವವುಗಳನ್ನು ಮತ್ತೊಬ್ಬರಿಗೆ ಆಚರಿಸಬಾರದು' 'ಅರ್ಜುನನೆ, ಸುಖವನ್ನಾಗಲಿ, ದುಃಖವನ್ನಾಗಲಿ, ಎಲ್ಲೆಲ್ಲಿಯೂ ತನ್ನಂತೆಯೇ ಸಮವಾಗಿಯೇ ಯಾವಾತನು ಕಾಣುತ್ತಿರುವನೋ,

ಆತನೇ ಪರಮಯೋಗಿ ಎಂದು (ನನ್ನ)ಮತವು'[1] ನಿರ್ಗುಣನಾದ ಪರಮಾತ್ಮನೇ ಈ ದೇಹವಲ್ಲಿ ವ್ಯಾಪಿಸಿಕೊಂಡಿರುತ್ತಾನೆ. ಜ್ಞಾನದಿಂದ ಅರಿಯಬರುವ ಆತನನ್ನು ನಾನು ಅಪಮಾನಗೊಳಿಸಲಾರೆನು; ಮೀರಿಹೋಗಲಾರೆನು. ಭೂತಭಾವನನಾದ ಆ ಈತನನ್ನು ಆಗಮದಿಂದ ಪಡೆದುಕೊಳ್ಳುವೆನಾದರೆ ನಿನ್ನನ್ನೂ ಈ ಬೆಟ್ಟವನ್ನೂ - ಹನುಮಂತನು ಸಾಗರವನ್ನು ದಾಟಿದಂತೆ ದಾಟಿಹಾರಿಯೇನು! 'ಜೀವರುಗಳು ವೈರವನ್ನು ಕಟ್ಟಿಕೊಂಡು, ದ್ವೇಷವನ್ನು ಮಾಡುತ್ತಿರುವರಾದರೆ ಅವರನ್ನು ಕುರಿತು ವಿವೇಕಿಗಳಾದವರು 'ಎಲಾ ಇವರು ಅತಿಮೋಹದಿಂದ ವ್ಯಾಪ್ತರಾಗಿರುತ್ತಾರೆ' - ಎಂದು ಅತಿಯಾಗಿ ಶೋಕಿಸಬೇಕು. ಎಲೈ ದೈತ್ಯರೆ, ಈ ಭೇದದರ್ಶಿಗಳ ವಿಕಲ್ಪಗಳನ್ನು ನಾನು ಹೇಳಿರುತ್ತೇನೆ. ಇದು (ಅವರ) ಆ ದೃಷ್ಟಿಯನ್ನು ಒಪ್ಪಿ ಹೇಳಿದ್ದು, ಆ ವಿಷಯದಲ್ಲಿ ಸಂಕ್ಷೇಪವನ್ನು ಹೇಳುತ್ತೇನೆ ಕೇಳಿರಿ : ಸರ್ವಭೂತನಾಗಿರುವ ವಿಷ್ಣುವಿನ ವಿಸ್ತಾರವೇ ಈ ಜಗತ್ತೆಲ್ಲವೂ (ಆಗಿರುತ್ತದೆ). ಆದ್ದರಿಂದ ವಿವೇಕಿಗಳಾದವರು (ಎಲ್ಲರನ್ನೂ) ತಮ್ಮಂತೆಯೇ ಎಂದು ಅಭೇದದಿಂದ ಕಾಣಬೇಕು. "ಆದ್ದರಿಂದ ಅಸುರಭಾವವನ್ನು ಬಿಟ್ಟು ನೀವೂ ನಾವೂ ಹೇಗಾದರೆ ಸುಖವನ್ನು ಪಡೆದುಕೊಳ್ಳಬಹುದೋ ಹಾಗೆ ಯತ್ನವನ್ನು ಮಾಡೋಣ" "ದೈತ್ಯರೆ; ಎಲ್ಲೆಲ್ಲಿಯೂ ಸಮತ್ವವನ್ನು ಪಡೆದುಕೊಳ್ಳಿರಿ; ಸಮತ್ವವೇ ಅಚ್ಯುತನ ಆರಾಧನೆ" "ತಂದೆಯೆ, (ಇದು) ಮಂತ್ರಾದಿಗಳಿಂದಾದದ್ದೂ ಅಲ್ಲ, ಅಥವಾ ನನಗೆ ಸ್ವಾಭಾವಿಕವಾದದ್ದೂ ಅಲ್ಲ; ಯಾವಯಾವನ ಹೃದಯದಲ್ಲಿ ಅಚ್ಯುತನು ಇರುತ್ತಾನೋ ಅವರಿಗೆಲ್ಲ ಇದು ಸಾಮಾನ್ಯವಾಗಿರುವ ಪ್ರಭಾವವು. ಯಾವನು ಮತ್ತೊಬ್ಬರ ಪಾಪಗಳನ್ನು ತನ್ನ (ಪಾಪಗಳಂತೆ) ಎಂದು ಚಿಂತಿಸಿಕೊಳ್ಳುವನೋ, ಅವನಿಗೆ ಕಾರಣವಿಲ್ಲದ್ದರಿಂದ ಪಾಪದ (ಫಲವು) ಬಂದು ಸೇರಿಕೊಳ್ಳುವದಿಲ್ಲ. 'ಕರ್ಮದಿಂದಲೂ ಮನಸ್ಸಿನಿಂದಲೂ ವಾಕ್ಕಿನಿಂದಲೂ ಯಾವನು ಮತ್ತೊಬ್ಬರಿಗೆ ಹಿಂಸೆಯನ್ನು ಮಾಡುವನೋ, ಆ ಬೀಜದಿಂದ ಅವನಿಗೆ ಬಹಳ ಅಶುಭವಾದ ಜನ್ಮವು ಫಲಿಸುವದು. ಆ ನಾನು ಪಾಪಕ್ಕೆಳಸುವದಿಲ್ಲ, ಮಾಡುವದಿಲ್ಲ, ಆಡುವದೂ ಇಲ್ಲ. ಸರ್ವಪ್ರಾಣಿಗಳಲ್ಲಿಯೂ ತನ್ನಲ್ಲಿಯೂ ಇರುವ ಕೇಶವನನ್ನು ಚಿಂತಿಸುತ್ತಲೇ ಇರುವೆನು.' (ಹೀಗಿರುವದರಿಂದ) ಎಲ್ಲೆಲ್ಲಿಯೂ ಸಮಬುದ್ಧಿಯುಳ್ಳ ನನಗೆ ಶಾರೀರವಾದ, ಮಾನಸವಾದ, ಅಥವಾ ವಾಗ್ಜನ್ಯವಾದ, ದೈವಿಕವಾದ ಅಥವಾ ಭೂತಗಳಿಂದಾದ (ದುಃಖವು) ಹೇಗೆ ತಾನೇ ಉಂಟಾದೀತು? ಹೀಗೆ ಸರ್ವಪ್ರಾಣಿಗಳಲ್ಲಿಯೂ ಸರ್ವಭೂತಮಯನಾದ ಹರಿಯಿರುವನೆಂಬುದನ್ನು ಅರಿತುಕೊಂಡು ಸ್ವಲ್ಪವೂ ಮಾರ್ಪಡದ ಭಕ್ತಿಯನ್ನು ಪಂಡಿತರು ಮಾಡಬೇಕು.

"ಸಾಮ, ದಾನ - ಇವುಗಳು, ಭೇದ, ದಂಡಗಳೆಂಬ ಮತ್ತೆರಡು -ಹೀಗೆ

---

1. ಈ ಶ್ಲೋಕವು ಪ್ರಕೃತಕ್ಕೆ ಹೊಂದುವಂತೆ ತೋರುವದಿಲ್ಲ.

ಮಿತ್ರಾದಿಗಳನ್ನು ತನ್ನಂತೆ ಮಾಡಿಕೊಳ್ಳುವದಕ್ಕೆ ಉಪಾಯಗಳು ಎಂದು ಹೇಳಲಾಗಿದೆ. ಆದರೆ ಆ ಮಿತ್ರಾದಿಗಳೇ ನನಗೆ ಕಾಣುತ್ತಿಲ್ಲ; (ಆದ್ದರಿಂದ) ತಂದೆಯೆ, ಕ್ರೋಧವನ್ನು ಮಾಡದಿರು, ಎಲೈ ಮಹಾಬಾಹುವೆ, ಸಾಧ್ಯವೇ ಇಲ್ಲದಿರುವಲ್ಲಿ ಸಾಧನಗಳಿಂದ ಯಾವ ಪ್ರಯೋಜನವಾಗಬೇಕಾದದ್ದಿದೆ? ತಂದೆಯೆ, ಸರ್ವಭೂತಸ್ವರೂಪನಾದ, ಜಗದೊಡೆಯನಾದ ಜಗನ್ಮಯನಾದ ಗೋವಿಂದಪರಮಾತ್ಮನೇ (ಎಲ್ಲವೂ) ಆಗಿರುವಲ್ಲಿ ಮಿತ್ರ, ಅಮಿತ್ರ- ಎಂಬ ಮಾತು ಎಲ್ಲಿಂದ ಬರುವದು?" 'ಪ್ರಭುವೆ, ಅಜ್ಞರೂ ಅವಿವೇಕಿಗಳೂ, ಹೇಡಿಗಳೂ, ಅನೀತಿವಂತರೂ ಆಗಿರುವವರಿಗೆ ಕೂಡ, ಭಾಗ್ಯಗಳೂ ಭೋಜ್ಯಗಳೂ ಇರುತ್ತವೆ. ಆದ್ದರಿಂದ ದೊಡ್ಡವರ ಸಂಪತ್ತನ್ನು ಪಡೆಯಲಿಚ್ಛಿಸುವಾತನೂ ಪುಣ್ಯಕರ್ಮಗಳನ್ನು ಮಾಡುವದರಲ್ಲಿ ಯತ್ನಿಸಬೇಕು. ಮುಕ್ತಿಯನ್ನು ಇಚ್ಛಿಸುವಾತನು ಸಮತ್ವವನ್ನು ಸಂಪಾದಿಸುವುದಕ್ಕೆ ಯತ್ನಿಸಬೇಕು. ದೇವತೆಗಳು, ಮನುಷ್ಯರು, ಪಶುಗಳು, ಮರಗಳು, ಹಾವುಹಲ್ಲಿಗಳು - ಇವೆಲ್ಲವೂ ಬೇರೆಬೇರೆಯಾಗಿ ತೋರುತ್ತಿರುವ ಅಮೂರ್ತನಾದ ವಿಷ್ಣುವಿನ ರೂಪವೇ. ಇದನ್ನು ಅರಿತವನು ಎಲ್ಲಾ ಸ್ಥಾವರಜಂಗಮಾತ್ಮಕವಾದ ಜಗತ್ತನ್ನು ತನ್ನಂತೆ ಕಾಣಬೇಕು; ಏಕೆಂದರೆ ಈ ಅನಂತನಾದ ವಿಷ್ಣುವು ವಿಶ್ವರೂಪವನ್ನು ಧರಿಸಿಕೊಂಡಿರುತ್ತಾನೆ. ಹೀಗೆ ಅರಿತುಕೊಂಡರೆ ಆದಿರಹಿತನೂ ಭಗವಂತನೂ ಪರಮೇಶ್ವರನೂ ಆದ ಅಚ್ಯುತನು ಪ್ರಸನ್ನನಾಗುವನು. ಈತನು ಪ್ರಸನ್ನನಾದರೆ ಕ್ಲೇಶಗಳ [1] ಕ್ಷಯವೇ ಆಗಿಬಿಡುವದು"[2]. "ಬಹಳ ಜನ್ಮಗಳ ಕೊನೆಯಲ್ಲಿ 'ವಾಸುದೇವನೇ ಸರ್ವವು' ಎಂಬ ಜ್ಞಾನವುಳ್ಳವನಾಗಿ ನನ್ನನ್ನು ಶರಣುಹೋಗುತ್ತಾನೆ. ಆ ಮಹಾತ್ಮನು ಬಹು ದುರ್ಲಭನಾಗಿದ್ದಾನೆ" ಇವೇ ಮುಂತಾದ ವಚನಗಳಿಂದಲೂ ಹಿಂಸಾದಿರಹಿತನಾಗಿ ಸ್ತುತಿ, ನಮಸ್ಕಾರ ಮುಂತಾದದ್ದನ್ನು ಮಾಡಬೇಕು - ಎಂದು ತಿಳಿಯಿಸಿಕೊಡುವದಕ್ಕಾಗಿ 'ವಿಶ್ವ' ಎಂಬ ಶಬ್ದದಿಂದ ಬ್ರಹ್ಮನನ್ನು ಹೇಳಿದೆ ಎಂದಾದರೂ (ವ್ಯಾಖ್ಯಾನವನ್ನು ಮಾಡಬಹುದು).

## (ಭಾಷ್ಯ)

ಮತ್ಕರ್ಮಕೃನ್ಮತ್ಪರಮೋ ಮದ್ಭಕ್ತಃ ಸಙ್ಗವರ್ಜಿತಃ।
ನಿರ್ವೈರಃ ಸರ್ವಭೂತೇಷು ಯಃ ಸ ಮಾಮೇತಿ ಪಾಣ್ಡವ॥ (ಗೀ.೧೧-೫೫) ಇತಿ

ನ ಚಲತಿ ನಿಜವರ್ಣಧರ್ಮತೋ ಯಃ
ಸಮಮತಿರಾತ್ಮಸುಹೃದ್ವಿಪಕ್ಷಪಕ್ಷೇ ॥
ನ ಹರತಿ ನ ಚ ಹನ್ತಿ ಕಿಞ್ಚಿದುಚ್ಚೈಃ।
ಸ್ಥಿತಮನಸಂ ತಮವೇಹಿ ವಿಷ್ಣುಭಕ್ತಮ್॥ (ವಿ.ಪು. ೩-೭-೨೦)

---

1. ಯೋಗಶಾಸ್ತ್ರದಲ್ಲಿ ಹೇಳಿರುವ ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ, ಅಭಿನಿವೇಶ ಎಂಬ ಐದು ಕ್ಲೇಶಗಳು ಎಂದು ಕೆಲವರ ವ್ಯಾಖ್ಯಾನ : ಸಂಸಾರದಲ್ಲಿ ಒದಗುವ ಸರ್ವಕ್ಲೇಶಗಳೂ ತೊಲಗುವವು ಎಂದೂ ಅರ್ಥವನ್ನು ಮಾಡಿಕೊಳ್ಳಬಹುದು.
2. ಇಲ್ಲಿಯವರೆಗೂ ಪ್ರಹ್ಲಾದನು ತಂದೆಗೆ ಹೇಳಿದ ವಾಕ್ಯಗಳನ್ನು ಉದಾಹರಿಸಿದೆ.

ವಿಮಲಮತಿರಮತ್ಸರಃ ಪ್ರಶಾನ್ತಃ
ಶುಚಿಚರಿತೋಽಖಿಲಸತ್ತ್ವಮಿತ್ರಭೂತಃ॥
ಪ್ರಿಯಹಿತವಚನೋಽಸ್ತಮಾನಮಾಯೋ
ವಸತಿ ಸದಾ ಹೃದಿ ತಸ್ಯ ವಾಸುದೇವಃ॥
ವಸತಿ ಹೃದಿ ಸನಾತನೇ ಚ ತಸ್ಮಿನ್
ಭವತಿ ಪುಮಾನ್ ಜಗತೋಽಸ್ಯ ಸೌಮ್ಯರೂಪಃ।
ಕ್ಷಿತಿರಸಮತಿರಮ್ಯಮಾತ್ಮನೋಽನ್ತಃ
ಕಥಯತಿ ಚಾರುತಯೈವ ಸಾಲಪೋತಃ॥ (ವಿ.ಪು. ೩-೭-೨೪, ೨೫)
ಸಕಲಮಿದಮಹಂ ಚ ವಾಸದೇವಃ
ಪರಮಪುಮಾನ್ಪರಮೇಶ್ವರಃ ಸ ಏಕಃ॥
ಇತಿ ಮತಿರಚಲಾ ಭವತ್ಯನನ್ತೇ
ಹೃದಯಗತೇ ವ್ರಜ ತಾನ್ ವಿಹಾಯ ದೂರಾತ್॥ (ವಿ.ಪು. ೩-೭-೩೨)
ಯಮನಿಯಮವಿಧೂತಕಲ್ಮಷಾಣಾ -
ಮನುದಿನಮಚ್ಯುತಸಕ್ತಮಾನಸಾನಾಮ್।
ಅಪಗತಮದಮಾನಮತ್ಸರಾಣಾಂ
ವ್ರಜ ಭಟ ದೂರತರೇಣ ಮಾನವಾನಾಮ್ ॥(ವಿ.ಪು.೩-೭-೨೬)

ಇತ್ಯಾದಿವಚನೈರ್ವೈಷ್ಣವಲಕ್ಷಣಸ್ಯೈವಂಪ್ರಕಾರತ್ವಾಚ್ಚ ಹಿಂಸಾದಿರಹಿತೇನ ವಿಷ್ಣೋಃ ಸ್ತುತಿನಮಸ್ಕಾರಾದಿ ಕರ್ತವ್ಯಮಿತಿ॥

## (ಭಾಷ್ಯಾರ್ಥ)

“ನನ್ನ ಕರ್ಮವನ್ನೇ ಮಾಡುತ್ತಾ, ನಾನೇ ಎಲ್ಲಕ್ಕೂ ಹೆಚ್ಚೆಂದು ಭಾವಿಸಿಕೊಂಡು ನನ್ನ ಭಕ್ತನಾಗಿ ಯಾವ ಆಸಕ್ತಿಯೂ ಇಲ್ಲದವನಾಗಿ ಯಾವ (ಪ್ರಾಣಿಗಳಲ್ಲೂ) ದ್ವೇಷವಿಲ್ಲದವನು ಯಾರೋ ಅವನೇ ನನ್ನನ್ನು ಬಂದುಸೇರುತ್ತಾನಯ್ಯ, ಪಾಂಡುಪುತ್ರ!”[1] ಎಂದು (ಗೀತೆಯಲ್ಲಿದೆ). ‘ಯಾವನು ತನ್ನ ವರ್ಣಧರ್ಮದಿಂದ ಚಲಿಸದೆ ಇರುವನೋ, ತನ್ನ ಸುಹೃತ್ತು, ವಿಪಕ್ಷ - ಇಬ್ಬರಲ್ಲಿಯೂ ಸಮಭಾವವುಳ್ಳನಾಗಿರುವನೋ (ಯಾರೊಬ್ಬರ ಸ್ವತ್ತನ್ನೂ) ಅಪಹರಿಸದೆ (ಯಾರೊಬ್ಬರನ್ನೂ) ಹಿಂಸಿಸದೆ ಇರುವನೋ, ಇಂಥ ಉನ್ನತಮಟ್ಟದಲ್ಲಿರುವ ಮನಸ್ಸುಳ್ಳಾತನು ಯಾರೋ ಅವನನ್ನು ವಿಷ್ಣುಭಕ್ತನೆಂದು ತಿಳಿ’[2] ‘ನಿರ್ಮಲವಾದ ಮನಸ್ಸಿನವನೂ, ಮಾತ್ಸರ್ಯವಿಲ್ಲದವನೂ ಹೆಚ್ಚಿನ ಶಾಂತಿಯುಳ್ಳವನೂ ಶುದ್ಧವಾದ ನಡತೆಯುಳ್ಳವನೂ ಎಲ್ಲಾ ಪ್ರಾಣಿಗಳಲ್ಲಿಯೂ ಮಿತ್ರಭಾವದಿಂದಿರುವಾತನೂ ಪ್ರಿಯವೂ ಹಿತವೂ ಆದ ವಾಕ್ಕಿನವನೂ ಮಾಯಾರಹಿತನೂ ಆಗಿರುವನಲ್ಲ, ಆತನ ಹೃದಯದಲ್ಲಿ ವಾಸುದೇವನು ಯಾವಾಗಲೂ

1. ಇದು ವಿಶ್ವರೂಪಧರನಾದ ಶ್ರೀಕೃಷ್ಣನು ಹೇಳಿದ ಮಾತು.
2. ಈ ಭಾಗಕ್ಕೂ ವಿಶ್ವನಾಮನಿರ್ವಚನಕ್ಕೂ ಸಂಬಂಧವೇನೆಂಬುದು ತಿಳಿಯಲಿಲ್ಲ.

ವಾಸವಾಗಿರುತ್ತಾನೆ, ಸನಾತನನಾದ ಆ (ದೇವನ) ಹೃದಯದಲ್ಲಿರುವ ಪುರುಷನು ಈ ಜಗತ್ತಿಗೆ ಪ್ರಿಯದರ್ಶನನಾಗಿರುತ್ತಾನೆ. ಸಾಲವೃಕ್ಷದ ಗಿಡವು ತನ್ನ ಸೌಂದರ್ಯದಿಂದಲೇ ತನ್ನೊಳಗಿರುವ ಅತಿರಮ್ಯವಾದ ಪಾರ್ಥಿವರಸವನ್ನು ಹೇಗೆ ಸೂಚಿಸುತ್ತಿರುವದೋ (ಹಾಗೆಯೇ ಇದು)' 'ಇದೆಲ್ಲವೂ ನಾನೂ ಪರಮಪುರುಷನಾದ ಪರಮೇಶ್ವರನಾದ ವಾಸುದೇವನೊಬ್ಬನೇ - ಎಂದು ಯಾವನ ಮನಸ್ಸು ಅನಂತನಾದ ಹೃದಯದಲ್ಲಿರುವ (ಭಗವಂತನಲ್ಲಿರುವದೋ), ಎಲೈ ಭಟನೆ, ಅಂಥ ಮಾನವನನ್ನು ದೂರದಲ್ಲಿಯೇ ಬಿಟ್ಟುತೆರಳು' 'ಯಮನಿಯಮಗಳಿಂದ ತೊಲಗಿಸಿದ ಪಾಪವುಳ್ಳ, ಪ್ರತಿದಿನವೂ ಅಚ್ಯುತನಲ್ಲೇ ಅನುರಾಗವುಳ್ಳ, ಮದ, ಅಭಿಮಾನ, ಹೊಟ್ಟೆಕಿಚ್ಚುಗಳನ್ನು ಕಳೆದುಕೊಂಡಿರುವ ಮನುಷ್ಯರ (ಸಮೀಪದಿಂದ) ಎಲೈ ಭಟನೆ, ದೂರ ಸರಿ!' ಇವೇ ಮುಂತಾದ ವಚನಗಳಿಂದ ವೈಷ್ಣವಲಕ್ಷಣವು ಇಂಥದ್ದಾಗಿರುವದೆಂದು (ಗೊತ್ತಾಗುವದರಿಂದಲೂ) ಹಿಂಸಾದಿಗಳನ್ನು ಬಿಟ್ಟು ವಿಷ್ಣುವಿನ ಸ್ತುತಿನಮಸ್ಕಾರವೇ ಮುಂತಾದವನ್ನು ಮಾಡುತ್ತಿರಬೇಕು.

## (ಭಾಷ್ಯ)

'ಶ್ರದ್ಧಯಾ ದೇಯಮ್। ಅಶ್ರದ್ಧಯಾಽದೇಯಮ್' (ತೈ.೧-೧೧), 'ಶ್ರದ್ಧಯಾಗ್ನಿಃ ಸಮಿಧ್ಯತೇ' (ತೈ.ಬ್ರಾ. ೨-೮-೮) ಇತಿ ಶ್ರುತೇಃ। 'ಶ್ರದ್ಧಾಪೂತಂ ವದಾನ್ಯಸ್ಯ ಹತಮಶ್ರದ್ಧಯೇತರತ್' (ಮಹಾ.ಶಾಂ.ಪ ೨೬೪-೧೩) 'ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ' (ವಿ.ಸ)) 'ಅಶ್ರೋತ್ರಿಯಂ ಶ್ರಾದ್ಧಮಧೀತಮವ್ರತಮದಕ್ಷಿಣಂ ಯಜ್ಞಮನೃತ್ವಿಜಾ ಹುತಮ್। ಅಶ್ರದ್ಧಯಾ ದತ್ತಮಸಂಸ್ಕೃತಂ ಹವಿರ್ಭಾಗಾಃ ಷಡೇತೇ ತವ ದೈತ್ಯಸತ್ತಮ' 'ಪುಣ್ಯಮದ್ವೇಷಿಣಾಂ ಯಚ್ಚ ಮದ್ಭಕ್ತದ್ವೇಷಿಣಾಂ ತಥಾ। ಕ್ರಯವಿಕ್ರಯ ಸಕ್ತಾನಾಂ ಪುಣ್ಯಂ ಯಚ್ಚಾಗ್ನಿಹೋತ್ರಿಣಾಮ್॥ ಅಶ್ರದ್ಧಯಾ ಚ ಯದ್ದಾನಂ ಯಜತಾಂ ದದತಾಂ ತಥಾ। ತತ್ಸರ್ವಂ ತವ ದೈತ್ಯೇಂದ್ರ ಮತ್ಪ್ರಸಾದಾತ್ ಭವಿಷ್ಯತಿ॥' (ಹರಿ.೩-೭೨-೩೭ ಪ್ರಭೃತಿ ೩೯), 'ಅಶ್ರದ್ಧಯಾ ಹುತಂ ದತ್ತಂ ತಪಸ್ತಪ್ತಂ ಕೃತಂ ಚ ಯತ್। ಅಸದಿತ್ಯುಚ್ಯತೇ ಪಾರ್ಥ ನ ಚ ತತ್ಪ್ರೇತ್ಯ ನೋ ಇಹ॥' (ಗೀ.೧೭-೨೮) ಇತ್ಯಾದಿಸ್ಮೃತಿಭಿಶ್ಚ ಶ್ರದ್ಧಯಾ ಸ್ತುತಿನಮಸ್ಕಾರಾದಿ ಕರ್ತವ್ಯಮ್, ಅಶ್ರದ್ಧಯಾ ನ ಕರ್ತವ್ಯಮ್॥

## (ಭಾಷ್ಯಾರ್ಥ)

'ಶ್ರದ್ಧೆಯಿಂದ ಕೊಡಬೇಕು, ಅಶ್ರದ್ಧೆಯಿಂದ ಕೊಡಬಾರದು', 'ಶ್ರದ್ಧೆಯಿಂದಲೇ ಅಗ್ನಿಯನ್ನು ಜ್ವಲಿಸುವಂತೆ ಮಾಡುತ್ತಾರೆ' ಎಂದು ಶ್ರುತಿಯಿರುವದರಿಂದಲೂ (ದಾನಶೀಲನಾದವನು ಮಾಡಿದ್ದು ಶ್ರದ್ಧೆಯಿಂದ ಪವಿತ್ರವಾಗುತ್ತದೆ, ಮತ್ತೊಂದು ಅಶ್ರದ್ಧೆಯಿಂದ ವ್ಯರ್ಥವಾಗುತ್ತದೆ' ಈ ಸ್ತೋತ್ರವನ್ನು ಶ್ರದ್ಧಾಭಕ್ತಿಯುತನಾಗಿ ಅಧ್ಯಯನಮಾಡುವವನು ಸುಖಾದಿಗಳಿಂದ ಕೂಡಿದವನಾಗುತ್ತಾನೆ.)

'ಶ್ರೋತ್ರಿಯನಾದ (ಭೋಕ್ತೃ)ವಿಲ್ಲದ ಶ್ರಾದ್ಧ, ನಿಯಮವಿಲ್ಲದೆ ಮಾಡಿದ ಅಧ್ಯಯನ, ದಕ್ಷಿಣೆಯಿಲ್ಲದ ಯಜ್ಞ, ಋತ್ವಿಜನಿಲ್ಲದೆ ಮಾಡಿದ ಹೋಮ, ಅಶ್ರದ್ಧೆಯಿಂದ ಮಾಡಿದ

ದಾನ, ಸಂಸ್ಕಾರವಿಲ್ಲದ ಹವಿಸ್ಸು-ಈ ಆರೂ ಎಲೈ ದೈತ್ಯಶ್ರೇಷ್ಠನೆ, ನಿನ್ನ ಭಾಗವಾಗಿರುವವು. ನನ್ನನ್ನು ದ್ವೇಷಿಸುತ್ತಿರುವವರು ಮಾಡಿದ ಪುಣ್ಯವೂ ಮತ್ತು ನನ್ನ ಭಕ್ತರನ್ನು ದ್ವೇಷಿಸುವವರು ಮಾಡಿದ ಪುಣ್ಯವೂ ಕ್ರಯವಿಕ್ರಯಗಳಲ್ಲಿಯೇ ಆಸಕ್ತರಾಗಿರುವ ಅಗ್ನಿಹೋತ್ರಿಗಳು ಮಾಡಿದ ಪುಣ್ಯವೂ ಶ್ರದ್ಧೆಯಿಲ್ಲದೆ ದಾತೃಗಳು ಮಾಡಿದ ದಾನ, ಯಜಮಾನರು ಮಾಡಿದ ಯಜ್ಞ - ಇದೆಲ್ಲವೂ ಎಲೈ ದೈತ್ಯೇಂದ್ರನೆ, ನನ್ನ ಅನುಗ್ರಹದಿಂದ ನಿನ್ನ ಪಾಲಿಗೇ ಆಗುವವು', 'ಅಶ್ರದ್ಧೆಯಿಂದ ಹೋಮ ಮಾಡಿದ್ದು ದಾನಮಾಡಿದ್ದು ತಪಸ್ಸು ಮಾಡಿದ್ದು ಮತ್ತು ಕರ್ಮವೂ ಎಲೈ ಪಾರ್ಥನೆ, ಅಸತ್ತೆನಿಸುತ್ತದೆ, ಅದಕ್ಕೆ ಸತ್ತಮೇಲಾಗಲಿ, ಈ ಲೋಕದಲ್ಲಿಯೇ ಆಗಲಿ ಯಾವ ಫಲವೂ ಆಗುವದಿಲ್ಲ' - ಇವೇ ಮುಂತಾದ ಸ್ಮೃತಿಗಳೂ ಇರುವದರಿಂದ ಶ್ರದ್ಧೆಯಿಂದಲೇ ಸ್ತುತಿನಮಸ್ಕಾರಾದಿಕರ್ಮವನ್ನು ಮಾಡಬೇಕು, ಅಶ್ರದ್ಧೆಯಿಂದ (ಮಾಡ)ಬಾರದು.

(ಭಾಷ್ಯ)

'ಓಂ ತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ' (ಗೀ. ೧೭-೨೩) ಇತಿ ಭಗವದ್ವಚನಾತ್ ಸ್ತುತಿನಮಸ್ಕಾರಾದಿಕಂ ಕರ್ಮ ಅಸಾತ್ತ್ವಿಕಂ ವಿಗುಣಮಪಿ ಶ್ರದ್ಧಾಪೂರ್ವಕಂ ಬ್ರಹ್ಮಣೋಽಭಿಧಾನತ್ರಯಪ್ರಯೋಗೇಣ ಸಗುಣಂ ಸಾತ್ತ್ವಿಕಂ ಸಂಪಾದಿತಂ ಭವತಿ॥

(ಭಾಷ್ಯಾರ್ಥ)

'ಓಂ ತತ್ ಸತ್'-ಎಂದು ಬ್ರಹ್ಮಕ್ಕೆ ಮೂರು ವಿಧವಾದ ನಿರ್ದೇಶವನ್ನು ಹೇಳಿರುತ್ತದೆ. ಎಂಬ ಭಗವದ್ವಚನಪ್ರಾಮಾಣ್ಯದಿಂದ ಸ್ತುತಿನಮಸ್ಕಾರಾದಿಕರ್ಮವು ಅಸಾತ್ತ್ವಿಕವೂ ವಿಗುಣವೂ ಆಗಿದ್ದರೂ (ಭಕ್ತಿ) ಶ್ರದ್ಧಾಪೂರ್ವಕವಾಗಿ ಬ್ರಹ್ಮದ (ಈ) ಮೂರು ನಾಮಗಳನ್ನು ಉಚ್ಚರಿಸುವದರಿಂದ ಸಗುಣವಾಗಿಯೂ ಸಾತ್ತ್ವಿಕವಾಗಿಯೂ ಮಾಡಿಕೊಂಡಂತೆ ಆಗುವದು.

(ಭಾಷ್ಯ)

ಆತ್ಮಾನಂ ವಿಷ್ಣುಂ ಧ್ಯಾತ್ವಾ ಸ್ತುತಿನಮಸ್ಕಾರಾದಿ ಕರ್ತವ್ಯಮ್ -

ನಾವಿಷ್ಣುಃ ಕೀರ್ತಯೇದ್ ವಿಷ್ಣುಂ ನಾವಿಷ್ಣುರ್ವಿಷ್ಣುಮರ್ಚಯೇತ್।

ನಾವಿಷ್ಣುಃ ಸಂಸ್ಮರೇದ್ ವಿಷ್ಣುಂ ನಾವಿಷ್ಣುರ್ವಿಷ್ಣುಮಾಪ್ನುಯಾತ್॥(?)

ಇತಿ ಮಹಾಭಾರತೇ ಕರ್ಮಕಾಣ್ಡೇ॥

ಸರ್ವಾಣ್ಯೇತಾನಿ ನಾಮಾನಿ ಪರಸ್ಯ ಬ್ರಹ್ಮಣೋಽನಘ॥ (ವಿ.ಧ.೩-೧೨೩-೧೩)[1]

---

1. ಈ ಸಂಖ್ಯೆ ಗೀ॥ ಪಾಠದಲ್ಲಿದೆ. ಮುಂದಿನದು ಮೈ॥ ಪಾಠದಲ್ಲಿದೆ. ಇದಾದಮೇಲೆ ವಿದ್ಯಾವಿನಯಸಂಪನ್ನಾ ಬ್ರಾಹ್ಮಣಾ ವೇದಪಾರಗಾಃ। ಮಯಿ ಭಕ್ತಿಂ ನ ಕುರ್ವನ್ತಿ ಯೇ ತೇ ಚಾಣ್ಡಾಲತಾಂ ಗತಾಃ॥
ಬ್ರಾಹ್ಮಣಾ ವೈಷ್ಣವಾ ಜ್ಞೇಯಾ ನ ಹ್ಯಸ್ಮಾದನ್ಯದೇವತಾ। ಮಾತೃವತ್ಪರಿರಕ್ಷನ್ತಂ ಜಗತ್ಸ್ರಷ್ಟಾರಮೀಶ್ವರಮ್॥
ಯೋ ಹಿ ನಾರ್ಚಯತೇ ಮೂಢಸ್ತಮಾಹುರ್ಬ್ರಹ್ಮಘಾತಕಮ್।
ವೃಥಾ ಜಪ್ತಂ ವೃಥಾ ದತ್ತಂ ವೃಥಾ ಚೇಷ್ಟಂ ವೃಥಾ ಹುತಮ್॥
ವೃಥಾ ತಪ್ಯಂ ಚ ತಪ್ತಂ ಚ ಯೋ ನ ಭಕ್ತೋ ಮಯಿ ದ್ವಿಜ। ಅವೈಷ್ಣವಕೃತಂ ಸರ್ವಂ ರಾಕ್ಷಸಾ ಏವ ಭುಞ್ಜತೇ॥ - ಇತಿ ಮಹಾಭಾರತೇ - ಎಂಬಿಷ್ಟು ಭಾಗವನ್ನು ಅಚ್ಚಾಗದೆ ಇರುವ ಅಧಿಕಪಾಠವೆಂತ ಕೊಟ್ಟಿದೆ. ಅದಕ್ಕೆ ವ್ಯಾಖ್ಯಾನವಿಲ್ಲ, ಅದರಲ್ಲಿ ಅಭಕ್ತರ ನಿಂದೆಯಿದೆ.

ಏವಮೇತಾನಿ ನಾಮಾನಿ ದೇವದೇವಸ್ಯ ಕೀರ್ತಯೇತ್।
ಯಂ ಯಂ ಕಾಮಮಭಿಧ್ಯಯೇತ್ತಂ ತಮಾಪ್ನೋತ್ಯಸಂಶಯಮ್॥
ಸರ್ವಾನ್ ಕಾಮಾನವಾಪ್ನೋತಿ ಸಮಾರಾಧ್ಯ ಜಗದ್ಗುರುಮ್।
ತನ್ಮಯತ್ವೇನ ಗೋವಿನ್ದಮಿತ್ಯೇತದ್ದಾಲ್ಭ್ಯ ನಾನ್ಯಥಾ॥
ತನ್ಮಯೋ ವಾಞ್ಛಿತಾನ್ ಕಾಮಾನ್ ಪದಮಾಪ್ನೋತಿ ಮಾನವಃ॥
(ವಿ.ಧ.೪೧-೪೨, ೪೫)

ಇತಿ ವಿಷ್ಣುಧರ್ಮೇ॥

ಸರ್ವಭೂತಸ್ಥಿತಂ ಯೋ ಮಾಂ ಭಜತ್ಯೇಕತ್ವಮಾಸ್ಥಿತಃ।
ಸರ್ವಥಾ ವರ್ತಮಾನೋಽಪಿ ಸ ಯೋಗೀ ಮಯಿ ವರ್ತತೇ॥
(ಗೀ.೬-೩೧)

ಇತಿ ಭಗವದ್ಗೀತಾಸು॥

ಅಹಂ ಹರಿಃ ಸರ್ವಮಿದಂ ಜನಾರ್ದನೋ
ನಾನ್ಯತ್ತತಃ ಕಾರಣಕಾರ್ಯಜಾತಮ್॥
ಈದೃಙ್ ಮನೋ ಯಸ್ಯ ನ ತಸ್ಯ ಭೂಯೋ।
ಭವೋದ್ಭವಾ ದ್ವನ್ದ್ವಗದಾ ಭವನ್ತಿ॥ (ವಿ.ಪು.೧-೨೨-೮೭)

ಇತಿ ವಿಷ್ಣುಪುರಾಣೇ॥

ಗುರೋರ್ಯತ್ರ ಪರೀವಾದೋ ನಿನ್ದಾ ಚಾಪಿ ಪ್ರವರ್ತತೇ।
ಕರ್ಣೌ ತತ್ರ ಪಿಧಾತವ್ಯೌ ಗನ್ತವ್ಯಂ ವಾ ತತೋಽನ್ಯತಃ॥
(ಮನು. ೨-೨೦೦)

ಇತಿ ಮನುವಚನಮ್॥

'ತಸ್ಮಾದ್ ಬ್ರಹ್ಮೈವಾಚಾರ್ಯರೂಪೇಣಾವತಿಷ್ಠತೇ' ಇತಿ ವ್ಯಾಸಸ್ಮೃತೇಃ॥
ವರಂ ಹುತವಹಜ್ವಾಲಾಪುಞ್ಜಸ್ಯಾನ್ತರ್ವ್ಯವಸ್ಥಿತಿಃ।
ನ ಶೌರಿಚಿನ್ತಾವಿಮುಖಜನಸಂವಾಸವೈಶಸಮ್॥ (?)

ಇತಿ ಕಾತ್ಯಾಯನ (ಸ್ಮೃತಿ) ವಚನಾತ್ ಯತ್ರ ದೇಶೇ ವಾಸುದೇವನಿನ್ದಾ ತತ್ರ ವಾಸೋ ನ ಕರ್ತವ್ಯಃ॥

ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶನ್ತೇ ಮಹಾತ್ಮನಃ ॥ (ಶ್ವೇ.೬-೨೩).

ಇತಿ ಶ್ವೇತಾಶ್ವತರೋಪನಿಷನ್ಮನ್ತ್ರವರ್ಣಾತ್, ಹರೌ ಗುರೌ ಚ ಪರಾ ಭಕ್ತಿಃ ಕಾರ್ಯೇತಿ॥

## (ಭಾಷ್ಯಾರ್ಥ)

ತಾನೇ ವಿಷ್ಣುವೆಂದು ಧ್ಯಾನಿಸಿಕೊಂಡು ಸ್ತುತಿ, ನಮಸ್ಕಾರ - ಮುಂತಾದ ಕರ್ಮವನ್ನು ಮಾಡಬೇಕು. "ವಿಷ್ಣು (ಭಾವನೆ)ಯಿಲ್ಲದವನು ವಿಷ್ಣುವನ್ನು ಕೀರ್ತನೆ ಮಾಡಬಾರದು, ವಿಷ್ಣು (ಭಾವನೆ)ಯಿಲ್ಲದವನು ವಿಷ್ಣುವನ್ನು ಅರ್ಚನೆ ಮಾಡಬಾರದು, ವಿಷ್ಣುಭಾವನೆಯಿಲ್ಲದವನು ವಿಷ್ಣುವನ್ನು ಸಂಸ್ಮರಣಮಾಡಬಾರದು. ವಿಷ್ಣು (ಭಾವನೆ)ಯಿಲ್ಲದವನು ವಿಷ್ಣುವನ್ನು ಪಡೆಯಲಾರನು" ಎಂದು ಮಹಾಭಾರತದ ಕರ್ಮಕಾಂಡದಲ್ಲಿದೆ. 'ಎಲೈ ನಿಷ್ಪಾಪನೆ, ಈ ನಾಮಗಳೆಲ್ಲವೂ ಪರಬ್ರಹ್ಮದ (ನಾಮ)ಗಳೇ ಆಗಿರುತ್ತವೆ. (ಆ) ದೇವದೇವನ ಈ ನಾಮಗಳನ್ನು ಹೀಗೆ ಕೀರ್ತನೆಮಾಡಬೇಕು', 'ಯಾವ ಯಾವ ಕಾಮವನ್ನು ಚಿಂತಿಸಿಕೊಳ್ಳುವನೋ, ಆಯಾ (ಕಾಮ)ವನ್ನು ನಿಸ್ಸಂಶಯವಾಗಿ ಪಡೆದುಕೊಳ್ಳುತ್ತಾನೆ. ತನ್ಮಯನಾಗಿರುವದರಿಂದ ಎಲೆ ದಾಲ್ಭ್ಯನೆ, ತನ್ಮಯನಾಗಿ ಗೋವಿಂದನನ್ನು ಆರಾಧನೆಮಾಡುವದರಿಂದ ಆ ಜಗದ್ಗುರುವನ್ನು ಸೇರುತ್ತಾನೆ, ಮತ್ತೊಂದರಿಂದಲ್ಲ, ಏಕೆಂದರೆ ಮಾನವನು ತನ್ಮಯನಾಗಿರುವದರಿಂದಲೇ ತನಗೆ ಇಷ್ಟವಾದ (ಕಾಮ)ಗಳನ್ನು ಪಡೆಯುತ್ತಾನೆ' - ಎಂದು **ವಿಷ್ಣುಧರ್ಮದಲ್ಲಿದೆ.**

'ಸರ್ವಪ್ರಾಣಿಗಳಲ್ಲಿಯೂ ಇರುತ್ತಿರುವ ನನ್ನನ್ನು ಏಕತ್ವಭಾವನೆಯಿಂದ ಯಾವನು ಭಜಿಸುತ್ತಿರುವನೋ, ಆ ಯೋಗಿಯು ಹೇಗೇ ಇರಲಿ, ನನ್ನಲ್ಲಿಯೇ ಇದ್ದುಕೊಂಡಿರುತ್ತಾನೆ' ಎಂದು **ಭಗವದ್ಗೀತೆ**ಯಲ್ಲಿದೆ. 'ನಾನೂ ಇದೆಲ್ಲವೂ ಹರಿಯೇ, ಆತನಿಗಿಂತ ಬೇರೆಯಾಗಿ ಕಾರ್ಯಕಾರಣಸಮೂಹವು ಇರುವದೇ ಇಲ್ಲ' - ಇಂತಿರುವ ಮನಸ್ಸು ಯಾವನಿಗಿರುವದೋ ಅವನಿಗೆ ಮತ್ತೆ ಜನ್ಮವನ್ನು ಕೊಡುವ ದ್ವಂದ್ವ ರೋಗಗಳುಂಟಾಗುವದಿಲ್ಲ' ಎಂದು **ವಿಷ್ಣುಪುರಾಣ**ದಲ್ಲಿದೆ.

'ಎಲ್ಲಿ ಗುರುವಿನ ಅಪವಾದ ಅಥವಾ ನಿಂದೆಯಾಗುತ್ತಿರುವದೋ ಅಲ್ಲಿ ಕಿವಿಗಳನ್ನು ಮುಚ್ಚಿಕೊಳ್ಳಬೇಕು; ಅಥವಾ ಅಲ್ಲಿಂದ ಮತ್ತೊಂದು ಕಡೆಗೆ ಹೋಗಿಬಿಡಬೇಕು' ಎಂದು **ಮನುವಚನ.** 'ಆದ್ದರಿಂದ ಬ್ರಹ್ಮವೇ ಆಚಾರ್ಯರೂಪದಿಂದ ಇದ್ದುಕೊಂಡಿರುವದು' (?) ಎಂದು (ವ್ಯಾಸ) ಸ್ಮೃತಿ. ಬೆಂಕಿಯ ಜ್ವಾಲೆಯ ರಾಶಿಯಲ್ಲಿದ್ದರೂ ಉತ್ತಮ, ಆದರೆ ವಿಷ್ಣುವಿನ ಧ್ಯಾನಕ್ಕೆ ಪರಾಙ್ಮುಖರಾಗಿ-ರುವವರೊಡನೆ ವಾಸಮಾಡಿಕೊಂಡಿರುವ ದುಃಖವನ್ನು ಪಡೆಯುವದಕ್ಕಾಗದು(?) ಎಂದು **ಕಾತ್ಯಾಯನವಚನ**ವಿರುವದರಿಂದ ಯಾವ ಸ್ಥಳದಲ್ಲಿ **ವಾಸುದೇವನ ನಿಂದೆ**(ಯಾಗುತ್ತಿರುವದೋ) ಅಲ್ಲಿ ವಾಸವನ್ನು ಮಾಡಬಾರದು. (ಇಲ್ಲಿ ಇಷ್ಟನ್ನು ಹೇಳಿದಂತಾಗಿದೆ) : "ಯಾವನಿಗೆ ಈಶ್ವರನಲ್ಲಿ ಪರಭಕ್ತಿಯಿರುವದೋ, ಈಶ್ವರನಲ್ಲಿರುವಷ್ಟೇ ಗುರುವಿನಲ್ಲಿಯೂ ಪರಭಕ್ತಿಯಿರುವದೋ, ಆ ಮಹಾತ್ಮನಿಗೆ ಈ ಹೇಳಿದ ವಿಷಯಗಳು ತಿಳಿದುಬರುವವು' ಎಂದು **ಶ್ವೇತಾಶ್ವತರೋಪನಿಷತ್ತಿನ**

ಮಂತ್ರವರ್ಣವಿರುವದರಿಂದ ಹರಿಯಲ್ಲಿಯೂ ಗುರುವಿನಲ್ಲಿಯೂ ಹೆಚ್ಚಿನ ಭಕ್ತಿಯನ್ನು ಮಾಡಬೇಕು.[1]

(ಭಾಷ್ಯ)

ಅವಶೇನಾಪಿ ಯನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ।
ಪುಮಾನ್ ವಿಮುಚ್ಯತೇ ಸದ್ಯಃ ಸಿಂಹತ್ರಸ್ತೈರ್ಮೃಗೈರಿವ ॥
(ವಿ.ಪು. ೬-೮-೧೯)

ಜ್ಞಾನತೋಽಜ್ಞಾನತೋ ವಾಪಿ ವಾಸುದೇವಸ್ಯ ಕೀರ್ತನಾತ್।
ತತ್ಸರ್ವಂ ವಿಲಯಂ ಯಾತಿ ತೋಯಸ್ಥಂ ಲವಣಂ ಯಥಾ॥ (?)

ಕಲಿಕಲ್ಮಷಮತ್ಯುಗ್ರಂ ನರಕಾರ್ತಿಪ್ರದಂ ನೃಣಾಮ್।
ಪ್ರಯಾತಿ ವಿಲಯಂ ಸದ್ಯಃ ಸಕೃದ್ಯತ್ರಾನುಸಂಸ್ಮೃತೇ॥ (ವಿ.ಪು.೬-೮-೨೧)

ಸಕೃತ್ ಸ್ಮೃತೋಽಪಿ ಗೋವಿನ್ದೋ ನೃಣಾಂ ಜನ್ಮಶತೈಃ ಕೃತಮ್।
ಪಾಪರಾಶಿಂ ದಹತ್ಯಾಶು ತೂಲರಾಶಿಮಿವಾನಲಃ॥

ಸೇಯಂ ವದನವಲ್ಮೀಕವಾಸಿನೀ ರಸನೋರಗೀ।
ಯಾ ನ ಗೋವಿನ್ದ ಗೋವಿನ್ದ ಗೋವಿನ್ದೇತಿ ಪ್ರಭಾಷತೇ॥

ಪಾಪವಲ್ಲೀ ಮುಖೇ ತಸ್ಯ ಜಿಹ್ವಾರೂಪೇಣ ತಿಷ್ಠತಿ।
ಯಾ ನ ವಕ್ತಿ ದಿವಾ ರಾತ್ರೌ ಗುಣಾನ್ ಗೋವಿನ್ದಸಂಭವಾನ್॥

ಸಕೃದುಚ್ಚರಿತಂ ಯೇನ ಹರಿರಿತ್ಯಕ್ಷರದ್ವಯಮ್।
ಬದ್ಧಃ ಪರಿಕರಸ್ತೇನ ಮೋಕ್ಷಾಯ ಗಮನಂ ಪ್ರತಿ ॥
(ಪದ್ಮ ಪು. ೬-೮೦-೧೬೧)

ಏಕೋಽಪಿ ಕೃಷ್ಣಸ್ಯ ಕೃತಃ ಪ್ರಣಾಮೋ।
ದಶಾಶ್ವಮೇಧಾವಭೃಥೇನ ತುಲ್ಯಃ॥
ದಶಾಶ್ವಮೇಧೀ ಪುನರೇತಿ ಜನ್ಮ।
ಕೃಷ್ಣಪ್ರಣಾಮೀ ನ ಪುನರ್ಭವಾಯ॥ (ಮಹಾ. ಶಾಂತಿ. ೪೭-೯೧)

ಇತ್ಯಾದಿವಚನೈಃ ಶ್ರದ್ಧಾಭಕ್ತ್ಯೋರಭಾವೇಽಪಿ ನಾಮಸಂಕೀರ್ತನಂ ಸಮಸ್ತಂ ದುರಿತಂ ನಾಶಯತೀತ್ಯುಕ್ತಮ್। ಕಿಮುತ ಶ್ರದ್ಧಾದಿಪೂರ್ವಕಂ ಸಹಸ್ರನಾಮಸಂಕೀರ್ತನಂ ನಾಶಯತೀತಿ।

'ಮನಸಾ ವಾ ಅಗ್ರೇ ಸಂಕಲ್ಪಯತ್ಯಥ ವಾಚಾ ವ್ಯವಹರತಿ', 'ಯದ್ಧಿ ಮನಸಾ ಧ್ಯಾಯತಿ ತದ್ವಾಚಾ ವದತಿ' (ತೈ.ಸಂ.೬-೧-೭) ಇತಿ ಶ್ರುತಿಭ್ಯಾಂ ಸ್ಮರಣಂ ಧ್ಯಾನಂ ಚ ನಾಮಸಂಕೀರ್ತನೇಽನ್ತರ್ಭೂತಮ್॥

---

1. ಈ ಭಾಗವನ್ನೂ ಮುಂದಿನ ಭಾಗವನ್ನೂ ಹೇಗೋ ವಿಶ್ವಶಬ್ದದ ವ್ಯಾಖ್ಯಾನಕ್ಕೆ ಹೊಂದಿಸಿಕೊಳ್ಳಬೇಕಾಗಿದೆ.

ಯಸ್ಮಿನ್ ನ್ಯಸ್ತಮತಿರ್ನ ಯಾತಿ ನರಕಂ ಸ್ವರ್ಗೋಽಪಿ ಯಚ್ಚಿನ್ತನೇ।
ವಿಘ್ನೋ ಯತ್ರ ನಿವೇಶಿತೇ ಚ ಮನಸಿ ಬ್ರಾಹ್ಮೋಽಪಿ ಲೋಕೋಽಲ್ಪಕಃ॥
ಮುಕ್ತಿಂ ಚೇತಸಿ ಯಃ ಸ್ಥಿತೋಽಮಲಧಿಯಾಂ ಪುಂಸಾಂ ದದಾತ್ಯವ್ಯಯಃ।
ಕಿಂ ಚಿತ್ರಂ ಯದಘಂ ಪ್ರಯಾತಿ ವಿಲಯಂ ತತ್ರಾಚ್ಯುತೇ ಕೀರ್ತಿತೇ॥

ಇತಿ ಶ್ರೀವಿಷ್ಣು ಪುರಾಣೇ (೬-೮-೫೭) ಪರಾಶರೇಣೋಪಸಂಹೃತಮ್॥

ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ॥

ಇತಿ ಶ್ರೀ ಮಹಾಭಾರತಾನ್ತೇ ಭಗವತಾ ವೇದವ್ಯಾಸೇನೋಪಸಂಹೃತಮ್॥

ಹರಿರೇಕಃ ಸದಾ ಧ್ಯೇಯೋ ಭವದ್ಭಿಃ ಸತ್ತ್ವಸಂಸ್ಥಿತೈಃ।
ಓಮಿತ್ಯೇವಂ ಸದಾ ವಿಪ್ರಾಃ ಪಠತ ಧ್ಯಾತ ಕೇಶವಮ್॥

ಇತಿ **ಹರಿವಂಶೇ** (೩-೮೯-೯) ಕೈಲಾಸಯಾತ್ರಾಯಾಂ ಹರಿರೇಕೋ ಧ್ಯಾತವ್ಯ ಇತ್ಯುಕ್ತಂ ಶ್ರೀಮಹೇಶ್ವರೇಣಾಪಿ॥

ಏತತ್ಸರ್ವಮಭಿಪ್ರೇತ್ಯ 'ಏಷ ಮೇ ಸರ್ವಧರ್ಮಾಣಾಂ ಧರ್ಮೋಽಧಿಕತಮೋ ಮತಃ' (ಶ್ಲೋ. ೮) ಇತ್ಯಾಧಿಕ್ಯಮುಕ್ತಮ್॥

## (ಭಾಷ್ಯಾರ್ಥ)

'ಪರವಶನಾಗಿ ಆ (ವಿಷ್ಣುವಿನ) ನಾಮವನ್ನು ಕೀರ್ತನೆಮಾಡಿದರೂ ಮನುಷ್ಯನು - ಸಿಂಹಕ್ಕೆ ಅಂಜಿದ ಜಿಂಕೆಗಳಂತೆ - ಎಲ್ಲಾ ಪಾತಕಗಳಿಂದಲೂ ಕೂಡಲೆ ಮುಕ್ತನಾಗುವನು', 'ತಿಳಿದು ಅಥವಾ ತಿಳಿಯದೆ ವಾಸುದೇವನ ಕೀರ್ತನೆಮಾಡಿದರೂ ಅದೆಲ್ಲವೂ ನೀರಿನಲ್ಲಿ ಬಿದ್ದ ಉಪ್ಪಿನಂತೆ ಕರಗಿಹೋಗುವದು. ಜನರಿಗೆ ನರಕದ ಸಂಕಟವನ್ನು ಕೊಡುವ ಅತಿಭಯಂಕರವಾದ ಕಲಿಕಲ್ಮಷವು, ಒಮ್ಮೆ ಆತನನ್ನು ಸಂಸ್ಮರಿಸಿದ ಕೂಡಲೆ ನಾಶವಾಗಿಬಿಡುವದು', 'ಗೋವಿಂದನನ್ನು ಒಮ್ಮೆ ಸ್ಮರಣಮಾಡಿದರೂ ಸಾಕು, ಅದು ಜನರು ನೂರಾರು ಜನ್ಮಗಳಿಂದ ಮಾಡಿದ್ದ ಪಾಪರಾಶಿಯನ್ನು - ಬೆಂಕಿಯು ಅರಳೆಯ ರಾಶಿಯನ್ನು (ಸುಡುವಂತೆ) - ಬೇಗನೆ ಸುಟ್ಟುಹಾಕುವದು! ಗೋವಿಂದ, ಗೋವಿಂದ, ಗೋವಿಂದ! ಎಂದು ಯಾರು ಉಚ್ಚರಿಸದೆ ಇರುವರೋ ಅವರ ಮುಖವೆಂಬ ಹುತ್ತದಲ್ಲಿರುವ ಹಾವೇ' 'ಯಾವ (ನಾಲಗೆಯು) ಹಗಲೂ ರಾತ್ರೆಯೂ ಗೋವಿಂದನಲ್ಲಿರುವ ಗುಣಗಳನ್ನು ಕೀರ್ತನೆಮಾಡದೆ ಇರುವದೋ, ಅದು ಅವನ ಮುಖದಲ್ಲಿ ನಾಲಗೆಯ ರೂಪದಿಂದ ಇದ್ದುಕೊಂಡಿರುವ ಪಾಪದ ಬಳ್ಳಿಯೇ'

'ಹರಿ' ಎಂಬ ಎರಡಕ್ಷರವನ್ನು ಯಾವನು ಉಚ್ಚರಿಸಿರುವನೋ ಅವನು ಮುಕ್ತಿಪ್ರಾಪ್ತಿಗೆ ಹೊರಡುವದಕ್ಕೆ ಸೊಂಟವನ್ನು ಕಟ್ಟಿಕೊಂಡುಬಿಟ್ಟಿರುತ್ತಾನೆ' 'ಕೃಷ್ಣನಿಗೆ

ಮಾಡಿದ ಒಂದೇ ಒಂದು ನಮಸ್ಕಾರವು ಹತ್ತು ಅಶ್ವಮೇಧವನ್ನು ಮಾಡಿ ಅವಭೃಥವನ್ನು ಮಾಡಿದ್ದಕ್ಕೆ ಸಮಾನ. (ಆದರೆ) ಹತ್ತು ಅಶ್ವಮೇಧವನ್ನು ಮಾಡುವವವನು ಪುನರ್ಜನ್ಮವನ್ನು ಪಡೆಯುತ್ತಾನೆ; ಕೃಷ್ಣನಿಗೆ ನಮಸ್ಕರಿಸಿದವನು ಮತ್ತೆ ಜನ್ಮವನ್ನು ಪಡೆಯನು' - ಇವೇ ಮುಂತಾದ ವಚನಗಳಿಂದ ಶ್ರದ್ಧಾಭಕ್ತಿಗಳು ಇಲ್ಲದಿದ್ದರೂ ನಾಮವನ್ನು ಸಂಕೀರ್ತನಮಾಡುವದು ಎಲ್ಲಾ ಪಾಪವನ್ನೂ ನಾಶಮಾಡುವದೆಂದು ಉಕ್ತವಾಗಿರುತ್ತದೆ. (ಹೀಗಿರುವಲ್ಲಿ) ಶ್ರದ್ಧಾದಿಪೂರ್ವಕವಾಗಿ ಸಹಸ್ರನಾಮವನ್ನು ಸಂಕೀರ್ತನಮಾಡಿದರೆ (ಪಾಪವನ್ನೆಲ್ಲ) ಕಳೆಯುವದೆಂದು ಹೇಳತಕ್ಕದ್ದೇನಿದೆ?

'ಯಾವನಲ್ಲಿ ಮನಸ್ಸಿಟ್ಟವನು, ನರಕಕ್ಕೆ ಹೋಗನೋ, ಯಾವನ ಧ್ಯಾನಕ್ಕೆ ಸ್ವರ್ಗವೂ ಅಡ್ಡಿಯಾಗುವದೋ, ಯಾವನಲ್ಲಿಟ್ಟ ಮನಸ್ಸುಳ್ಳವನಿಗೆ ಬ್ರಹ್ಮಲೋಕವೂ ಅಲ್ಪವಾಗಿರುವದೋ, ಚಿತ್ತದಲ್ಲಿದ್ದುಕೊಂಡರೆ ಅವ್ಯಯನಾದ ಯಾವಾತನು ಮುಕ್ತಿಯನ್ನು ಜನರಿಗೆ ಕೊಡುವನೋ ಆ ಅಚ್ಯುತನನ್ನು ಕೀರ್ತನಮಾಡಿದರೆ ಪಾಪವು ನಾಶವನ್ನು ಹೊಂದುವದರಲ್ಲಿ ಆಶ್ಚರ್ಯವೇನು?' ಎಂದು **ವಿಷ್ಣುಪುರಾಣ**ದಲ್ಲಿ ಪರಾಶರರು ಉಪಸಂಹಾರಮಾಡಿರುತ್ತಾರೆ. 'ಎಲ್ಲಾ ಶಾಸ್ತ್ರಗಳನ್ನೂ ಕಡೆದುನೋಡಿ ಮತ್ತೆ ಮತ್ತೆ ವಿಚಾರಿಸಿದ ಮೇಲೆ ಇದೊಂದು ಸುಪ್ರಸಿದ್ಧವಾಯಿತು; ಏನೆಂದರೆ : ನಾರಾಯಣನನ್ನು ಯಾವಾಗಲೂ ಧ್ಯಾನಿಸಬೇಕು'. ಹೀಗೆಂದು ಮಹಾಭಾರತದ ಕೊನೆಯಲ್ಲಿ ಶ್ರೀವೇದವ್ಯಾಸರು ಉಪಸಂಹಾರಮಾಡಿರುತ್ತಾರೆ. 'ಎಲೈ ವಿಪ್ರರೆ, ನೀವು ಸತ್ತ್ವಗುಣದಲ್ಲಿ ನೆಲೆನಿಂತು ಹರಿಯೊಬ್ಬನನ್ನೇ ಯಾವಾಗಲೂ ಧ್ಯಾನಿಸುತ್ತಿರಬೇಕು. ಓಮ್ ಎಂದು ಯಾವಾಗಲೂ ಪಠಿಸುತ್ತಿರಿ, ಕೇಶವನನ್ನು ಧ್ಯಾನಿಸುತ್ತಿರಿ - ಎಂದು **ಹರಿವಂಶ**ದಲ್ಲಿ **ಕೈಲಾಸಯಾತ್ರೆ**ಯಲ್ಲಿ ಹರಿಯೊಬ್ಬನನ್ನೇ ಧ್ಯಾನಿಸಬೇಕೆಂದು ಮಹೇಶ್ವರನಿಂದಲೂ ಉಕ್ತವಾಗಿರುತ್ತದೆ.

ಈ ಅಭಿಪ್ರಾಯವನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು 'ಇದೇ ಎಲ್ಲಾ ಧರ್ಮಗಳಿಗಿಂತಲೂ ಹೆಚ್ಚಿನ ಧರ್ಮವೆಂದು ನನ್ನ ಮತವು' ಎಂದು (೮ನೆಯ ಶ್ಲೋಕದಲ್ಲಿ) ಹಿಂದೆ ಹೇಳಿರುತ್ತದೆ.

## (ಭಾಷ್ಯ)

'ಕಿಮೇಕಂ ದೈವತಂ ಲೋಕೇ' (ಶ್ಲೋ.೨) ಇತ್ಯಾರಭ್ಯ 'ಕಿಂ ಜಪನ್ ಮುಚ್ಯತೇ ಜನ್ತುಃ' (ಶ್ಲೋ.೩) ಇತಿ ಷಟ್ಪ್ರಶ್ನೇಷು 'ಯತಃ ಸರ್ವಾಣಿ' (ಶ್ಲೋ. ೧೧) ಇತಿ ಪ್ರಶ್ನೋತ್ತರಾಭ್ಯಾಂ ಯದ್ ಬ್ರಹ್ಮೋಕ್ತಂ ತದ್ವಿಶ್ವಶಬ್ದೇನೋಚ್ಯತೇ ಇತಿ ವ್ಯಾಖ್ಯಾತಮ್॥

## (ಭಾಷ್ಯಾರ್ಥ)

'ಕಿಮೇಕಂ ದೈವತಮ್' (ಒಂದೇ ದೇವತೆ ಯಾವದು?) ಎಂಬ (೨ನೆಯ ಶ್ಲೋಕದಿಂದ) ಹಿಡಿದು ಆರು ಪ್ರಶ್ನೆಗಳಲ್ಲಿ 'ಯಾವದರಿಂದ ಎಲ್ಲಾ ಭೂತಗಳೂ' (ಶ್ಲೋ.೧೧) - ಎಂಬವರೆಗಿನ ಪ್ರಶ್ನೋತ್ತರಗಳಿಂದ ಯಾವ ಬ್ರಹ್ಮವನ್ನು

ಹೇಳಲಾಗಿದೆಯೋ ಅದು 'ವಿಶ್ವ' ಶಬ್ದಕ್ಕೆ ವಾಚ್ಯವು ಎಂದು ವ್ಯಾಖ್ಯಾನಮಾಡಿದಂತೆ ಆಯಿತು.

## (ಭಾಷ್ಯ)

ತತ್ ಕಿಮ್? ಇತ್ಯಾಕಾಙ್ಕ್ಷಾಯಾಮ್ ಆಹ - (೨) 'ವಿಷ್ಣುಃ' ಇತಿ। ತಥಾ ಚ **ಋಗ್ವೇದೇ** - "ತಮು ಸ್ತೋತಾರಃ ಪೂರ್ವ್ಯಂ ಯಥಾವಿದ ಋತಸ್ಯ ಗರ್ಭಂ ಜನುಷಾ ಪಿಪರ್ತನ। ಆಽಸ್ಯ ಜಾನನ್ತೋ ನಾಮ ಚಿದ್ವಿವಕ್ತನ ಮಹಸ್ತೇ ವಿಷ್ಣೋ ಸುಮತಿಂ ಭಜಾಮಹೇ"। (ಋ.ಸಂ.೨-೨-೨೬) ಇತ್ಯಾದಿಶ್ರುತಿಭಿಃ ವಿಷ್ಣೋರ್ನಾಮಸಂಕೀರ್ತನಂ ಸಮ್ಯಗ್‍ಜ್ಞಾನಪ್ರಾಪ್ತಯೇ ವಿಹಿತಮ್। (ತಮೇವ ಸ್ತೋತಾರಃ ಪುರಾಣಂ ಯಥಾ ಜ್ಞಾನೇನ ಸತ್ಯಸ್ಯ ಗರ್ಭಂ ಜನ್ಮಸಮಾಪ್ತಿಂ ಕುರುತ। ಜಾನನ್ತ ಆ ಅಸ್ಯ ವಿಷ್ಣೋಃ ನಾಮಾಪಿ ಆ ವದತ। ಅನ್ಯೇ ವದನ್ತು ಮಾ ವಾ, ಹೇ ವಿಷ್ಣೋ ವಯಂ ತೇ ಸುಮತಿಂ ಮಹಃ ಭಜಾಮಹೇ ಇತಿ ಶ್ರುತೇರಭಿಪ್ರಾಯಃ।)

## (ಭಾಷ್ಯಾರ್ಥ)

ಆ (ವಿಶ್ವಶಬ್ದವಾಚ್ಯವಾದ ತತ್ತ್ವವು) ಯಾವದು? - ಎಂದು ಆಶಂಕೆ ಬರಲಾಗಿ ಅದಕ್ಕೆ 'ವಿಷ್ಣು' ಎಂಬ ನಾಮವನ್ನು (ಉತ್ತರವಾಗಿ) ಹೇಳಿದೆ. 'ತಮು ಸ್ತೋತಾರಃ.....' ಮುಂತಾದ (ಋಗ್ವೇದದ) ಶ್ರುತಿಗಳಿಂದ ವಿಷ್ಣುವಿನ ನಾಮಸಂಕೀರ್ತನವು ಸರಿಯಾದ ಜ್ಞಾನದ ಪ್ರಾಪ್ತಿಯಾಗಲೆಂದು ವಿಹಿತವಾಗಿರುತ್ತದೆ. "ಆತನನ್ನೇ ಸ್ತುತಿಸುತ್ತಾ ಸರಿಯಾದ ಜ್ಞಾನದಿಂದ ಸತ್ಯದ ಗರ್ಭವನ್ನು ಎಂದರೆ ಜನ್ಮಸಮಾಪ್ತಿಯನ್ನು ಮಾಡಿಕೊಳ್ಳಿರಿ. ಸಂಪೂರ್ಣವಾಗಿ ಈ ವಿಷ್ಣುವಿನ ನಾಮವನ್ನು ಉಚ್ಚರಿಸುತ್ತಿರಿ, ಮಿಕ್ಕವರು ನಾಮವನ್ನು ಉಚ್ಚರಿಸಲಿ, ಅಥವಾ ಉಚ್ಚರಿಸದೆ ಇರಲಿ, ಎಲೈ ವಿಷ್ಣುವೆ, ನಾವು ನಿನ್ನ ಶೋಭನವಾದ ತೇಜಸ್ಸನ್ನು ಭಜಿಸುತ್ತಿರುತ್ತೇವೆ" - ಎಂಬುದು ಶ್ರುತಿಯ ಅರ್ಥ.[1]

## ಭಾಷ್ಯ

ವೇವೇಷ್ಟಿ ವ್ಯಾಪ್ನೋತೀತಿ ವಿಷ್ಣುಃ। ವಿಷೇರ್ವ್ಯಾಪ್ತ್ಯರ್ಥಾಭಿಧಾಯಿನೋ ನುಕ್ ಪ್ರತ್ಯಯಾನ್ತಸ್ಯ ರೂಪಮ್। ದೇಶಕಾಲವಸ್ತುಪರಿಚ್ಛೇದಶೂನ್ಯ ಇತ್ಯರ್ಥಃ। 'ವ್ಯಾಪ್ತೇ ಮೇ ರೋದಸೀ ಪಾರ್ಥ ಕ್ರಾನ್ತಿಶ್ಚಾಭ್ಯಧಿಕಾ ಸ್ಥಿತಿಃ। ಕ್ರಮಣಾಚ್ಚಾಪ್ಯಹಂ ಪಾರ್ಥ ವಿಷ್ಣುರಿತ್ಯಭಿಸಂಜ್ಞಿತಃ' ಇತಿ ಮಹಾಭಾರತೇ । ('ಯಚ್ಚ ಕಿಞ್ಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ। ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ' **ಇತ್ಯಾದಿಶ್ರುತೇ ಬೃಹನ್ನಾರಾಯಣೇ।** 'ಸರ್ವಭೂತಸ್ಥಿತಂ ನಾರಾಯಣಂ ಕಾರಣಪುರುಷಮಕಾರಣಂ ಪರಂ ಬ್ರಹ್ಮ ಶೋಕಮೋಹವಿನಿರ್ಮುಕ್ತಂ ವಿಷ್ಣುಂ ಧ್ಯಾಯನ್ನ ಸೀದತಿ' (ಆತ್ಮ ಬೋ.೧) **ಇತ್ಯಾತ್ಮಬೋಧೋಪನಿಷದಿ॥**')[2].

---

1. ಶ್ರುತಿಯ ಮೊದಲನೆಯ ವಾಕ್ಯವು ಮೈ॥ ಪಾಠದಲ್ಲಿಲ್ಲ, ಶ್ರುತಿಯ ಅರ್ಥವನ್ನು ವಿವರಿಸುವ ವಾಕ್ಯವೂ ಅಲ್ಲಿಲ್ಲ. ಇರಬೇಕಾದದ್ದೇ ಸರಿಯೆಂತ ನಮಗೆ ತೋರುತ್ತದೆ.

2. 'ಯಚ್ಚ' ಎಂಬಲ್ಲಿಂದ ಮುಂದಕ್ಕೆ 'ಆತ್ಮಬೋಧೋಪನಿಷದಿ' ಎಂಬವರೆಗಿನ ಭಾಗವು ವಾ॥ ಮೈ॥ ಪಾಠಗಳಲ್ಲಿ ಇಲ್ಲವಾದರೂ ನಾವು ಅದಕ್ಕೆ ಅರ್ಥವನ್ನು ಬರೆದಿರುತ್ತೇವೆ.

## (ಭಾಷ್ಯಾರ್ಥ)

ವ್ಯಾಪಿಸಿರುತ್ತಾನಾದ್ದರಿಂದ **ವಿಷ್ಣುವು.** ವ್ಯಾಪ್ತಿ - ಎಂಬರ್ಥವುಳ್ಳ 'ವಿಷ್' ಧಾತುವಿಗೆ 'ನುಕ್' ಪ್ರತ್ಯಯವು ಕೊನೆಯಲ್ಲಿ ಸೇರಿ ಆಗಿರುವ (ಶಬ್ದ) ರೂಪವಿದು. ದೇಶ, ಕಾಲ, ಪದಾರ್ಥಗಳಿಂದುಂಟಾಗಿರುವ ಪರಿಚ್ಛೇದವಿಲ್ಲದವನು - ಎಂದರ್ಥ. 'ಪಾರ್ಥನೆ, ಭೂವ್ಯ್ಯಂತರಿಕ್ಷಗಳು ನನ್ನಿಂದ ವ್ಯಾಪ್ತವಾಗಿರುತ್ತವೆ. ನನ್ನ ವ್ಯಾಪ್ತಿಯು ಇನ್ನೂ ಹೆಚ್ಚಾಗಿರುತ್ತದೆ. ಹೀಗೆ ಎಲ್ಲವನ್ನೂ ದಾಟಿ ವ್ಯಾಪಿಸಿಕೊಂಡಿರುವದರಿಂದಲೂ ನನಗೆ 'ವಿಷ್ಣು' ಎಂಬ ಹೆಸರು ಬಂದಿದೆ-ಎಂದು **ಮಹಾಭಾರತದಲ್ಲಿದೆ.** 'ಯಾವ ಜಗತ್ತು ಕಾಣುತ್ತಲೂ ಕೇಳುತ್ತಲೂ ಇರುವದೋ ಅದೆಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡು ನಾರಾಯಣನು ಇರುತ್ತಾನೆ' ಎಂದು **ಬೃಹನ್ನಾರಾಯಣದಲ್ಲಿದೆ.** 'ಸರ್ವಭೂತಗಳಲ್ಲಿಯೂ ಇದ್ದುಕೊಂಡು ಒಬ್ಬನೇ ಆಗಿರುವ ನಾರಾಯಣನನ್ನು, ಕಾರಣಪುರುಷನೂ ಅಕಾರಣನೂ ಪರಬ್ರಹ್ಮವೂ ಶೋಕಮೋಹಗಳಿಲ್ಲದವನೂ ಆಗಿರುವ ವಿಷ್ಣುವನ್ನು ಧ್ಯಾನಿಸುತ್ತಿರುವಾತನು ದುಃಖದಿಂದ ಕುಸಿಯುವದಿಲ್ಲ' - ಎಂದು **ಆತ್ಮಬೋಧೋಪನಿಷತ್ತಿನಲ್ಲಿದೆ.**

## (ಭಾಷ್ಯ)

ವಿಶತೇರ್ವಾ ನುಕ್‌ಪ್ರತ್ಯಯಾನ್ತಸ್ಯ ರೂಪಂ 'ವಿಷ್ಣು' ರಿತಿ।

ಯಸ್ಮಾದ್ ವಿಷ್ಟಮಿದಂ ಸರ್ವಂ ತಸ್ಯ ಶಕ್ತ್ಯಾ ಮಹಾತ್ಮನಃ।
ತಸ್ಮಾದ್ ವಿಷ್ಣುರಿತಿ ಖ್ಯಾತೋ ವಿಶೇರ್ಧಾತೋಃ ಪ್ರವೇಶನಾತ್॥

(ವಿ.ಪು.೩-೧-೪೫)

- ಇತಿ ವಿಷ್ಣುಪುರಾಣೇ।

## (ಭಾಷ್ಯಾರ್ಥ)

'ವಿಶ ಪ್ರವೇಶನೇ' ಎಂಬ ಧಾತುವಿಗೆ ನುಕ್‌ಪ್ರತ್ಯಯವು ಬಂದು ಸೇರಲಾಗಿ 'ವಿಷ್ಣುಃ' ಎಂಬ ರೂಪವಾಗಿದೆ - ಎಂದಾದರೂ ವ್ಯಾಖ್ಯಾನಮಾಡಬಹುದು.

'ಈ ಜಗತ್ತೆಲ್ಲವೂ ಆ ಪರಮಾತ್ಮನ ಶಕ್ತಿಯಿಂದ ಪ್ರವಿಷ್ಟವಾಗಿರುವದರಿಂದ (ಆತನು) ವಿಷ್ಣುವೆಂದು ಪ್ರಸಿದ್ಧನಾಗಿರುತ್ತಾನೆ. ಏಕೆಂದರೆ ವಿಶ್‌ಧಾತುವಿಗೆ 'ಪ್ರವೇಶವೆಂಬ ಅರ್ಥವಿದೆ' ಎಂದು **ವಿಷ್ಣುಪುರಾಣದಲ್ಲಿದೆ.**

## (ಭಾಷ್ಯ)

ಯದುದ್ದೇಶೇನ ಅಧ್ವರೇ ವಷಟ್ ಕ್ರಿಯತೇ ಸ (೩) ವಷಟ್ಕಾರಃ। ಯಸ್ಮಿನ್ ಯಜ್ಞೇ ವಾ ವಷಟ್‌ಕ್ರಿಯಾ, ಸ ವಷಟ್ಕಾರಃ। 'ಯಜ್ಞೋ ವೈ ವಿಷ್ಣುಃ' (ತೈ.ಸಂ. ೧-೭-೪) ಇತಿ ಶ್ರುತೇರ್ಯಜ್ಞೋ ವಷಟ್ಕಾರಃ। ಯೇನ ವಷಟ್ಕಾರಾದಿಮನ್ತ್ರಾತ್ಮನಾ ವಾ ದೇವಾನ್ ಪ್ರೀಣಯತಿ ಸ ವಷಟ್ಕಾರಃ ದೇವತಾ ವಾ 'ಪ್ರಜಾಪತಿಶ್ಚ ವಷಟ್ಕಾರಶ್ಚ' (ಐ.ಬ್ರಾ. ೧-೨-೧೦) ಇತಿ ಶ್ರುತೇಃ। 'ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಞ್ಚಭಿರೇವ

ಚ। ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು' (ವಿ.ಸ್ಮೃ. ಶ್ಲೋ. ೩೫) ಇತ್ಯಾದಿಸ್ಮೃತೇಶ್ಚ॥[1]

### (ಭಾಷ್ಯಾರ್ಥ)

ಯಾವದನ್ನು ಉದ್ದೇಶಿಸಿ ಯಜ್ಞದಲ್ಲಿ 'ವಷಟ್' ಮಾಡುವರೋ ಅದು **ವಷಟ್ಕಾರವು.** ಅಥವಾ 'ಯಜ್ಞವೇ ವಿಷ್ಣುವು' ಎಂಬ ಶ್ರುತಿಯಂತೆ ಯಾವ ಯಜ್ಞದಲ್ಲಿ ವಷಟ್‌ಕ್ರಿಯೆಯನ್ನು ಮಾಡುವರೋ ಆ (ಯಜ್ಞವು) ವಷಟ್ಕಾರವು. ಯಾವ ವಷಟ್ಕಾರಾದಿಮಂತ್ರರೂಪದಿಂದ ದೇವತೆಗಳನ್ನು ಪ್ರೀತರನ್ನಾಗಿ ಮಾಡುವರೋ, ಅದು **ವಷಟ್ಕಾರ.** ಅಥವಾ ವಷಟ್ಕಾರವೆಂಬರೆ ದೇವತೆಯೇ ; ಏಕೆಂದರೆ 'ಪ್ರಜಾಪತಿಯೂ ವಷಟ್ಕಾರವೂ' ಎಂಬು ಶ್ರುತಿಯಿದೆ. 'ನಾಲ್ಕರಿಂದಲೂ ನಾಲ್ಕರಿಂದಲೂ ಎರಡರಿಂದಲೂ ಐದರಿಂದಲೂ ಮತ್ತು ಎರಡರಿಂದಲೂ ಹೋಮಮಾಡಲ್ಪಡುತ್ತಿರುವನಲ್ಲ, ಆ ವಿಷ್ಣುವು ನನಗೆ ಪ್ರಸನ್ನನಾಗಲಿ ಎಂದು ಮುಂತಾಗಿರುವ ಸ್ಮೃತಿಯ ಪ್ರಮಾಣದಿಂದಲೂ (ಹೀಗೆಂದು ತಿಳಿಯಬೇಕು).

### (ಭಾಷ್ಯ)

ಭೂತಂ ಭವ್ಯಂ ಚ ಭವಚ್ಚ ಭೂತಭವ್ಯಭವನ್ತಿ ; ತೇಷಾಂ ಪ್ರಭುಃ (೪) **ಭೂತಭವ್ಯಭವತ್ಪ್ರಭುಃ।** ಕಾಲಭೇದಮನಾದೃತ್ಯ ಸನ್ಮಾತ್ರಪ್ರತಿಯೋಗಿಕಮ್ - ಐಶ್ವರ್ಯಮಸ್ಯ ಇತಿ ಪ್ರಭುತ್ವಮ್॥

### (ಭಾಷ್ಯಾರ್ಥ)

ಭೂತವೂ ಭವ್ಯವೂ ಭವತ್ತೂ (ಸೇರಿದರೆ) ಭೂತಭವ್ಯಭವತ್ತುಗಳು (ಆಗುವವು) - ಆ (ಹಿಂದಿನ ಮುಂದಿನ ಈಗಿನ ಕಾಲಗಳಿಗೆ) ಪ್ರಭುವಾದವನು **ಭೂತಭವ್ಯಭವತ್ಪ್ರಭುವು.** ಕಾಲದ ಭೇದವನ್ನು ಲೆಕ್ಕಿಸದೆ ಸನ್ಮಾತ್ರ (ಬರಿಯ ಇರವು) ಎಂಬ ಪ್ರತಿಯೋಗಿ ಇರುವ ಐಶ್ವರ್ಯವು ಈತನದು, ಆದ್ದರಿಂದ (ಅವುಗಳ ಮೇಲೆ ಈತನಿಗೆ) ಒಡೆತನವಿರುತ್ತದೆ.

### (ಭಾಷ್ಯ)

ರಜೋಗುಣಂ ಸಮಾಶ್ರಿತ್ಯ ವಿರಿಞ್ಚಿರೂಪೇಣ ಭೂತಾನಿ ಕರೋತಿ ಇತಿ (೫) **ಭೂತಕೃತ್।** ತಮೋಗುಣಮಾಸ್ಥಾಯ ಸ ರುದ್ರಾತ್ಮನಾ ಭೂತಾನಿ ಕೃನ್ತತಿ ಕೃಣೋತಿ ಹಿನಸ್ತಿ ಇತಿ ವಾ **ಭೂತಕೃತ್॥**

---

1. ಇದು ವಿಷ್ಣುಸ್ಮೃತಿ ೩೫ ಎಂದು ಮೈ॥ ಪಾಠದಂತೆ ಬರೆದುಕೊಂಡಿದ್ದೇವೆ. ಭೀಷ್ಮಸ್ತವರಾಜ ಶ್ಲೋ. ೪೩ರಲ್ಲಿ 'ತಸ್ಮೈ ಹೋಮಾತ್ಮನೇ ನಮಃ' ಎಂದು ಈ ಶ್ಲೋಕಕ್ಕೆ ನಾಲ್ಕನೆಯ ಪಾದ. 'ನಾಲ್ಕು' ಎಂದರೆ 'ಆಶ್ರಾವಯ' ಎಂಬ ನಾಲ್ಕಕ್ಷರಗಳು; ಎರಡನೆಯ 'ನಾಲ್ಕು' ಎಂದರೆ 'ಅಸ್ತು ಶ್ರೌಷಟ್' ಎಂಬುದು. 'ಎರಡು' ಎಂದರೆ 'ಯಜ' ಎಂಬೆರಡು ಅಕ್ಷರಗಳು. 'ಐದು' ಎಂದರೆ 'ಯೇ ಯಜಾಮಹೇ' ಎಂಬುದು. 'ಮತ್ತೆ ಎರಡು' ಎಂದರೆ 'ವೌಷಟ್' ಎಂಬಿವು. ಈ ಹದಿನೇಳಕ್ಷರಗಳೂ ಹೋಮಕ್ಕೆ ವಿನಿಯೋಗವಾಗುತ್ತವೆ. ಹೋಮಮಂತ್ರಗಳು ವಿಷ್ಣುವಿಗಾಗಿ, ಆದ್ದರಿಂದ ಅವನು ವಷಟ್ಕಾರವು. ಅಂತೂ ವಷಟ್ಕಾರಃ ಎಂಬುದಕ್ಕೆ ಇಲ್ಲಿ ನಾಲ್ಕು ಅರ್ಥಗಳನ್ನು ಹೇಳಿದ್ದಾಗಿದೆ.

(ಭಾಷ್ಯಾರ್ಥ)

ರಜೋಗುಣವನ್ನು ಆಶ್ರಯಿಸಿಕೊಂಡು ಬ್ರಹ್ಮನ ರೂಪದಿಂದ ಭೂತ(ಪ್ರಾಣಿ)ಗಳನ್ನು ಮಾಡುವನಾದ್ದರಿಂದ [1] 'ಭೂತಕೃತ್' ಎಂದು ಹೆಸರು. ತಮೋಗುಣವನ್ನು ಆಶ್ರಯಿಸಿಕೊಂಡು ಆತನು ರುದ್ರರೂಪದಿಂದ ಭೂತಗಳನ್ನು ಕೃನ್ತತಿ,[2] ಕೃಣೋತಿ[3], ಕೊಲ್ಲುತ್ತಾನೆ. ಆದ್ದರಿಂದ ಭೂತಕೃತ್ (ಎಂದಾದರೂ ವ್ಯಾಖ್ಯಾನಮಾಡಬಹುದು)

(ಭಾಷ್ಯ)

ಸತ್ತ್ವಗುಣವಮ್ ಅಧಿಷ್ಠಾಯ ಭೂತಾನಿ ಬಿಭರ್ತಿ ಪಾಲಯತಿ ಧಾರಯತಿ ಪೋಷಯತೀತಿ ವಾ (೬) **ಭೂತಭೃತ್**||

(ಭಾಷ್ಯಾರ್ಥ)

ಸತ್ತ್ವಗುಣಕ್ಕೆ ಅಧಿಷ್ಠಾತೃವಾಗಿ ಭೂತ (ಪ್ರಾಣಿ)ಗಳನ್ನು ಬಿಭರ್ತಿ- ಕಾಪಾಡುತ್ತಾನೆ; ಧಾರಯತಿ - ಪೋಷಿಸುತ್ತಾನೆ. ಆದ್ದರಿಂದ ಭೂತಭೃತ್.[4]

(ಭಾಷ್ಯ)

ಪ್ರಪಞ್ಚರೂಪೇಣ ಭವತೀತಿ, ಕೇವಲಂ ಭವತೀತಿ ವಾ, (೭) **ಭಾವಃ** ಭವನಂ ಭಾವಃ ಸತ್ತಾತ್ಮನೋ ವಾ||

ಭಾಷ್ಯಾರ್ಥ

ಪ್ರಪಂಚರೂಪದಿಂದ ಉಂಟಾಗುತ್ತಾನೆ. ಆದ್ದರಿಂದ ; ಅಥವಾ ಉಂಟಾಗುತ್ತಾನೆ - ಎಂದಿಷ್ಟೇ ಅರ್ಥದಿಂದ ಆಗಲಿ **ಭಾವ** (ಎಂಬ ಹೆಸರು). ಇರುವಿಕೆಯೇ ಭಾವವು, ಸತ್ತಾತ್ಮಕವಾದ್ದರಿಂದ (ಭಾವವು) ಎಂದಾದರೂ (ವ್ಯಾಖ್ಯಾನಮಾಡಬಹುದು).

(ಭಾಷ್ಯ)

ಭೂತಾನಾಮನ್ತರ್ಯಾಮೀ ಇತಿ (೮) **ಭೂತಾತ್ಮಾ** 'ಏಷ ತ ಆತ್ಮಾನ್ತರ್ಯಾಮ್ಯಮೃತಃ' (ಬೃ. ೩-೭-೩ ಪ್ರಭೃತಿ ೨೨) ಇತಿ ಶ್ರುತೇಃ|

(ಭಾಷ್ಯಾರ್ಥ)

ಭೂತಗಳಿಗೆ ಅಂತರ್ಯಾಮಿಯಾಗಿರುವದರಿಂದ **ಭೂತಾತ್ಮನು**. 'ಈತನೇ ನಿನ್ನ ಅಮೃತನಾದ ಅಂತರ್ಯಾಮಿಯಾದ ಆತ್ಮನು' ಎಂಬ ಶ್ರುತಿಯ (ಪ್ರಮಾಣ)ದಿಂದ ಈ ನಾಮವು (ಸಿದ್ಧವಾಗುತ್ತದೆ).

---

1. ಡುಕೃಞ್ - ಕರಣೇ (ಮಾಡು) ಎಂಬ ಧಾತುವಿನಿಂದ ಕರೋತಿ - ಮಾಡುತ್ತಾನೆ ಎಂಬ ರೂಪವಾಗಿವೆ ಎಂದು ಈ ವ್ಯಾಖ್ಯಾನ.
2. ಕೃತೀ-ಛೇದನೇ ಎಂಬ ಧಾತುವಿನಿಂದ ಕೃನ್ತತಿ (ಕತ್ತರಿಸುತ್ತಾನೆ) - ಎಂದು ಎರಡನೆಯ ವ್ಯಾಖ್ಯಾನ.
3. ಕೃಞ್ - ಹಿಂಸಾಯಾಮ್ ಎಂಬ ಧಾತುವಿಗೆ ಕ್ವಿಪ್‌ಪ್ರತ್ಯಯವನ್ನು ಸೇರಿಸಿ ನುಗಾಗಮವು ಬಂದಿದೆ - ಕೃಣೋತಿ (ಹಿಂಸಿಸುತ್ತಾನೆ) - ಎಂಬ ರೂಪವನ್ನಾಶ್ರಯಿಸಿ ಮೂರನೆಯ ವ್ಯಾಖ್ಯಾನ.
4. ಡುಭೃಞ್ - ಧಾರಣಪೋಷಣಯೋಃ ಎಂಬ ಧಾತುವಿನಿಂದ ಹುಟ್ಟಿದ ರೂಪವಿದೆಂದು ಭಾವ.

(ಭಾಷ್ಯ)

ಭೂತಾನಿ ಭಾವಯತಿ, ಜನಯತಿ ವರ್ಧಯತೀತಿ ವಾ (೯) **ಭೂತಭಾವನಃ॥**

ಭಾಷ್ಯಾರ್ಥ

ಭೂತಗಳನ್ನು ಉಂಟುಮಾಡುತ್ತಾನೆ, ಅಥವಾ ಬೆಳೆಯಿಸುತ್ತಾನೆ.[1] ಆದ್ದರಿಂದ **ಭೂತಭಾವನ** ಎಂದು ಹೆಸರು.

**ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ।**
**ಅವ್ಯಯಃ ಪುರುಷಃ ಸಾಕ್ಷೀ ಕ್ಷೇತ್ರಜ್ಞೋಽಕ್ಷರ ಏವ ಚ ॥೧೫॥**

(ಭಾಷ್ಯ)

(೧೦) ಪೂತಾತ್ಮಾ ಭೂತಕೃದಾದಿಭಿರ್ಗುಣತನ್ತ್ರತ್ವಂ ಪ್ರಾಪ್ತಂ ಪ್ರತಿಷಿಧ್ಯತೇ। ಪೂತಾತ್ಮಾ ಇತಿ। ಪೂತ ಆತ್ಮಾ ಯಸ್ಯ ಸ **ಪೂತಾತ್ಮಾ!** ಕರ್ಮಧಾರಯೋ ವಾ[2], 'ಕೇವಲೋ ನಿರ್ಗುಣಶ್ಚ' (ಶ್ವೇ.೬-೧೧) ಇತಿ ಶ್ರುತೇಃ। ಗುಣೋಪರಾಗಃ ಸ್ವೇಚ್ಛಾತಃ ಪುರುಷಸ್ಯ ಇತಿ ಕಲ್ಪ್ಯತೇ॥

(ಭಾಷ್ಯಾರ್ಥ)

'ಭೂತಕೃತ್' ಮುಂತಾದ (ನಾಮಗಳನ್ನು ನೋಡಿದರೆ ಪರಮಾತ್ಮನು) ಗುಣಗಳಿಗೆ ಅಧೀನನು ಎಂದು ಪ್ರಾಪ್ತವಾದೀತು; ಅದನ್ನು **'ಪೂತಾತ್ಮ'** ಎಂದರೆ ಪರಿಶುದ್ಧ ಸ್ವರೂಪನು ಯಾವನೋ ಅವನು **ಪೂತಾತ್ಮನು** ಎಂಬ (ನಾಮದಿಂದ) ಅಲ್ಲಗಳೆದಿರುತ್ತದೆ. ಅಥವಾ (ಪೂತಾತ್ಮನು ಎಂಬುದು) ಕರ್ಮಧಾರಯವು. (ಪೂತವಾದ ಆತ್ಮನುಳ್ಳಾತನು) ಎಂದಾದರೂ (ವ್ಯಾಖ್ಯಾನಮಾಡಬಹುದು). 'ಕೇವಲನೂ ನಿರ್ಗುಣನೂ ಆಗಿರುತ್ತಾನೆ' ಎಂದು ಶ್ರುತಿಯಿರುವದರಿಂದ ಗುಣಗಳ ಸಂಬಂಧವು (ಈ) ಪುರುಷನಿಗೆ ತನ್ನ ಸ್ವತಂತ್ರೇಚ್ಛೆಯಿಂದ ಬಂದದ್ದು ಎಂದು ಕಲ್ಪಿಸಬೇಕು.

(ಭಾಷ್ಯ)

(೧೧) **ಪರಮಶ್ಚಾಸೌ ಆತ್ಮಾ ಚ ಇತಿ ಪರಮಾತ್ಮಾ!** ಕಾರ್ಯಕಾರಣವಿಲಕ್ಷಣೋ ನಿತ್ಯಶುದ್ಧಬುದ್ಧಮುಕ್ತಸ್ವಭಾವಃ॥

(ಭಾಷ್ಯಾರ್ಥ)

ಶ್ರೇಷ್ಠನಾದ ಆತ್ಮನಾದ್ದರಿಂದ (ಇವನು) ಪರಮಾತ್ಮನು. ಕಾರ್ಯಕಾರಣಗಳಿಗಿಂತ ವಿಲಕ್ಷಣನು, ನಿತ್ಯಶುದ್ಧಬುದ್ಧಮುಕ್ತಸ್ವಭಾವನು - ಎಂದರ್ಥ.

1. ಧಾತುಗಳಿಗೆ ಅನೇಕಾರ್ಥವುಂಟು ಎಂಬ ನಿಯಮವನ್ನನುಸರಿಸಿ 'ವರ್ಧಯತಿ' (ಬೆಳೆಯಿಸುತ್ತಾನೆ) ಎಂಬರ್ಥವನ್ನು ಕೊಟ್ಟಿದೆ.

2. 'ಪೂತನಾದ ಆತ್ಮನು' ಎಂದು ಈ ಕರ್ಮಧಾರಯದ ಅರ್ಥ. ಮೊದಲು ಪವಿತ್ರವಾದ ಸ್ವರೂಪವುಳ್ಳಾತನು ಯಾವನೋ - ಎಂದು ಬಹುವ್ರೀಹಿಯಾಗಿ ಅರ್ಥವನ್ನು ಮಾಡಿತ್ತು.

## (ಭಾಷ್ಯ)

(೧೨) ಮುಕ್ತಾನಾಂ ಪರಮಾ ಪ್ರಕೃಷ್ಟಾ ಗತಿಃ, ಗನ್ತವ್ಯಾ ದೇವತಾ, ಪುನರಾವೃತ್ತ್ಯಸಂಭವಾತ್ ತದ್ಗತಸ್ಯ ಇತಿ ಮುಕ್ತಾನಾಂ ಪರಮಾ ಗತಿಃ। 'ಮಾಮುಪೇತ್ಯ ತು ಕೌನ್ತೇಯ ಪುನರ್ಜನ್ಮ ನ ವಿದ್ಯತೇ' (ಗೀ. ೮-೧೬)ಇತಿ ಭಗವದ್ವಚನಮ್।

## (ಭಾಷ್ಯಾರ್ಥ)

**ಮುಕ್ತರಿಗೆ ಪರಮಗತಿ,** ಎಂದರೆ ಹೋಗಿ ಸೇರತಕ್ಕ ಹೆಚ್ಚಿನ ದೇವತೆ; ಏಕೆಂದರೆ ಆತನನ್ನು ಸೇರಿದವನಿಗೆ ಮತ್ತೆ ಹಿಂತಿರುಗಿ ಜನ್ಮಕ್ಕೆ ಬರುವದೆಂಬುದು ಆಗುವಂತಿಲ್ಲ. ಆದ್ದರಿಂದ 'ಮುಕ್ತಾನಾಂ ಪರಮಾ ಗತಿಃ' (ಎಂದು ಹೆಸರು). 'ಆದರೆ ನನ್ನನ್ನು ಪಡೆದುಕೊಂಡರೆ ಮತ್ತೆ ಜನ್ಮವೆಂಬುದು ಇರುವದಿಲ್ಲ' ಎಂಬ **ಭಗವದ್ವಚನ**ವಿದೆ.

## (ಭಾಷ್ಯ)

(೧೩) ನ ವ್ಯೇತಿ ನಾಸ್ತಿ ವ್ಯಯೋ ವಿನಾಶೋ ವಿಕಾರೋ ವಾ ವಿದ್ಯತ **ಇತ್ಯವ್ಯಯಃ**। 'ಅಜರೋಽಮರೋಽವ್ಯಯಃ' (ಬೃ.?) ಇತಿ ಶ್ರುತೇಃ॥

## (ಭಾಷ್ಯಾರ್ಥ)

ನಾಶವಾಗುವದಿಲ್ಲ, ಇವನಿಗೆ ವ್ಯಯ - ಎಂದರೆ ವಿನಾಶವಾಗಲಿ ವಿಕಾರವಾಗಲಿ ಇಲ್ಲವಾದ್ದರಿಂದ ಅವ್ಯಯನು. "ಅಜರನೂ (ಮುಪ್ಪಿಲ್ಲದವನೂ) ಮರಣವಿಲ್ಲದವನೂ ನಾಶವಿಲ್ಲದವನೂ" (ಬೃ.?) ಎಂದು ಶ್ರುತಿಯಲ್ಲಿದೆ.

## (ಭಾಷ್ಯ)

ಪುರಂ ಶರೀರಮ್; ತಸ್ಮಿನ್ ಶೇತೇ ಇತಿ (೧೪) **ಪುರುಷಃ** "ನವದ್ವಾರಂ ಪುರಂ ಪುಣ್ಯಮೇತೈರ್ಭಾವೈಃ ಸಮನ್ವಿತಮ್। ವ್ಯಾಪ್ಯ ಶೇತೇ ಮಹಾತ್ಮಾ ಯಸ್ತಸ್ಮಾತ್ ಪುರುಷ ಉಚ್ಯತೇ" (ಶಾಂತಿ. ೨೧೦-೩೭) ಇತಿ **ಮಹಾಭಾರತೇ**। ಯದ್ವಾ ಅಸ್ತೇರ್ವ್ಯತ್ಯಸ್ತಾಕ್ಷರಯೋಗಾತ್ ಪುರಾ ಪೂರ್ವಮೇವೇತಿ ವಿಗ್ರಹಂ ಕೃತ್ವಾ ವ್ಯುತ್ಪಾದಿತಃ ಪುರುಷಃ 'ಪೂರ್ವಮೇವಾಹಮಿಹಾಸಮಿತಿ। ತತ್ಪುರುಷಸ್ಯ ಪುರುಷತ್ವಮ್।' (ತೈ. ಆ. ೧-೧೩) ಇತಿ ಶ್ರುತೇಃ। ಅಥವಾ ಪುರುಷು ಉತ್ಕರ್ಷಶಾಲಿಷು ಸತ್ತ್ವೇಷು ಸೀದತಿ ಇತಿ ಪುರೂಣಿ ಫಲಾನಿ ಸನೋತಿ ದದಾತೀತಿ ವಾ, ಪುರೂಣಿ ಭುವನಾನಿ ಸಂಹಾರಸಮಯೇ ಸ್ಯತಿ ಅನ್ತಂ ಕರೋತೀತಿ ವಾ ಪೂರಣಾದ್ವಾ ಸದನಾದ್ವಾ ಪುರುಷಃ। 'ಪೂರಣಾತ್ ಸದನಾಚ್ಚೈವ ತತೋಽಸೌ ಪುರುಷೋತ್ತಮಃ' (ಉದ್ಯೋಗ. ೭೦-೧೧) ಇತಿ ಪಞ್ಚಮವೇದೇ॥

## (ಭಾಷ್ಯಾರ್ಥ)

ಪುರವೆಂದರೆ ಶರೀರವು. ಅದರಲ್ಲಿ (ಶೇತೇ) ಇರುವದರಿಂದ **ಪುರುಷನು**. ಈ ಭಾವಗಳಿಂದ ಪವಿತ್ರವಾದ ಒಂಬತ್ತು ದ್ವಾರಗಳ ಪುರವು ಕೂಡಿರುವದು; (ಅದನ್ನು)

ವ್ಯಾಪಿಸಿಕೊಂಡಿರುವ ಯಾವ ಮಹಾತ್ಮನಿರುವನಲ್ಲ, ಆದರಿಂದ 'ಪುರುಷನೆನಿಸಿರುತ್ತಾನೆ' ಎಂದು **ಮಹಾಭಾರತ**ದಲ್ಲಿದೆ. ಅಥವಾ[1] ಅಸ್‌ಧಾತುವಿನ ಅಕ್ಷರಗಳನ್ನು ಹಿಂದುಮುಂದುಮಾಡಿದರೆ[2] ಇದ್ದನು, ಪೂರ್ವದಲ್ಲಿಯೇ ಇದ್ದನು - ಎಂದು ವ್ಯುತ್ಪತ್ತಿಯನ್ನು ಮಾಡಿದರೆ ಪುರುಷನೆಂದಾಗುವದು. 'ಪೂರ್ವದಲ್ಲಿಯೇ ನಾನಿದ್ದೆನು ಎಂಬುದೇ ಪುರುಷನು ಪುರುಷನಾಗಿರುವದಕ್ಕೆ ನಿಮಿತ್ತವು' ಎಂದು ಶ್ರುತಿಯಿದೆ. ಅಥವಾ ಉತ್ಕರ್ಷವುಳ್ಳ ಪ್ರಾಣಿಗಳಲ್ಲಿ ಇರುತ್ತಾನೆ,[3] ಆದ್ದರಿಂದಲೋ, (ಪುರು) ಬಹಳ ಫಲಗಳನ್ನು (ಸನೋತಿ[4]=ಕೊಡುತ್ತಾನೆ), ಆದ್ದರಿಂದಲೋ ಬಹಳ ಲೋಕಗಳನ್ನು ಸಂಹಾರಕಾಲದಲ್ಲಿ (ಸ್ಯತಿ)[5] ಅಂತ್ಯಗೊಳಿಸುತ್ತಾನಾದ್ದರಿಂದಲೋ ಪೂರ್ಣವಾಗಿರುವದರಿಂದ ಮತ್ತು (ಪೂರಣ) ತುಂಬುವಿಕೆಯಿಂದಲೋ **ಪುರುಷನು**. ತುಂಬುವದರಿಂದಲೂ ಇರುವದರಿಂದಲೂ ಆದರಿಂದಲೇ ಈತನು ಪುರುಷೋತ್ತಮನು ಎಂದು ಐದನೆಯ ವೇದದಲ್ಲಿದೆ.[6]

## (ಭಾಷ್ಯ)

(೧೫) ಸಾಕ್ಷಾತ್ ಅವ್ಯವಧಾನೇನ ಸ್ವರೂಪಬೋಧೇನ ಈಕ್ಷತೇ ಪಶ್ಯತಿ ಸರ್ವಮ್ ಇತಿ **ಸಾಕ್ಷೀ**। 'ಸಾಕ್ಷಾದ್ ದ್ರಷ್ಟರಿ ಸಂಜ್ಞಾಯಾಮ್' (ಪಾ.೫-೨-೯೧) ಇತಿ **ಪಾಣಿನಿ**ವಚನಾತ್ ಇನಿಪ್ರತ್ಯಯಃ॥

## (ಭಾಷ್ಯಾರ್ಥ)

ನೇರಾಗಿ ಯಾವದೊಂದೂ ವ್ಯವಧಾನವು (ನಡುವೆ) ಇಲ್ಲದೆ ಎಲ್ಲವನ್ನೂ ತನ್ನ ಸ್ವರೂಪದ ಬೆಳಕಿನಿಂದ ನೋಡುತ್ತಾನೆ, ಕಾಣುತ್ತಿರುತ್ತಾನೆ - ಆದ್ದರಿಂದ **ಸಾಕ್ಷಿ**. "ನೇರಾಗಿ ಕಾಣುವಾತನು ಎಂಬರ್ಥದಲ್ಲಿ ನಾಮವನ್ನು ಹೇಳುವದಕ್ಕೆ ಇನಿ" ಎಂದು ಪಾಣಿನಿಯ ವಚನವಿರುವದರಿಂದ ಇಲ್ಲಿ ಇನಿ ಪ್ರತ್ಯಯವು ಬಂದಿದೆ.

## (ಭಾಷ್ಯ)

(೧೬) ಕ್ಷೇತ್ರಂ ಶರೀರಂ ಜಾನಾತೀತಿ ಕ್ಷೇತ್ರಜ್ಞಃ। 'ಆತೋಽನುಪಸರ್ಗೇ ಕಃ' (ಪಾ. ೩-೨-೨) ಇತಿ ಕಪ್ರತ್ಯಯಃ। 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' (ಗೀ.೧೩-೨) ಇತಿ ಭಗವದ್ವಚನಾತ್॥

ಕ್ಷೇತ್ರಾಣಿ ಹಿ ಶರೀರಾಣಿ ಬೀಜಂ ಚಾಪಿ ಶುಭಾಶುಭಮ್।

---

1. ಈ ಪ್ರಕರಣದಲ್ಲಿ ಪುರುಷಶಬ್ದಕ್ಕೆ ಕೊಟ್ಟಿರುವ ಅನೇಕ ವ್ಯುತ್ಪತ್ತಿಗಳು ಪ್ರಸ್ಥಾನತ್ರಯಭಾಷ್ಯಗಳಲ್ಲಿ ಎಲ್ಲೆಲ್ಲಿಯೂ ಕಾಣಬರುವದಿಲ್ಲ.
2. ಅಸ ಭುವಿ ಎಂಬ ಧಾತುವಿನಲ್ಲಿ ಸಕಾರದ ಮುಂದಕ್ಕೆ ಆಕಾರವನ್ನು ಇಟ್ಟುಕೊಂಡರೆ 'ಸಃ' ಎಂಬ ರೂಪಮಾಡಿದರೆ ಎಂದು ವ್ಯಾಖ್ಯಾನ. ಇದರ ಅಭಿಪ್ರಾಯವು ಏನೆಂಬುದು ತಿಳಿಯಲಿಲ್ಲ.
3. ಷದ್ಲೃ ವಿಶರಣಗತ್ಯವಸಾದನೇಷು ಎಂಬ ಧಾತುವಿನಿಂದ ಬಂದ ರೂಪ.
4. ಷಣು ದಾನೇ ಎಂಬ ಧಾತುವಿನಿಂದ ಬಂದ ರೂಪವಿದು.
5. 'ಷೋಽನ್ತಕರ್ಮಣಿ' ಎಂಬ ಧಾತುವಿನಿಂದ ಬಂದ ರೂಪ.
6. ಭಾರತವನ್ನು ಐದನೆಯ ವೇದವೆಂದು ಕರೆಯುವದುಂಟು. ಆದರೆ ಶಾಂಕರಭಾಷ್ಯಗಳಲ್ಲಿ ಅದನ್ನು ಈ ಹೆಸರಿನಿಂದ ಕರೆಯುವ ಪದ್ಧತಿಯು ಕಾಣುವದಿಲ್ಲ.

ತಾನಿ ವೇತ್ತಿ ಸ ಯೋಗಾತ್ಮಾ ತತಃ ಕ್ಷೇತ್ರಜ್ಞ ಉಚ್ಯತೇ॥ (ಶಾಂ. ೩೫೧-೬) ಇತಿ **ಮಹಾಭಾರತೇ**॥

(ಭಾಷ್ಯಾರ್ಥ)

ಕ್ಷೇತ್ರವನ್ನು ಎಂದರೆ ಶರೀರವನ್ನು ಅರಿಯುತ್ತಾನಾದ್ದರಿಂದ **ಕ್ಷೇತ್ರಜ್ಞನು**. 'ಉಪಸರ್ಗವಿಲ್ಲದ ಆದಂತಧಾತುವಿಗೆ ಕರ್ಮಣ್ಯುಪಪದದಲ್ಲಿ ಕಪ್ರತ್ಯಯವು ಬರುತ್ತದೆ' (ಎಂದು ಪಾಣಿನಿಸೂತ್ರನಿಯಮವಿದೆ). 'ಎಲ್ಲಾ ಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನನ್ನು ನಾನೆಂದೇ ತಿಳಿ' ಎಂದು ಭಗವಂತನ ವಚನವೂ ಇದೆ. ಶರೀರಗಳೇ ಕ್ಷೇತ್ರಗಳು, ಪುಣ್ಯಪಾಪರೂಪವಾದ ಕರ್ಮವೇ ಬೀಜವು. ಆ (ಕ್ಷೇತ್ರಗಳನ್ನು) ಆ ಯೋಗಾತ್ಮನು ಅರಿಯುತ್ತಿದ್ದಾನೆ; ಆದ್ದರಿಂದ ಕ್ಷೇತ್ರಜ್ಞನೆನಿಸಿರುತ್ತಾನೆ' ಎಂದು **ಮಹಾಭಾರತದಲ್ಲಿದೆ.**

(ಭಾಷ್ಯ)

(೧೭) ಸ ಏವ ನ ಕ್ಷರತೀತಿ ಅಕ್ಷರಃ ಪರಮಾತ್ಮಾ! ಅಶ್ನಾತೇಃ (?) ಅಶ್ನೋತೇರ್ವಾ ಸರಪ್ರತ್ಯಯಾನ್ತಸ್ಯ ರೂಪಮಕ್ಷರ ಇತಿ। ಏವಕಾರಾತ್ ಕ್ಷೇತ್ರಜ್ಞಾಕ್ಷರಯೋರಭೇದಃ ಪರಮಾರ್ಥತಃ। 'ತತ್ತ್ವಮಸಿ' (ಛಾಂ. ೬-೭-೮) ಇತಿ ಶ್ರುತೇಃ। ಚಕಾರಾತ್ ವ್ಯಾವಹಾರಿಕೋ ಭೇದಶ್ಚ, ಪ್ರಸಿದ್ಧೇರಪ್ರಮಾಣತ್ವಾತ್॥

(ಭಾಷ್ಯಾರ್ಥ)

ಆ (ಕ್ಷೇತ್ರಜ್ಞನೇ) ನಾಶವಾಗದೆ ಇರುವವನಾದ್ದರಿಂದ **ಅಕ್ಷರನು,** ಪರಮಾತ್ಮನು. 'ಅಶೂ' ಧಾತುವಿಗೆ ಸರಪ್ರತ್ಯಯವು ಬಂದು 'ಅಕ್ಷರ' ಎಂಬ ರೂಪವಾಗಿದೆ. (ಅಕ್ಷರ ಏವ ಎಂದು) ಏವಕಾರವು ಸೇರಿರುವದರಿಂದ ಕ್ಷೇತ್ರಜ್ಞನಿಗೂ ಅಕ್ಷರ (ಪರಮಾತ್ಮನಿಗೂ) ಅಭೇದವನ್ನು ಹೇಳಿದಂತಾಯಿತು. 'ಅದೇ ನೀನಾಗಿರುವೆ' ಎಂದು ಶ್ರುತಿಯಿದೆ. (ಏವ ಚ) ಎಂದು ಚಕಾರವಿರುವದರಿಂದ ಭೇದವು ವ್ಯಾವಹಾರಿಕ (ಎಂದೂ ಹೇಳಿದೆಯೆಂದಾಯಿತು). ಏಕೆಂದರೆ ಪ್ರಸಿದ್ಧಿಯು ಪ್ರಮಾಣವಲ್ಲ.[1]

**ಯೋಗೋ ಯೋಗವಿದಾಂ ನೇತಾ ಪ್ರಧಾನಪುರುಷೇಶ್ವರಃ।**
**ನಾರಸಿಂಹವಪುಃ ಶ್ರೀಮಾನ್ ಕೇಶವಃ ಪುರುಷೋತ್ತಮಃ ॥೧೬॥**

(ಭಾಷ್ಯ)

(೧೮) ಯೋಗಃ - ಜ್ಞಾನೇನ್ದ್ರಿಯಾಣಿ ಸರ್ವಾಣಿ ನಿರುಧ್ಯ ಮನಸಾ ಸಹ।
ಏಕತ್ವಭಾವನಾ ಯೋಗಃ ಕ್ಷೇತ್ರಜ್ಞಪರಮಾತ್ಮನೋಃ॥ (?)
ತದವಾಪ್ಯತಯಾ ಯೋಗ (ಇತಿ ಯೋಗವಿದೋ ವಿದುಃ)॥

1. ಕ್ಷೇತ್ರಜ್ಞಭೇದವು ಲೋಕಸಿದ್ಧವಾದರೂ ಪರಮಾರ್ಥವಲ್ಲ ಎಂದರ್ಥ.

(ಭಾಷ್ಯಾರ್ಥ)

ಜ್ಞಾನೇಂದ್ರಿಗಳೆಲ್ಲವನ್ನೂ ಮನಸ್ಸಿನೊಡನೆ ಬಿಗಿಹಿಡಿದುಕೊಂಡು ಕ್ಷೇತ್ರಜ್ಞ, ಪರಮಾತ್ಮ - ಈ ಇಬ್ಬರಿಗೂ ಏಕತ್ವವನ್ನು ಭಾವಿಸುತ್ತಿರವದೇ **ಯೋಗವು.** ಆ (ಯೋಗದಿಂದ) ಪಡೆಯತಕ್ಕವನು (ಪರಮಾತ್ಮನು). ಆದ್ದರಿಂದ (ಅವನು) **ಯೋಗನು** (ಎಂದು ಯೋಗಜ್ಞರು ಅರಿತುಕೊಂಡಿರುತ್ತಾರೆ).

(ಭಾಷ್ಯ)

(೧೯) ಯೋಗಂ ವಿದನ್ತಿ ವಿಚಾರಯನ್ತಿ, ಜಾನನ್ತಿ, ಲಭನ್ತೇ ಇತಿ ವಾ ಯೋಗವಿದಃ। ತೇಷಾಂ ನೇತಾ ಜ್ಞಾನಿನಾಂ ಯೋಗಕ್ಷೇಮವಹನಾದಿನಾ ಇತಿ **ಯೋಗವಿದಾಂ ನೇತಾ।** 'ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್' (ಗೀ.೯-೨೨) ಇತಿ ಭಗವದ್ವಚನಾತ್॥

(ಭಾಷ್ಯಾರ್ಥ)

ಯೋಗವನ್ನು ಅರಿಯುತ್ತಾರೆ ಎಂದರೆ ವಿಚಾರಿಸುತ್ತಿರುವವರು, ಅಥವಾ ಬಲ್ಲವರಾಗಿರುತ್ತಾರೆ, ಪಡೆದುಕೊಳ್ಳುತ್ತಾರೆ; ಆದ್ದರಿಂದ (ಅವರು) ಯೋಗವಿದರು. ಅವರನ್ನು ಕರೆದುಕೊಂಡು ಹೋಗುವವನು ಜ್ಞಾನಿಗಳ [1] ಯೋಗಕ್ಷೇಮವನ್ನು ವಹಿಸುವದೇ ಮುಂತಾದ್ದರಿಂದ ಅವರಿಗೆ ಮುಂದಾಳು; ಆದ್ದರಿಂದ **ಯೋಗವಿದಾಂ ನೇತಾ** (ಎಂದು ಇವನಿಗೆ ಹೆಸರು). 'ನಿತ್ಯವೂ (ನನ್ನಲ್ಲಿ) ಚಿತ್ತಸಮಾಧಾನವನ್ನಿಟ್ಟು ಕೊಂಡಿರುವ ಅವರ ಯೋಗಕ್ಷೇಮವನ್ನು ನಾನು ವಹಿಸುವೆನು' ಎಂದು **ಭಗವಂತನ ವಚನವಿದೆ.**

(ಭಾಷ್ಯ)

(೨೦) ಪ್ರಧಾನಂ ಪ್ರಕೃತಿರ್ಮಾಯಾ, ಪುರುಷೋ ಜೀವಃ; ತಯೋರೀಶ್ವರಃ ಪ್ರಧಾನಪುರುಷೇಶ್ವರಃ॥

(ಭಾಷ್ಯಾರ್ಥ)

ಪ್ರಧಾನವೆಂದರೆ ಪ್ರಕೃತಿ, ಮಾಯೆ; ಪುರುಷನೆಂದರೆ ಜೀವನು. ಆ (ಪ್ರಕೃತಿ ಪುರುಷರಿಗೆ) ಈಶ್ವರನು (ಈತನು). ಆದ್ದರಿಂದ ಇವನು '**ಪ್ರಧಾನಪುರುಷೇಶ್ವರನು**'.

(ಭಾಷ್ಯ)

(೨೧) ನರಸ್ಯ ಸಿಂಹಸ್ಯ ಚ ಅವಯವಾ ಯಸ್ಮಿನ್ ಲಕ್ಷ್ಯನ್ತೇ ತದ್ವಪುರ್ಯಸ್ಯ ಸ ನಾರಸಿಂಹವಪುಃ॥

1. ಯೋಗವೆಂದರೆ ಮುಖ್ಯಾರ್ಥದಲ್ಲಿ ಜ್ಞಾನವೇ ಎಂದು ಗೀತಾಭಾಷ್ಯ (ಅ.೪)ರಲ್ಲಿ ಆಚಾರ್ಯರು ಬರೆದಿರುವದನ್ನು ಇಲ್ಲಿ ಗಮನಿಸಬೇಕು. ಕ್ಷೇತ್ರಜ್ಞೇಶ್ವರರ ಏಕತ್ವಜ್ಞಾನವುಳ್ಳವರು ಯೋಗಿಗಳು ಎಂಬುದನ್ನು ಈ ಗೀತಾಶ್ಲೋಕವು ತಿಳಿಸುತ್ತದೆ.

(ಭಾಷ್ಯಾರ್ಥ)

ನರನ ಮತ್ತು ಸಿಂಹದ ಅವಯವಗಳು ಯಾವದರಲ್ಲಿ ಕಾಣಬರುತ್ತಿರುವವೋ ಆ ವಪು (= ಶರೀರವು) ಯಾವನಿಗೆ ಇದೆಯೋ ಆ (ಈತನು) **'ನಾರಸಿಂಹವಪು'**.

(ಭಾಷ್ಯ)

(೨೨) ಯಸ್ಯ ವಕ್ಷಸಿ ನಿತ್ಯಂ ವಸತಿ ಶ್ರೀಃ ಸ ಶ್ರೀಮಾನ್॥

(ಭಾಷ್ಯಾರ್ಥ)

ಯಾವತನ ಎದೆಯಲ್ಲಿ ಯಾವಾಗಲೂ ಶ್ರೀ(ಲಕ್ಷ್ಮಿ)ಯು ವಾಸ ಮಾಡಿಕೊಂಡಿರುವಳೋ, ಆ (ಈತನು) **ಶ್ರೀಮಾನ್** (ಎನಿಸುತ್ತಾನೆ).

(ಭಾಷ್ಯ)

(೨೩) ಅಭಿರೂಪಾಃ ಕೇಶಾ ಯಸ್ಯ ಸ 'ಕೇಶವಃ'। 'ಕೇಶಾದ್ ವೋಽನ್ಯತರಸ್ಯಾಮ್' (ಪಾ. ೫-೨-೧೦೯) ಇತಿ ವಪ್ರತ್ಯಯಃ ಪ್ರಶಂಸಾಯಾಮ್ ಯದ್ವಾ ಕಶ್ಚ ಅಶ್ಚ ಈಶಶ್ಚ ವಿಭೂತಯಃ ಕೇಶಾಃ। ತೇ ಯದ್ವಶೇ ವರ್ತನ್ತೇ ಸ ಕೇಶವಃ। ಕೇಶಿವಧಾದ್ವಾ (ಕೇಶವಃ) । 'ಯಸ್ಮಾತ್ತ್ವಯೈಷ ದುಷ್ಟಾತ್ಮಾ ಹತಃ ಕೇಶೀ ಜನಾರ್ದನ। ತಸ್ಮಾತ್ ಕೇಶವನಾಮ್ನಾ ತ್ವಂ ಲೋಕೇ ಖ್ಯಾತೋ ಭವಿಷ್ಯಸಿ' (ವಿ.ಪು. ೫-೧೬-೨೩) ಇತಿ **ವಿಷ್ಣುಪುರಾಣೇ** ಶ್ರೀಕೃಷ್ಣಂ ಪ್ರತಿ ನಾರದವಚನಮ್। ಪೃಷೋದರಾದಿತ್ವಾತ್ ಶಬ್ದಸಾಧುತ್ವಕಲ್ಪನಾ॥

(ಭಾಷ್ಯಾರ್ಥ)

ಸುಂದರವಾದ ತಲೆಗೂದಲುಗಳು ಯಾವನಿಗಿವೆಯೋ ಆ (ಈತನು) **ಕೇಶವನು**. 'ಕೇಶಾದ್ ವೋ ಅನ್ಯತರಸ್ಯಾಮ್' ಎಂಬ ಪಾಣಿನಿಯ ಸೂತ್ರದಂತೆ ಹೊಗಳುವದಕ್ಕೆ ತಕ್ಕವೆಂಬರ್ಥದಲ್ಲಿ ವಪ್ರತ್ಯಯವು ಬಂದಿದೆ. ಅಥವಾ ಕ (ಬ್ರಹ್ಮ), ಅ (ವಿಷ್ಣು), ಈಶ (ಶಿವ) - ಎಂಬೀ ವಿಭೂತಿಗಳೇ ಕೇಶಗಳು; ಅವು ಯಾವನ ವಶದಲ್ಲಿರುವವೋ ಆ (ಈತನು) **ಕೇಶವನು**. ಅಥವಾ ಕೇಶಿಯನ್ನು ಕೊಂದದ್ದರಿಂದ **ಕೇಶವನು**, 'ಈ ದುರಾತ್ಮನಾದ ಕೇಶಿಯು ನಿನ್ನಿಂದ ಹತನಾದನಲ್ಲವೆ, ಆದ್ದರಿಂದ ಜನಾರ್ದನನೆ, ಕೇಶವನೆಂಬ ಹೆಸರಿನಿಂದ ನೀನು ಲೋಕದಲ್ಲಿ ಪ್ರಖ್ಯಾತನಾಗುವೆ' ಎಂದು **ವಿಷ್ಣುಪುರಾಣದಲ್ಲಿ** ಶ್ರೀಕೃಷ್ಣನನ್ನು ಕುರಿತು ನಾರದರು (ಆಡಿದ) ಮಾತಿದು. ಪೃಷೋದರಾದಿಗಣದಲ್ಲಿರುವದರಿಂದ (ಈ ಕೇಶವ) ಶಬ್ದವು ಸಾಧುವೆಂದು ಕಲ್ಪಿಸಬೇಕು.[1]

1. 'ಪೃಷೋದರಾದೀನಿ ಯಥೋಪದಿಷ್ಟಮ್' (ಪಾ.೬-೩-೧೦೯) ಎಂದು ಪಾಣಿನಿಸೂತ್ರ. 'ಪೃಷೋದರ' ಮುಂತಾದ ಶಬ್ದಗಳು ವ್ಯವಹಾರದಲ್ಲಿ ಪ್ರಯೋಗಿಸಿದಂತೆ ಶುದ್ಧವೆಂದು ತಿಳಿಯಬೇಕು ಎಂಬುದು ಅದರ ಅರ್ಥ. ಪೃಷತ್, ಉದರ ಇವೆರಡೂ ಸೇರಿ ಪೃಷೋದರ ಶಬ್ದವಾಗಿದೆ. ಇಲ್ಲಿ ತಕಾರಲೋಪವಾಗಿದೆ. ಇದರಂತೆ 'ಬಲಾಹಕ', 'ಜೀಮೂತ', 'ಶ್ಮಶಾನ' - ಮುಂತಾದ ಶಬ್ದಗಳೂ ಈ ಗುಂಪಿಗೆ ಸೇರಿರುತ್ತವೆ. ಹಾಗೆಯೇ 'ಕೇಶವ' ಶಬ್ದವೂ ಕೇಶಿಯನ್ನು ಕೊಂದವನು - ಎಂಬರ್ಥದಲ್ಲಿ ಬಂದಿರುವ ರೂಪವೆಂದು ತಿಳಿಯಬೇಕು ಎಂದು ಭಾವ. ಶಬ್ದರೂಪಗಳಲ್ಲಿ ಲೋಪಾಗಮಾದಿಗಳು ಆದರೂ ಅವುಗಳ ವಿಚಾರವನ್ನು ಶಾಸ್ತ್ರದಲ್ಲಿ ಮಾಡದೆ ಇದ್ದರೆ, ಅಂಥ ಶಬ್ದರೂಪಗಳು ಪೃಷೋದರಾದಿಗಣಕ್ಕೆ ಸೇರಿದವೆಂದು ತಿಳಿಯಬೇಕು ಎಂದು ಮಹಾಭಾಷ್ಯದಲ್ಲಿಯೂ ಇದೆ. ಕೇಶವ ಶಬ್ದದಲ್ಲಿ ಕೇಶೀ ಎಂಬುದರ ಈಕಾರಕ್ಕೆ 'ಅ', ಮತ್ತು ವಧಶಬ್ದದ ಸ್ಥಾನದಲ್ಲಿ 'ವ' ಬಂದಿದೆ. ಹೀಗೆಯೇ ಮಿಕ್ಕ ಅರ್ಥಗಳಲ್ಲಿಯೂ 'ಕೇಶವ' ಶಬ್ದವನ್ನು ಈ ಗಣಕ್ಕೆ ಸೇರಿಸಿರುವದರಿಂದ ಸಾಧುವೆಂದು ತಿಳಿಯಬೇಕು - ಎಂದು ಕಲ್ಪಿಸಬೇಕು.

(ಭಾಷ್ಯ)

(೨೪) ಪುರುಷಾಣಾಂ ಉತ್ತಮಃ ಪುರುಷೋತ್ತಮಃ। ಅತ್ರ 'ನ ನಿರ್ಧಾರಣೇ' (ಪಾ.೨-೨-೧೦) ಇತಿ ಷಷ್ಠೀಸಮಾಸಪ್ರತಿಷೇಧೋ ನ ಭವತಿ। ಜಾತ್ಯಾದ್ಯನಪೇಕ್ಷಯಾ ಸಮರ್ಥತ್ವಾತ್। ಯತ್ರ ಪುನರ್ಜಾತಿಗುಣಕ್ರಿಯಾಪೇಕ್ಷಯಾ ಪೃಥಕ್ ಕ್ರಿಯಾ, ತತ್ರಾಸಮರ್ಥತ್ವಾನ್ನಿಷೇಧಃ ಪ್ರವರ್ತತೇ। ಯಥಾ 'ಮನುಷ್ಯಾಣಾಂ ಕ್ಷತ್ರಿಯಃ ಶೂರತಮಃ', 'ಗವಾಂ ಕೃಷ್ಣಾ ಗೌಃ ಸಂಪನ್ನಕ್ಷೀರತಮಾ', 'ಅಧ್ವಗಾನಾಂ ಧಾವನ್ ಶೀಘ್ರತಮಃ' ಇತಿ। ಅಥವಾ ಪಞ್ಚಮೀಸಮಾಸಃ। ತಥಾ ಚ ಭಗವದ್ವಚನಮ್ 'ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ। ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ' (ಗೀ. ೧೫-೧೮) ಇತಿ॥

(ಭಾಷ್ಯಾರ್ಥ)

ಪುರುಷರೊಳಗೆಲ್ಲ ಉತ್ತಮನು; (ಆದ್ದರಿಂದ ಇವನು) **ಪುರುಷೋತ್ತಮನು.** ಇಲ್ಲಿ 'ನ ನಿರ್ಧಾರಣೇ' ಎಂಬ (ಸೂತ್ರದಲ್ಲಿ ಹೇಳಿರುವ) ಷಷ್ಠೀಸಮಾಸಕ್ಕೆ ನಿಷೇಧವು ತಟ್ಟುವದಿಲ್ಲ. ಜಾತ್ಯಾದಿಗಳ ಅಪೇಕ್ಷೆಯಿಲ್ಲದೆಯೇ (ಷಷ್ಠ್ಯಂತಪದಕ್ಕೆ) ಸಾಮರ್ಥ್ಯವಿದೆ. (ಇದರ ವಿವರ :) ಎಲ್ಲಿಯಾದರೆ ಜಾತಿ, ಗುಣ, ಕ್ರಿಯೆ ಇವುಗಳ ಅಪೇಕ್ಷೆಯಿಂದ (ಒಂದು ವಸ್ತುವನ್ನು) ಬೇರ್ಪಡಿಸಿರುತ್ತದೆಯೋ, ಅಲ್ಲಿ ಸಾಮರ್ಥ್ಯವಿಲ್ಲದ್ದರಿಂದ (ಇಲ್ಲಿ ಹೇಳಿರುವ) ನಿಷೇಧವು ತಗಲುತ್ತದೆ. ಹೇಗೆಂದರೆ 'ಮನುಷ್ಯರೊಳಗೆ ಕ್ಷತ್ರಿಯನು ಹೆಚ್ಚು ಶೂರನು'[1], 'ಗೋಗಳಲ್ಲಿ ಕರಿಯ ಹಸು ಉತ್ತಮವಾದ ಹಾಲುಳ್ಳದ್ದು'[2], 'ದಾರಿನಡೆಯುವವರಲ್ಲಿ ಓಡುವವನು ಎಲ್ಲರಿಗಿಂತಲೂ ಹೆಚ್ಚು ವೇಗವುಳ್ಳಾತನು'.[3] (ಆದ್ದರಿಂದ ಇಲ್ಲಿ ಸಮಾಸವಾಗುವದಿಲ್ಲ).

ಅಥವಾ ಪ್ರಕೃತವಾದ (ಪುರುಷೋತ್ತಮಪದದಲ್ಲಿ) ಪಂಚಮಿ (ತತ್ಪುರುಷ) ಸಮಾಸ (ವಾಗಿದೆಯೆಂದೂ ವ್ಯಾಖ್ಯಾನಮಾಡಬಹುದು). ಇದಕ್ಕನುಗುಣವಾಗಿ ಶ್ರೀಕೃಷ್ಣಭಗವಂತನ ವಚನವೂ ಇದೆ; 'ನಾನು ಕ್ಷರಕ್ಕಿಂತಲೂ ಮೀರಿರುತ್ತೇನೆ. ಅಕ್ಷರಕ್ಕಿಂತಲೂ[4] ಉತ್ತಮನಾಗಿರುತ್ತೇನಲ್ಲವೆ, ಆದ್ದರಿಂದ ಲೋಕದಲ್ಲಿಯೂ[5] ವೇದದಲ್ಲಿಯೂ **ಪುರುಷೋತ್ತಮನೆಂದು** ಪ್ರಸಿದ್ಧನಾಗಿರುತ್ತೇನೆ'.

**ಸರ್ವಃ ಶರ್ವಃ ಶಿವಃ ಸ್ಥಾಣುರ್ಭೂತಾದಿರ್ನಿಧಿರವ್ಯಯಃ।**
**ಸಂಭವೋ ಭಾವನೋ ಭರ್ತಾ ಪ್ರಭವಃ ಪ್ರಭುರೀಶ್ವರಃ ॥೧೭॥**

1. ಇಲ್ಲಿ ಕ್ಷತ್ರಿಯಜಾತಿಯ ಅಪೇಕ್ಷೆ ಇದೆ. 2. ಇಲ್ಲಿ ಕರಿಯ ಗುಣದ ಅಪೇಕ್ಷೆ ಇದೆ.
3. ಇಲ್ಲಿ ಓಡುವದೆಂಬ ಕ್ರಿಯೆಯ ಅಪೇಕ್ಷೆಯಿದೆ. ಆದ್ದರಿಂದ ಈ ಮೂರು ಕಡೆಯಲ್ಲಿಯೂ ಷಷ್ಠೀಸಮಾಸವಾಗಲಿಲ್ಲ ಎಂದು ಭಾವ.
4. ಕ್ಷರಕ್ಕಿಂತ ಮತ್ತು ಅಕ್ಷರಕ್ಕಿಂತ ಎಂಬರ್ಥದಲ್ಲಿ ಪಂಚಮೀ ವಿಭಕ್ತಿ ಬಂದಿದೆ. ಇವುಗಳೊಳಗೆ ಎಂದು ನಿರ್ಧಾರಣಕ್ಕಾಗಿ ಷಷ್ಠೀ ವಿಭಕ್ತಿ ಬಂದಿಲ್ಲ.
5. ಕವಿಗಳು ಮತ್ತು ವ್ಯವಹಾರವಿದರಲ್ಲಿ.

## (ಭಾಷ್ಯ)

'ಅಸತಶ್ಚ ಸತಶ್ಚೈವ ಸರ್ವಸ್ಯ ಪ್ರಭವಾಪ್ಯಯಾತ್। ಸರ್ವಸ್ಯ ಸರ್ವದಾ[1] ಜ್ಞಾನಾತ್ ಸರ್ವಮೇನಂ ಪ್ರಚಕ್ಷತೇ' (ಉದ್ಯೋಗ.೭೦-೧೧) ಇತಿ ಭಗವದ್ವ್ಯಾಸವಚನಾತ್ (೨೫) ಸರ್ವಃ॥

## (ಭಾಷ್ಯಾರ್ಥ)

"ಅಸತ್ತಿಗೂ ಸತ್ತಿಗೂ-[2] ಪ್ರತಿಯೊಂದಕ್ಕೂ ಉತ್ಪತ್ತಿಪ್ರಲಯಗಳಿಗೆ ಕಾರಣವಾಗಿ ಇರುವದರಿಂದಲೂ ಒಂದೊಂದನ್ನೂ ಯಾವಾಗಲೂ ಅರಿಯುತ್ತಿರುವದರಿಂದಲೂ ಈತನನ್ನು '**ಸರ್ವ**'ನೆಂದು ಕರೆಯುತ್ತಾರೆ" ಎಂದು **ಭಗವಾನ್ ವ್ಯಾಸರ ವಚನ**ವಿರುವದರಿಂದ **ಸರ್ವ**ನು.

## (ಭಾಷ್ಯ)

(೨೬) ಶೃಣೋತಿ ಸಂಹಾರಸಮಯೇ ಸಂಹರತಿ ಸಂಹಾರಯತಿ ವಾ ಸಕಲಾಃ ಪ್ರಜಾಃ ಇತಿ ಶರ್ವಃ॥

## (ಭಾಷ್ಯಾರ್ಥ)

'ಎಲ್ಲಾ ಪ್ರಾಣಿಗಳನ್ನೂ ಪ್ರಲಯಕಾಲದಲ್ಲಿ (ಶೃಣೋತಿ) ಸಂಹರಿಸುತ್ತಾನೆ, ಅಥವಾ ಕೊಲ್ಲಿಸುತ್ತಾನೆ[3] ಎಂಬರ್ಥದಿಂದಲೂ (ಈತನು) **ಶರ್ವನು.**

## (ಭಾಷ್ಯ)

(೨೭) ನಿಸ್ತ್ರೈಗುಣತಯಾ ಶುದ್ಧತ್ವಾತ್ ಶಿವಃ। 'ಸ ಬ್ರಹ್ಮ ಸ ಶಿವಃ' (ಮಹಾನಾ. ೧೦-೧೩) ಇತ್ಯಭೇದೋಪದೇಶಾತ್ ಶಿವಾದಿನಾಮಭಿರ್ಹರಿರೇವ ಸ್ತೂಯತೇ॥

## (ಭಾಷ್ಯಾರ್ಥ)

ಮೂರು ಗುಣಗಳೂ ಇಲ್ಲದೆ ಶುದ್ಧನಾಗಿರುವುದರಿಂದ[4] ಶಿವನು. 'ಆತನೇ ಬ್ರಹ್ಮವು, ಆತನೇ ಶಿವನು' ಎಂದು (ಶ್ರುತಿಯಲ್ಲಿ) ವಿಷ್ಣುವಿಗೂ ಶಿವಾದಿಗಳಿಗೂ ಅಭೇದವನ್ನು ಉಪದೇಶಿಸಿರುವದರಿಂದ (ಈ ಹೆಸರುಗಳಿಂದ)[5] ಹರಿಯನ್ನೇ ಸ್ತುತಿಸಿರುತ್ತದೆ.

---

1. 'ಚ ಸದಾ' ಎಂದು ಅಚ್ಚಿನ ಪುಸ್ತಕದ ಪಾಠ.
2. ಕಾರಣಕ್ಕೂ ಕಾರ್ಯಕ್ಕೂ ಎಂದರ್ಥ.
3. ಶೃಣೋತಿ ಎಂಬುದಕ್ಕೆ ತಾನೇ ಕೊಲ್ಲುತ್ತಾನೆ ಎಂದಾಗಲಿ ಮತ್ತೊಂದು ನಿಮಿತ್ತದಿಂದ ಕೊಲ್ಲಿಸುತ್ತಾನೆ ಎಂದಾಗಲಿ ಅರ್ಥವನ್ನು ಮಾಡಬಹುದು ಎಂದು ಭಾವ. 'ಕೃ, ಗೃ, ಶೃ, ಧೃ, ಭ್ಯೋ ನಃ' (ಉಣಾದಿ ೧೫೩) ಎಂಬ ಸೂತ್ರದಂತೆ ರಪ್ರತ್ಯಯವು ಬಂದು 'ಶರ್ವ' ಶಬ್ದವಾಗಿದೆ ಎಂದು ಭಾವ.
4. ಭವ(ಉತ್ಪತ್ತಿಕಾರಣನು), ಮೃಡ (ಸ್ಥಿತಿಕಾರಣನು), ಹರ (ಲಯಕಾರಣನು) ಇವು ರಜಸ್ಸು, ಸತ್ತ್ವ ತಮಸ್ಸು - ಎಂಬ ಮೂರು ಗುಣಗಳಿಂದ ಬಂದಿರುವ ನಾಮಗಳು; ಆದರೆ ಶಿವ ಎಂಬುದು ಮೂರು ಗುಣಗಳೂ ಇಲ್ಲದವನು - ಎಂಬರ್ಥದಲ್ಲಿ ಬಂದಿದೆ. ಶಿವಮಹಿಮ್ನಃ ಸ್ತೋತ್ರವನ್ನು ನೋಡಿ.
5. ಶರ್ವ, ಶಿವ, ಸ್ಥಾಣು - ಇವು ರುದ್ರನಿಗೂ ಹೆಸರಾಗಬಹುದು; ಆದರೆ ಶ್ರುತಿಯಲ್ಲಿ ಇವೆಲ್ಲವೂ ವಿಷ್ಣುವಿನ ವಿಭೂತಿಗಳೆಂದೇ ಹೇಳಿರುವದರಿಂದ ಈ ಹೆಸರುಗಳಿಂದಲೂ ಇಲ್ಲಿ ಹರಿಯನ್ನೇ ಹೊಗಳಿದೆ - ಎಂದು ಅಭಿಪ್ರಾಯ.

### (ಭಾಷ್ಯ)

(೨೮) ಸ್ಥಿರತ್ವಾತ್ ಸ್ಥಾಣುಃ। ಭೂತಾನಾಮಾದಿಕಾರಣತ್ವಾತ್ (೨೯) ಭೂತಾದಿಃ। ಪ್ರಲಯಕಾಲೇ ಅಸ್ಮಿನ್ ಸರ್ವಂ ನಿಧೀಯತ ಇತಿ (೩೦) ನಿಧಿಃ। 'ಕರ್ಮಣ್ಯಧಿಕರಣೇ ಚ' (ಪಾ.೩-೩-೯೩) ಇತಿ ಕಿಪ್ರತ್ಯಯಃ। ಸ ಏವ ನಿಧಿರ್ವಿಶೇಷ್ಯತೇ ಅವ್ಯಯಃ ಅವಿನಶ್ವರೋ ನಿಧಿರಿತ್ಯರ್ಥಃ।

### (ಭಾಷ್ಯಾರ್ಥ)

ಸ್ಥಿರನಾಗಿರುವದರಿಂದ **ಸ್ಥಾಣುವು**. ಭೂತಗಳಿಗೆ (ಪಂಚಭೂತಗಳಿಗೆ) ಮೊದಲನೆಯ ಕಾರಣನಾಗಿರುವದರಿಂದ **ಭೂತಾದಿ**. ಪ್ರಲಯಕಾಲದಲ್ಲಿ ಈತನಲ್ಲಿಯೇ ಎಲ್ಲವೂ (ನಿಧೀಯತೇ) ಹುದುಗಿಕೊಂಡಿರುತ್ತದೆಯಾದ್ದರಿಂದ 'ನಿಧಿ' (ನಿಕ್ಷೇಪ ಎಂದು ಈತನಿಗೆ ಹೆಸರು) 'ಕರ್ಮಣ್ಯಧಿಕರಣೇ ಚ' ಎಂಬ ವ್ಯಾಕರಣಸೂತ್ರದಂತೆ (ಅಧಿಕರಣಾರ್ಥದಲ್ಲಿ ಧಾತುವಿಗೆ) ಕಿಪ್ರತ್ಯಯವು (ಬಂದು 'ನಿಧಿ' ಎಂಬ ರೂಪವಾಗಿರುತ್ತದೆ). ಈ 'ನಿಧಿ'ಗೇ 'ಅವ್ಯಯ'ವಾದ ಎಂಬುದು ವಿಶೇಷಣ. (ನಿಧಿರವ್ಯಯಃ) ಎಂದಿಗೂ ನಾಶವಾಗದ ನಿಧಿ (ಎಂದು ಈ ನಾಮದ) ಅರ್ಥ.

### (ಭಾಷ್ಯ)

(೩೧) ಸ್ವೇಚ್ಛಯಾ ಸಮೀಚೀನಂ ಭವನಮ್ ಅಸ್ಯ ಇತಿ ಸಂಭವಃ। 'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' (ಗೀ.೪-೮) ಇತಿ ಭಗವದ್ವಚನಾತ್। 'ಅಥ ದುಷ್ಟವಿನಾಶಾಯ ಸಾಧೂನಾಂ ರಕ್ಷಣಾಯ ಚ । ಸ್ವೇಚ್ಛಯಾ ಸಂಭವಾಮ್ಯೇವಂ ಗರ್ಭದುಃಖವಿವರ್ಜಿತಃ'(?) ಇತಿ ಚ॥

### (ಭಾಷ್ಯಾರ್ಥ)

ತನ್ನ ಇಚ್ಛೆಗೆ ಅನುಸಾರವಾಗಿ ಚೆನ್ನಾಗಿ ಉಂಟಾಗುವಿಕೆಯು ಈತನಿಗೆ ಇದೆಯಾದ್ದರಿಂದ **ಸಂಭವ** (ವೆಂದು ಹೆಸರು). 'ಧರ್ಮವನ್ನು ನೆಲೆನಿಲ್ಲಿಸುವದಕ್ಕಾಗಿ ಒಂದೊಂದು ಯುಗದಲ್ಲಿಯೂ ಸಂಭವಿಸುತ್ತೇನೆ' ಎಂದು ಭಗವದ್ವಚನ ವಿರುವದರಿಂದಲೂ, 'ಇನ್ನು ದುಷ್ಟರ ವಿನಾಶಕ್ಕಾಗಿಯೂ ಸಾಧುಗಳ ರಕ್ಷಣೆಗಾಗಿಯೂ ನನ್ನ ಇಚ್ಛೆಯಂತೆ ಹೀಗೆ ಗರ್ಭ (ವಾಸದ) ದುಃಖವಿಲ್ಲದೆ ಸಂಭವಿಸುತ್ತೇನೆ' (?) (ಎಂಬ ಭಗವದ್ವಚನವಿರುವದರಿಂದಲೂ) ಈ ನಾಮದ ಅರ್ಥವು ಇದೆಂದು ತಿಳಿಯಬೇಕು)

### (ಭಾಷ್ಯ)

(೩೨) ಸರ್ವೇಷಾಂ ಭೋಕ್ತೄಣಾಂ ಫಲಾನಿ ಭಾವಯತೀತಿ ಭಾವನಃ। ಸರ್ವಫಲದಾತೃತ್ವಂ 'ಫಲಮತ ಉಪಪತ್ತೇಃ' (ವೇ.ಸೂ. ೩-೨-೩೮) ಇತ್ಯತ್ರ ಉಪಪಾದಿತಮ್॥

### (ಭಾಷ್ಯಾರ್ಥ)

ಎಲ್ಲಾ ಭೋಕ್ತೃ (ಜೀವರು)ಗಳಿಗೂ ಫಲವನ್ನು (ಭಾವಯತಿ) ಉಂಟು

ಮಾಡುತ್ತಾನೆ; ಆದ್ದರಿಂದ **ಭಾವನ** (ಎಂದು ಹೆಸರು). ಎಲ್ಲಾ ಫಲಗಳನ್ನೂ ಕೊಡುತ್ತಾನೆ ಎಂಬುದನ್ನು 'ಫಲಮತ ಉಪಪತ್ತೇಃ' ಎಂಬಲ್ಲಿ (ಯುಕ್ತಿಯಿಂದ) ತೋರಿಸಿಕೊಟ್ಟಿರುತ್ತದೆ.

(ಭಾಷ್ಯ)

ಪ್ರಪಞ್ಚಸ್ಯ ಅಧಿಷ್ಠಾನತ್ವೇನ ಭರಣಾತ್। (೩೩) ಭರ್ತಾ। ಪ್ರಕರ್ಷೇಣ ಮಹಾಭೂತಾನಿ ಅಸ್ಮಾಜ್ಜಾಯನ್ತ ಇತಿ (೩೪) ಪ್ರಭವಃ। ಪ್ರಕೃಷ್ಟೋ ಭವಃ ಜನ್ಮ ಅಸ್ಯೇತಿ ವಾ। ಸರ್ವಾಸು ಕ್ರಿಯಾಸು ಸಾಮರ್ಥ್ಯಾತಿಶಯಾತ್ (೩೫) ಪ್ರಭುಃ। ನಿರುಪಾಧಿಕಮೈಶ್ವರ್ಯಮಸ್ಯ ಇತಿ (೩೬) ಈಶ್ವರಃ; 'ಏಷ ಸರ್ವೇಶ್ವರಃ' (ಮಾಂ ೬) ಇತಿ ಶ್ರುತೇಃ॥

(ಭಾಷ್ಯಾರ್ಥ)

ಪ್ರಪಂಚಕ್ಕೆ ಅಧಿಷ್ಠಾನವಾಗಿದ್ದುಕೊಂಡು[1] ಧರಿಸಿಕೊಂಡಿರುವದರಿಂದ **ಭರ್ತಾ** (ಎನಿಸಿರುತ್ತಾನೆ). ಹೆಚ್ಚಿನ ರೀತಿಯಿಂದ ಮಹಾಭೂತಗಳು ಈತನಿಂದ ಹುಟ್ಟಿವೆಯಾದ್ದರಿಂದ **ಪ್ರಭವನು**; ಅಥವಾ ಪ್ರಕೃಷ್ಟ (ದಿವ್ಯ)ವಾದ ಭವವು ಜನ್ಮವು ಈತನದು. ಆದ್ದರಿಂದ(ಪ್ರಭವನು). ಎಲ್ಲಾ ಕ್ರಿಯೆಗಳಲ್ಲಿಯೂ (ಈತನಿಗೆ) ಹೆಚ್ಚಿನ ಸಾಮರ್ಥ್ಯವಿರುವದರಿಂದ **ಪ್ರಭು**. ಈತನ ಐಶ್ವರ್ಯವು ಉಪಾಧಿರಹಿತವಾಗಿದೆ. ಆದ್ದರಿಂದ **ಈಶ್ವರನು**. 'ಈತನು ಸರ್ವೇಶ್ವರನು' ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು).

**ಸ್ವಯಂಭೂಃ ಶಮ್ಭುರಾದಿತ್ಯಃ ಪುಷ್ಕರಾಕ್ಷೋ ಮಹಾಸ್ವನಃ।**
**ಅನಾದಿನಿಧನೋ ಧಾತಾ ವಿಧಾತಾ ಧಾತುರುತ್ತಮಃ ॥೧೮॥**

(ಭಾಷ್ಯ)

ಸ್ವಯಮೇವ ಭವತೀತಿ (೩೭) ಸ್ವಯಂಭೂಃ। 'ಸ ಏಷ ಸ್ವಯಮುದ್ಬಭೌ' (ಮನು. ೧-೭) ಇತಿ ಮಾನವಂ ವಚನಮ್। ಸರ್ವೇಷಾಮುಪರಿ ಭವತಿ, ಸ್ವಯಮೇವ ವಾ ಭವತಿ ಇತಿ ಸ್ವಯಂಭೂಃ। ಯೇಷಾಮುಪರಿ ಭವತಿ ಯಶ್ಚೋಪರಿ ಭವತಿ ತದುಭಯಾತ್ಮನಾ ಸ್ವಯಮೇವ ಭವತೀತಿ ವಾ; 'ಪರಿಭೂಃ ಸ್ವಯಂಭೂಃ' (ಈ.೮) ಇತಿ ಮನ್ತ್ರವರ್ಣಾತ್। ಅಥವಾ ಸ್ವಯಂಭೂಃ ಪರಮೇಶ್ವರಃ ಸ್ವಯಮೇವ ಸ್ವತನ್ತ್ರೋ ಭವತಿ ನ ಪರತನ್ತ್ರಃ। 'ಪರಾಞ್ಚಿ ಖಾನಿ ವ್ಯತೃಣತ್ ಸ್ವಯಂಭೂಃ' (ಕಾ.೪-೧) ಇತಿ ಮನ್ತ್ರವರ್ಣಾತ್॥

(ಭಾಷ್ಯಾರ್ಥ)

ತಾನೇ ಉಂಟಾಗುತ್ತಾನಾದ್ದರಿಂದ ಸ್ವಯಂಭುವು. 'ಆ ಈತನು ತಾನೇ

1. ಕಲ್ಪಿತವಾದದ್ದಕ್ಕೆ ಆಧಾರವಾಗಿರುವ ವಸ್ತುವನ್ನು ಅಧಿಷ್ಠಾನವೆಂದು ಕರೆಯುವದು ವ್ಯಾಖ್ಯಾನಪ್ರಸ್ಥಾನದಲ್ಲಿದ್ದರೂ ಪ್ರಸ್ಥಾನತ್ರಯಭಾಷ್ಯದಲ್ಲಿ ಈ ಪ್ರಯೋಗವು ಕಾಣಿಸುತ್ತಿಲ್ಲ.

ತೋರಿಕೊಂಡನು' ಎಂದು ಮನುವಿನ ವಚನವಿದೆ.[1] ಎಲ್ಲರಮೇಲೂ ಇರುತ್ತಾನೆ, ತಾನೇ ಇರುತ್ತಾನೆ - ಆದ್ದರಿಂದ **ಸ್ವಯಂಭು.** ಯಾರಮೇಲೆ ಇರುತ್ತಾನೋ, ಮತ್ತು ಯಾವನು ಮೇಲೆ ಇರುತ್ತಾನೋ ಆ ಎರಡೂ ಸ್ವರೂಪದಿಂದಲೂ ತಾನೇ ಇರುತ್ತಾನೆ ಎಂದಾದರೂ (ಇದಕ್ಕೆ ವ್ಯಾಖ್ಯಾನ). 'ಎಲ್ಲೆಲ್ಲಿಯೂ ಇರುವಾತನು, ತಾನೇ ಇರುವಾತನು' ಎಂಬ ಮಂತ್ರವರ್ಣವು (ಇದಕ್ಕೆ ಪ್ರಮಾಣ). ಅಥವಾ ಸ್ವಯಂಭು ಎಂದರೆ ಪರಮೇಶ್ವರನೇ; ಏಕೆಂದರೆ ತಾನೇ ಎಂದಿಗೂ ಸ್ವತಂತ್ರನಾಗಿರುತ್ತಾನೆ, ಪರತಂತ್ರನಾಗಿರುವದಿಲ್ಲ. 'ಇಂದ್ರಿಯಗಳನ್ನು ಸ್ವಯಂಭುವು ಹೊರಗಡೆಗೆ ಕೊರೆದಿರುತ್ತಾನೆ' ಎಂಬ ಮಂತ್ರವರ್ಣವು ಇದಕ್ಕೆ ಪ್ರಮಾಣ.

### (ಭಾಷ್ಯ)

(೩೮) ಶಂ ಸುಖಂ ಭಕ್ತಾನಾಂ ಭಾವಯತೀತಿ ಶಮ್ಭುಃ।

### (ಭಾಷ್ಯಾರ್ಥ)

ಶಂ ಎಂದರೆ ಸುಖವನ್ನು ಭಕ್ತರಿಗೆ ಉಂಟುಮಾಡುತ್ತಾನೆ. ಆದ್ದರಿಂದ **ಶಂಭು.**

### (ಭಾಷ್ಯ)

(೩೯) ಆದಿತ್ಯಮಣ್ಡಲಾನ್ತಃಸ್ಥೋ ಹಿರಣ್ಮಯಃ ಪುರುಷಃ **ಆದಿತ್ಯಃ,** ದ್ವಾದಶಾದಿತ್ಯೇಷು ವಿಷ್ಣುರ್ವಾ। 'ಆದಿತ್ಯಾನಾಮಹಂ ವಿಷ್ಣುಃ' (ಗೀ. ೧೦-೨೧) ಇತ್ಯುಕ್ತೇಃ। ಅದಿತೇರಖಣ್ಡಿತಾಯಾ ಮಹ್ಯಾಃ ಅಯಂ ಪತಿರಿತಿ ವಾ 'ಇಯಂ ವಾ ಅದಿತಿಃ' (ತೈ.ಸಂ. ೫-೧-೭), 'ಮಹೀಂ ದೇವೀಂ ವಿಷ್ಣುಪತ್ನೀಮ್' (ತೈ.ಬ್ರಾ. ೩-೧-೨) ಇತಿ ಶ್ರುತೇಃ। ಯಥಾ ಆದಿತ್ಯ ಏಕ ಏವ ಅನೇಕೇಷು ಜಲಭಾಜನೇಷು ಅನೇಕವತ್ ಪ್ರತಿಭಾಸತೇ ಏವಮನೇಕೇಷು ಶರೀರೇಷು ಏಕ ಏವಾತ್ಮಾ ಅನೇಕವತ್ ಪ್ರತಿಭಾಸತ ಇತಿ ಆದಿತ್ಯಸಾಧರ್ಮ್ಯಾದ್ವಾ ಆದಿತ್ಯಃ॥

### (ಭಾಷ್ಯಾರ್ಥ)

ಆದಿತ್ಯಮಂಡಲದ ಒಳಗೆ ಇರುವ ಹಿರಣ್ಮಯನಾದ[2] ಪುರುಷನಾದ್ದರಿಂದ **ಆದಿತ್ಯನು.** 'ಹನ್ನೆರಡು ಮಂದಿ ಆದಿತ್ಯರುಗಳಲ್ಲಿ ವಿಷ್ಣುವಾಗಿರುವಾತನು (ಎಂಬ ಕಾರಣದಿಂದ ಆದಿತ್ಯನು)' ಎಂದಾದರೂ ವ್ಯಾಖ್ಯಾನಮಾಡಬಹುದು; ಏಕೆಂದರೆ 'ಆದಿತ್ಯರುಗಳಲ್ಲಿ ವಿಷ್ಣುವು ನಾನು' ಎಂದು (ಭಗವಂತನ) ಉಕ್ತಿಯಿದೆ. ಅದಿತಿಯು ಎಂದರೆ ಖಂಡಖಂಡವಾಗಿಲ್ಲದ[3] ಮಹಿ (ಭೂಮಿ)ಗೆ ಈತನು (ಪತಿಯಾದ್ದರಿಂದ

---

1. ಇದು ಪರಮಾತ್ಮನು ಪ್ರಕಟವಾದನು ಎಂಬುದಕ್ಕೆ ಪ್ರಮಾಣ; ಆದ್ದರಿಂದ ತಾನೇ ಉಂಟಾಗುವನಾದ್ದರಿಂದ ಸ್ವಯಂಭು ಎಂಬ ಅಭಿಪ್ರಾಯವು ಭಾಷ್ಯಕಾರರಿಗೆ ಇದ್ದಿರಬಹುದು.

2. 'ಅಥ ಯ ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷೋ ದೃಶ್ಯತೇ' (ಛಾಂ. ೧-೬-೬) 'ಆದಿತ್ಯನಲ್ಲಿ ಹಿರಣ್ಮಯನಾದ ಪುರುಷನು ಕಾಣುತ್ತಿರುವನಲ್ಲ' - ಎಂದು ಉಪನಿಷತ್ತಿನಲ್ಲಿದೆ. ಅದರ ಸೂಚನೆಯಿದು. ಇಲ್ಲಿ ಹಿರಣ್ಮಯನೆಂದರೆ ತೇಜೋರೂಪನು ಎಂದರ್ಥ.

3. ದಿತಿ ಎಂದರೆ ಖಂಡಿಸಲ್ಪಟ್ಟು. 'ದ್ಯೋಽವಖಣ್ಡನೇ' ಎಂಬ ಧಾತುವಿನಿಂದ ಬಂದ ಕರ್ಮಾರ್ಥದಲ್ಲಿ ಕ್ತಿನ್ ಪ್ರತ್ಯಯಾಂತರೂಪ. 'ಆದಿತ್ಯಾ ಅಯಮ್' ಇತ್ಯಾದಿತ್ಯಃ' - ಎಂದು (ಪಾ.೪-೧-೪೭)ಣ್ಯಪ್ರತಯವು ಬಂದಿದೆ - ಎಂದು ವ್ಯಾಖ್ಯಾನ.

ಆದಿತ್ಯನು) ಎಂದೂ ಆಗಬಹುದು. ಏಕೆಂದರೆ 'ಈ ಭೂಮಿಯೇ ಅದಿತಿಯು', 'ವಿಷ್ಣುಪತ್ನಿಯಾದ ಮಹೀದೇವಿಯನ್ನು' ಎಂದು ಶ್ರುತಿಯಿದೆ. 'ಹೇಗೆ ಆದಿತ್ಯನು ತಾನೊಬ್ಬನೇ ಅನೇಕ ನೀರಿನ ಪಾತ್ರೆಗಳಲ್ಲಿ ಅನೇಕರಾಗಿರುವಂತೆ ತೋರುತ್ತಾನೋ, (ಹಾಗೆ ಅನೇಕ ಶರೀರಗಳಲ್ಲಿ ಒಬ್ಬ ಆತ್ಮನೇ ಅನೇಕರಂತೆ ಕಾಣುತ್ತಿದ್ದಾನೆ)[1], ಎಂದು ಆದಿತ್ಯನಿಗೆ ಸಮಾನವಾಗಿರುವ ಧರ್ಮವುಳ್ಳಾತನಾದ್ದರಿಂದ 'ಆದಿತ್ಯನು' ಎಂದಾದರೂ (ವ್ಯಾಖ್ಯಾನಮಾಡಬಹುದು).

(ಭಾಷ್ಯ)

ಪುಷ್ಕರೇಣ ಉಪಮಿತೇ ಅಕ್ಷಿಣೀ ಯಸ್ಯ[2] ಇತಿ (೪೦) ಪುಷ್ಕರಾಕ್ಷಃ।

(ಭಾಷ್ಯಾರ್ಥ)

ಪುಷ್ಕರ (ಕಮಲ)ಕ್ಕೆ ಸಮನಾಗಿರುವ (ಎರಡು) ಕಣ್ಣುಗಳು ಯಾವನಿಗಿವೆಯೋ (ಅವನು) **ಪುಷ್ಕರಾಕ್ಷನು.**

(ಭಾಷ್ಯ)

ಮಹಾನ್ ಊರ್ಜಿತಃ ಸ್ವನಃ ನಾದೋ ವಾ ಶ್ರುತಿಲಕ್ಷಣಂ ಯಸ್ಯ ಸಃ (೪೧) ಮಹಾಸ್ವನಃ। 'ಸನ್ಮಹತ್' (ಪಾ. ೨-೧-೬೧) ಇತ್ಯಾದಿನಾ[3] ಸಮಾಸೇ ಕೃತೇ "ಆನ್ಮಹತಃ ಸಮಾನಾಧಿಕರಣಜಾತೀಯಯೋಃ" (ಪಾ. ೬-೩-೪೬) ಇತ್ಯಾತ್ವಮ್। "ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ" (ಬೃ.೨-೪-೧೦) ಇತಿ ಶ್ರುತೇಃ॥

(ಭಾಷ್ಯಾರ್ಥ)

ಹೆಚ್ಚಾದ ಸ್ವರವು, ಅಥವಾ ಶ್ರುತಿರೂಪವಾದ ನಾದವು ಯಾವನಿಗಿದೆಯೋ ಆತನು **ಮಹಾಸ್ವನನು.** "ಸನ್ ಮಹತ್" ಇವೇ ಮುಂತಾದ (ಪ್ರಮಾಣದಿಂದ) ಸಮಾಸವನ್ನು ಮಾಡಿಕೊಂಡ ಮೇಲೆ "ಆನ್ಮಹತಃ ಸಮಾನಾಧಿಕರಣ ಜಾತೀಯಯೋಃ" ಎಂಬ (ಸೂತ್ರದಿಂದ) ಆಕಾರವು ಬಂದಿದೆ. "ಈ ಮಹಾಭೂತದ ನಿಃಶ್ವಾಸವಿದು,

1. 'ಯಥಾ ಹ್ಯಯಂ ಜ್ಯೋತಿರಾತ್ಮಾ ವಿವಸ್ವಾನ್' (?) ಎಂದು ಸೂ. ಭಾ. ದಲ್ಲಿ ಉದಾಹೃತವಾಗಿರುವ ಶ್ರುತಿವಚನವು ಇಲ್ಲಿ ಸೂಚಿತವಾಗಿದೆ.

2. 'ಅಸ್ಯ' ಎಂದಿದ್ದಿರಬಹುದೆ?

3. 'ಸನ್ ಮಹತ್ ಪರಮ' ಎಂಬ ಸೂತ್ರದಿಂದ ಕರ್ಮಧಾರಯಸಮಾಸವನ್ನು ಮಾಡಿಕೊಂಡರೆ - ಎಂದು ಇದರ ಅರ್ಥವಲ್ಲ; ಅತದ್ಗುಣಸಂವಿಜ್ಞಾನಬಹುವ್ರೀಹಿಯೆಂದು 'ಇತ್ಯಾದಿನಾ' ಎಂಬುದನ್ನು ಗ್ರಹಿಸಿ 'ಅನೇಕಮನ್ಯಪದಾರ್ಥೇ' (ಪಾ.೨-೨.೨೪) ಎಂದು ಸೂತ್ರದಿಂದ ಬಹುವ್ರೀಹಿಯೇ ಇದು - ಎಂದು ವ್ಯಾಖ್ಯಾನದಲ್ಲಿದೆ. ವ್ಯಾಕರಣವನ್ನು ಬಲ್ಲವರು ಇದನ್ನು ನಿರ್ಣಯಿಸಬೇಕು. ಅಥವಾ 'ಮಹಾಂಶ್ಚಾಸೌ ಓಂಕಾರಲಕ್ಷಣಃ ಸ್ವನಶ್ಚ' - ಎಂದು ಕರ್ಮಧಾರಯವನ್ನು ಮಾಡಿಕೊಂಡರೆ ಎಂದು ಭಾಷ್ಯಕ್ಕೆ ಅರ್ಥವನ್ನು ಮಾಡಬಹುದು- ಎಂದೂ ವ್ಯಾಖ್ಯಾನವಿದೆ. ಅದನ್ನಿಟ್ಟುಕೊಂಡರೆ ಇಲ್ಲಿ ಓಂಕಾರರೂಪನಾದವನು - ಎಂದು ಈ ನಾಮಕ್ಕೆ ಅರ್ಥವನ್ನು ಮಾಡಿಕೊಳ್ಳಬಹುದು.

ಯಾವದೆಂದರೆ ಈ ಋಗ್ವೇದ, ಯಜುರ್ವೇದ" ಎಂಬ ಶ್ರುತಿಯು (ಇದಕ್ಕೆ ಪ್ರಮಾಣ).

### (ಭಾಷ್ಯ)

ಆದಿರ್ಜನ್ಮ ನಿಧನಂ ವಿನಾಶಃ, ತದ್ದ್ವಯಂ ಯಸ್ಯ ನ ವಿದ್ಯತೇ ಸ (೪೨) ಅನಾದಿನಿಧನಃ॥

### (ಭಾಷ್ಯಾರ್ಥ)

ಆದಿ ಎಂದರೆ ಜನ್ಮ ನಿಧನವೆಂದರೆ ನಾಶ; ಆ ಎರಡೂ ಯಾವನಿಗಿಲ್ಲವೋ ಅವನು **ಅನಾದಿನಿಧನನು.**

### (ಭಾಷ್ಯ)

ಅನನ್ತಾದಿರೂಪೇಣ ವಿಶ್ವಂ ಬಿಭರ್ತಿ ಇತಿ (೪೩) ಧಾತಾ। ಕರ್ಮಣಾಂ ತತ್ಫಲಾನಾಂ ಚ ಕರ್ತಾ (೪೪) **ವಿಧಾತಾ।** ಅನನ್ತಾದೀನಾಮಪಿ ಧಾರಕತ್ವಾತ್ ವಿಶೇಷೇಣ ದಧಾತಿ ಇತಿ ವಾ। ಧಾತುರುತ್ತಮಃ ಇತಿ ನಾಮೈಕಂ ಸವಿಶೇಷಣಂ ಸಾಮಾನಾಧಿಕರಣ್ಯೇನ। ಸರ್ವಧಾತುಭ್ಯಃ ಪೃಥಿವ್ಯಾದಿಭ್ಯ ಉತ್ಕೃಷ್ಟಃ ಚಿದ್ಧಾತುರಿತ್ಯರ್ಥಃ। ಧಾತುರ್ವಿರಿಞ್ಚೇಃ ಇತಿ ವಾ ವೈಯಧಿಕರಣ್ಯೇನ। ನಾಮದ್ವಯಂ ವಾ। ಪ್ರಪಞ್ಚಧಾರಣಾತ್ ಚಿದೇವ (೪೫) ಧಾತುರುತ್ತಮಃ। ಸರ್ವೇಷಾಮುದ್ಗತಾನಾಮತಿಶಯೇನ ಉದ್ಗತತ್ವಾತ್ ಉತ್ತಮಃ॥

### (ಭಾಷ್ಯಾರ್ಥ)

ಅನಂತನೇ ಮುಂತಾದ ರೂಪದಿಂದ ವಿಶ್ವವನ್ನು ಧರಿಸುತ್ತಾನಾದ್ದರಿಂದ **ಧಾತೃ.** ಕರ್ಮಗಳನ್ನೂ ಅವುಗಳ ಫಲಗಳನ್ನೂ ಉಂಟುಮಾಡುವನಾದ್ದರಿಂದ **ವಿಧಾತೃ.** ಅನಂತನೇ ಮುಂತಾದವರನ್ನು ಕೂಡ ವಿಶೇಷವಾಗಿ ಧರಿಸಿರುತ್ತಾನೆ. ಆದ್ದರಿಂದ ವಿಧಾತೃ. **ಧಾತುರುತ್ತಮಃ** ಎಂಬುದು ವಿಶೇಷಣ ಸಹಿತವಾದ ಒಂದೇ ನಾಮ.[1] (ಇಲ್ಲಿ ಉತ್ತಮನಾದ ಧಾತು) ಎಂದು (ವಿಶೇಷಣವಿಶೇಷ್ಯಗಳಿಗೆ) ಸಾಮಾನಾಧಿಕರಣ್ಯದಿಂದ (ಅನ್ವಯ). ಧಾತುವಿಗಿಂತ ಎಂದರೆ ಬ್ರಹ್ಮನಿಗಿಂತಲೂ ಉತ್ಕೃಷ್ಟನು ಎಂದು ವೈಯಧಿಕರಣ್ಯದಿಂದ (ಅನ್ವಯಮಾಡಿಯೂ ವ್ಯಾಖ್ಯಾನ ಮಾಡಬಹುದು). ಅಥವಾ ಇವು ಎರಡು ಹೆಸರುಗಳು,[2] ಪೃಥಿವಿಯೇ ಮುಂತಾದ

1. 'ಧಾತುರುತ್ತಮ ಇತಿ ನಾಮೈಕಮ್' ಎಂಬುದರಿಂದ ಮುಂದಕ್ಕೆ ಗೀ॥ ಪಾಠಕ್ಕೂ ಮೈ॥ಪಾಠಕ್ಕೂ ಹೆಚ್ಚು ಕಡಿಮೆಯಿದೆ. ನಾವು ಎರಡರಿಂದ ಉತ್ತಮವಾದದ್ದೆಂದು ತೋರಿವ ರೀತಿಯಿಂದ ಬರೆದುಕೊಂಡು ಕನ್ನಡಿಸಿರುತ್ತೇವೆ.

2. ಧಾತುಃ - ಎಂಬುದೊಂದು ಹೆಸರು; ಉತ್ತಮಃ ಎಂಬುದು ಇನ್ನೊಂದು ಹೆಸರು ಎಂದರ್ಥ. ಹೀಗೆ ಮಾಡಿದರೆ ನಾಮಗಳ ಸಂಖ್ಯೆಯು ಹೆಚ್ಚು ಕಡಿಮೆಯಾಗುವದೆಂಬುದು ಸ್ಪಷ್ಟ. ನಾವು ಸಂಖ್ಯೆಯನ್ನು ಗೀ। ಪಾಠದಂತೆ ಹಾಕುತ್ತಾ ಹೋಗುವೆವು.

ಧಾತುಗಳೆಲ್ಲಕ್ಕಿಂತಲೂ ಉತ್ಕೃಷ್ಟಧಾತು - ಎಂದು ಅರ್ಥ. ಕಾರ್ಯ ಕಾರಣಪ್ರಪಂಚವನ್ನು ಧರಿಸಿರುವದರಿಂದ ಚಿದ್ರೂಪವೇ ಉತ್ತಮಧಾತು. ಉದ್ಗತವಾಗಿರುವ (ಹೊರತೋರಿಕೊಂಡಿರುವ)ರೆಲ್ಲರಿಗಿಂತಲೂ ಅತಿಶಯವಾಗಿ ತೋರಿಕೊಂಡಿರುವದರಿಂದ **ಉತ್ತಮನು.**

**ಅಪ್ರಮೇಯೋ ಹೃಷೀಕೇಶಃ ಪದ್ಮನಾಭೋಽಮರಪ್ರಭುಃ।**
**ವಿಶ್ವಕರ್ಮಾ ಮನುಸ್ತ್ವಷ್ಟಾ ಸ್ಥವಿಷ್ಠಃ ಸ್ಥವಿರೋ ಧ್ರುವಃ ॥೧೯॥**

**(ಭಾಷ್ಯ)**

ಶಬ್ದಾದಿರಹಿತತ್ವಾನ್ನ ಪ್ರತ್ಯಕ್ಷಗಮ್ಯಃ, ನಾಪ್ಯನುಮಾನವಿಷಯಃ, ತದ್ವ್ಯಾಪ್ತಲಿಙ್ಗಾಭಾವಾತ್। ನಾಪ್ಯುಪಮಾನಸಿದ್ಧಃ, ನಿರ್ಭಾಗತ್ವೇನ ಸಾದೃಶ್ಯಾಭಾವಾತ್। ನಾಪ್ಯರ್ಥಾಪತ್ತಿಗ್ರಾಹ್ಯಃ, ತದ್ವಿನಾಽನುಪಪದ್ಯಮಾನಸ್ಯ ಅಸಂಭವಾತ್. ನಾಪ್ಯಭಾವಗೋಚರಃ, ಭಾವತ್ವೇನ ಸಮ್ಮತತ್ವಾತ್। ಅಭಾವಸಾಕ್ಷಿತ್ವಾಚ್ಚ ನ ಷಷ್ಠಪ್ರಮಾಣಸ್ಯ, ನಾಪಿ ಶಾಸ್ತ್ರಪ್ರಮಾಣವೇದ್ಯಃ ಪ್ರಮಾಣಜನ್ಯಾತಿಶಯಾಭಾವಾತ್॥

ಯದ್ಯೇವಂ ಶಾಸ್ತ್ರಯೋನಿತ್ವಂ ಕಥಮ್? ಉಚ್ಯತೇ। ಪ್ರಮಾಣಾದಿಸಾಕ್ಷಿತ್ವೇನ ಪ್ರಕಾಶಾದಿಸ್ವರೂಪಸ್ಯ ಪ್ರಮಾಣಾವಿಷಯತ್ವೇಽಪಿ ಅಧ್ಯಸ್ತಾತದ್ರೂಪನಿವರ್ತಕತ್ವೇನ ಶಾಸ್ತ್ರಪ್ರಮಾಣಕತ್ವಮಿತಿ॥

(೪೬) ಅಪ್ರಮೇಯಃ। ಸಾಕ್ಷಿರೂಪತ್ವಾದ್ವಾ।

**(ಭಾಷ್ಯಾರ್ಥ)**

ಶಬ್ದವೇ ಮುಂತಾದ ಗುಣಗಳಿಲ್ಲದ್ದರಿಂದ (ಈತನು) ಪ್ರತ್ಯಕ್ಷದಿಂದ ತಿಳಿಯಬರುವಂತಿಲ್ಲ. ಅನುಮಾನದಿಂದಲೂ ತಿಳಿಯಬರುವನಲ್ಲ; ಏಕೆಂದರೆ ಆ (ಪ್ರತ್ಯಕ್ಷದಿಂದ) ವ್ಯಾಪ್ತವಾದ ಲಿಂಗವು (ಈತನಿಗೆ) ಇಲ್ಲ[1]. ಉಪಮಾನ (ಪ್ರಮಾಣದಿಂದಲೂ) ಇವನ ಜ್ಞಾನವಾಗುವಂತಿಲ್ಲ; ಏಕೆಂದರೆ ಇವನಲ್ಲಿ ಯಾವ ಭಾಗಗಳೂ ಇಲ್ಲದ್ದರಿಂದ ಸಾದೃಶ್ಯವೂ ಇಲ್ಲ.[2] ಅರ್ಥಾಪತ್ತಿಯಿಂದ ಗ್ರಹಿಸುವದಕ್ಕೆ ಬರುವಂತಿಲ್ಲ; ಏಕೆಂದರೆ ಆತನಿಲ್ಲದೆ ಅನುಪಪನ್ನವೆಂಬ (ಪದಾರ್ಥವೇ) ಇಲ್ಲ.[3] ಅಭಾವಪ್ರಮಾಣಕ್ಕೆ ಗೋಚರನಲ್ಲ, ಏಕೆಂದರೆ ಈತನು ಭಾವ (ರೂಪನೆಂದು ಎಲ್ಲರಿಗೂ) ಸಮ್ಮತ, ಅಭಾವಕ್ಕೂ ಸಾಕ್ಷಿಯಾಗಿರುವದರಿಂದಲೂ (ಈ) ಆರನೆಯ

---

1. ಹೊಗೆಯಿದ್ದಲ್ಲಿ ಬೆಂಕಿ ಎಂಬಲ್ಲಿ ಬೆಂಕಿಯಿಂದ ವ್ಯಾಪ್ತವಾದ ಹೊಗೆ ಪ್ರತ್ಯಕ್ಷವಾದ ಲಿಂಗ; ಅಂಥ ಲಿಂಗವು ಆತ್ಮನಿಗೆ ಇಲ್ಲ.
2. ಎತ್ತಿನಂತೆ ಗವಯ (ಕಾಡುಕೋಣ) ಎಂಬಲ್ಲಿ ಅವಯವಗಳಿರುವಂತೆ ಎಂಬ ಸಾದೃಶ್ಯವು ಗವಯದಲ್ಲಿರುತ್ತದೆ. ಇಲ್ಲಿ ಹಾಗಿಲ್ಲ.
3. ಕಾರಣವಿಲ್ಲದೆ ಕಾರ್ಯವಿರುವಂತಿಲ್ಲ - ಎಂಬಂತೆ ಬ್ರಹ್ಮವಿಲ್ಲದೆ ಇದ್ದರೆ ಇಂಥದ್ದು ಹೊಂದುವಂತಿಲ್ಲ ಎಂಬುದಿಲ್ಲ.

ಪ್ರಮಾಣಕ್ಕೆ (ಗೋಚರನಲ್ಲ). ಶಾಸ್ತ್ರಪ್ರಮಾಣದಿಂದಲೂ (ತಿಳಿಯಬರುವವನಲ್ಲ). ಏಕೆಂದರೆ ಪ್ರಮಾಣದಿಂದ ಆಗುವ ಯಾವ ಅತಿಶಯವೂ ಅವನಲ್ಲಿ ಆಗುವಂತಿಲ್ಲ.

(ಆಕ್ಷೇಪ) :- ಹಾಗಾದರೆ (ಬ್ರಹ್ಮವು) ಶಾಸ್ತ್ರಯೋನಿ ಎಂದಿರುವದು ಹೇಗೆ?[1]

(ಸಮಾಧಾನ):- ಹೇಳುತ್ತೇವೆ. ಪ್ರಮಾಣಕ್ಕೆ ಅವಿಷಯನಾಗಿರುವದರಿಂದ ಪ್ರಮಾಣಕ್ಕೆ ಸಾಕ್ಷಿಯಾದರೂ (ಇದರಲ್ಲಿ) ಅಧ್ಯಸ್ತವಾಗಿರುವ ಇದರದ್ದಲ್ಲದ ರೂಪವನ್ನು ತೊಲಗಿಸುತ್ತಿರುವದರಿಂದ (ಬ್ರಹ್ಮವು) ಶಾಸ್ತ್ರಪ್ರಮಾಣಕವು. ಆದ್ದರಿಂದ **ಅಪ್ರಮೇಯನು**; ಸಾಕ್ಷಿಸ್ವರೂಪನಾಗಿರುವದರಿಂದಲೂ ಅಪ್ರಮೇಯನು.

## (ಭಾಷ್ಯ)

ಹೃಷೀಕಾಣಿ ಇನ್ದ್ರಿಯಾಣಿ, ತೇಷಾಮ್ ಈಶಃ; ಕ್ಷೇತ್ರಜ್ಞರೂಪತ್ವಾತ್। ಯದ್ವಾ ಇನ್ದ್ರಿಯಾಣಿ ಯಸ್ಯ ವಶೇ ವರ್ತನ್ತೇ ಸ ಪರಮಾತ್ಮಾ (೪೭) ಹೃಷೀಕೇಶಃ। ಯಸ್ಯ ವಾ ಸೂರ್ಯರೂಪಸ್ಯ ಚನ್ದ್ರರೂಪಸ್ಯ ಚ ಜಗತ್ಪ್ರೀತಿಕರಾ ಹೃಷ್ಟಾಃ ಕೇಶಾಃ ರಶ್ಮಯಃ ಸ ಹೃಷೀಕೇಶಃ 'ಸೂರ್ಯರಶ್ಮಿರ್ಹರ್ಯಕೇಶಃ ಪುರಸ್ತಾತ್' (ತೈ.ಸಂ. ೪-೬-೩) ಇತಿ ಶ್ರುತೇಃ। ಪೃಷೋದರಾದಿತ್ವಾತ್ ಸಾಧುತ್ವಮ್। ಯಥೋಕ್ತಂ ಮೋಕ್ಷಧರ್ಮೇ -

ಸೂರ್ಯಾಚನ್ದ್ರಮಸೋಃ ಶಶ್ವದಂಶುಭಿಃ ಕೇಶಸಂಜ್ಞಿತೈಃ।
ಬೋಧಯನ್ ಸ್ವಾಪಯಂಶ್ಚೈವ[2] ಜಗದುತ್ತಿಷ್ಠತೇ ಪೃಥಕ್॥
ಬೋಧನಾತ್ ಸ್ವಾಪನಾಚ್ಚೈವ ಜಗತೋ ಹರ್ಷಣಂ ಭವೇತ್।
ಅಗ್ನೀಷೋಮಕೃತೈರೇಭಿಃ ಕರ್ಮಭಿಃ ಪಾಣ್ಡುನನ್ದನ।
ಹೃಷೀಕೇಶೋ ಮಹೇಶಾನೋ ವರದೋ ಲೋಕಪಾವನಃ॥
(ಶಾಂತಿ.೩೪೨-೬೬ ಪ್ರಭೃತಿ ೬೭)

## (ಭಾಷ್ಯಾರ್ಥ)

ಹೃಷೀಕಗಳು ಎಂದರೆ ಇಂದ್ರಿಯಗಳು; ಕ್ಷೇತ್ರಜ್ಞರೂಪನಾಗಿರುವದರಿಂದ ಅವುಗಳಿಗೆ ಈಶನು; ಅಥವಾ ಇಂದ್ರಿಯಗಳು ಯಾವನ ವಶದಲ್ಲಿರುತ್ತವೆಯೋ ಆ ಪರಮಾತ್ಮನು **ಹೃಷೀಕೇಶನು**; ಅಥವಾ ಸೂರ್ಯರೂಪನೂ ಚಂದ್ರರೂಪನೂ ಆದ ಯಾವಾತನಿಗೆ ಜಗತ್ತಿಗೆ ಪ್ರೀತಿಯನ್ನುಂಟುಮಾಡುವ ಹರ್ಷಗೊಳಿಸುವ ಕೇಶಗಳು ಎಂದರೆ ರಶ್ಮಿಗಳು ಇರುವವೋ ಆತನು ಹೃಷೀಕೇಶನು. ಇದಕ್ಕೆ 'ಸೂರ್ಯನ ಕಿರಣಗಳು ಮುಂದೆ ಬರುವ ಹರಿಯ ಕೇಶಗಳು' ಎಂದು ಶ್ರುತಿಯಿರುವದರಿಂದ (ಹೀಗೆ

---

1. ಶಾಸ್ತ್ರಯೋನಿತ್ವಾಧಿಕರಣಭಾಷ್ಯದಲ್ಲಿರುವದನ್ನು ಇಲ್ಲಿ ಏತಕ್ಕೆ ತೆಗೆದುಕೊಂಡಿರುವರೋ ತಿಳಿಯಲಿಲ್ಲ.
2. 'ಸೂರ್ಯಾಚನ್ದ್ರಮಸೌ ಚಕ್ಷುಃ ಕೇಶಾಶ್ಚೈವಾಂಶವಃ ಸ್ಮೃತಾಃ। ಬೋಧಯಂಸ್ತಾಪಯಂಶ್ಚೈವ' ಎಂದು ಅಚ್ಚಿನ ಮಹಾಭಾರತದ ಪಾಠ.

ಅರ್ಥಮಾಡಬಹುದು). ಈ ರೂಪವು ಪೃಷೋದರಾದಿಗಣದಲ್ಲಿರುವದರಿಂದ ಸಾಧುವಾಗಿರುತ್ತದೆ. ಹೀಗೆಂದು ಮೋಕ್ಷಧರ್ಮದಲ್ಲಿ ಹೇಳಿರುತ್ತದೆ.

"ಸೂರ್ಯಚಂದ್ರರ ಕೇಶವೆಂಬ ಹೆಸರಿನ ರಶ್ಮಿಗಳಿಂದ ಯಾವಾಗಲೂ ಜಗತ್ತನ್ನು ಎಚ್ಚರಿಸುತ್ತಲೂ ನಿದ್ರೆಗೊಳಿಸುತ್ತಲೂ ಉದಯಿಸುತ್ತಿರುತ್ತಾನೆ. ಹೀಗೆ ಎಚ್ಚರಿಸುವದರಿಂದಲೂ ನಿದ್ರಿಸುವಂತೆ ಮಾಡುತ್ತಲೂ ಇರುವದರಿಂದ ಜಗತ್ತಿಗೆ ಹರ್ಷವಾಗುವದು. ಎಲೈ ಪಾಂಡುನಂದನನೆ, ಅಗ್ನೀಷೋಮರುಗಳಿಂದ ಆಗುವ ಈ ಕರ್ಮಗಳಿಂದ ನಾನು ಹೃಷೀಕೇಶನು, ಮಹೇಶ್ವರನು ವರಪ್ರದನೂ ಲೋಕಪಾವನನೂ ಆಗಿರುತ್ತೇನೆ".

## (ಭಾಷ್ಯ)

ಸರ್ವಜಗತ್ಕಾರಣಂ ಪದ್ಮಂ ನಾಭೌ ಯಸ್ಯ ಸ (೪೮) **ಪದ್ಮನಾಭಃ**। 'ಅಜಸ್ಯ ನಾಭಾವಧ್ಯೇಕಮರ್ಪಿತಮ್' (ತೈ.ಸಂ.೪-೬-೨) ಇತಿ ಶ್ರುತೇಃ। ಅಮರಾಣಾಂ ಪ್ರಭುಃ (೪೯) ಅಮರಪ್ರಭುಃ। ವಿಶ್ವಂ ಕರ್ಮ ಕ್ರಿಯಾ ಯಸ್ಯ ಸಃ (೫೦) ವಿಶ್ವಕರ್ಮಾ। ಕ್ರಿಯತ ಇತಿ ಜಗತ್ ಕರ್ಮ; ವಿಶ್ವಂ ಕರ್ಮ ಯಸ್ಯ ಸ ಇತಿ ವಾ। ವಿಚಿತ್ರನಿರ್ಮಾಣಶಕ್ತಿಮತ್ತ್ವಾದ್ ವಾ। ವಿಶ್ವಕರ್ಮಣಾ ತ್ವಷ್ಟ್ರಾ ಸಾದೃಶ್ಯಾದ್ ವಾ॥

## (ಭಾಷ್ಯಾರ್ಥ)

ಸರ್ವಜಗತ್ತಿಗೂ ಕಾರಣವಾದ ಪದ್ಮವು ಯಾವನ ನಾಭಿಯಲ್ಲಿ (ಹೊಕ್ಕುಳಲ್ಲಿ) ಇರುವದೋ ಅವನು **ಪದ್ಮನಾಭನು**. ಅಜನಾದ (ಪರಮಾತ್ಮನ ನಾಭಿಯಲ್ಲಿ) ಒಂದು ಅರ್ಪಿತವಾಗಿದೆ - ಎಂಬ ಶ್ರುತಿ. (ಇದಕ್ಕೆ ಪ್ರಮಾಣ). ಅಮರರಿಗೆ (ದೇವತೆಗಳಿಗೆ) ಒಡೆಯನಾದ್ದರಿಂದ **ಅಮರಪ್ರಭು**. ವಿಶ್ವವೆಲ್ಲವೂ ಯಾವಾತನ ಕರ್ಮವೋ ಎಂದರೆ ಕ್ರಿಯೆಯೋ ಅವನು **ವಿಶ್ವಕರ್ಮನು**. ಅಥವಾ ಮಾಡಲ್ಪಡುತ್ತಿರುವದರಿಂದ ಜಗತ್ತು ಕರ್ಮವು; ವಿಶ್ವವು ಯಾವಾತನ ಕರ್ಮವೋ (ಅವನು ವಿಶ್ವಕರ್ಮ) - ಎಂದಾದರೂ (ಅರ್ಥ). ವಿಚಿತ್ರವಾಗಿ ನಿರ್ಮಾಣಮಾಡುವ ಶಕ್ತಿಯುಳ್ಳಾತನಾದ್ದರಿಂದ **ವಿಶ್ವಕರ್ಮನು** ಎಂದಾದರೂ ಅರ್ಥ.

## (ಭಾಷ್ಯ)

ಮನನಾತ್ (೫೧) ಮನುಃ। 'ನಾನ್ಯೋಽತೋಽಸ್ತಿ ಮನ್ತಾ' (ಬೃ. ೩-೭-೨೩) ಇತಿ ಶ್ರುತೇಃ। ಮನ್ತ್ರೋ ವಾ, ಪ್ರಜಾಪತಿರ್ವಾ, ಮನುಃ। ಸಂಹಾರಸಮಯೇ ಸರ್ವಭೂತತನೂಕರಣಾತ್ (೫೨) ತ್ವಷ್ಟಾ। ತ್ವಕ್ಷತೇಸ್ತನೂಕರಣಾರ್ಥಾತ್ ತೃಚ್ ಪ್ರತ್ಯಯಃ। ಅತಿಶಯೇನ ಸ್ಥೂಲಃ (೫೩) ಸ್ಥವಿಷ್ಠಃ। ಪುರಾಣಃ ಸ್ಥವಿರಃ। 'ತ್ವೇಷ್ಯಂ ಹ್ಯಸ್ಯ ಸ್ಥವಿರಸ್ಯ ನಾಮ' (ಋ. ೭-೧೦೦-೩) ಇತಿ ಬಹ್ವೃಚಾಃ। ವಯೋವಚನೋ ವಾ। ಸ್ಥಿರತ್ವಾದ್ ಧ್ರುವಃ। (೫೪) 'ಸ್ಥವಿರೋ ಧ್ರುವಃ' ಇತ್ಯೇಕಂ ನಾಮ ಸವಿಶೇಷಣಮ್॥

### (ಭಾಷ್ಯಾರ್ಥ)

ಮನನವನ್ನು ಮಾಡುತ್ತಾನಾದ್ದರಿಂದ **ಮನು**. 'ಇವನಿಗಿಂತ ಬೇರೆ ಮಂತ್ರವಿಲ್ಲ'[1] ಎಂಬ ಶ್ರುತಿ ಇದಕ್ಕೆ ಪ್ರಮಾಣ. ಅಥವಾ ಮಂತ್ರ (ರೂಪನು) ಅಥವಾ ಪ್ರಜಾಪತಿ (ರೂಪನು)[2] ಆದ್ದರಿಂದ (ಮನು).

ಪ್ರಲಯಕಾಲದಲ್ಲಿ ಸರ್ವಭೂತಗಳನ್ನೂ ಕ್ಷಯಗೊಳಿಸುತ್ತಾನಾದ್ದರಿಂದ **ತ್ವಷ್ಟೃ**; (ಇಲ್ಲಿ) ತನೂಕರಣ (ಕ್ಷಯಗೊಳಿಸುವದು) ಎಂಬರ್ಥದ ತ್ವಕ್ಷಧಾತುವಿನಿಂದ ಉತ್ಪನ್ನವಾಗಿರುವ ಶಬ್ದಕ್ಕೆ ತೃಚ್‌ಪ್ರತ್ಯಯವು ಬಂದಿರುತ್ತದೆ.

(ಎಲ್ಲಕ್ಕಿಂತಲೂ) ಹೆಚ್ಚಾಗಿ ಸ್ಥೂಲ[3] ವಾಗಿವದರಿಂದ **ಸ್ಥವಿಷ್ಠ** (ನೆನಿಸಿರುತ್ತಾನೆ). **ಸ್ಥವಿರ**ನೆಂದರೆ (ಬಹಳ) ಹಿಂದಿನಿಂದ ಇರುವಾತನು. ಈ ಸ್ಥವಿರನಾದ (ವಿಷ್ಣುವಿನ) (ವಿಷ್ಣು ಎಂಬ) ನಾಮವು ಬೆಳಗುತ್ತಿರುವದಲ್ಲವೆ? ಎಂದು ಬಹ್ವೃಚರು ಪಠಿಸುತ್ತಾರೆ. ಅಥವಾ (ಈ ಶಬ್ದವು) ವಯಸ್ಸನ್ನು ಹೇಳುತ್ತದೆ; ಹೀಗೆ ಸ್ಥಿರವಾಗಿರುವದರಿಂದ[4] ಧ್ರುವನು. '**ಸ್ಥವಿರೋ ಧ್ರುವಃ**' ಎಂಬುದು (ಸ್ಥಿರನಾಗಿರುವ ಶಾಶ್ವತನು ಎಂಬರ್ಥದ) ವಿಶೇಷಣಸಹಿತವಾದ ಒಂದೇ ನಾಮ.

**ಅಗ್ರಾಹ್ಯಃ ಶಾಶ್ವತಃ ಕೃಷ್ಣೋ ಲೋಹಿತಾಕ್ಷಃ ಪ್ರತರ್ದನಃ।**
**ಪ್ರಭೂತಸ್ತ್ರಿಕಕುಬ್ಧಾಮ ಪವಿತ್ರಂ ಮಙ್ಗಲಂ ಪರಮ್ ॥೨೦॥**

### (ಭಾಷ್ಯ)

ಕರ್ಮೇನ್ದ್ರಿಯೈರ್ನ ಗೃಹ್ಯತ ಇತಿ (೫೫) ಅಗ್ರಾಹ್ಯಃ। "ಯತೋ ವಾಚೋ ನಿವರ್ತನ್ತೇ। ಅಪ್ರಾಪ್ಯ ಮನಸಾ ಸಹ' (ತೈ. ೨-೯) ಇತಿ ಶ್ರುತೇಃ। ಶಶ್ವತ್ ಸರ್ವೇಷು ಕಾಲೇಷು ಭವತೀತಿ (೫೬) ಶಾಶ್ವತಃ। "ಶಾಶ್ವತಂ ಶಿವಮಚ್ಯುತಮ್" (ಮ.ನಾ.೧೦-೧೩) ಇತಿ ಶ್ರುತೇಃ। ಸದಾನನ್ದಾತ್ಮಕಃ (೫೭) ಕೃಷ್ಣಃ। 'ಕೃಷಿರ್ಭೂವಾಚಕಃ ಶಬ್ದೋ ಣಶ್ಚ ನಿರ್ವೃತಿವಾಚಕಃ। ವಿಷ್ಣುಸ್ತದ್ಭಾವಯೋಗಾಚ್ಚ ಕೃಷ್ಣೋ ಭವತಿ ಶಾಶ್ವತಃ' (ಉದ್ಯೋ.೭೦-೫) ಇತಿ ವ್ಯಾಸವಚನಾತ್। ಸ (ಚ್ಚಿ) ದಾನನ್ದಾತ್ಮಕಃ ಕೃಷ್ಣಃ। ಕೃಷ್ಣವರ್ಣಾತ್ಮಕತ್ವಾದ್ವಾ ಕೃಷ್ಣಃ। 'ಕೃಷಾಮಿ ಪೃಥಿವೀಂ ಪಾರ್ಥ ಭೂತ್ವಾ ಕಾರ್ಷ್ಣಾಯಸೋ ಹಲಃ। ಕೃಷ್ಣೋ ವರ್ಣಶ್ಚ ಮೇ ಯಸ್ಮಾತ್ ತಸ್ಮಾತ್ ಕೃಷ್ಣೋಽಹಮರ್ಜುನ' (ಶಾಂತಿ. ೩೪೨-೭೯) ಇತಿ ಮಹಾಭಾರತೇ॥

---

1. ಈತನೇ ಜೀವರೂಪದಿಂದ ತೋರುತ್ತಿದ್ದಾನೆ - ಎಂದು ಶ್ರುತಿಯ ಅರ್ಥ.
2. ಮನು ಎಂಬ ಶಬ್ದಕ್ಕೆ ಪ್ರಜಾಪತಿ ಎಂದೂ ಅರ್ಥ.
3. ಮಹತ್ತಿಗಿಂತಲೂ ಮಹತ್ತಾದವನು ಎಂಬ ಶ್ರುತಿಯ ಸೂಚನೆಯಿರಬಹುದು.
4. ಮುದುಕನು ಎಂದರೆ ಸ್ಥಿರವಾಗಿರುವವನು ಎಂಬರ್ಥವೆಂದು ಭಾವ.

### (ಭಾಷ್ಯಾರ್ಥ)

ಕರ್ಮೇಂದ್ರಿಯಗಳಿಗೆ ಸಿಗುವವನಲ್ಲವಾದ್ದರಿಂದ **ಅಗ್ರಾಹ್ಯನು**. 'ಯಾವನಿಂದ ವಾಕ್ಕುಗಳು ಮನಸ್ಸಿನೊಡನೆ ಮುಟ್ಟಲಾರದೆ ಹಿಂತಿರುಗುವವೋ' ಎಂದು ಶ್ರುತಿಯಿದೆ. ಯಾವಾಗಲೂ ಎಲ್ಲಾ ಕಾಲಗಳಲ್ಲಿಯೂ ಇರುವನಾದ್ದರಿಂದ **ಶಾಶ್ವತನು**. 'ಶಾಶ್ವತನು, ಶಿವನು, ಅಚ್ಯುತನು' ಎಂದು ಶ್ರುತಿಯಿದೆ. ಸಚ್ಚಿದಾನಂದಾತ್ಮಕನಾಗಿರುವದರಿಂದ **ಕೃಷ್ಣನು**. 'ಕೃಷ್' (ಎಂಬ) ಶಬ್ದವು ಇರುವದೆಂಬರ್ಥವುಳ್ಳದ್ದು, ಮತ್ತು 'ಣ' ಎಂಬುದು ಆನಂದವಾಚಕವು. (ವಿಷ್ಣು ಆ ಎರಡರ) ಸಂಬಂಧವೂ ಇರುವದರಿಂದ ಯಾವಾಗಲೂ (**ಕೃಷ್ಣನಾಗಿ** ಇರುತ್ತಾನೆ) - ಎಂದು ವ್ಯಾಸರ ವಚನವಿದೆ. ಆದ್ದರಿಂದ **ಕೃಷ್ಣನೆಂದರೆ** ಸದಾನಂದಾತ್ಮಕನಾಗಿ ಇರುವಾತನು. ಕೃಷ್ಣವರ್ಣ (ಕರಿಯಬಣ್ಣ)ದ ರೂಪವುಳ್ಳವನಾದ್ದರಿಂದ ಕೃಷ್ಣನು ಎಂದಾದರೂ (ಹೇಳಬಹುದು). 'ಅರ್ಜುನನೆ, ನಾನು ಕಬ್ಬಿಣದ ನೇಗಿಲಾಗಿ ಭೂಮಿಯನ್ನು ಉಳುತ್ತೇನೆ, ನನ್ನ ವರ್ಣವೂ ಕಪ್ಪು; ಆದ್ದರಿಂದ ನಾನು ಕೃಷ್ಣನು' (ಎಂದು) **ಮಹಾಭಾರತದಲ್ಲಿದೆ**.

### (ಭಾಷ್ಯ)

ಲೋಹಿತೇ ಅಕ್ಷಿಣೀ ಯಸ್ಯೇತಿ (೫೮) ಲೋಹಿತಾಕ್ಷಃ। 'ಸ ಮಾ ವೃಷಭೋ ಲೋಹಿತಾಕ್ಷಃ' (ತೈ. ಆ.೪-೪೨) ಇತಿ ಶ್ರುತೇಃ। ಪ್ರಲಯೇ ಭೂತಾನಿ ಪ್ರತರ್ದಯತಿ ಹಿನಸ್ತೀತಿ (೫೯) ಪ್ರತರ್ದನಃ। ಜ್ಞಾನೈಶ್ವರ್ಯಾದಿ ಗುಣೈಃ ಸಂಪನ್ನಃ (೬೦) **ಪ್ರಭೂತಃ**। ಊರ್ಧ್ವಾಧೋಮಧ್ಯಭೇದೇನ ತಿಸೃಣಾಂ ಕಕುಭಾಮಪಿ ಧಾಮ - ಇತಿ (೬೧) ತ್ರಿಕಕುಬ್ ಧಾಮ ಇತ್ಯೇಕಂ ನಾಮ। ಯೇನ ಪುನಾತಿ ಯೋ ವಾ ಪುನಾತಿ ಋಷಿರ್ದೇವತಾ ವಾ ತತ್ (೬೨) **ಪವಿತ್ರಮ್**। 'ಪುವಃ ಸಂಜ್ಞಾಯಾಮ್' (ಪಾ.ಸೂ. ೩-೨-೧೮೫), 'ಕರ್ತರಿ ಚರ್ಷಿದೇವತಯೋಃ' (ಪಾ.ಸೂ. ೩-೨-೧೮೬) ಇತಿ ಭಗವತ್ಪಾಣಿನಿಸ್ಮರಣಾದಿತ್ರಪ್ರತ್ಯಯಃ। (ಪವಿಃ ವಜ್ರಮ್ ತಸ್ಮಾತ್ ತ್ರಾಯತೇ ಇತಿ ವಾ ಪವಿತ್ರಮ್) 'ಅಶುಭಾನಿ ನಿರಾಚಷ್ಟೇ ತನೋತಿ ಶುಭಸನ್ತತಿಮ್। ಸ್ಮೃತಿಮಾತ್ರೇಣ ಯತ್ಪುಂಸಾಂ ಬ್ರಹ್ಮ ತನ್ಮಙ್ಗಲಂ ವಿದುಃ' ಇತಿ ಶ್ರೀವಿಷ್ಣುಪುರಾಣ ವಚನಾತ್[1] ಕಲ್ಯಾಣರೂಪತ್ವಾದ್ವಾ (೬೩) **ಮಙ್ಗಲಮ್ ಪರಂ** ಸರ್ವಭೂತೇಭ್ಯಃ ಉತ್ಕೃಷ್ಟಂ ಬ್ರಹ್ಮ। 'ಮಙ್ಗಲಂ ಪರಮ್' ಇತ್ಯೇಕಮಿದಂ ನಾಮ ಸವಿಶೇಷಣಮ್॥

### (ಭಾಷ್ಯಾರ್ಥ)

ಲೋಹಿತವಾದ (ಕೆಂಪಾದ) ಕಣ್ಣುಗಳು ಯಾವನಿಗೆ (ಇವೆಯೋ ಅವನು). ಆದ್ದರಿಂದ **ಲೋಹಿತಾಕ್ಷನು**. ಆ ಲೋಹಿತಾಕ್ಷನಾದ (ಸೂರ್ಯನು) ನನ್ನನ್ನು

---

1. ಅಚ್ಚಾಗಿರುವ ಶ್ರೀವಿಷ್ಣುಪುರಾಣದಲ್ಲಿ ಈ ವಚನವು ನಮಗೆ ಸಿಕ್ಕಿರುವದಿಲ್ಲ.

ಮನಸ್ಸಿನಲ್ಲಿ ಪವಿತ್ರಗೊಳಿಸಲಿ![1] - ಎಂಬ ಶ್ರುತಿ (ಇದಕ್ಕೆ ಪ್ರಮಾಣ). ಪ್ರಲಯಕಾಲದಲ್ಲಿ ಪ್ರಾಣಿಗಳನ್ನು ಪ್ರತರ್ದನ (ಹಿಂಸೆ) ಮಾಡುತ್ತಾನೆ; ಆದ್ದರಿಂದ **ಪ್ರತರ್ದನನು.** ಜ್ಞಾನ, ಐಶ್ವರ್ಯ - ಮುಂತಾದ[2] ಗುಣಗಳಿಂದ ಕೂಡಿರುವವನು; ಆದ್ದರಿಂದ **ಪ್ರಭೂತನು.** ಮೇಲೆ, ಕೆಳಗೆ, ನಡುವೆ - ಎಂಬ ಬೇರೆಬೇರೆಯ ಮೂರು (ಕಕುಪ್) ದಿಕ್ಕುಗಳಿಗೂ ಧಾಮವು (ಸ್ಥಾನವು); ಆದ್ದರಿಂದ **ತ್ರಿಕಕುಬ್ಧಾಮನು.** ಇದು ಒಂದೇ ಹೆಸರು. ಯಾವದರಿಂದ ಪವಿತ್ರಗೊಳಿಸುತ್ತಾರೋ ಆ ಋಷಿಯು (ಮಂತ್ರವು), ಅಥವಾ ಯಾವನು ಪವಿತ್ರಗೊಳಿಸುತ್ತಾನೋ ಆ ದೇವತೆಯು ಪವಿತ್ರವು. ಇಲ್ಲಿ 'ಪುವಃ ಸಂಜ್ಞಾಯಾಮ್', 'ಕರ್ತರಿ ಚರ್ಷಿದೇವತಯೋಃ' ಎಂದು ಭಗವಂತನನಾದ[3] ಪಾಣಿನಿಯ (ವ್ಯಾಕರಣ) ಸ್ಮೃತಿಯಿರುವದರಿಂದ ಇತ್ರಪ್ರತ್ಯಯವು ಬಂದಿದೆ. (ಪವಿ ಎಂದರೆ ಸಿಡಿಲು ಆದರಿಂದ ಕಾಪಾಡುತ್ತದೆ ಎಂದಾದರೂ ಆಗಬಹುದು.) ಸ್ಮರಣಮಾಡಿದ ಮಾತ್ರದಿಂದ ಜನರ ಅಶುಭಗಳನ್ನು ತೊಲಗಿಸುತ್ತದೆ, ಶುಭಗಳ ಸಂತತಿಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಆ ಬ್ರಹ್ಮವು ಪರಮಮಂಗಲವೆನ್ನುವರು ಎಂದು ವಿಷ್ಣುಪುರಾಣ ವಚನದಲ್ಲಿದೆ. ಕಲ್ಯಾಣರೂಪವಾಗಿರುವದರಿಂದ ಮಂಗಲವು ಎಂದಾದರೂ (ಆಗಬಹುದು). ಹೆಚ್ಚಿನದಾದ, ಎಲ್ಲಾ ಭೂತಗಳಿಗಿಂತಲೂ ಶ್ರೇಷ್ಠವಾದದ್ದು ಬ್ರಹ್ಮವು. **'ಮಂಗಲಂ ಪರಮ್'** ಎಂಬುದು ವಿಶೇಷಣ ಸಹಿತವಾದ ಒಂದೇ ನಾಮವು.

**ಈಶಾನಃ ಪ್ರಾಣದಃ ಪ್ರಾಣೋ ಜ್ಯೇಷ್ಠಃ ಶ್ರೇಷ್ಠಃ ಪ್ರಜಾಪತಿಃ।**
**ಹಿರಣ್ಯಗರ್ಭೋ ಭೂಗರ್ಭೋ ಮಾಧವೋ ಮಧುಸೂದನಃ ॥೨೧॥**

## (ಭಾಷ್ಯ)

(೬೪) ಸರ್ವಭೂತನಿಯನ್ತೃತ್ವಾದೀಶಾನಃ। ಪ್ರಾಣಾನ್ ದದಾತಿ ಚೇಷ್ಟಯತೀತಿ ವಾ (೬೫) ಪ್ರಾಣದಃ। 'ಕೋ ಹ್ಯೇವಾನ್ಯಾತ್ ಕಃ ಪ್ರಾಣ್ಯಾತ್' (ತೈ. ೨-೭) ಇತಿ ಶ್ರುತೇಃ। ಯದ್ವಾ ಪ್ರಾಣಾನ್ ಕಾಲಾತ್ಮನಾ ದ್ಯತಿ ಖಣ್ಡಯತೀತಿ, ಪ್ರಾಣಾನ್ ದಾ (ದೀ?) ಪಯತಿ ಶೋಧಯತೀತಿ ವಾ ಪ್ರಾಣಾನ್ ದಾತಿ ಲುನಾತೀತಿ ವಾ ಪ್ರಾಣದಃ॥

## (ಭಾಷ್ಯಾರ್ಥ)

ಎಲ್ಲಾ ಪ್ರಾಣಿಗಳನ್ನೂ ಕಟ್ಟುಮಾಡುತ್ತಿರುವದರಿಂದ **ಈಶಾನನು.** ಪ್ರಾಣಗಳನ್ನು ದದಾತಿ (ಕೊಡುತ್ತಾನೆ) ಎಂದರೆ ವ್ಯಾಪಾರ ಮಾಡುವಂತೆ ಮಾಡುತ್ತಾನೆ. ಆದ್ದರಿಂದ ಪ್ರಾಣದನು. 'ಈ ಆಕಾಶವು (ಎಲ್ಲೆಲ್ಲೂ ಬೆಳಗುತ್ತಿರುವ) ಆನಂದವು ಇಲ್ಲ (ದಿದ್ದರೆ) ಯಾವನು ತಾನೆ ಕೆಲಸ ಮಾಡಿಯಾನು, ಯಾವನು ಬದುಕಿದ್ದಾನು?' ಎಂಬ ಶ್ರುತಿ (ಪ್ರಮಾಣ) ದಿಂದ (ಈ ಅರ್ಥವು ಹೊರಡುತ್ತದೆ). ಅಥವಾ ಪ್ರಾಣಗಳನ್ನು

1. ಶ್ರುತಿಯ ವಾಕ್ಯಶೇಷವನ್ನು ಸೇರಿಸಿಕೊಂಡು ಕನ್ನಡಿಸಿದೆ.
2. ಮುಂತಾದ ಎಂದರೆ ಶಕ್ತಿ, ಬಲ, ವೀರ್ಯ, ತೇಜಸ್ಸುಗಳು.
3. ಇದು ಗೀ॥ ಪಾಠದ ಅರ್ಥ.

ಕಾಲರೂಪದಿಂದ (ದ್ಯತಿ) ಖಂಡಿಸುತ್ತಾನೆ ಎಂಬ ಕಾರಣದಿಂದ, ಪ್ರಾಣಗಳನ್ನು (ದಾಪಯತಿ) ಶೋಧಿಸುತ್ತಾನೆ. (ಆದ್ದರಿಂದ) ಎಂದಾಗಲಿ, ಪ್ರಾಣಗಳನ್ನು ದಾತಿ - ಕತ್ತರಿಸುತ್ತಾನೆ ಎಂಬುದರಿಂದಾಗಲಿ **ಪ್ರಾಣದನು.**

(ಭಾಷ್ಯ)

ಪ್ರಾಣಿತೀತಿ (೬೬) ಪ್ರಾಣಃ ಕ್ಷೇತ್ರಜ್ಞಃ। ಪರಮಾತ್ಮಾ ವಾ, 'ಪ್ರಾಣಸ್ಯ ಪ್ರಾಣಮ್' (ಕೇ. ೧-೨, ಬೃ.೪-೪-೧೮) ಇತಿ ಶ್ರುತೇಃ ಮುಖ್ಯಪ್ರಾಣೋ ವಾ॥

(ಭಾಷ್ಯಾರ್ಥ)

ಉಸಿರಾಡುತ್ತಾನೆ (ಪ್ರಾಣಿತಿ), ಆದ್ದರಿಂದ **ಪ್ರಾಣನು,** ಕ್ಷೇತ್ರಜ್ಞನು;[1] ಅಥವಾ 'ಪ್ರಾಣಕ್ಕೂ ಪ್ರಾಣನು' ಎಂಬ ಶ್ರುತಿಯಿರುವದರಿಂದ ಪರಮಾತ್ಮನು ಮುಖ್ಯಪ್ರಾಣನು ಎಂದಾದರೂ (ಹೇಳಬಹುದು).

(ಭಾಷ್ಯ)

ವೃದ್ಧತಮೋ (೬೭) ಜ್ಯೇಷ್ಠಃ। 'ಜ್ಯ ಚ' (ಪಾ.ಸೂ.೫-೩-೬೧) ಇತ್ಯಧಿಕಾರೇ 'ವೃದ್ಧಸ್ಯ ಚ' (ಪಾ.ಸೂ.೫-೩-೬೨) ಇತಿ ಆದೇಶವಿಧಾನಾತ್। ಪ್ರಶಸ್ಯತಮಃ (೬೮) ಶ್ರೇಷ್ಠಃ। 'ಪ್ರಶಸ್ಯಸ್ಯ ಶ್ರಃ' (ಪಾ.ಸೂ. ೫-೩-೬೦) ಇತಿ ಶ್ರಾದೇಶವಿಧಾನಾತ್। 'ಪ್ರಾಣೋ ವಾವ ಜ್ಯೇಷ್ಠಶ್ಚ ಶ್ರೇಷ್ಠಶ್ಚ' (ಛಾಂ. ೫-೧-೧) ಇತಿ ಶ್ರುತೇಃ। ಮುಖ್ಯಪ್ರಾಣೋ ವಾ, 'ಶ್ರೇಷ್ಠಶ್ಚ' ಇತ್ಯಧಿಕರಣಸಿದ್ಧತ್ವಾತ್। ಸರ್ವಕಾರಣತ್ವಾದ್ ವಾ ಜ್ಯೇಷ್ಠಃ ಸರ್ವಾತಿಶಯತ್ವಾದ್ವಾ ಶ್ರೇಷ್ಠಃ॥

(ಭಾಷ್ಯಾರ್ಥ)

(ಎಲ್ಲರಿಗಿಂತ) ಅತ್ಯಂತ ಹಿರಿಯನು **ಜ್ಯೇಷ್ಠನು.** 'ಜ್ಯ ಚ' ಎಂಬ ಅಧಿಕಾರದಲ್ಲಿ 'ವೃದ್ಧಸ್ಯ ಚ' ಎಂಬ ಸೂತ್ರದಿಂದ ಆದೇಶವನ್ನು ವಿಧಿಸಿದೆ. ಎಲ್ಲರಿಗಿಂತಲೂ ಹೊಗಳಲ್ಪಡತಕ್ಕವನು; ಆದ್ದರಿಂದ **ಶ್ರೇಷ್ಠನು.** 'ಪ್ರಶಸ್ಯಸ್ಯ ಶ್ರಃ' ಎಂಬ (ವ್ಯಾಕರಣ) ಸೂತ್ರದಿಂದ ಶ್ರಾದೇಶವು ಬಂದಿದೆಯಾದ್ದರಿಂದ (ಶ್ರೇಷ್ಠ ಎಂಬ ರೂಪವಾಗಿದೆ). (ಪ್ರಾಣನೇ ಜ್ಯೇಷ್ಠನೂ ಶ್ರೇಷ್ಠನೂ ಆಗಿರುತ್ತಾನೆ) ಎಂಬ ಶ್ರುತಿಯ (ಪ್ರಮಾಣ) ದಿಂದ ಮುಖ್ಯಪ್ರಾಣನು ಎಂದಾದರೂ (ಅರ್ಥಮಾಡಬಹುದು). (ಶಾರೀರಕದ -) 'ಶ್ರೇಷ್ಠಶ್ಚ' ಎಂಬ ಅಧಿಕರಣದಲ್ಲಿ (ಮುಖ್ಯಪ್ರಾಣನು ಶ್ರೇಷ್ಠನೆಂದು ಏರ್ಪಡುತ್ತದೆ;) ಎಲ್ಲಕ್ಕೂ ಕಾರಣನಾಗಿರುವದರಿಂದ **ಜ್ಯೇಷ್ಠನು** (ಹಿರಿಯವನು), ಎಲ್ಲರಿಗಿಂತಲೂ ಅತಿಶಯವುಳ್ಳವನಾದ್ದರಿಂದ **ಶ್ರೇಷ್ಠನು** - ಎಂದಾದರೂ (ವ್ಯಾಖ್ಯಾನ ಮಾಡಬಹುದು).

(ಭಾಷ್ಯ)

ಈಶ್ವರತ್ವೇನ ಸರ್ವಾಸಾಂ ಪ್ರಜಾನಾಂ ಪತಿಃ (೬೯) ಪ್ರಜಾಪತಿಃ। ಹಿರಣ್ಮಯಾಣ್ಡಾನ್ತರ್ವರ್ತಿತ್ವಾತ್ (೭೦) ಹಿರಣ್ಯಗರ್ಭಃ, ಬ್ರಹ್ಮಾ ವಿರಿಞ್ಚಿಃ ತದಾತ್ಮಾ

1. ಇಲ್ಲೆಲ್ಲ ವಿಭೂತಿಗಳ ಹೆಸರನ್ನೇ ಹೇಳಿದ್ದರೂ ಅವೂ ವಿಷ್ಣುವೇ ಎಂಬ ಅಭಿಪ್ರಾಯದಿಂದ ಈ ನಾಮಗಳನ್ನು ಇಲ್ಲಿ ಸೇರಿಸಿದೆ ಎಂಬ ಅಭಿಪ್ರಾಯವಿರಬಹುದು.

'ಹಿರಣ್ಯಗರ್ಭಃ ಸಮವರ್ತತಾಗ್ರೇ' (ಋ.ಸಂ.೧೦-೧೨೧-೧) ಇತಿ ಶ್ರುತೇಃ। ಭೂಃ ಗರ್ಭೇ ಯಸ್ಯ ಸಃ (೭೧) ಭೂಗರ್ಭಃ। ಮಾಯಾಃ ಶ್ರಿಯಾಃ ಧವಃ ಪತಿಃ (೭೨) ಮಾಧವಃ। ಮಧುವಿದ್ಯಾವಬೋಧ್ಯತ್ವಾದ್ವಾ ಮಾಧವಃ। 'ಮೌನಾದ್ ಧ್ಯಾನಾಚ್ಚ ಯೋಗಾಚ್ಚ ವಿದ್ಧಿ ಭಾರತ ಮಾಧವಮ್' (ಉದ್ಯೋ.೭೦-೪) ಇತಿ ವ್ಯಾಸವಚನಾದ್ ವಾ ಮಾಧವಃ। ಮಧುನಾಮಾನಮಸುರಂ ಸೂದಿತವಾನಿತಿ (೭೩) **ಮಧುಸೂದನಃ**॥

ವಿಷ್ಣುಕರ್ಣೋದ್ಭವಂ ಚಾಪಿ ಮಧುನಾಮ ಮಹಾಸುರಮ್।
ಬ್ರಹ್ಮಣೋಪಚಿತಿಂ ಕುರ್ವನ್ ಜಘಾನ ಪುರುಷೋತ್ತಮಃ॥

ತಸ್ಯ ತಾತ ವಧಾದೇವ ದೇವದಾನವಮಾನವಾಃ।
ಮಧುಸೂದನ ಇತ್ಯಾಹುರ್ಋಷಯಶ್ಚ ಜನಾರ್ದನಮ್॥
ಇತಿ ಮಹಾಭಾರತೇ॥ (ಮ.ಭಾ.ಭೀಷ್ಮ ೬೭-೧೬-೧೬)

(ಭಾಷ್ಯಾರ್ಥ)

ಈಶ್ವರನಾಗಿ ಸರ್ವಪ್ರಜೆಗಳಿಗೂ ಪತಿಯಾಗಿ (ಒಡೆಯನಾಗಿ)ರುತ್ತಾನಾದ್ದರಿಂದ **ಪ್ರಜಾಪತಿ.**ಚಿನ್ನದವರ್ಣದ ಅಂಡದೊಳಗೆ ಇರುತ್ತಾನಾದ್ದರಿಂದ **ಹಿರಣ್ಯಗರ್ಭ**ನಾಗಿರುವನು ಬ್ರಹ್ಮನು, ವಿರಿಂಚಿಯು; ಅವನಿಗೆ ಆತ್ಮನಾಗಿರುವದರಿಂದ (ವಿಷ್ಣುವು ಹಿರಣ್ಯಗರ್ಭನು). 'ಮೊದಲು ಹಿರಣ್ಯಗರ್ಭನು ಉದ್ಭವಿಸಿದನು' ಎಂದು ಶ್ರುತಿಯಿದೆ. ಭೂಮಿಯು ಯಾವನ ಗರ್ಭದಲ್ಲಿರುತ್ತದೆಯೋ ಅವನು **ಭೂಗರ್ಭನು.** ಮಾ(ದೇವಿಯ ಎಂದರೆ) ಲಕ್ಷ್ಮಿಯ ಧವನು ಎಂದರೆ ಪತಿಯಾದ್ದರಿಂದ ಇವನು **ಮಾಧವನು.** ಅಥವಾ ಮಧುವಿದ್ಯೆಯಿಂದ ತಿಳಿದುಬರುವವನಾದ್ದರಿಂದ ಇವನು (ಮಾಧವನು). 'ಎಲೈ ಭರತವಂಶೋತ್ಪನ್ನನೆ, ಮೌನದಿಂದಲೂ ಧ್ಯಾನದಿಂದಲೂ ಯೋಗದಿಂದಲೂ[1] ಮಾಧವನನ್ನು ಅರಿತುಕೊ' ಎಂದು ವ್ಯಾಸವಚನವಿರುವದರಿಂದ (ಅವುಗಳಿಂದ ಅರಿಯಲ್ಪಡುವನಾದ್ದರಿಂದ) **ಮಾಧವನು** ಎಂದಾದರೂ ಅರ್ಥವನ್ನು ಮಾಡಬಹುದು. ಮಧುವೆಂಬ ಹೆಸರಿನ ಅಸುರನನ್ನು ಕೊಂದವನಾದ್ದರಿಂದ **ಮಧುಸೂದನನು.** 'ಪುರುಷೋತ್ತಮನು ವಿಷ್ಣುವಿನ ಕರ್ಣದಿಂದ ಹುಟ್ಟಿದ ಮಧುವೆಂಬ ಹೆಸರಿನ ಮಹಾಸುರನನ್ನು ಬ್ರಹ್ಮನಿಗೆ ಆದರವನ್ನು ತೋರಿಸುವುದಕ್ಕಾಗಿ ಕೊಂದನು. ಅಪ್ಪ, ಅವನ ವಧೆಯಿಂದಲೇ ದೇವತೆಗಳೂ ದಾನವರೂ ಮಾನವರೂ ಋಷಿಗಳೂ ಜನಾರ್ದನನನ್ನು ಮಧುಸೂದನನೆಂದು ಕರೆಯುತ್ತಾರೆ ಎಂದು ಮಹಾಭಾರತದಲ್ಲಿದೆ.

**ಈಶ್ವರೋ ವಿಕ್ರಮೀ ಧನ್ವೀ ಮೇಧಾವೀ ವಿಕ್ರಮಃ ಕ್ರಮಃ।**
**ಅನುತ್ತಮೋ ದುರಾಧರ್ಷಃ ಕೃತಜ್ಞಃ ಕೃತಿರಾತ್ಮವಾನ್ ॥೨೨॥**

---

1. ಮೌನವೆಂದರೆ ಮನನ ಮಾಡುವದು, ಶಾಸ್ತ್ರದಿಂದಲೂ ಯುಕ್ತಿಯಿಂದಲೂ ತತ್ತ್ವಾರ್ಥವನ್ನು ಆಲೋಚಿಸುವದು. ಧ್ಯಾನವೆಂದರೆ ಮನನ ಮಾಡಿದ ತತ್ತ್ವದಲ್ಲಿ ಚಿತ್ತವನ್ನು ಇಟ್ಟುಕೊಳ್ಳುವದು, ಯೋಗವೆಂದರೆ ಅಲ್ಲಿಯೇ ಚಿತ್ತವನ್ನು ಲಯಗೊಳಿಸುವದು ಎಂದು ವ್ಯಾಖ್ಯಾನ.

## ಭಾಷ್ಯ

ಸರ್ವಶಕ್ತಿಮತ್ತಯಾ (೭೪) ಈಶ್ವರಃ। ವಿಕ್ರಮಃ ಶೌರ್ಯಮ್, ತದ್ಯೋಗಾದ್ (೭೫) ವಿಕ್ರಮೀ। ಧನುಃ ಅಸ್ಯಾಸ್ತೀತಿ (೭೬) ಧನ್ವೀ। ವ್ರೀಹ್ಯಾದಿತ್ವಾದಿನಿಪ್ರತ್ಯಯಃ. 'ರಾಮಃ ಶಸ್ತ್ರಭೃತಾಮಹಮ್' (ಗೀ.೧೦-೩೧) ಇತಿ ಭಗವದ್ವಚನಾತ್। ಮೇಧಾ ಬಹುಗ್ರನ್ಥಧಾರಣಸಾಮರ್ಥ್ಯಂ ಯಸ್ಯಾಸ್ತಿ ಸ (೭೭) ಮೇಧಾವೀ। 'ಅಸ್ಮಾಯಾ ಮೇಧಾಸ್ರಜೋ ವಿನಿಃ' (ಪಾ.ಸೂ. ೫-೨-೧೨೧) ಇತಿ (ಪಾಣಿನಿವಚನಾತ್) ವಿನಿ ಪ್ರತ್ಯಯಃ। ವಿಚಕ್ರಮೇ ಜಗದ್ ವಿಶ್ವಂ ತೇನ (೭೮) ವಿಕ್ರಮಃ। ವಿನಾ ಗರುಡೇನ ಪಕ್ಷಿಣಾ ಕ್ರಮಣಾದ್ ವಾ। ಕ್ರಮಣಾತ್ ಕ್ರಮಹೇತುತ್ವಾದ್ ವಾ(೭೯) ಕ್ರಮಃ। 'ಕ್ರಾನ್ತೇ ವಿಷ್ಣುಮ್' (ಮನು. ೧-೧೨೧) ಇತಿ ಮನುವಚನಾತ್॥

## (ಭಾಷ್ಯಾರ್ಥ)

ಸರ್ವಶಕ್ತಿಗಳುಳ್ಳವನಾದ್ದರಿಂದ **ಈಶ್ವರನು**. ವಿಕ್ರಮ ಎಂದರೆ ಶೌರ್ಯವು (ಪರಾಕ್ರಮವು), ಅದು ಉಳ್ಳವನಾದ್ದರಿಂದ **ವಿಕ್ರಮಿಯು.** ಬಿಲ್ಲು ಉಳ್ಳವನಾದ್ದರಿಂದ **ಧನ್ವಿಯು.** ವ್ರೀಹ್ಯಾದಿಗಳಲ್ಲಿ (ಸೇರಿರುವದರಿಂದ) ಇನಿ ಎಂಬ ಪ್ರತ್ಯಯವು (ಬಂದು ರೂಪವಾಗಿದೆ) 'ಶಸ್ತ್ರಧಾರಿಗಳಲ್ಲಿ ನಾನು ರಾಮನು' ಎಂದು ಭಗವಂತನ ವಾಕ್ಯವಿದೆ. ಮೇಧಾ (ಶಕ್ತಿ) ಎಂದರೆ ಬಹಳ ಗ್ರಂಥವನ್ನು ನೆನಪಿನಲ್ಲಿಟ್ಟುಕೊಂಡಿರುವ ಸಾಮರ್ಥ್ಯವು; ಅದು ಯಾವಾತನಿಗಿದೆಯೋ ಅವನು **ಮೇಧಾವಿ.**[1] 'ಅಸ್ಮಾಯಾ ಮೇಧಾಸ್ರಜೋ ವಿನಿಃ' ಎಂದು (ಪಾಣಿನಿಯಸ್ಮೃತಿಯಿರುವದರಿಂದ) ವಿನಿಪ್ರತ್ಯಯವು[2] ಬಂದಿದೆ. ಜಗತ್ತೆಲ್ಲವನ್ನೂ ಕಾಲಿನಿಂದ ದಾಟಿದವನಾದ್ದರಿಂದ **ವಿಕ್ರಮನು.**[3] ಅಥವಾ ವಿ-ಯಿಂದ ಎಂದರೆ ಗರುಡನೆಂಬ ಪಕ್ಷಿಯಿಂದ ಕ್ರಮಿಸು (ಸಂಚರಿಸು)ವದರಿಂದ **(ವಿಕ್ರಮನು).** ಕ್ರಮಣ - ಸಂಚರಿಸುವದು ಎಂಬ ಕ್ರಿಯೆಗೆ ಕರ್ತೃವಾಗಿರುವುದರಿಂದ, ಅಥವಾ ಕ್ರಮಕ್ಕೆ (ನಡೆಯುವದಕ್ಕೆ) ಹೇತುವಾಗಿರುವದರಿಂದ **ಕ್ರಮನು.** 'ಕ್ರಾನ್ತೇ ವಿಷ್ಣುಮ್' ಎಂಬ ಮನುವಚನವು[4] ಇದಕ್ಕೆ ಪ್ರಮಾಣವು.

1. ಗ್ರಂಥಧಾರಣಶಕ್ತಿಯುಳ್ಳವನನ್ನು ಮೇಧಾವಿ ಎನ್ನುತ್ತಾರೆ. ಪರಮಾತ್ಮನು ಯಾವ ಗ್ರಂಥವನ್ನೂ ಅಭ್ಯಾಸಮಾಡದೆ ಇದ್ದರೂ ಶಾಸ್ತ್ರಾರ್ಥವೆಲ್ಲವೂ ಅವನ ನೆನಪಿನಲ್ಲಿರುತ್ತದೆ.

2. ಮಾಯಾ, ಮೇಧಾ, ಸ್ರಗ್ - ಈ ಶಬ್ದಗಳಿಗೆ 'ಹೆಚ್ಚಾಗಿ ಉಳ್ಳವನು' ಎಂಬರ್ಥದಲ್ಲಿ ವಿನ್ ಎಂಬ ಪ್ರತ್ಯಯವು ಬರುತ್ತದೆ ಎಂಬುದು ಪಾಣಿನಿಯ ಸೂತ್ರದ ಅರ್ಥ.

3. 'ಇದಂ ವಿಷ್ಣುರ್ವಿಚಕ್ರಮೇ' (ತೈ. ೧-೩-೩) ಎಂಬ ಶ್ರುತಿಯ ಸೂಚನೆ.

4. ಮನಸೀನ್ದುಂ ದಿಶಃ ಶ್ರೋತ್ರೇ ಕ್ರಾನ್ತೇ ವಿಷ್ಣುಂ ಬಲೇ ಹರಿಮ್।
ವಾಚ್ಯಗ್ನಿಂ ಮಿತ್ರಮುತ್ಸರ್ಗೇ ಪ್ರಜನೇ ಚ ಪ್ರಜಾಪತಿಮ್॥

(ಮನು. ೧೨-೧೨೧)

"ಮನಸ್ಸಿನಲ್ಲಿ ಚಂದ್ರನನ್ನು, ಶ್ರೋತ್ರದಲ್ಲಿ ದಿಗ್ದೇವತೆಗಳನ್ನು, ಪಾದದಲ್ಲಿ ವಿಷ್ಣುವನ್ನು ಬಲದಲ್ಲಿ ಇಂದ್ರನನ್ನು, ವಾಕ್ಕಿನಲ್ಲಿ ಅಗ್ನಿಯನ್ನು, ಉತ್ಸರ್ಗೇಂದ್ರಿಯದಲ್ಲಿ ಮಿತ್ರನನ್ನು ಪ್ರಜನನೇಂದ್ರಿಯದಲ್ಲಿ ಪ್ರಜಾಪತಿಯನ್ನು ಭಾವಿಸಬೇಕು" ಎಂಬುದು ಪೂರ್ಣಮನುವಚನದ ಅರ್ಥ.

(ಭಾಷ್ಯ)

ಅವಿದ್ಯಮಾನಃ ಉತ್ತಮಃ ಯಸ್ಮಾತ್ ಸಃ (೮೦) **ಅನುತ್ತಮಃ**। 'ಯಸ್ಮಾತ್ ಪರಂ ನಾಪರಮಸ್ತಿ ಕಿಞ್ಚಿತ್' (ತೈ. ನಾ. ೧೨-೩) ಇತಿ ಶ್ರುತೇಃ। 'ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ' (ಗೀ. ೧೧-೪೩) ಇತಿ ಸ್ಮೃತೇಶ್ಚ। ದೈತ್ಯಾದಿಭಿಃ ಧರ್ಷಯಿತುಂ ನ ಶಕ್ಯತ ಇತಿ (೮೧) **ದುರಾಧರ್ಷಃ**। ಪ್ರಾಣಿನಾಂ ಪುಣ್ಯಾಪುಣ್ಯಾತ್ಮಕಂ ಕರ್ಮ ಕೃತಂ ಜಾನಾತೀತಿ (೮೨) **ಕೃತಜ್ಞಃ**। ಪತ್ರಪುಷ್ಪಾದ್ಯಲ್ಪಮಪಿ ಪ್ರಯಚ್ಛತಾಂ ಮೋಕ್ಷಂ ದದಾತೀತಿ ವಾ। ಪುರುಷಪ್ರಯತ್ನಃ (೮೩) **ಕೃತಿಃ** ಕ್ರಿಯಾ ವಾ, ಸರ್ವಾತ್ಮಕತ್ವಾತ್ ತದಾಧಾರತಯಾ ವಾ ಲಕ್ಷ್ಯತೇ ಕೃತ್ಯಾ ಇತಿ ವಾ ಕೃತಿಃ। ಸ್ವಮಹಿಮಪ್ರತಿಷ್ಠಿತತ್ವಾತ್ (೮೪) **ಆತ್ಮವಾನ್**। 'ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ' (ಛಾಂ. ೭-೨೪-೧) ಇತಿ ಶ್ರುತೇಃ॥

(ಭಾಷ್ಯಾರ್ಥ)

ಯಾವನಿಗಿಂತ ಉತ್ತಮನು ಇರುವದಿಲ್ಲವೋ ಅವನು **ಅನುತ್ತಮನು.** 'ಯಾವನಿಗಿಂತ ಹೆಚ್ಚಿನವನು ಅಥವಾ ಸೂಕ್ಷ್ಮನಾದವನು ಯಾವನೂ ಇರುವದಿಲ್ಲವೋ' ಎಂಬ (ನಾರಾಯಣ) ಶ್ರುತಿಯು ಇದಕ್ಕೆ ಪ್ರಮಾಣ; 'ನಿನಗೆ ಸಮಾನನು ಮತ್ತೊಬ್ಬನಿಲ್ಲ. ಹೆಚ್ಚಿನವನು ಎಲ್ಲಿದ್ದಾನು?' ಎಂಬ ಸ್ಮೃತಿಯೂ ಇದಕ್ಕೆ ಪ್ರಮಾಣವು. ದೈತ್ಯಾದಿಗಳಿಂದಲೂ ಎದುರಿಸುವದಕ್ಕೆ ಆಗುವವನಲ್ಲವಾದ್ದರಿಂದ **ದುರಾಧರ್ಷನು;** ಪ್ರಾಣಿಗಳು ಮಾಡಿದ ಪುಣ್ಯಪಾಪರೂಪವಾದ ಕರ್ಮವನ್ನು ಬಲ್ಲವನಾದ್ದರಿಂದ **ಕೃತಜ್ಞನು.** ಎಲೆ, ಹೂವು - ಮುಂತಾದ ಅಲ್ಪವಸ್ತುವನ್ನು ಕೊಟ್ಟವರಿಗೂ ಮೋಕ್ಷವನ್ನು ಕೊಡುತ್ತಾನಾದ್ದರಿಂದ **ಕೃತಜ್ಞನು** (ಎಂದಾದರೂ ಅರ್ಥವನ್ನು ಮಾಡಬಹುದು). ಪುರುಷಪ್ರಯತ್ನವು ಅಥವಾ ಕ್ರಿಯೆಯು **ಕೃತಿ;** ಎಲ್ಲಕ್ಕೂ ಆತ್ಮನಾಗಿರುವದರಿಂದ, ಅಥವಾ ಅದಕ್ಕೆ ಆಧಾರನಾಗಿರುವದರಿಂದ, ಕೃತಿಶಬ್ದಕ್ಕೆ ಲಕ್ಷಣಾರ್ಥವಾಗಿರುತ್ತಾನೆ; ಆದ್ದರಿಂದ **ಕೃತಿ.** ತನ್ನ ಮಹಿಮೆಯಲ್ಲಿ ನೆಲೆನಿಂತಿರುವದರಿಂದ **'ಆತ್ಮವಾನ್'** ಎನಿಸಿರುತ್ತಾನೆ. 'ಪೂಜ್ಯನೆ, ಆತನು ಏತರಲ್ಲಿ ನಿಂತಿರುತ್ತಾನೆ? (ಎಂದು ಕೇಳಿದ್ದಕ್ಕೆ ಸನತ್ಕುಮಾರನು) ತನ್ನ ಮಹಿಮೆಯಲ್ಲಿ (ನಿಂತಿರುತ್ತಾನೆ) ಎಂದಿರುತ್ತಾನೆ'' ಎಂದು ಶ್ರುತಿಯಿರುವದು ಇದಕ್ಕೆ ಪ್ರಮಾಣ.

**ಸುರೇಶಃ ಶರಣಂ ಶರ್ಮ ವಿಶ್ವರೇತಾಃ ಪ್ರಜಾಭವಃ।**
**ಅಹಃ ಸಂವತ್ಸರೋ ವ್ಯಾಲಃ ಪ್ರತ್ಯಯಃ ಸರ್ವದರ್ಶನಃ ॥೨೩॥**

(ಭಾಷ್ಯ)

ಸುರಾಣಾಂ ದೇವತಾನಾಮ್ ಈಶಃ (೮೫) ಸುರೇಶಃ। ಸೂಪಪದೋ ವಾ ರಾಧಾತುಃ। ಶೋಭನದಾತೄಣಾಮ್ ಈಶಃ **ಸುರೇಶಃ**। ಆರ್ತಾನಾಮಾರ್ತಿಹರಣತ್ವಾತ್ (೮೬) ಶರಣಮ್। ಪರಮಾನನ್ದರೂಪತ್ವಾತ್ (೮೭) ಶರ್ಮ। ವಿಶ್ವಸ್ಯ ಕಾರಣತ್ವಾದ್ (೮೮) ವಿಶ್ವರೇತಾಃ। ಸರ್ವಾಃ ಪ್ರಜಾ ಯತ್ಸಕಾಶಾದುದ್ಭವನ್ತಿ ಸ (೮೯) ಪ್ರಜಾಭವಃ॥

(ಭಾಷ್ಯಾರ್ಥ)

ಸುರರಿಗೆ ಎಂದರೆ ದೇವತೆಗಳಿಗೆ ಒಡೆಯನಾದ್ದರಿಂದ **ಸುರೇಶನು** ಅಥವಾ ಸು ಎಂಬ ಉಪಪದವು ಸೇರಿರುವ ರಾಧಾತು (ವಿನಿಂದ ಸುರಶಬ್ದವು ಬಂದಿದೆ). ಶುಭವನ್ನು ಕೊಡುವವರಿಗೆ ಈಶನಾದ್ದರಿಂದ **ಸುರೇಶನು** (ಎಂದೂ ಅರ್ಥವನ್ನು ಮಾಡಬಹುದು). ಆರ್ತರ ಸಂಕಟವನ್ನು ಪರಿಹರಿಸುವನಾದ್ದರಿಂದ **ಶರಣ** (ನೆಂದು ವಿಷ್ಣುವಿಗೆ ಹೆಸರು). ಪರಮಾನಂದರೂಪನಾಗಿರುವದರಿಂದ (ಈತನು) **ಶರ್ಮವು**. ವಿಶ್ವಕ್ಕೆಲ್ಲ ಕಾರಣನಾಗಿರುವದರಿಂದ **ವಿಶ್ವರೇತ** (ಎಂದು ಹೆಸರು). ಎಲ್ಲಾ ಪ್ರಜೆಗಳೂ[1] ಯಾವನಿಂದಲೇ ಉಂಟಾಗುತ್ತಿರುವರೋ ಆ (ವಿಷ್ಣುವು) **ಪ್ರಜಾಭವನು**.

ಭಾಷ್ಯ

(೯೦) ಪ್ರಕಾಶರೂಪತ್ವಾದಹಃ। ಕಾಲಾತ್ಮನಾ ಸ್ಥಿತೋ ವಿಷ್ಣುಃ (೯೧) ಸಂವತ್ಸರ ಇತ್ಯುಕ್ತಃ। ವ್ಯಾಲವದ್ ಗ್ರಹೀತುಮಶಕ್ಯತ್ವಾದ್ (೯೨) ವ್ಯಾಲಃ। ಪ್ರತೀತಿಃ ಪ್ರಜ್ಞಾ (೯೩) ಪ್ರತ್ಯಯಃ। "ಪ್ರಜ್ಞಾನಂ ಬ್ರಹ್ಮ" (ಐ. ೩-೫-೩) ಇತಿ ಶ್ರುತೇಃ। ಸರ್ವಾಣಿ ದರ್ಶನಾತ್ಮಕಾನಿ ಅಕ್ಷೀಣಿ ಯಸ್ಯ ಸಃ (೯೪) ಸರ್ವದರ್ಶನಃ । ಸರ್ವಾತ್ಮಕತ್ವಾತ್ 'ವಿಶ್ವತಶ್ಚಕ್ಷುಃ' (ಶ್ವೇ.೩-೩) "ವಿಶ್ವಾಕ್ಷಮ್" (ತೈ. ನಾ. ೧೩-೧) ಇತಿ ಶ್ರುತೇಃ ॥

(ಭಾಷ್ಯಾರ್ಥ)

ಪ್ರಕಾಶರೂಪನಾಗಿರುವದರಿಂದ **ಅಹಃ** ಎಂಬ (ನಾಮನು). ಕಾಲರೂಪದಿಂದ ಇರುವದರಿಂದ ವಿಷ್ಣುವನ್ನು **ಸಂವತ್ಸರನೆನ್ನುವರು**. ವ್ಯಾಲ (ಸರ್ಪ)ದಂತೆ (ಇವನನ್ನು) ಹಿಡಿಯುವದಕ್ಕೆ ಆಗುವದಿಲ್ಲವಾದ್ದರಿಂದ **ವ್ಯಾಲನು; ಪ್ರತ್ಯಯವು** - ಎಂದರೆ ಪ್ರತೀತಿ, ಪ್ರಜ್ಞೆ (ಚೈತನ್ಯವು); ಇದಕ್ಕೆ 'ಪ್ರಜ್ಞಾನವು ಬ್ರಹ್ಮ' ಎಂಬ ಶ್ರುತಿಯು (ಪ್ರಮಾಣ). ಎಲ್ಲಾ ದರ್ಶನರೂಪವಾಗಿರುವ ಕಣ್ಣುಗಳು ಯಾವಾತನವೋ ಆ (ಈತನು) **ಸರ್ವದರ್ಶನನು**. ಸರ್ವಾತ್ಮಕನಾಗಿರುವದರಿಂದ 'ಎಲ್ಲಾ ಕಡೆಯಲ್ಲಿಯೂ ಚಕ್ಷುಸ್ಸುಳ್ಳಾತನು' 'ಎಲ್ಲೆಲ್ಲೂ ಅಕ್ಷಿಗಳುಳ್ಳವನು' ಎಂದು ಶ್ರುತಿ ಹೇಳುತ್ತಿದೆಯಾದ್ದರಿಂದ (ಈ ಹೆಸರು).

**ಅಜಃ ಸರ್ವೇಶ್ವರಃ ಸಿದ್ಧಃ ಸಿದ್ಧಿಃ ಸರ್ವಾದಿರಚ್ಯುತಃ।**
**ವೃಷಾಕಪಿರಮೇಯಾತ್ಮಾ ಸರ್ವಯೋಗವಿನಿಃಸೃತಃ॥** **॥೨೪॥**

(ಭಾಷ್ಯ)

(೯೫) ನ ಜಾಯತ ಇತ್ಯಜಃ । 'ನ ಜಾತೋ ನ ಜನಿಷ್ಯತೇ' (ಋ.ಸಂ.೧-೮೧-೫) ಇತಿ ಶ್ರುತೇಃ। 'ನ ಹಿ ಜಾತೋ ನ ಜಾಯೇಽಹಂ ನ ಜನಿಷ್ಯೇ ಕದಾಚನ। ಕ್ಷೇತ್ರಜ್ಞಃ

---

1. ಜೀವರುಗಳು

ಸರ್ವಭೂತಾನಾಂ ತಸ್ಮಾದಹಮಜಃ ಸ್ಮೃತಃ' (ಶಾಂ. ೩೪೨-೭೪) ಇತಿ ಮಹಾಭಾರತೇ। ಸರ್ವೇಷಾಮೀಶ್ವರಾಣಾಮೀಶ್ವರಃ (೯೬) ಸರ್ವೇಶ್ವರಃ। 'ಏಷ ಸರ್ವೇಶ್ವರಃ' (ಮಾಂ. ೬) ಇತಿ ಶ್ರುತೇಃ। ನಿತ್ಯನಿಷ್ಪನ್ನತ್ವಾತ್ (೯೭) ಸಿದ್ಧಃ। ಸರ್ವವಸ್ತುಷು ಸಂವಿದ್ರೂಪತ್ವಾತ್ ಸಿದ್ಧಿಃ। ನಿರತಿಶಯರೂಪತ್ವಾತ್ ಫಲರೂಪತ್ವಾದ್ವಾ (೯೮) ಸಿದ್ಧಿಃ। ಸ್ವರ್ಗಾದೀನಾಂ ವಿನಾಶಿತ್ವಾತ್ ಅಫಲತ್ವಮ್। ಸರ್ವಭೂತಾನಾಮಾದಿಕಾರಣತ್ವಾತ್ (೯೯) ಸರ್ವಾದಿಃ। ಸ್ವರೂಪಸಾಮರ್ಥ್ಯಾತ್ ನ ಚ್ಯುತೋ ನ ಚ್ಯವತೇ ನ ಚ್ಯವಿಶ್ಯತೇ ಇತಿ (೧೦೦) ಅಚ್ಯುತಃ। 'ಶಾಶ್ವತಂ ಶಿವಮಚ್ಯುತಮ್' (ನಾ. ೧೩-೧) ಇತಿ ಶ್ರುತೇಃ। ತಥಾ ಚ ಭಗವದ್ವಚನಮ್ 'ಯಸ್ಮಾನ್ನ ಚ್ಯುತಪೂರ್ವೋಽಹಮಚ್ಯುತಸ್ತೇನ ಕರ್ಮಣಾ' (ಶಾಂ. ೩೪೩) ಇತಿ॥

ಇತಿ ನಾಮ್ನಾಂ ಪ್ರಥಮಂ ಶತಂ ವಿವೃತಮ್॥

## (ಭಾಷ್ಯಾರ್ಥ)

ಹುಟ್ಟುವದೇ ಇಲ್ಲವಾದದ್ದರಿಂದ **ಅಜನು**. 'ಹುಟ್ಟಲಿಲ್ಲ, (ಮುಂದೆ) ಹುಟ್ಟುವದೂ ಇಲ್ಲ' ಎಂಬ ಶ್ರುತಿ (ಇದಕ್ಕೆ ಪ್ರಮಾಣ). 'ನಾನು ಹುಟ್ಟಲೇ ಇಲ್ಲ, ಈಗ ಹುಟ್ಟುವದಿಲ್ಲ, (ಮುಂದೆ) ಯಾವಾಗಲೂ ಹುಟ್ಟುವದೇ ಇಲ್ಲ, ಎಲ್ಲಾ ಪ್ರಾಣಿಗಳ ಕ್ಷೇತ್ರಜ್ಞನೂ ಆಗಿರುವ ನಾನು, ಆದ್ದರಿಂದ '**ಅಜ**'ನೆನಿಸಿಕೊಂಡಿರುತ್ತೇನೆ, - ಎಂದು **ಮಹಾಭಾರತ**ದಲ್ಲಿದೆ. ಎಲ್ಲಾ(ಆಳುವವ)ರಿಗೂ ಈಶ್ವರನು, **ಸರ್ವೇಶ್ವರನು**. 'ಈತನು ಸರ್ವೇಶ್ವರನು' ಎಂಬು ಶ್ರುತಿ (ಇಲ್ಲಿ ಪ್ರಮಾಣ). ಯಾವಾಗಲೂ ಭೂತವಸ್ತುವಾಗಿಯೇ ಇರುವದರಿಂದ **ಸಿದ್ಧನು**. ಎಲ್ಲಾ ವಸ್ತುಗಳಲ್ಲಿಯೂ ಚೇತನರೂಪನಾಗಿರುವದರಿಂದ ಅಥವಾ ಮಿಗಿಲಿಲ್ಲದ ಸ್ವರೂಪದವನಾದ್ದರಿಂದ ಅಥವಾ ಫಲರೂಪನಾದ್ದರಿಂದ ಸಿದ್ಧಿಯು. ಸ್ವರ್ಗಾದಿಗಳು ವಿನಾಶವಾಗುವದರಿಂದ (ಅವು) ಫಲವಲ್ಲ.[1] ಸರ್ವಭೂತಗಳಿಗೂ ಆದಿಕಾರಣನಾಗಿರುವದರಿಂದ **ಸರ್ವಾದಿಯು**. ಸ್ವರೂಪವಾಗಿರುವ ಶಕ್ತಿಯಿಂದ ಕೆಳಕ್ಕೆ ಜಾರಲಿಲ್ಲ, ಕೆಳಕ್ಕೆ ಜಾರುವನಲ್ಲವಾದ್ದರಿಂದ, ಮುಂದೆ ಜಾರುವದೂ ಇಲ್ಲವಾದ್ದರಿಂದ, **ಅಚ್ಯುತನು**. 'ಶಾಶ್ವತವೂ ಮಂಗಲಸ್ವರೂಪವೂ ಆಗಿರುವ ಅಚ್ಯುತನು' ಎಂಬ ಶ್ರುತಿಯಿಂದ (ಇದು ಏರ್ಪಡುತ್ತದೆ). 'ನಾನು ಹಿಂದೆ ಎಂದಿಗೂ ಕೆಳಕ್ಕೆ ಜಾರಿದವನಲ್ಲವಾದ್ದರಿಂದ ಆ ಕರ್ಮದಿಂದ **ಅಚ್ಯುತ**ನೆನಿಸಿರುವೆನು' ಎಂದು ಭಗವದ್ವಚನವಿದೆ.

(ಇಲ್ಲಿಗೆ) ನಾಮಗಳ ಮೊದಲನೆಯ ಶತಕದ ವಿವರಣೆಯು ಮುಗಿಯಿತು.

---

1. ಮಿಗಿಲಿಲ್ಲದ ಫಲವೆನಿಸುವದಿಲ್ಲ.

## (ದ್ವಿತೀಯಶತಕ)

### (ಭಾಷ್ಯ)

೧೦೧. ವರ್ಷಣಾತ್ ಸರ್ವಕಾಮಾನಾಂ ಧರ್ಮೋ ವೃಷಃ। ಕಾತ್ ತೋಯಾತ್ ಭೂಮಿಮಪಾದಿತಿ ಕಪಿರ್ವರಾಹಃ। ವೃಷರೂಪತ್ವಾತ್ ಕಪಿರೂಪತ್ವಾತ್ ವೃಷಾಕಪಿಃ। 'ಕಪಿರ್ವರಾಹಃ ಶ್ರೇಷ್ಠಶ್ಚ ಧರ್ಮಶ್ಚ ವೃಷ ಉಚ್ಯತೇ। ತಸ್ಮಾದ್ ವೃಷಾಕಪಿಃ ಪ್ರಾಹ ಕಾಶ್ಯಪೋ ಮಾಂ ಪ್ರಜಾಪತಿಃ' (ಶಾಂ. ೩೪೨-೮೯) ಇತಿ ಮಹಾಭಾರತೇ। ೧೦೨. ಇಯಾನಿತಿ ಮಾತುಂ ಪರಿಚ್ಛೇತುಂ ನ ಶಕ್ಯತೇ ಆತ್ಮಾ ಅಸ್ಯೇತಿ ಅಮೇಯಾತ್ಮಾ। ೧೦೩. ಸರ್ವಸಂಬನ್ಧವಿನಿರ್ಗತಃ ಸರ್ವಯೋಗವಿನಿಃಸೃತಃ। 'ಅಸಙ್ಗೋ ಹ್ಯಯಂ ಪುರುಷಃ' (ಬೃ.೪-೩-೧೬) ಇತಿ ಶ್ರುತೇಃ। ನಾನಾಶಾಸ್ತ್ರೋಕ್ತಾದ್ ಯೋಗಾದಪಗತತ್ವಾದ್ವಾ॥

### (ಭಾವಾರ್ಥ)

ಎಲ್ಲಾ ಕಾಮಗಳನ್ನೂ ಮಳೆಗರೆಯುವದರಿಂದ ಧರ್ಮವು **ವೃಷ**ವೆನಿಸುತ್ತದೆ; ಕದಿಂದ - ಎಂದರೆ ನೀರಿನಿಂದ ಭೂಮಿಯನ್ನು ಕಾಪಾಡಿದನಾದ್ದರಿಂದ[1] ವರಾಹನು **ಕಪಿ** ಎನಿಸಿರುತ್ತಾನೆ; ವೃಷರೂಪನಾಗಿರುವದರಿಂದಲೂ **ಕಪಿ** ರೂಪನಾಗಿರುವದರಿಂದಲೂ (ವಿಷ್ಣುವು) ವೃಷಾಕಪಿ. 'ಕಪಿ ಎಂದರೆ ವರಾಹನು ಮತ್ತು ಶ್ರೇಷ್ಠನಾದ ವೃಷವೆನಿಸುರತ್ತದೆ. ಆದ್ದರಿಂದ ಕಶ್ಯಪಪ್ರಜಾಪತಿಯು ನನ್ನನ್ನು ವೃಷಾಕಪಿ - ಎಂದು ಕರೆದಿರುತ್ತಾನೆ' - ಎಂದು ಮಹಾಭಾರತದಲ್ಲಿದೆ. ಇಷ್ಟೆಂದು ಅಳತೆಮಾಡುವದಕ್ಕೆ ಶಕ್ಯವಲ್ಲದ ಸ್ವರೂಪದವನಾದ್ದರಿಂದ **ಅಮೇಯಾತ್ಮನು.** ಯಾವ ಸಂಬಧವೂ ಇಲ್ಲದವನಾದ್ದರಿಂದ **ಸರ್ವಯೋಗವಿನಿಃಸೃತನು.** 'ಪುರುಷನು ಅಸಂಗನೇ' ಎಂಬ ಶ್ರುತಿ ಇದಕ್ಕೆ ಪ್ರಮಾಣ. ಅಥವಾ ಬೇರೆ ಬೇರೆ ಶಾಸ್ತ್ರಗಳಲ್ಲಿ[2] ಹೇಳಿರುವ ಉಕ್ತವಾದ ಯೋಗದಿಂದ ಗೊತ್ತಾಗುವ (ಸ್ವರೂಪ)ದವನಾದ್ದರಿಂದ **ಸರ್ವಯೋಗವಿನಿಃಸೃತನು** ಎಂದಾದರೂ (ಹೇಳಬಹುದು).

**ವಸುರ್ವಸುಮನಾಃ ಸತ್ಯಃ ಸಮಾತ್ಮಾ ಸಮ್ಮಿತಃ ಸಮಃ।**
**ಅಮೋಘಃ ಪುಣ್ಡರೀಕಾಕ್ಷೋ ವೃಷಕರ್ಮಾ ವೃಷಾಕೃತಿಃ॥ ॥೨೫॥**

### (ಭಾಷ್ಯ)

೧೦೪. ವಸನ್ತಿ ಸರ್ವಭೂತಾನಿ ಅತ್ರ, ತೇಷು ಅಯಮಪಿ ವಸತೀತಿ ವಾ ವಸುಃ। 'ವಸೂನಾಂ ಪಾವಕಶ್ಚಾಸ್ಮಿ' (ಗೀ. ೧೦-೨೩) ಇತ್ಯುಕ್ತೇರ್ವಾ ವಸುಃ।

1. ಇದು ವಿಷ್ಣುಪುರಾಣದಲ್ಲಿರುವ ಉಕ್ತಿಯೆಂದು ವ್ಯಾಖ್ಯಾನ; ಅದಕ್ಕೆ ಮಹಾಭಾರತದ ಒತ್ತಾಸೆಯೂ ಇದೆ ಎಂಬುದನ್ನು ತಿಳಿಸುವದಕ್ಕಾಗಿ ಮೋಕ್ಷಧರ್ಮದ ವಾಕ್ಯವನ್ನು ಉದಾಹರಿಸಲಾಗಿದೆ - ಎಂದು ಅಲ್ಲಿ ಹೇಳಿದೆ.

2. ಶ್ರುತಿಸ್ಮೃತಿಪುರಾಣಗಳಲ್ಲಿ ಹೇಳಿರುವ ಸಾಧನಗಳಿಂದ ತಿಳಿಯಬರುತ್ತಾನೆ ಎಂಬರ್ಥದಲ್ಲಿ ಸರ್ವಯೋಗವಿನಿಃಸೃತಃ - ಎಂಬ ನಾಮವು ಬಂದಿದೆ ಎಂದು ಭಾವಿಸಬಹುದು.

ವಸುಶಬ್ದೇನ ಧನವಾಚಿನಾ ಪ್ರಾಶಸ್ತ್ಯಂ ಲಕ್ಷ್ಯತೇ। ೧೦೫. ಪ್ರಶಸ್ತಂ ಮನಃ ಯಸ್ಯ ಸಃ ವಸುಮನಾಃ। ರಾಗದ್ವೇಷಾದಿಭಿಃ ಕ್ಲೇಶೈಃ ಮದಾದಿಭಿರುಪಕ್ಲೇಶೈಶ್ಚ ಯತೋ ನ ಕಲುಷಿತಂ ಚಿತ್ತಂ ತತಃ ತನ್ಮನಃ ಪ್ರಶಸ್ತಮ್। ೧೦೬. ಅವಿತಥರೂಪತ್ವಾತ್ ಪರಮಾತ್ಮಾ ಸತ್ಯಃ। 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) ಇತಿ ಶ್ರುತೇಃ। ಮೂರ್ತಾಮೂರ್ತಾತ್ಮಕತ್ವಾದ್ವಾ; 'ಸಚ್ಚ ತ್ಯಚ್ಚಾಭವತ್' (ತೈ. ೨-೬) ಇತಿ ಶ್ರುತೇಃ। 'ಸದಿತಿ ಪ್ರಾಣಾಃ, ತೀತ್ಯನ್ನಮ್ ಯಮಿತಿ ದಿವಾಕರಃ, ತೇನ ಪ್ರಾಣಾನ್ನಾದಿತ್ಯರೂಪತ್ವಾದ್ವಾ ಸತ್ಯಃ। 'ಸದಿತಿ ಪ್ರಾಣಾಸ್ತೀತ್ಯನ್ನಂ ಯಮಿತ್ಯಸಾವಾದಿತ್ಯಃ' (ಐ.ಆ.೨-೧-೫) ಇತಿ ಶ್ರುತೇಃ। ಸತ್ಸು ಸಾಧುತ್ವಾದ್ವಾ ಸತ್ಯಃ। ೧೦೭. ಸಮ ಆತ್ಮಾ ಮನೋ ಯಸ್ಯ ರಾಗದ್ವೇಷಾದಿಭಿರದೂಷಿತಃ ಸಃ ಸಮಾತ್ಮಾ। ಸರ್ವಭೂತೇಷು ಸಮ ಏಕ ಆತ್ಮಾ ವಾ, 'ಸ ಮ ಆತ್ಮೇತಿ ವಿದ್ಯಾತ್' (ಕೌ.೩-೫) ಇತಿ ಶ್ರುತೇಃ। ೧೦೮. ಸರ್ವೈರಪ್ಯರ್ಥಜಾತೈಃ ಪರಿಚ್ಛಿನ್ನಃ ಸಮ್ಮಿತಃ, ಸರ್ವೈರಪ್ಯಪರಿಚ್ಛಿನ್ನೋಽಮಿತ ಇತಿ ಅಸಮ್ಮಿತಃ। ೧೦೯. ಸರ್ವಕಾಲೇಷು ಸರ್ವವಿಕಾರರಹಿತತ್ವಾತ್ ಸಮಃ, ಮಯಾ ಲಕ್ಷ್ಮ್ಯಾ ಸಹ ವರ್ತತೇ ಇತಿ ವಾ ಸಮಃ॥

## (ಭಾಷ್ಯಾರ್ಥ)

ಈತನಲ್ಲಿ ಸರ್ವಪ್ರಾಣಿಗಳೂ ವಾಸವಾಗಿರುತ್ತವೆ, ಅಥವಾ[1] ಅವುಗಳಲ್ಲಿ ಈತನೂ ವಾಸವಾಗಿರುತ್ತಾನೆ. ಆದ್ದರಿಂದ **ವಸು**. 'ವಸುಗಳಲ್ಲಿ ಪಾವಕನಾಗಿಯೂ ಇರುವೆನು' ಎಂದು ಗೀತೆಯಲ್ಲಿ ಹೇಳಿರುವವನು, ಆದ್ದರಿಂದಲಾದರೂ (**ವಸು**). ಧನವಾಚಕನಾದ ವಸು ಎಂಬ ಶಬ್ದದಿಂದ ಪ್ರಾಶಸ್ತ್ಯವು ಲಕ್ಷಣೆಯಿಂದ ಉಕ್ತವಾಗಿದೆ. ಪ್ರಶಸ್ತವಾದ ಮನಸ್ಸು ಯಾವಾತನಿಗೆ ಇದೆಯೋ ಆತನು **ವಸುಮನಸ್ಸು**. ರಾಗ, ದ್ವೇಷ - ಮುಂತಾದ ಕ್ಲೇಶಗಳಿಂದಲೂ ಮದವೇ ಮುಂತಾದ ಉಪಕ್ಲೇಶಗಳಿಂದಲೂ (ಈತನ) ಚಿತ್ತವು ಕಲ್ಮಷವಾಗಿರುವದಿಲ್ಲವಾದ್ದರಿಂದ ಆತನ ಮನಸ್ಸು ಪ್ರಶಸ್ತವು.[2]

ಬಾಧಿತವಾಗದೆ ಇರುವ ಸ್ವರೂಪವುಳ್ಳವನಾದ್ದರಿಂದ ಪರಮಾತ್ಮನು **ಸತ್ಯನು**. 'ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು' ಎಂಬ ಶ್ರುತಿಯಿಂದ (ಇದು ಸಿದ್ಧವಾಗಿದೆ), ಅಥವಾ ಮೂರ್ತವೂ ಅಮೂರ್ತವೂ ಆದ (ಭೂತಗಳ) ರೂಪವುಳ್ಳನಾದ್ದರಿಂದ (**ಸತ್ಯನು**). 'ಬ್ರಹ್ಮವು ಸತ್ತೂ ತ್ಯತ್ತೂ ಆಯಿತು' ಎಂಬ ಶ್ರುತಿಯಿಂದ (ಈ ಅರ್ಥವು ಏರ್ಪಡುತ್ತದೆ). ಸತ್ ಎಂದರೆ ಪ್ರಾಣವು, 'ತಿ' ಎಂದರೆ ಅನ್ನವು, 'ಯಮ್' ಎಂದರೆ ಸೂರ್ಯನು. ಆದ್ದರಿಂದ ಪ್ರಾಣಾನ್ನಸೂರ್ಯರ ರೂಪವುಳ್ಳವನು ಎಂಬ ಕಾರಣದಿಂದಲೂ (ವಿಷ್ಣುವು ಸತ್ಯನು). 'ಸತ್ತೆಂದರೆ ಪ್ರಾಣವು, ತಿ ಎಂದರೆ ಅನ್ನವು, ಯಮ್ ಎಂದರೆ ಆಗೊ, ಅಲ್ಲಿರುವ ಆದಿತ್ಯನು' ಎಂಬ

1. ಈ ಮಾತು ಇಲ್ಲದಿದ್ದರೂ ಆಗುತ್ತದೆ ಎಂದು ತೋರುತ್ತದೆ.
2. ಆದ್ದರಿಂದ ವಸುಮನನು ಎಂದರೆ ಉತ್ತಮವಾದ ಮನಸ್ಸಿನವನು ಎಂಬರ್ಥವು ಹೊಂದುತ್ತದೆ ಎಂದು ಭಾವ.

ಶ್ರುತಿಯ (ಪ್ರಮಾಣ)ದಿಂದ (ಈ ಅರ್ಥವು ಹೊರಡುತ್ತದೆ). ಅಥವಾ ಸತ್ಪುರುಷರಲ್ಲಿ[1] ಸಾಧುಭಾವದಿಂದ ನಡೆಯುವನಾದ್ದರಿಂದ ಭಗವಂತನು **ಸತ್ಯನು** ಎಂದಾದರೂ (ವ್ಯಾಖ್ಯಾನಮಾಡಬಹುದು).

ರಾಗದ್ವೇಷಗಳೇ ಮುಂತಾದ ದೋಷಗಳಿಂದ ಕೆಡದೆ ಇರುವ (ಸಮವಾದ) ಮನಸ್ಸುಳ್ಳವನಾದ್ದರಿಂದ ಅವನು **ಸಮಾತ್ಮನು**. ಅಥವಾ ಸರ್ವಭೂತಗಳಲ್ಲಿಯೂ ಸಮನಾಗಿರುವ ಒಬ್ಬನೇ ಆತ್ಮನಾಗಿರುವನಾದ್ದರಿಂದ **ಸಮಾತ್ಮನು**. "ಸ ಮ ಆತ್ಮೇತಿ ವಿದ್ಯಾತ್" (ಆತ್ಮನು ಸಮನೆಂದು ಅರಿಯಬೇಕು)[2] ಎಂಬ ಶ್ರುತಿಯಿಂದ ಈ ಅರ್ಥವಾಗುವದು. ಸರ್ವಅರ್ಥಗಳಿಂದಲೂ ಪರಿಚ್ಛಿನ್ನನಾದವನು ಸಮ್ಮಿತನು; ಯಾವ ಪದಾರ್ಥಗಳಿಂದಲೂ ಪರಿಚ್ಛಿನ್ನನಾಗದೆ ಇರುವವನಾದ್ದರಿಂದ **ಅಸಮ್ಮಿತನು**.[3] ಸರ್ವಕಾಲಗಳಲ್ಲಿಯೂ ಯಾವ ವಿಕಾರವೂ ಇಲ್ಲದವನಾದ್ದರಿಂದ **ಸಮನು**. ಮಾ (ಎಂಬ) ಲಕ್ಷ್ಮಿಯೊಡನೆ ಇರುವವನಾದ್ದರಿಂದ **ಸಮನು** ಎಂದಾದರೂ ಸಮ (ಶಬ್ದಕ್ಕೆ ಅರ್ಥ).

## (ಭಾಷ್ಯ)

೧೧೦. ಪೂಜಿತಃ ಸ್ತುತಃ ಸಂಸ್ಮೃತೋ ವಾ ಸರ್ವಫಲಂ ದದಾತಿ ನ ವೃಥಾ ಕರೋತಿ ಇತಿ ಅಮೋಘಃ। ಅವಿತಥಸಙ್ಕಲ್ಪತ್ವಾದ್ವಾ। 'ಸತ್ಯಸಙ್ಕಲ್ಪಃ' (ಛಾಂ. ೮-೭-೧) ಇತಿ ಶ್ರುತೇಃ। ೧೧೧. ಹೃದಯಸ್ಥಂ ಪುಣ್ಡರೀಕಮಶ್ನುತೇ ವ್ಯಾಪ್ನೋತಿ ತತ್ರೋಪಲಕ್ಷಿತ ಇತಿ ಪುಣ್ಡರೀಕಾಕ್ಷಃ। 'ಯತ್ಪುಣ್ಡರೀಕಂ ಪುರಮಧ್ಯಸಂಸ್ಥಮ್' (ತೈ. ನಾ. ೧೨-೨೮) ಇತಿ ಶ್ರುತೇಃ। ಪುಣ್ಡರೀಕಾಕಾರೇ ಉಭೇ ಅಕ್ಷಿಣೀ ಅಸ್ಯೇತಿ ವಾ। ೧೧೨. ಧರ್ಮಲಕ್ಷಣಂ ಕರ್ಮಾಸ್ಯೇತಿ ವೃಷಕರ್ಮಾ । ೧೧೩. ಧರ್ಮಾರ್ಥಮಾಕೃತಿಃ ಶರೀರಂ ಯಸ್ಯ ಸಃ ವೃಷಾಕೃತಿಃ। 'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' (ಗೀ. ೪-೮) ಇತಿ ಭಗವದ್ವಚನಾತ್॥

## (ಭಾಷ್ಯಾರ್ಥ)

ಪೂಜೆಯನ್ನು ಮಾಡಿದರೆ, ಸ್ತುತಿಸಿದರೆ ಅಥವಾ ಸ್ಮರಣೆ ಮಾಡಿದರೆ ಎಲ್ಲಕ್ಕೂ ಫಲವನ್ನು ಕೊಡುತ್ತಾನೆ, ಅದನ್ನು ವ್ಯರ್ಥಗೊಳಿಸುವದಿಲ್ಲ, ಆದ್ದರಿಂದ **ಅಮೋಘನು**. ಅಥವಾ ವ್ಯರ್ಥವಾಗದ (ಸುಳ್ಳಾಗದ) ಸಂಕಲ್ಪವುಳ್ಳವನಾದ್ದರಿಂದ ಈತನು

---

1. ಮೊದಲು ದುರಾಚಾರಿಗಳಾಗಿದ್ದರೂ ಆಮೇಲೆ ಭಕ್ತಿಯಿಂದ ಸಾಧುಮಾರ್ಗವನ್ನು ಅನುಸರಿಸಿದವರಲ್ಲಿಯೂ ಕೂಡ ಪ್ರಸನ್ನನಾಗಿರುತ್ತಾನೆ - ಎಂದು ಭಾವ.

2. ಈ ಶ್ರುತಿಯನ್ನು 'ಆತನು ನನ್ನ ಆತ್ಮವೆಂದು ಅರಿತುಕೊಳ್ಳಬೇಕು' ಎಂಬ ಅರ್ಥದಲ್ಲಿ ಐತರೇಯಭಾಷ್ಯದಲ್ಲಿ ಉದಾಹರಿಸಿದೆ. ಇಲ್ಲಿ ಸಮನು ಎಂಬರ್ಥಕ್ಕೆ ಅದನ್ನು ಹೇಗೆ ಉದಾಹರಿಸಿದರೋ ತಿಳಿಯದು.

3. ಸಮ್ಮಿತ್ರ, ಅಸಮ್ಮಿತ್ರ - ಎಂದು ಎರಡು ವಿಧವಾಗಿ ಪದಚ್ಛೇದಮಾಡಿಕೊಂಡಿದೆ -ಎಂದು ವ್ಯಾಖ್ಯಾನಕಾರರು ಹೇಳುತ್ತಾರೆ; ಆದರೆ ಮೊದಲನೆಯ ಅರ್ಥವು ಪರಮಾತ್ಮನಿಗೆ ಹೊಂದುವದಿಲ್ಲವೆಂತ ನಮಗೆ ತೋರುತ್ತದೆ. ಸಂಮಿತ್ರನಲ್ಲವಾದ್ದರಿಂದ ಅಸಮ್ಮಿತ್ರನು ಎಂದು ಒಂದೇ ಅರ್ಥವನ್ನಿಟ್ಟುಕೊಂಡರಾಗದೆ? ಬಲ್ಲವರು ವಿಚಾರಮಾಡಬೇಕು.

**ಅಮೋಘನು**. 'ಸತ್ಯಸಂಕಲ್ಪನು' ಎಂಬ ಶ್ರುತಿಯಿಂದ (ಈ ಅರ್ಥವು ಹೊಂದುತ್ತದೆ). ಹೃದಯದಲ್ಲಿರುವ ಪುಣ್ಡರೀಕ (ಕಮಲ)ವನ್ನು (ಅಶ್ನುತೇ) ವ್ಯಾಪಿಸಿರುತ್ತಾನೆ, ಅಲ್ಲಿ ಕಂಡುಬರುತ್ತಾನೆ. ಆದ್ದರಿಂದ **ಪುಣ್ಡರೀಕಾಕ್ಷನು**. 'ಪುರದ ಮಧ್ಯದಲ್ಲಿ ಯಾವ ಹೃತ್ಪುಂಡರೀಕವಿದೆಯೋ' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ). ಅಥವಾ ಪುಣ್ಡರೀಕದ ಆಕಾರದಲ್ಲಿರುವ ಎರಡು ಕಣ್ಣುಗಳು ಈತನಿಗಿದೆಯಾದ್ದರಿಂದ (**ಪುಣ್ಡರೀಕಾಕ್ಷನು**).

ಧರ್ಮರೂಪವಾದ ಕರ್ಮವು ಈತನದು; ಆದ್ದರಿಂದ **ವೃಷಕರ್ಮನು**.[1] ಧರ್ಮಕ್ಕಾಗಿ[2] ಆಕೃತಿ ಎಂದರೆ ಶರೀರವು (ಸ್ವೀಕೃತವಾಗುತ್ತದೆ); ಆದ್ದರಿಂದ **ವೃಷಾಕೃತಿ**; ಏಕೆಂದರೆ ('ಧರ್ಮವನ್ನು ಸ್ಥಾಪಿಸುವುದಕ್ಕಾಗಿ) ಒಂದೊಂದು ಯುಗದಲ್ಲಿಯೂ ಹುಟ್ಟುವೆನು' ಎಂದು **ಭಗವದ್ವಚನವಿದೆ**.

**ರುದ್ರೋ ಬಹುಶಿರಾ ಬಭ್ರುರ್ವಿಶ್ವಯೋನಿಃ ಶುಚಿಶ್ರವಾಃ.**
**ಅಮೃತಃ ಶಾಶ್ವತಃ ಸ್ಥಾಣುರ್ವರಾರೋಹೋ ಮಹಾತಪಾಃ ॥೨೬॥**

## (ಭಾಷ್ಯ)

೧೧೪. ಸಂಹಾರಕಾಲೇ ಪ್ರಜಾಃ ಸಂಹರನ್ ರೋದಯತೀತಿ ರುದ್ರಃ। ರುದಂ ರಾತಿ ದದಾತೀತಿ ವಾ। ರುರ್ದುಃಖಂ ದುಃಖಕಾರಣಂ ವಾ ದ್ರಾವಯತೀತಿ ವಾ **ರುದ್ರಃ**। ರೋದನಾದ್ ದ್ರಾವಣಾದ್ವಾಪಿ **ರುದ್ರ** ಇತ್ಯುಚ್ಯತೇ। 'ರುರ್ದುಃಖಂ ದುಃಖಹೇತುಂ ವಾ ವಿದ್ರಾವಯತಿ ಸ ಪ್ರಭುಃ। ರುದ್ರ ಇತ್ಯುಚ್ಯತೇ ತಸ್ಮಾಚ್ಛಿವಃ ಪರಮಕಾರಣಮ್' (ಸಂಹಿತಾ ೬-೯-೧೪) ಇತಿ ಶಿವಪುರಾಣವಚನಾತ್. ೧೧೫. ಬಹೂನಿ ಶಿರಾಂಸಿ ಯಸ್ಯ ಇತಿ **ಬಹುಶಿರಾಃ**, 'ಸಹಸ್ರಶೀರ್ಷಾ ಪುರುಷಃ' (ಪು.ಸೂ.೧) ಇತಿ ಮನ್ತ್ರವರ್ಣಾತ್। ೧೧೬. ಬಿಭರ್ತಿ ಲೋಕಾನಿತಿ ಬಭ್ರುಃ। ೧೧೭. ವಿಶ್ವಸ್ಯ ಕಾರಣತ್ವಾತ್ **ವಿಶ್ವಯೋನಿಃ**। ೧೧೮. ಶುಚೀನಿ ಶ್ರವಾಂಸಿ ನಾಮಾನಿ ಶ್ರವಣೀಯಾನ್ಯಸ್ಯೇತಿ **ಶುಚಿಶ್ರವಾಃ**॥

## (ಭಾಷ್ಯಾರ್ಥ)

ಸಂಹಾರಕಾಲದಲ್ಲಿ ಪ್ರಜೆಗಳನ್ನು ಕೊಲ್ಲುತ್ತಾ ಅವರು ಅಳುವಂತೆ ಮಾಡುತ್ತಾನಾದ್ದರಿಂದ **ರುದ್ರನು**. ರುತ್ತನ್ನು - ಶೋಕವನ್ನು - (ರಾತಿ) ಸ್ವೀಕರಿಸುತ್ತಾನೆ, ಅಥವಾ ಕೊಡುತ್ತಾನೆ; ಆದ್ದರಿಂದ ರುದ್ರನು. ರು ಎಂದರೆ ದುಃಖವು (ದುಃಖವನ್ನು) ಅಥವಾ ದುಃಖಕಾರಣವನ್ನು (ದ್ರಾವಯತಿ) ಓಡಿಸುತ್ತಾನೆ. ಆದ್ದರಿಂದ ರುದ್ರನು; ಅಳುವದರಿಂದ ಓಡಿಸುತ್ತಾನಾದ್ದರಿಂದ ರುದ್ರನೆನಿಸಿರುತ್ತಾನೆ. 'ರು ಎಂದರೆ ದುಃಖವು ಅಥವಾ ದುಃಖಹೇತುವು; ರೋದನದಿಂದ ಆ ಪ್ರಭುವು (ತಪ್ಪಿಸಿ) ಓಡಿಸುತ್ತಾನೆ.

1. 'ವೃಷ' ಎಂದರೆ ಧರ್ಮವು ಎಂಬರ್ಥವನ್ನಿಟ್ಟುಕೊಂಡು ಹೀಗೆ ವ್ಯಾಖ್ಯಾನ ಮಾಡಿದೆ. ವೃಷಃ ಕರ್ಮ ಅಸ್ಯ - ಎಂದು ವಿಗ್ರಹ.
2. 'ವೃಷಾಯ ಆಕೃತಿಃ ಯಸ್ಯ' ಎಂದು ವಿಗ್ರಹ.

(ಆದ್ದರಿಂದ) ಪರಮಕಾರಣನಾದ ಶಿವನು **ರುದ್ರ**ನೆನಿಸಿರುತ್ತಾನೆ' ಎಂದು ಶಿವಪುರಾಣವಚನದಿಂದ (ಈ ಅರ್ಥವು ಹೊಂದುತ್ತದೆ).

ಬಹಳ ಶಿರಸ್ಸುಗಳುಳ್ಳವನಾದ್ದರಿಂದ **ಬಹುಶಿರನು.** 'ಪುರುಷನು ಸಹಸ್ರಶಿರಸ್ಸುಳ್ಳವನು' ಎಂದು ಮಂತ್ರವರ್ಣವಿರುತ್ತದೆಯಾದ್ದರಿಂದ (ಈ ಅರ್ಥ). ಲೋಕಗಳನ್ನು ಧರಿಸಿರುತ್ತಾನೆ, ಆದ್ದರಿಂದ **ಬಭ್ರು.** ವಿಶ್ವಕ್ಕೆಲ್ಲ ಕಾರಣನಾಗಿರುವದರಿಂದ **ವಿಶ್ವಯೋನಿ.** ಶುಚಿಯಾದ ಶ್ರವಗಳು ಎಂದರೆ ಕೇಳುವದಕ್ಕೆ ಇಂಪಾಗಿರುವ ನಾಮಗಳು ಯಾವನಿಗಿದೆಯೋ ಅವನು **ಶುಚಿಶ್ರವಸ್ಸು.**

## (ಭಾಷ್ಯ)

೧೧೯. ನ ವಿದ್ಯತೇ ಮೃತಂ ಮರಣಂ ಅಸ್ಯೇತಿ ಅಮೃತಃ। 'ಅಜರೋಽಮರಃ' (ಬೃ. ೪-೪-೧೫) ಇತಿ ಶ್ರುತೇಃ। ೧೨೦. ಶಾಶ್ವತಶ್ಚಾಸೌ ಸ್ಥಾಣುಶ್ಚೇತಿ ಶಾಶ್ವತಸ್ಥಾಣುಃ। ೧೨೧. ವರ ಆರೋಹಃ ಅಙ್ಕೋಽಸ್ಯೇತಿ ವರಾರೋಹಃ। ವರಮ್ ಆರೋಹಣಂ ಯಸ್ಮಿನ್ನಿತಿ ವಾ, ಆರೂಢಾನಾಂ ಪುನರಾವೃತ್ತ್ಯಸಂಭವಾತ್। 'ನ ಚ ಪುನರಾವರ್ತತೇ' (ಛಾಂ.೮-೧೫-೧) ಇತಿ ಶ್ರುತೇಃ। 'ಯದ್ ಗತ್ವಾ ನ ನಿವರ್ತನ್ತೇ ತದ್ಧಾಮ ಪರಮಂ ಮಮ' (ಗೀ.೧೫-೬) ಇತಿ ಭಗವದ್ವಚನಾತ್। ೧೨೨. ಮಹತ್ ಸೃಜ್ಯವಿಷಯಂ ತಪೋ ಜ್ಞಾನಮಸ್ಯೇತಿ ಮಹಾತಪಾಃ। 'ಯಸ್ಯ ಜ್ಞಾನಮಯಂ ತಪಃ' (ಮುಂ.೧-೧-೯) ಇತಿ ಶ್ರುತೇಃ। ಐಶ್ವರ್ಯಂ ಪ್ರತಾಪೋ ವಾ ತಪೋ ಮಹದಸ್ಯೇತಿ ವಾ ಮಹಾತಪಾಃ ॥೨೬॥

## (ಭಾಷ್ಯಾರ್ಥ)

ಈತನಿಗೆ ಮೃತ್ಯುವು ಎಂದರೆ ಮರಣವು ಇರುವದಿಲ್ಲ; ಆದ್ದರಿಂದ (ಈತನು) **ಅಮೃತನು.** 'ಅಜರನು, ಅಮರನು' ಎಂದು ಶ್ರುತಿಯಿದೆ. ಶಾಶ್ವತನಾದ ಸ್ಥಾಣು (ಸ್ಥಿರನು); ಆದ್ದರಿಂದ ಇವನು **ಶಾಶ್ವತಸ್ಥಾಣು.**[1] ಆರೋಹವು ಎಂದರೆ (ಇವನ) ತೊಡೆಯು ವರ (ಶ್ರೇಷ್ಠ)ವಾದದ್ದು; ಆದ್ದರಿಂದ **ವರಾರೋಹನು.** ಅಥವಾ ಈತನಲ್ಲಿ ಆರೋಹಣವು (ಎಂದರೆ) ಇವನನ್ನು ಸೇರುವದು ವರ ಎಂದರೆ ಉತ್ತಮವಾದದ್ದು; ಆದ್ದರಿಂದ **ವರಾರೋಹನು.** ಏಕೆಂದರೆ ಈತನನ್ನು ಏರಿ ಮುಟ್ಟಿದವನಿಗೆ ಮತ್ತೆ ಹಿಂತಿರುಗಿ (ಸಂಸಾರಕ್ಕೆ) ಬರುವದೆಂಬುದು ಆಗುವಂತಿಲ್ಲ; 'ಮತ್ತೆ ಹಿಂದಕ್ಕೆ ತಿರುಗುವದಿಲ್ಲ' ಎಂದು ಶ್ರುತಿಯಿದೆ. 'ಯಾವದನ್ನು ಸೇರಿದರೆ ಮತ್ತೆ (ಜೀವನು) ಹಿಂತಿರುಗುವದಿಲ್ಲವೋ, ಆ ಪರಮಸ್ಥಾನವು ನನ್ನದು' ಎಂದು ಭಗವದ್ವಚನವಿರುವದರಿಂದ (ಹೀಗೆ ಅರ್ಥವನ್ನು ಮಾಡಬಹುದು).

1. ಕೂಟಸ್ಥನಿತ್ಯನು, ಯಾವ ಮಾರ್ಪಾಡೂ ಇಲ್ಲದ ನಿತ್ಯನು ಎಂದರ್ಥ.

ಸೃಷ್ಟಿಸಲ್ಪಡಬೇಕಾದ್ದರ ವಿಷಯಕ್ಕೆ ಮಹತ್ತಾದ (ಹೆಚ್ಚಿನ) ಜ್ಞಾನವು ಈತನಿಗೆ ಇರುತ್ತದೆಯಾದ್ದರಿಂದ (ಈತನು) **ಮಹಾತಪನು**; 'ಯಾವಾತನಿಗೆ ಜ್ಞಾನಮಯವಾದ ತಪಸ್ಸಿರುವದೋ' ಎಂಬ ಶ್ರುತಿಯಿಂದ (ಈ ಅರ್ಥವು ಹೊರಡುತ್ತದೆ). ಐಶ್ವರ್ಯವು, ಅಥವಾ ಪ್ರತಾಪವು ತಪಸ್ಸು ಮಹತ್ತಾಗಿ ಈತನಿಗೆ ಇರುವದರಿಂದ (ಈತನು) **ಮಹಾತಪನು** (ಎಂದಾದರೂ ಅರ್ಥವಾಗಬಹುದು).

**ಸರ್ವಗಃ ಸರ್ವವಿದ್ಭಾನುರ್ವಿಷ್ವಕ್ಸೇನೋ ಜನಾರ್ದನಃ।**
**ವೇದೋ ವೇದವಿದವ್ಯಙ್ಗೋ ವೇದಾಙ್ಗೋ ವೇದವಿತ್ಕವಿಃ ॥೨೭॥**

## (ಭಾಷ್ಯ)

೧೨೩. ಸರ್ವತ್ರ ಗಚ್ಛತೀತಿ ಸರ್ವಗಃ। ಕಾರಣತ್ವೇನ ವ್ಯಾಪ್ತತ್ವಾತ್ ಸರ್ವತ್ರ। ೧೨೪. ಸರ್ವಂ ವೇತ್ತಿ ವಿನ್ದತೇ ಇತಿ ವಾ ಸರ್ವವಿತ್; ಭಾತೀತಿ ಭಾನುಃ, 'ತಮೇವ ಭಾನ್ತಮನು ಭಾತಿ ಸರ್ವಮ್' (ಕಾ.೨-೨-೧೫; ಮುಂ.೨-೨-೧೦) ಇತಿ ಶ್ರುತೇಃ। 'ಯದಾದಿತ್ಯಗತಂ ತೇಜಃ' (ಗೀ. ೧೫-೧೨) ಇತ್ಯಾದಿಸ್ಮೃತೇಶ್ಚ। ಸರ್ವವಿಚ್ಚಾಸೌ ಭಾನುಶ್ಚೇತಿ ಸರ್ವವಿದ್ಭಾನುಃ । ೧೨೫. ವಿಷ್ವಗಞ್ಚತಿ ಪಲಾಯತೇ ದೈತ್ಯಸೇನಾ ಯಸ್ಯ ರಣೋದ್ಯೋಗಮಾತ್ರೇಣೇತಿ ವಿಷ್ವಕ್ಸೇನಃ। ೧೨೬. ಜನಾನ್ ದುರ್ಜನಾನರ್ದಯತಿ ಹಿನಸ್ತಿ ನರಕಾದೀನ್ ಗಮಯತೀತಿ ವಾ ಜನಾರ್ದನಃ। ಜನೈಃ ಪುರುಷಾರ್ಥಮಭ್ಯುದಯನಿಃಶ್ರೇಯಸಲಕ್ಷಣಂ ಯಾಚ್ಯತೇ ಇತಿ ಜನಾರ್ದನಃ॥

## (ಭಾಷ್ಯಾರ್ಥ)

ಎಲ್ಲೆಲ್ಲಿಯೂ ಹೊಕ್ಕಿರುವನಾದ್ದರಿಂದ **ಸರ್ವಗನು**; ಏಕೆಂದರೆ (ಇವನು) ಕಾರಣರೂಪದಿಂದ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತಾನೆ. ಎಲ್ಲವನ್ನೂ ಬಲ್ಲನು, ಅಥವಾ ಪಡೆದಿರುತ್ತಾನೆ; ಆದ್ದರಿಂದ **ಸರ್ವವಿತ್**. ಭಾತಿ (ಹೊಳೆಯುತ್ತಾನೆ) ಆದ್ದರಿಂದ **ಭಾನುಃ**; 'ಹೊಳೆಯುತ್ತಿರುವ ಆತನನ್ನೇ ಅನುಸರಿಸಿ ಎಲ್ಲವೂ ಹೊಳೆಯುತ್ತದೆ' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ). 'ಆದಿತ್ಯನಲ್ಲಿರುವ ತೇಜಸ್ಸಿದೆಯಲ್ಲ, (ಅದು ನನ್ನದೆಂದು ತಿಳಿ)' ಎಂಬ ಸ್ಮೃತಿಯೂ (ಇದಕ್ಕೆ ಪ್ರಮಾಣ). ಸರ್ವವಿತ್ತಾದ ಭಾನು ಇವನು; ಆದ್ದರಿಂದ **ಸರ್ವವಿದ್ಭಾನು**. ಯಾವನು ರಣೋದ್ಯುಕ್ತನಾದಾಗ ದೈತ್ಯರ ಸೇನೆಯು ಎಲ್ಲೆಲ್ಲಿಯೂ (ಅಞ್ಚತಿ) ಓಡುತ್ತದೆಯಾದ್ದರಿಂದ (ಇವನು) **ವಿಷ್ವಕ್ಸೇನನು**. ಜನಗಳನ್ನು ಎಂದರೆ ದುರ್ಜನರನ್ನು 'ಅರ್ದಯತಿ' ಕೊಲ್ಲುತ್ತಾನೆ ಅಥವಾ ನರಕಕ್ಕೆ ಕಳುಹಿಸುತ್ತಾನೆ. ಆದ್ದರಿಂದ **ಜನಾರ್ದನನು**. ಜನಗಳಿಂದ ಪುರುಷಾರ್ಥಕ್ಕಾಗಿ - ಏಳಿಗೆ ಮತ್ತು ಮುಕ್ತಿ ಎಂಬ (ಫಲಕ್ಕಾಗಿ) ಯಾಚಿಸಲ್ಪಡುತ್ತಾನೆ;

ಆದ್ದರಿಂದ **ಜನಾರ್ದನನು** ಎಂದಾದರೂ[1] (ಅರ್ಥಮಾಡಬಹುದು).

(ಭಾಷ್ಯ)

೧೨೭. ವೇದರೂಪತ್ವಾತ್ ವೇದಃ । ವೇದಯತೀತಿ ವಾ ವೇದಃ 'ತೇಷಾಮೇವಾನುಕಮ್ಪಾರ್ಥಮಹಮಜ್ಞಾನಜಂ ತಮಃ। ನಾಶಯಾಮ್ಯಾತ್ಮಭಾವಸ್ಥೋ ಜ್ಞಾನದೀಪೇನ ಭಾಸ್ವತಾ' (ಗೀ.೧೦-೧೧) ಇತಿ ಭಗವದ್ವಚನಾತ್। ೧೨೮. ಯಥಾವದ್ ವೇದಂ ವೇದಾರ್ಥಂ ಚ ವೇತ್ತೀತಿ ವೇದವಿದ್, 'ವೇದಾನ್ತಕೃದ್ ವೇದವಿದೇವ ಚಾಹಮ್' (ಗೀ. ೧೫-೧೫) ಇತಿ ಭಗವದ್ವಚನಾತ್। 'ಸರ್ವೇ ವೇದಾಃ ಸರ್ವವಿದ್ಯಾಃ ಸಶಾಸ್ತ್ರಾಃ ಸರ್ವೇ ಯಜ್ಞಾಃ ಸರ್ವ ಇಜ್ಯಾಶ್ಚ ಕೃಷ್ಣಃ। ವಿದುಃ ಕೃಷ್ಣಂ ಬ್ರಾಹ್ಮಣಾಸ್ತತ್ತ್ವತೋ ಯೇ ತೇಷಾಂ ರಾಜನ್ ಸರ್ವಯಜ್ಞಾಃ ಸಮಾಪ್ತಾಃ।' (?) ಇತಿ ಮಹಾಭಾರತೇ॥

(ಭಾಷ್ಯಾರ್ಥ)

ವೇದರೂಪನಾಗಿರುವದರಿಂದ **ವೇದ** (ವೆಂದು ಈತನಿಗೆ ಹೆಸರು). ಅಥವಾ (ತತ್ತ್ವವನ್ನು) ತಿಳಿಯಿಸಿಕೊಡುತ್ತಾನಾದ್ದರಿಂದ ವೇದನು. 'ಅವರಲ್ಲಿಯೇ ಮರುಕದಿಂದ ನಾನು ಅವರ ಅಂತಃಕರಣದ ಆಶಯದಲ್ಲಿದ್ದುಕೊಂಡು ಬೆಳಗುತ್ತಿರುವ ಜ್ಞಾನದೀಪದಿಂದ (ಅವರ) ಅಜ್ಞಾನದಿಂದುಟಾದ ತಮಸ್ಸನ್ನು (ಮಿಥ್ಯಾಜ್ಞಾನವನ್ನು) ನಾಶಪಡಿಸುವೆನು' ಎಂದು ಭಗವದ್ವಚನವಿರುವದರಿಂದ (ಈ ಅರ್ಥ). ಇದ್ದದ್ದು ಇದ್ದಂತೆ (ಸರಿಯಾಗಿ) ವೇದಾರ್ಥವನ್ನು ತಿಳಿದವನಾದ್ದರಿಂದ **ವೇದವಿತ್ತು**. 'ವೇದಾಂತವನ್ನು ರಚಿಸಿದವನೂ, ವೇದವನ್ನು ಬಲ್ಲವನೂ ನಾನೇ' ಎಂದು ಭಗವಂತನ ವಚನವಿರುವದರಿಂದ (ಈ ಅರ್ಥ). 'ಎಲೈ ರಾಜನೆ, ಎಲ್ಲಾ ವೇದಗಳೂ, ಎಲ್ಲಾ ವಿದ್ಯೆಗಳೂ ಶಾಸ್ತ್ರಗಳೊಡನೆ ಎಲ್ಲಾ ಯಜ್ಞಗಳೂ ಎಲ್ಲಾ ಪೂಜ್ಯವಸ್ತುಗಳೂ ಕೃಷ್ಣನೇ! ಯಾವ ಬ್ರಾಹ್ಮಣರು ಕೃಷ್ಣನನ್ನು ಇದ್ದದ್ದು ಇದ್ದಂತೆ ಅರಿತಿರುವರೋ ಅವರು ಎಲ್ಲಾ ಯಜ್ಞಗಳನ್ನೂ ಮಾಡಿದ ಫಲವನ್ನು ಪಡೆದುಕೊಂಡವರಾಗುವರು!' ಎಂದು ಮಹಾಭಾರತದಲ್ಲಿದೆ.[2]

(ಭಾಷ್ಯ)

೧೨೯. ಅವ್ಯಙ್ಗಃ ಜ್ಞಾನಾದಿಭಿಃ ಪರಿಪೂರ್ಣೋಽವಿಕಲಃ ಇತ್ಯುಚ್ಯತೇ। ವ್ಯಙ್ಗೋ ವ್ಯಕ್ತಿರ್ನ ವಿದ್ಯತ ಇತಿ ವಾ ಅವ್ಯಙ್ಗಃ। 'ಅವ್ಯಕ್ತೋಽಯಮ್' (ಗೀ. ೨-೨೫) ಇತಿ ಭಗವದ್ವಚನಾತ್। ೧೩೦. ವೇದಾಃ ಅಙ್ಗಭೂತಾಃ ಯಸ್ಯ ಸ ವೇದಾಙ್ಗಃ। ೧೩೧. ವೇದಾನ್ ವಿನ್ತೇ ವಿಚಾರಯತೀತಿ ವೇದವಿತ್। ೧೩೨. ಕ್ರಾನ್ತದರ್ಶೀ ಕವಿಃ ಸರ್ವದೃಕ್। 'ನಾನ್ಯೋಽತೋಽಸ್ತಿ ದ್ರಷ್ಟಾ' (ಬೃ.೩-೭-೨೩) ಇತ್ಯಾದಿಶ್ರುತೇಃ, 'ಕವಿರ್ಮನೀಷೀ' (ಈ.೮) ಇತ್ಯಾದಿಮನ್ತ್ರವರ್ಣಾತ್॥

1. ಮೂಲದಲ್ಲಿ 'ವಾ' ಎಂಬ ಮಾತು ಇರಬೇಕಿತ್ತು ಎಂದು ಸೇರಿಸಿಕೊಂಡು ಹೀಗೆ ಅರ್ಥವನ್ನೂ ಮಾಡಲಾಗಿದೆ.

2. ಈ ಭಾರತವಾಕ್ಯವು ಭೀಷ್ಮರು ಯುಧಿಷ್ಠಿರನಿಗೆ ಹೇಳಿದ್ದಿರಬೇಕೆಂದು ಕಾಣುತ್ತದೆ.

(ಭಾಷ್ಯಾರ್ಥ)

**ಅವ್ಯಙ್ಗನು** ಎಂದರೆ ಜ್ಞಾನಾದಿಗಳಿಂದ ಸಂಪೂರ್ಣವಾಗಿರುವಾತನು; (ಅವುಗಳ) ಕೊರತೆಯು ಸ್ವಲ್ಪವೂ ಇಲ್ಲದಾತನನ್ನು (ಈ ಹೆಸರಿನಿಂದ) ಕರೆಯುತ್ತಾರೆ. ವ್ಯಙ್ಗ ಎಂದರೆ ಅಭಿವ್ಯಕ್ತಿಯು ಈತನಿಗೆ ಇಲ್ಲ; ಆದ್ದರಿಂದ (ಅವ್ಯಙ್ಗನು) ಎಂದಾದರೂ (ವ್ಯಾಖ್ಯಾನ). 'ಈತನು ಅವ್ಯಕ್ತನು' ಎಂಬ ಭಗವದ್ವಚನ (ಪ್ರಮಾಣ) ದಿಂದ (ಈ ಅರ್ಥವು). ವೇದಗಳು ಯಾವಾತನಿಗೆ ಅಂಗಗಳಾಗಿರುತ್ತವೆಯೋ ಆತನು **ವೇದಾಙ್ಗನು.** ವೇದಗಳನ್ನು (ವಿನ್ತೇ =) ವಿಚಾರಮಾಡುತ್ತಾನಾದ್ದರಿಂದ (ಈತನು) **ವೇದವಿತ್** (ಎನಿಸುತ್ತಾನೆ). ಕ್ರಾಂತದರ್ಶಿಯು (ಆಚೆ ಇರುವದನ್ನು ನೋಡಬಲ್ಲವನು) **ಕವಿಯು.** ಎಲ್ಲವನ್ನೂ ನೋಡುವವನು. 'ಈತನಿಗಿಂತ ಬೇರೆ ದ್ರಷ್ಟೃವಿಲ್ಲ' ಮುಂತಾದ ಶ್ರುತಿಯು ಇದಕ್ಕೆ ಪ್ರಮಾಣ. 'ಕವಿಯು, ಮನೀಷಿಯು' ಎಂಬ ಮಂತ್ರ ವರ್ಣದಿಂದ(ಲೂ ಈ ಅರ್ಥ). ॥೨೭॥

**ಲೋಕಾಧ್ಯಕ್ಷಃ ಸುರಾಧ್ಯಕ್ಷೋ ಧರ್ಮಾಧ್ಯಕ್ಷಃ ಕೃತಾಕೃತಃ।**
**ಚತುರಾತ್ಮಾ ಚತುರ್ವ್ಯೂಹಶ್ಚತುರ್ದಂಷ್ಟ್ರಶ್ಚತುರ್ಭುಜಃ ॥೨೮॥**

(ಭಾಷ್ಯ)

೧೩೩. ಲೋಕಾನ್ ಅಧ್ಯಕ್ಷಯತಿ ಇತಿ ಲೋಕಾಧ್ಯಕ್ಷಃ। ಸರ್ವೇಷಾಂ ಲೋಕಾನಾಂ ಪ್ರಾಧಾನ್ಯೇನ ಉಪದ್ರಷ್ಟಾ। ೧೩೪. ಲೋಕಪಾಲಾದಿ ಸುರಾಣಾಮ್ ಅಧ್ಯಕ್ಷಃ ಸುರಾಧ್ಯಕ್ಷಃ। ೧೩೫. ಧರ್ಮಾಧರ್ಮೌ ಸಾಕ್ಷಾತ್ ಈಕ್ಷತೇ ಅನುರೂಪಂ ಫಲಂ ದಾತುಮ್, ತಸ್ಮಾತ್ ಧರ್ಮಾಧ್ಯಕ್ಷಃ। ೧೩೬. ಕೃತಶ್ಚ ಕಾರ್ಯರೂಪೇಣ ಅಕೃತಶ್ಚ ಕಾರಣರೂಪೇಣ ಇತಿ ಕೃತಾಕೃತಃ॥

(ಭಾಷ್ಯಾರ್ಥ)

ಲೋಕಗಳನ್ನು ಪ್ರತ್ಯಕ್ಷವಾಗಿ ಕಾಣುತ್ತಾನೆ; ಆದ್ದರಿಂದ **ಲೋಕಾಧ್ಯಕ್ಷನು.** ಸರ್ವಲೋಕಗಳನ್ನು ಮುಖ್ಯ(ವಾದ ಅರ್ಥದಲ್ಲಿ) ನೋಡುತ್ತಾನಾದ್ದರಿಂದ (ಈ ಹೆಸರು). ಲೋಕಪಾಲಕರೇ ಮುಂತಾದ ಸುರರಿಗೆ ಅಧ್ಯಕ್ಷನಾದ್ದರಿಂದ **ಸುರಾಧ್ಯಕ್ಷನು.** ಧರ್ಮ, ಅಧರ್ಮ - ಇವೆರಡನ್ನೂ ಅವುಗಳಿಗೆ ತಕ್ಕ ಫಲವನ್ನೂ ಕೊಡುವದಕ್ಕಾಗಿ ನೇರಾಗಿ ನೋಡುತ್ತಿರುತ್ತಾನೆ, ಆದ್ದರಿಂದ **ಧರ್ಮಾಧ್ಯಕ್ಷನು.** ಕಾರ್ಯರೂಪದಿಂದ ಕೃತ (ಮಾಡಲ್ಪಟ್ಟವನು) ಮತ್ತು ಕಾರಣರೂಪದಿಂದ ಅಕೃತ (ಮಾಡಲ್ಪಡದವನು); ಆದ್ದರಿಂದ (ಈತನು) **ಕೃತಾಕೃತನು.**[1]

1. ಕೃತಾಕೃತಿಃ - ಎಂಬ ಪಾಠವೂ ಉಂಟೆಂದು ತಿಳಿದುಬಂದಿದೆ. ಭಾಷ್ಯಕಾರರು ಇಲ್ಲಿ ಪರಾಮರ್ಶಿಸಿಲ್ಲ.

## (ಭಾಷ್ಯ)

೧೩೭. ಸರ್ಗಾದಿಷು ಪೃಥಗ್ ವಿಭೂತಯಶ್ಚತಸ್ರಃ ಆತ್ಮಾನಃ ಯಸ್ಯ ಸಃ ಚತುರಾತ್ಮಾ॥

ಬ್ರಹ್ಮಾ ದಕ್ಷಾದಯಃ ಕಾಲಸ್ತಥೈವಾಖಿಲಜನ್ತವಃ।
ವಿಭೂತಯೋ ಹರೇರೇತಾಃ ಜಗತಃ ಸೃಷ್ಟಿಹೇತವಃ॥
ವಿಷ್ಣುರ್ಮನ್ವಾದಯಃ ಕಾಲಃ ಸರ್ವಭೂತಾನಿ ಚ ದ್ವಿಜ।
ಸ್ಥಿತೇರ್ನಿಮಿತ್ತಭೂತಸ್ಯ ವಿಷ್ಣೋರೇತಾ ವಿಭೂತಯಃ॥
ರುದ್ರಃ ಕಾಲೋಽನ್ತಕಾದ್ಯಾಶ್ಚ ಸಮಸ್ತಾಶ್ಚೈವ ಜನ್ತವಃ।
ಚತುರ್ಧಾ ಪ್ರಲಯಾಯೈತಾ ಜನಾರ್ದನವಿಭೂತಯಃ॥
ಇತಿ ವೈಷ್ಣವಪುರಾಣೇ॥ (ವಿ.ಪು.೧-೨೨-೩೧,೩೨,೩೩)

## (ಭಾಷ್ಯಾರ್ಥ)

ಸೃಷ್ಟಿಯೇ ಮುಂತಾದವುಗಳಲ್ಲಿ ಬೇರೆಬೇರೆಯಾಗಿರುವ ವಿಭೂತಿಗಳು ನಾಲ್ಕು ಆತ್ಮಗಳಾಗಿ ಯಾವನಿಗೆ ಇರುವವೋ ಆತನು **ಚತುರಾತ್ಮನು**. (ಹೇಗೆಂದರೆ) :- (೧) ಬ್ರಹ್ಮ ದಕ್ಷನೇ ಮೊದಲಾದವರು, ಕಾಲ, ಮತ್ತು ಹಾಗೆಯೇ ಎಲ್ಲಾ ಪ್ರಾಣಿಗಳು ಈ (ನಾಲ್ಕು) ಹರಿಗೆ **ಸೃಷ್ಟಿಗೆ** ಕಾರಣವಾಗಿರುವ ವಿಭೂತಿಗಳು. (೨) ವಿಷ್ಣು, ಮನ್ವಾದಿಗಳು, ಕಾಲ, ಎಲ್ಲಾ ಭೂತಗಳೂ - ಎಲೈ ದ್ವಿಜನೆ, ಹೀಗೆ (ಈ ನಾಲ್ಕು) **ಸ್ಥಿತಿಗೆ** ನಿಮಿತ್ತವಾಗಿರುವ ವಿಷ್ಣುವಿನ ವಿಭೂತಿಗಳು. (೩) ರುದ್ರನು, ಕಾಲ, ಯಮಾದಿಗಳು, ಮತ್ತು ಸಮಸ್ತಪ್ರಾಣಿಗಳು - (ಹೀಗೆ) ನಾಲ್ಕು ಬಗೆಯಾಗಿರುವ ಇವು ಜನಾರ್ದನನಿಗೆ **ಪ್ರಲಯಕ್ಕೆ** (ಕಾರಣವಾದ) ವಿಭೂತಿಗಳು. ಹೀಗೆಂದು **ವೈಷ್ಣವಪುರಾಣದಲ್ಲಿದೆ.**

## (ಭಾಷ್ಯ)

೧೩೮. ವ್ಯೂಹ್ಯಾತ್ಮಾನಂ ಚತುರ್ಧಾ ವೈ ವಾಸುದೇವಾದಿಭೂತಿಭಿಃ।
ಸೃಷ್ಟ್ಯಾದೀನ್ ಪ್ರಕರೋತ್ಯೇಷ ವಿಶ್ರುತಾತ್ಮಾ ಜನಾರ್ದನಃ॥

ಇತಿ ವ್ಯಾಸವಚನಾತ್, ಚತುರ್ವ್ಯೂಹಃ। ೧೩೯. ದಂಷ್ಟ್ರಾಃ ಚತಸ್ರೋ ಯಸ್ಯೇತಿ ಚತುರ್ದಂಷ್ಟ್ರಃ। ನೃಸಿಂಹವಿಗ್ರಹಃ। ಯದ್ವಾ ಸಾದೃಶ್ಯಾತ್ ಶೃಙ್ಗಂ 'ದಂಷ್ಟ್ರಾ' ಇತ್ಯುಚ್ಯತೇ 'ಚತ್ವಾರಿ ಶೃಙ್ಗಾ' (ಋ. ೪-೫೮-೩) ಇತಿ ಶ್ರುತೇಃ। ೧೪೦. ಚತ್ವಾರೋ ಭುಜಾ ಅಸ್ಯ ಇತಿ ಚತುರ್ಭುಜಃ ॥೨೮॥

## (ಭಾಷ್ಯಾರ್ಥ)

ತನ್ನನ್ನು ವಾಸುದೇವನೇ ಮುಂತಾದ ವಿಭೂತಿಗಳಾಗಿ ನಾಲ್ಕು ಪ್ರಕಾರವಾಗಿ ವಿಂಗಡಿಸಿಕೊಂಡು, ಪ್ರಖ್ಯಾತರೂಪನಾದ ಜನಾರ್ದನನು ಈ ಸೃಷ್ಟ್ಯಾದಿಗಳನ್ನು

ಮಾಡುತ್ತಾನೆ; (?) ಎಂದು ವ್ಯಾಸವಚನವಿರುವದರಿಂದ[1] **ಚತುರ್ವ್ಯೂಹನು.** ದ್ರಂಷ್ಟ್ರ (ಕೋರೆದಾಡೆ) ಗಳು ನಾಲ್ಕು ಈತನಿಗೆ ಇವೆಯಾದ್ದರಿಂದ **ಚತುರ್ದಂಷ್ಟ್ರನು.** ನರಸಿಂಹಶರೀರದವನು, ಅಥವಾ (ಕೋರೆದಾಡೆಗೆ) ಸಮಾನವಾಗಿರುವದರಿಂದ ಕೋಡು 'ದಂಷ್ಟ್ರಾ' ಎಂಬ ಮಾತಿನಿಂದ ಇಲ್ಲಿ ಹೇಳಲ್ಪಟ್ಟಿದೆ. 'ನಾಲ್ಕು ಶೃಂಗಗಳು (ಈತನಿಗೆ)' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ). ನಾಲ್ಕು ತೋಳುಗಳು ಈತನಿಗೆ ಇರುವದರಿಂದ (ಈತನು) **ಚತುರ್ಭುಜನು.**

**ಭ್ರಾಜಿಷ್ಣುರ್ಭೋಜನಂ ಭೋಕ್ತಾ ಸಹಿಷ್ಣುರ್ಜಗದಾದಿಜಃ।**
**ಅನಘೋ ವಿಜಯೋ ಜೇತಾ ವಿಶ್ವಯೋನಿಃ ಪುನರ್ವಸುಃ ॥೨೯॥**

(ಭಾಷ್ಯ)

೧೪೧. ಪ್ರಕಾಶೈಕರಸತ್ವಾತ್ ಭ್ರಾಜಿಷ್ಣುಃ। ೧೪೨. ಭೋಜ್ಯರೂಪತಯಾ ಪ್ರಕೃತಿರ್ಮಾಯಾ 'ಭೋಜನಮ್' ಇತ್ಯುಚ್ಯತೇ। ೧೪೩. ಪುರುಷರೂಪೇಣ ತಾಂ ಭುಙ್ಕ್ತೇ ಇತಿ ಭೋಕ್ತಾ। ೧೪೪. ಹಿರಣ್ಯಾಕ್ಷಾದೀನ್ ಸಹತೇ ಅಭಿವತೀತಿ ಸಹಿಷ್ಣುಃ। ೧೪೫. ಹಿರಣ್ಯಗರ್ಭರೂಪೇಣ ಜಗದಾದೌ ಉತ್ಪದ್ಯತೇ ಸ್ವಯಮ್ - ಇತಿ ಜಗದಾದಿಜಃ॥

(ಭಾಷ್ಯಾರ್ಥ)

(ಚಿನ್ಮಾತ್ರ) ಪ್ರಕಾಶವೊಂದೇ ಈತನ ಸ್ವರೂಪವಾದ್ದರಿಂದ **ಭ್ರಾಜಿಷ್ಣು.** ಭೋಜ್ಯರೂಪದಿಂದ[2] ಪ್ರಕೃತಿಯು (ಅಥವಾ) ಮಾಯೆಯು '**ಭೋಜನ**' ವೆನಿಸಿರುತ್ತದೆ; ಆ ಪ್ರಕೃತಿಯನ್ನು ಪುರುಷರೂಪದಿಂದ ಭುಂಜಿಸುತ್ತಾನಾದ್ದರಿಂದ **ಭೋಕ್ತ**ನಿವನು. ಹಿರಣ್ಯಾಕ್ಷನೇ ಮುಂತಾದವರನ್ನು (ಸಹತೇ) ಸೋಲಿಸುತ್ತಾನಾದ್ದರಿಂದ **ಸಹಿಷ್ಣು.** ಹಿರಣ್ಯಗರ್ಭನ ರೂಪದಿಂದ ಜಗತ್ತಿನ (ಸೃಷ್ಟಿಯ) ಆದಿಯಲ್ಲಿ ತಾನೇ ಹುಟ್ಟುತ್ತಾನೆ; ಆದ್ದರಿಂದ **ಜಗದಾದಿಜನು.**

(ಭಾಷ್ಯ)

೧೪೬. ಅಘಂ ನ ವಿದ್ಯತೇ ಅಸ್ಯ ಇತಿ ಅನಘಃ। 'ಅಪಹತಪಾಪ್ಮಾ' (ಛಾಂ. ೮-೭-೧) ಇತಿ ಶ್ರುತೇಃ। ೧೪೭. ವಿಜಯತೇ ಜ್ಞಾನವೈರಾಗ್ಯೈಶ್ವರ್ಯಾದಿ-ಭಿರ್ಗುಣೈರ್ವಿಶ್ವಮ್ ಇತಿ ವಿಜಯಃ। ೧೪೮. ಯತೋ ಜಯತಿ ಅತಿಶೇತೇ ಸರ್ವಭೂತಾನಿ ಸ್ವಭಾವತಃ; ಅತಃ, ಜೇತಾ। ೧೪೯. ವಿಶ್ವಂ ಯೋನಿಃ ಯಸ್ಯ

1. ಈ ವಚನವು ಯಾವ ಪುರಾಣದಲ್ಲಿಯೋ ತಿಳಿಯಲಿಲ್ಲ. ವ್ಯಾಖ್ಯಾನದಲ್ಲಿ 'ಮಾರ್ಕಂಡೇಯಪುರಾಣದಲ್ಲಿ ವ್ಯೂಹವನ್ನು ಹೇಳಿದ ಬಳಿಕ ಸೃಷ್ಟ್ಯಾದಿಗಳನ್ನು ವಿವರಿಸಿದೆ' ಎಂದಿಷ್ಟೇ ಇದೆ.
2. 'ಭೋಜ್ಯ' ಎಂಬುದು ಭಕ್ಷ್ಯವೆಂಬರ್ಥದಲ್ಲಿ ಬರುತ್ತದೆ - ಎಂದು ವ್ಯಾಕರಣ; ಇಲ್ಲಿ 'ಭೋಗ್ಯ'ವೆಂಬರ್ಥದಲ್ಲಿ ಇದನ್ನು ಪ್ರಯೋಗಿಸಿದೆ ಎಂದು ಭಾಷ್ಯಕಾರರ ಅಭಿಪ್ರಾಯ ಇದ್ದಿರಬಹುದು.

ವಿಶ್ವಶ್ಚ ಅಸೌ ಯೋನಿಶ್ಚ ಇತಿ ವಾ **ವಿಶ್ವಯೋನಿಃ**। ೧೫೦. ಪುನಃ ಪುನಃ ಶರೀರೇಷು ವಸತಿ ಕ್ಷೇತ್ರಜ್ಞರೂಪೇಣ ಇತಿ **ಪುನರ್ವಸುಃ**॥೨೯॥

(ಭಾಷ್ಯಾರ್ಥ)

ಅಘವು (ಎಂದರೆ ಪುಣ್ಯಪಾಪಲಕ್ಷಣವಾದದ್ದು) ಈತನಿಗೆ ಇಲ್ಲವಾದ್ದರಿಂದ **ಅನಘನು**. 'ಅಪಹತಪಾಪ್ಮನು' ಎಂದು ಶ್ರುತಿಯಿದೆ. ಜ್ಞಾನ, ವೈರಾಗ್ಯ, ಐಶ್ವರ್ಯ - ಮುಂತಾದ (ಗುಣಗಳಿಂದ) ಎಲ್ಲವನ್ನೂ ಗೆದ್ದು (ಮೀರಿರುವನು); ಆದ್ದರಿಂದ **ವಿಜಯನು**. ಸ್ವಭಾವದಿಂದಲೇ ಸರ್ವಪ್ರಾಣಿಗಳಿಗಿಂತಲೂ (ಅತಿಶೇತೇ) ಮಿಗಿಲಾಗಿರುತ್ತಾನೆ. ಆದ್ದರಿಂದ **ಜೇತೃ**. ವಿಶ್ವವು ಈತನಿಗೆ ಯೋನಿ, ಅಥವಾ ವಿಶ್ವವೂ (ಎಲ್ಲವೂ) ಯೋನಿಯೂ (ಕಾರಣರೂಪನೂ) ಆಗಿರುವದರಿಂದ **ವಿಶ್ವಯೋನಿ**. ಮತ್ತೆ ಮತ್ತೆ ಶರೀರಗಳಲ್ಲಿ ಕ್ಷೇತ್ರಜ್ಞರೂಪದಿಂದ ವಾಸಮಾಡಿಕೊಂಡಿರುತ್ತಾನೆ; ಆದ್ದರಿಂದ (ಈತನು) **ಪುನರ್ವಸು** ॥೨೯॥

**ಉಪೇನ್ದ್ರೋ ವಾಮನಃ ಪ್ರಾಂಶುರಮೋಘಃ ಶುಚಿರೂರ್ಜಿತಃ।**
**ಅತೀನ್ದ್ರಃ ಸಙ್ಗ್ರಹಃ ಸರ್ಗೋ ಧೃತಾತ್ಮಾ ನಿಯಮೋ ಯಮಃ॥ ॥೩೦॥**

(ಭಾಷ್ಯ)

೧೫೧. ಇನ್ದ್ರಮುಪಗತಃ, ಅನುಜತ್ವೇನ - ಇತಿ **ಉಪೇನ್ದ್ರಃ**। ಯದ್ವಾ ಉಪರಿ ಇನ್ದ್ರಃ, **ಉಪೇನ್ದ್ರಃ**।

ಮಮೋಪರಿ ಯಥೇನ್ದ್ರಸ್ತ್ವಂ ಸ್ಥಾಪಿತೋ ಗೋಭಿರೀಶ್ವರಃ।
ಉಪೇನ್ದ್ರ ಇತಿ ಕೃಷ್ಣ ತ್ವಾಂ ಗಾಸ್ಯನ್ತಿ ಭುವಿ ದೇವತಾಃ॥

ಹರಿ.೨-೧೯-೪೯

**ಇತಿ ಹರಿವಂಶೇ**॥ ೧೫೨. ಬಲಿಂ ವಾಮನರೂಪೇಣ ಯಾಚಿತವಾನ್ ಇತಿ **ವಾಮನಃ**। ಸಂಭಜನೀಯ ಇತಿ ವಾ **ವಾಮನಃ**। 'ಮಧ್ಯೇ ವಾಮನಮಾಸೀನಂ ವಿಶ್ವೇ ದೇವಾ ಉಪಾಸತೇ' (ಕಾ. ೪-೩) ಇತಿ ಮನ್ತ್ರವರ್ಣಾತ್। ೧೫೩. ಸ ಏವ ಜಗತ್ತ್ರಯಂ ಕ್ರಮಮಾಣಃ ಪ್ರಾಂಶುರಭೂತ್ ಇತಿ **ಪ್ರಾಂಶುಃ**॥

ತೋಯೇ ತು ಪತಿತೇ ಹಸ್ತೇ ವಾಮನೋಽಭೂದವಾಮನಃ।
ಸರ್ವದೇವಮಯಂ ರೂಪಂ ದರ್ಶಯಾಮಾಸ ವೈ ಪ್ರಭುಃ॥
ಭೂಃ ಪಾದೌ ದ್ಯೌಃ ಶಿರಶ್ಚಾಸ್ಯ ಚನ್ದ್ರಾದಿತ್ಯೌ ಚ ಚಕ್ಷುಷೀ॥

ಹರಿ. ೩-೭೧-೪೩,೪೪

ಇತ್ಯಾದಿ ವಿಶ್ವರೂಪಂ ದರ್ಶಯಿತ್ವಾ
ತಸ್ಯ ವಿಕ್ರಮತೋ ಭೂಮಿಂ ಚನ್ದ್ರಾದಿತ್ಯೌ ಸ್ತನಾನ್ತರೇ।

ನಭಃ ಪ್ರಕ್ರಮಮಾಣಸ್ಯ ಜಾನುಮೂಲೇ ವ್ಯವಸ್ಥಿತೌ॥ ಹರಿ. ೩-೭೨-೪೯

ಇತಿ ಪ್ರಾಂಶುತ್ವಂ ದರ್ಶಯತಿ ಹರಿವಂಶೇ। ೧೫೪. ನ ಮೋಘಂ ಚೇಷ್ಟಿತಂ ಯಸ್ಯ ಸಃ **ಅಮೋಘಃ**। ೧೫೫. ಸ್ಮರತಾಂ ಸ್ತುವತಾಮ್ ಅರ್ಚಯತಾಂ ಚ ಪಾವನತ್ವಾತ್ **ಶುಚಿಃ**। 'ಅಸ್ಪರ್ಶಶ್ಚ ಮಹಾನ್ ಶುಚಿಃ, (?) ಇತಿ ಮನ್ತ್ರವರ್ಣಾತ್। ೧೫೬. ಬಲಪ್ರಕರ್ಷಶಾಲಿತ್ವಾತ್ **ಊರ್ಜಿತಃ**॥

## (ಭಾಷ್ಯಾರ್ಥ)

ಇಂದ್ರನ ತಮ್ಮನಾಗಿ (ಅವನನ್ನು) ಸಮೀಪಿಸಿದ್ದರಿಂದ **ಉಪೇಂದ್ರನು** ಅಥವಾ (ಉಪರಿ) ಮೇಲಿರುವ ಇಂದ್ರನು ಉಪೇಂದ್ರನು. 'ನನ್ನ ಮೇಲೆ ನೀನು (ಗೋಲೋಕವಾಸಿಗಳಾದ) ಗೋಗಳಿಂದ ಇಂದ್ರನೆಂದೂ, (ನನಗೂ) ಒಡೆಯನೆಂದೂ ಪ್ರತಿಷ್ಠಿತವಾಗಿರುವೆಯಲ್ಲದೆ, ಈ ಕಾರಣದಿಂದ ಎಲೈ ಕೃಷ್ಣನೆ, ನಿನ್ನನ್ನು **ಉಪೇಂದ್ರ** ಎಂದು ದೇವತೆಗಳು ಭೂಲೋಕದಲ್ಲಿ (ಇನ್ನು ಮುಂದೆ) ಗಾನಮಾಡುತ್ತಿರುವರು' ಎಂದು **ಹರಿವಂಶ**ದಲ್ಲಿ (ಇಂದ್ರನ ವಚನ). ಬಲಿಯನ್ನು ವಾಮನರೂಪದಿಂದ (ಭೂಮಿಯನ್ನು) ಬೇಡಿದ್ದರಿಂದ **ವಾಮನನು**. ಅಥವಾ ಉತ್ತಮನೆಂದು ಭಜನೆಮಾಡುವದಕ್ಕೆ ಯೋಗ್ಯನಾಗಿರುವದರಿಂದ **ವಾಮನನು**. ಏಕೆಂದರೆ 'ನಡುವೆ ಕುಳಿತಿರುವ ವಾಮನನನ್ನು ವಿಶ್ವೇದೇವತೆಗಳು ಉಪಾಸನೆಮಾಡುತ್ತಿರುವರು' ಎಂಬ **ಮಂತ್ರವರ್ಣ**ವಿರುವದರಿಂದ (ಈ ಅರ್ಥ). (ವಾಮನನೇ) ಮೂರು ಜಗತ್ತನ್ನೂ ವ್ಯಾಪಿಸಿದ್ದರಿಂದ 'ಪ್ರಾಂಶು'(ಎತ್ತರ)ವಾದನು; ಆದ್ದರಿಂದ **ಪ್ರಾಂಶು**. 'ಕೈಗೆ ನೀರು ಬೀಳಲಾಗಿ ವಾಮನನು ಅವಾಮನನಾದನು. ಆಗ ಸರ್ವದೇವತಾಮಯವಾದ ರೂಪವನ್ನು ಪ್ರಭುವು ತೋರಿಸಿದನು. ಭೂಮಿಯು ಹೆಜ್ಜೆಗಳು, ಅಂತರಿಕ್ಷವೇ ಈತನ ತಲೆ, ಚಂದ್ರಸೂರ್ಯರುಗಳು (ಎರಡು) ಕಂಗಳು' ಎಂದು ಮುಂತಾಗಿ ವಿಶ್ವರೂಪವನ್ನು ತಿಳಿಯಿಸಿದ ಬಳಿಕ '(ಹೀಗೆ) ಬೆಳೆದು ಭೂಮಿಯನ್ನು ಅಳೆದುಕೊಂಡ ಆತನಿಗೆ ಚಂದ್ರಸೂರ್ಯರು ಸ್ತನಗಳ ನಡುವೆ (ಯಾದರು). ಆಕಾಶವನ್ನು ಅಳೆದಾಗ (ಅವರು) ಹೊಕ್ಕಳಿನಲ್ಲಿದ್ದರು; ದ್ಯುಲೋಕವನ್ನು ಅಳೆದಾಗ ಅವರು (ಆತನ) ಮೊಳಕಾಲುಬುಡದಲ್ಲಿದ್ದರು' ಎಂದು ಪ್ರಾಂಶು (ಎತ್ತರ)ವಾದದ್ದನ್ನು ಹರಿವಂಶದಲ್ಲಿ ತಿಳಿಯಿಸಿದೆ. ಯಾವನ ವ್ಯಾಪಾರವು ವ್ಯರ್ಥವಲ್ಲವೋ ಆತನು **ಅಮೋಘನು**. ಸ್ಮರಿಸಿದವರನ್ನೂ ಸ್ತುತಿಸುವವರನ್ನೂ ಅರ್ಚನೆಮಾಡುವವರನ್ನೂ ಪಾವನಗೊಳಿಸುವದರಿಂದ **ಶುಚಿ**. 'ಈತನ ಸ್ಪರ್ಶವೂ ಬಹಳ ಶುಚಿ' (?) ಎಂದು ಮಂತ್ರವರ್ಣವಿದೆ. ಹೆಚ್ಚಿನ ಬಲವುಳ್ಳವನಾದ್ದರಿಂದ **ಊರ್ಜಿತನು**.

## (ಭಾಷ್ಯ)

೧೫೭. ಅತೀತ್ಯ ಇನ್ದ್ರಂ ಸ್ಥಿತಃ, ಜ್ಞಾನೈಶ್ವರ್ಯಾದಿಭಿಃ ಸ್ವಭಾವಸಿದ್ಧೈಃ - ಇತಿ **ಅತೀನ್ದ್ರಃ**। ೧೫೮. ಸರ್ವೇಷಾಂ ಪ್ರತಿಸಂಹಾರಾತ್ **ಸಙ್ಗ್ರಹಃ**।

೧೫೯. ಸೃಜ್ಯರೂಪತಯಾ, ಸರ್ಗಹೇತುತ್ವಾದ್ ವಾ ಸರ್ಗಃ। ೧೬೦. ಏಕರೂಪೇಣ ಜನ್ಮಾದಿರಹಿತತಯಾ ಧೃತಃ ಆತ್ಮಾ ಯೇನ ಸಃ ಧೃತಾತ್ಮಾ। ೧೬೧. ಸ್ವೇಷು ಸ್ವೇಷು ಅಧಿಕಾರೇಷು ಪ್ರಜಾ ನಿಯಮಯತಿ ಇತಿ ನಿಯಮಃ। ೧೬೨. ಅನ್ತರ್ಯಚ್ಛತಿ ಇತಿ ಯಮಃ॥೩೦॥

## (ಭಾಷ್ಯಾರ್ಥ)

ಸ್ವಭಾವದಿಂದಲೇ ಇದ್ದುಕೊಂಡಿರುವ ಜ್ಞಾನ, ಐಶ್ವರ್ಯ - ಮುಂತಾದ (ಗುಣ)ಗಳಿಂದ ಇಂದ್ರನನ್ನು ಮೀರಿರುತ್ತಾನೆ. ಆದ್ದರಿಂದ **ಅತೀಂದ್ರನು.** ಎಲ್ಲರನ್ನೂ (ಪ್ರಲಯದಲ್ಲಿ) ತನ್ನೊಳಕ್ಕೆ ಸೇರಿಸಿಕೊಳ್ಳುವದರಿಂದ **ಸಂಗ್ರಹನು.** ಸೃಜಿಸಲ್ಪಡುವ (ಕರ್ಮ) ರೂಪದಿಂದ ಇರುವದರಿಂದ ಅಥವಾ ಸೃಷ್ಟಿಗೆ ಕಾರಣನಾಗಿರುವದರಿಂದ **ಸರ್ಗನು.** ಜನ್ಮವೇ ಮುಂತಾದವುಗಳಿಲ್ಲದೆ ಒಂದೇ ರೂಪದಿಂದ (ತನ್ನ) ರೂಪವನ್ನು ಧರಿಸಿಕೊಂಡಿರುವ ರೂಪವು ಯಾವಾತನದೋ ಅವನು **ಧೃತಾತ್ಮನು.** ತಮ್ಮ ತಮ್ಮ ಅಧಿಕಾರದ (ಸ್ಥಾನಗಳಲ್ಲಿ) ಪ್ರಜೆಗಳನ್ನು ಗೊತ್ತುಮಾಡಿಟ್ಟಿರುತ್ತಾನೆ. ಆದ್ದರಿಂದ **ನಿಯಮನು.** ಒಳಗಿದ್ದು ಕಟ್ಟಿನಲ್ಲಿಡುತ್ತಾನಾದ್ದರಿಂದ **ಯಮನು.**

**ವೇದ್ಯೋ ವೈದ್ಯಃ ಸದಾಯೋಗೀ ವೀರಹಾ ಮಾಧವೋ ಮಧುಃ।**
**ಅತೀನ್ದ್ರಿಯೋ ಮಹಾಮಾಯೋ ಮಹೋತ್ಸಾಹೋ ಮಹಾಬಲಃ॥ ॥೩೧॥**

## (ಭಾಷ್ಯ)

೧೬೩. ನಿಃಶ್ರೇಯಸಾರ್ಥಿಭಿರ್ವೇದನಾರ್ಹತ್ವಾದ್ ವೇದ್ಯಃ। ೧೬೪. ಸರ್ವವಿದ್ಯಾನಾಂ ವೇದಿತೃತ್ವಾತ್ ವೈದ್ಯಃ। ೧೬೫. ಸದಾ ಆವಿರ್ಭೂತಸ್ವರೂಪತ್ವಾತ್ ಸದಾಯೋಗೀ। ೧೬೬. ಧರ್ಮತ್ರಾಣಾಯ ವೀರಾನ್ ಅಸುರಾನ್ ಹನ್ತಿ ಇತಿ ವೀರಹಾ। ೧೬೭. ಮಾಯಾಃ ವಿದ್ಯಾಯಾಃ ಪತಿಃ ಮಾಧವಃ। 'ಮಾ ವಿದ್ಯಾ ಚ ಹರೇಃ ಪ್ರೋಕ್ತಾ ತಸ್ಯಾ ಈಶೋ ಯತೋ ಭವಾನ್। ತಸ್ಮಾನ್ಮಾಧವನಾಮಾಸಿ ಧವಃ ಸ್ವಾಮೀತಿ ಶಬ್ದಿತಃ' (ಹರಿ. ೩-೮೮-೪೯) ಇತಿ ಹರಿವಂಶೇ। ೧೬೮. ಯಥಾ ಮಧು ಪರಾಂ ಪ್ರೀತಿಮ್ ಉತ್ಪಾದಯತಿ ಅಯಮಪಿ ತಥಾ ಇತಿ ಮಧುಃ॥

## (ಭಾಷ್ಯಾರ್ಥ)

ನಿಃಶ್ರೇಯಸ (ಮೋಕ್ಷ)ವನ್ನು ಬಯಸುವವರು ಅರಿತುಕೊಳ್ಳುವದಕ್ಕೆ ತಕ್ಕವನಾದ್ದರಿಂದ **ವೇದ್ಯನು.** ಎಲ್ಲಾ ವಿದ್ಯೆಗಳನ್ನೂ ಬಲ್ಲವನಾದ್ದರಿಂದ **ವೈದ್ಯನು.** ಸದಾ (ಯಾವಾಗಲೂ) ಹೊರತೋರಿಕೊಂಡ ಸ್ವರೂಪನೇ ಆಗಿರುವದರಿಂದ **ಸದಾಯೋಗಿಯು.** ಧರ್ಮವನ್ನು ಕಾಪಾಡುವದಕ್ಕಾಗಿ ವೀರರಾದ ಅಸುರರನ್ನು ಕೊಲ್ಲುತ್ತಾನೆ; ಆದ್ದರಿಂದ **ವೀರಹಾ** (ಎನಿಸಿರುತ್ತಾನೆ). ಮಾ ಎಂದರೆ ವಿದ್ಯೆಗೆ ಪತಿಯಾದವನು **ಮಾಧವನು.** 'ಮಾ' ಎಂಬುದು ಹರಿಯ ವಿದ್ಯೆಯನ್ನು ಹೇಳುತ್ತದೆ; ಆ (ವಿದ್ಯೆಗೆ) ನೀನು ಈಶ

(ಒಡೆಯ)ನಾಗಿರುವೆ, ಆದ್ದರಿಂದ ಮಾಧವನೆಂಬ ಹೆಸರುಳ್ಳವನಾಗಿರುವೆ. ಧವನೆಂದರೆ ಸ್ವಾಮಿ ಎಂದರ್ಥ.' ಎಂದು **ಹರಿವಂಶದಲ್ಲಿದೆ.** ಹೇಗೆ ಮಧು (ಜೇನುತುಪ್ಪ)ವು ಹೆಚ್ಚು ಸಂತೋಷವನ್ನುಂಟುಮಾಡುವದೋ, ಈತನೂ ಹಾಗೆಯೇ. ಆದ್ದರಿಂದ (ಈತನು) **ಮಧುವು.**

## (ಭಾಷ್ಯ)

೧೬೯. ಶಬ್ದಾದಿರಹಿತತ್ವಾತ್ ಇನ್ದ್ರಿಯಾಣಾಮ್ ಅವಿಷಯಃ ಇತಿ ಅತೀನ್ದ್ರಿಯಃ। 'ಅಶಬ್ದಮಸ್ಪರ್ಶಮ್ .....' (ಕಾ. ೩-೧೫) ಇತಿ ಶ್ರುತೇಃ। ೧೭೦. ಮಾಯಾವಿನಾಪಿ ಮಾಯಾಕಾರಿತ್ವಾತ್ ಮಹಾಮಾಯಃ। 'ಮಮ ಮಾಯಾ ದುರತ್ಯಯಾ' (ಗೀ. ೭-೧೪) ಇತಿ ಭಗವದ್ವಚನಾತ್। ೧೭೧. ಜಗದುತ್ಪತ್ತಿಸ್ಥಿತಿಲಯಾರ್ಥಮುದ್ಯುಕ್ತತ್ವಾತ್ ಮಹೋತ್ಸಾಹಃ। ೧೭೨. ಬಲಿನಾಮಪಿ ಬಲವತ್ತ್ವಾತ್ ಮಹಾಬಲಃ ॥೩೧॥

## (ಭಾಷ್ಯಾರ್ಥ)

ಶಬ್ದಾದಿಗಳಿಲ್ಲದವನಾದ್ದರಿಂದ ಇಂದ್ರಿಯಗಳಿಗೆ (ಈತನು) ವಿಷಯನಲ್ಲ; ಆದ್ದರಿಂದ **ಅತೀಂದ್ರಿಯನು.** 'ಶಬ್ದವಿಲ್ಲದ್ದು, ಸ್ಪರ್ಶವಿಲ್ಲದ್ದು' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ). ಮಾಯಾವಿಗಳಿಗೂ ಮಾಯೆಯನ್ನು ಮಾಡುವಾತನಾದ್ದರಿಂದ **ಮಹಾಮಾಯನು.** 'ನನ್ನ ಮಾಯೆ ದಾಟುವದಕ್ಕೆ ಅಶಕ್ಯವಾದದ್ದು' ಎಂಬ **ಭಗವಂತನ** ವಚನವಿರುವದರಿಂದ (ಈ ಅರ್ಥ). ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ - ಇವುಗಳಿಗೋಸ್ಕರ ಉದ್ಯುಕ್ತನಾಗಿರುವದರಿಂದ **ಮಹೋತ್ಸಾಹನು.**[1] ಬಲಶಾಲಿಗಳೆಲ್ಲರಿಗಿಂತಲೂ ಹೆಚ್ಚಿನ ಬಲವುಳ್ಳವನಾದ್ದರಿಂದ **ಮಹಾಬಲನು.** ॥೩೧॥

**ಮಹಾಬುದ್ಧಿರ್ಮಹಾವೀರ್ಯೋ ಮಹಾಶಕ್ತಿರ್ಮಹಾದ್ಯುತಿಃ।**
**ಅನಿರ್ದೇಶ್ಯವಪುಃ ಶ್ರೀಮಾನಮೇಯಾತ್ಮಾ ಮಹಾದ್ರಿಧೃಕ್ ॥೩೨॥**

## (ಭಾಷ್ಯ)

೧೭೩. ಬುದ್ಧಿಮತಾಮಪಿ ಬುದ್ಧಿಮತ್ತ್ವಾತ್ ಮಹಾಬುದ್ಧಿಃ। ೧೭೪. ಮಹತ್ ಉತ್ಪತ್ತಿಕಾರಣಮ್ ಅವಿದ್ಯಾಲಕ್ಷಣಂ ವೀರ್ಯಮ್ ಅಸ್ಯ ಇತಿ ಮಹಾವೀರ್ಯಃ। ೧೭೫. ಮಹತೀ ಶಕ್ತಿಃ ಸಾಮರ್ಥ್ಯಮಸ್ಯ ಇತಿ ಮಹಾಶಕ್ತಿಃ। ೧೭೬. ಮಹತೀ ದ್ಯುತಿಃ, ಬಾಹ್ಯಾ ಅಭ್ಯನ್ತರಾ ಚ ಅಸ್ಯ ಇತಿ ಮಹಾದ್ಯುತಿಃ। 'ಸ್ವಯಂಜ್ಯೋತಿಃ' (ಬೃ. ೪-೩-೯), 'ಜ್ಯೋತಿಷಾಂ ಜ್ಯೋತಿಃ' (ಬೃ. ೪-೪-೧೬) ಇತ್ಯಾದಿಶ್ರುತೇಃ॥

1. 'ಲೋಕವತ್ತು ಲೀಲಾಕೈವಲ್ಯಮ್' (ಸೂ.ಭಾ.೨-೧-೩೩) ಎಂಬ ಸೂತ್ರದ ಭಾಷ್ಯಕ್ಕೆ ಇದನ್ನು ಹೇಗೆ ಹೊಂದಿಸಬೇಕೆಂಬುದನ್ನು ಪಂಡಿತರು ನಿರ್ಧರಿಸಬೇಕು.

(ಭಾಷ್ಯಾರ್ಥ)

ಬುದ್ಧಿವಂತರಿಗಿಂತಲೂ ಬುದ್ಧಿವಂತನಾದ್ದರಿಂದ **ಮಹಾಬುದ್ಧಿಯು.** ಮಹತ್ತಾದ ಉತ್ಪತ್ತಿಗೆ ಕಾರಣವಾದ **ಅವಿದ್ಯಾಸ್ವರೂಪ**ವಾದ[1] ವೀರ್ಯವು ಈತನದಾದ್ದರಿಂದ **ಮಹಾವೀರ್ಯನು.** ಮಹತ್ತಾದ ಶಕ್ತಿಯು ಎಂದರೆ ಸಾಮರ್ಥ್ಯವು ಈತನದು, ಆದ್ದರಿಂದ **ಮಹಾಶಕ್ತಿಯು.** ಒಳಗೂ ಹೊರಗೂ ಇರುವ ದ್ಯುತಿ (ಕಾಂತಿ)ಯು ಈತನಿಗೆ ಇದೆಯಾದ್ದರಿಂದ (ಈತನು) **ಮಹಾದ್ಯುತಿಯು.** 'ಸ್ವಯಂಜ್ಯೋತಿಯು' 'ಜ್ಯೋತಿಗಳೆಲ್ಲಕ್ಕೂ ಜ್ಯೋತಿಯು' ಮುಂತಾದ ಶ್ರುತಿಗಳು (ಇಲ್ಲಿ ಪ್ರಮಾಣವು).

(ಭಾಷ್ಯ)

೧೭೭. ಇದಂ ತತ್ ಇತಿ ನಿರ್ದೇಷ್ಟುಂ ಯನ್ನ ಶಕ್ಯತೇ ಪರಸ್ಮೈ, ಸ್ವಸಂವೇದ್ಯತ್ವಾತ್, ತತ್ ಅನಿರ್ದೇಶ್ಯಂ ವಪುಃ, ಅಸ್ಯ - ಇತಿ ಅನಿರ್ದೇಶ್ಯವಪುಃ। ೧೭೮. ಐಶ್ವರ್ಯಲಕ್ಷಣಾ ಸಮಗ್ರಾ ಶ್ರೀರ್ಯಸ್ಯ ಸ ಶ್ರೀಮಾನ್। ೧೭೯. ಸರ್ವೈಃ ಪ್ರಾಣಿಭಿರಮೇಯಾ ಬುದ್ಧಿರಾತ್ಮಾ ಯಸ್ಯ ಸಃ ಅಮೇಯಾತ್ಮಾ। ೧೮೦. ಮಹಾನ್ತಮದ್ರಿಂ ಗಿರಿಂ ಮನ್ದರಂ ಗೋವರ್ಧನಂ ಚ ಅಮೃತಮಥನೇ ಗೋರಕ್ಷಣೇ ಚ ಧೃತವಾನ್ ಇತಿ ಮಹಾದ್ರಿಧೃಕ್। ಷಾನ್ತೋಽಯಮ್॥

(ಭಾಷ್ಯಾರ್ಥ)

ತನ್ನ ಅನುಭವಕ್ಕೆ (ಮಾತ್ರ) ತಿಳಿಯಬರುವದಾದ್ದರಿಂದ 'ಅದು ಇಂಥದ್ದು' ಎಂದು ಮತ್ತೊಬ್ಬರಿಗೆ ಯಾವದನ್ನು ಗೊತ್ತುಪಡಿಸಿ ಹೇಳಲು ಆಗುವಂತಿಲ್ಲವೋ ಅದು ಅನಿರ್ದೇಶ್ಯವು; (ಅಂಥ) ವಪು (ಶರೀರವು) ಈತನಿಗೆ ಇದೆಯಾದ್ದರಿಂದ (ಈತನು) **ಅನಿರ್ದೇಶ್ಯವಪು**ವು. ಐಶ್ವರ್ಯರೂಪವಾದ ಎಲ್ಲಾ ಶ್ರೀಯು ಯಾವನಿಗೆ ಇದೆಯೋ ಆ (ಈತನು) **ಶ್ರೀಮಾನ್** (ಎನಿಸುತ್ತಾನೆ). ಯಾವ ಜೀವರಿಂದಲೂ ಪ್ರಮಾಣದಿಂದ ಗೊತ್ತುಪಡಿಸಲಾಗದ (ಆತ್ಮವು) ಬುದ್ಧಿಯು ಯಾವಾತನಿಗಿದೆಯೋ ಆ (ಈತನು) **ಅಮೇಯಾತ್ಮನು.** ದೊಡ್ಡದಾದ ಗಿರಿಯನ್ನು ಎಂದರೆ ಬೆಟ್ಟವನ್ನು ಮಂದರವನ್ನೂ ಗೋವರ್ಧನವನ್ನೂ (ಯಥಾಕ್ರಮವಾಗಿ) ಅಮೃತವನ್ನು ಕಡೆದ ಕಾಲದಲ್ಲಿಯೂ, ಗೋವುಗಳನ್ನು ರಕ್ಷಣೆಮಾಡಿದ ಕಾಲದಲ್ಲಿಯೂ (ಈತನು) ಧರಿಸಿರುವನು (ಎತ್ತಿರುವನು); ಆದ್ದರಿಂದ **ಮಹಾದ್ರಿಧೃಕ್** (ಎನಿಸಿರುತ್ತಾನೆ). ಈ (ಮಹಾದ್ರಿಧೃಕ್) ಎಂಬ ಶಬ್ದ ಷಕಾರಾನ್ತವು[2].

**ಮಹೇಷ್ವಾಸೋ ಮಹೀಭರ್ತಾ ಶ್ರೀನಿವಾಸಃ ಸತಾಂ ಗತಿಃ।**
**ಅನಿರುದ್ಧಃ ಸುರಾನನ್ದೋ ಗೋವಿನ್ದೋ ಗೋವಿದಾಂ ಪತಿಃ ॥೩೩॥**

---

1. ಪರಮಾತ್ಮನ ವೀರ್ಯವನ್ನು 'ಅವಿದ್ಯೆ' ಎಂದು ಕರೆದಿರುವದು ಭಾಷ್ಯದಲ್ಲಿಲ್ಲ.
2. ಧೃಕ್, ಧೃಷೌ, ಧೃಷಃ - ಎಂದು ಈ ಶಬ್ದದ ಪ್ರಥಮಾವಿಭಕ್ತಿಯ ರೂಪಗಳು ಎಂದು ಭಾವ.

(ಭಾಷ್ಯ)

೧೮೧. ಮಹಾನ್ ಇಷ್ವಾಸೋ ಇಷುಕ್ಷೇಪೋ ಯಸ್ಯ ಸಃ ಮಹೇಷ್ವಾಸಃ। ೧೮೨. ಏಕಾರ್ಣವಾಪ್ಲುತಾಂ ದೇವೀಂ ಮಹೀಂ ಬಭಾರ ಇತಿ ಮಹೀಭರ್ತಾ। ೧೮೩. ಯಸ್ಯ ವಕ್ಷಸಿ ಅನಪಾಯಿನೀ ಶ್ರೀರ್ವಸತಿ ಸ ಶ್ರೀನಿವಾಸಃ। ೧೮೪. ಸತಾಂ ವೈದಿಕಾನಾಂ ಸಾಧೂನಾಂ ಪುರುಷಾರ್ಥಸಾಧನಹೇತುಃ ಸತಾಂ ಗತಿಃ॥

ಭಾಷ್ಯಾರ್ಥ

ಮಹಾನ್ (ದೊಡ್ಡ, ವ್ಯರ್ಥವಲ್ಲದ), ಇಷ್ವಾಸವು ಎಂದರೆ ಬಾಣವನ್ನು ಬಿಡುವಿಕೆಯು[1] ಯಾವಾತನಿಗೆ ಇದೆಯೋ ಆತನು **ಮಹೇಷ್ವಾಸನು.** ಒಂದೇ ಆದ ಸಮುದ್ರದಲ್ಲಿ ಮುಳುಗಿದ್ದ ಮಹೀದೇವಿಯನ್ನು (ಬಭಾರ) ಎತ್ತಿದನು,[2] ಆದ್ದರಿಂದ **ಮಹೀಭರ್ತಾ** (ಎಂದು ಹೆಸರು). ಯಾವಾತನ ಎದೆಯ ಮೇಲೆ ಎಂದಿಗೂ ಅಗಲದೆ ಇರುವ ಶ್ರೀ (ಲಕ್ಷ್ಮಿ)ಯು ವಾಸಮಾಡಿಕೊಂಡಿರುವಳೋ ಆತನು **ಶ್ರೀನಿವಾಸನು.** ಸಂತರಿಗೆ ಎಂದರೆ ವೈದಿಕಸಾಧುಗಳಿಗೆ ಗತಿ ಎಂದರೆ ಪುರುಷಾರ್ಥಕ್ಕೆ ಕಾರಣ (ನೀತನು. ಆದ್ದರಿಂದ) **ಸತಾಂಗತಿಯು.**

(ಭಾಷ್ಯ)

೧೮೫. ನ ಕೇನಾಪಿ ಪ್ರಾದುರ್ಭಾವೇಷು ನಿರುದ್ಧಃ ಇತಿ ಅನಿರುದ್ಧಃ। ೧೮೬. ಸುರಾನ್ ಆನನ್ದಯತೀತಿ ಸುರಾನನ್ದಃ।

೧೮೭. 'ನಷ್ಟಾಂ ವೈ ಧರಣೀಂ ಪೂರ್ವಮವಿನ್ದಂ ಯದ್ ಗುಹಾಗತಮ್।
ಗೋವಿನ್ದ ಇತಿ ತೇನಾಹಂ ದೇವೈರ್ವಾಗ್ಭಿರಭಿಷ್ಟುತಃ॥
(ಮೋ. ಧ. ೩೪೨-೭೦)

ಇತಿ ಮೋಕ್ಷಧರ್ಮವಚನಾತ್ ಗೋವಿನ್ದಃ।

ಅಹಂ ಕಿಲೇನ್ದ್ರೋ ದೇವಾನಾಂ ತ್ವಂ ಗವಾಮಿನ್ದ್ರತಾಂ ಗತಃ।
ಗೋವಿನ್ದ ಇತಿ ಲೋಕಾಸ್ತ್ವಾಂ ಸ್ತೋಷ್ಯನ್ತಿ ಭುವಿ ಶಾಶ್ವತಮ್॥
(ಹರಿ. ೨-೧೯-೪೫)

ಗೌರೇಷಾ ತು ಯತೋ ವಾಣೀ ತಾಂ ಚ ವಿನ್ದಯತೇ ಭವಾನ್।
ಗೋವಿನ್ದಸ್ತು ತತೋ ದೇವ ಮುನಿಭಿಃ ಕಥ್ಯತೇ ಭವಾನ್॥'
*(ಹರಿ. ೩-೮೮-೫೦)*

*ಇತಿ ಚ ಹರಿವಂಶೇ। ೧೮೮. ಗೌರ್ವಾಣೀ ತಾಂ ವಿದನ್ತೀತಿ ಗೋವಿದಃ, ತೇಷಾಂ ಪತಿಃ ವಿಶೇಷೇಣೇತಿ ಗೋವಿದಾಂ ಪತಿಃ॥೩೩॥*

---

1. 'ಅಸು ಕ್ಷೇಪಣೇ' ಎಂಬ ಧಾತುವಿನಿಂದ 'ಅಸ' ಶಬ್ದವು ಹುಟ್ಟಿದೆಯೆಂದು ಇಟ್ಟುಕೊಂಡು ಈ ಅರ್ಥವನ್ನು ಹೇಳಿದೆ. ದೊಡ್ಡದಾದ ಇಷ್ವಾಸ (ಬಿಲ್ಲು) ಈತನಿಗೆ ಇದೆ ಎಂದೂ ಅರ್ಥವನ್ನು ಮಾಡಬಹುದಾಗಿದೆ ಎಂದು ತೋರುತ್ತದೆ.

2. ಅವಾಂತರಪ್ರಲಯಕಾಲದಲ್ಲಿ ವರಾಹರೂಪದಿಂದ ಭೂಮಿಯನ್ನು ಎತ್ತಿದನು - ಎಂದರ್ಥ.

(ಭಾಷ್ಯಾರ್ಥ)

ಪ್ರಾದುರ್ಭಾವಗಳಲ್ಲಿ ಯಾರಿಂದಲೂ ಅಡ್ಡಿಮಾಡಲ್ಪಡಲಿಲ್ಲವಾದ್ದರಿಂದ (ಈತನು) **ಅನಿರುದ್ಧನು.** ಸುರರನ್ನು ಆನಂದಪಡಿಸುತ್ತಾನಾದ್ದರಿಂದ **ಸುರಾನಂದನು.** 'ಪೂರ್ವದಲ್ಲಿ ಗುಹೆಯನ್ನು ಸೇರಿ ಕಾಣದಾಗಿದ್ದ ಭೂಮಿಯನ್ನು (ಮತ್ತೆ) ಪಡೆದು ತಂದೆನು; ಆದ್ದರಿಂದ ನಾನು ದೇವತೆಗಳಿಂದ 'ಗೋವಿಂದನು' ಎಂದು (ವಿವಿಧ) ವಾಕ್ಕುಗಳಿಂದ ಹೊಗಳಲ್ಪಟ್ಟಿರುತ್ತೇನೆ' ಎಂದು **ಮೋಕ್ಷಧರ್ಮ**ವಚನವಿರುವದರಿಂದ (ಈತನು **ಗೋವಿಂದನು**). 'ನಾನು ದೇವತೆಗಳಿಗೆ ಇಂದ್ರನಷ್ಟೆ? ನೀನು ಗೋಗಳಿಗೆ ಇಂದ್ರನೆಂಬ (ಪದವಿಯನ್ನು) ಪಡೆದುಕೊಂಡೆ, ಆದ್ದರಿಂದ ಜನರು ನಿನ್ನನ್ನು 'ಗೋವಿಂದ'ನೆಂದು ನಿತ್ಯವೂ ಭೂಲೋಕದಲ್ಲಿ ಸ್ತುತಿಸುತ್ತಿರುವರು' ಎಂದೂ 'ಮತ್ತು ಈ ವಾಕ್ಕು ಗೋವೆನಿಸಿದೆ; ಅದನ್ನು ಪಡೆದಿರುವವನು ನೀನು.[1] ಎಲೈ ದೇವನೆ, ಆ ಕಾರಣದಿಂದ ನೀನು ಮುನಿಗಳಿಂದ 'ಗೋವಿಂದ' ಎಂದು ಕರೆಯಲ್ಪಟ್ಟಿರುವೆ' ಎಂದೂ **ಹರಿವಂಶ**ದಲ್ಲಿದೆ. 'ಗೋ' ಎಂದರೆ ವಾಣಿ; ಅದನ್ನು ಪಡೆದುಕೊಂಡವರು ಗೋವಿಂದರು; ಅವರಿಗೆ ವಿಶೇಷವಾಗಿ ಪತಿಯು ನೀನು, ಆದ್ದರಿಂದ **ಗೋವಿದಾಂ-ಪತಿಯು.** ॥೩೩॥

**ಮರೀಚಿರ್ದಮನೋ ಹಂಸಃ ಸುಪರ್ಣೋ ಭುಜಗೋತ್ತಮಃ।**
**ಹಿರಣ್ಯನಾಭಃ ಸುತಪಾಃ ಪದ್ಮನಾಭಃ ಪ್ರಜಾಪತಿಃ ॥೩೪॥**

(ಭಾಷ್ಯ)

೧೮೯. ತೇಜಸ್ವಿನಾಮಪಿ ತೇಜಸ್ತ್ವಾತ್ ಮರೀಚಿಃ। 'ತೇಜಸ್ತೇಜಸ್ವಿನಾಮಹಮ್' (ಗೀ.೭-೧೦) ಇತಿ ಭಗವದ್ವಚನಾತ್। ೧೯೦. ಸ್ವಾಧಿಕಾರಾತ್ ಪ್ರಮಾದ್ಯತೀಃ ಪ್ರಜಾಃ ದಮಯಿತುಂ ಶೀಲಮಸ್ಯ ವೈವಸ್ವತಾದಿರೂಪೇಣ ಇತಿ ದಮನಃ। ೧೯೧. ಅಹಂ ಸಃ ಇತಿ ತಾದಾತ್ಮ್ಯಭಾವಿನಃ ಸಂಸಾರಭಯಂ ಹನ್ತೀತಿ ಹಂಸಃ। ಪೃಷೋದರಾದಿತ್ವಾತ್ ಶಬ್ದಸಾಧುತ್ವಮ್। ಹನ್ತಿ ಗಚ್ಛತಿ ಸರ್ವಶರೀರೇಷು ಇತಿ ವಾ ಹಂಸಃ। 'ಹಂಸಃ ಶುಚಿಷದ್' (ಕಾ. ೫-೨) ಇತಿ ಮನ್ತ್ರವರ್ಣಾತ್ । ೧೯೨. ಶೋಭನಧರ್ಮಾಧರ್ಮರೂಪಪರ್ಣತ್ವಾತ್ ಸುಪರ್ಣಃ। 'ದ್ವಾ ಸುಪರ್ಣಾ' (ಮುಂ. ೩-೧-೧) ಇತಿ ಮನ್ತ್ರವರ್ಣಾತ್। ಶೋಭನಂ ಪರ್ಣಂ ಯಸ್ಯ ಇತಿ ವಾ ಸುಪರ್ಣಃ। 'ಸುಪರ್ಣಃ ಪತತಾಮಸ್ಮಿ' (?) ಇತೀಶ್ವರವಚನಾತ್। ೧೯೩. ಭುಜೇನ ಗಚ್ಛತಾಮುತ್ತಮಃ ಭುಜಗೋತ್ತಮಃ॥

1. ವ್ಯಾಖ್ಯಾನದಲ್ಲಿ 'ವೇದಯತೇ ಭವಾನ್' ಎಂಬ ಪಾಠವು ಉತ್ತಮವೆಂದು ಬರೆದಿದೆ. "ಅದನ್ನು ನೀನು ತಿಳಿದಿರುವೆ" ಎಂದು ಆ ಪಾಠಕ್ಕೆ ಅರ್ಥ.

## (ಭಾಷ್ಯಾರ್ಥ)

ತೇಜಸ್ವಿಗಳಿಗೂ ಇರುವ ತೇಜಸ್ಸಾಗಿರುವದರಿಂದ (ಈತನು) **ಮರೀಚಿಯು.** 'ತೇಜಸ್ವಿಗಳ ತೇಜಸ್ಸು ನಾನು' ಎಂಬ ಭಗವದ್ವಚನದಿಂದ ಇದು ಸಿದ್ಧವಾಗುತ್ತದೆ.[1] ತಮ್ಮ ಅಧಿಕಾರದ (ಕರ್ತವ್ಯವನ್ನು) ಬಿಟ್ಟು, ಎಚ್ಚರಿಕೆಯಿಲ್ಲದೆ (ನಡೆಯುವ) ಪ್ರಜೆಗಳನ್ನು ಯಮನೇ ಮೊದಲಾದವರ ರೂಪದಿಂದ ದಮನಮಾಡುವದರಿಂದ **ದಮನನು.** 'ನಾನು ಆತನು' ಎಂದು ತಾದಾತ್ಮ್ಯದಿಂದ ಭಾವನೆಮಾಡಿದರೆ ಸಂಸಾರ ಭಯವನ್ನು (ಹನ್ತಿ) ನಾಶಮಾಡುತ್ತಾನಾದ್ದರಿಂದ **ಹಂಸನು.** (ಈ ಶಬ್ದವು) ಪೃಷೋದರಾದಿಗಣಕ್ಕೆ ಸೇರಿದ್ದಾದ್ದರಿಂದ ಸಾಧುರೂಪವಿದು. ಎಲ್ಲರ ಶರೀರಗಳಲ್ಲಿಯೂ (ಹನ್ತಿ) ಹೋಗಿರುತ್ತಾನೆ; (ಸಂಚರಿಸುತ್ತಾನೆ) ಎಂಬರ್ಥದಲ್ಲಿ (ಹಂಸ) ಶಬ್ದವು ಬಂದಿದೆ.[2] 'ಹಂಸಃ ಶುಚಿಷದ್' ಎಂಬ ಮಂತ್ರವರ್ಣವು (ಇದಕ್ಕೆ ಪ್ರಮಾಣ).[3] ಮಂಗಲಕರವಾದ ಧರ್ಮಾಧರ್ಮಗಳೆಂಬ 'ಪರ್ಣ' (ಪಕ್ಷ) ಗಳುಳ್ಳವನಾದ್ದರಿಂದ **ಸುಪರ್ಣನು.** 'ಎರಡು ಸುಪರ್ಣಗಳು' ಎಂಬ ಮಂತ್ರವರ್ಣವು ಇದಕ್ಕೆ ಪ್ರಮಾಣ.[4] ಒಳ್ಳೆಯ ಪರ್ಣ (ಪಕ್ಷ)ವು ಯಾವನಿಗೆ ಇದೆಯೋ ಆತನು ಸುಪರ್ಣನು. 'ಸುಪರ್ಣಃ ಪತತಾಮಸ್ಮಿ' (?) 'ಹಾರುವ ಹಕ್ಕಿಗಳಲ್ಲಿ ಸುಪರ್ಣನು ನಾನು'' (?) ಎಂದು **ಈಶ್ವರವಚನ**ವಿರುವದರಿಂದ ಹೀಗೆಂದು ಸಿದ್ಧವಾಗುತ್ತದೆ.[5] ಭುಜದಿಂದ ಹರಿಯುವ (ವಾಸುಕಿ ಮುಂತಾದವರಲ್ಲಿ) ಉತ್ತಮನಾದ್ದರಿಂದ **ಭುಜಗೋತ್ತಮನು.**[6]

## (ಭಾಷ್ಯ)

೧೯೪. ಹಿರಣ್ಯಮಿವ ಕಲ್ಯಾಣೀ ನಾಭಿರಸ್ಯ - ಇತಿ ಹಿರಣ್ಯನಾಭಃ। ಹಿತರಮಣೀಯನಾಭಿತ್ವಾತ್ ವಾ ಹಿರಣ್ಯನಾಭಃ। ೧೯೫. ಬದರಿಕಾಶ್ರಮೇ ನರನಾರಾಯಣರೂಪೇಣ ಶೋಭನಂ ತಪಶ್ಚರತಿ - ಇತಿ ಸುತಪಾಃ। 'ಮನಸಶ್ಚೇನ್ದ್ರಿಯಾಣಾಂ ಚ ಹ್ಯೈಕಾಗ್ರ್ಯಂ ಪರಮಂ ತಪಃ' (ಮೋ.ಧ.೨೫೦-೪) ಇತಿ ಸ್ಮೃತೇಃ। ೧೯೬. ಪದ್ಮಮಿವ ಸುವರ್ತುಲಾ ನಾಭಿರಸ್ಯ ಇತಿ, ಹೃದಯಪದ್ಮಸ್ಯ ಮಧ್ಯೇ ನಾಭೌ ಪ್ರಕಾಶನಾದ್ವಾ ಪದ್ಮನಾಭಃ। ಪೃಷೋದರಾದಿತ್ವಾತ್ ಸಾಧುತ್ವಮ್। ೧೯೭. ಪ್ರಜಾನಾಂ ಪತಿಃ ಪಿತಾ ಪ್ರಜಾಪತಿಃ ॥೩೪॥

---

1. ಮರೀಚಿ ಎಂದರೆ ಕಿರಣವೆಂದರ್ಥ. ಇದನ್ನು 'ಬೆಳಕು' ಅಥವಾ 'ಪ್ರಗಲ್ಭನಾಗಿರುವಿಕೆ'ಎಂಬರ್ಥದಲ್ಲಿ ಲಕ್ಷಣೆಯಿಂದ ಉಪಯೋಗಿಸಿದೆ.
2. ಹನ್ ಧಾತುವಿಗೆ ಸಗಾಗಮವು ಬಂದರೆ 'ಹಂಸ' ಎಂದಾಗುತ್ತದೆ ಎಂದರ್ಥ.
3. ಪರಮಾತ್ಮನು ಎಲ್ಲಾ ಶರೀರಗಳಲ್ಲಿಯೂ ಇರುತ್ತಾನಾದ್ದರಿಂದ ಹಂಸನು ಎಂದು ಈ ಮಂತ್ರದಲ್ಲಿದೆ.
4. ಈ ಮಂತ್ರದಲ್ಲಿ ಪರಮಾತ್ಮ, ಜೀವಾತ್ಮ ಇವೆರಡನ್ನೂ ಪಕ್ಕಿಗಳೆಂದು ರೂಪಕವಾಗಿ ವರ್ಣಿಸಿದೆ. ಇದನ್ನು ವಿಷ್ಣುವಿನ ಹೆಸರಿಗೆ ಹೇಗೆ ಇಲ್ಲಿ ಅನ್ವಯಿಸಿದೆಯೋ ತಿಳಿಯಲಿಲ್ಲ.
5. ಈ ವಾಕ್ಯವು ಎಲ್ಲಿಯದೆಂಬುದು ತಿಳಿಯಲಿಲ್ಲ. ವೈ॥ ಪಾಠದಲ್ಲಿ ಇದನ್ನು ಕೊಟ್ಟಿದೆಯಾದರೂ ವಿವೃತಿಯಲ್ಲಿ ವ್ಯಾಖ್ಯಾನವನ್ನು ಬರೆದಿಲ್ಲ. 'ವೈನತೇಯಶ್ಚ ಪಕ್ಷಿಣಾಮ್' ಎಂಬ ವಾಕ್ಯವೇನೋ ಗೀತೆಯಲ್ಲಿ (೧೦-೩೦) ಇದೆ.
6. ವಾಸುಕಿ, ಆದಿಶೇಷ - ಮೊದಲಾದವರು ಭಗವಂತನ ವಿಭೂತಿಗಳು.

## (ಭಾಷ್ಯಾರ್ಥ)

ಚಿನ್ನದಂತೆ ಉತ್ತಮವಾದ ನಾಭಿಯು ಈತನಿಗೆ (ಇದೆ); ಆದ್ದರಿಂದ (ಆತನು) **ಹಿರಣ್ಯನಾಭನು.** ಅಥವಾ (ಲೋಕ) ಹಿತ (ಕಾರಣ)ವಾಗಿಯೂ, ಮನೋಹರವಾಗಿಯೂ ಇರುವ ನಾಭಿಯುಳ್ಳವನಾದ್ದರಿಂದಲೂ (ಹಿರಣ್ಯನಾಭನು). ಬದರಿಕಾಶ್ರಮದಲ್ಲಿ ನರನಾರಾಯಣರ ರೂಪದಿಂದ ಉತ್ತಮವಾದ ತಪಸ್ಸನ್ನು ಮಾಡುತ್ತಾನಾದ್ದರಿಂದ **ಸುತಪಾ** ಎಂದು ಹೆಸರು. 'ಮನಸ್ಸನ್ನೂ ಇಂದ್ರಿಯಗಳನ್ನೂ ಏಕಾಗ್ರವಾಗಿಟ್ಟುಕೊಳ್ಳುವದು (ಎಲ್ಲಕ್ಕೂ) ಹೆಚ್ಚಿನ ತಪಸ್ಸು' ಎಂಬ ಸ್ಮೃತಿಯಿಂದ ಇದು ಸಿದ್ಧವಾಗುತ್ತದೆ. ಕಮಲದಂತೆ ಅತ್ಯಂತ ವೃತ್ತಾಕಾರದ ನಾಭಿಯು ಇವನಿಗಿದೆಯಾದ್ದರಿಂದ ಅಥವಾ ಹೃದಯಪದ್ಮದ ನಾಭಿಯಲ್ಲಿ ಎಂದರೆ ನಡುವೆ ಬೆಳಗುತ್ತಿರುವದರಿಂದ **ಪದ್ಮನಾಭನು.** ಪೃಷೋದರಾದಿ (ಗಣದಲ್ಲಿ ಸೇರಿರುವದರಿಂದ) ಈ ಪ್ರಯೋಗವು ಸಾಧುವಾಗಿರುತ್ತದೆ. ಪ್ರಜೆಗಳಿಗೆ (ಜೀವರುಗಳಿಗೆ), ಪತಿಯು ಎಂದರೆ ತಂದೆ; (ಆದ್ದರಿಂದ) **ಪ್ರಜಾಪತಿಯು.** ॥೩೪॥

**ಅಮೃತ್ಯುಃ ಸರ್ವದೃಕ್ ಸಿಂಹಃ ಸನ್ಧಾತಾ ಸನ್ಧಿಮಾನ್ ಸ್ಥಿರಃ।**
**ಅಜೋ ದುರ್ಮರ್ಷಣಃ ಶಾಸ್ತಾ ವಿಶ್ರುತಾತ್ಮಾ ಸುರಾರಿಹಾ ॥೩೫॥**

## (ಭಾಷ್ಯ)

೧೯೮. ಮೃತ್ಯುರ್ವಿನಾಶಃ ತದ್ಧೇತುರ್ವಾ ಅಸ್ಯ ನ ವಿದ್ಯತ ಇತಿ ಅಮೃತ್ಯುಃ। ೧೯೯. ಪ್ರಾಣಿನಾಂ ಕೃತಾಕೃತಂ ಸರ್ವಂ ಪಶ್ಯತಿ ಸ್ವಾಭಾವಿಕೇನ ಬೋಧೇನ ಇತಿ ಸರ್ವದೃಕ್। ೨೦೦. ಹಿನಸ್ತಿ ಇತಿ ಸಿಂಹಃ। ಪೃಷೋದರಾದಿತ್ವಾತ್ ಸಾಧುತ್ವಮ್॥

ಇತಿ ನಾಮ್ನಾಂ ದ್ವಿತೀಯಶತಂ ವಿವೃತಮ್।

## (ಭಾಷ್ಯಾರ್ಥ)

ಮೃತ್ಯು ಎಂದರೆ ವಿನಾಶವು, ಅಥವಾ ಆ (ವಿನಾಶಕ್ಕೆ) ಕಾರಣವು; (ಅದು) ಈತನಿಗೆ ಇಲ್ಲವಾದ್ದರಿಂದ **ಅಮೃತ್ಯುವು.** ಪ್ರಾಣಿಗಳು ಮಾಡಿದ್ದು, ಮಾಡದೆ ಇರುವದು - ಎಲ್ಲವನ್ನೂ ಸ್ವರೂಪವಾದ ಜ್ಞಾನದಿಂದ ನೋಡುತ್ತಿರುತ್ತಾನೆ; ಆದ್ದರಿಂದ **ಸರ್ವದೃಕ್** (ಎನಿಸುತ್ತಾನೆ). ಕೊಲ್ಲುತ್ತಾನೆ, ಆದ್ದರಿಂದ **ಸಿಂಹನು.** (ಈ ಶಬ್ದವು) ಪೃಷೋದರಾದಿಗಣಕ್ಕೆ ಸೇರಿದ್ದಾದ್ದರಿಂದ (ಈ ಪ್ರಯೋಗವು) ಸಾಧು.[1]

1. ದೈತ್ಯರೆಂಬ ಮೃಗಗಳನ್ನು ಕೊಲ್ಲುತ್ತಾನೆ, ಆದ್ದರಿಂದ ಸಿಂಹ,'ಹಿಸಿ-ಹಿಂಸಾಯಾಮ್' ಎಂಬ ಧಾತುವಿನಿಂದ ಬಂದಿರುವ ಶಬ್ದವಿದು; 'ಅಚ್' ಪ್ರತ್ಯಯವು ಬಂದಿದೆ. ಇಕಾರೇತ್ ಆದ್ದರಿಂದ ನುಮಾಗಮ. ಹಿಸಿ ಎಂಬುದರ ವರ್ಣಗಳು ಹಿಂದುಮುಂದಾಗಿ ಸಿಂಹ ಎಂದಾಗಿದೆ. ಆದ್ದರಿಂದ ಪೃಷೋದರಾದಿಗಣಕ್ಕೆ ಸೇರಿದೆ - ಎಂಬು ವ್ಯಾಖ್ಯಾನ.

## ತೃತೀಯಶತಕ[1]

(ಭಾಷ್ಯ)

೨೦೧. ಕರ್ಮಫಲೈಃ ಪುರುಷಾನ್ ಸಂಧತ್ತ ಇತಿ ಸಂಧಾತಾ। ೨೦೨. ಫಲಭೋಕ್ತಾ ಚ ಸ ಏವೇತಿ ಸನ್ಧಿಮಾನ್। ೨೦೩. ಸದಾ ಏಕರೂಪತ್ವಾತ್ ಸ್ಥಿರಃ। ೨೦೪. ಅಜತಿ ಗಚ್ಛತಿ ಕ್ಷಿಪತಿ ಇತಿ ವಾ ಅಜಃ । ೨೦೫. ಮರ್ಷಿತುಂ ಸೋಢುಂ ದಾನವಾಧಿಭಿಃ ನ ಶಕ್ಯತ ಇತಿ ದುರ್ಮರ್ಷಣಃ। ೨೦೬. ಶ್ರುತಿಸ್ಮೃತ್ಯಾದಿಭಿಃ ಅನುಶಿಷ್ಟಂ ಕರೋತೀತಿ ಶಾಸ್ತಾ। ೨೦೭. ವಿಶೇಷೇಣ ಶ್ರುತೋ ಯೇನ ಸತ್ಯಜ್ಞಾನಾದಿಲಕ್ಷಣ ಆತ್ಮಾ ಅತೋ ವಿಶ್ರುತಾತ್ಮಾ। ೨೦೮. ಸುರಾರೀಣಾಂ ನಿಹನ್ತೃತ್ವಾತ್ ಸುರಾರಿಹಾ॥೩೫॥

(ಭಾಷ್ಯಾರ್ಥ)

ಪುರುಷರನ್ನು ಕರ್ಮಫಲಗಳಿಗೆ ಜೋಡಿಸುತ್ತಾನಾದ್ದರಿಂದ **ಸಂಧಾತನು**. (ಕರ್ಮಗಳ) ಫಲವನ್ನು ಅನುಭವಿಸುವವನೂ ಆತನೇ ಆದ್ದರಿಂದ **ಸನ್ಧಿಮಾನ್** (ಎನಿಸುವನು). ಯಾವಾಗಲೂ ಒಂದೇ ರೂಪವುಳ್ಳವನಾಗಿರುವದರಿಂದ **ಸ್ಥಿರನು**. (ಭಕ್ತರ ಹೃದಯವನ್ನು 'ಅಜತಿ') ಸೇರುತ್ತಾನೆ, ಅಥವಾ (ಅಸುರರ ಕಡೆಗೆ) ಬಾಣವನ್ನು 'ಕ್ಷಿಪತಿ' ಎಸೆಯುತ್ತಾನೆ,[2] ಆದ್ದರಿಂದ **ಅಜನು**. ದಾನವರೇ ಮೊದಲಾದವರು (ಮರ್ಷಿತುಂ) ಸಹಿಸುವದಕ್ಕೆ ಆಗುವಂತಿರುವವನಲ್ಲವಾದ್ದರಿಂದ **ದುರ್ಮರ್ಷಣನು**. ಶ್ರುತಿಸ್ಮೃತಿ ಮುಂತಾದ (ಪ್ರಮಾಣ)ಗಳಿಂದ ಎಲ್ಲರಿಗೂ ಅನುಶಾಸನವನ್ನು ಮಾಡುತ್ತಾನೆ; ಆದ್ದರಿಂದ **ಶಾಸ್ತನು**. ವಿಶೇಷವಾಗಿ ಶ್ರುತ (ಪ್ರಸಿದ್ಧ)ನಾದವನು, ಅಂಥ ಸತ್ಯಜ್ಞಾನ (ವೇ) ಮುಂತಾದ ಲಕ್ಷಣವುಳ್ಳ ಆತ್ಮ (ನಿವನು); ಆದ್ದರಿಂದ **ವಿಶ್ರುತಾತ್ಮನು**. ಸುರರ ಶತ್ರುಗಳನ್ನು ಕೊಲ್ಲುವವನಾದ್ದರಿಂದ **ಸುರಾರಿಹನು**.

**ಗುರುರ್ಗುರುತಮೋ ಧಾಮ ಸತ್ಯಃ ಸತ್ಯಪರಾಕ್ರಮಃ।**
**ನಿಮಿಷೋಽನಿಮಿಷಃ ಸ್ರಗ್ವೀ ವಾಚಸ್ಪತಿರುದಾರಧೀಃ ॥೩೬॥**

(ಭಾಷ್ಯ)

೨೦೯. ಸರ್ವವಿದ್ಯಾನಾಮ್ ಉಪದೇಷ್ಟೃತ್ವಾತ್, ಸರ್ವೇಷಾಂ ಜನಕತ್ವಾದ್ ವಾ ಗುರುಃ। ೨೧೦. ವಿರಿಞ್ಚ್ಯಾದೀನಾಮಪಿ ಬ್ರಹ್ಮವಿದ್ಯಾಸಂಪ್ರದಾಯಕತ್ವಾದ್ ಗುರುತಮಃ। 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಮ್' (ಶ್ವೇ.೬-೧೮) ಇತಿ

1. ಇಲ್ಲಿಯೂ ಹಿಂದಿನಂತೆ "ಅಥ ತೃತೀಯಶತಕಭಾಷ್ಯಮ್" ಎಂದು ಹೆಚ್ಚಾಗಿದೆ. ಇನ್ನು ಮುಂದೆಯೂ ಹೀಗೆಯೇ ಶತಕಾರಂಭವಾಕ್ಯಗಳು ಮೈ॥ ಪಾಠದಲ್ಲಿವೆಯೆಂದು ತಿಳಿಯಬೇಕು.
2. ಅಜ್ ಧಾತುವಿಗೆ ಇನ್ನೊಂದರ್ಥವಿದು.

ಮನ್ತ್ರವರ್ಣಾತ್। ೨೧೧. ಧಾಮ ಜ್ಯೋತಿಃ 'ನಾರಾಯಣಪರೋ ಜ್ಯೋತಿಃ' (ಮಹಾ.ನಾ. ೧೩-೧) ಇತಿ ಮನ್ತ್ರವರ್ಣಾತ್। ಸರ್ವಕಾಮಾನಾಮ್ ಆಸ್ಪದತ್ವಾತ್ ವಾ ಧಾಮ। 'ಪರಮಂ ಬ್ರಹ್ಮ ಧಾಮ' (ಮುಂ. ೩-೨-೧) ಇತಿ ಶ್ರುತೇಃ। ೨೧೨. ಸತ್ಯವಚನಧರ್ಮರೂಪತ್ವಾತ್ ಸತ್ಯಃ। 'ತಸ್ಮಾತ್ ಸತ್ಯಂ ಪರಮಂ ವದನ್ತಿ' (ಮಹಾ. ನಾ. ೭೯) ಇತಿ ಶ್ರುತೇಃ। ಸತ್ಯಸ್ಯ ಸತ್ಯಮ್ ಇತಿ ವಾ; 'ಪ್ರಾಣಾ ವೈ ಸತ್ಯಮ್ ತೇಷಾಮೇಷ ಸತ್ಯಮ್' (ಬೃ. ೨-೩-೬) ಇತಿ ಶ್ರುತೇಃ। ೨೧೩. ಸತ್ಯಃ ಅವಿತಥಃ ಪರಾಕ್ರಮಃ ಯಸ್ಯ ಸಃ ಸತ್ಯಪರಾಕ್ರಮಃ॥

## (ಭಾಷ್ಯಾರ್ಥ)

ಸರ್ವವಿದ್ಯೆಗಳನ್ನು ಉಪದೇಶಿಸುವದರಿಂದ, ಅಥವಾ ಎಲ್ಲರಿಗೂ ಜನಕ (ತಂದೆ)ನಾಗಿರುವದರಿಂದ **ಗುರುವು**; ಬ್ರಹ್ಮನೇ ಮೊದಲಾದವರಿಗೆ ಕೂಡ ಬ್ರಹ್ಮವಿದ್ಯೆಯನ್ನು ಕೊಟ್ಟ ಸಂಪ್ರದಾಯಕರ್ತನು, ಆದ್ದರಿಂದ **ಗುರುತಮನು;** 'ಯಾವಾತನು ಬ್ರಹ್ಮನನ್ನು (ಮೊದಲು ಸೃಷ್ಟಿಮಾಡುವನೋ)' ಎಂಬ ಮಂತ್ರವರ್ಣದಿಂದ (ಈ ಅರ್ಥ). ಧಾಮವೆಂದರೆ ಜ್ಯೋತಿ, 'ನಾರಾಯಣನು ಪರಮಜ್ಯೋತಿಯು' ಎಂಬ ಮಂತ್ರವರ್ಣದಿಂದ (ಈ ಅರ್ಥವು). ಅಥವಾ ಸರ್ವಕಾಮಗಳಿಗೂ ಆಶ್ರಯನಾಗಿರುವದರಿಂದಲೂ (ಪರಮಾತ್ಮನು) **ಧಾಮ**ವೆನಿಸಿರುತ್ತಾನೆ. 'ಪರಮಂ ಬ್ರಹ್ಮ ಧಾಮ' ಹೆಚ್ಚಿನ ಬ್ರಹ್ಮವಾದ ಧಾಮವನ್ನು ಯಾವನು ತಿಳಿದುಕೊಳ್ಳುತ್ತಾನೋ - ಎಂಬ ಶ್ರುತಿಯಿಂದ (ಹೀಗೆಂದು ಸಿದ್ಧವಾಗುತ್ತದೆ). ಸತ್ಯವನ್ನು ನುಡಿಯುವ ಧರ್ಮದ ರೂಪದಲ್ಲಿರುವದರಿಂದ **ಸತ್ಯನು;** 'ಆದ್ದರಿಂದ ಸತ್ಯವನ್ನು ಹೆಚ್ಚಿನದೆಂದು ಹೇಳುತ್ತಾರೆ' ಎಂಬ ಶ್ರುತಿಯಿಂದ ಇದು ಸಿದ್ಧವಾಗುತ್ತದೆ. ಅಥವಾ ಸತ್ಯದ ಸತ್ಯವು - ಈತನು (ಆದ್ದರಿಂದ ಸತ್ಯ ಎಂದೂ ವ್ಯಾಖ್ಯಾನಮಾಡಬಹುದು). 'ಪ್ರಾಣಗಳೇ ಸತ್ಯವಲ್ಲವೆ? ಆ (ಪ್ರಾಣಗಳಿಗೆ) ಈತನು ಸತ್ಯವು' ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). ಸತ್ಯವಾದ - ಎಂದಿಗೂ ಹುಸಿಯಲ್ಲದ ಪರಾಕ್ರಮವು ಯಾವನದೋ ಆ (ಈತನು) **ಸತ್ಯಪರಾಕ್ರಮ**ನು.

## (ಭಾಷ್ಯ)

೨೧೪. ನಿಮೀಲಿತೇ ಯತೋ ನೇತ್ರೇ ಯೋಗನಿದ್ರಾರತಸ್ಯ ಅತಃ ನಿಮಿಷಃ। ೨೧೫. ನಿತ್ಯಪ್ರಬುದ್ಧಸ್ವರೂಪತ್ವಾತ್ ಅನಿಮಿಷಃ ಮತ್ಸ್ಯರೂಪತಯಾ ವಾ ಆತ್ಮರೂಪತಯಾ ವಾ ಅನಿಮಿಷಃ । ೨೧೬. ಭೂತತನ್ಮಾತ್ರರೂಪಾಂ ವೈಜಯನ್ತ್ಯಾಖ್ಯಾಂ ಸ್ರಜಂ ನಿತ್ಯಂ ಬಿಭರ್ತೀತಿ ಸ್ರಗ್ವೀ। ೨೧೭. ವಾಚೋ ವಿದ್ಯಾಯಾಃ ಪತಿಃ ವಾಚಸ್ಪತಿಃ। ಸರ್ವಾರ್ಥವಿಷಯಾ ಧೀರ್ಬುದ್ಧಿಃ ಅಸ್ಯ - ಇತ್ಯುದಾರಧೀಃ। ವಾಚಸ್ಪತಿರುದಾರಧೀಃ - ಇತ್ಯೇಕಂ ನಾಮ ॥೩೬॥

(ಭಾಷ್ಯಾರ್ಥ)

ಯೋಗನಿದ್ರೆಯಲ್ಲಿ ರತನಾದಾಗ ಕಣ್ಣುಗಳು ಮುಚ್ಚಿರುತ್ತದೆ; ಆದ್ದರಿಂದ **ನಿಮಿಷನು.** ಯಾವಾಗಲೂ ಎಚ್ಚತ್ತಿರುವ ಸ್ವರೂಪದವನಾಗಿರುವದರಿಂದ **ಅನಿಮಿಷನು.** ಮತ್ಸ್ಯರೂಪದಿಂದ [1] ಅಥವಾ ಆತ್ಮರೂಪದಿಂದ (ಎವೆಯಿಕ್ಕದವನು); ಆದ್ದರಿಂದ **ಅನಿಮಿಷನು.** (ಪಂಚ)ಭೂತಗಳ ತನ್ಮಾತ್ರೆಗಳ ರೂಪದಲ್ಲಿರುವ ವೈಜಯಂತಿ ಎಂಬ ಹೆಸರಿನ ಮಾಲೆಯನ್ನು ಯಾವಾಗಲೂ ಧರಿಸಿರುತ್ತಾನೆ; ಆದ್ದರಿಂದ **ಸ್ರಗ್ವೀ.** ವಾಕ್ಕಿಗೆ ಎಂದರೆ ವಿದ್ಯೆಗೆ ಪತಿಯು, ಒಡೆಯನು; ಆದ್ದರಿಂದ **ವಾಚಸ್ಪತಿಯು.** ಎಲ್ಲಾ ವಿಷಯಗಳನ್ನೂ ಕುರಿತ ಧೀ ಎಂದರೆ ಬುದ್ಧಿಯು ಈತನಿಗಿದೆ; ಆದ್ದರಿಂದ **ಉದಾರಧೀಃ** (ಇಲ್ಲಿ) **ವಾಚಸ್ಪತಿರುದಾರಧೀಃ** - ಎಂಬುದು ಒಂದೇ ನಾಮವು.

**ಅಗ್ರಣೀರ್ಗ್ರಾಮಣೀಶ್ಶ್ರೀಮಾನ್ ನ್ಯಾಯೋ ನೇತಾ ಸಮೀರಣಃ।**

**ಸಹಸ್ರಮೂರ್ಧಾ ವಿಶ್ವಾತ್ಮಾ ಸಹಸ್ರಾಕ್ಷಃ ಸಹಸ್ರಪಾತ್ ॥೩೭॥**

(ಭಾಷ್ಯ)

೨೧೮. ಅಗ್ರಂ ಪ್ರಕೃಷ್ಟಂ ಪದಂ ನಯತಿ ಮುಮುಕ್ಷೂನ್ ಇತಿ ಅಗ್ರಣೀಃ। ೨೧೯. ಭೂತಗ್ರಾಮಸ್ಯ ನೇತೃತ್ವಾತ್ ಗ್ರಾಮಣೀಃ। ೨೨೦. ಶ್ರೀಃ ಕಾನ್ತಿಃ ಸರ್ವಾತಿಶಾಯಿನೀ ಅಸ್ಯ ಇತಿ ಶ್ರೀಮಾನ್। ೨೨೧. ಪ್ರಮಾಣಾನುಗ್ರಾಹಕೋ ಭೇದಕಾರಕಸ್ತರ್ಕಃ ನ್ಯಾಯಃ। ೨೨೨. ಜಗದ್ಯನ್ತ್ರನಿರ್ವಾಹಕೋ ನೇತಾ। ೨೨೩. ಶ್ವಸನರೂಪೇಣ ಭೂತಾನಿ ಚೇಷ್ಟಯತೀತಿ ಸಮೀರಣಃ।

(ಭಾಷ್ಯಾರ್ಥ)

ಅಗ್ರವಾದ ಎಂದರೆ ಉತ್ತಮವಾದ ಪದಕ್ಕೆ[2] ಮುಮುಕ್ಷುಗಳನ್ನು ಕರೆದೊಯ್ಯುತ್ತಾನೆ,[3] ಆದ್ದರಿಂದ **ಅಗ್ರಣಿಯು.** ಭೂತಗ್ರಾಮವನ್ನು ಮುಂದಿದ್ದು ನಡೆಯಿಸುತ್ತಾನೆ,[4] ಆದ್ದರಿಂದ **ಗ್ರಾಮಣಿಯು.** ಶ್ರೀ ಎಂದರೆ ಕಾಂತಿ. ಎಲ್ಲಕ್ಕೂ ಹೆಚ್ಚಿನ (ಕಾಂತಿ) ಈತನಿಂದಲೇ; ಆದ್ದರಿಂದ **ಶ್ರೀಮಾನ್** (ಎನಿಸಿರುವನು). ಪ್ರಮಾಣಕ್ಕೆ ಅನುಗ್ರಾಹಕವಾಗಿ ಭೇದವನ್ನುಂಟುಮಾಡುವ ತರ್ಕವು **ನ್ಯಾಯವು.** ಜಗತ್ತೆಂಬ ಯಂತ್ರವನ್ನು ನಡೆಯಿಸುವವನಾದ್ದರಿಂದ **ನೇತಾ** (ಎನಿಸುತ್ತಾನೆ). (ಪ್ರಾಣ) ವಾಯುರೂಪದಿಂದ ಪ್ರಾಣಿಗಳು (ಆಯಾ) ಕ್ರಿಯೆಯನ್ನು ಮಾಡುವಂತೆ ಮಾಡುತ್ತಿರುವದರಿಂದ **ಸಮೀರಣನು.**

---

1. ಮತ್ಸ್ಯಾವತಾರದ ರೂಪದಲ್ಲಿ.
2. ಎಲ್ಲಕ್ಕಿಂತ ಹೆಚ್ಚಿನ ಪದವನ್ನು, ಮುಕ್ತಿಯನ್ನು ಸೇರಿಸುತ್ತಾನೆ, ಎಂದರೆ ಅದನ್ನು ಕೊಡುತ್ತಾನೆ.
3. 'ನೀ' ಎಂಬುದು ಕರೆದೊಯ್ಯುವದೆಂಬ ಕ್ರಿಯೆಯನ್ನು ಹೇಳುತ್ತದೆಯಾದರೂ ಮುಕ್ತಿಯು ನಿತ್ಯವಾದದ್ದರಿಂದ ಅದನ್ನು ಕೊಡುತ್ತಾನೆ ಎಂದೇ ಅರ್ಥ.
4. ಪ್ರಾಣಿಗಳನ್ನು ನಿಯಮದಿಂದ ಕೆಲಸಮಾಡಿಸುತ್ತಾನೆ - ಎಂದರ್ಥ.

(ಭಾಷ್ಯ)

೨೨೪. ಸಹಸ್ರಾಣಿ ಮೂರ್ಧಾನೋಽಸ್ಯ ಇತಿ ಸಹಸ್ರಮೂರ್ಧಾ। ೨೨೫. ವಿಶ್ವಸ್ಯ ಆತ್ಮಾ ವಿಶ್ವಾತ್ಮಾ। ೨೨೬. ಸಹಸ್ರಾಣಿ ಅಕ್ಷೀಣಿ ಅಸ್ಯ ಇತಿ ಸಹಸ್ರಾಕ್ಷಃ। ೨೨೭. ಸಹಸ್ರಾಣಿ ಪಾದಾ ಅಸ್ಯ ಇತಿ ಸಹಸ್ರಪಾತ್। "ಸಹಸ್ರಶೀರ್ಷಾ ಪುರುಷಃ। ಸಹಸ್ರಾಕ್ಷಃ ಸಹಸ್ರಪಾತ್" (ಪು.ಸೂ.೧) ಇತಿ ಶ್ರುತೇಃ ॥೩೭॥

(ಭಾಷ್ಯಾರ್ಥ)

ಸಾವಿರಾರು ತಲೆಗಳು ಈತನಿಗೆ ಇವೆಯಾದ್ದರಿಂದ **ಸಹಸ್ರಮೂರ್ಧನು;** ಎಲ್ಲಕ್ಕೂ ಆತ್ಮನಾದ್ದರಿಂದ **ವಿಶ್ವಾತ್ಮನು.** ಸಾವಿರಾರು ಕಣ್ಣುಗಳು ಯಾವನಿಗಿವೆಯೋ ಆತನು **ಸಹಸ್ರಾಕ್ಷನು;** ಸಾವಿರಾರು ಪಾದಗಳು ಈತನಿಗಿವೆಯಾದ್ದರಿಂದ **ಸಹಸ್ರಪಾತ್** (ಎನಿಸಿರುವನು). "ಸಾವಿರ ತಲೆಗಳುಳ್ಳವನು, ಪುರುಷನು, ಸಾವಿರ ಕಣ್ಣುಗಳುಳ್ಳವನು, ಸಾವಿರ ಪಾದಗಳುಳ್ಳವನು" ಎಂಬ ಶ್ರುತಿಯಿಂದ (ಇದು ಸಿದ್ಧವಾಗಿದೆ).

**ಆವರ್ತನೋ ನಿವೃತ್ತಾತ್ಮಾ ಸಂವೃತಃ ಸಂಪ್ರಮರ್ದನಃ।**
**ಅಹಃಸಂವರ್ತಕೋ ವಹ್ನಿರನಿಲೋ ಧರಣೀಧರಃ ॥೩೮॥**

(ಭಾಷ್ಯ)

೨೨೮. ಆವರ್ತಯಿತುಂ ಸಂಸಾರಚಕ್ರಂ ಶೀಲಮಸ್ಯ ಇತಿ ಆವರ್ತನಃ। ೨೨೯. ಸಂಸಾರಬನ್ಧಾತ್ ನಿವೃತ್ತ ಆತ್ಮಾ ಸ್ವರೂಪಮ್ ಅಸ್ಯ ಇತಿ ನಿವೃತ್ತಾತ್ಮಾ। ೨೩೦. ಆಚ್ಛಾದಿಕಯಾ ಅವಿದ್ಯಯಾ ಸಂವೃತತ್ವಾತ್ ಸಂವೃತಃ। ೨೩೧. ಸಮ್ಯಕ್ ಪ್ರಮರ್ದಯತೀತಿ ರುದ್ರಕಾಲಾದ್ಯಾಭಿರ್ವಿಭೂತಿಭಿರಿತಿ ಸಂಪ್ರಮರ್ದನಃ॥

(ಭಾಷ್ಯಾರ್ಥ)

ಸಂಸಾರಚಕ್ರವನ್ನು ತಿರುಗಿಸುವ ಸ್ವಭಾವವುಳ್ಳವನಾದ್ದರಿಂದ **ಆವರ್ತನನು.** ಸಂಸಾರಬಂಧದಿಂದ ಬಿಡುಗಡೆ ಹೊಂದಿದ ಆತ್ಮಾ-ಎಂದರೆ ಸ್ವರೂಪವುಳ್ಳವನಾದ್ದರಿಂದ **ನಿವೃತ್ತಾತ್ಮನು.** ಮರೆಮಾಡುವ ಅವಿದ್ಯೆಯಿಂದ[1] ಮರೆಯಾಗಿರುವವನಾದ್ದರಿಂದ **ಸಂವೃತನು.** ರುದ್ರ, ಕಾಲ - ಮೊದಲಾದ ವಿಭೂತಿಗಳಿಂದ ಚೆನ್ನಾಗಿ ನಾಶಮಾಡುತ್ತಾನಾದ್ದರಿಂದ **ಸಂಪ್ರಮರ್ದನನು.**

(ಭಾಷ್ಯ)

೨೩೨. ಸಮ್ಯಕ್ ಅಹ್ನಾಂ ಪ್ರವರ್ತನಾತ್ ಸೂರ್ಯ ಅಹಃಸಂವರ್ತಕಃ। ೨೩೩. ಹವಿರ್ವಹನಾದ್ ವಹ್ನಿಃ। ೨೩೪. ಅನಿಲಯಃ ಅನಿಲಃ। ಅನಾದಿತ್ವಾತ್ ಅನಿಲಃ, ಅನನಾವ್ ವಾ ಅನಿಲಃ। ೨೩೫. ಶೇಷದಿಗ್ಗಜಾದಿರೂಪೇಣ ವರಾಹರೂಪೇಣ ಧರಣೀಂ ಧತ್ತೇ ಇತಿ ಧರಣೀಧರಃ ॥೩೮॥

1. ಅವಿದ್ಯೆಯು ಪರಮಾತ್ಮನನ್ನು ಮುಚ್ಚಿದೆ-ಎಂಬರ್ಥದ ವಾಕ್ಯವು ಭಾಷ್ಯದಲ್ಲಿ ಎಲ್ಲಿಯೂ ಕಾಣುವದಿಲ್ಲ.

(ಭಾಷ್ಯಾರ್ಥ)

ಚೆನ್ನಾಗಿ ದಿವಸಗಳನ್ನು ನಡೆಯಿಸುತ್ತಾನೆ; ಆದ್ದರಿಂದ **ಅಹಃಸಂವರ್ತಕನು;** (ಹೋಮಮಾಡಿದ್ದನ್ನು) ಹೊತ್ತುಕೊಂಡು ಹೋಗುತ್ತಾನಾದ್ದರಿಂದ **ವಹ್ನಿಯು;** ('ದೇವತೆಗಳಿಗೆ ನಮ್ಮ ಹವ್ಯವನ್ನು ಅರಿತು ಹೊತ್ತುಕೊಂಡು ಹೋಗಿ ಕೊಡುವವನು' ಎಂಬ ಶ್ರುತಿಯಿಂದ ಈ ಅರ್ಥವು). ಗೊತ್ತಾದ ನಿವಾಸಸ್ಥಾನವಿಲ್ಲದವನಾದ್ದರಿಂದ **ಅನಿಲನು**[1]; ಆದಿಯಿಲ್ಲದವನಾದ್ದರಿಂದ **ಅನಿಲನು**[2] (ಎಂದಾದರೂ ವ್ಯಾಖ್ಯಾನವನ್ನು ಮಾಡಬಹುದು). ಆದಾನ (ಗ್ರಹಿಸುವಿಕೆ) ಇಲ್ಲದ್ದರಿಂದಲೂ, ಅನನ (ವ್ಯಾಪಾರಮಾಡುವಿಕೆ)ಯಿರುವ ಕಾರಣದಿಂದಲೂ **ಅನಿಲನು.**[3] ಶೇಷ, ದಿಗ್ಗಜಗಳು - ಮುಂತಾದ ರೂಪದಿಂದಲೂ ವರಾಹರೂಪದಿಂದಲೂ ಧರಣಿ (ಭೂಮಿ)ಯನ್ನು ಧರಿಸುವಾತನಾದ್ದರಿಂದ **ಧರಣೀಧರನು** ॥೩೮॥

**ಸುಪ್ರಸಾದಃ ಪ್ರಸನ್ನಾತ್ಮಾ ವಿಶ್ವಧೃಗ್ ವಿಶ್ವಭುಗ್ ವಿಭುಃ।**
**ಸತ್ಕರ್ತಾ ಸತ್ಕೃತಃ ಸಾಧುರ್ಜಹ್ನುರ್ನಾರಾಯಣೋ ನರಃ ॥೩೯॥**

(ಭಾಷ್ಯ)

೨೩೬. ಶೋಭನಃ ಪ್ರಸಾದೋ ಯಸ್ಯ ಅಪಕಾರವತಾಮಪಿ ಶಿಶುಪಾಲಾದೀನಾಂ ಮೋಕ್ಷಪ್ರದಾತೃತ್ವಾತ್ ಇತಿ ಸುಪ್ರಸಾದಃ। ೨೩೭. ರಜಸ್ತಮೋಭ್ಯಾಮ್ ಅಕಲುಷಿತ ಆತ್ಮಾ ಅನ್ತಃಕರಣಮ್ ಅಸ್ಯ ಇತಿ ಪ್ರಸನ್ನಾತ್ಮಾ; ಕರುಣಾರ್ದ್ರಸ್ವಭಾವಾದ್ವಾ; ಯದ್ವಾ ಪ್ರಸನ್ನಸ್ವಭಾವಃ ಕಾರುಣಿಕ ಇತ್ಯರ್ಥಃ। ಅವಾಪ್ತಸರ್ವಕಾಮತ್ವಾದ್ವಾ। ೨೩೮. ವಿಶ್ವಂ ಧೃಷ್ಣಾತೀತಿ ವಿಶ್ವಧೃಕ್; 'ಞಿ' ಧೃಷಾ ಪ್ರಾಗಲ್ಭ್ಯೇ'। ೨೩೯. ವಿಶ್ವಂ ಭುಙ್ಕ್ತೇ ಭುನಕ್ತಿ ಪಾಲಯತೀತಿ ವಾ ವಿಶ್ವಭುಕ್। ೨೪೦. ಹಿರಣ್ಯಗರ್ಭಾದಿರೂಪೇಣ ವಿವಿಧಂ ಭವತೀತಿ ವಿಭುಃ। 'ನಿತ್ಯಂ ವಿಭುಮ್' (ಮುಂ. ೧-೧-೬) ಇತಿ ಮನ್ತ್ರವರ್ಣಾತ್॥

(ಭಾಷ್ಯಾರ್ಥ)

ಒಳ್ಳೆಯ ಪ್ರಸಾದವು(ಪ್ರಸನ್ನತೆಯು) ಯಾವನದೋ ಅವನು; ಅಪಕಾರವನ್ನು ಮಾಡಿದ ಶಿಶುಪಾಲನೇ ಮುಂತಾದವರಿಗೂ ಮೋಕ್ಷವನ್ನು ಕೊಟ್ಟವನು, ಆದ್ದರಿಂದ **ಸುಪ್ರಸಾದನು.** ರಜಸ್ಸು, ತಮಸ್ಸು - ಇವುಗಳಿಂದ ಕೊಳೆಯಾಗದ ಆತ್ಮವು, ಅಂತಃಕರಣವು ಈತನದು; ಆದ್ದರಿಂದ **ಪ್ರಸನ್ನಾತ್ಮನು.** ಕರುಣೆಯಿಂದ ನೆನೆದ (ಮೃದುವಾದ) ಸ್ವಭಾವವುಳ್ಳವನಾದ್ದರಿಂದ (ಈ ಹೆಸರು). ಅಥವಾ ಪ್ರಸನ್ನಸ್ವಭಾವನು

1. ಅನಾದಿಯಾಗಿರುವವನಿಗೆ ಪೃಥಿವಿಯೋ ಮುಂತಾದ ನಿಲಯವು ಗೊತ್ತಾಗಿರುವದಿಲ್ಲವಾದ್ದರಿಂದ ಅನಿಲನು - ಎಂದು ವ್ಯಾಖ್ಯಾನ. ಮೈ॥ ಪಾಠದ ವಿವೃತಿಯದು, ಅಲ್ಲಿ ಮೂಲದಲ್ಲಿ ಈ ವಾಕ್ಯವು ಕೈಬಿಟ್ಟುಹೋಗಿದೆ.

2. 'ಅನಾದಿಭಾವತ್ವಾತ್ ನ ವಿಲೀಯತೇ ನ ವಿನಶ್ಯತೀತ್ಯನಿಲಃ' (ನಾಶವಾಗುವದಿಲ್ಲವಾದ್ದರಿಂದ ಅನಿಲನು).

3. ಇಲ್ಲಿ ವ್ಯಾಖ್ಯಾನದಲ್ಲಿ ಇನ್ನೂ ಕೆಲವು ರೂಪಗಳಿಂದ ವಿವರಿಸಿದೆ.

ಎಂದರೆ ಕಾರುಣಿಕನು ಎಂದರ್ಥ; ಏಕೆಂದರೆ ಎಲ್ಲಾ ಕಾಮಗಳನ್ನೂ ಪಡೆದುಕೊಂಡಿರುತ್ತಾನೆ. ವಿಶ್ವವನ್ನು ಧಾರಣೆಮಾಡಿರುವದರಿಂದ **ವಿಶ್ವಧೃಕ್** (ಎನಿಸುವನು). 'ಞ' ಧೃಷಾ ಪ್ರಾಗಲ್ಭ್ಯೇ' (ಎಂಬ ಧಾತುವಿನಿಂದ ಧೃಕ್ ಶಬ್ದವು) ವಿಶ್ವವನ್ನು ಭುಂಜಿಸುತ್ತಾನೆ ಅಥವಾ (ಜನರನ್ನು) ಕಾಪಾಡುತ್ತಾನೆ; ಆದ್ದರಿಂದ **ವಿಶ್ವಭುಕ್** (ಎನಿಸುತ್ತಾನೆ). ಹಿರಣ್ಯಗರ್ಭನೇ ಮುಂತಾದ ರೂಪದಿಂದ ವಿಧವಿಧವಾಗಿ ಆಗುತ್ತಾನೆ; ಆದ್ದರಿಂದ **ವಿಭುವು**. 'ನಿತ್ಯಂ ವಿಭುಮ್' ಎಂಬ ಮಂತ್ರವರ್ಣದಿಂದ (ವಿಭುಶಬ್ದಕ್ಕೆ ಈ ಅರ್ಥ).

## (ಭಾಷ್ಯ)

೨೪೧. ಸತ್ಕರೋತಿ ಪೂಜಯತಿ ಇತಿ ಸತ್ಕರ್ತಾ। ೨೪೨. ಪೂಜಿತೈರಪಿ ಪೂಜಿತಃ ಸತ್ಕೃತಃ। ೨೪೩.ನ್ಯಾಯಪ್ರವೃತ್ತಿತಯಾ ಸಾಧುಃ। ಸಾಧಯತೀತಿ ವಾ ಸಾಧ್ಯಭೇದಾನ್, ಉಪಾದಾನಾತ್ ಸಾಧ್ಯಮಾತ್ರಸಾಧಕೋ ವಾ। ೨೪೪. ಜನಾನ್ ಸಂಹಾರಸಮಯೇ ಅಪಹ್ನುತೇ ಅಪನಯತಿ ಇತಿ ಜಹ್ನುಃ। ಜಹಾತ್ಯವಿದುಷಃ, ಭಕ್ತಾನ್ ನಯತಿ ಪರಂ ಪದಮ್ ಇತಿ ವಾ। ೨೪೫. ನರಃ ಆತ್ಮಾ ತತೋ ಜಾತಾನಿ ಆಕಾಶಾದೀನಿ ನಾರಾಣಿ ಕಾರ್ಯಾಣಿ; ತಾನಿ ಅಯಂ ಕಾರಣಾತ್ಮನಾ ವ್ಯಾಪ್ನೋತಿ। ಅತಃ ತಾನಿ ಅಯನಮಸ್ಯ ಇತಿ ನಾರಾಯಣಃ।

ಯಚ್ಚ ಕಿಞ್ಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ।
ಅನ್ತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ॥

ಇತಿ ಮನ್ತ್ರವರ್ಣಾತ್ । (ಮಹಾ. ನಾ. ೧೩-೧,೨)

ನರಾಜ್ಜಾತಾನಿ ತತ್ತ್ವಾನಿ ನಾರಾಣೀತಿ ತತೋ ವಿದುಃ।
ತಾನ್ಯೇವ ಚಾಯನಂ ತಸ್ಯ ತೇನ ನಾರಾಯಣಃ ಸ್ಮೃತಃ॥

ಇತಿ ಮಹಾಭಾರತೇ। ನರಾಣಾಮ್ ಜೀವಾನಾಮ್ ಅಯನತ್ವಾತ್ ಪ್ರಲಯಃ ಇತಿ ವಾ ನಾರಾಯಣಃ, 'ಯತ್ಪ್ರಯನ್ತ್ಯಭಿಸಂವಿಶನ್ತಿ' (ತೈ.೩-೧) ಇತಿ ಶ್ರುತೇಃ। 'ನರಾಣಾಮಯನಂ ಯಸ್ಮಾತ್ತಸ್ಮಾನ್ನಾರಾಯಣಃ ಸ್ಮೃತಃ' (?) ಇತಿ ಬ್ರಹ್ಮವೈವರ್ತಾತ್।

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ।
ತಾ ಯದಸ್ಯಾಯನಂ ಪೂರ್ವಂ ತೇನ ನಾರಾಯಣಃ ಸ್ಮೃತಃ॥

ಇತಿ ಮನುವಚನಾತ್। (ಮನು.೧-೧೦)

ನಾರಾಯಣಾಯ ನಮ ಇತ್ಯಯಮೇವ ಸತ್ಯಃ।
ಸಂಸಾರಘೋರವಿಷಸಂಹರಣಾಯ ಮನ್ತ್ರಃ।
ಶೃಣ್ವನ್ತು ಭವ್ಯಮತಯೋ ಯತಯೋಽಸ್ತರಾಗಾ।
ಉಚ್ಚೈಸ್ತರಾಮುಪದಿಶಾಮ್ಯಹಮೂರ್ಧ್ವಬಾಹುಃ॥ (ನೃ.ಪು.೧೮-೩೧)

ಇತಿ ಶ್ರೀ ನಾರಸಿಂಹಪುರಾಣೇ। 'ನಯತೀತಿ **ನರಃ** ಪ್ರೋಕ್ತಃ ಪರಮಾತ್ಮಾ ಸನಾತನಃ' (?) ಇತಿ ವ್ಯಾಸವಚನಮ್॥

## (ಭಾಷ್ಯಾರ್ಥ)

ಸತ್ಕರೋತಿ ಎಂದರೆ ಗೌರವಿಸುತ್ತಾನೆ, ಆದ್ದರಿಂದ **ಸತ್ಕರ್ತನು**; ಪೂಜಿತರಾದವರಿಂದಲೂ ಗೌರವಿಸಲ್ಪಡುತ್ತಾನೆ, ಆದ್ದರಿಂದ **ಸತ್ಕೃತನು**; ನ್ಯಾಯದಿಂದ ನಡೆಯುವನಾದ್ದರಿಂದ **ಸಾಧುವು**; ಬೇರೆಬೇರೆಯ ಸಾಧ್ಯಗಳನ್ನು ಸಾಧಿಸುತ್ತಾನೆ, (ಆದ್ದರಿಂದ ಸಾಧು). ಉಪಾದಾನದಿಂದ[1] ಯಾವಯಾವದು ಸಾಧ್ಯವೋ ಅದೆಲ್ಲವನ್ನೂ ಸಾಧಿಸುವಾತನು (ಸಾಧು) ಎಂದಾದರೂ (ವ್ಯಾಖ್ಯಾನ). ಜನರನ್ನು ಸಂಹಾರಕಾಲದಲ್ಲಿ ಲಯಗೊಳಿಸುತ್ತಾನೆ, ಹೋಗಲಾಡಿಸುತ್ತಾನೆ, ಆದ್ದರಿಂದ **ಜಹ್ನುವು**; ಅಜ್ಞರನ್ನು ಬಿಡುತ್ತಾನೆ, ಭಕ್ತರನ್ನು ಪರಮಪದವಿಗೆ ಕರೆದೊಯ್ಯುತ್ತಾನೆ; ಆದ್ದರಿಂದ (ಜಹ್ನು) ಎಂದಾದರೂ ವ್ಯಾಖ್ಯಾನಮಾಡಬಹುದು.

'ನರ' ಎಂದರೆ ಆತ್ಮನು. ಅವನಿಂದ ಉಂಟಾದ ಆಕಾಶವೇ ಮುಂತಾದ ಕಾರ್ಯಗಳು **ನಾರ**. ಆ ನಾರಗಳೆಂಬ ಕಾರ್ಯಗಳನ್ನು ಇವನು ಕಾರಣರೂಪದಿಂದ ವ್ಯಾಪಿಸಿಕೊಂಡಿರುತ್ತಾನೆ. ಆದ್ದರಿಂದಲೂ ಅವು ಇವನಿಗೆ 'ಅಯನ' ವಾದ್ದರಿಂದ **ನಾರಾಯಣನು**. 'ಜಗತ್ತೆಲ್ಲವೂ ಯಾವ ಯಾವದು ಕಾಣುತ್ತದೆಯೋ, ಅಥವಾ ಕೇಳಬರುತ್ತದೆಯೋ ಅದೆಲ್ಲವನ್ನೂ ಒಳಗೂ ಹೊರಗೂ ವ್ಯಾಪಿಸಿಕೊಂಡು ನಾರಾಯಣನೇ ಇರುತ್ತಾನೆ'[2] ಎಂಬ ಮಂತ್ರವರ್ಣವು (ಇದಕ್ಕೆ ಪ್ರಮಾಣ). 'ನರನಿಂದ ತತ್ತ್ವಗಳುಂಟಾದವು. ಆದ್ದರಿಂದ ಅವನ್ನು **ನಾರಗಳೆನ್ನು**ತ್ತಾರೆ. ಅವೇ ಆತನಿಗೆ ಅಯನವಾಗಿರುವದರಿಂದ ಆತನು ನಾರಾಯಣನೆನಿಸಿರುತ್ತಾನೆ.(?)' ಎಂದು **ಮಹಾಭಾರತ**ದಲ್ಲಿದೆ. ನರರಿಗೆ ಎಂದರೆ ಜೀವರಿಗೆ ಪ್ರಲಯದಲ್ಲಿ ಅಯನವಾಗಿರುವದರಿಂದ (ಎಂದಾದರೂ ಅರ್ಥ); ಆದ್ದರಿಂದಲೂ ಈತನು **ನಾರಾಯಣನು**. 'ಯಾವದನ್ನು ಕುರಿತು ಹೋಗಿ (ಭೂತಗಳು) ಅದರಲ್ಲಿ ಲಯವಾಗುವವೋ (ಅದು ಬ್ರಹ್ಮವು;)' ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). 'ನಾರಗಳಿಗೆ ಅಯನವಾಗಿರುತ್ತಾನಲ್ಲವೆ, ಆದ್ದರಿಂದ ನಾರಾಯಣನೆನಿಸಿರುತ್ತಾನೆ' (?) ಎಂಬ **ಬ್ರಹ್ಮವೈವರ್ತ** (ಪುರಾಣವಚನ) ದಿಂದ (ಹೀಗೆಂದಾಗುತ್ತದೆ). 'ಅಪ್ಪು (ಜಲವು) ನಾರವೆನಿಸುತ್ತಿದೆ; ಅಪ್ಪು ನರನಿಂದ ಹುಟ್ಟಿದ್ದಷ್ಟೆ? ಆ (ಅಪ್ಪು) ಈತನಿಗೆ ಅಯನ (ಸ್ಥಾನ)ವಾದ್ದರಿಂದ, ನಾರಾಯಣನೆನಿಸಿರುತ್ತಾನೆ' ಎಂಬ ಮನುವಚನದಿಂದ **ನಾರಾಯಣನು** ಎಂದಾದರೂ ಹೇಳಬಹುದು. "ಸಂಸಾರವೆಂಬ ಭಯಂಕರವಾದ ವಿಷವನ್ನು ನಾಶಗೊಳಿಸುವದಕ್ಕೆ 'ನಾರಾಯಣಾಯ ನಮಃ' ಎಂಬಿದೇ ಸತ್ಯವಾದ ಮಂತ್ರವು. ಶುಭಬುದ್ಧಿಯುಳ್ಳ ಕಾಮರಹಿತರಾದ ಎಲೈ ಯತಿಗಳಿರಾ, ಕೇಳಿರಿ; ನಾನು ಕೈಗಳನ್ನು ಮೇಲಕ್ಕೆತ್ತಿಕೊಂಡು ತೀರಗಟ್ಟಿಯಾಗಿ (ಈ ಮಂತ್ರವನ್ನು) ಉಪದೇಶಿಸುವೆನು" ಎಂದು **ನಾರಸಿಂಹಪುರಾಣ**ದಲ್ಲಿದೆ. 'ಕರೆದೊಯ್ಯುತ್ತಾನೆ (ನಯತಿ)

1. 'ಉಪಾದಾನಕಾರಣವಾಗಿರುವದರಿಂದ' ಎಂದರ್ಥ ಮಾಡಬಹುದು. ಬೇಕೆನ್ನುವದರಿಂದ ಯಾವಯಾವದು ಯಾರು ಯಾರಿಗೆ ಸಾಧ್ಯವೋ ಅದನ್ನು ಸಾಧಿಸಿಕೊಡುತ್ತಾನೆ - ಎಂದೂ ಆಗಬಹುದೆಂತ ತೋರುತ್ತದೆ.
2. ಇದು ಆಗಲೇ ಹಿಂದೆ ಉದಾಹೃತವಾಗಿರುವ ವಾಕ್ಯ.

ಆದ್ದರಿಂದ ಸನಾತನನಾದ ಪರಮಾತ್ಮನು ನರನೆನಿಸುತ್ತಾನೆ' (?) ಎಂದು ವ್ಯಾಸವಚನವಿದೆ. ॥೩೯॥

**ಅಸಙ್ಖ್ಯೇಯೋऽಪ್ರಮೇಯಾತ್ಮಾ ವಿಶಿಷ್ಟಃ ಶಿಷ್ಟಕೃಚ್ಛುಚಿಃ।**
**ಸಿದ್ಧಾರ್ಥಃ ಸಿದ್ಧಸಙ್ಕಲ್ಪಃ ಸಿದ್ಧಿದಃ ಸಿದ್ಧಿಸಾಧನಃ ॥೪೦॥**

(ಭಾಷ್ಯ)

೨೪೭. ಯಸ್ಮಿನ್[1] ಸಂಖ್ಯಾ ನಾಮರೂಪಭೇದಾದಿಃ ನ ವಿದ್ಯತೇ ಅಸ್ಯ ಇತಿ ಅಸಂಖ್ಯೇಯಃ। ೨೪೮. ಅಪ್ರಮೇಯ ಆತ್ಮಾ ಸ್ವರೂಪಮ್ ಅಸ್ಯ ಇತಿ ಅಪ್ರಮೇಯಾತ್ಮಾ। ೨೪೯. ಅತಿಶೇತೇ ಸರ್ವಮ್; ಅತಃ ವಿಶಿಷ್ಟಃ। ೨೫೦. ಶಿಷ್ಟಂ ಶಾಸನಮ್; ತತ್ ಕರೋತಿ ಇತಿ ಶಿಷ್ಟಕೃತ್; ಶಿಷ್ಟಾನ್ ಕರೋತಿ ಪಾಲಯತಿ ಇತಿ ವಾ। ಸಾಮಾನ್ಯವಚನೋ ಧಾತುರ್ವಿಶೇಷವಚನೋ ದೃಷ್ಟಃ 'ಕುರು ಕಾಷ್ಠಾನಿ' ಇತಿ ಆಹರಣೇ ಯಥಾ ತದ್ವತ್ ಇತಿ ವಾ ಶಿಷ್ಟಕೃತ್। ೨೫೧. ನಿರಞ್ಜನಃ ಶುಚಿಃ॥

(ಭಾಷ್ಯಾರ್ಥ)

ಯಾವನಲ್ಲಿ ಸಂಖ್ಯೆಯು ಎಂದರೆ ನಾಮ, ರೂಪ, ಭೇಧ - ಮುಂತಾದದ್ದು ಇಲ್ಲವೋ ಅವನು **ಅಸಂಖ್ಯೇಯನು.**[2]

(ಪ್ರಮಾಣದಿಂದ) ಗೊತ್ತುಮಾಡುವದಕ್ಕೆ ಆಗದ ಆತ್ಮವು ಎಂದರೆ ಸ್ವರೂಪವು ಈತನದು; ಆದ್ದರಿಂದ (ಇವನು) **ಅಪ್ರಮೇಯಾತ್ಮನು;** ಎಲ್ಲವನ್ನೂ ಮೀರಿದವನು, ಆದ್ದರಿಂದ **ವಿಶಿಷ್ಟನು.** ಶಿಷ್ಟವು ಎಂದರೆ ಶಾಸನವು; ಅದನ್ನು (=ಆಳುವಿಕೆಯನ್ನು) ಮಾಡುತ್ತಾನೆ; ಆದ್ದರಿಂದ **ಶಿಷ್ಟಕೃತ್** (ಎನಿಸುವನು) ಶಿಷ್ಟರನ್ನು (ಕರೋತಿ) ಮಾಡುತ್ತಾನೆ, ಪಾಲಿಸುತ್ತಾನೆ, ಆದ್ದರಿಂದ **ಶಿಷ್ಟಕೃತ್** ಎಂದಾದರೂ ಆಗಬಹುದು. ಸಾಮಾನ್ಯವಾದ (ಅರ್ಥವನ್ನುಳ್ಳ ಕೃಧಾತುವು) ವಿಶೇಷಕ್ರಿಯೆಯನ್ನು ಹೇಳುವದು ಕಂಡಿದೆ; ಉದಾಹರಣೆಗೆ 'ಕುರು ಕಾಷ್ಠಾನಿ' (ಕಟ್ಟಿಗೆಗಳನ್ನು ಮಾಡು) ಎಂಬಲ್ಲಿ 'ಕಟ್ಟಿಗೆಯನ್ನು ತೆಗೆದುಕೊಂಡು ಬಾ' ಎಂಬ (ಅರ್ಥದಲ್ಲಿ ಬಳಸಿರುತ್ತದೆಯಷ್ಟೆ? ಹಾಗೆ). ಆದ್ದರಿಂದ (ಪಾಲಿಸುತ್ತಾನೆ ಎಂಬ ವಿಶೇಷಾರ್ಥದಲ್ಲಿ ಕೃಧಾತುವನ್ನುಪಯೋಗಿಸಿದೆ - ಎಂದಿಟ್ಟುಕೊಂಡಿದೆ) **ಶಿಷ್ಟಕೃತ್** ಎಂಬ ರೂಪವು (ಆಗುತ್ತದೆ). ಯಾವದರ ಅಂಟೂ ಇಲ್ಲದವನು (ಎಂಬರ್ಥದಲ್ಲಿ) **ಶುಚಿಯು.**

---

1. 'ಯಸ್ಮಿನ್' ಎಂದು ಮೊದಲಾದರೆ 'ಸಃ ಅಸಂಖ್ಯೇಯಃ' ಎಂದಿರಬೇಕು; 'ಅಸ್ಯೇತಿ' ಎಂಬುದನ್ನೇ ಇಟ್ಟುಕೊಂಡರೆ 'ಯಸ್ಮಿನ್' ಬೇಕಾಗುವುದಿಲ್ಲ. 'ಅಸ್ಯೇತಿ'ಗೆ ಬದಲು 'ಸಃ' ಎಂದಿಟ್ಟುಕೊಂಡು ಕನ್ನಡಿಸಿರುತ್ತೇನೆ.
2. 'ಸಂಖ್ಯಾತುಂ . ಯೋಗ್ಯಃ ಸಂಖ್ಯೇಯಃ ನಾಮರೂಪಾದಿವಿಶೇಷಃ, ನ ವಿದ್ಯತೇ ಯಸ್ಯ' ಎಂಬ ವ್ಯಾಖ್ಯಾನದಂತೆ ನಾಮ,ರೂಪ-ಮುಂತಾದ ವಿಶೇಷವಿಲ್ಲದವನು ಎಂದು ಅರ್ಥವಾಗುತ್ತದೆ;

(ಭಾಷ್ಯ)

೨೫೨. ಸಿದ್ಧಃ ನಿರ್ವೃತ್ತಃ ಅರ್ಥ್ಯಮಾನೋ ಅರ್ಥಃ ಅಸ್ಯೇತಿ ಸಿದ್ಧಾರ್ಥಃ। 'ಸತ್ಯಕಾಮಃ' (ಛಾಂ. ೮-೭-೧) ಇತಿ ಶ್ರುತೇಃ। ೨೫೩. ಸಿದ್ಧಃ ನಿಷ್ಪನ್ನಃ ಸಙ್ಕಲ್ಪಃ, ಅಸ್ಯ ಇತಿ ಸಿದ್ಧಸಙ್ಕಲ್ಪಃ। 'ಸತ್ಯಸಙ್ಕಲ್ಪಃ' (ಛಾಂ. ೮-೭-೧) ಇತಿ ಶ್ರುತೇಃ। ೨೫೪. ಸಿದ್ಧಿಂ ಫಲಂ ಕರ್ತೃಭ್ಯಃ ಸ್ವಾಧಿಕಾರಾನುರೂಪತೋ ದದಾತಿ ಇತಿ ಸಿದ್ಧಿದಃ। ೨೫೫. ಸಿದ್ಧೇಃ ಕ್ರಿಯಾಯಾಃ ಸಾಧಕತ್ವಾತ್ ಸಿದ್ಧಿಸಾಧನಃ ॥೪೦॥

(ಭಾಷ್ಯಾರ್ಥ)

ಸಿದ್ಧವಾದ ಎಂದರೆ ಏರ್ಪಟ್ಟ, ಬೇಕೆಂಬ ಪ್ರಯೋಜನವು ಈತನಿಗಿದೆ; ಆದ್ದರಿಂದ **ಸಿದ್ಧಾರ್ಥನು**; 'ಸತ್ಯಕಾಮನು' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ). ಸಿದ್ಧವಾದ ಎಂದರೆ ಏರ್ಪಟ್ಟ ಸಂಕಲ್ಪವು ಈತನದು; ಆದ್ದರಿಂದ **ಸಿದ್ಧಸಂಕಲ್ಪನು**. 'ಸತ್ಯಸಂಕಲ್ಪನು' ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು). ಸಿದ್ಧಿಯನ್ನು ಎಂದರೆ (ಕರ್ಮ) ಫಲವನ್ನು ಕರ್ಮವನ್ನು ಮಾಡುವವರಿಗೆ ಅವರವರಿಗೆ ತಕ್ಕಂತೆ ಕೊಡುತ್ತಾನೆ; ಆದ್ದರಿಂದ **ಸಿದ್ಧಿದನು**. ಸಿದ್ಧಿಯನ್ನು ಎಂದರೆ ಕ್ರಿಯೆಯನ್ನು ಸಾಧಿಸುವವನಾದ್ದರಿಂದ **ಸಿದ್ಧಿಸಾಧನನು**.

**ವೃಷಾಹೀ ವೃಷಭೋ ವಿಷ್ಣುರ್ವೃಷಪರ್ವಾ ವೃಷೋದರಃ।**
**ವರ್ಧನೋ ವರ್ಧಮಾನಶ್ಚ ವಿವಿಕ್ತಃ ಶ್ರುತಿಸಾಗರಃ ॥೪೧॥**

(ಭಾಷ್ಯ)

೨೫೬. ವೃಷೋ ಧರ್ಮಃ ಪುಣ್ಯಮ್; ತದೇವ ಅಹಃ ಪ್ರಕಾಶ ಸಾಧರ್ಮ್ಯಾತ್; (ಯಜ್ಞವಿಶೇಷೋ ವಾ) ದ್ವಾದಶಾಹಪ್ರಭೃತಿಃ ವೃಷಾಹಃ। ಸೋಽಸ್ಯಾಸ್ತೀತಿ ವೃಷಾಹೀ। ವೃಷಾಹಃ ಇತ್ಯತ್ರ 'ರಾಜಾಹಃಸಖಿಭ್ಯಷ್ಟಚ್' (ಪಾ. ೫-೪-೯೧) ಇತಿ ಟಚ್ ಪ್ರತ್ಯಯಃ ಸಮಾಸಾನ್ತಃ। ೨೫೭. ವರ್ಷತ್ಯೇಷ ಭಕ್ತೇಭ್ಯಃ ಕಾಮಾನ್ ಇತಿ ವೃಷಭಃ। ೨೫೮. ವಿಷ್ಣುಃ 'ವಿಷ್ಣುರ್ವಿಕ್ರಮಣಾತ್' (ಉದ್ಯೋಗ. ೭೦-೧೩) ಇತಿ ವ್ಯಾಸೋಕ್ತೇಃ। ೨೫೯. ವೃಷರೂಪಾಣಿ ಪರ್ವಾಣ್ಯಾಹುಃ, ಪರಂ ಧರ್ಮಾರುರುಕ್ಷೋರಿತ್ಯತಃ ವೃಷಪರ್ವಾ। ೨೬೦. ಪ್ರಜಾ ವರ್ಷತೀವ ಉದರಮಸ್ಯ - ಇತಿ ವೃಷೋದರಃ॥

(ಭಾಷ್ಯಾರ್ಥ)

'ವೃಷ' ಎಂದರೆ ಧರ್ಮವು, ಪುಣ್ಯವು ; ಆ (ವೃಷವುಳ್ಳ) ಅಹವು (ಹಗಲು). ಏಕೆಂದರೆ (ಈ ಎರಡಕ್ಕೂ) ಬೆಳಗುವಿಕೆ ಎಂಬುದು ಸಮಾನವಾಗಿ ಇರುತ್ತದೆ. (ಅಥವಾ) ಯಜ್ಞದಲ್ಲಿ ಒಂದು ಭೇದವು 'ಅಹ'; ದ್ವಾದಶಾಹವೇ ಮುಂತಾದ ಯಜ್ಞವು. (ಅಹಸ್ಸು); ಅದು ಈತನಿಗೆ ಇದೆಯಾದ್ದರಿಂದ **ವೃಷಾಹೀ** (ಎನಿಸುವನು). 'ವೃಷಾಹಃ' ಎಂಬಲ್ಲಿ 'ರಾಜಾಹಃಸಖಿಭ್ಯಷ್ಟಚ್' (ಪಾ.೫-೪-೯೧) ಎಂಬ (ಸೂತ್ರದಂತೆ)

ಸಮಾಸದ ಕೊನೆಯಲ್ಲಿ ಟಚ್ ಪ್ರತ್ಯಯವು (ಬಂದು) '**ವೃಷಾಹಃ**' ಎಂಬ ರೂಪವಾಗಿದೆ, ಈತನು ಭಕ್ತರುಗಳಿಗೆ (ಬೇಡಿದ) ಕಾಮುಗಳನ್ನು ಮಳೆಗರೆಯುತ್ತಾನೆ; ಆದ್ದರಿಂದ **ವೃಷಭನು. ವಿಷ್ಣುವು.** 'ಹೆಜ್ಜೆಯಿಟ್ಟು ದಾಟಿದ್ದರಿಂದ ವಿಷ್ಣು' ಎಂಬ ವ್ಯಾಸೋಕ್ತಿ ಯಿಂದ (ವಿಷ್ಣುವೆಂಬ ಹೆಸರು ಬಂದಿದೆ). ಪರಂಧಾಮವಾದ (ಮೋಕ್ಷವನ್ನು) ಏರಬೇಕೆಂಬಾತನಿಗೆ ವೃಷ (ಧರ್ಮ)ಗಳೆಂಬ ಸೋಪಾನದ ಮೆಟ್ಟಿಲುಗಳು ಇವೆ ಎನ್ನುತ್ತಾರೆ; ಆದ್ದರಿಂದ [1] ಈತನು **ವೃಷಪರ್ವನು.** ಪ್ರಜೆಗಳನ್ನು ಮಳೆಗರೆಯುವಂತಿರುವ ಉದರವು ಈತನದು; ಆದ್ದರಿಂದ **ವೃಷೋದರನು.**[2]

(ಭಾಷ್ಯ)

೨೬೧. ವರ್ಧಯತೀತಿ ವರ್ಧನಃ ೨೬೨. ಪ್ರಪಞ್ಚರೂಪೇಣ ವರ್ಧತೇ ಇತಿ ವರ್ಧಮಾನಃ। ೨೬೩. ಇತ್ಥಂ ವರ್ಧಮಾನೋಽಪಿ ಪೃಥಗೇವ ತಿಷ್ಠತಿ-ಇತಿ ವಿವಿಕ್ತಃ। ೨೬೪. ಶ್ರುತಯಃ ಸಾಗರ ಇವಾತ್ರ ನಿಧೀಯನ್ತೇ ಇತಿ ಶ್ರುತಿಸಾಗರಃ ॥೪೧॥

(ಭಾಷ್ಯಾರ್ಥ)

ವೃದ್ಧಿಗೊಳಿಸುತ್ತಾನೆ, ಆದ್ದರಿಂದ **ವರ್ಧನನು.** ಪ್ರಪಂಚರೂಪದಿಂದ ಬೆಳೆಯುತ್ತಾನೆ, ಆದ್ದರಿಂದ **ವರ್ಧಮಾನನು.** ಹೀಗೆ ಬೆಳೆದುಕೊಂಡರೂ ಬೇರೆಯಾಗಿಯೇ ಇದ್ದುಕೊಂಡಿರುತ್ತಾನೆ; ಆದ್ದರಿಂದ **ವಿವಿಕ್ತನು.** ಶ್ರುತಿಗಳು - ಸಾಗರದಲ್ಲಿ ಹೇಗೋ ಹಾಗೆ - ಈತನಲ್ಲಿ ಇಡಲ್ಪಟ್ಟಿವೆಯಾದ್ದರಿಂದ **ಶ್ರುತಿಸಾಗರನು.**

**ಸುಭುಜೋ ದುರ್ಧರೋ ವಾಗ್ಮೀ ಮಹೇನ್ದ್ರೋ ವಸುದೋ ವಸುಃ।**
**ನೈಕರೂಪೋ ಬೃಹದ್ರೂಪಃ ಶಿಪಿವಿಷ್ಟಃ ಪ್ರಕಾಶನಃ। ॥೪೨॥**

(ಭಾಷ್ಯ)

೨೬೫. ಶೋಭನಾಃ ಭುಜಾಃ, ಜಗದ್ರಕ್ಷಕರಾ ಅಸ್ಯ ಇತಿ ಸುಭುಜಃ ೨೬೬. ಪೃಥಿವ್ಯಾದೀನ್ಯಪಿ ಲೋಕೇ ಧಾರಕಾಣಿ, ಅನ್ಯೈರ್ಧಾರಯಿತುಮ್ ಅಶಕ್ಯಾನಿ ಧಾರಯನ್ ನ ಕೇನಚಿತ್ ಧಾರಯಿತುಂ ಶಕ್ಯಃ ಇತಿ ದುರ್ಧರಃ। ದುಃಖೇನ ಧ್ಯಾನಸಮಯೇ ಮುಮುಕ್ಷುಭಿಃ ಹೃದಯೇ ಧಾರ್ಯತೇ ಇತಿ ವಾ ದುರ್ಧರಃ। ೨೬೭. ಯತೋ ನಿಃಸೃತಾ ಬ್ರಹ್ಮಮಯೀ ವಾಕ್, ತಸ್ಮಾತ್ ವಾಗ್ಮೀ। ೨೬೮. ಮಹಾಂಶ್ಚ ಅಸೌ ಇನ್ದ್ರಶ್ಚ ಇತಿ ಮಹೇನ್ದ್ರಃ; ಈಶ್ವರಾಣಾಮಪೀಶ್ವರಃ। ೨೬೯. ವಸು ಧನಂ ದದಾತೀತಿ ವಸುದಃ। 'ಅನ್ನಾದೋ ವಸುದಾನಃ' (ಬೃ. ೪-೪-೨೪) ಇತಿ ಶ್ರುತೇಃ। ೨೭೦. ದೀಯಮಾನಂ ತದ್ವಸ್ವಪಿ ಸ ಏವೇತಿ ವಾ ವಸುಃ। ಆಚ್ಛಾದಯತಿ

1. ವೃಷಗಳು ಎಂದರೆ ಶ್ರವಣಮನನನಿದಿಧ್ಯಾಸನಗಳು ಈತನ ಪರಮಪದಕ್ಕೆ ಏರುವ ಮೆಟ್ಟಿಲುಗಳಂತಿವೆ - ಎಂದು ವ್ಯಾಖ್ಯಾನ.

2. ಶ್ರುತಿಗಳೆಲ್ಲ ತಾತ್ಪರ್ಯದಿಂದ ಈತನನ್ನೇ ಹೇಳುತ್ತವೆಯಾದ್ದರಿಂದ.

ಆತ್ಮಸ್ವರೂಪಂ ಮಾಯಯಾ ಇತಿ ವಾ ವಸುಃ। ಅನ್ತರಿಕ್ಷ ಏವ ವಸತಿ ನಾನ್ಯತ್ರ ಇತಿ ಅಸಾಧಾರಣೇನ ವಸನೇನ ವಾಯುರ್ವಾ ವಸುಃ। 'ವಸುರನ್ತರಿಕ್ಷಸತ್' (ಕಾ.೫-೨) ಇತಿ ಶ್ರುತೇಃ॥

## (ಭಾಷ್ಯಾರ್ಥ)

ಒಳ್ಳೆಯ, ಜಗತ್ತನ್ನು ರಕ್ಷಿಸುವ, ಭುಜಗಳು ಈತನಿಗಿವೆಯಾದ್ದರಿಂದ **ಸುಭುಜನು.** ಜನರನ್ನು ಧರಿಸಿರುವ, ಮತ್ತೊಬ್ಬರು ಧರಿಸುವದಕ್ಕೆ ಆಗದೆ ಇರುವ ಪೃಥಿವ್ಯಾದಿಗಳನ್ನು ಕೂಡ ಧರಿಸುವವನಾಗಿ, ಮತ್ತೊಬ್ಬರು ಧರಿಸುವದಕ್ಕೆ ಆಗದೆ ಇರುವನೆಂಬ ಕಾರಣದಿಂದ **ದುರ್ಧರನು;** ಧ್ಯಾನಸಮಯದಲ್ಲಿ ಮುಮುಕ್ಷುಗಳು ಕಷ್ಟದಿಂದ ಹೃದಯದಲ್ಲಿ ಧರಿಸಿರುತ್ತಾರೆ - ಎಂಬ ಕಾರಣದಿಂದಲಾದರೂ (ಈತನು) **ದುರ್ಧರನು.** ಯಾವನಿಂದ ಬ್ರಹ್ಮಮಯವಾದ ವಾಕ್ಕು (ವೇದ)ಗಳು ಹೊರಬಂದವೋ, ಆದ್ದರಿಂದ (ಆತನು) **ವಾಗ್ಮಿಯು.** ದೊಡ್ಡವನಾದ ಇಂದ್ರನು, ಆದ್ದರಿಂದ **ಮಹೇಂದ್ರನು;** ಈಶ್ವರರಾದವರಿಗೂ ಈಶ್ವರನಾಗಿರುವಾತನು ಎಂದರ್ಥ. ವಸು ಎಂದರೆ ಧನವನ್ನು ಕೊಡುತ್ತಾನಾದ್ದರಿಂದ **ವಸುದನು.** 'ಅನ್ನಾದನು, ವಸುದಾನನು' ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಹೀಗೆ (ಈತನು) ಕೊಡುವ ಆ ವಸುವು ಕೂಡ ಆತನೇ, ಆದ್ದರಿಂದ **ವಸುವು.** ತನ್ನ ಸ್ವರೂಪವನ್ನು ಮಾಯೆಯಿಂದ ಮರೆಮಾಚಿಕೊಂಡಿರುತ್ತಾನೆ - ಎಂಬರ್ಥದಿಂದಲೂ (ಈತನು) **ವಸುವು.** ಅಂತರಿಕ್ಷದಲ್ಲಿಯೇ ವಾಸಮಾಡಿಕೊಂಡಿರುತ್ತಾನೆ. ಬೇರೆಡೆಯಲ್ಲಲ್ಲ; ಆದ್ದರಿಂದ ವಾಯುವು ಅಂಥ ಅಸಾಧಾರಣವಸತಿಯಿಂದ 'ವಸು' ಎನ್ನಿಸಿಕೊಂಡಿರುತ್ತಾನೆ; (ಆ ವಾಯುರೂಪದಿಂದಿರುವದರಿಂದ ಈತನು ವಸುವು) 'ಅಂತರಿಕ್ಷದಲ್ಲಿರುವ ವಸು' ಎಂಬ ಶ್ರುತಿಯು ಇದಕ್ಕೆ ಪ್ರಮಾಣವು.

## (ಭಾಷ್ಯ)

೨೭೧. ಏವಂ ರೂಪಮ್ ಅಸ್ಯ ನ ವಿದ್ಯತೇ ಇತಿ ನೈಕರೂಪಃ। 'ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ' (ಬೃ. ೨-೫-೧೯) ಇತಿ ಶ್ರುತೇಃ। 'ಜ್ಯೋತೀಂಷಿ ವಿಷ್ಣುಃ' (ವಿ.ಪು.೨-೧೨-೩೮) ಇತ್ಯಾದಿಸ್ಮೃತೇಶ್ಚ। ೨೭೨. ಬೃಹತ್ ಮಹತ್ ವರಾಹಾದಿರೂಪಮ್ ಅಸ್ಯ ಇತಿ ಬೃಹದ್ರೂಪಃ। ೨೭೩. ಶಿಪಯಃ ಪಶವಃ, ತೇಷು ವಿಶತಿ ಪ್ರತಿತಿಷ್ಠತಿ ಯಜ್ಞರೂಪೇಣ ಇತಿ ಶಿಪಿವಿಷ್ಟಃ। 'ಯಜ್ಞೋ ವೈ ವಿಷ್ಣುಃ ಪಶವಃ ಶಿಪಿಃ ಯಜ್ಞ ಏವ ಪಶುಷು ಪ್ರತಿತಿಷ್ಠತಿ' (ತೈ.ಸಂ. ೨-೫-೫) ಇತಿ ಶ್ರುತೇಃ। ಶಿಪಯೋ ರಶ್ಮಯಃ। ತೇಷು ನಿವಿಷ್ಟ ಇತಿ ವಾ॥

ಶೈತ್ಯಾಚ್ಛಯನಯೋಗಾಚ್ಚ ಶೀತಿ ವಾರಿ ಪ್ರಚಕ್ಷತೇ।
ತತ್ಪಾನಾದ್ ರಕ್ಷಣಾಚ್ಚೈವ ಶಿಪಯೋ ರಶ್ಮಯೋ ಮತಾಃ।
ತೇಷು ಪ್ರವೇಶಾದ್ ವಿಶ್ವೇಶಃ ಶಿಪಿವಿಷ್ಟ ಇಹೋಚ್ಯತೇ॥ (?)

೨೭೪. ಸರ್ವೇಷಾಂ ಪ್ರಕಾಶನಶೀಲತ್ವಾದ್ ಪ್ರಕಾಶನಃ ॥೪೨॥

(ಭಾಷ್ಯಾರ್ಥ)

ಈತನಿಗೆ ಒಂದೇ (ಗೊತ್ತಾದ) ರೂಪವು ಇಲ್ಲವಾದ್ದರಿಂದ **ನೈಕರೂಪನು.** 'ಇಂದ್ರನು (ಈಶ್ವರನು) ಮಾಯೆಗಳಿಂದ ಬಹುರೂಪನಾಗಿ ಕಾಣಬರುತ್ತಿದ್ದಾನೆ' ಎಂಬ ಶ್ರುತಿಯು ಇದಕ್ಕೆ ಪ್ರಮಾಣ. 'ನಕ್ಷತ್ರಗಳು ವಿಷ್ಣುವು' ಮುಂತಾದ ಸ್ಮೃತಿಯಿಂದಲೂ (ಇದು ಸಿದ್ಧವಾಗುತ್ತದೆ). ಬೃಹತ್ ಎಂದರೆ ದೊಡ್ಡದಾದ - ಭೂಮಿಯನ್ನು ಎತ್ತುವ ವರಾಹವೇ ಮುಂತಾದ ರೂಪವು ಈತನದು; ಆದ್ದರಿಂದ **ಬೃಹದ್ರೂಪನು.** ಶಿಪಿಗಳೆಂದರೆ ಪಶುಗಳು; ಅವುಗಳಲ್ಲಿ ಯಜ್ಞರೂಪದಿಂದ ಪ್ರವೇಶಿಸಿರುತ್ತಾನಾದ್ದರಿಂದ, ಇದ್ದುಕೊಂಡಿರುತ್ತಾನಾದ್ದರಿಂದ **ಶಿಪಿವಿಷ್ಟನು.** 'ಯಜ್ಞವೇ ವಿಷ್ಣು, ಪಶುಗಳೇ ಶಿಪಿ, ಯಜ್ಞವೇ ಪಶುಗಳೊಳಗೆ ಇದ್ದುಕೊಂಡಿರುತ್ತದೆ' ಎಂದು ಶ್ರುತಿಯಿದೆ. ಶಿಪಿಗಳೆಂದರೆ ರಶ್ಮಿಗಳು; ಅವುಗಳಲ್ಲಿ ಇರುತ್ತಾನೆ - ಎಂಬ ಕಾರಣದಿಂದಲೂ **ಶಿಪಿವಿಷ್ಟನು.** 'ಶೈತ್ಯದಿಂದಲೂ ಶಯನದ (ಇರುವಿಕೆಯ) ಸಂಬಂಧವಿರುವದರಿಂದಲೂ 'ಶಿ' ಎಂದು ನೀರನ್ನು ಕರೆಯುತ್ತಾರೆ. ಅದನ್ನು ಪಾನಮಾಡುವದರಿಂದಲೂ ಪಾಲಿಸುವದರಿಂದಲೂ ರಶ್ಮಿಗಳು 'ಶಿಪಿ'ಗಳು ಎನಿಸುತ್ತವೆ. ಆ (ರಶ್ಮಿ)ಗಳಲ್ಲಿ ಒಳಹೊಕ್ಕಿರುವದರಿಂದ ಜಗತ್ತಿಗೆ ಈಶ್ವರನಾಗಿರುವ (ಈತನು) ಶಿಪಿವಿಷ್ಟನೆನಿಸಿರುತ್ತಾನೆ' (?) ಎಲ್ಲವನ್ನೂ ಬೆಳಗಿ ತೋರಿಸುವ ಸ್ವಭಾವದವನಾದ್ದರಿಂದ **ಪ್ರಕಾಶನನು.**

**ಓಜಸ್ತೇಜೋದ್ಯುತಿಧರಃ ಪ್ರಕಾಶಾತ್ಮಾ ಪ್ರತಾಪನಃ।**
**ಋದ್ಧಃ ಸ್ಪಷ್ಟಾಕ್ಷರೋ ಮನ್ತ್ರಶ್ಚನ್ದ್ರಾಂಶುರ್ಭಾಸ್ಕರದ್ಯುತಿಃ ॥೪೩॥**

(ಭಾಷ್ಯ)

೨೭೫. ಓಜಃ ಪ್ರಾಣಬಲಮ್, ತೇಜಃ ಶೌರ್ಯಾದಯೋ ಗುಣಾಃ, ದ್ಯುತಿಃ ದೀಪ್ತಿಃ ತಾಃ ಧಾರಯತೀತಿ ಓಜಸ್ತೇಜೋದ್ಯುತಿಧರಃ। ಅಥವಾ ಓಜಸ್ತೇಜಃ ಇತಿ ನಾಮದ್ವಯಮ್; 'ಬಲಂ ಬಲವತಾಂ ಚಾಹಮ್' (ಗೀ. ೭-೧೧), 'ತೇಜಸ್ತೇಜಸ್ವಿನಾಮಹಮ್' (ಗೀ. ೭-೧೦) ಇತಿ ಭಗವದ್ವಚನಾತ್। ದ್ಯುತಿಂ ಜ್ಞಾನಲಕ್ಷಣಾಂ ದೀಪ್ತಿಂ ಧಾರಯತೀತಿ ದ್ಯುತಿಧರಃ। ೨೭೬. ಪ್ರಕಾಶರೂಪ ಆತ್ಮಾ ಯಸ್ಯ ಸ ಪ್ರಕಾಶಾತ್ಮಾ। ೨೭೭. ಸವಿತ್ರಾದಿಭಿಃ ವಿಭೂತಿಭಿಃ ಪ್ರತಾಪಯತೀತಿ ಪ್ರತಾಪನಃ॥

(ಭಾಷ್ಯಾರ್ಥ)

ಓಜಸ್ಸೆಂದರೆ ಪ್ರಾಣದ ಬಲವು, ತೇಜಸ್ಸೆಂದರೆ ಶೌರ್ಯಾದಿಗುಣಗಳು, ದ್ಯುತಿ ಎಂದರೆ ಕಾಂತಿ; ಅವುಗಳನ್ನು ಧರಿಸಿರುತ್ತಾನಾದ್ದರಿಂದ **ಓಜಸ್ತೇಜೋದ್ಯುತಿಧರನು.** ಅಥವಾ ಓಜಸ್ಸು, ತೇಜಸ್ಸು - ಎಂಬಿವು ಎರಡು ನಾಮಗಳು. 'ಬಲವಂತರ ಬಲವು ನಾನು', 'ತೇಜಸ್ವಿಗಳ ತೇಜಸ್ಸು ನಾನು' - ಎಂದು ಭಗವದ್ವಚನದಿಂದ

(ಇದು ಸಿದ್ಧವಾಗಿದೆ). ದ್ಯುತಿಯನ್ನು ಎಂದರೆ ಜ್ಞಾನಲಕ್ಷಣವಾದ ಕಾಂತಿಯನ್ನು ಧರಿಸಿರುತ್ತಾನಾದ್ದರಿಂದ **ದ್ಯುತಿಧರನು.** (ಚೈತನ್ಯ) ಪ್ರಕಾಶರೂಪವಾದ ಸ್ವರೂಪವು ಯಾವನಿಗಿದೆಯೋ, ಆ (ಈತನು) **ಪ್ರಕಾಶಾತ್ಮನು.** ಸೂರ್ಯನೇ ಮುಂತಾದ ವಿಭೂತಿಗಳಿಂದ ಎಲ್ಲವನ್ನೂ ತಪಿಸುತ್ತಿರುವನಾದ್ದರಿಂದ **ಪ್ರತಾಪನನು.**

## (ಭಾಷ್ಯ)

೨೭೮. ಧರ್ಮಜ್ಞಾನವೈರಾಗ್ಯಾದಿಭಿರುಪೇತತ್ವಾತ್ ಋದ್ಧಃ। ೨೭೯. ಸ್ಪಷ್ಟಮ್ ಉದಾತ್ತಮ್ ಓಙ್ಕಾರಲಕ್ಷಣಮ್ ಅಕ್ಷರಮ್ ಅಸ್ಯಾಸ್ತೀತಿ ಸ್ಪಷ್ಟಾಕ್ಷರಃ ೨೮೦. ಋಗ್ಯಜುಃಸಾಮಲಕ್ಷಣಃ ಮನ್ತ್ರಃ। ಮನ್ತ್ರಬೋಧ್ಯತ್ವಾದ್ವಾ ಮನ್ತ್ರಃ। ೨೮೧. ಸಂಸಾರತಾಪತಿಗ್ಮಾಂಶುತಾಪತಾಪಿತಚೇತಸಾಂ ಚನ್ದ್ರಾಂಶುರಿವ ಆಹ್ಲಾದಕರತ್ವಾತ್ ಚನ್ದ್ರಾಂಶುಃ। ೨೮೨. ಭಾಸ್ಕರದ್ಯುತಿಸಾಧರ್ಮ್ಯಾತ್ ಭಾಸ್ಕರದ್ಯುತಿಃ॥೪೩॥

## (ಭಾಷ್ಯಾರ್ಥ)

ಧರ್ಮ, ಜ್ಞಾನ, ವೈರಾಗ್ಯ - ಮುಂತಾದವುಗಳಿಂದ ಒಡಗೂಡಿರುವದರಿಂದ **ಋದ್ಧನು.** ಸ್ಪಷ್ಟವಾದ (ಸ್ಫುಟವಾದ) ಓಂಕಾರವೆಂಬ ಅಕ್ಷರವು[1] ಈತನದು; ಆದ್ದರಿಂದ **ಸ್ಪಷ್ಟಾಕ್ಷರನು. ಮಂತ್ರವು** ಎಂದರೆ ಋಕ್ಕು, ಯಜುಸ್ಸು, ಸಾಮ - ಎಂಬ ರೂಪದ್ದು.[2] ಈತನು ಅದೇ ಮಂತ್ರದಿಂದ ಅರಿಯಲ್ಪಡುತ್ತಾನೆ; ಆದ್ದರಿಂದಲಾದರೂ ಈತನು **ಮಂತ್ರವು.** ಸಂಸಾರತಾಪವೆಂಬ ಉಷ್ಣರಶ್ಮಿಯಿಂದ ಬೆಂದಿರುವ ಚಿತ್ತವುಳ್ಳವರಿಗೆ ಚಂದ್ರಕಿರಣದಂತೆ ಆಹ್ಲಾದವನ್ನುಂಟು ಮಾಡುತ್ತಿರುವದರಿಂದ **ಚಂದ್ರಾಂಶುವು.** ಭಾಸ್ಕರ (ಸೂರ್ಯ)ನ ಪ್ರಕಾಶಕ್ಕೆ ಸಮಾನವಾಗಿರುವ ಧರ್ಮವುಳ್ಳವನಾದ್ದರಿಂದ **ಭಾಸ್ಕರದ್ಯುತಿಯು.** ॥೪೩॥

**ಅಮೃತಾಂಶೂದ್ಭವೋ ಭಾನುಃ ಶಶಬಿನ್ದುಃ ಸುರೇಶ್ವರಃ।**
**ಔಷಧಂ ಜಗತಃ ಸೇತುಃ ಸತ್ಯಧರ್ಮಪರಾಕ್ರಮಃ ॥೪೪॥**

## (ಭಾಷ್ಯ)

೨೮೩. ಮಥ್ಯಮಾನೇ ಪಯೋನಿಧೌ ಅಮೃತಾಂಶೋಶ್ಚನ್ದ್ರಸ್ಯ ಉದ್ಭವಃ ಯಸ್ಮಾತ್ ಸ ಅಮೃತಾಂಶೂದ್ಭವಃ। ೨೮೪. ಭಾತೀತಿ ಭಾನುಃ; 'ತಮೇವ ಭಾನ್ತಮನುಭಾತಿ ಸರ್ವಮ್' (ಮುಂ. ೨-೨-೧೦, ಕಾ.೫-೧೫) ಇತಿ ಶ್ರುತೇಃ। ೨೮೫. ಶಶ ಇವ ಬಿನ್ದುಃ ಲಾಞ್ಛನಮಸ್ಯೇತಿ ಶಶಬಿನ್ದುಶ್ಚನ್ದ್ರಃ। ತದ್ವತ್ ಪ್ರಜಾಃ ಪುಷ್ಣಾತೀತಿ ಶಶಬಿನ್ದುಃ।

1. ಓಂಕಾರವು ಸ್ಪಷ್ಟವಾಗಿ ಆತ್ಮನನ್ನು ತಿಳಿಸುವ ಶಬ್ದವು; ಅದು ಈತನ ವಿಭೂತಿಯೇ.
2. ಇಂತಿಷ್ಟು ಅಕ್ಷರಗಳೆಂದು ಗೊತ್ತಾಗಿರುವ ಮಂತ್ರವು ಋಕ್ಕು. ಅದೇ ಗಾನರೂಪವಾದರೆ ಸಾಮ; ನಿಯತವಾದ ಪಾದಸಂಖ್ಯೆಯಿಲ್ಲದ ಮಂತ್ರವು ಯಜುಸ್ಸು.

'ಪುಷ್ಣಾಮಿ ಚೌಷಧೀಃ ಸರ್ವಾಃ ಸೋಮೋ ಭೂತ್ವಾ ರಸಾತ್ಮಕಃ' (ಗೀ. ೧೫-೧೩) ಇತಿ ಭಗವದ್ವಚನಾತ್। ೨೮೬. ಸುರಾಣಾಂ ದೇವಾನಾಂ ಶೋಭನದಾತ್ರೂಣಾಂ ಚ ಈಶ್ವರಃ ಸುರೇಶ್ವರಃ॥

## (ಭಾಷ್ಯಾರ್ಥ)

ಕ್ಷೀರಸಾಗವನ್ನು ಕಡೆಯುತ್ತಿರುವಲ್ಲಿ ಅಮೃತಾಂಶುವಿನ ಎಂದರೆ ಚಂದ್ರನ ಉದ್ಭವ (ಜನ್ಮವು) ಕಾರಣರೂಪನಾದ ಯಾವನಿಂದ ಆಯಿತೋ, ಆ (ಭಗವಂತನು) **ಅಮೃತಾಂಶೂದ್ಭವನು.** (ಭಾತಿ=) ಪ್ರಕಾಶಿಸುತ್ತಾನೆ, ಆದ್ದರಿಂದ **ಭಾನುವು.** 'ಹೊಳೆಯುತ್ತಿರುವ ಆತನನ್ನು ಅನುಸರಿಸಿಯೇ ಎಲ್ಲವೂ ಹೊಳೆಯುತ್ತದೆ' ಎಂಬ ಶ್ರುತಿಯಿಂದ (ಈ ಹೆಸರು) ಒಪ್ಪುತ್ತದೆ. ಶಶ (ಮೊಲ)ದಂತೆ ಬಿಂದು ಎಂದರೆ ಗುರುತು ಇರುವದರಿಂದ ಚಂದ್ರನು ಶಶಬಿಂದು. ಆತನಂತೆ ಪ್ರಜೆಗಳನ್ನು ಪೋಷಿಸುತ್ತಾನೆ; ಆದ್ದರಿಂದ (ಈತನು) **ಶಶಬಿಂದುವು.** 'ರಸಾತ್ಮಕನಾದ ಚಂದ್ರನಾಗಿ ಎಲ್ಲಾ ಗಿಡಮರಗಳನ್ನೂ ಪೋಷಿಸುತ್ತೇನೆ' ಎಂಬ ಭಗವದ್ವಚನದಿಂದ ಈ ಹೆಸರು (ಬಂದಿದೆ).[1] ಸುರರಿಗೂ ಎಂದರೆ ದೇವತೆಗಳಿಗೂ, ಶೋಭನ (ಮಂಗಲ)ವನ್ನು ಕೊಡುವವರಿಗೂ ಈಶ್ವರನು, (ಆದ್ದರಿಂದ) **ಸುರೇಶ್ವರನು.**

## (ಭಾಷ್ಯ)

೨೮೭. ಸಂಸಾರರೋಗಭೇಷಜತ್ವಾತ್ ಔಷಧಮ್। ೨೮೮. ಜಗತಾಂ ಸಮುತ್ತಾರಣಹೇತುತ್ವಾತ್ ಅಸಂಭೇದಕಾರಣತ್ವಾದ್ವಾ ಸೇತುವದ್ ವರ್ಣಾಶ್ರಮ-ಧರ್ಮಾದೀನಾಂ ಜಗತಃ ಸೇತುಃ। 'ಏಷ ಸೇತುರ್ವಿಧರಣ ಏಷಾಂ ಲೋಕಾನಾಮಸಂಭೇದಾಯ' (ಬೃ.೪-೪-೨೨) ಇತಿ ಶ್ರುತೇಃ। ೨೮೯. ಸತ್ಯಾಃ ಅವಿತಥಾಃ ಧರ್ಮಾಃ ಜ್ಞಾನಾದಯೋ ಗುಣಾಃ ಪರಾಕ್ರಮಶ್ಚ ಯಸ್ಯ ಸಃ ಸತ್ಯಧರ್ಮಪರಾಕ್ರಮಃ॥

## (ಭಾಷ್ಯಾರ್ಥ)

೨೮೭. ಸಂಸಾರವೆಂಬ ರೋಗಕ್ಕೆ ಔಷಧಿಯಾಗಿರುವದರಿಂದ **ಔಷಧವು.** ಜಗತ್ತಿನಿಂದ ದಾಟಿಸುವವನಾದ್ದರಿಂದಲೂ ಅಥವಾ ಅಣೆಕಟ್ಟಿನಂತೆ ವರ್ಣಾಶ್ರಮಧರ್ಮಗಳು (ಒಂದರೊಡನೊಂದು ಸೇರಿಕೊಳ್ಳದಂತೆ) ನೋಡಿಕೊಳ್ಳುವ ಕಾರಣನಾಗಿ ಇರುವದರಿಂದಲೂ **ಜಗತಃಸೇತುವು.** 'ಈತನೇ ಲೋಕ(ಜನ)ಗಳ (ಕರ್ಮಫಲವು) ಮಿಶ್ರವಾಗದಂತೆ ಇರುವದಕ್ಕೆ ತಡೆಯಾಗಿರುವ ಸೇತು' ಎಂಬ ಶ್ರುತಿಯಂತೆ (ಈ ನಾಮದ ಅರ್ಥವಿದು). ಸತ್ಯವಾದ ಎಂದರೆ ಮಾರ್ಪಡದ ಧರ್ಮಗಳು ಎಂದರೆ ಜ್ಞಾನಾದಿಗಳೂ ಪರಾಕ್ರಮವೂ ಯಾವಾತನಿಗಿವೆಯೋ ಆ (ಈತನು) **ಸತ್ಯಧರ್ಮಪರಾಕ್ರಮನು.**

1. ಚಂದ್ರನು ಭಗವಂತನ ವಿಭೂತಿಯಾದ್ದರಿಂದ ಔಷಧಿಗಳನ್ನು ಪೋಷಿಸುವಂತೆ ಪ್ರಜೆಗಳನ್ನು ಈತನು ಪೋಷಿಸುತ್ತಾನೆ - ಎಂಬ ಭಾವವಿರಬಹುದು.

**ಭೂತಭವ್ಯಭವನ್ನಾಥಃ ಪವನಃ ಪಾವನೋಽನಲಃ।**
**ಕಾಮಹಾ ಕಾಮಕೃತ್ ಕಾನ್ತಃ ಕಾಮಃ ಕಾಮಪ್ರದಃ ಪ್ರಭುಃ ॥೪೫॥**

## (ಭಾಷ್ಯ)

೨೯೦. ಭೂತಭವ್ಯಭವತಾಂ ಭೂತಗ್ರಾಮಾಣಾಂ ನಾಥಃ। ತೈರ್ಯಾಚ್ಯತೇ ತಾನುಪತಪತಿ, ತೇಷಾಮೀಷ್ಟೇ ಶಾಸ್ತಿ ಇತಿ ವಾ ಭೂತಭವ್ಯಭವನ್ನಾಥಃ। ೨೯೧. ಪವತೇ ಇತಿ ಪವನಃ 'ಪವನಃ ಪವತಾಮಸ್ಮಿ' (ಗೀ.೧೦-೩೧) ಇತಿ ಭಗವದ್ವಚನಾತ್। ೨೯೨. ಪಾವಯತೀತಿ ಪಾವನಃ। 'ಭೀಷಾಽಸ್ಮಾದ್ವಾತಃ ಪವತೇ' (ತೈ. ೨-೮) ಇತಿ ಶ್ರುತೇಃ। ೨೯೩. ಅನಾನ್ ಪ್ರಾಣಾನ್ ಆತ್ಮತ್ವೇನ ಲಾತೀತಿ ಜೀವಃ ಅನಲಃ, ಣಲತೇರ್ಗನ್ಧವಾಚಿನೋ ನಞ್ಪೂರ್ವಾದ್ ವಾ; 'ಅಗನ್ಧಮರಸಮ್' (ಬೃ.೩-೮-೮) ಇತಿ ಶ್ರುತೇಃ। ನ ಆಲಂ ಪರ್ಯಾಪ್ತಮಸ್ಯ ವಿದ್ಯತೇ ಇತಿ ವಾ ಅನಲಃ॥

## (ಭಾಷ್ಯಾರ್ಥ)

ಹಿಂದಿನ, ಮುಂದಿನ, (ಮತ್ತು) ಈಗಿನ ಕಾಲದ ಪ್ರಾಣಿಸಮುದಾಯಗಳ ನಾಥನು; (ತೈರ್ಯಾಚ್ಯತೇ =) ಅವುಗಳಿಂದ ಯಾಚಿಸಲ್ಪಡುತ್ತಾನೆ, ಅವರನ್ನು ತಾಪಗೊಳಿಸುತ್ತಾನೆ,[1] ಅಥವಾ ಅವರನ್ನು ಆಳುತ್ತಾನೆ, ಕಟ್ಟುಮಾಡುತ್ತಾನೆ; ಆದ್ದರಿಂದ **ಭೂತಭವ್ಯಭವನ್ನಾಥನು.**[2] (ಪವತೇ) ಶುದ್ಧಗೊಳಿಸುತ್ತಾನೆ, ಆದ್ದರಿಂದ **ಪವನನು.** 'ಪಾವನಗೊಳಿಸುವದರಲ್ಲಿ ಪವನನಾಗಿದ್ದಾನೆ' ಎಂಬ ಭಗವಂತನ ವಚನದಿಂದ (ಈ ಅರ್ಥ). (ಪಾವಯತಿ=) ಚಲಿಸುವಂತೆ ಮಾಡುತ್ತಾನೆ,[3] ಆದ್ದರಿಂದ **ಪಾವನನು.** 'ಇವನ ಹೆದರಿಕೆಯಿಂದ ವಾಯುವು ಬೀಸುತ್ತಾನೆ' ಎಂಬ ಶ್ರುತಿಯಿಂದ (ಈ ಅರ್ಥ). ಅನರುಗಳನ್ನು ಎಂದರೆ ಪ್ರಾಣಗಳನ್ನು ತಾನೇ ಆಗಿ (ಲಾತಿ) ಸ್ವೀಕರಿಸುತ್ತಾನೆ,[4] ಆದ್ದರಿಂದ ಜೀವನು ಅನಲನು. ಅಥವಾ ನಞ್ಪೂರ್ವಕ ಗಂಧವಾಚಿಯಾದ[5] ಣಲ್ ಧಾತ್ವರ್ಥದಿಂದ (ಅನಲಶಬ್ದವು) ಹುಟ್ಟಿರುವದರಿಂದ (ಈ ಅರ್ಥ); 'ಅಗಂಧವಾದದ್ದು, ರಸರಹಿತವಾದದ್ದು'[6] ಎಂಬ ಶ್ರುತಿಯಿಂದ (ಇದು ಏರ್ಪಡುತ್ತದೆ). 'ಅಲಮ್' ಸಾಕಾಯಿತು, ಮುಗಿಯಿತು - ಎಂಬುದಿಲ್ಲವಾದ್ದರಿಂದಲಾದರೂ **ಅನಲನು** ಎಂದು ಹೆಸರು.

1. ನಾಥೃ ಎಂಬ ಧಾತುವಿಗೆ ಯಾಚಿಸು, ತಾಪಗೊಳಿಸು - ಮುಂತಾದ ಅರ್ಥಗಳಿವೆ.
2. ಉಪತಾಪವು ಪ್ರಲಯಕಾಲದಲ್ಲಿ, ಆಶಾಸನವು ಸೃಷ್ಟಿಕಾಲದಲ್ಲಿ, ಈಶನವು ಸ್ಥಿತಿಕಾಲದಲ್ಲಿ - ಎಂದು ವ್ಯಾಖ್ಯಾನ.
3. 'ಪವತೇ' ಇತಿ - ನಿರಂತರವಾಗಿ ಆಲಸ್ಯವಿಲ್ಲದೆ ಸಂಚರಿಸುತ್ತಿರುವದರಿಂದ ಪವನನು ವಾಯು; ಅವನನ್ನು ಪ್ರೇರಿಸುವದರಿಂದ ಪರಮೇಶ್ವರನು ಪಾವನನು - ಎಂದು ವ್ಯಾಖ್ಯಾನ.
4. (ಅನ) ಪ್ರಾಣಗಳನ್ನು, 'ಲಾ' ಧಾತುವಿಗೆ 'ಕ' ಪ್ರತ್ಯಯವು ಬಂದಿದೆ; ಜೀವನರೂಪದಿಂದ ತಾನೇ ಇರುತ್ತಾನಾದ್ದರಿಂದ 'ಅನಲ' ಎಂದು ವ್ಯಾಖ್ಯಾನ.
5. 'ಣಲ ಗನ್ಧೇ' ಎಂಬ ಧಾತುವಿನಿಂದ 'ನಲ'.
6. ಬೃ. ಮೂಲದಲ್ಲಿ 'ಅರಸಮಗನ್ಧಮ್' ಎಂದೇ ಇದೆ. ಬರೆದವರ ಕೈತಪ್ಪಿನಿಂದ 'ಅಗನ್ಧಮರಸಮ್' ಎಂದಾಗಿರುಬಹುದು.

## (ಭಾಷ್ಯ)

೨೯೪. ಕಾಮಾನ್ ಹನ್ತಿ ಮುಮುಕ್ಷೂಣಾಂ ಭಕ್ತಾನಾಂ ಹಿಂಸಕಾನಾಂ ಚ ಇತಿ ಕಾಮಹಾ। ೨೯೫. ಸಾತ್ತ್ವಿಕಾನಾಂ ಕಾಮಾನ್ ಕರೋತೀತಿ ಕಾಮಕೃತ್। ಕಾಮಃ ಪ್ರದ್ಯುಮ್ನಃ ತಸ್ಯ ಜನಕತ್ವಾದ್ವಾ। ೨೯೬. ಅಭಿರೂಪತಮತ್ವಾತ್ ಕಾನ್ತಃ। ೨೯೭. ಕಾಮ್ಯತೇ ಪುರುಷಾರ್ಥಾಭಿಕಾಙ್ಕ್ಷಿಭಿರಿತಿ ಕಾಮಃ॥ ೨೯೮. ಭಕ್ತೇಭ್ಯಃ ಕಾಮಾನ್ ಪ್ರಕರ್ಷೇಣ ದದಾತೀತಿ ಕಾಮಪ್ರದಃ। ೨೯೯. ಪ್ರಕರ್ಷೇಣ ಭವನಾದ್ ಪ್ರಭುಃ॥ ॥೪೫॥

## (ಭಾಷ್ಯಾರ್ಥ)

ಮುಮುಕ್ಷುಗಳಾದ ಭಕ್ತರ ಮತ್ತು ಹಿಂಸಕರ ಕಾಮಗಳನ್ನು (ಹನ್ತಿ) ನಾಶಗೊಳಿಸುತ್ತಾನೆ; ಆದ್ದರಿಂದ **ಕಾಮಹಾ** (ಎನಿಸುವನು). ಸಾತ್ತ್ವಿಕರ ಕಾಮಗಳನ್ನು (ಕರೋತಿ) ಪೂರ್ತಿಮಾಡಿಕೊಡುತ್ತಾನೆ; ಆದ್ದರಿಂದ **ಕಾಮಕೃತ್** (ಎನಿಸುತ್ತಾನೆ). ಕಾಮನೆಂದರೆ ಪ್ರದ್ಯುಮ್ನನು; ಅವನ ತಂದೆಯಾದ್ದರಿಂದಲೂ ಆತನು ಕಾಮಕೃತ್. ಅತ್ಯಂತರೂಪವಂತನಾಗಿರುವದರಿಂದ **ಕಾಂತನು**. ಪುರುಷಾರ್ಥವನ್ನು ಬಯಸುವವರಿಂದ ಕಾಮಿಸಲ್ಪಡುತ್ತಾನೆ (= ಪುರುಷಾರ್ಥವನ್ನು ಬಯಸುವವರು ಇವನನ್ನು ಬೇಕೆನ್ನುತ್ತಾರೆ); ಆದ್ದರಿಂದ **ಕಾಮನು**. ಭಕ್ತರಿಗೆ ಕಾಮಗಳನ್ನು ವಿಶೇಷವಾಗಿ ಕೊಡುತ್ತಾನೆ; ಆದ್ದರಿಂದ **ಕಾಮಪ್ರದನು**. ಪ್ರಕರ್ಷ (ಅತಿಶಯದಿಂದ) ಕೂಡಿರುತ್ತಾನೆ, ಆದ್ದರಿಂದ **ಪ್ರಭುವು**.

**ಯುಗಾದಿಕೃತ್ ಯುಗಾವರ್ತೋ ನೈಕಮಾಯೋ ಮಹಾಶನಃ।**
**ಅದೃಶ್ಯೋ ವ್ಯಕ್ತರೂಪಶ್ಚ ಸಹಸ್ರಜಿದನನ್ತಜಿತ್ ॥೪೬॥**

## (ಭಾಷ್ಯ)

೩೦೦. ಯುಗಾದೇಃ ಕಾಲಭೇದಸ್ಯ ಕರ್ತೃತ್ವಾದ್ ಯುಗಾದಿಕೃತ್। ಯುಗಾದೀನಾಮ್ ಆದಿಮ್ ಆರಮ್ಭಂ ಕರೋತೀತಿ ವಾ॥

ಇತಿನಾಮ್ನಾಂ ತೃತೀಯಂ ಶತಂ ವಿವೃತಮ್

## (ಭಾಷ್ಯಾರ್ಥ)

ಯುಗವೇ ಮುಂತಾದ ಕಾಲವಿಶೇಷವನ್ನು ಮಾಡುವವನಾದ್ದರಿಂದ **ಯುಗಾದಿಕೃತ್** (ಎನಿಸುತ್ತಾನೆ). ಯುಗಗಳ ಆದಿಯನ್ನು ಎಂದರೆ ಆರಂಭವನ್ನು(ಮೊದಲನ್ನು) ಮಾಡುತ್ತಾನೆ; ಆದ್ದರಿಂದ (ಯುಗಾದಿಕೃತ್ ಎಂದಾದರೂ ಅರ್ಥವನ್ನು ಮಾಡಬಹುದು).

ಹೀಗೆ ನಾಮಗಳ ಮೂರನೆಯ ಶತಕವು ಮುಗಿಯಿತು.

## ಚತುರ್ಥಶತಕ

### (ಭಾಷ್ಯ)

೩೦೧. ಯುಗಾದೀನಿ ಕೃತಾದೀನಿ ಆವರ್ತಯತಿ ಕಾಲಾತ್ಮನಾ ಇತಿ ಯುಗಾವರ್ತಃ। ೩೦೨. ಏಕಾ ಮಾಯಾ ನ ವಿದ್ಯತೇ ಬಹ್ವೀರ್ಮಾಯಾ ವಹತೀತಿ ನೈಕಮಾಯಃ। 'ನ ಲೋಪೋ ನಞಃ' (ಪಾ.೬-೩-೭೩) ಇತಿ ನಕಾರಲೋಪೋ ನ ಭವತಿ। ಅಕಾರಾನುಬನ್ಧರಹಿತಸ್ಯಾಪಿ ನಕಾರಸ್ಯ ಪ್ರತಿಷೇಧವಾಚಿನೋ ವಿದ್ಯಮಾನತ್ವಾತ್। ೩೦೩. ಮಹದ್ ಅಶನಮ್ ಅಸ್ಯ ಇತಿ ಮಹಾಶನಃ। ಕಲ್ಪಾನ್ತೇ ಸರ್ವಗ್ರಸನಾತ್॥

### (ಭಾಷ್ಯಾರ್ಥ)

ಯುಗಗಳೇ ಮುಂತಾದವುಗಳನ್ನು ಕೃತಾದಿ(ಯುಗ)ಗಳನ್ನು ಕಾಲಾತ್ಮನಾಗಿ ತಿರುಗಿಸುತ್ತಾನೆ, ಆದ್ದರಿಂದ **ಯುಗಾವರ್ತನು.** ಒಂದೇ ಮಾಯೆಯು ಈತನಿಗಿಲ್ಲ. ಅನೇಕಮಾಯೆಗಳನ್ನು[1] ಧರಿಸಿರುತ್ತಾನೆ, ಆದ್ದರಿಂದ **ನೈಕಮಾಯನು.** 'ನ ಲೋಪೋ ನಞಃ' ಎಂಬ ಸೂತ್ರದ ಪ್ರಕಾರ ಇಲ್ಲಿ ನಕಾರಲೋಪವು ಆಗುವದಿಲ್ಲ; ಏಕೆಂದರೆ ಅಕಾರಾನುಬಂಧವಿಲ್ಲದಿದ್ದರೂ (ಅಲ್ಲ ಎಂಬ) ಪ್ರತಿಷೇಧವಾಚಕವಾದ ನಕಾರವು ಇದ್ದುಕೊಂಡಿದೆ. ಈತನ ಅಶನ (ಭೋಜನ)ವು ದೊಡ್ಡದು, ಆದ್ದರಿಂದ (ಈತನು) **ಮಹಾಶನನು.** ಏಕೆಂದರೆ ಕಲ್ಪದ ಕೊನೆಯಲ್ಲಿ ಎಲ್ಲವನ್ನೂ ನುಂಗಿಬಿಡುತ್ತಾನೆ.

### (ಭಾಷ್ಯ)

೩೦೪. ಸರ್ವೇಷಾಂ ಬುದ್ಧೀನ್ದ್ರಿಯಾಣಾಮ್ ಅಗಮ್ಯಃ ಅದೃಶ್ಯಃ। ೩೦೫. ಸ್ಥೂಲರೂಪೇಣ ಸ್ವರೂಪಮ್ ಅಸ್ಯ ಇತಿ ವ್ಯಕ್ತರೂಪಃ। ಸ್ವಯಂಪ್ರಕಾಶಮಾನತ್ವಾತ್ ಯೋಗಿನೋ ವ್ಯಕ್ತರೂಪಃ ಇತಿ ವಾ। ೩೦೬. ಸುರಾರೀಣಾಂ ಸಹಸ್ರಾಣಿ ಯುದ್ಧೇ ಜಯತೀತಿ ಸಹಸ್ರಜಿತ್। ೩೦೭. ಸರ್ವಾಣಿ ಭೂತಾನಿ ಯುದ್ಧಕ್ರೀಡಾದಿಷು ಸರ್ವತ್ರ ಅಚಿನ್ತ್ಯಶಕ್ತಿತಯಾ ಜಯತೀತಿ ಅನನ್ತಜಿತ್ ॥೪೬॥

### ಭಾಷ್ಯಾರ್ಥ

ಯಾವ ಬುದ್ಧೀಂದ್ರಿಯಗಳಿಗೂ ಅಗಮ್ಯನಾಗಿರುವದರಿಂದ **ಅದೃಶ್ಯನು.** ಸ್ಥೂಲರೂಪದಿಂದ ವ್ಯಕ್ತವಾದ ರೂಪವೂ ಈತನಿಗಿದೆಯಾದ್ದರಿಂದ **ವ್ಯಕ್ತರೂಪನು.** ಸ್ವಯಂಪ್ರಕಾಶನಾಗಿ (ತನ್ನಿಂದ ತಾನೇ) ಬೆಳಗುತ್ತಿರುವದರಿಂದ, ಅಥವಾ ಯೋಗಿಗಳಿಗೆ ವ್ಯಕ್ತ (ಪ್ರಕಟವಾಗುವ) ರೂಪವುಳ್ಳವನಾದ್ದರಿಂದ (ವ್ಯಕ್ತರೂಪನು, ಎಂದಾದರೂ

---

1. ಮಾಯೆಗಳು ಎಂದರೆ ಅವಿದ್ಯೆಗಳು, ಅನೇಕ - ಎಂಬ ವಾದವು ಭಾಷ್ಯದಲ್ಲಿಲ್ಲ. ಮಹಾಮಾಯನು; ಆದ್ದರಿಂದ ಈತನ ಮಾಯೆಯು ಒಂದೇ ರೂಪದಲ್ಲಿರುವದಿಲ್ಲ ಎಂದು ಸೂತ್ರಭಾಷ್ಯಾನುಸಾರವಾಗಿಯೇ ಅರ್ಥವನ್ನು ಮಾಡಬಹುದಿತ್ತು.

ಆಗಬಹುದು). ಸಾವಿರಾರು ದೇವತಾಶತ್ರುಗಳನ್ನು ಯುದ್ಧದಲ್ಲಿ ಜಯಿಸುತ್ತಾನಾದ್ದರಿಂದ **ಸಹಸ್ರಜಿತ್** (ಎನಿಸುವವನು). ಎಲ್ಲಾ ಜೀವರನ್ನೂ ಯುದ್ಧ ಕ್ರೀಡೆ - ಮುಂತಾದವುಗಳಲ್ಲಿ - ಯಾವಾಗಲೂ ಅಚಿಂತ್ಯಶಕ್ತಿಯುಳ್ಳವನಾಗಿರುವದರಿಂದ - ಜಯಿಸುತ್ತಾನೆ; ಆದ್ದರಿಂದ **ಅನಂತಜಿತ್** (ಎನಿಸಿರುತ್ತಾನೆ).

**ಇಷ್ಟೋಽವಿಶಿಷ್ಟಃ ಶಿಷ್ಟೇಷ್ಟಃ ಶಿಖಣ್ಡೀ ನಹುಷೋ ವೃಷಃ।**
**ಕ್ರೋಧಹಾ ಕ್ರೋಧಕೃತ್ ಕರ್ತಾ ವಿಶ್ವಬಾಹುರ್ಮಹೀಧರಃ ॥೪೭॥**

**(ಭಾಷ್ಯ)**

೩೦೮. ಪರಮಾನನ್ದಾತ್ಮಕತ್ವೇನ ಪ್ರಿಯಃ ಇಷ್ಟಃ। ಯಜ್ಞೇನ ಇಷ್ಟಃ ಇತಿ ವಾ ಇಷ್ಟಃ। ೩೦೯. ಸರ್ವೇಷಾಮ್ ಅನ್ತರ್ಯಾಮಿತ್ವೇನ ಅವಿಶಿಷ್ಟಃ। ೩೧೦. ಶಿಷ್ಟಾನಾಂ ವಿದುಷಾಮ್ ಇಷ್ಟಃ ಶಿಷ್ಟೇಷ್ಟಃ। ಶಿಷ್ಟಾ ಇಷ್ಟಾ ಅಸ್ಯ ಇತಿ ವಾ। 'ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ' (ಗೀ. ೭-೧೭) ಇತಿ ಭಗವದ್ವಚನಾತ್। ಶಿಷ್ಟೈಃ ಇಷ್ಟಃ ಪೂಜಿತ ಇತಿ ವಾ ಶಿಷ್ಟೇಷ್ಟಃ। ೩೧೧. ಶಿಖಣ್ಡಃ ಕಲಾಪೋಽಲಙ್ಕಾರೋಽಸ್ಯ ಇತಿ ಶಿಖಣ್ಡೀ। ಯತೋ ಗೋಪವೇಷಧರಃ। ೩೧೨. ನಹ್ಯತಿ ಭೂತಾನಿ ಮಾಯಯಾ ಅತೋ ನಹುಷಃ। ಣಹ ಬನ್ಧನೇ। ೩೧೩. ಕಾಮಾನಾಂ ವರ್ಷಣಾದ್ ವೃಷಃ ಧರ್ಮಃ।

ವೃಷೋ ಹಿ ಭಗವಾನ್ ಧರ್ಮಃ ಸ್ಮೃತೋ ಲೋಕೇಷು ಭಾರತ।
ನೈಘಣ್ಟುಕಪದಾಖ್ಯಾನೇ ವಿದ್ಧಿ ಮಾಂ ವೃಷಮುತ್ತಮಮ್॥

ಇತಿ ಮಹಾಭಾರತೇ॥ (ಶಾಂತಿ. ೩೪೨-೮೮)

**(ಭಾಷ್ಯಾರ್ಥ)**

ಪರಮಾನಂದಸ್ವರೂಪನಾಗಿರುವದರಿಂದ ಪ್ರಿಯನು; (ಆದ್ದರಿಂದ) **ಇಷ್ಟ** (ನೆಂದು ಹೆಸರು). ಯಜ್ಞದಿಂದ ಪೂಜಿಸಲ್ಪಡುತ್ತಾನೆ; ಆದ್ದರಿಂದ ಇಷ್ಟನು ಎಂದಾದರೂ (ಈ ನಾಮಕ್ಕೆ ವ್ಯಾಖ್ಯಾನ). ಎಲ್ಲರಿಗೂ 'ಅಂತರ್ಯಾಮಿ' ರೂಪದಿಂದ **ಅವಿಶಿಷ್ಟನು** (ಎಂದರೆ ಸಮಾನವಾಗಿರುತ್ತಾನೆ). ಶಿಷ್ಟರಾದ ಜ್ಞಾನಿಗಳಿಗೆ ಇಷ್ಟನು (ಬೇಕಾದವನು); ಆದ್ದರಿಂದ (ಈತನು) **ಶಿಷ್ಟೇಷ್ಟನು**. ಅಥವಾ ಶಿಷ್ಟರು ಈತನಿಗೆ ಇಷ್ಟರು (ಆದ್ದರಿಂದ ಶಿಷ್ಟೇಷ್ಟನೆಂದು ಹೆಸರು). 'ಜ್ಞಾನಿಗೆ ನಾನು ಬಹಳ ಪ್ರಿಯನಷ್ಟೆ? ಆದ್ದರಿಂದ ಅವನೂ ನನಗೆ ಪ್ರಿಯನು' ಎಂಬ ಭಗವದ್ವಚನದಿಂದ (ಈ ಅರ್ಥವು ಹೊಂದುತ್ತದೆ). ಅಥವಾ ಶಿಷ್ಟರಿಂದ ಇಷ್ಟ (=ಪೂಜಿತ)ನಾಗಿರುತ್ತಾನೆ; ಆದ್ದರಿಂದ **ಶಿಷ್ಟೇಷ್ಟನೆನಿಸಿರುತ್ತಾನೆ**; ಶಿಖಂಡವು - ಅಂದರೆ ನವಿಲುಗರಿಯು - ಈತನಿಗೆ ಅಲಂಕಾರವಾಗಿರುತ್ತದೆ; ಆದ್ದರಿಂದ **ಶಿಖಂಡಿಯು**; (ಏಕೆಂದರೆ) ಗೋಪಾಲವೇಷವನ್ನು ಧರಿಸಿದ್ದಾನೆ,

ಪ್ರಾಣಿಗಳನ್ನು ಮಾಯೆಯಿಂದ ಕಟ್ಟಿಹಾಕಿರುತ್ತಾನೆ, ಆದ್ದರಿಂದ **ನಹುಷನು**; ಇದು 'ಣಹ ಬನ್ಧನೇ' ಎಂಬ ಧಾತುವಿನಿಂದ ಬಂದಿರುವ (ನಹ್ಯತಿ) ಎಂಬುದರಿಂದಾದ ಶಬ್ದ. ಕಾಮಗಳನ್ನು (ವರ್ಷತಿ) ಮಳೆಗರೆಯುತ್ತಾನೆ; ಆದ್ದರಿಂದ **ವೃಷನು**. ಧರ್ಮವು, 'ಎಲೈ ಭಾರತನೆ, ವೃಷವೆಂದರೆ ಪೂಜ್ಯವಾದ ಧರ್ಮವು ಎಂದು ನಿಘಂಟುಕಾರರು ಪದವನ್ನು (ವ್ಯುತ್ಪತ್ತಿಮಾಡಿ) ಹೇಳುತ್ತಾರಲ್ಲವೆ? ಆದ್ದರಿಂದ ನನ್ನನ್ನು ಉತ್ತಮವಾದ ವೃಷನೆಂದು ತಿಳಿ' ಎಂದು ಮಹಾಭಾರತದಲ್ಲಿದೆ.

### (ಭಾಷ್ಯ)

೩೧೪. ಸಾಧೂನಾಂ ಕ್ರೋಧಂ ಹನ್ತಿ ಇತಿ ಕ್ರೋಧಹಾ। ೩೧೫. ಅಸಾಧುಷು ಕ್ರೋಧಂ ಕರೋತಿ ಇತಿ ಕ್ರೋಧಕೃತ್। ಕ್ರಿಯತೇ ಇತಿ ಕರ್ಮ ಜಗತ್; ತಸ್ಯ ಕರ್ತಾ "ಯೋ ವೈ ಬಾಲಾಕ ಏತೇಷಾಂ ಪುರುಷಾಣಾಂ ಕರ್ತಾ ಯಸ್ಯ ವೈತತ್ ಕರ್ಮ ಸ ವೇದಿತವ್ಯಃ" (ಕೌ. ೪-೧೮) ಇತಿ ಶ್ರುತೇಃ। ಕ್ರೋಧಕೃತಾಂ ದೈತ್ಯಾನಾಂ ಕರ್ತಾ ಛೇದಕ ಇತ್ಯೇಕಂ ವಾ ನಾಮ। ೩೧೬. ವಿಶ್ವೇಷಾಮ್ ಆಲಮ್ಬನತ್ವೇನ ವಿಶ್ವೇ ವಾ ಬಾಹವೋಽಸ್ಯೇತಿ, ವಿಶ್ವತೋ ಬಾಹವೋ ಅಸ್ಯ ಇತಿ ವಾ ವಿಶ್ವಬಾಹುಃ। 'ವಿಶ್ವತೋ ಬಾಹುಃ' (ಶ್ವೇ.೩-೩) ಇತಿ ಶ್ರುತೇಃ। ೩೧೭. ಮಹೀಂ ಪೂಜಾಂ ಧರಣೀಂ ವಾ ಧರತಿ ಇತಿ ಮಹೀಧರಃ ॥೪೭॥

### (ಭಾಷ್ಯಾರ್ಥ)

ಸಾಧುಗಳ ಕ್ರೋಧವನ್ನು (ಹನ್ತಿ) ನಾಶಗೊಳಿಸುತ್ತಾನೆ; ಆದ್ದರಿಂದ ಈತನು **ಕ್ರೋಧಹಾ** ಎನಿಸುವನು. ಅಸಾಧುಗಳಲ್ಲಿ ಕ್ರೋಧವನ್ನು ಮಾಡುತ್ತಾನೆ; ಆದ್ದರಿಂದ (ಈತನು) **ಕ್ರೋಧಕೃತ್** (ಎನಿಸುವನು). (ಕ್ರಿಯತೇ) ಮಾಡಲ್ಪಡುತ್ತದೆ, ಆದ್ದರಿಂದ ಜಗತ್ತಿಗೆ 'ಕರ್ಮ'ವೆಂದು ಹೆಸರು. ಅದರ **ಕರ್ತನು**; "ಎಲೈ ಬಾಲಾಕಿಯೆ, ಯಾವಾತನೇ ಈ ಪುರುಷರ ಕರ್ತನೋ, ಈ ಜಗತ್ತು ಯಾವಾತನ ಕರ್ಮವೇ ಆಗಿದೆಯೋ ಅವನನ್ನು ಅರಿತುಕೊಳ್ಳಬೇಕು" ಎಂದು ಶ್ರುತಿಯಿರುವದರಿಂದ (ಈತನು **ಕರ್ತನು**). ಕ್ರೋಧವನ್ನು ಉಂಟುಮಾಡುವ ದೈತ್ಯರೇ ಮುಂತಾದವರನ್ನು ಕರ್ತನು ಎಂದರೆ ಕತ್ತರಿಸುವವನು; ಆದ್ದರಿಂದ **ಕ್ರೋಧಕೃತ್ಕರ್ತನು** - ಎಂದು ಇದು ಒಂದೇ ನಾಮವೆಂದಾದರೂ (ಹೇಳಬಹುದು). ಎಲ್ಲರಿಗೂ ಆಶ್ರಯನಾಗಿರುವದರಿಂದ **ವಿಶ್ವಬಾಹುವು**; ಅಥವಾ ಎಲ್ಲರೂ (ವಿರಾಡ್ರೂಪನಾದ) ಈತನ ಬಾಹುಗಳು; ಆದ್ದರಿಂದ 'ವಿಶ್ವಬಾಹು'. 'ಎಲ್ಲೆಲ್ಲಿಯೂ ಬಾಹುಗಳಿರುವಾತನು' ಎಂಬ ಶ್ರುತಿಯು (ಈ ವ್ಯಾಖ್ಯಾನಕ್ಕೆ ಆಧಾರ). ಮಹಿಯನ್ನು ಎಂದರೆ (ಪೂಜೆಯನ್ನು) ಅಥವಾ ಭೂಮಿಯನ್ನು ಧರಿಸಿರುತ್ತಾನೆ, ಆದ್ದರಿಂದ **ಮಹೀಧರನು**.

**ಅಚ್ಯುತಃ ಪ್ರಥಿತಃ ಪ್ರಾಣಃ ಪ್ರಾಣದೋ ವಾಸವಾನುಜಃ।**
**ಅಪಾಂನಿಧಿರಧಿಷ್ಠಾನಪ್ರಮತ್ತಃ ಪ್ರತಿಷ್ಠಿತಃ ॥೪೮॥**

## (ಭಾಷ್ಯ)

೩೧೮. ಷಡ್ಭಾವವಿಕಾರರಹಿತ್ವಾತ್ ಅಚ್ಯುತಃ। 'ಶಾಶ್ವತಂ ಶಿವಮಚ್ಯುತಮ್' (ಮಹಾ. ನಾ. ೧೩-೧) ಇತಿ ಶ್ರುತೇಃ। ೩೧೯. ಜಗದುತ್ಪತ್ತ್ಯಾದಿಕರ್ಮಭಿಃ ಪ್ರಖ್ಯಾತಃ ಪ್ರಥಿತಃ। ೩೨೦. ಸೂತ್ರಾತ್ಮನಾ ಪ್ರಜಾಃ ಪ್ರಾಣಯತೀತಿ ಪ್ರಾಣಃ। 'ಪ್ರಾಣೋ ವಾ ಅಹಮಸ್ಮಿ' (ಐ.ಆ. ೨-೨-೩) ಇತಿ ಬಹ್ವೃಚಾಃ। ೩೨೧. ಸುರಾಣಾಮ್ ಅಸುರಾಣಾಂ ಚ ಪ್ರಾಣಂ ಬಲಂ ದದಾತಿ ದ್ಯತಿ ವಾ ಪ್ರಾಣದಃ। ೩೨೨. ಅದಿತ್ಯಾಂ ಕಶ್ಯಪಾದ್ ವಾಸವಸ್ಯ ಅನುಜೋ ಜಾತಃ - ಇತಿ ವಾಸವಾನುಜಃ॥

## (ಭಾಷ್ಯಾರ್ಥ)

ಆರು ಭಾವವಿಕಾರಗಳೂ ಇಲ್ಲದವನಾದ್ದರಿಂದ **ಅಚ್ಯುತನು**; 'ಶಾಶ್ವತನೂ ಮಂಗಲಕರನೂ ಆದ ಅಚ್ಯುತನು' ಎಂಬ ಶ್ರುತಿಯಿಂದ (ಈ ಅರ್ಥವು ಸಿದ್ಧವಾಗುತ್ತದೆ). ಜಗತ್ತಿನ ಸೃಷ್ಟಿಯೇ ಮುಂತಾದ ಕರ್ಮಗಳಿಂದ ಪ್ರಸಿದ್ಧನಾದ್ದರಿಂದ **ಪ್ರಥಿತನು**. ಸೂತ್ರಾತ್ಮರೂಪದಿಂದ ಜೀವರನ್ನು ಆಯಾ ವ್ಯಾಪಾರವನ್ನು ಮಾಡಿಸುತ್ತಾನೆ, ಆದ್ದರಿಂದ **ಪ್ರಾಣನು**. '(ಎಲೈ ಋಷಿಯೆ) ನಾನು ಪ್ರಾಣನೇ ಆಗಿರುತ್ತೇನೆ' ಎಂದು ಬಹ್ವೃಚರು (ಋಗ್ವೇದಿಗಳು ಪಠಿಸುತ್ತಾರೆ). ದೇವತೆಗಳ ಮತ್ತು ಅಸುರರ ಪ್ರಾಣವನ್ನು ಎಂದರೆ ಬಲವನ್ನು (ಯಥಾಕ್ರಮದಿಂದ) ಕೊಡುತ್ತಾನೆ ಅಥವಾ ಖಂಡಿಸುತ್ತಾನೆ,[1] ಆದ್ದರಿಂದ **ಪ್ರಾಣದನು**. ಅದಿತಿಯಲ್ಲಿ ಕಶ್ಯಪಋಷಿಯಿಂದ ವಾಸವ (ಇಂದ್ರ)ನಿಗೆ ತಮ್ಮನಾಗಿ ಹುಟ್ಟಿದನು; ಆದ್ದರಿಂದ **ವಾಸವಾನುಜನು**.

## (ಭಾಷ್ಯ)

೩೨೩. ಆಪೋ ಯತ್ರ ನಿಧೀಯನ್ತೇ ಸ ಅಪಾಂನಿಧಿಃ। 'ಸರಸಾಮಸ್ಮಿ ಸಾಗರಃ' (ಗೀ. ೧೦-೨೪) ಇತಿ ಭಗವದ್ವಚನಾತ್. ೩೨೪. ಅಧಿತಿಷ್ಠನ್ತಿ ಭೂತಾನಿ ಉಪಾದಾನಕಾರಣತ್ವೇನ ಬ್ರಹ್ಮ ಇತಿ ಅಧಿಷ್ಠಾನಮ್। 'ಮತ್ಸ್ಥಾನಿ ಸರ್ವಭೂತಾನಿ' (ಗೀ.೯-೪) ಇತಿ ಭಗವದ್ವಚನಾತ್। ೩೨೫. ಅಧಿಕಾರಿಭ್ಯಃ ಕರ್ಮಾನುರೂಪಂ ಫಲಂ ಪ್ರಯಚ್ಛನ್ ನ ಪ್ರಮಾದ್ಯತಿ ಇತಿ ಅಪ್ರಮತ್ತಃ। ೩೨೬. ಸ್ವೇ ಮಹಿಮ್ನಿ ಸ್ಥಿತಃ ಪ್ರತಿಷ್ಠಿತಃ। 'ಸ ಭಗವಃ ಕಸ್ಮಿನ್ ಪ್ರತಿಷ್ಠಿತಃ ಇತಿ ಸ್ವೇ ಮಹಿಮ್ನಿ' (ಛಾಂ. ೭-೧೪-೧) ಇತಿ ಶ್ರುತೇಃ ॥೩೮॥

## (ಭಾಷ್ಯಾರ್ಥ)

ಅಪ್ಪು (ಎಲ್ಲವೂ) ಯಾವನಲ್ಲಿ ಬಂದು ನಿಂತಿರುವದೋ (ಆ ಈತನು) **ಅಪಾಂನಿಧಿಯು**. 'ಸರಸ್ಸುಗಳಲ್ಲಿ ಸಾಗರವಾಗಿರುತ್ತೇನೆ' ಎಂಬ ಭಗವದ್ವಚನದಿಂದ[2] (ಇದು ಹೊಂದುತ್ತದೆ). ಪ್ರಾಣಿಗಳು ಬ್ರಹ್ಮವನ್ನು ಉಪಾದಾನಕಾರಣ(ರೂಪ)ದಿಂದ

1. ದೇವತೆಗಳಿಗೆ ಬಲವನ್ನು ಕೊಡುತ್ತಾನೆ; ಅಸುರರ ಪ್ರಾಣವನ್ನು ಖಂಡಿಸುತ್ತಾನೆ.

2. ಸಾಗರವು ಭಗವಂತನ ವಿಭೂತಿಯಾಗಿರುವದರಿಂದ ಆ ರೂಪದಿಂದಿರುವ ಈತನಲ್ಲಿ ಎಲ್ಲಾ ನದಿಗಳೂ ಸೇರಿ ನೆಲೆ ನಿಂತಿವೆ - ಎಂದು ಭಾವ.

ಆಶ್ರಯಿಸಿಕೊಂಡು ಇರುತ್ತವೆ; ಆದ್ದರಿಂದ ಆತನು **ಅಧಿಷ್ಠಾನನು.** "ಎಲ್ಲಾ ಭೂತಗಳೂ ನನ್ನಲ್ಲಿರುತ್ತವೆ" ಎಂಬ ಭಗವದ್ವಚನದಿಂದ (ಹೀಗೆ ನಾಮದ ಅರ್ಥವಾಗಬಹುದಾಗಿದೆ). (ಆಯಾ) ಅಧಿಕಾರಿಗಳಿಗೆ ಕರ್ಮಕ್ಕೆ ತಕ್ಕಂತೆ ಫಲವನ್ನು ಕೊಡುತ್ತಿರುವಾಗ ಎಂದಿಗೂ ತಪ್ಪುವದಿಲ್ಲವಾದ್ದರಿಂದ **ಅಪ್ರಮತ್ತನು.** ತನ್ನ ಮಹಿಮೆಯಲ್ಲಿ ನಿಂತಿರುತ್ತಾನಾದ್ದರಿಂದ **ಪ್ರತಿಷ್ಠಿತನು.** 'ಪೂಜ್ಯರೆ, ಆತನು ಏತರಲ್ಲಿ ನೆಲೆನಿಂತಿರುತ್ತಾನೆ?' ಎಂದು(ಕೇಳಲು) 'ತನ್ನ ಮಹಿಮೆಯಲ್ಲಿ' (ಎಂದನು) ಎಂಬ ಶ್ರುತಿಪ್ರಮಾಣದಿಂದ (ಇದು ಹೊಂದುತ್ತದೆ).

**ಸ್ಕನ್ದಃ ಸ್ಕನ್ದಧರೋ ಧುರ್ಯೋ ವರದೋ ವಾಯುವಾಹನಃ।**
**ವಾಸುದೇವೋ ಬೃಹದ್ಭಾನುರಾದಿದೇವಃ ಪುರನ್ದರಃ ॥೪೯॥**

### (ಭಾಷ್ಯ)

೩೨೭. ಸ್ಕನ್ದತ್ಯಮೃತರೂಪೇಣ ಸ್ರವತಿ ಗಚ್ಛತಿ ವಾಯುರೂಪೇಣ ಶೋಷಯತೀತಿ ವಾ ಸ್ಕನ್ದಃ। ೩೨೮. ಸ್ಕನ್ದಂ ಧರ್ಮಪಥಂ ಧಾರಯತೀತಿ ವಾ ಸ್ಕನ್ದಧರಃ। ೩೨೯. ಧುರಂ ವಹತಿ ಸಮಸ್ತಭೂತಜನ್ಮಾದಿಲಕ್ಷಣಮ್ ಇತಿ ಧುರ್ಯಃ। ೩೩೦. ಅಭಿಮತಾನ್ ವರಾನ್ ದದಾತೀತಿ, ವರಂ ಗಾಂ ದಕ್ಷಿಣಾಮ್ ದದಾತಿ ಯಜಮಾನರೂಪೇಣ ಇತಿ ವಾ ವರದಃ। "ಗೌರ್ವೈ ವರಃ" (?) ಇತಿ ಶ್ರುತೇಃ। ೩೩೧. ಮರುತಃ ಸಪ್ತ ಆವಹಾದೀನ್ ವಾಹಯತೀತಿ ವಾಯುವಾಹನಃ॥

### (ಭಾಷ್ಯಾರ್ಥ)

(ಸ್ಕನ್ದತಿ) ಅಮೃತರೂಪದಿಂದ ಸ್ರವಿಸುತ್ತಾನೆ (ಹೋಗಿಸುತ್ತಿರುತ್ತಾನೆ); ಆದ್ದರಿಂದ, ಅಥವಾ ವಾಯುರೂಪದಿಂದ ಒಣಗಿಸುತ್ತಾನೆ - ಆದ್ದರಿಂದ **ಸ್ಕಂದನು.** ಸ್ಕಂದವನ್ನು ಎಂದರೆ ಧರ್ಮದ ಮಾರ್ಗವನ್ನು ಧರಿಸುತ್ತಾನೆ; ಆದ್ದರಿಂದ **ಸ್ಕಂದಧರನು.** ಎಲ್ಲಾ ಪ್ರಾಣಿಗಳ ಜನ್ಮವೇ ಮುಂತಾದ ರೂಪದ ಹೊರೆಯನ್ನು ಹೊತ್ತಿರುತ್ತಾನೆ; ಆದ್ದರಿಂದ **ಧುರ್ಯನು.** ಇಷ್ಟವಾದ ವರಗಳನ್ನು ಕೊಡುತ್ತಾನೆ, ಅಥವಾ ವರವನ್ನು ಎಂದರೆ ಗೋವನ್ನು ಯಜ್ಞಕರ್ತನ ರೂಪದಿಂದ ದಕ್ಷಿಣೆಯಾಗಿ ಕೊಡುತ್ತಾನೆ; ಆದ್ದರಿಂದ **ವರದನು.** "ಗೋವೇ ವರವು" (?)[1] ಎಂಬ ಶ್ರುತಿಯು ವರಶಬ್ದದ ಈ ಅರ್ಥಕ್ಕೆ ಪ್ರಮಾಣವು. ಬೀಸುವ ಆವಹವೇ ಮುಂತಾದ ಏಳು ವಾಯುಗಳನ್ನು ಬೀಸುವಂತೆ ಮಾಡುತ್ತಾನೆ - ಆದ್ದರಿಂದ **ವಾಯುವಾಹನನು.**[2]

---

1. ಇದು ಯಾವ ಶ್ರುತಿ ಎಂಬುದು ತಿಳಿಯಲಿಲ್ಲ; 'ಅಪ.ಶ್ರೌ.೫-೧೧-೪' ಎಂದು ಮೈ॥ ಪಾಠದಲ್ಲಿ ಆಪಸ್ತಂಬಶ್ರೌತಸೂತ್ರವನ್ನು ಸೂಚಿಸುವ ಸಂಖ್ಯೆಯಿದೆ.

2. ವ್ಯಾಖ್ಯಾನದಲ್ಲಿ 'ಆವಹಃ ಪ್ರವಹಶ್ಚೈವ ತಥೈವಾನುವಹಃ ಪರಃ। ಸಂವಹೋ ವಿವಹಶ್ಚೈವ ತದೂರ್ಧ್ವಂ ಸ್ಯಾತ್ ಪರಾವಹಃ॥ ತಥಾ ಪರಿವಹಶ್ಚೋರ್ಧ್ವಂ ವಾಯವಃ ಸಪ್ತ ನೇಮಯಃ' ಎಂಬ ಶ್ಲೋಕದಲ್ಲಿ ಆವಹ, ಪ್ರವಹ, ಅನುವಹ, ಸಂವಹ, ವಿವಹ, ಪರಾವಹ, ಪರಿವಹ - ಎಂಬ ಏಳು ವಾಯುಗಳನ್ನು ಹೆಸರಿಸಿದೆ.

## (ಭಾಷ್ಯ)

೩೩೨. ವಸತಿ ವಾಸಯತಿ ಅಚ್ಛಾದಯತಿ ಸರ್ವಮ್ ಇತಿ ವಾ ವಾಸುಃ। ದೀವ್ಯತಿ ಕ್ರೀಡತಿ ವಿಜಿಗೀಷತೇ ವ್ಯವಹರತಿ ದ್ಯೋತತೇ ಸ್ತೂಯತೇ ಗಚ್ಛತೀತಿ ವಾ ದೇವಃ। ವಾಸುಶ್ಚಾಸೌ ದೇವಶ್ಚ ವಾಸುದೇವಃ।

ಛಾದಯಾಮಿ ಜಗತ್ಸರ್ವಂ ಭೂತ್ವಾ ಸೂರ್ಯ ಇವಾಂಶುಭಿಃ।
ಸರ್ವಭೂತನಿವಾಸಶ್ಚ ವಾಸುದೇವಸ್ತತಃ ಸ್ಮೃತಃ॥ (ಶಾಂ. ೩೪೧-೪೧)
ವಾಸನಾತ್ ಸರ್ವಭೂತಾನಾಂ ವಸುತ್ವಾದ್ ದೇವಯೋನಿತಃ।
ವಾಸುದೇವಸ್ತತೋ ವೇದ್ಯಃ[1] ...... (ಉದ್ಯೋಗ. ೭೦-೩)

ಇತಿ ಉದ್ಯೋಗಪರ್ವಣಿ॥

ಸರ್ವತ್ರಾಸೌ ಸಮಸ್ತಂ ಚ ವಸತ್ಯತ್ರೇತಿ ವೈ ಯತಃ।
ತತಃ ಸ ವಾಸುದೇವೇತಿ ವಿದ್ವದ್ಭಿಃ ಪರಿಪಠ್ಯತೇ॥ (ವಿ.ಪು.೧-೨-೧೨)
ಸರ್ವಾಣಿ ತತ್ರ ಭೂತಾನಿ ವಸನ್ತಿ ಪರಮಾತ್ಮನಿ।
ಭೂತೇಷು ಚ ಸ ಸರ್ವಾತ್ಮಾ ವಾಸುದೇವಸ್ತತಃ ಸ್ಮೃತಃ॥

ಇತಿ ಚ ವಿಷ್ಣುಪುರಾಣೇ॥ (ವಿ.ಪು.೬-೫-೮೦)

## (ಭಾಷ್ಯಾರ್ಥ)

ವಾಸಿಸುತ್ತಾನೆ ಅಥವಾ ಎಲ್ಲವನ್ನೂ (ವಾಸಯತಿ) ಮುಚ್ಚಿಕೊಂಡಿರುತ್ತಾನೆ; ಆದ್ದರಿಂದ **ವಾಸು**. ದೀವ್ಯತಿ (ಸೃಷ್ಟ್ಯಾದಿಗಳನ್ನು ಮಾಡುತ್ತಾ) ಕ್ರೀಡಿಸುತ್ತಾನೆ, (ದುಷ್ಟರನ್ನು) ಜಯಿಸಲಿಚ್ಛಿಸುತ್ತಾನೆ. (ಜೀವರೂಪದಿಂದ) ವ್ಯವಹರಿಸುತ್ತಾನೆ, ಚೈತನ್ಯರೂಪದಿಂದ ಬೆಳಗುತ್ತಿದ್ದಾನೆ; (ಬ್ರಹ್ಮಾದಿಗಳಿಂದ) ಸ್ತುತಿಸಲ್ಪಡುತ್ತಿದ್ದಾನೆ, ಅಥವಾ (ಗಚ್ಛತಿ) ಎಲ್ಲವನ್ನೂ ವ್ಯಾಪಿಸುತ್ತಾನೆ - ಆದ್ದರಿಂದ **ದೇವನು**, ವಾಸುವಾದ ದೇವನು **ವಾಸುದೇವನು**. 'ಎಲ್ಲವೂ ಆಗಿದ್ದು ಜಗತ್ತನ್ನು - ಸೂರ್ಯನು ಕಿರಣಗಳಿಂದ ವ್ಯಾಪಿಸಿಕೊಳ್ಳುವಂತೆ - ವ್ಯಾಪಿಸಿಕೊಂಡಿರುತ್ತೇನೆ. ಎಲ್ಲಾ ಭೂತಗಳಲ್ಲಿಯೂ ವಾಸಮಾಡಿಕೊಂಡಿರುತ್ತೇನೆ, ಆದ್ದರಿಂದ **ವಾಸುದೇವ**ನೆನಿಸಿಕೊಂಡಿರುವೆನು' - ಎಂದು ಉದ್ಯೋಗಪರ್ವದಲ್ಲಿ "ಸರ್ವಪ್ರಾಣಿಗಳನ್ನು ಮುಸುಕಿಕೊಂಡಿರುವದರಿಂದಲೂ ದೇವಯೋನಿಗಳಾದ ವಸುಗಳ ರೂಪದಿಂದಿರುವದರಿಂದಲೂ ವಾಸುದೇವನೆಂದು (ತತ್ತ್ವವನ್ನು ಬಲ್ಲ ಯೋಗಿಗಳು ನನ್ನನ್ನು) ಕರೆಯುತ್ತಾರೆ'' ಎಂದು ಉದ್ಯೋಗಪರ್ವದಲ್ಲಿದೆ.

'ಎಲ್ಲೆಲ್ಲಿಯೂ ಈತನಿರುತ್ತಾನೆ, ಸಮಸ್ತವೂ ಆ ಈತನಲ್ಲಿದೆ, ಅಲ್ಲವೆ? ಆದ್ದರಿಂದ ಆತನು **ವಾಸುದೇವ**ನೆಂದು ಬಲ್ಲವರಿಂದ ಉಕ್ತನಾಗಿರುತ್ತಾನೆ' 'ಎಲ್ಲಾ ಪ್ರಾಣಿಗಳೂ ಆ ಪರಮಾತ್ಮನಲ್ಲಿ ವಾಸವಾಗಿರುತ್ತವೆ. ಆ ಸರ್ವಾತ್ಮನು (ಆ) ಭೂತಗಳಲ್ಲಿಯೂ ಇರುತ್ತಾನೆ; ಆದ್ದರಿಂದ (ಆತನು) **ವಾಸುದೇವ**ನೆನಿಸಿಕೊಂಡಿರುತ್ತಾನೆ' ಎಂದೂ ವಿಷ್ಣುಪುರಾಣದಲ್ಲಿದೆ.

1. 'ವಾಸುದೇವಸ್ತತೋ ಜ್ಞೇಯಃ ಯೋಗಿಭಿಸ್ತತ್ತ್ವದರ್ಶಿಭಿಃ' (ಉದ್ಯೋಗ, ೮೯-೩) ಎಂದು ಮೈ॥

(ಭಾಷ್ಯ)

೩೩೩. ಬೃಹನ್ತೋ ಭಾನವೋ ಯಸ್ಯ ಚನ್ದ್ರಸೂರ್ಯಾದಿಗಾಮಿನಃ।
ತೈರ್ವಿಶ್ವಂ ಭಾಸಯತಿ ಯಃ ಸ ಬೃಹದ್ಭಾನುರುಚ್ಯತೇ ॥ (?)

ಇತಿ ಬೃಹದ್ಭಾನುಃ। ೩೩೪. ಆದಿಃ ಕಾರಣಮ್, ಸ ಚಾಸೌ ದೇವಶ್ಚ - ಇತಿ, ಆದಿದೇವಃ। ದಾನಾದಿಗುಣವಾನ್ ವಾ ಆದಿದೇವಃ। ೩೩೫. ಸುರಶತ್ರೂಣಾಂ ಪುರದಾರಣಾತ್ ಪುರನ್ದರಃ। 'ವಾಚಂಯಮಪುರನ್ದರೌ ಚ' (ಪಾ.ಸೂ. ೬-೩-೬೯) ಇತಿ ಪಾಣಿನಿನಾ ನಿಪಾತನಾತ್॥ ॥೪೯॥

(ಭಾಷ್ಯಾರ್ಥ)

'ಚಂದ್ರಸೂರ್ಯರನ್ನು ಮೀರಿಹೋಗುವ ದೊಡ್ಡ ರಶ್ಮಿಗಳು ಯಾವಾತನಿಗಿವೆಯೋ, ಅವುಗಳಿಂದ ಎಲ್ಲವನ್ನೂ ಬೆಳಗಿಸುತ್ತಿರುವನು ಯಾವನೋ ಆ (ಈತನು) **ಬೃಹದ್ಭಾನು**ವೆನಿಸಿರುತ್ತಾನೆ (?).[1] 'ಆದಿ' ಎಂದರೆ ಕಾರಣವು, ಆ (ಕಾರಣವಾದ) ದೇವನು **ಆದಿದೇವನು**. ದಾನವೇ ಮುಂತಾದ ಗುಣಗಳುಳ್ಳವನಾದ್ದರಿಂದ **ಆದಿದೇವನು**[2] ಎಂದಾದರೂ (ಈ ನಾಮಕ್ಕೆ ಅರ್ಥ). ದೇವತೆಗಳ ಶತ್ರುಗಳ ಪುರಗಳನ್ನು ಸೀಳುವದರಿಂದ **ಪುರಂದರನು**. 'ವಾಚಂಯಮಪುರಂದರೌ ಚ' ಎಂದು ಪಾಣಿನಿಯು ನಿಪಾತವಾಗಿ ಮಾಡಿ ( ಈ ರೂಪಗಳಾಗುವವೆಂದು) ಹೇಳಿರುವದರಿಂದ (ಶಬ್ದವು ಸಾಧು).

**ಅಶೋಕಸ್ತಾರಣಸ್ತಾರಃ ಶೂರಃ ಶೌರಿರ್ಜನೇಶ್ವರಃ।**
**ಅನುಕೂಲಃ ಶತಾವರ್ತಃ ಪದ್ಮೀ ಪದ್ಮನಿಭೇಕ್ಷಣಃ। ॥೫೦॥**

(ಭಾಷ್ಯ)

೩೩೬. ಶೋಕಾದಿಷಡೂರ್ಮಿವರ್ಜಿತಃ ಅಶೋಕಃ। ೩೩೭. ಸಂಸಾರಸಾಗರಾತ್ ತಾರಯತೀತಿ ತಾರಣಃ। ೩೩೮. ಗರ್ಭಜನ್ಮಜರಾಮೃತ್ಯುಲಕ್ಷಣಾತ್ ಭಯಾದ್ ತಾರಯತೀತಿ ತಾರಃ। ೩೩೯. ವಿಕ್ರಮಣಾತ್ ಶೂರಃ। ೩೪೦. ಶೂರಸ್ಯಾಪತ್ಯಂ ವಸುದೇವಸ್ಯ ಸುತಃ ಶೌರಿಃ। ೩೪೧. ಜನಾನಾಂ ಜನ್ತೂನಾಮ್ ಈಶ್ವರಃ ಜನೇಶ್ವರಃ॥

(ಭಾಷ್ಯಾರ್ಥ)

ಶೋಕವೇ ಮುಂತಾದ ಆರು (ಊರ್ಮಿ)[3]ಗಳಿಲ್ಲದವನಾದ್ದರಿಂದ **ಅಶೋಕನು**. ಸಂಸಾರಸಾಗರದಿಂದ ದಾಟಿಸುತ್ತಾನಾದ್ದರಿಂದ **ತಾರಣನು**. ಗರ್ಭವಾಸ, ಜನ್ಮ

1. ಮೂಲವು ಶ್ಲೋಕದಂತೆ ಇದೆ. ಇದು ಭಾಷ್ಯಕಾರರೇ ಬರೆದದ್ದಾಗಿರಬೇಕು. ವ್ಯಾಖ್ಯಾನಕಾರರು ಮತ್ತೆ ಯಾವ ಮೂಲವನ್ನು ಹೇಳಿಲ್ಲ.
2. 'ದೇವೋ ದಾನಾದ್ವಾ ದೀಪನಾದ್ವಾ ದ್ಯುಸ್ಥಾನೋ ಭವತಿ' (ನಿರು.೭-೧೫) ಎಂಬ ಯಾಸ್ಕರ ನಿರುಕ್ತವಚನವನ್ನು ಇಲ್ಲಿ ವ್ಯಾಖ್ಯಾನಕಾರರು ಉದಾಹರಿಸಿರುತ್ತಾರೆ.
3. ಅಶನಾಯಾಪಿಪಾಸಾದಿ ಎಂಬ ಪಾಠಾಂತರವೂ ಇದೆ. ಬೃ. ೩-೫-೧ರಲ್ಲಿ ಹಸಿವು, ನೀರಡಿಕೆ, ಶೋಕ, ಮೋಹ, ಮುಪ್ಪು, ಸಾವು ಎಂಬ ಆರನ್ನು ಕ್ರಮವಾಗಿ ಕೊಟ್ಟಿದೆ. ವ್ಯಾಖ್ಯಾನಕಾರರು ಆದೇಕೋ ಮೂರನ್ನೇ ಉದಾಹರಿಸಿರುತ್ತಾರೆ.

ಮುಪ್ಪು, ಸಾವು - ಎಂಬ ಭಯದಿಂದ ದಾಟಿಸುವನಾದ್ದರಿಂದ **ತಾರನು.** ವಿಕ್ರಮವನ್ನು ಮಾಡುವದರಿಂದ **ಶೂರನು.** ಶೂರನ ಪುತ್ರನು ಎಂದರೆ ವಸುದೇವನ ಮಗನು, ಆದ್ದರಿಂದ **ಶೌರಿಯು.** ಜನಗಳಿಗೆ ಎಂದರೆ ಹುಟ್ಟುವ ಸ್ವಭಾವದ ಜೀವರುಗಳಿಗೆ ಒಡೆಯನು; (ಆದ್ದರಿಂದ) **ಜನೇಶ್ವರನು.**

(ಭಾಷ್ಯ)

೩೪೨. ಆತ್ಮತ್ವೇನ ಹಿ ಸರ್ವೇಷಾಮ್ ಅನುಕೂಲಃ, ನ ಹಿ ಸ್ವಸ್ಮಿನ್ ಪ್ರಾತಿಕೂಲ್ಯಂ ಸ್ವಯಂ ಚರತಿ। ೩೪೩. ಧರ್ಮತ್ರಾಣಾಯ ಶತಮ್ ಆವರ್ತನಾನಿ ಪ್ರಾದುರ್ಭಾವಾಃ **ಅಸ್ಯೇತಿ ಶತಾವರ್ತಃ**। ನಾಡೀಶತಪ್ರಾಣರೂಪೇಣ ವರ್ತತ ಇತಿ ವಾ। ೩೪೪. ಪದ್ಮಂ ಹಸ್ತೇ ವಿದ್ಯತ ಇತಿ ಪದ್ಮೀ । ೩೪೫. ಪದ್ಮನಿಭೇ ಈಕ್ಷಣೇ ದೃಶೌ ಅಸ್ಯ ಇತಿ ಪದ್ಮನಿಭೇಕ್ಷಣಃ॥ ॥೫೦॥

(ಭಾಷ್ಯಾರ್ಥ)

ಆತ್ಮನೇ ಆಗಿರುವದರಿಂದಲೇ ಎಲ್ಲರಿಗೂ **ಅನುಕೂಲನು;** ಏಕೆಂದರೆ ತನಗೆ ಪ್ರತಿಕೂಲವಾದದ್ದನ್ನು ತಾನೇ (ಯಾವನು) ಮಾಡುವದಿಲ್ಲ. ಧರ್ಮವನ್ನು ಕಾಪಾಡುವದಕ್ಕೆಂದು ನೂರಾರು ಆವರ್ತಗಳು ಎಂದರೆ ಪ್ರಾದುರ್ಭಾವಗಳು ಈತನಿಗೆ (ಆಗುತ್ತಿರುವವು); ಆದ್ದರಿಂದ ಈತನು **ಶತಾವರ್ತನು;** ನೂರು ನಾಡಿಗಳಲ್ಲಿ ಪ್ರಾಣರೂಪದಿಂದಿರುತ್ತಾನಾದ್ದರಿಂದ (ಶತಾವರ್ತ)ನೆಂದಾದರೂ ಆಗಬಹುದು. ಪದ್ಮವು ಎಂದರೆ ಕಮಲವು(ಈತನ) ಕೈಯಲ್ಲಿರುತ್ತದೆ; ಆದ್ದರಿಂದ (ಈತನು) **ಪದ್ಮಿಯು;** ಕಮಲದಂತೆ ಇರುವ ಈಕ್ಷಣಗಳು ಎಂದರೆ ಕಣ್ಣುಗಳು ಈತನಿಗಿವೆ; ಆದ್ದರಿಂದ (ಈತನು) **ಪದ್ಮನಿಭೇಕ್ಷಣನು.**

**ಪದ್ಮನಾಭೋಽರವಿನ್ದಾಕ್ಷಃ ಪದ್ಮಗರ್ಭಃ ಶರೀರಭೃತ್।**
**ಮಹರ್ದ್ಧಿರೃದ್ಧೋ ವೃದ್ಧಾತ್ಮಾ ಮಹಾಕ್ಷೋ ಗರುಡಧ್ವಜಃ॥ ॥೫೧॥**

(ಭಾಷ್ಯ)

೩೪೬. ಪದ್ಮಸ್ಯ ನಾಭೌ ಮಧ್ಯೇ ಕರ್ಣಿಕಾಯಾಂ ಸ್ಥಿತಃ ಇತಿ ಪದ್ಮನಾಭಃ। ೩೪೭. ಅರವಿನ್ದಸದೃಶೇ ಅಕ್ಷಿಣೀ ಅಸ್ಯ ಇತಿ ಅರವಿನ್ದಾಕ್ಷಃ। ೩೪೮. ಪದ್ಮಸ್ಯ ಹೃದಯಾಖ್ಯಸ್ಯ ಮಧ್ಯೇ ಉಪಾಸ್ಯತ್ವಾತ್ ಪದ್ಮಗರ್ಭಃ। ೩೪೯. ಪೋಷಯನ್ ಅನ್ನರೂಪೇಣ ಪ್ರಾಣರೂಪೇಣ ವಾ ಶರೀರಿಣಾಂ ಶರೀರಾಣಿ ಧಾರಯತೀತಿ ಶರೀರಭೃತ್। ಸ್ವಮಾಯಯಾ ಶರೀರಾಣಿ ಬಿಭರ್ತಿ ಇತಿ ವಾ॥

(ಭಾಷ್ಯಾರ್ಥ)

ಪದ್ಮದ ನಡುವಿನ ಮಧ್ಯದಲ್ಲಿರುವ ದಿಂಡಿನಲ್ಲಿ ಇರುವನಾದ್ದರಿಂದ **ಪದ್ಮನಾಭನು;** ಕಮಲಕ್ಕೆ ಸಮಾನವಾದ (ಎರಡು) ಕಣ್ಣುಗಳು ಇವನಿಗೆ ಇರುವದರಿಂದ

**ಅರವಿಂದಾಕ್ಷನು**; ಪದ್ಮದ ಹೃದಯವೆಂಬ ಹೆಸರಿನ (ಕಮಲದ ನಡುವೆ) ಉಪಾಸಿಸಲ್ಪಡುತ್ತಾನಾದ್ದರಿಂದ **ಪದ್ಮಗರ್ಭನು**. ಅನ್ನರೂಪದಿಂದಲೋ ಪ್ರಾಣರೂಪದಿಂದಲೋ ಶರೀರಿಗಳ (ಜನರ) ಶರೀರಗಳನ್ನು ಪೋಷಣೆ ಮಾಡುತ್ತಾ ಧಾರಣೆಮಾಡಿಸುತ್ತಾನೆ; ಆದ್ದರಿಂದ **ಶರೀರಭೃತ್** (ಎನಿಸುತ್ತಾನೆ). ಅಥವಾ ತನ್ನ ಮಾಯೆಯಿಂದ ಶರೀರಗಳನ್ನು ಧರಿಸುತ್ತಾನೆ; ಆದ್ದರಿಂದ **ಶರೀರಭೃತ್** (ಎನಿಸುವವನು).

(ಭಾಷ್ಯ)

೩೫೦. ಮಹತೀ ಋದ್ಧಿಃ, ವಿಭೂತಿಃ, ಅಸ್ಯಾಸ್ತೀತಿ ಮಹರ್ದ್ಧಿಃ। ೩೫೧. ಪ್ರಪಞ್ಚರೂಪೇಣ ವರ್ಧಮಾನತ್ವಾತ್ ಋದ್ಧಃ। ೩೫೨. ವೃದ್ಧಃ ಪುರಾತನಃ, ಆತ್ಮಾ ಯಸ್ಯ ಇತಿ ವೃದ್ಧಾತ್ಮಾ। ೩೫೩. ಮಹತೀ ಅಕ್ಷಿಣೀ, ಮಹಾನ್ತಿ ಅಕ್ಷೀಣಿ ವಾ ಅಸ್ಯ ಇತಿ ಮಹಾಕ್ಷಃ। ೩೫೪. ಗರುಡಾಙ್ಕೋ ಧ್ವಜಃ ಯಸ್ಯ ಇತಿ ಗರುಡಧ್ವಜಃ ॥೫೧॥

(ಭಾಷ್ಯಾರ್ಥ)

ದೊಡ್ಡದಾದ (ಹೆಚ್ಚಾದ) ಋದ್ಧಿಯು ಎಂದರೆ ವಿಭೂತಿಯು ಈತನಿಗಿದೆಯಾದ್ದರಿಂದ **ಮಹರ್ದ್ಧಿಯು**. ಪ್ರಪಂಚರೂಪದಿಂದ ಬೆಳೆದುಕೊಳ್ಳುತ್ತಾನಾದ್ದಾರಿಂದ **ಋದ್ಧನು**. ವೃದ್ಧವಾದ ಎಂದರೆ ಪುರಾತನವಾದ ಆತ್ಮನು ಯಾವನಿಗೆ ಇದೆಯೋ ಅವನು **ವೃದ್ಧಾತ್ಮನು**. ದೊಡ್ಡವುಗಳಾದ (ಎರಡು) ಕಂಗಳು ಅಥವಾ ದೊಡ್ಡವಾದ (ಅನೇಕ) ಕಂಗಳು ಈತನಿಗೆ ಇವೆಯಾದ್ದರಿಂದ **ಮಹಾಕ್ಷನು**. ಗರುಡನ ಗುರುತುಳ್ಳ ಧ್ವಜ ಬಾವುಟವು ಯಾವಾತನಿಗಿದೆಯೋ ಆತನು **ಗರುಡಧ್ವಜನು**.

**ಅತುಲಃ ಶರಭೋ ಭೀಮಃ ಸಮಯಜ್ಞೋ ಹವಿರ್ಹರಿಃ।**
**ಸರ್ವಲಕ್ಷಣಲಕ್ಷಣ್ಯೋ ಲಕ್ಷ್ಮೀವಾನ್ ಸಮಿತಿಞ್ಜಯಃ। ॥೫೨॥**

(ಭಾಷ್ಯ)

೩೫೫. ತುಲಾ ಉಪಮಾನಮಸ್ಯ ನ ವಿದ್ಯತೇ ಇತಿ ಅತುಲಃ। 'ನ ತಸ್ಯ ಪ್ರತಿಮಾಸ್ತಿ ಯಸ್ಯ ನಾಮ ಮಹದ್ಯಶಃ' (ಶ್ವೇ. ೪-೧೯) ಇತಿ ಶ್ರುತೇಃ। 'ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ' (ಗೀ.೧೧-೪೩) ಇತಿ ಸ್ಮೃತೇಶ್ಚ। ೩೫೬. ಶರಾಃ ಶರೀರಾಣಿ ಶೀರ್ಯಮಾಣತ್ವಾತ್, ತೇಷು ಪ್ರತ್ಯಗಾತ್ಮತಯಾ ಭಾತೀತಿ ಶರಭಃ। ೩೫೭. ಬಿಭೇತಿ ಅಸ್ಮಾತ್ ಸರ್ವಮ್ ಇತಿ ಭೀಮಃ। 'ಭೀಮಾದಯೋಽಪಾದಾನೇ' (ಪಾ. ೩-೪-೭೪) ಇತಿ ಪಾಣಿನಿಸ್ಮೃತೇಃ। ಸನ್ಮಾರ್ಗವರ್ತಿನಾಮ್ ಅಭೀಮಃ - ಇತಿ ವಾ। ೩೫೮. ಸೃಷ್ಟಿಸ್ಥಿತಿಸಂಹಾರಸಮಯವಿತ್, ಷಟ್ ಸಮಯಾನ್ ಜಾನಾತೀತಿ ವಾ ಸಮಯಜ್ಞಃ। ಸರ್ವಭೂತೇಷು ಸಮತ್ವಂ ಯಜನಂ ಅಸ್ಯ ಇತಿ ವಾ। 'ಸಮತ್ವಮಾರಾಧನಮಚ್ಯುತಸ್ಯ' (ವಿ.ಪು.೧-೧೭-೯೦) ಇತಿ ಪ್ರಹ್ಲಾದವಚನಾತ್। ೩೫೯. ಯಜ್ಞೇಷು ಹವಿರ್ಭಾಗಂ ಹರತೀತಿ ಹವಿರ್ಹರಿಃ।

'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' (ಗೀ. ೯-೨೪) ಇತಿ ಭಗವದ್ವಚನಾತ್। ಅಥವಾ ಹೂಯತೇ ಹವಿಷಾ ಇತಿ ಹವಿಃ; 'ಅಬಧ್ನನ್ ಪುರುಷಂ ಪಶುಮ್' (ಪು.ಸೂ.೧೫) ಇತಿ ಹವಿಷ್ಟ್ವಂ ಶ್ರೂಯತೇ। ಸ್ಮೃತಿಮಾತ್ರೇಣ ಪುಂಸಾಂ ಪಾಪಂ ಸಂಸಾರಂ ಹರತೀತಿ ಹರಿದ್ವರ್ಣತ್ವಾತ್ ವಾ ಹರಿಃ।

ಹರಾಮ್ಯಘಂ ಚ ಸ್ಮರ್ತ್ವೄಣಾಂ ಹವಿರ್ಭಾಗಂ ಕ್ರತುಷ್ವಹಮ್।
ವರ್ಣಶ್ಚ ಮೇ ಹರಿದ್ವೇತಿ[1] ತಸ್ಮಾದ್ ಹರಿರಹಂ ಸ್ಮೃತಃ॥

ಇತಿ ಭಗವದ್ವಚನಾತ್॥ (ಶಾಂ. ೩೪೨-೬೮)

## ಭಾಷ್ಯಾರ್ಥ

ತುಲಾ ಎಂದರೆ ಹೋಲಿಕೆಯು ಈತನಿಗೆ ಇಲ್ಲವಾದ್ದರಿಂದ **ಅತುಲನು;** "ಅತನಿಗೆ ಸಮಾನವಾದದ್ದು (ಇನ್ನೊಂದು) ಇರುವದಿಲ್ಲ; ಆತನ ಹೆಸರು 'ಮಹದ್ಯಶ'ನೆಂದಿದೆ" ಎಂಬ ಶ್ರುತಿಯ (ಆಧಾರ)ದಿಂದ ಈ ಅರ್ಥವನ್ನು (ಮಾಡಬೇಕು). 'ನಿನಗೆ ಸಮನಾದವನೇ ಇಲ್ಲ, ಇನ್ನೂ ಹೆಚ್ಚಿನವನು ಎಲ್ಲಿಂದ ಬರಬೇಕು?' ಎಂಬ ಸ್ಮೃತಿಯಿಂದಲೂ (ಇದು ಸಿದ್ಧವಾಗಿದೆ). 'ಶರ'ಗಳು ಎಂದರೆ ಶರೀರಗಳು. ಏಕೆಂದರೆ (ಈ ಶರೀರಗಳು) ನಾಶವಾಗುತ್ತವೆಯಾದ್ದರಿಂದ (ಅವಕ್ಕೆ ಈ ಹೆಸರು). ಆ (ಶರಗಳಲ್ಲಿ) ಒಳಗಿನ ಆತ್ಮನಾಗಿ (ಭಾತಿ) ತೋರಿಕೊಳ್ಳುತ್ತಿದ್ದಾನೆ; ಆದ್ದರಿಂದ **ಶರಭನು;** ಈತನಿಗೆ ಎಲ್ಲವೂ ಭಯಪಡುತ್ತವೆಯಾದ್ದರಿಂದ (ಇವನು) **ಭೀಮನು;** 'ಭೀಮಾದಯೋಽಪಾದಾನೇ' ಎಂಬ ಪಾಣಿನಿಸ್ಮೃತಿಯಿಂದ (ಈ ರೂಪ)[2]. ಸನ್ಮಾರ್ಗದಲ್ಲಿ ನಡೆದುಕೊಳ್ಳುವವರಿಗೆ **ಅಭೀಮನು;**[3] (ಭಯಂಕರನಲ್ಲ) ಎಂಬರ್ಥದಲ್ಲಿ (ಅಭೀಮಶಬ್ದ) ಎಂದಾದರೂ (ಅರ್ಥವನ್ನು ಮಾಡಬಹುದು). ಸೃಷ್ಟಿ, ಸ್ಥಿತಿ, ಸಂಹಾರ - (ಇವುಗಳ) ಸಮಯವನ್ನು ಬಲ್ಲವನು; ಅಥವಾ ಆರು[4] ಸಮಯಗಳನ್ನು ಬಲ್ಲವನು ಎಂಬ ಕಾರಣದಿಂದಲಾದರೂ **ಸಮಯಜ್ಞನು.** ಸರ್ವಭೂತಗಳಲ್ಲಿಯೂ ಸಮ(ನಾಗಿರುವದೇ) [5] ಈತನ ಉತ್ತಮವಾದ ಯಜ್ಞವು - (ಆರಾಧನೆಯು) - ಎಂಬ ಕಾರಣದಿಂದ (ಈತನು) **ಸಮಯಜ್ಞನು.** 'ಸಮತ್ವವೇ ಅಚ್ಯುತನ ಆರಾಧನವು' ಎಂದು ಪ್ರಹ್ಲಾದನ ವಚನವಿರುವದರಿಂದ

1. 'ವರ್ಣಶ್ಚ ಮೇ ಹರಿಶ್ರೇಷ್ಠ' ಎಂದು ಪಾಠಭೇದವು ಉತ್ತರಾರ್ಧದಲ್ಲಿದೆ. ಶಾಂತಿಪರ್ವದಲ್ಲಿ 'ಇಲೋಪಹೂತಯೋಗೇನ ಹರೇ ಭಾಗಂ ಕ್ರತುಷ್ವಹಮ್॥ ವರ್ಣಶ್ಚ ಮೇ ಹರಿಃ ಶ್ರೇಷ್ಠಃ ತಸ್ಮಾದ್ ಹರಿರಹಂ ಸ್ಮೃತಃ॥' (ಶಾಂ. ೩೪೨-೬೮) ಎಂದಿದೆ - ಎಂದು ಆ ಪಾಠದ ಸಂಶೋಧಕರು ಬರೆದಿರುತ್ತಾರೆ.
2. ಅಪಾದಾನಾರ್ಥದಲ್ಲಿ ಮಕ್ ಪ್ರತ್ಯಯವು ಬಂದಿದೆ ಎಂಬುದಕ್ಕಾಗಿ ಈ ಸೂತ್ರವನ್ನು ಉದಾಹರಿಸಿದೆ ಎಂದು ವ್ಯಾಖ್ಯಾನ.
3. 'ಶರಭೋಽಭೀಮಃ' ಎಂಬಲ್ಲಿ ಅಕಾರವು ಸಂಧಿಯಿಂದ ಲುಪ್ತವಾಗಿದೆ.
4. ಸಂಧಿ, ವಿಗ್ರಹ, ಯಾನ, ಆಸನ, ದ್ವೇಧ, ಆಶ್ರಯ ಇವುಗಳು ಎಂದು ವ್ಯಾಖ್ಯಾನ.
5. 'ಸಮ' ಎಂಬ ಶಬ್ದವನ್ನು ಸಮತ್ವ ಎಂಬರ್ಥದಲ್ಲಿ ಪ್ರಯೋಗಿಸಿದೆ - ಎಂದು ಭಾವ.

ಈ ಅರ್ಥವು. ಯಜ್ಞಗಳಲ್ಲಿ ಹವಿರ್ಭಾಗವನ್ನು ಒಯ್ಯುತ್ತಾನೆ; ಆದ್ದರಿಂದ (ಇವನು) **ಹವಿರ್ಹರಿಯು.** 'ನಾನು ಸರ್ವಯಜ್ಞಗಳನ್ನೂ ಭುಂಜಿಸುವವನು ಮತ್ತು ಪ್ರಭುವೂ ಆಗಿರುವೆನು' ಎಂದು ಭಗವದ್ವಚನವಿರುವದರಿಂದ (ಈ ಅರ್ಥ). ಅಥವಾ ಹವಿಸ್ಸಿನಿಂದ (ಈತನಿಗೆ) ಹೋಮವನ್ನು ಮಾಡುತ್ತಾರಾದ್ದರಿಂದ ಈತನು **ಹವಿಯು.** 'ಪುರುಷನೆಂಬ ಪಶುವನ್ನು ಬಂಧನಮಾಡಿದರು' ಎಂದು ಶ್ರುತಿಯಲ್ಲಿ ಭಗವಂತನು ಹವಿಸ್ಸು ಎಂದು ಹೇಳಿರುತ್ತದೆ. ಸುಮ್ಮನೆ ಸ್ತೋತ್ರಮಾಡಿದ್ದರಿಂದ ಜನರ ಪಾಪವನ್ನು ಅಥವಾ ಸಂಸಾರವನ್ನು ಹರಣಮಾಡುತ್ತಾನೆ - ಎಂಬರ್ಥದಿಂದ (ಈತನು) **ಹರಿಯು.** ಅಥವಾ ಹರಿತ (ಹಸಿರು) ಬಣ್ಣದವನಾದ್ದರಿಂದ ಹರಿಯು. 'ಸ್ಮರಿಸಿದವರ ಪಾಪವನ್ನು ಅಪಹರಿಸುತ್ತೇನೆ; ಕ್ರತುಗಳಲ್ಲಿ ಹವಿರ್ಭಾಗವನ್ನು ಒಯ್ಯುತ್ತೇನೆ; ನನ್ನ ವರ್ಣವೂ ಹರಿದ್ವರ್ಣ. ಆದ್ದರಿಂದ ನಾನು **ಹರಿ** ಎನಿಸಿಕೊಂಡಿರುವೆನು' ಎಂದು ಭಗವಂತನ ವಚನವಿರುವುದರಿಂದ ಈ ಅರ್ಥವನ್ನು ಮಾಡಬಹುದು.

(ಭಾಷ್ಯ)

೩೬೦. ಸರ್ವಲಕ್ಷಣೈಃ ಪ್ರಮಾಣೈಃ ಲಕ್ಷಣಂ ಜ್ಞಾನಂ ಜಾಯತೇ ಯತ್ ತದ್ವಿನಿರ್ದಿಷ್ಟಂ ಸರ್ವಲಕ್ಷಣಲಕ್ಷಣಮ್; ತತ್ರ ಸಾಧುಃ ಸರ್ವಲಕ್ಷಣಲಕ್ಷಣ್ಯಃ ತಸ್ಯೈವ ಪರಮಾರ್ಥತ್ವಾತ್। ೩೬೧. ಲಕ್ಷ್ಮೀಃ, ಅಸ್ಯ ವಕ್ಷಸಿ ನಿತ್ಯಂ ವಸತಿ ಇತಿ ಲಕ್ಷ್ಮೀವಾನ್। ೩೬೨. ಸಮಿತಿಂ ಯುದ್ಧಂ ಜಯತೀತಿ ಸಮಿತಿಂಜಯಃ॥

(ಭಾಷ್ಯಾರ್ಥ)

ಎಲ್ಲಾ ಲಕ್ಷಣಗಳಿಂದಲೂ ಎಂದರೆ (ಎಲ್ಲಾ) ಪ್ರಮಾಣಗಳಿಂದಲೂ ಯಾವ ಜ್ಞಾನವಾಗುತ್ತದೆಯೋ ಅದು **ಸರ್ವಲಕ್ಷಣಲಕ್ಷಣವು** ಎನಿಸುತ್ತದೆ; ಅದಕ್ಕೆ ಸಾಧು (ತಕ್ಕವನು), ಆದ್ದರಿಂದ **ಸರ್ವಲಕ್ಷಣಲಕ್ಷಣ್ಯನು.** ಈತನೇ ಆ ಪ್ರಮೇಯದ ಪರಮಾರ್ಥವಾದ್ದರಿಂದ (ಹೀಗೆ ಅರ್ಥ). ಲಕ್ಷ್ಮಿಯು ಈತನ ಎದೆಯಲ್ಲಿ ನಿತ್ಯವೂ ವಾಸಮಾಡಿಕೊಂಡಿರುತ್ತಾಳಾದ್ದರಿಂದ **ಲಕ್ಷ್ಮೀವಾನ್;** 'ಸಮಿತಿ'ಯನ್ನು ಎಂದರೆ ಯುದ್ಧವನ್ನು (ಜಯತಿ) ಗೆಲ್ಲುತ್ತಾನೆ; ಆದ್ದರಿಂದ **ಸಮಿತಿಂಜಯನು** ॥೫೨॥

**ವಿಕ್ಷರೋ ರೋಹಿತೋ ಮಾರ್ಗೋ ಹೇತುರ್ದಾಮೋದರಃ ಸಹಃ।**
**ಮಹೀಧರೋ ಮಹಾಭಾಗೋ ವೇಗವಾನಮಿತಾಶನಃ ॥೫೩॥**

(ಭಾಷ್ಯ)

೩೬೩. ವಿಗತಃ ಕ್ಷರಃ ನಾಶಃ, ಯಸ್ಯ (?) ಅಸೌ ವಿಕ್ಷರಃ। ೩೬೪. ಸ್ವಚ್ಛಂದತಯಾ ರೋಹಿತಾಂ ಮೂರ್ತಿಂ ಮತ್ಸ್ಯವಿಶೇಷಮೂರ್ತಿಂ ವಹನ್ ರೋಹಿತಃ। ೩೬೫. ಮುಮುಕ್ಷವಸ್ತಂ ದೇವಂ ಮಾರ್ಗಯನ್ತಿ ಇತಿ ಮಾರ್ಗಃ। ಪರಮಾನನ್ದೋ ಯೇನ

ಪ್ರಾಪ್ಯತೇ ಸ ಮಾರ್ಗಃ ಇತಿ ವಾ। ३೬೬. ಉಪಾದಾನಂ ನಿಮಿತ್ತಂ ಚ ಕಾರಣಂ ಸ ಏವೇತಿ ಹೇತುಃ। ३೬೭. ದಮಾದಿಸಾಧನೇನ ಉದಾರಾ ಉತ್ಕೃಷ್ಟಾ ಮತಿಃ ಯಾ ತಯಾ ಗಮ್ಯತ ಇತಿ ದಾಮೋದರಃ 'ದಮಾದ್ ದಾಮೋದರೋ ವಿಭುಃ' (ಉದ್ಯೋ. ೬೯-೮) ಇತಿ ಮಹಾಭಾರತೇ। ಯಶೋದಯಾ ದಾಮ್ನಾ ಉದರೇ ಬದ್ಧಃ ಇತಿ ವಾ। 'ದದರ್ಶ ಚಾಲ್ಪದನ್ತಾಸ್ಯಂ ಸ್ಮಿತಹಾಸಂ ಚ ಬಾಲಕಮ್। ತಯೋರ್ಮಧ್ಯಗತಂ ಬದ್ಧಂ ದಾಮ್ನಾ ಗಾಢಂ ತಯೋದರೇ। ತತಶ್ಚ ದಾಮೋದರತಾಂ ಸ ಯಯೌ ದಾಮಬನ್ಧನಾತ್॥, (ಬ್ರಹ್ಮ೭೬-३,೧೪) ಇತಿ ಬ್ರಹ್ಮಪುರಾಣೇ।

ದಾಮಾನಿ ಲೋಕನಾಮಾನಿ ತಾನಿ ಯಸ್ಯೋದರಾನ್ತರೇ।
ತೇನ ದಾಮೋದರೋ ದೇವಃ ಶ್ರೀಧರಸ್ತು ರಮಾಶ್ರಿತಃ॥ (?)

ಇತಿವ್ಯಾಸವಚನಾತ್ ವಾ ದಾಮೋದರಃ। ३೬೮. ಸರ್ವಾನ್ ಅಭಿಭವತಿ ಕ್ಷಮತೇ ಇತಿ ವಾ ಸಹಃ॥

## (ಭಾವಾರ್ಥ)

ಯಾವನಿಗೆ ಕ್ಷರವು ಎಂದರೆ ವಿನಾಶವು ಇಲ್ಲವಾಗಿದೆಯೋ ಆ (ಈತನು) **ವಿಕ್ಷರನು.** ತನ್ನ ಇಚ್ಛೆಯಿಂದ ಕೆಂಪಾದ ಆಕಾರವನ್ನು- ಅಥವಾ ಮತ್ಸ್ಯಮೂರ್ತಿಯನ್ನು-ಧರಿಸಿದವನು **ರೋಹಿತನು.** ಮೋಕ್ಷೇಚ್ಛುಗಳಾದವರು ಆ ದೇವನನ್ನು (ಮಾರ್ಗಯನ್ತಿ) ಹುಡುಕುತ್ತಾರೆ; ಆದ್ದರಿಂದ **ಮಾರ್ಗನು.** ಪರಮಾನಂದವು ಯಾವದರಿಂದ ಲಭಿಸುವದೋ ಅದು **ಮಾರ್ಗವು** (ಎಂದಾದರೂ ವ್ಯಾಖ್ಯಾನ ಮಾಡಬಹುದು). ಉಪಾದಾನಕಾರಣವೂ, ನಿಮಿತ್ತಕಾರಣವೂ ಆತನೇ; ಆದ್ದರಿಂದ **ಹೇತುವು.** ದಮವೇ ಮುಂತಾದ ಸಾಧನದಿಂದ ಉದಾರವಾದ ಉತ್ಕೃಷ್ಟವಾದ ಯಾವ ಬುದ್ಧಿಯು ಉಂಟಾಗುವದೋ ಅದರಿಂದ ತಿಳಿಯಬರುತ್ತಾನೆ; ಆದ್ದರಿಂದ **ದಾಮೋದರನು.** 'ದಮದಿಂದ ದೊರಕುತ್ತಾನೆ; ಆದ್ದರಿಂದ ವಿಭುವಾದ ಭಗವಂತನು **ದಾಮೋದರ** (ನೆನಿಸಿರುತ್ತಾನೆ)' ಎಂದು ಮಹಾಭಾರತದಲ್ಲಿದೆ. ಅಥವಾ ಯಶೋದೆಯಿಂದ ದಾಮ(ಹಗ್ಗ)ದಿಂದ ಉದರದಲ್ಲಿ ಕಟ್ಟಲ್ಪಟ್ಟವನಾದ್ದರಿಂದ **ದಾಮೋದರನು** - ಎಂದಾದರೂ ಆಗಬಹುದು. 'ಸಣ್ಣ ಹಲ್ಲುಗಳುಳ್ಳ ಮುಖದಿಂದ ಹುಸಿನಗೆಯಿಂದ ಕೂಡಿದ್ದ (ಆ) ಬಾಲಕನನ್ನು (ವ್ರಜದ ಜನರು) ಆ ಎರಡು (ಬನ್ನಿಯ) ಮರಗಳ ನಡುವೆ ಇದ್ದದ್ದನ್ನು ಕಂಡರು. (ಅವನು) ಹೊಟ್ಟೆಯ ಭಾಗದಲ್ಲಿ ಹಗ್ಗದಿಂದ ಬಲವಾಗಿ ಕಟ್ಟಲ್ಪಟ್ಟಿದ್ದನು. ಆದರಿಂದ ದಾಮ (ಹಗ್ಗದ)ದ ಬಿಗಿತದಿಂದ **ದಾಮೋದರನೆಂಬ** (ಹೆಸರನ್ನು) ಪಡೆದುಕೊಂಡನು' ಎಂದು ಬ್ರಹ್ಮಪುರಾಣದಲ್ಲಿದೆ. ಅಥವಾ 'ಲೋಕಗಳೆಂಬ ಹೆಸರುಳ್ಳ ದಾಮುಗಳು ಯಾವನ ಹೊಟ್ಟೆಯೊಳಗೆ ಇರುವವೋ ಆ ದೇವನು **ದಾಮೋದರನೆನಿಸಿರುವನು.** ಲಕ್ಷ್ಮಿಯಿಂದ

ಆಶ್ರಯಿಸಲ್ಪಟ್ಟಿರುವದರಿಂದ ಶ್ರೀಧರನೆನಿಸಿರುವನು' (?) ಎಂಬ ವ್ಯಾಸವಚನದ ರೀತಿಯಿಂದಲಾದರೂ (ಈತನಿಗೆ ದಾಮೋದರನೆಂದು ಹೆಸರು). ಎಲ್ಲರನ್ನೂ ಸಹಿಸುತ್ತಾನೆ ಎಂದರೆ ಎದುರಿಸುತ್ತಾನೆ, ಅಥವಾ ಕ್ಷಮಿಸುತ್ತಾನೆ.[1] ಆದ್ದರಿಂದ **ಸಹನು.**

### (ಭಾಷ್ಯ)

೩೭೯. ಮಹೀಂ ಗಿರಿರೂಪೇಣ ಧರತೀತಿ ಮಹೀಧರಃ। 'ವನಾನಿ ವಿಷ್ಣುರ್ಗಿರಯೋ ದಿಶಶ್ಚ' (ವಿಷ್ಣು.೨-೧೨-೩೮) ಇತಿ ಪರಾಶರೋಕ್ತೇಃ। ೩೭೦. ಸ್ವೇಚ್ಛಯಾ ಧಾರಯನ್ ದೇಹಂ ಮಹಾನ್ತಿ ಉತ್ಕೃಷ್ಟಾನಿ ಭೋಜನಾನಿ ಭಾಗಜನ್ಯಾನಿ ಭುಙ್ಕ್ತೇ ಇತಿ ಮಹಾಭಾಗಃ। ಮಹಾನ್ ಭಾಗಃ ಭಾಗ್ಯಂ ಅಸ್ಯ ಅವತಾರೇಷು ಇತಿ ವಾ ಮಹಾಭಾಗಃ। ೩೭೧. ವೇಗೋ ಜವಃ ತದ್ವಾನ್ ವೇಗವಾನ್। 'ಅನೇಜದೇಕಂ ಮನಸೋ ಜವೀಯಃ' (ಈ.೪) ಇತಿ ಶ್ರುತೇಃ। ೩೭೨. ಸಂಹಾರಸಮಯೇ ವಿಶ್ವಮ್ ಅಶ್ನಾತೀತಿ ಅಮಿತಾಶನಃ ॥೫೩॥

### (ಭಾಷ್ಯಾರ್ಥ)

ಮಹಿ (ಭೂಮಿ)ಯನ್ನು ಪರ್ವತರೂಪದಿಂದ ಧರಿಸಿರುತ್ತಾನೆ; ಆದ್ದರಿಂದ (ಇವನು) **ಮಹೀಧರನು.** 'ವನಗಳೂ ವಿಷ್ಣುವು, ಬೆಟ್ಟಗಳೂ (ವಿಷ್ಣು), ದಿಕ್ಕುಗಳೂ ವಿಷ್ಣು' ಎಂದು (ವಿಷ್ಣುಪುರಾಣದಲ್ಲಿ) ಪರಾಶರರು (ಹೇಳಿದ್ದಾರೆ). ತನ್ನ ಇಚ್ಛೆಯಿಂದ ದೇಹವನ್ನು ಧರಿಸಿ ದೊಡ್ಡ ಉತ್ಕೃಷ್ಟವಾದ ಭಾಗದಿಂದ ಉಂಟಾದ ಭೋಜನಗಳನ್ನು ಭುಂಜಿಸುತ್ತಾನೆ, ಆದ್ದರಿಂದ **ಮಹಾಭಾಗನು.** ಅಥವಾ ಇವನಿಗೆ ಅವತಾರಗಳಲ್ಲಿ ಹೆಚ್ಚಿನ ಭಾಗವು ಎಂದರೆ ಭಾಗ್ಯವು (ಇರುತ್ತದೆ); ಆದ್ದರಿಂದ **ಮಹಾಭಾಗನು** - ಎಂದಾದರೂ (ಅರ್ಥವನ್ನು ಹೇಳಬಹುದು). ವೇಗ ಎಂದರೆ ಬಲವಾಗಿ ನಡೆಯುವದು; ಅದನ್ನುಳ್ಳವನಾದ್ದರಿಂದ **ವೇಗವಾನ್** ಎನಿಸಿರುತ್ತಾನೆ. 'ಅಲುಗಾಡದೆ ಒಂದೇ ಕಡೆಯಲ್ಲಿದ್ದುಕೊಂಡು ಮನಸ್ಸಿಗಿಂತ ವೇಗವುಳ್ಳದ್ದು' ಎಂಬ ಶ್ರುತಿಯು (ಇದಕ್ಕೆ) ಆಧಾರ. ಸಂಹಾರಕಾಲದಲ್ಲಿ ಎಲ್ಲವನ್ನೂ ತಿನ್ನುತ್ತಾನೆ; ಆದ್ದರಿಂದ **ಅಮಿತಾಶನನು** (ಅಳತೆಯಿಲ್ಲದಷ್ಟನ್ನು ತಿನ್ನುವವನು).

**ಉದ್ಭವಃ ಕ್ಷೋಭಣೋ ದೇವಃ ಶ್ರೀಗರ್ಭಃ ಪರಮೇಶ್ವರಃ।**
**ಕರಣಂ ಕಾರಣಂ ಕರ್ತಾ ವಿಕರ್ತಾ ಗಹನೋ ಗುಹಃ ॥೫೪॥**

### (ಭಾಷ್ಯ)

೩೭೩.ಪ್ರಪಞ್ಚೋತ್ಪತ್ತ್ಯುಪಾದಾನಕಾರಣತ್ವಾತ್ ಉದ್ಭವಃ; ಉದ್ಗತೋ ಭವಾತ್ ಸಂಸಾರಾತ್ ಇತಿ ವಾ। ೩೭೪. ಸರ್ಗಕಾಲೇ ಪ್ರಕೃತಿಂ ಪುರುಷಂ ಚ ಪ್ರವಿಶ್ಯ

1. ಷಹ ಮರ್ಷಣೇ ಅಭಿಭವೇ ಚ - ಎಂಬ ಧಾತುಕೋಶದಲ್ಲಿ "ಸಹ್" ಧಾತುವಿಗೆ ಈ ಎರಡೂ ಅರ್ಥಗಳಿವೆ ಎಂದು ವಾ॥

ಕ್ಷೋಭಯಾಮಾಸ ಇತಿ ಕ್ಷೋಭಣಃ। 'ಪ್ರಕೃತಿಂ ಪುರುಷಂ ಚೈವ ಪ್ರವಿಶ್ಯಾತ್ಮೇಚ್ಛಯಾ ಹರಿಃ। ಭಗವಾನ್ ಕ್ಷೋಭಯಾಮಾಸ ಸರ್ಗಕಾಲೇ ವ್ಯಯಾವ್ಯಯೌ॥' (ವಿ.ಪು.೧-೨-೨೯) ಇತಿ ವಿಷ್ಣುಪುರಾಣೇ। ೩೭೫. ಯತೋ ದೀವ್ಯತಿ ಕ್ರೀಡತಿ ಸರ್ಗಾದಿಭಿಃ, ವಿಜಿಗೀಷತೇ ಅಸುರಾದೀನ್ ವ್ಯವಹರತಿ ಸರ್ವಭೂತೇಷು ಆತ್ಮತ್ರಯಾ ದ್ಯೋತತೇ, ಸ್ತೂಯತೇ ಸ್ತುತ್ಯೈಃ ಸರ್ವತ್ರ ಗಚ್ಛತಿ ತಸ್ಮಾದ್ ದೇವಃ। 'ಏಕೋ ದೇವಃ' (ಶ್ವೇ. ೬-೧೧) ಇತಿ ಮನ್ತ್ರವರ್ಣಃ। ೩೭೬. ಶ್ರೀಃ ವಿಭೂತಿಃ ಯಸ್ಯ ಉದರಾನ್ತರೇ ಜಗದ್ರೂಪಾ ಯಸ್ಯ ಗರ್ಭೇ ಸ್ಥಿತಾ ಸಃ ಶ್ರೀಗರ್ಭಃ । ೩೭೭. ಪರಮಶ್ಚ ಅಸೌ ಈಶನಶೀಲಶ್ಚ ಇತಿ ಪರಮೇಶ್ವರಃ 'ಸಮಂ ಸರ್ವೇಷು ಭೂತೇಷು ತಿಷ್ಠನ್ತಂ ಪರಮೇಶ್ವರಮ್' (ಗೀ. ೧೩-೨೭) ಇತಿ ಭಗವದ್ವಚನಾತ್॥

## (ಭಾಷ್ಯಾರ್ಥ)

ಪ್ರಪಂಚದ ಉತ್ಪತ್ತಿಗೆ ಉಪಾದಾನಕಾರಣನಾಗಿರುವದರಿಂದ **ಉದ್ಭವನು.** ಅಥವಾ ಭವದಿಂದ ಎಂದರೆ ಸಂಸಾರದಿಂದ ಮೇಲಕ್ಕೆದ್ದವನು[1] ಎಂಬ ಕಾರಣದಿಂದ (ಉದ್ಭವನು) ಎಂದಾದರೂ (ಹೇಳಬಹುದು). ಸೃಷ್ಟಿಕಾಲದಲ್ಲಿ ಪ್ರಕೃತಿಯನ್ನೂ ಪುರುಷನನ್ನೂ ಒಳಹೊಕ್ಕು ಅಲುಗಾಡಿಸಿದನು. ಆದ್ದರಿಂದ **ಕ್ಷೋಭಣನು.** 'ಹರಿಯು ತನ್ನ ಇಚ್ಛೆಯಿಂದ ಪರಿಣಾಮವುಳ್ಳ ಮತ್ತು ಪರಿಣಾಮವಿಲ್ಲದ ಪ್ರಧಾನವನ್ನೂ ಪುರುಷನನ್ನೂ ಒಳಹೊಕ್ಕು ಅಲುಗಾಡಿಸಿದನು' ಎಂದು ವಿಷ್ಣುಪುರಾಣದಲ್ಲಿದೆ. ಸೃಷ್ಟಿಯೇ ಮುಂತಾದವುಗಳನ್ನು (ಮಾಡುವ ಮೂಲಕ 'ದೀವ್ಯತಿ' ) ಆಡುತ್ತಿರುತ್ತಾನೆ; ದೇವತೆಗಳ ಶತ್ರುಗಳನ್ನು ಜಯಿಸಲೆಳಸುತ್ತಾನೆ, ಸರ್ವಭೂತಗಳಲ್ಲಿಯೂ ವ್ಯವಹಾರ ಮಾಡುತ್ತಿರುತ್ತಾನೆ, ಆತ್ಮರೂಪನಾಗಿ ಬೆಳಗುತ್ತಿರುತ್ತಾನೆ, ಸ್ತುತ್ಯರ್ಹರಾದವರಿಂದ ಸ್ತುತಿಸಲ್ಪಡುತ್ತಿರುತ್ತಾನೆ, ಎಲ್ಲೆಲ್ಲಿಯೂ ವ್ಯಾಪ್ತನಾಗಿರುತ್ತಾನೆ,[2] ಆದ್ದರಿಂದ **ದೇವನು.** "ಸರ್ವಭೂತಗಳಲ್ಲಿಯೂ ಒಬ್ಬನೇ ಆಗಿರುವ ದೇವನು" ಎಂಬ ಮಂತ್ರವರ್ಣವು ಇದಕ್ಕೆ ಆಧಾರವು.[3] ಯಾವನ ಹೊಟ್ಟೆಯೊಳಗೆ ಜಗದ್ರೂಪಳಾದ ಶ್ರೀಯು ಎಂದರೆ (ಆ ರೂಪದ) ವಿಭೂತಿಯು ಇದೆಯೋ ಆತನು **ಶ್ರೀಗರ್ಭನು.** ಹೆಚ್ಚಿನ ಈಶ್ವರನಾದ್ದರಿಂದ **ಪರಮೇಶ್ವರನು.** 'ಸರ್ವಭೂತಗಳಲ್ಲಿಯೂ ಸಮನಾಗಿ ಇರುವ **ಪರಮೇಶ್ವರನನ್ನು**' ಎಂದಿರುವ ಭಗವದ್ವಚನ(ಪ್ರಮಾಣ)ದಿಂದ ಈ ಅರ್ಥ.

## (ಭಾಷ್ಯ)

೩೭೮. ಜಗದುತ್ಪತ್ತೌ ಸಾಧಕತಮಂ ಕರಣಮ್। ೩೭೯. ಉಪಾದಾನಂ ನಿಮಿತ್ತಂ ಚ ಕಾರಣಮ್। ೩೮೦. ಕರ್ತಾ ಸ್ವತನ್ತ್ರಃ। ೩೮೧. ವಿಚಿತ್ರಂ ಭುವನಂ ಕೃತವಾನ್

1. ನಿತ್ಯಮುಕ್ತನಾಗಿರುತ್ತಾನೆ.
2. 'ದಿವ್' ಧಾತುವಿಗಿರುವ ಕ್ರೀಡೆಯೇ ಮುಂತಾದ ಅರ್ಥಗಳೆಲ್ಲವನ್ನೂ ಇಲ್ಲಿ ಉಪಯೋಗಿಸಿ ಈ ಶಬ್ದಕ್ಕೆ ಅರ್ಥವನ್ನು ಮಾಡಿದೆ.
3. ಈ ವಚನವನ್ನು ಅರ್ಥಕ್ಕೆ ಹೇಗೆ ಹೊಂದಿಸಬೇಕೆಂಬುದು ಗೊತ್ತಾಗುವಂತಿಲ್ಲ.

ಇತಿ ವಿಕರ್ತಾ। ( ಸ ಏವ ಭಗವಾನ್ ವಿಷ್ಣುಃ) ૩೮೨. ಸ್ವರೂಪಂ ಸಾಮರ್ಥ್ಯಂ ಚೇಷ್ಟಿತಂ ವಾ ತಸ್ಯ ಜ್ಞಾತುಂ ನ ಶಕ್ಯತೇ ಇತಿ ಗಹನಃ। ૩೮೩. ಗೂಹತೇ ಸಂವೃಣೋತಿ ಸ್ವರೂಪಾದಿ ನಿಜಮಾಯಯಾ ಇತಿ ಗುಹಃ। "ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾಸಮಾವೃತಃ" (ಗೀ. ೭-೨೫) ಇತಿ ಭಗವದ್ವಚನಾತ್॥ ॥೫೪॥

## (ಭಾಷ್ಯಾರ್ಥ)

ಜಗತ್ತಿನ ಉತ್ಪತ್ತಿಗೆ ಎಲ್ಲಕ್ಕಿಂತಲೂ ಹೆಚ್ಚಿನ ಸಾಧನವಾಗಿರುವನು. (ಆದ್ದರಿಂದ) **ಕರಣನು.** ನಿಮಿತ್ತವೂ ಉಪಾದಾನಕಾರಣವೂ (ತಾನೇ ಆಗಿರುವದರಿಂದ) **ಕಾರಣನು.** ಸ್ವತಂತ್ರವಾಗಿರುವನಾದ್ದರಿಂದ **ಕರ್ತೃವು.** ವಿಚಿತ್ರವಾಗಿರುವ ಜಗತ್ತನ್ನು ಮಾಡಿರುವವನಾದ್ದರಿಂದ (ಅದೇ ಭಗವಂತನಾದ ವಿಷ್ಣುವೇ) **ವಿಕರ್ತನು.** ಆತನ ಸ್ವರೂಪವಾಗಲಿ, ಸಾಮರ್ಥ್ಯವಾಗಲಿ, ವ್ಯಾಪಾರವಾಗಲಿ (ಇಂಥದ್ದೆಂದು) ಅರಿತುಕೊಳ್ಳುವದು ಆಗುವಂತಿಲ್ಲವಾದ್ದರಿಂದ **ಗಹನನು.** (ತನ್ನ) ಸ್ವರೂಪವೇ ಮುಂತಾದದ್ದನ್ನು[1] ತನ್ನ ಮಾಯೆಯಿಂದ (ಗೂಹತೇ) ಮರೆಮಾಡಿಕೊಂಡಿರುತ್ತಾನಾದ್ದರಿಂದ **ಗುಹನು.** "ನಾನು ಯೋಗಮಾಯೆಯಿಂದ ಮುಸುಕಲ್ಪಟ್ಟಿರುವದರಿಂದ ಎಲ್ಲರಿಗೂ ಬೆಳಗಿ ತೋರುತ್ತಿಲ್ಲ" ಎಂದು ಭಗವದ್ವಚನವಿರುವದರಿಂದ (ಈ ಅರ್ಥ).

**ವ್ಯವಸಾಯೋ ವ್ಯವಸ್ಥಾನಃ ಸಂಸ್ಥಾನಃ ಸ್ಥಾನದೋ ಧ್ರುವಃ।**
**ಪರರ್ದ್ಧಿಃ ಪರಮಸ್ಪಷ್ಟಸ್ತುಷ್ಟಃ ಪುಷ್ಟಃ ಶುಭೇಕ್ಷಣಃ ॥೫೫॥**

## (ಭಾಷ್ಯ)

૩೮೪. ಸಂವಿನ್ಮಾತ್ರಸ್ವರೂಪತ್ವಾತ್ ವ್ಯವಸಾಯಃ। ૩೮೫. ಅಸ್ಮಿನ್ ವ್ಯವಸ್ಥಿತಿಃ ಸರ್ವಸ್ಯ ಇತಿ ವ್ಯವಸ್ಥಾನಃ। ಲೋಕಪಾಲಾದ್ಯಧಿಕಾರ-ಜರಾಯುಜಾಣ್ಡಜೋದ್ಭಿಜ್ಜ ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರಾವಾನ್ತರವರ್ಣ ಬ್ರಹ್ಮಚಾರಿ-ಗೃಹಸ್ಥವಾನಪ್ರಸ್ಥ ಸಂನ್ಯಾಸಲಕ್ಷಣಾಶ್ರಮ-ತದ್ಧರ್ಮಾದಿಕಾನ್ ವಿಭಜ್ಯ ಕರೋತೀತಿ ವಾ ವ್ಯವಸ್ಥಾನಃ। 'ಕೃತ್ಯಲ್ಯುಟೋ ಬಹುಲಮ್' (ಪಾ.૩-૩-೧೧૩) ಇತಿ ಬಹುಲಗ್ರಹಣಾತ್ ಕರ್ತರಿ ಲ್ಯುಟ್ ಪ್ರತ್ಯಯಃ। ૩೮೬. ಅತ್ರ ಭೂತಾನಾಂ ಸಂಸ್ಥಿತಿಃ ಪ್ರಲಯಾತ್ಮಿಕಾ ಸಮೀಚೀನಂ ಸ್ಥಾನಮ್ ಅಸ್ಯ ಇತಿ ವಾ ಸಂಸ್ಥಾನಃ। ૩೮೭. ಧ್ರುವಾದೀನಾಂ ಕರ್ಮಾನುರೂಪಂ ಸ್ಥಾನಂ ದದಾತೀತಿ ಸ್ಥಾನದಃ। ૩೮೮. ಅವಿನಾಶಿತ್ವಾತ್ ಧ್ರುವಃ॥

## (ಭಾಷ್ಯಾರ್ಥ)

ಕೇವಲ ಜ್ಞಾನಸ್ವರೂಪನಾಗಿರುವದರಿಂದ **ವ್ಯವಸಾಯನು.** ಈತನಲ್ಲಿ ಎಲ್ಲವೂ (ವ್ಯವಸ್ಥಿತವಾಗಿ) ಇದ್ದುಕೊಂಡಿದೆಯಾದ್ದರಿಂದ **ವ್ಯವಸ್ಥಾನನು.** ಲೋಕಪಾಲರೇ ಮುಂತಾದವರ ಅಧಿಕಾರಸ್ಥಾನವನ್ನೂ ಜರಾಯುಜ, ಅಂಡಜ, ಉದ್ಭಿಜ್ಜ (ಎಂಬ

---
1. ಸ್ವರೂಪ, ಸಾಮರ್ಥ್ಯ, ವ್ಯಾಪಾರ - ಇವುಗಳನ್ನು.

ಬಗೆಬಗೆಯ ಪ್ರಾಣಿ)ಗಳನ್ನೂ ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರ (ಒಳಜಾತಿ) ಎಂಬ ವರ್ಣಗಳನ್ನೂ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸ - ಎಂಬ ಆಶ್ರಮಗಳು, ಇವುಗಳ ಧರ್ಮಗಳೇ ಮುಂತಾದವುಗಳನ್ನೂ ವಿಂಗಡಿಸಿ (ಸೃಷ್ಟಿ) ಮಾಡುತ್ತಾನೆ; ಆದ್ದರಿಂದ **ವ್ಯವಸ್ಥಾನನು** ಎಂದಾದರೂ (ವಾಖ್ಯಾನ ಮಾಡಬಹುದು). 'ಕೃತ್ಯಲ್ಯುಟೋ ಬಹುಲಮ್' ಎಂಬ ವ್ಯಾಕರಣದ ಸೂತ್ರದಲ್ಲಿ 'ಬಹುಲ' ಎಂಬ ಪದವಿರುವದರಿಂದ (ಇಲ್ಲಿ ವ್ಯವಸ್ಥಾನಮ್ ಎಂಬುದಕ್ಕೆ) ಲ್ಯುಟ್ ಪ್ರತ್ಯಯವು ಕರ್ತೃ ಎಂಬರ್ಥದಲ್ಲಿಯೂ ಬಂದಿದೆ. ಇಲ್ಲಿ ಭೂತಗಳ ಸಂಸ್ಥಿತಿಯು ಎಂದರೆ ಪ್ರಲಯರೂಪವಾದ ಇರುವಿಕೆಯು (ಆಗುವದರಿಂದ) **ಸಂಸ್ಥಾನನು**. ಅಥವಾ ಉತ್ತಮವಾದ ಸ್ಥಾನವುಳ್ಳವನಿವನು - (ಆದ್ದರಿಂದ ಸಂಸ್ಥಾನನು) ಎಂದಾದರೂ (ಆಗಬಹುದು). ಧ್ರುವನೇ ಮೊದಲಾದವರಿಗೆ (ಅವರವರ) ಕರ್ಮಕ್ಕೆ ಅನುಗುಣವಾಗಿ ಸ್ಥಾನವನ್ನು ಕೊಡುತ್ತಾನಾದ್ದರಿಂದ **ಸ್ಥಾನದ** (ನೆನಿಸಿರುತ್ತಾನೆ). ನಾಶವಿಲ್ಲದ ಸ್ವಭಾವದವನಾದ್ದರಿಂದ **ಧ್ರುವನು**.

## (ಭಾಷ್ಯ)

೩೮೯. ಪರಾ ಋದ್ಧಿಃ ವಿಭೂತಿಃ, ಅಸ್ಯೇತಿ ಪರರ್ದ್ಧಿಃ। ೩೯೦. ಪರಾ ಮಾ ಶೋಭಾ ಅಸ್ಯ ಇತಿ ಪರಮಃ। ಸರ್ವೋತ್ಕೃಷ್ಟಾ ವಾ ಅನನ್ಯಾಧೀನಸಿದ್ಧಿತ್ವಾತ್ ಸಂವಿದಾತ್ಮಕತಯಾ ಸ್ಪಷ್ಟಃ ಪರಮಸ್ಪಷ್ಟಃ। ೩೯೧. ಪರಮಾನನ್ದೈಕರೂಪತ್ವಾತ್ ತುಷ್ಟಃ। ೩೯೨. ಸರ್ವತ್ರ ಸಂಪೂರ್ಣತ್ವಾತ್ ಪುಷ್ಟಃ। ೩೯೩. ಈಕ್ಷಣಂ ದರ್ಶನಂ ಯಸ್ಯ ಶುಭಂ ಶುಭಕರಂ ಮುಮುಕ್ಷೂಣಾಂ ಮೋಕ್ಷದಮ್, ಭೋಗಾರ್ಥಿನಾಂ ಭೋಗದಮ್, ಸರ್ವಸನ್ದೇಹವಿಚ್ಛೇದಕಾರಣಮ್, ಪಾಪಿನಾಂ ಪಾವನಮ್, ಹೃದಯಗ್ರನ್ಥಿವಿಚ್ಛೇದಕರಮ್, ಸರ್ವಕರ್ಮಣಾಂ ಕ್ಷಪಣಮ್, ಅವಿದ್ಯಾಯಾಶ್ಚ ನಿವರ್ತಕಮ್, (ಯಸ್ಯ?) ಸ ಶುಭೇಕ್ಷಣಃ। 'ಭಿದ್ಯತೇ ಹೃದಯಗ್ರನ್ಥಿಃ' (ಮುಂ.೨-೨.೮) ಇತ್ಯಾದಿಶ್ರುತೇಃ॥ ॥೪೪॥

## (ಭಾಷ್ಯಾರ್ಥ)

ಪರ ಎಂದರೆ ಉತ್ಕೃಷ್ಟವಾದ ವಿಭೂತಿಯು ಈತನಿಗೆ ಇದೆಯಾದ್ದರಿಂದ **ಪರರ್ದ್ಧಿಯು**. ಹೆಚ್ಚಿನ ಮಾ ಎಂದರೆ ಶೋಭೆಯು ಈತನದು, ಅಥವಾ ಎಲ್ಲಕ್ಕಿಂತಲೂ ಹೆಚ್ಚಿನ ಶೋಭೆಯು ಈತನದು ಏಕೆಂದರೆ ಈತನ ಸಿದ್ಧಿಯು ಮತ್ತೊಂದಕ್ಕೆ ಅಧೀನವಾದದ್ದಲ್ಲ; ಚೈತನ್ಯಸ್ವರೂಪವಾಗಿರುವದರಿಂದ ಸ್ಪಷ್ಟವು; ಆದ್ದರಿಂದ **ಪರಮಸ್ಪಷ್ಟನು**. ಪರಮಾನಂದವೆಂಬ ಒಂದೇ ರೂಪವಾಗಿರುವದರಿಂದ **ತುಷ್ಟನು**. ಎಲ್ಲೆಲ್ಲಿಯೂ ತುಂಬಿಕೊಂಡಿರುವದರಿಂದ **ಪುಷ್ಟನು**. ಈಕ್ಷಣವು ಎಂದರೆ ನೋಟವು ಶುಭವಾಗಿರುವದು - ಎಂದರೆ ಮುಮುಕ್ಷುಗಳಿಗೆ ಮೋಕ್ಷವನ್ನು ಕೊಡತಕ್ಕದ್ದೂ ಭೋಗಾಪೇಕ್ಷೆಯುಳ್ಳವನಿಗೆ ಭೋಗವನ್ನು ಕೊಡತಕ್ಕದ್ದೂ ಸಂಶಯಗಳನ್ನೆಲ್ಲ ಕತ್ತರಿಸುವದಕ್ಕೆ ಕಾರಣವಾದದ್ದೂ ಪಾಪಿಗಳಿಗೆ ಪವಿತ್ರವಾದದ್ದೂ ಹೃದಯದ ಗಂಟನ್ನು ಬಿಚ್ಚಬಲ್ಲದ್ದೂ ಸರ್ವಕರ್ಮಗಳನ್ನೂ ಸವೆಯಿಸಬಲ್ಲದ್ದೂ ಮತ್ತು ಅವಿದ್ಯೆಯನ್ನು ಕಳೆಯತಕ್ಕದ್ದು;

(ಇಂಥ ಈಕ್ಷಣವು) ಯಾವನಿಗಿದೆಯೋ ಅವನು **ಶುಭೇಕ್ಷಣನು**. '(ಆತನನ್ನು ಕಂಡರೆ) ಹೃದಯಗ್ರಂಥಿಯು ಬಿಚ್ಚಿಕೊಳ್ಳುವದು' ಎಂದು ಮುಂತಾಗಿರುವ ಶ್ರುತಿಯಿರುವದರಿಂದ (ಈ ಅರ್ಥವನ್ನು ಮಾಡಿಕೊಳ್ಳಬಹುದು).

**ರಾಮೋ ವಿರಾಮೋ ವಿರತೋ ಮಾರ್ಗೋ ನೇಯೋ ನಯೋಽನಯಃ।**
**ವೀರಃ ಶಕ್ತಿಮತಾಂ ಶ್ರೇಷ್ಠೋ ಧರ್ಮೋ ಧರ್ಮವಿದುತ್ತಮಃ ॥೫೬॥**

**(ಭಾಷ್ಯ)**

೩೯೪. ನಿತ್ಯಾನನ್ದಲಕ್ಷಣೇ ಅಸ್ಮಿನ್ ಯೋಗಿನೋ ರಮನ್ತೇ ಇತಿ ರಾಮಃ। 'ರಮನ್ತೇ ಯೋಗಿನೋ ಯಸ್ಮಿನ್ ನಿತ್ಯಾನನ್ದೇ ಚಿದಾತ್ಮನಿ। ಇತಿ ರಾಮಪದೇನೈತತ್ ಪರಂ ಬ್ರಹ್ಮಾಭಿಧೀಯತೇ' (?) ಇತಿ ಪದ್ಮಪುರಾಣೇ। ಸ್ವೇಚ್ಛಯಾ ರಮಣೀಯಂ ವಪುರ್ವಹನ್ ವಾ ದಾಶರಥೀ ರಾಮಃ। ೩೯೫. ವಿರಾಮಃ ಅವಸಾನಂ ಪ್ರಾಣಿನಾಮ್ ಅಸ್ಮಿನ್ ಇತಿ ವಿರಾಮಃ। ೩೯೬. ವಿಗತಂ ರತಮ್ ಅಸ್ಯ ವಿಷಯಸೇವಾಯಾಮ್ ಇತಿ ವಿರತಃ। ೩೯೭. ಯಂ ವಿದಿತ್ವಾ ಅಮೃತತ್ವಾಯ ಕಲ್ಪತೇ ಯೋಗಿನೋ ಮುಮುಕ್ಷವಃ ಸ ಏವ ಪನ್ಥಾಃ ಮಾರ್ಗಃ। 'ನಾನ್ಯಃ ಪನ್ಥಾ ವಿದ್ಯತೇ ಅಯನಾಯ' (ಶ್ವೇ. ೩-೮) ಇತಿ ಶ್ರುತೇಃ। ೩೯೮. ಮಾರ್ಗೇಣ ಸಮ್ಯಗ್ಜ್ಞಾನೇನ ಜೀವಃ ಪರಮಾತ್ಮತಯಾ ನೀಯತೇ ಇತಿ ನೇಯಃ। ೩೯೯. ನಯತೀತಿ ನಯಃ ನೇತಾ। ಮಾರ್ಗೋ ನೇಯೋ ನಯಃ ಇತಿ ತ್ರಿರೂಪಃ ಪರಿಕಲ್ಪ್ಯತೇ। ೪೦೦. ನಾಸ್ಯ ನೇತಾ ವಿದ್ಯತ ಇತಿ ಅನಯಃ॥

ಇತಿ ನಾಮ್ನಾಂ ಚತುರ್ಥಂ ಶತಂ ವಿವೃತಮ್

**(ಭಾಷ್ಯಾರ್ಥ)**

ನಿತ್ಯಾನಂದಸ್ವರೂಪನಾದ ಈತನಲ್ಲಿ ಯೋಗಿಗಳು ರಮಿಸುತ್ತಾರೆ, ಆದ್ದರಿಂದ **ರಾಮನು**. 'ಚಿದಾತ್ಮಕನಾದ, ನಿತ್ಯಾನಂದ (ಸ್ವರೂಪ)ನಾದ ಯಾವನಲ್ಲಿ ಯೋಗಿಗಳು ರಮಿಸುತ್ತಾರೋ (ಆತನು ರಾಮನು). ಹೀಗೆ ರಾಮ (ನೆಂಬ) ಪದದಿಂದ ಈ ಪರಬ್ರಹ್ಮವು ಹೇಳಲ್ಪಡುತ್ತದೆ' ಎಂದು ಪದ್ಮಪುರಾಣ(ದಲ್ಲಿದೆ). ತನ್ನ ಇಚ್ಛಾನುಸಾರವಾಗಿ ಮನೋಹರವಾದ ಶರೀರವನ್ನು ಧರಿಸಿರುವ ದಶರಥ (ಪುತ್ರ)ನಾದ **ರಾಮ**ನೆಂದಾದರೂ (ಅರ್ಥಮಾಡಬಹುದು). ಪ್ರಾಣಿಗಳಿಗೆ ಇವನಲ್ಲಿಯೇ ವಿರಾಮವು, ಕೊನೆಯು (ಆಗುವದರಿಂದ) **ವಿರಾಮನು**. ವಿಷಯಗಳ ಭೋಗದಲ್ಲಿ ಹಿಂದಿರುಗಿದ (ಮನಸ್ಸು) ಈತನದು; ಆದ್ದರಿಂದ **ವಿರತನು**. ಯಾವನನ್ನು ಅರಿತುಕೊಂಡು ಮುಮುಕ್ಷುಗಳಾದ ಯೋಗಿಗಳು ಅಮೃತತ್ವ (ಮೋಕ್ಷ)ಕ್ಕೆ ಅರ್ಹರಾಗುವರೋ ಅವನೇ ದಾರಿಯು, **ಮಾರ್ಗವು**. '(ಜ್ಞಾನವನ್ನುಳಿದು) ಆತ್ಮಪ್ರಾಪ್ತಿಗೆ ಬೇರೊಂದು ದಾರಿ ಇರುವದಿಲ್ಲ' ಎಂದು ಶ್ರುತಿಯಿದೆ. ಸಮ್ಯಗ್ಜ್ಞಾನವೆಂಬ ಹಾದಿಯಿಂದ ಜೀವನು ಪರಮಾತ್ಮನಾಗಿ

ಒಯ್ಯಲ್ಪಡುತ್ತಾನಾದ್ದರಿಂದ **ನೇಯನು**, ಒಯ್ಯುತ್ತಾನಾದ್ದರಿಂದ **ನಯನು**, ನೇತೃವು. ಮಾರ್ಗನು, ನೇಯನು, ನಯನು - ಎಂದು ಮೂರು ರೂಪಗಳನ್ನು (ಭಗವಂತನಲ್ಲಿ) ಕಲ್ಪಿಸಿದೆ. ಇವನನ್ನು ನಡೆಯಿಸುವವನು ಬೇರೆ ಯಾವನೂ ಇಲ್ಲವಾದ್ದರಿಂದ **ಅನಯನು**.

ಇಲ್ಲಿಗೆ ನಾಮಗಳ ನಾಲ್ಕನೆಯ ಶತಕವು ಮುಗಿಯಿತು.

## ಪಂಚಮಶತಕ

### (ಭಾಷ್ಯ)

೪೦೧. ವಿಕ್ರಮಶೀಲತ್ವಾತ್ ವೀರಃ। ೪೦೨. ಶಕ್ತಿಮತಾಂ ವಿರಿಞ್ಚ್ಯಾದೀನಾಮಪಿ ಶಕ್ತಿಮತ್ತ್ವಾತ್ ಶಕ್ತಿಮತಾಂ ಶ್ರೇಷ್ಠಃ। ೪೦೩. ಸರ್ವಭೂತಾನಾಂ ಧಾರಣಾತ್ ಧರ್ಮಃ। 'ಅಣುರೇಷ ಧರ್ಮಃ' (ಕಾ. ೧-೨೧) ಇತಿ ಶ್ರುತೇಃ। ಧರ್ಮೈಃ ಆರಾಧ್ಯತ ಇತಿ ವಾ ಧರ್ಮಃ। ೪೦೪. ಶ್ರುತಯಃ ಸ್ಮೃತಯಶ್ಚ ಯಸ್ಯಾಜ್ಞಾಭೂತಾಃ, ಸ ಏವ ಸರ್ವಧರ್ಮವಿದಾಮ್ ಉತ್ತಮಃ - ಇತಿ ಧರ್ಮವಿದುತ್ತಮಃ ॥೫೬॥

### (ಭಾಷ್ಯಾರ್ಥ)

ವಿಕ್ರಮಸ್ವಭಾವದವನಾದ್ದರಿಂದ **ವೀರನು.** ಶಕ್ತಿಯುಳ್ಳವರಿಗಿಂತ ಎಂದರೆ ಬ್ರಹ್ಮನೇ ಮೊದಲಾದವರಿಗಿಂತಲೂ (ಹೆಚ್ಚಿನ) ಶಕ್ತಿಯುಳ್ಳಾತನಾದ್ದರಿಂದ **ಶಕ್ತಿವಂತರಲ್ಲಿ ಶ್ರೇಷ್ಠನು.** ಎಲ್ಲಾ ಭೂತಗಳನ್ನೂ ಧರಿಸಿರುವವನಾದ್ದರಿಂದ **ಧರ್ಮನು.** 'ಈ ಧರ್ಮನು ಸೂಕ್ಷ್ಮನಾಗಿರುತ್ತಾನೆ' ಎಂಬ ಶ್ರುತಿಯ ಪ್ರಮಾಣದಿಂದ (ಈ ಅರ್ಥ). ಧರ್ಮಗಳಿಂದ ಇವನನ್ನು ಆರಾಧಿಸುತ್ತಾರೆ ಎಂಬ ಕಾರಣದಿಂದಲಾದರೂ (ಈತನು) **ಧರ್ಮನು.** ಶ್ರುತಿಗಳೂ ಸ್ಮೃತಿಗಳೂ ಯಾವಾತನ ಅಪ್ಪಣೆಯ ರೂಪದಿಂದಿರುವವೋ ಆತನೇ ಧರ್ಮವನ್ನು ಬಲ್ಲವರೆಲ್ಲರಿಗಿಂತಲೂ ಶ್ರೇಷ್ಠನಾದ್ದರಿಂದ **ಧರ್ಮವಿದುತ್ತಮನು.**

**ವೈಕುಂಠಃ ಪುರುಷಃ ಪ್ರಾಣಃ ಪ್ರಾಣದಃ ಪ್ರಣವಃ ಪೃಥುಃ।**
**ಹಿರಣ್ಯಗರ್ಭಃ ಶತ್ರುಘ್ನೋ ವ್ಯಾಪ್ತೋ ವಾಯುರಧೋಕ್ಷಜಃ ॥೫೭॥**

### (ಭಾಷ್ಯ)

೪೦೫. ವಿವಿಧಾ ಕುಣ್ಠಾ ಗತೇಃ ಪ್ರತಿಹತಿಃ ವಿಕುಣ್ಠಾ, ವಿಕುಣ್ಠಾಯಾಃ ಕರ್ತಾ ಇತಿ ವೈಕುಣ್ಠಃ। ಜಗದಾರಮ್ಭೇ ವಿಶ್ಲಿಷ್ಟಾನಿ ಭೂತಾನಿ ಪರಸ್ಪರಂ ಸಂಶ್ಲೇಷಯನ್ ತೇಷಾಂ ಗತಿಂ ವಿಘ್ನತೀತಿ 'ಮಯಾ ಸಂಶ್ಲೇಷಿತಾ ಭೂಮಿರದ್ಭಿರ್ವ್ಯೋಮ ಚ ವಾಯುನಾ। ವಾಯುಶ್ಚ ತೇಜಸಾ ಸಾರ್ಧಂ ವೈಕುಣ್ಠತ್ವಂ ತತೋ ಮಮ॥' (ಶಾಂ. ೩೪೨-೮೦) ಇತಿ ಶಾಂತಿಪರ್ವಣಿ। ೪೦೬. ಸರ್ವಸ್ಮಾತ್ ಪುರಾ ಸದನಾತ್। ಸರ್ವಪಾಪಸ್ಯ ಸಾದನತ್ವಾದ್ ವಾ ಪುರುಷಃ। 'ಸ ಯತ್ಪೂರ್ವೋಽಸ್ಮಾತ್ ಸರ್ವಸ್ಮಾತ್ ಸರ್ವಾನ್ ಪಾಪ್ಮನ ಔಷತ್ತಸ್ಮಾತ್ಪುರುಷಃ' (ಬೃ.೧-೪-೧) ಇತಿ ಶ್ರುತೇಃ। ಪುರಿ ಶಯನಾದ್ವಾ ಪುರುಷಃ; 'ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಪುರಿಶಯಃ' (ಬೃ. ೨-೫-೧೮) ಇತಿ ಶ್ರುತೇಃ। ೪೦೭. ಪ್ರಾಣಿತಿ ಕ್ಷೇತ್ರಜ್ಞರೂಪೇಣ, ಪ್ರಾಣಾತ್ಮನಾ ಚೇಷ್ಟಯನ್ ವಾ ಪ್ರಾಣಃ। 'ಚೇಷ್ಟಾಂ ಕರೋತಿ ಶ್ವಸನಸ್ವರೂಪೀ' (ವಿ.ಪು.?) ಇತಿ ವಿಷ್ಣುಪುರಾಣೇ। ೪೦೮. ಖಣ್ಡಯತಿ ಪ್ರಾಣಿನಾಂ ಪ್ರಾಣಾನ್

ಪ್ರಲಯಾದಿಷು - ಇತಿ ಪ್ರಾಣದಃ। ೪೧೯. ಪ್ರಣೌತೀತಿ ಪ್ರಣವಃ 'ತಸ್ಮಾದೋಮಿತಿ ಪ್ರಣೌತಿ' (?) ಇತಿ ಶ್ರುತೇಃ। ಪ್ರಣಮ್ಯತ ಇತಿ ವಾ ಪ್ರಣವಃ । 'ಪ್ರಣಮನ್ತೀಹ ವೈ ವೇದಾಸ್ತಸ್ಮಾತ್ ಪ್ರಣವ ಉಚ್ಯತೇ' (?) ಇತಿ ಸನತ್ಕುಮಾರವಚನಾತ್। ೪೧೦. ಪ್ರಪಞ್ಚರೂಪೇಣ ವಿಸ್ತೃತತ್ವಾತ್ ಪೃಥುಃ॥

## (ಭಾಷ್ಯಾರ್ಥ)

ವಿಧವಿಧವಾದ ಕುಂಠವು ಎಂದರೆ ಚಲನಕ್ಕೆ ಅಡ್ಡಿಯು ವಿಕುಣ್ಠಾ (ಎನಿಸುತ್ತದೆ). ವಿಕುಂಠವನ್ನು ಮಾಡುವದರಿಂದ **ವೈಕುಂಠನು**. ಜಗತ್ತಿನ ಆರಂಭದಲ್ಲಿ ಬಿಡಿಬಿಡಿಯಾಗಿರುವ ಭೂತಗಳನ್ನು ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡಿ ಅವುಗಳ ಗತಿಗೆ ಅಡ್ಡಿಯನ್ನು ಮಾಡುತ್ತಾನೆ; (ಆದ್ದರಿಂದ **ವೈಕುಂಠನು**). 'ಪೃಥ್ವಿಯು ನನ್ನಿಂದ ಅಪ್ಪಿಗೆ ಅಂಟಿಸಲ್ಪಟ್ಟಿತು, ಆಕಾಶವು ವಾಯುವಿಗೆ (ಅಂಟಿಸಲ್ಪಟ್ಟಿತು), ವಾಯುವು ತೇಜಸ್ಸಿಗೆ (ಅಂಟಿಸಲ್ಪಟ್ಟಿತು); ಆದ್ದರಿಂದ ನನಗೆ **ವೈಕುಂಠತ್ವವು** ಬಂದಿತು' ಎಂದು **ಶಾಂತಿಪರ್ವ**ದಲ್ಲಿದೆ. ಎಲ್ಲಕ್ಕಿಂತಲೂ ಮೊದಲು ಇರುವದರಿಂದ ಅಥವಾ ಎಲ್ಲಾ ಪಾಪವನ್ನೂ ನಾಶಗೊಳಿಸುವದರಿಂದ (ಇವನು) **ಪುರುಷನು**. 'ಆತನು ಎಲ್ಲಕ್ಕಿಂತಲೂ ಮೊದಲು ಇದ್ದನು, ಎಲ್ಲಾ ಪಾಪಗಳನ್ನೂ ನಾಶಗೊಳಿಸಿದನು; ಆದ್ದರಿಂದ ಪುರುಷನು' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ). ಅಥವಾ ಪುರದಲ್ಲಿ ಇರುವದರಿಂದ **ಪುರುಷನು**; 'ಆ ಪುರುಷನೇ ಎಲ್ಲಾ ಪುರಗಳಲ್ಲಿರುವ ಪುರಿಶಯನು' ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). ಕ್ಷೇತ್ರಜ್ಞರೂಪದಿಂದ ಉಸಿರಾಡುತ್ತಾನೆ; ಅಥವಾ ಪ್ರಾಣಾತ್ಮನಾಗಿ ವ್ಯಾಪಾರಮಾಡುತ್ತಾನೆ - ಆದ್ದರಿಂದ **ಪ್ರಾಣನು**. 'ವಾಯುರೂಪದಿಂದ ವ್ಯಾಪಾರಮಾಡುತ್ತಾನೆ'(?) ಎಂದು ವಿಷ್ಣುಪುರಾಣದಲ್ಲಿದೆ. ಪ್ರಲಯವೇ ಮುಂತಾದ (ಅಂತ್ಯ)ಕಾಲಗಳಲ್ಲಿ ಪ್ರಾಣಿಗಳ ಪ್ರಾಣಗಳನ್ನು ಖಂಡಿಸುತ್ತಾನೆ, ಆದ್ದರಿಂದ **ಪ್ರಾಣದನು**. 'ಪ್ರಣೌತಿ' (ಸ್ತುತಿಸುತ್ತಾರೆ), ಆದ್ದರಿಂದ **ಪ್ರಣವನು**; 'ಆದ್ದರಿಂದ ಓಮ್ ಎಂದು ಸ್ತುತಿಸುತ್ತಾರೆ' (?)[1] ಎಂಬ ಶ್ರುತಿಯು ಇದಕ್ಕೆ ಆಧಾರ; ಅಥವಾ ನಮಸ್ಕರಿಸಲ್ಪಡುತ್ತಾನೆ, ಆದ್ದರಿಂದ **ಪ್ರಣವನು** (ಎಂದೂ ಅರ್ಥವನ್ನು ಮಾಡಬಹುದು). 'ವೇದಗಳು ಇಲ್ಲಿ ನಮಸ್ಕರಿಸುತ್ತಿರುವವು; ಆದ್ದರಿಂದ **ಪ್ರಣವನೆನಿಸಿರುತ್ತಾನೆ**' (?) ಎಂಬ ಸನತ್ಕುಮಾರವಚನದಿಂದ (ಇದು ಸಿದ್ಧವಾಗುತ್ತದೆ). ಪ್ರಪಂಚರೂಪದಿಂದ ಹರಡಿಕೊಳ್ಳುವದರಿಂದ **ಪೃಥು** (ವೆನಿಸಿರುತ್ತಾನೆ).

## (ಭಾಷ್ಯ)

೪೧೧. ಹಿರಣ್ಯಗರ್ಭಸಂಭೂತಿಕಾರಣಂ ಹಿರಣ್ಮಯಮಣ್ಡಂ ಯದ್ವೀರ್ಯಸಂಭೂತಮ್, ತದಸ್ಯ ಗರ್ಭಃ - ಇತಿ ಹಿರಣ್ಯಗರ್ಭಃ। ೪೧೨. ತ್ರಿದಶಶತ್ರೂನ್ ಹನ್ತೀತಿ ಶತ್ರುಘ್ನಃ। ೪೧೩. ಕಾರಣತ್ವೇನ ಸರ್ವಕಾರ್ಯಾಣಾಂ ವ್ಯಾಪನಾತ್ ವ್ಯಾಪ್ತಃ।

1. ಮೂಲವಾಕ್ಯವು ಸಿಕ್ಕಿಲ್ಲ; ವಾಕ್ಯದ ಅಭಿಪ್ರಾಯವು ಸ್ಫುಟವಾಗಿಲ್ಲ.

೪೧೪. ವಾತಿ ಗನ್ಧಂ ಕರೋತೀತಿ ವಾಯುಃ। "ಪುಣ್ಯೋ ಗನ್ಧಃ ಪೃಥಿವ್ಯಾಂ ಚ" (ಗೀ.೭-೯) ಇತಿ ಭಗವದ್ವಚನಾತ್। ೪೧೫. 'ಅಧೋ ನ ಕ್ಷೀಯತೇ ಜಾತು ಯಸ್ಮಾತ್ತಸ್ಮಾದಧೋಕ್ಷಜಃ' (ಉದ್ಯೋ. ೭೦-೧೦) ಇತಿ ಉದ್ಯೋಗಪರ್ವಣಿ। ದ್ಯೌರಕ್ಷಮ್, ಪೃಥಿವೀ ಚಾಧಃ, ತಯೋರ್ಯಸ್ಮಾದಜಾಯತ ಮಧ್ಯೇ ವೈರಾಜರೂಪೇಣ ಇತಿ ವಾ ಅಧೋಕ್ಷಜಃ. ಅಧೋಭೂತೇ ಪ್ರತ್ಯಕ್‌ಪ್ರವಾಹಿತೇ ಅಕ್ಷಗಣೇ ಜಾಯತ ಇತಿ ವಾ ಅಧೋಕ್ಷಜಃ। 'ಅಧೋಭೂತೇ ಹ್ಯಕ್ಷಗಣೇ ಪ್ರತ್ಯಗ್ರೂಪಪ್ರವಾಹಿತೇ। ಜಾಯತೇ ತಸ್ಯ ವೈ ಜ್ಞಾನಂ ತೇನಾಧೋಕ್ಷಜ ಉಚ್ಯತೇ॥' (?) ಇತಿ ॥೫೭॥

(ಭಾಷ್ಯಾರ್ಥ)

ಹಿರಣ್ಯವೆಂದರೆ ಹಿರಣ್ಯಗರ್ಭನ ಉತ್ಪತ್ತಿಗೆ ಕಾರಣವಾದ ಚಿನ್ನದ ಅಂಡವು (ಈತನ ವೀರ್ಯದಿಂದ) ಉತ್ಪತ್ತಿಯಾಯಿತಷ್ಟೆ, ಅದು ಈತನ ಗರ್ಭವು, ಆದ್ದರಿಂದ (ಈತನು) **ಹಿರಣ್ಯಗರ್ಭನು.** ದೇವತೆಗಳ ಶತ್ರುಗಳನ್ನು ಕೊಲ್ಲುತ್ತಾನಾದ್ದರಿಂದ **ಶತ್ರುಘ್ನನು.** ಕಾರಣ (ರೂಪ)ದಿಂದ ಎಲ್ಲಾ ಕಾರ್ಯಗಳನ್ನೂ ವ್ಯಾಪಿಸಿಕೊಂಡಿರುತ್ತಾನೆ; ಆದ್ದರಿಂದ **ವ್ಯಾಪ್ತನು.** 'ವಾತಿ-ವಾಸನೆಯನ್ನು ಮಾಡುತ್ತಾನೆ', ಆದ್ದರಿಂದ **ವಾಯುವು.** 'ಪೃಥ್ವಿಯಲ್ಲಿ ಒಳ್ಳೆಯ ವಾಸನೆಯು (ನಾನು)' ಎಂಬ ಭಗವದ್ವಚನದಿಂದ (ಈ ಅಭಿಪ್ರಾಯವು ಹೊರಡುತ್ತದೆ). 'ಎಂದಿಗೂ (ತನ್ನ ಸ್ವರೂಪದಿಂದ) ಕೆಳಗೆ ಇಳಿಯುವದಿಲ್ಲವಾದ್ದರಿಂದ **ಅಧೋಕ್ಷಜನು**' ಎಂದು ಉದ್ಯೋಗಪರ್ವದಲ್ಲಿದೆ. ಅಥವಾ ಅಂತರಿಕ್ಷವು (ಅಧಃ-) ಕೆಳಗೆ; ಪೃಥಿವಿಯೂ ಕೆಳಗೆ; ಅವುಗಳ ನಡುವೆ (ಭಗವಂತನು ವಿರಾಡ್ರೂಪದಿಂದ) ಕಾಣಿಸಿಕೊಂಡವನಾದ್ದರಿಂದ ಅಧೋಕ್ಷಜನು - ಎಂದೂ ಅರ್ಥಮಾಡಬಹುದು. ಅಥವಾ ಅಕ್ಷ (ಇಂದ್ರಿಯ)ಗಳ ಗುಂಪು ಅಧೋಭೂತವಾದರೆ ಎಂದರೆ ಹಿಂದಕ್ಕೆ ಸರಿದುಕೊಂಡರೆ (ಜಾಯತೇ) ಕಾಣಿಸಿಕೊಳ್ಳುತ್ತಾನೆ; ಆದ್ದರಿಂದ **ಅಧೋಕ್ಷಜನು.** 'ಇಂದ್ರಿಯಗಳ ಗುಂಪು ಅಧೋಭೂತವಾದರೆ ಎಂದರೆ ಒಳಮುಖವಾಗಿ ಪ್ರವಹಿಸಿದರೆ ಆತನ ಜ್ಞಾನವು (ಉಂಟಾಗುತ್ತದೆ), ಆದ್ದರಿಂದ ಅಧೋಕ್ಷಜನೆನಿಸಿರುತ್ತಾನೆ' (?) ಎಂದು (ವಾಕ್ಯವಿದೆ).

**ಋತುಃ ಸುದರ್ಶನಃ ಕಾಲಃ ಪರಮೇಷ್ಠೀ ಪರಿಗ್ರಹಃ।**
**ಉಗ್ರಃ ಸಂವತ್ಸರೋ ದಕ್ಷೋ ವಿಶ್ರಾಮೋ ವಿಶ್ವದಕ್ಷಿಣಃ ॥೫೮॥**

(ಭಾಷ್ಯ)

೪೧೬. ಕಾಲಾತ್ಮನಾ ಋತುಶಬ್ದೇನ ಲಕ್ಷ್ಯತೇ ಇತಿ ಋತುಃ। ೪೧೭. ಶೋಭನಂ ನಿರ್ವಾಣಫಲಂ ದರ್ಶನಂ ಜ್ಞಾನಮ್ ಅಸ್ಯ ಇತಿ, ಶುಭೇ ದರ್ಶನೇ ಈಕ್ಷಣೇ ಪದ್ಮಪತ್ರಾಯತೇ ಅಸ್ಯೇತಿ, ಸುಖೇನ ದೃಶ್ಯತೇ ಭಕ್ತೈಃ - ಇತಿ ವಾ ಸುದರ್ಶನಃ। ೪೧೮. ಕಲಯತಿ ಸರ್ವಮಿತಿ ಕಾಲಃ। 'ಕಾಲಃ ಕಲಯತಾಮಹಮ್' (ಗೀ. ೧೦-೩೦)

ಇತಿ ಭಗವದ್ವಚನಾತ್। ೪೧೯. ಪರಮೇ ಪ್ರಕೃಷ್ಟೇ ಸ್ವೇ ಮಹಿಮ್ನಿ ಹೃದಯಾಕಾಶೇ ಸ್ಥಾತುಂ ಶೀಲಮಸ್ಯೇತಿ ಪರಮೇಷ್ಠೀ 'ಪರಮೇಷ್ಠೀ ವಿಭ್ರಾಜತೇ' (?) ಇತಿ ಮನ್ತ್ರವರ್ಣಾತ್। ೪೨೦. ಶರಣಾರ್ಥಿಭಿಃ ಪರಿತೋ ಗೃಹ್ಯತೇ ಸರ್ವಗತತ್ವಾತ್, ಪರಿತೋ ಜ್ಞಾಯತ ಇತಿ ವಾ ಪತ್ರಪುಷ್ಪಾದಿಕಂ ಭಕ್ತೈರರ್ಪಿತಂ ಪರಿಗೃಹ್ಣಾತಿ ಇತಿ ವಾ ಪರಿಗ್ರಹಃ॥

## (ಭಾಷ್ಯಾರ್ಥ)

ಋತು ಎಂಬ ಶಬ್ದದಿಂದ ಕಾಲಾತ್ಮಕನಾಗಿ ಲಕ್ಷಣೆಯಿಂದ ಕರೆಯಲ್ಪಡುತ್ತಾನೆ, ಆದ್ದರಿಂದ **ಋತುವು**. ಉತ್ತಮವಾದ ನಿರ್ವಾಣವೆಂಬ ಫಲವುಳ್ಳದ್ದು ಈತನ ದರ್ಶನವು; ಎಂದರೆ ಜ್ಞಾನವು, ಅಥವಾ ಕಮಲಪತ್ರದಂತೆ ಅಗಲವಾದ ದರ್ಶನಗಳು ಎಂದರೆ ಕಣ್ಣುಗಳು ಈತನವು, ಅಥವಾ ಭಕ್ತರು ಸುಲಭವಾಗಿ ಈತನನ್ನು ಕಾಣುವರು ಎಂಬ ಕಾರಣದಿಂದ **ಸುದರ್ಶನನು**. ಎಲ್ಲವನ್ನೂ (ಕಲಯತಿ-) ಎಣಿಸುತ್ತಾನೆ, ಆದ್ದರಿಂದ **ಕಾಲನು**. 'ಎಣಿಸುವವರಲ್ಲಿ ಕಾಲನು ನಾನು' (ಗೀ. ೧೦-೩೦) ಎಂಬ ಭಗವದ್ವಚನದಿಂದ (ಈ ಅರ್ಥ). ಪರಮವಾದ ಎಂದರೆ ಉತ್ಕೃಷ್ಟವಾದ, ತನ್ನ ಮಹಿಮೆಯಲ್ಲಿ[1] (ಎಂದರೆ ಹೃದಯಾಕಾಶದಲ್ಲಿ[2] ಇರುವದು ಈತನ ಸ್ವಭಾವವು); ಆದ್ದರಿಂದ **ಪರಮೇಷ್ಠಿ** (ಎನಿಸುವನು). 'ಪರಮೇಷ್ಠಿಯಾಗಿ ಹೊಳೆಯುತ್ತಿದ್ದಾನೆ' (?) ಎಂಬ ಮಂತ್ರವರ್ಣದಿಂದ[3] (ಈ ಅರ್ಥವಾಗುತ್ತದೆ). ಶರಣವನ್ನು ಬಯಸುವವರಿಗೆ, ಸರ್ವವ್ಯಾಪಿಯಾದ್ದರಿಂದ ಎಲ್ಲೆಲ್ಲಿಯೂ ಕಾಣಿಸುತ್ತಾನೆ, ಅರಿಯಬರುತ್ತಾನೆ ಎಂದಾಗಲಿ, ಪತ್ರಪುಷ್ಪವೇ ಮುಂತಾದದ್ದನ್ನು ಭಕ್ತರು ಅರ್ಪಿಸಿದರೆ ಪರಿಗ್ರಹಿಸುತ್ತಾನೆ; ಆದ್ದರಿಂದ **ಪರಿಗ್ರಹನು** ಎಂದಾಗಲಿ (ವ್ಯಾಖ್ಯಾನಮಾಡಬಹುದು).

## (ಭಾಷ್ಯ)

೪೨೧. ಸೂರ್ಯಾದೀನಾಮಪಿ ಭಯಹೇತುತ್ವಾತ್ ಉಗ್ರಃ। "ಭೀಷೋದೇತಿ ಸೂರ್ಯಃ" (ತೈ.೨-೮) ಇತಿ ಶ್ರುತೇಃ। ೪೨೨. ಸಂವಸನ್ತಿ ಭೂತಾನಿ ಅಸ್ಮಿನ್ ಇತಿ ಸಂವತ್ಸರಃ। ೪೨೩. ಜಗದ್ರೂಪೇಣ ವರ್ಧಮಾನತ್ವಾತ್, ಸರ್ವಕರ್ಮಾಣಿ ಕ್ಷಿಪ್ರಂ ಕರೋತೀತಿ ವಾ ದಕ್ಷಃ। ೪೨೪. ಸಂಸಾರಸಾಗರೇ ಕ್ಷುತ್ಪಿಪಾಸಾದಿಷಡೂರ್ಮಿಭಿಸ್ತರಙ್ಗಿತೇ ಅವಿದ್ಯಾದಿಭಿರ್ಮಹಾಕ್ಲೇಶೈಃ ಮದಾದಿಭಿರುಪಕ್ಲೇಶೈಶ್ಚ ವಶೀಕೃತಾನಾಂ ವಿಶ್ರಾನ್ತಿಂ ಕಾಙ್ಕ್ಷಮಾಣಾನಾಂ ಮೋಕ್ಷಂ ಕರೋತೀತಿ ವಿಶ್ರಾಮಃ। ೪೨೫. ವಿಶ್ವಸ್ಮಾತ್ ದಕ್ಷಿಣಃ ಶಕ್ತಃ, ವಿಶ್ವೇಷು ಕರ್ಮಸು ದಾಕ್ಷಿಣ್ಯಾತ್ ವಾ ವಿಶ್ವದಕ್ಷಿಣಃ॥

---

1. ಛಾಂ.೭-೨೪-೧ರಲ್ಲಿರುವ 'ಸ್ವೇ ಮಹಿಮ್ನಿ' ಎಂಬುದರ ಸೂಚನೆಯಿದು. ಹೃದಯಾಕಾಶಕ್ಕೆ ಹೇಗೆ ಹೊಂದಿಸಬೇಕೋ ತಿಳಿಯಲಿಲ್ಲ.
2. ಅಪಸ್ತಂಬಧರ್ಮ ಸೂತ್ರದಲ್ಲಿ (೧-೩-೨) ಸೂಚಿತವಾಗಿದೆ ಎಂದು ಮೈ॥
3. "ಮನ್ತ್ರವರ್ಣಾತ್" ಎಂದು ಯಾವ ವಾಕ್ಯವನ್ನು ಪರಾಮರ್ಶಿಸಿದೆಯೋ ತಿಳಿಯಲಿಲ್ಲ.

(ಭಾಷ್ಯಾರ್ಥ)

ಸೂರ್ಯನೇ ಮೊದಲಾದವರಿಗೂ ಅಂಜಿಕೆಗೆ ಕಾರಣನಾಗಿರುವದರಿಂದ **ಉಗ್ರನು.** "(ಈತನ) ಅಂಜಿಕೆಯಿಂದ ಸೂರ್ಯನು ಉದಯಿಸುತ್ತಾನೆ" ಎಂಬ ಶ್ರುತಿಯಿಂದ (ಈ ಅರ್ಥವು ಹೊರಡುತ್ತದೆ). ಈತನಲ್ಲಿ ಪ್ರಾಣಿಗಳು ಸಂವಾಸಮಾಡಿಕೊಂಡಿರುತ್ತಾರೆ; ಆದ್ದರಿಂದ (ಈತನು) **ಸಂವತ್ಸರನು.** ಜಗದ್ರೂಪದಿಂದ ಬೆಳೆದುಕೊಳ್ಳುವದರಿಂದ ಅಥವಾ ಎಲ್ಲಾ ಕರ್ಮಗಳನ್ನೂ ಕ್ಷಿಪ್ರವಾಗಿ ಮಾಡುತ್ತಿರುವದರಿಂದ **ದಕ್ಷನು.** ಹಸಿವು ನೀರಡಿಕೆಯೇ ಮುಂತಾದ ಆರು ಊರ್ಮಿ(ಅಲೆ)ಗಳಿಂದ ಎದ್ದು ಅಲೆಯುತ್ತಿರುವ ಸಂಸಾರಸಾಗರದಲ್ಲಿ ಅವಿದ್ಯೆಯೇ ಮೊದಲಾದ ಮಹಾಸಂಕಟಗಳಿಂದಲೂ ಮದ - ಮುಂತಾದ ಸಾಮಾನ್ಯದುಃಖಗಳಿಂದಲೂ ಬಳಲಿ ವಿಶ್ರಾಂತಿಯನ್ನು ಬಯಸುವವರಿಗೆ ವಿಶ್ರಾಮವನ್ನು ಎಂದರೆ ಮೋಕ್ಷವನ್ನು ಉಂಟುಮಾಡುತ್ತಾನೆ; ಆದ್ದರಿಂದ **ವಿಶ್ರಾಮನು.** ವಿಶ್ವ (ಎಲ್ಲ)ಕ್ಕಿಂತ ದಕ್ಷಿಣನು, ಎಂದರೆ ಶಕ್ತನು; ಅಥವಾ ಎಲ್ಲಾ ಕರ್ಮಗಳಲ್ಲಿಯೂ ದಕ್ಷಿಣನಾಗಿರುವದರಿಂದ (ಸಾಮರ್ಥ್ಯವುಳ್ಳವನಾಗಿರುವದರಿಂದ) **ವಿಶ್ವದಕ್ಷಿಣನು.**

**ವಿಸ್ತಾರಃ ಸ್ಥಾವರಸ್ಥಾಣುಃ ಪ್ರಮಾಣಂ ಬೀಜಮವ್ಯಯಮ್।**
**ಅರ್ಥೋಽನರ್ಥೋ ಮಹಾಕೋಶೋ ಮಹಾಭೋಗೋ ಮಹಾಧನಃ॥೪೯॥**

(ಭಾಷ್ಯ)

೪೨೬. ವಿಸ್ತೀರ್ಯನ್ತೇ ಸಮಸ್ತಾನಿ ಜಗನ್ತಿ ಅಸ್ಮಿನ್ ಇತಿ ವಿಸ್ತಾರಃ। ೪೨೭. ಸ್ಥಿತಿಶೀಲತ್ವಾತ್ ಸ್ಥಾವರಃ। ಸ್ಥಿತಿಶೀಲಾನಿ ಪೃಥಿವ್ಯಾದೀನಿ ತಿಷ್ಠನ್ತಿ ಅಸ್ಮಿನ್ ಇತಿ ಸ್ಥಾಣುಃ। ಸ್ಥಾವರಶ್ಚ ಅಸೌ ಸ್ಥಾಣುಶ್ಚ ಸ್ಥಾವರಸ್ಥಾಣುಃ। ೪೨೮. ಸಂವಿದಾತ್ಮನಾ ಪ್ರಮಾಣಮ್। ೪೨೯. ಅನ್ಯಥಾಭಾವವ್ಯತಿರೇಕೇಣ ಕಾರಣಮ್ ಇತಿ ಬೀಜಮವ್ಯಯಮ್। ಸವಿಶೇಷಣಮೇಕಂ ನಾಮ॥

(ಭಾಷ್ಯಾರ್ಥ)

ಎಲ್ಲಾ ಜಗತ್ತುಗಳೂ ಈತನಲ್ಲಿ (ವಿಸ್ತೀರ್ಯನ್ತೇ -) ಅಡಕವಾಗಿವೆ;[1] ಆದ್ದರಿಂದ **ವಿಸ್ತಾರನು.** ಇದ್ದಂತೆ ಇರುವ ಸ್ವಭಾವದವನು **ಸ್ಥಾವರನು;** ಹಾಗೇ ಇದ್ದುಕೊಂಡಿರುವ ಪೃಥಿವ್ಯಾದಿಗಳು ಈತನಲ್ಲಿ ಇದ್ದುಕೊಂಡಿವೆಯಾದ್ದರಿಂದ **ಸ್ಥಾಣುವು;** ಸ್ಥಾವರನಾದ ಸ್ಥಾಣು (ವಾದ್ದರಿಂದ) **ಸ್ಥಾವರಸ್ಥಾಣು.** ಅನುಭವರೂಪದಿಂದ (ಇರುವದರಿಂದ) **ಪ್ರಮಾಣನು.** ಮತ್ತೊಂದು ರೂಪವಾಗದೆ ಕಾರಣವಾಗಿರುವದರಿಂದ **ಬೀಜಮವ್ಯಯವು** (ನಾಶವಾಗದ ಬೀಜ); ಇದು (ಅವ್ಯಯ ಎಂಬ) ವಿಶೇಷಣಸಹಿತವಾಗಿರುವ ಒಂದೇ ನಾಮವು.

---

1. ಸ್ತೃಞ್ ಆಚ್ಛಾದನೇ - ಎಂಬ ರೂಪದಿಂದ ಇದು ಬಂದಿದೆ ಎಂದು॥ ಮೈ ವಿವೃತಿ.

(ಭಾಷ್ಯ)

೪೩೦. ಸುಖರೂಪತ್ವಾತ್ ಸರ್ವೈರರ್ಥ್ಯತೇ ಇತಿ ಅರ್ಥಃ। ೪೩೧. ನ ವಿದ್ಯತೇ ಪ್ರಯೋಜನಮ್ ಆಪ್ತಕಾಮತ್ವಾತ್ ಅಸ್ಯ ಇತಿ ಅನರ್ಥಃ। ೪೩೨. ಮಹಾನ್ತಃ ಕೋಶಾಃ ಅನ್ನಮಯಾದಯಃ, ಆಚ್ಛಾದಕಾಃ, ಅಸ್ಯ - ಇತಿ ಮಹಾಕೋಶಃ। ೪೩೩. ಮಹಾನ್ ಭೋಗಃ ಸುಖರೂಪೋಽಸ್ಯ ಇತಿ ಮಹಾಭೋಗಃ। ೪೩೪. ಮಹತ್ ಭೋಗಸಾಧನಲಕ್ಷಣಂ ಧನಮ್ ಅಸ್ಯ ಇತಿ ಮಹಾಧನಃ॥ ॥೫೯॥

(ಭಾಷ್ಯಾರ್ಥ)

ಸುಖರೂಪನಾಗಿರುವದರಿಂದ ಎಲ್ಲರಿಂದಲೂ ಬಯಸಲ್ಪಡುವನಾದ್ದರಿಂದ **ಅರ್ಥನು.** ಆದರೂ ಆಪ್ತಕಾಮನಾಗಿರುವದರಿಂದ ಈತನಿಗ (ಆಗಬೇಕಾದ) ಪ್ರಯೋಜನವು (ಯಾವದೂ) ಇಲ್ಲ; ಆದ್ದರಿಂದ **ಅನರ್ಥನು.** ಅನ್ನಮಯವೇ ಮುಂತಾದ ಮಹಾಕೋಶಗಳು ಮರೆಯಾಗಿವೆಯಾದ್ದರಿಂದ **ಮಹಾಕೋಶನು.** ಸುಖರೂಪದ (ಮಹಾ) ಹೆಚ್ಚಿನ ಭೋಗವು ಈತನಿಗೆ ಇದೆಯಾದ್ದರಿಂದ (ಈತನು) **ಮಹಾಭೋಗನು.** ಭೋಗಸಾಧನರೂಪವಾದ ಹೆಚ್ಚಾದ ಧನವು ಈತನಿಂದಲೇ; ಆದ್ದರಿಂದ **ಮಹಾಧನನು.**

**ಅನಿರ್ವಿಣ್ಣಃ ಸ್ಥವಿಷ್ಠೋಽಭೂರ್ಧರ್ಮಯೂಪೋ ಮಹಾಮಖಃ।**
**ನಕ್ಷತ್ರನೇಮಿರ್ನಕ್ಷತ್ರೀ ಕ್ಷಮಃ ಕ್ಷಾಮಃ ಸಮೀಹನಃ ॥೬೦॥**

(ಭಾಷ್ಯ)

೪೩೫. ಆಪ್ತಕಾಮತ್ವಾತ್ ನಿರ್ವೇದೋಽಸ್ಯ ನ ವಿದ್ಯತ ಇತಿ ಅನಿರ್ವಿಣ್ಣಃ। ೪೩೬. ವೈರಾಜರೂಪೇಣ ಸ್ಥಿತಃ ಸ್ಥವಿಷ್ಠಃ। "ಅಗ್ನಿರ್ಮೂರ್ಧಾ ಚಕ್ಷುಷೀ ಚನ್ದ್ರಸೂರ್ಯೌ" (ಮುಂ.೨-೧-೪) ಇತಿ ಶ್ರುತೇಃ। ೪೩೭. 'ಅಜನ್ಮಾ ಅಭೂಃ' ಅಥವಾ ಭವತೀತಿ ಭೂಃ 'ಭೂ ಸತ್ತಾಯಾಮ್' - ಇತ್ಯಸ್ಯ ಸಂಪದಾದಿತ್ವಾತ್ ಕ್ವಿಪ್। ಮಹೀ ವಾ। ೪೩೮. ಯೂಪೇ ಪಶುವತ್ ತತ್ಸಮಾರಾಧನಾತ್ಮಕಾ ಧರ್ಮಾಸ್ತತ್ರ ಬಧ್ಯನ್ತ ಇತಿ ಧರ್ಮಯೂಪಃ। ೪೩೯. ಯಸ್ಮಿನ್ ಅರ್ಪಿತಾ ಮಖಾ ಯಜ್ಞಾ ನಿರ್ವಾಣಲಕ್ಷಣಂ ಫಲಂ ಯಚ್ಛನ್ತೋ ಮಹಾನ್ತೋ ಜಾಯನ್ತೇ ಸ ಮಹಾಮಖಃ॥

(ಭಾಷ್ಯಾರ್ಥ)

ಎಲ್ಲಾ ಕಾಮಗಳನ್ನೂ ಪಡೆದುಕೊಂಡಿರುವನಾದ್ದರಿಂದ ನಿರ್ವೇದವು (ಬೇಸರವು) ಇವನಿಗೆ ಇಲ್ಲವಾಗಿ **ಅನಿರ್ವಿಣ್ಣನು.** ವಿರಾಡ್ರೂಪದಿಂದ ಇರುವಾತನು **ಸ್ಥವಿಷ್ಠನು.**

'ಅಗ್ನಿಯು ಯಾವಾತನಿಗೆ ತಲೆಯೋ, ಚಂದ್ರಸೂರ್ಯರು ಕಣ್ಣುಗಳೋ' ಎಂಬ ಶ್ರುತಿಯಿಂದ (ಈ ನಾಮಕ್ಕೆ ಹೀಗೆ ಅರ್ಥ).[1] ಜನ್ಮವಿಲ್ಲದವನಾದ್ದರಿಂದ **ಅಭೂಃ;** ಅಥವಾ 'ಭೂ ಸತ್ತಾಯಾಮ್' ಎಂಬ ಧಾತುವಿಗೆ ಸಂಪದಾದಿಗಣಕ್ಕೆ ಸೇರಿರುವದರಿಂದ ಕ್ವಿಪ್ ಪ್ರತ್ಯಯವು ಬಂದು 'ಭೂಃ' ಎಂದಾಗಿದೆ - (ಎಂದೂ ಹೇಳಬಹುದು).[2] ಅಥವಾ ಭೂಃ ಎಂದರೆ ಭೂಮಿ (ಎಂದು ಅರ್ಥ)ವೆಂದಾದರೂ ಹೇಳಬಹುದು. ಯೂಪದಲ್ಲಿ ಪಶುವಿನಂತೆ ಆರಾಧನಾರೂಪವಾದ ಧರ್ಮಗಳು ಆತ್ಮನಲ್ಲಿ ಬದ್ಧವಾಗಿರುತ್ತವೆಯಾದ್ದರಿಂದ **ಧರ್ಮಯೂಪನು.** ಯಾವಾತನಲ್ಲಿ ಸಮರ್ಪಿತವಾದ ಮಖಗಳು ಎಂದರೆ ಯಜ್ಞಗಳು ನಿರ್ವಾಣರೂಪವಾದ ಫಲವನ್ನು ಕೊಡುವವಾಗಿ ಮಹಾ(ಯಜ್ಞ)ಗಳಾಗುವವೋ ಆ ಈತನು **ಮಹಾಮಖನು.**

## (ಭಾಷ್ಯ)

೪೪೦. ನಕ್ಷತ್ರತಾರಕೈಃ ಸಾರ್ಧಂ ಚನ್ದ್ರಸೂರ್ಯಾದಯೋ ಗ್ರಹಾಃ।
ವಾಯುಪಾಶಮಯೈರ್ಬನ್ಧೈರ್ನಿಬದ್ಧಾ ಧ್ರುವಸಂಜ್ಞಿತೇ॥ (?)

ಸ ಜ್ಯೋತಿಷಾಂ ಚಕ್ರಂ ಭ್ರಾಮಯನ್ ತಾರಾಮಯಸ್ಯ ಶಿಶುಮಾರಸ್ಯ ಪುಚ್ಛದೇಶೇ ವ್ಯವಸ್ಥಿತೋ ಧ್ರುವಃ। ತಸ್ಯ ಶಿಶುಮಾರಸ್ಯ ಹೃದಯೇ ಜ್ಯೋತಿಶ್ಚಕ್ರಸ್ಯ ನೇಮಿವತ್ ಪ್ರವರ್ತಕಃ ಸ್ಥಿತೋ ವಿಷ್ಣುಃ ಇತಿ ನಕ್ಷತ್ರನೇಮಿಃ। ಶಿಶುಮಾರವರ್ಣನೇ 'ವಿಷ್ಣುರ್ಹೃದಯಮ್' ಇತಿ ಸ್ವಾಧ್ಯಾಯಬ್ರಾಹ್ಮಣೇ ಶ್ರೂಯತೇ। ೪೪೧. ಚನ್ದ್ರರೂಪೇಣ ನಕ್ಷತ್ರೀ; 'ನಕ್ಷತ್ರಾಣಾಮಹಂ ಶಶೀ' (ಗೀ. ೧೦-೨೧) ಇತಿ ಭಗವದ್ವಚನಾತ್। ೪೪೨. ಸಮಸ್ತಕಾರ್ಯೇಷು ಸಮರ್ಥಃ ಕ್ಷಮಃ। ಕ್ಷಮತೇ ಇತಿ ವಾ; 'ಕ್ಷಮಯಾ ಪೃಥಿವೀಸಮಃ' (ವಾ.ರಾ.೧-೧-೧೮) ಇತಿ ವಾಲ್ಮೀಕಿವಚನಾತ್। ೪೪೩. ಸರ್ವವಿಕಾರೇಷು ಕ್ಷಪಿತೇಷು ಸ್ವಾತ್ಮನಾ ಅವಸ್ಥಿತಃ - ಇತಿ ಕ್ಷಾಮಃ 'ಕ್ಷಾಯೋ ಮಃ' (ಪಾ. ೮-೨-೫೩) ಇತಿ ನಿಷ್ಠಾ ತಕಾರಸ್ಯ ಮಕಾರಾದೇಶಃ। ೪೪೪. ಸೃಷ್ಟ್ಯಾದ್ಯರ್ಥಂ ಸಮ್ಯಗೀಹತೇ ಇತಿ ಸಮೀಹನಃ ॥೬೦॥

## ಭಾಷ್ಯಾರ್ಥ

"ನಕ್ಷತ್ರತಾರಕಗಳೊಡನೆ ಚಂದ್ರಸೂರ್ಯರೇ ಮುಂತಾದ ಗ್ರಹಗಳು ವಾಯುಪಾಶಮಯವಾದ ಬಂಧಗಳಿಂದ ಧ್ರುವನೆಂಬ (ನಕ್ಷತ್ರದಲ್ಲಿ) ಕಟ್ಟುಬಿದ್ದಿರುತ್ತವೆ" (?) (ಎಂಬ ವಚನದಂತೆ) ಜ್ಯೋತಿಗಳ ಚಕ್ರವನ್ನು ತಿರುಗಿಸುತ್ತಾ ತಾರಾಮಯವಾದ ಶಿಶುಮಾರದ ಬಾಲದ ಕಡೆಯಲ್ಲಿ ಧ್ರುವನು ಇರುತ್ತಾನೆ. ಆ ಜ್ಯೋತಿಶ್ಚಕ್ರವಾದ ಶಿಶುಮಾರದ ಹೃದಯದಲ್ಲಿ ನೇಮಿಯಂತೆ (?) ವಿಷ್ಣುವು ಇರುತ್ತಾನೆ; ಆದ್ದರಿಂದ

1. ಈ ಶ್ರುತಿಗೆ ಸೂ.ಭಾ.ದಲ್ಲಿ ಬೇರೊಂದು ಅರ್ಥವನ್ನು ಕೊಟ್ಟಂತಿದೆ.
2. ಎಲ್ಲರಲ್ಲಿಯೂ ಅನುಸರಿಸಿಕೊಂಡುಬಂದಿರುವ ಸದ್ರೂಪನು - ಎಂದರ್ಥವೆಂದು ವಿವೃತಿ.

ಆತನು **ನಕ್ಷತ್ರನೇಮಿಯು.**[1] ಶಿಶುಮಾರದ ವರ್ಣನೆಯಲ್ಲಿ 'ವಿಷ್ಣುವು ಹೃದಯವು' ಎಂದು ಸ್ವಾಧ್ಯಾಯಬ್ರಾಹ್ಮಣದಲ್ಲಿ ಶ್ರುತಿಯು ಇದೆ. ಚಂದ್ರರೂಪದಿಂದಿರುವದರಿಂದ (ಭಗವಂತನು) **ನಕ್ಷತ್ರೀ.** (ಎನಿಸಿರುತ್ತಾನೆ). 'ನಕ್ಷತ್ರಗಳಿಗೆ ನಾನು ಶಶಿಯು' ಎಂಬ ಭಗವದ್ವಚನದಿಂದ (ಈ ಅರ್ಥವು ಹೊರಡುತ್ತದೆ). ಎಲ್ಲಾ ಕಾರ್ಯಗಳಲ್ಲಿಯೂ ಸಮರ್ಥನಾಗಿರುವದರಿಂದ **ಕ್ಷಮನು.** ಅಥವಾ ಸಹಿಸುತ್ತಾನೆ ಆದ್ದರಿಂದ (ಕ್ಷಮನು) ಎಂದಾದರೂ (ಈ ನಾಮಕ್ಕೆ ಅರ್ಥವನ್ನು ಮಾಡಬಹುದು) ಏಕೆಂದರೆ "ಕ್ಷಮೆಯಲ್ಲಿ ಪೃಥಿವಿಗೆ ಸಮನಾಗಿರುತ್ತಾನೆ" ಎಂದು ವಾಲ್ಮೀಕಿಗಳ ವಚನವಿದೆ. ಎಲ್ಲಾ ಕಾರ್ಯಗಳೂ ಕ್ಷಯವಾದರೂ ತನ್ನ ರೂಪದಿಂದ (ಹಾಗೆಯೇ) ಇರುತ್ತಾನೆ; ಆದ್ದರಿಂದ **ಕ್ಷಾಮನು.** "ಕ್ಷಾಯೋ ಮಃ" ಎಂಬ ಸೂತ್ರದಂತೆ ಭೂತಕೃದಂತದ ತಕಾರಕ್ಕೆ (ಇಲ್ಲಿ) ಮಕಾರದೇಶವು (ಬಂದಿದೆ). ಸೃಷ್ಟಿಯೇ ಮುಂತಾದವುಗಳಲ್ಲಿ ಚೆನ್ನಾಗಿ (ಈತನೇ) ವ್ಯಾಪಾರವನ್ನು ಮಾಡುತ್ತಾನಾದ್ದರಿಂದ **ಸಮೀಹನನು.**

**ಯಜ್ಞ ಇಜ್ಯೋ ಮಹೇಜ್ಯಶ್ಚ ಕ್ರತುಃ ಸತ್ರಂ ಸತಾಂ ಗತಿಃ।**
**ಸರ್ವದರ್ಶೀ ವಿಮುಕ್ತಾತ್ಮಾ ಸರ್ವಜ್ಞೋ ಜ್ಞಾನಮುತ್ತಮಮ್ ॥೬೧॥**

## (ಭಾಷ್ಯ)

೪೪೫. ಸರ್ವಯಜ್ಞಸ್ವರೂಪತ್ವಾದ್ ಯಜ್ಞಃ। ಸರ್ವೇಷಾಂ ದೇವಾನಾಂ ತುಷ್ಟಿಕಾರಕೋ ಯಜ್ಞಾಕಾರೇಣ ಪ್ರವರ್ತತೇ ಇತಿ ವಾ। 'ಯಜ್ಞೋ ವೈ ವಿಷ್ಣುಃ' (ತೈ. ಸಂ. ೧-೭-೪) ಇತಿ ಶ್ರುತೇಃ। ೪೪೬. ಯಷ್ಟವ್ಯೋಽಪ್ಯಯಮೇವೇತಿ ಇಜ್ಯಃ। 'ಯೇ ಯಜನ್ತಿ ಮಖೈಃ ಪುಣ್ಯೈಃ ದೇವತಾದೀನ್ ಪಿತೄನಪಿ। ಆತ್ಮಾನಮಾತ್ಮನಾ ನಿತ್ಯಂ ವಿಷ್ಣುಮೇವ ಯಜನ್ತಿ ತೇ' (ಹರಿ. ೩-೪೦-೨೭) ಇತಿ ಹರಿವಂಶೇ। ೪೪೭. ಸರ್ವಾಸು ದೇವತಾಸು ಯಷ್ಟವ್ಯಾಸು ಪ್ರಕರ್ಷೇಣ ಯಷ್ಟವ್ಯೋ ಮೋಕ್ಷಫಲದಾತೃತ್ವಾತ್ ಇತಿ ಮಹೇಜ್ಯಃ। ೪೪೮. ಯೂಪಸಹಿತೋ ಯಜ್ಞಃ ಕ್ರತುಃ। ೪೪೯. ಆಸತ್ಯುಪೈತಿ ಚೋದನಾಲಕ್ಷಣಂ ಸತ್ರಮ್। ಸತಸ್ತ್ರಾಯತೇ ಇತಿ ವಾ। ೪೫೦. ಸತಾಂ ಮುಮುಕ್ಷೂಣಾಂ ನಾನ್ಯಾ ಗತಿಃ ಇತಿ ಸತಾಂ ಗತಿಃ॥

## (ಭಾಷ್ಯಾರ್ಥ)

ಎಲ್ಲಾ ಯಜ್ಞರೂಪಗಳಿಂದಿರುವ ಕಾರಣದಿಂದ **ಯಜ್ಞನು.** ಎಲ್ಲಾ ದೇವತೆಗಳಿಗೂ ಯಜ್ಞದ ರೂಪದಿಂದ ತುಷ್ಟಿಯನ್ನುಂಟುಮಾಡುವವನಾಗಿ ಪ್ರವರ್ತಿಸುತ್ತಾನೆ. ಆದ್ದರಿಂದ ('ಯಜ್ಞ') ಎಂದಾದರೂ (ವ್ಯಾಖ್ಯಾನ). 'ಯಜ್ಞವೇ ವಿಷ್ಣುವಷ್ಟೆ?' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ). ಯಜ್ಞದಿಂದ ಪೂಜಿಸಲ್ಪಡುವಾತನೂ ಈತನೇ, ಆದ್ದರಿಂದ

1. ಈ ವರ್ಣನಾವಾಕ್ಯವನ್ನು ಯಥಾಕ್ಷರವಾಗಿ ಕನ್ನಡಿಸಿದೆ; ಅಭಿಪ್ರಾಯವು ಸ್ಪಷ್ಟವಾಗಿಲ್ಲ.

**ಇಜ್ಯನು.** 'ಯಾರು ಪುಣ್ಯಕರವಾದ ಯಜ್ಞಗಳಿಂದ ದೇವತೆಗಳನ್ನೂ ಪಿತೃಗಳನ್ನೂ ಪೂಜಿಸುವರೋ, ಅವರು ತಾವೇ ತಮ್ಮ ಆತ್ಮನನ್ನು ಪೂಜಿಸುತ್ತಿರುವರಾದ್ದರಿಂದ ವಿಷ್ಣುವನ್ನೇ ಪೂಜಿಸುತ್ತಿರುವರು' ಎಂದು **ಹರಿವಂಶ**ದಲ್ಲಿದೆ. ದೇವತೆಗಳೊಳಗೆಲ್ಲ ಬಲವಾಗಿ ಪೂಜಿಸಲರ್ಹನಾದವನು, (ಈತನು), ಏಕೆಂದರೆ ಮೋಕ್ಷಫಲವನ್ನು ಕೊಡುತ್ತಾನೆ; ಆದ್ದರಿಂದ **ಮಹೇಜ್ಯನು.** ಯೂಪದೊಡನಿರುವ ಯಜ್ಞವು **ಕ್ರತು.** (ಅದೂ ಈತನೇ). 'ಆಸತ್ಯುಪೈತಿ' - ಎಂಬ ವಿಧಿಯಂತೆ ಮಾಡತಕ್ಕದ್ದು **ಸತ್ರವು.**[1] (ಅದೂ ಈತನೇ); ಸತ್ತಿನಿಂದ ಕಾಪಾಡುತ್ತಾನೆ; ಆದ್ದರಿಂದ (ಸತ್ರನು) ಎಂದೂ ಆಗಬಹುದು. ಸಂತರಿಗೆ ಎಂದರೆ ಮುಮುಕ್ಷುಗಳಿಗೆ ಮತ್ತೆ ಯಾರೊಬ್ಬರೂ ಗತಿಯಿಲ್ಲ; ಆದ್ದರಿಂದ (ಈತನು) **ಸತಾಂಗತಿಯು.**

## (ಭಾಷ್ಯ)

೪೫೧. ಸರ್ವೇಷಾಂ ಪ್ರಾಣಿನಾಂ ಕೃತಾಕೃತಂ ಸರ್ವಂ ಪಶ್ಯತಿ ಸ್ವಾಭಾವಿಕೇನ ಬೋಧೇನ ಇತಿ ಸರ್ವದರ್ಶೀ। ೪೫೨. ಸ್ವಭಾವೇನ ವಿಮುಕ್ತಃ ಆತ್ಮಾ ಯಸ್ಯೇತಿ, ವಿಮುಕ್ತಶ್ಚಾಸಾವಾತ್ಮಾ ಚೇತಿ ವಾ ವಿಮುಕ್ತಾತ್ಮಾ 'ವಿಮುಕ್ತಶ್ಚ ವಿಮುಚ್ಯತೇ' (ಕಾ. ೫-೧) ಇತಿ ಶ್ರುತೇಃ। ೪೫೩. ಸರ್ವಶ್ಚ ಅಸೌ ಜ್ಞಶ್ಚೇತಿ ಸರ್ವಜ್ಞಃ। 'ಇದಂ ಸರ್ವಂ ಯದಯಮಾತ್ಮಾ' (ಬೃ. ೨-೪-೬) ಇತಿ ಶ್ರುತೇಃ। ೪೫೪. 'ಜ್ಞಾನಮುತ್ತಮಮ್' ಇತ್ಯೇತತ್ ಸವಿಶೇಷಣಮ್ ಏಕಂ ನಾಮ। ಜ್ಞಾನಂ ಪ್ರಕೃಷ್ಟಮಜನ್ಯಮನವಚ್ಛಿನ್ನಂ ಸರ್ವಸ್ಯ ಸಾಧಕತಮಮಿತಿ ಜ್ಞಾನಮುತ್ತಮಂ ಬ್ರಹ್ಮ 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) ಇತಿ ಶ್ರುತೇಃ ॥ ೬೧॥

## (ಭಾಷ್ಯಾರ್ಥ)

ಎಲ್ಲಾ ಪ್ರಾಣಿಗಳೂ ಮಾಡಿದ್ದು, ಮಾಡಿಲ್ಲದ್ದು - (ಎರಡನ್ನೂ) ಸ್ವಾಭಾವಿಕವಾದ (ತನ್ನ) ಅರಿವಿನಿಂದ ಕಾಣುತ್ತಿರುತ್ತಾನೆ; ಆದ್ದರಿಂದ **ಸರ್ವದರ್ಶಿಯು.** ಸ್ವಭಾವದಿಂದಲೇ ವಿಮುಕ್ತನಾಗಿರುವ ಆತ್ಮನು ಯಾವನಿಗೆ ಇದೆಯೋ ಆತನು **ವಿಮುಕ್ತಾತ್ಮನು.** ವಿಮುಕ್ತನಾದ ಆತ್ಮನು; ಆದ್ದರಿಂದ **ವಿಮುಕ್ತಾತ್ಮನು** ಎಂದಾದರೂ (ಅರ್ಥವನ್ನು ಮಾಡಬಹುದು) 'ವಿಮುಕ್ತನಾಗಿದ್ದು ವಿಮುಕ್ತನಾಗುತ್ತಾನೆ' ಎಂಬ ಶ್ರುತಿಯಿಂದ (ಇದು ಏರ್ಪಡುತ್ತದೆ). ಎಲ್ಲವೂ ಆಗಿರುವ ಜ್ಞನು (ಅರಿಯುವಾತನು), ಆದ್ದರಿಂದ **ಸರ್ವಜ್ಞನು.** 'ಈ ಆತ್ಮನೆಂಬುವನೇ ಇದೆಲ್ಲವೂ' ಎಂಬ ಶ್ರುತಿಯಿಂದ (ಹೀಗೆ ಅರ್ಥ). 'ಜ್ಞಾನಮುತ್ತಮಮ್' ಎಂಬುದು ವಿಶೇಷಣಸಹಿತವಾದ ಒಂದೇ ನಾಮ.

1. 'ಸಪ್ತದಶಾವರಾಃ ಸತ್ರಮಾಸೀದನ್' (ಹದಿನೇಳಕ್ಕೆ ಕಡಿಮೆಯಿಲ್ಲದೆ ಸತ್ರವನ್ನು ಮಾಡಬೇಕು), 'ಯೇ ಸತ್ರಮುಪಯನ್ತಿ' (ಯಾರು ಹೀಗೆ ಸತ್ರವನ್ನು ಮಾಡುವರೋ) (ತೈ.ಸಂ.೭-೪-೯) ಎಂಬುದು ಉದಾಹರಣೆ ಎಂದು ಮೈ॥ 'ವಿಧೃತಿ', ಆಸನ್, ಉಪೈತಿ - ಎಂಬ ವಿಧಿಯಿಂದ ಉಕ್ತವಾಗಿರುವದು ಸತ್ರವು ಎಂದು ಭಾಷ್ಯಕ್ಕೆ ಅಕ್ಷರಾರ್ಥ.

ಎಲ್ಲೆಕಟ್ಟಿಲ್ಲದ, (ಈ) ಹುಟ್ಟಿವೆ ಇರುವ ಉತ್ತಮವಾದದ್ದು ಎಲ್ಲರಿಗೂ ಸಾಧಕತಮವಾದದ್ದು ಬ್ರಹ್ಮವು; (ಆದ್ದರಿಂದ ಇದು) **ಜ್ಞಾನಮುತ್ತಮಮ್** - ಎನಿಸಿದೆ. 'ಸತ್ಯವೂ ಜ್ಞಾನವೂ ಆನಂತವೂ ಆದ ಬ್ರಹ್ಮವು' ಎಂಬ ಶ್ರುತಿಯಿಂದ (ಈ ನಾಮಕ್ಕೆ ಹೀಗೆ ಅರ್ಥ).

**ಸುವ್ರತಃ ಸುಮುಖಃ ಸೂಕ್ಷ್ಮಃ ಸುಘೋಷಃ ಸುಖದಃ ಸುಹೃತ್।**
**ಮನೋಹರೋ ಜಿತಕ್ರೋಧೋ ವೀರಬಾಹುರ್ವಿದಾರಣಃ ॥೬೨॥**

**(ಭಾಷ್ಯ)**

೪೫೫. ಶೋಭನಂ ವ್ರತಮ್ ಅಸ್ಯೇತಿ ಸುವ್ರತಃ। 'ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ। ಅಭಯಂ ಸರ್ವಭೂತೇಭ್ಯೋ ದದಾಮ್ಯೇತದ್ ವ್ರತಂ ಮಮ' (ವಾ.ರಾ.ಯುದ್ಧ.೧೮-೩೩) ಇತಿ ಶ್ರೀರಾಮಾಯಣೇ ರಾಮವಚನಮ್। ೪೫೬. ಶೋಭನಂ ಮುಖಮ್ ಅಸ್ಯೇತಿ ಸುಮುಖಃ। 'ಪ್ರಸನ್ನವದನಂ ಚಾರು ಪದ್ಮಪತ್ರಾಯತೇಕ್ಷಣಮ್' (ವಿ.ಪು. ೬-೭-೮೦) ಇತಿ ಶ್ರೀವಿಷ್ಣುಪುರಾಣೇ। ವನವಾಸಮುಖತ್ವಾದ್ವಾ ದಾಶರಥೀ ರಾಮಃ ಸುಮುಖಃ॥

ಸ ಪಿತುರ್ವಚನಂ ಶ್ರೀಮಾನಭಿಷೇಕಾತ್ ಪರಂ ಪ್ರಿಯಮ್।
ಮನಸಾ ಪೂರ್ವಮಾಸಾದ್ಯ ವಾಚಾ ಪ್ರತಿಗೃಹೀತವಾನ್॥
(ಸುಂದರ, ೩೩-೨೪, ೨೫)

ಇಮಾನಿ ತು ಮಹಾರಣ್ಯೇ ವಿಹೃತ್ಯ ನವ ಪಞ್ಚ ಚ।
ವರ್ಷಾಣಿ ಪರಮಪ್ರೀತಃ ಸ್ಥಾಸ್ಯಾಮಿ ವಚನೇ ತವ॥ (ಅಯೋ.೧೯-೧೭, ೨೪)

ನ ವನಂ ಗನ್ತುಕಾಮಸ್ಯ ತ್ಯಜತಶ್ಚ ವಸುನ್ಧರಾಮ್।
ಸರ್ವಲೋಕಾತಿಗಸ್ಯೇವ ಮನೋ ರಾಮಸ್ಯ ವಿವ್ಯಥೇ॥ (ಅಯೋ.೧೯-೩೩)

ಇತಿ ರಾಮಾಯಣೇ । ಸರ್ವವಿದ್ಯೋಪದೇಶೇನ ವಾ ಸುಮುಖಃ। 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ' (ಶ್ವೇ.೬-೧೮) ಇತ್ಯಾದಿಶ್ರುತೇಃ। ೪೫೭. ಶಬ್ದಾದಿಸ್ಥೂಲಕಾರಣರಹಿತತ್ವಾತ್ - ಶಬ್ದಾದಯೋ ಹಿ ಆಕಾಶಾದೀನಾಮ್ ಉತ್ತರೋತ್ತರಸ್ಥೂಲಕಾರಣಾನಿ, ತದಭಾವಾತ್ ಸೂಕ್ಷ್ಮಃ। 'ಸರ್ವಗತಂ ಸುಸೂಕ್ಷ್ಮಮ್' (ಮುಂ.೧-೧-೬) ಇತಿ ಶ್ರುತೇಃ। ೪೫೮. ಶೋಭನೋ ಘೋಷೋ ವೇದಾತ್ಮಕೋ ಅಸ್ಯೇತಿ, ಮೇಘಗಮ್ಭೀರಘೋಷತ್ವಾದ್ವಾ ಸುಘೋಷಃ। ೪೫೯. ಸದ್ವೃತ್ತಾನಾಂ ಸುಖಂ ದದಾತಿ ಅಸದ್ವೃತ್ತಾನಾಂ ಸುಖಂ ದ್ಯತಿ ಖಣ್ಡಯತೀತಿ ವಾ ಸುಖದಃ। ೪೬೦. ಪ್ರತ್ಯುಪಕಾರನಿರಪೇಕ್ಷತಯೋಪಕಾರಿತ್ವಾತ್ ಸುಹೃತ್॥

(ಭಾಷ್ಯಾರ್ಥ)

ಒಳ್ಳೆಯ ವ್ರತವು ಈತನದು, ಆದ್ದರಿಂದ **ಸುವ್ರತನು**. 'ಒಂದೇ ಒಂದು ಸಲ ಶರಣುಬಂದರೂ ನಿನ್ನವನೇ (ನಾನು) ಆಗಿರುತ್ತೇನೆ - ಎಂದು ಬೇಡಿಕೊಂಡರೆ ಎಲ್ಲ ಪ್ರಾಣಿಗಳಿಂದಾಗಬಹುದಾದ (ಅಂಜಿಕೆಯಿಲ್ಲದ) ಅಭಯವನ್ನು ಕೊಡುವೆನು; ಇದು ನನ್ನ ವ್ರತವು' ಎಂದು **ಶ್ರೀರಾಮಾಯಣ**ದಲ್ಲಿ ರಾಮವಚನವಿದೆ. ಉತ್ತಮವಾದ ಮುಖವು ಈತನದು; ಆದ್ದರಿಂದ (ಈತನು) **ಸುಮುಖನು**. 'ಪ್ರಸನ್ನವದನನು, ಸುಂದರವಾದ ಕಮಲದ ಎಸಳಿನಂತೆ ಅಗಲವಾದ ಕಣ್ಣುಳ್ಳವನು - (ಎಂದು ಚಿಂತಿಸಬೇಕು) ಎಂದು **ವಿಷ್ಣುಪುರಾಣ**ದಲ್ಲಿದೆ. ವನವಾಸಮುಖನಾದ್ದರಿಂದ, **ಸುಮುಖ**ನಾದ ದಾಶರಥಿರಾಮನು ಸುಮುಖನು ಎಂದಾದರೂ ವ್ಯಾಖ್ಯಾನ. 'ಆ ಶ್ರೀಮಂತನಾದ (ರಾಮನು) ಅಭಿಷೇಕದ (ಮಾತಿಗಿಂತಲೂ) ಹೆಚ್ಚು ಪ್ರಿಯವಾಗಿದ್ದ ತಂದೆಯ ವಚನವನ್ನು ಕೇಳಿ, ಮೊದಲು ಮನಸ್ಸಿಗೆ ಬಂದದ್ದನ್ನೇ ಬಳಿಕ ಮಾತಿನಿಂದ ಸ್ವೀಕರಿಸಿದನು. 'ಈ ಹದಿನಾಲ್ಕು ವರ್ಷಗಳವರೆಗೆ ಮಹಾರಣ್ಯದಲ್ಲಿ ಪರಮಪ್ರೀತಿಯಿಂದ ನಿನ್ನ ಮಾತಿನಂತೆ ವಿಹರಿಸುತ್ತಿರುವೆನು' 'ಕಾಡಿಗೆ ಹೋಗುವದಕ್ಕೆ ಇಚ್ಛಿಸುತ್ತಾ ಭೂಮಿಯನ್ನು ಬಿಟ್ಟುಬಿಟ್ಟ ರಾಮನ ಮನಸ್ಸು ಸರ್ವಲೋಕಗಳನ್ನೂ ಅತಿಕ್ರಮಿಸಿದವನ ಮನಸ್ಸಿನಂತೆಯೇ (ಸ್ವಲ್ಪವೂ) ವ್ಯಥೆಪಡಲಿಲ್ಲ' ಎಂದು ರಾಮಾಯಣದಲ್ಲಿದೆ.[1] ಅಥವಾ ಸರ್ವವಿದ್ಯೆಗಳನ್ನೂ ಉಪದೇಶಿಸುವನಾದ್ದರಿಂದ **ಸುಮುಖನು** - ಎಂದಾದರೂ (ವ್ಯಾಖ್ಯಾನ). "ಯಾವಾತನು ಬ್ರಹ್ಮನನ್ನು ಮೊದಲು ಸೃಷ್ಟಿಸುವನೋ ಯಾವಾತನು ಅವನಿಗೆ ವೇದಗಳನ್ನು ಕಳುಹಿಸಿಕೊಡುವನೋ" ಎಂದು ಮುಂತಾಗಿರುವ ಶ್ರುತಿಯಿಂದ (ಈ ಅರ್ಥ). ಸ್ಥೂಲತ್ವಕ್ಕೆ ಕಾರಣವಾದ ಶಬ್ದವೇ ಮುಂತಾದ ಗುಣಗಳಿಲ್ಲದವನಾದ್ದರಿಂದ - ಶಬ್ದಾದಿ (ಗುಣ)ಗಳೇ ಅಲ್ಲವೆ, ಆಕಾಶವೇ ಮುಂತಾದವುಗಳಲ್ಲಿ ಮುಂದುಮುಂದಿನ (ಭೂತದ್ದು ಹಿಂದುಹಿಂದಿನದಕ್ಕಿಂತ) ಸ್ಥೂಲವಾಗಿರುವದಕ್ಕೆ ಕಾರಣ? ಅದಿಲ್ಲದೆ ಇರುವದರಿಂದ (ಈತನು) **ಸೂಕ್ಷ್ಮನು**. 'ಸರ್ವಗತವೂ ಅತ್ಯಂತಸೂಕ್ಷ್ಮವೂ ಆಗಿರತಕ್ಕದ್ದು' ಎಂಬ ಶ್ರುತಿಯಿಂದ (ಈ ಅಭಿಪ್ರಾಯವು ಹೊರಡುತ್ತದೆ). ಉತ್ತಮವಾದ ವೇದರೂಪವಾದ ಘೋಷವು ಈತನು; ಆದ್ದರಿಂದ **ಸುಘೋಷನು**; ಅಥವಾ ಮೋಡದಂತೆ ಗಂಭೀರವಾದ ಘೋಷವು ಈತನದು; ಆದ್ದರಿಂದ **ಸುಘೋಷನು**. ಒಳ್ಳೆಯ ನಡತೆಯುಳ್ಳವರಿಗೆ ಸುಖವನ್ನು ಕೊಡುವನಾದ್ದರಿಂದ ಅಥವಾ ಕೆಟ್ಟನಡತೆಯವರ ಸುಖವನ್ನು (ದ್ಯತಿ) ಖಂಡಿಸುತ್ತಾನಾದ್ದರಿಂದ **ಸುಖದನು**. ಪ್ರತ್ಯುಪಕಾರವನ್ನು ಬಯಸದೆ ಉಪಾಕಾರವನ್ನು ಮಾಡುವನಾದ್ದರಿಂದ **ಸುಹೃತ್** (ಎನಿಸುವನು).

(ಭಾಷ್ಯ)

೪೬೧. ನಿರತಿಶಯಾನನ್ದರೂಪತ್ವಾತ್ ಮನೋ ಹರತೀತಿ ಮನೋಹರಃ। 'ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ' (ಛಾಂ. ೭-೨೩-೧) ಇತಿ ಶ್ರುತೇಃ।

1. ಸುಮುಖಃ-ಎಂಬ ಶಬ್ದದಲ್ಲಿ ಈ ಪ್ರಸನ್ನವಾದ ಮನಸ್ಸಿನ ಸೂಚನೆ ಇದೆ - ಎಂದು ಭಾವಿಸಬಹುದು.

೪೬೨. ಜಿತಃ ಕ್ರೋಧಃ ಯೇನ ಸ ಜಿತಕ್ರೋಧಃ। ವೇದಮರ್ಯಾದಾಸ್ಥಾಪನಾರ್ಥಂ ಸುರಾರೀನ್ ಹನ್ತಿ ನ ತು ಕ್ರೋಧವಶಾದಿತಿ। ೪೬೩ ತ್ರಿದಶಶತ್ರೂನ್ ನಿಘ್ನನ್, ವೇದಮರ್ಯಾದಾಂ ಸ್ಥಾಪಯನ್ ವಿಕ್ರಮಶಾಲೀ ಬಾಹುರಸ್ಯೇತಿ ವೀರಬಾಹುಃ। ೪೬೪. ಅಧಾರ್ಮಿಕಾನ್ ವಿದಾರಯತೀತಿ ವಿದಾರಣಃ ॥೬೨॥

### (ಭಾಷ್ಯಾರ್ಥ)

ಮಿಗಿಲಿಲ್ಲದ ಆನಂದದ ರೂಪನಾಗಿರುವದರಿಂದ (ಜನರ) ಮನಸ್ಸನ್ನು ಅಪಹರಿಸುತ್ತಾನೆ; ಆದ್ದರಿಂದ ಮನೋಹರನು. 'ಯಾವದು ಭೂಮವೋ ಅದು ಸುಖವು. ಅಲ್ಪದಲ್ಲಿ ಸುಖವಿಲ್ಲ' ಎಂದು ಶ್ರುತಿಯಿದೆ. ಯಾವನಿಂದ ಕ್ರೋಧವು ಜಿತವಾಗಿದೆಯೋ ಅವನು **ಜಿತಕ್ರೋಧನು**, ವೇದದ ಎಲ್ಲೆಕಟ್ಟನ್ನು ಸ್ಥಾಪಿಸುವದಕ್ಕಾಗಿ ದೇವತೆಗಳ ಶತ್ರುಗಳನ್ನು ಕೊಲ್ಲುತ್ತಾನೆಯೇ ಹೊರತು ಕ್ರೋಧಕ್ಕೆ ವಶನಾಗಿ (ಕೊಲ್ಲುವ)ದಿಲ್ಲ; ಆದ್ದರಿಂದ **(ಜಿತಕ್ರೋಧನು)**. ದೇವತೆಗಳ ಶತ್ರುಗಳನ್ನು ಕೊಂದು ವೇದದ ಎಲ್ಲೆಕಟ್ಟನ್ನು ಸ್ಥಾಪಿಸುವನಾದ್ದರಿಂದ ಪರಾಕ್ರಮದಿಂದ ಕೂಡಿದ ತೋಳುಗಳುಳ್ಳವನಾದ್ದರಿಂದ **ವೀರಬಾಹುವು**. ಅಧರ್ಮನಿರತರನ್ನು ಸೀಳಿಹಾಕುವದರಿಂದ **ವಿದಾರಣನು.**

**ಸ್ವಾಪನಃ ಸ್ವವಶೋ ವ್ಯಾಪೀ ನೈಕಾತ್ಮಾ ನೈಕಕರ್ಮಕೃತ್।**
**ವತ್ಸರೋ ವತ್ಸಲೋ ವತ್ಸೀ ರತ್ನಗರ್ಭೋ ಧನೇಶ್ವರಃ ॥೬೩॥**

### (ಭಾಷ್ಯ)

೪೬೫. ಪ್ರಾಣಿನಃ ಸ್ವಾಪಯನ್ ಆತ್ಮಸಂಬೋಧವಿಧುರಾನ್ ಮಾಯಯಾ ಕುರ್ವನ್ ಸ್ವಾಪನಃ। ೪೬೬. ಸ್ವತನ್ತ್ರಃ ಸ್ವವಶಃ ಜಗದುತ್ಪತ್ತಿಸ್ಥಿತಿಲಯಹೇತುತ್ವಾತ್। ೪೬೭. ಆಕಾಶವತ್ ಸರ್ವಗತತ್ವಾತ್ ವ್ಯಾಪೀ। 'ಆಕಾಶವತ್ ಸರ್ವಗತಶ್ಚ ನಿತ್ಯಃ'(?) ಇತಿ ಶ್ರುತೇಃ। ಕಾರಣತ್ವೇನ ಸರ್ವಕಾರ್ಯಾಣಾಂ ವ್ಯಾಪನಾದ್ವಾ ವ್ಯಾಪೀ। ೪೬೮. ಜಗದುತ್ಪತ್ತ್ಯಾದಿಷು ಆವಿರ್ಭೂತನಿಮಿತ್ತಶಕ್ತಿಭಿಃ ವಿಭೂತಿಭಿರನೇಕಧಾ ತಿಷ್ಠನ್, ನೈಕಾತ್ಮಾ। ೪೬೯. ಜಗದುತ್ಪತ್ತಿಸಂಪತ್ತಿವಿಪತ್ತಿಪ್ರಭೃತಿಕರ್ಮಾಣಿ ಕರೋತೀತಿ ನೈಕಕರ್ಮಕೃತ್॥

### (ಭಾಷ್ಯಾರ್ಥ)

ಪ್ರಾಣಿಗಳನ್ನು ನಿದ್ರೆಗೈಸುವವನು, (ತನ್ನ) ಮಾಯೆಯಿಂದ ಆತ್ಮಜ್ಞಾನವಿಲ್ಲದವರನ್ನಾಗಿ ಮಾಡುವವನು. (ಆದ್ದರಿಂದ) **ಸ್ವಾಪನನು**. ಸ್ವತಂತ್ರನಾಗಿರುವದರಿಂದ **ಸ್ವವಶನು**. ಏಕೆಂದರೆ (ಈತನು) ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯ - ಇವುಗಳಿಗೆ ಕಾರಣನಾಗಿರುತ್ತಾನೆ.

ಆಕಾಶದಂತೆ ಸರ್ವಗತನಾಗಿರುವದರಿಂದ **ವ್ಯಾಪಿಯು**. 'ಆಕಾಶದಂತೆ ಸರ್ವಗತನೂ ನಿತ್ಯನೂ (ಆಗಿರುತ್ತಾನೆ)' (?) ಎಂಬ ಶ್ರುತಿಯ (ಆಧಾರದಿಂದ) ಈ ಅರ್ಥವನ್ನು ಮಾಡಬೇಕು. ಅಥವಾ ಕಾರಣವಾಗಿ ಕಾರ್ಯಗಳೆಲ್ಲವನ್ನೂ ವ್ಯಾಪಿಸಿಕೊಂಡಿರುವದರಿಂದ **ವ್ಯಾಪಿಯು**. ಜಗತ್ತಿನ ಉತ್ಪತ್ತಿಯೇ ಮುಂತಾದವುಗಳಿಂದ ಹೊರತೋರಿದ ನಿಮಿತ್ತಶಕ್ತಿ (ವಿಭೂತಿ)ಗಳಿಂದ ಬಹುವಿಧನಾಗಿರುವದರಿಂದ **ನೈಕಾತ್ಮನು**. ಜಗತ್ತಿನ ಉತ್ಪತ್ತಿ, ಸಂಪತ್ತಿ,[1] ವಿಪತ್ತಿ - ಮುಂತಾದ ಕರ್ಮಗಳನ್ನು ಮಾಡುತ್ತಾನಾದ್ದರಿಂದ **ನೈಕಕರ್ಮಕೃತ್** (ಎನಿಸುವನು).

## (ಭಾಷ್ಯ)

೪೭೦. ವಸತ್ಯಸ್ಮಿನ್ ಅಖಿಲಮ್ ಇತಿ ವತ್ಸರಃ। ೪೭೧. ಭಕ್ತಸ್ನೇಹಿತ್ವಾತ್ ವತ್ಸಲಃ। 'ವತ್ಸಾಂಸಾಭ್ಯಾಂ ಕಾಮಬಲೇ' (ಪಾ.೫-೨-೯೮) ಇತಿ ಲಚ್ ಪ್ರತ್ಯಯಃ। ೪೭೨. ವತ್ಸಾನಾಂ ಪಾಲನಾತ್ ವತ್ಸೀ। ಜಗತ್ಪಿತುಸ್ತಸ್ಯ ವತ್ಸಭೂತಾಃ ಪ್ರಜಾ ಇತಿ ವಾ ವತ್ಸೀ। ೪೭೩. ರತ್ನಾನಿ ಗರ್ಭಭೂತಾನಿ ಅಸ್ಯ ಇತಿ ಸಮುದ್ರೋ ರತ್ನಗರ್ಭಃ। ೪೭೪. ಧನಾನಾಮೀಶ್ವರಃ ಧನೇಶ್ವರಃ ॥೬೩॥

## (ಭಾಷ್ಯಾರ್ಥ)

ಈತನಲ್ಲಿ ಎಲ್ಲವೂ ವಾಸಮಾಡಿಕೊಂಡಿರುತ್ತದೆ; ಆದ್ದರಿಂದ **ವತ್ಸರನು**. ಭಕ್ತರಲ್ಲಿ ಸ್ನೇಹವುಳ್ಳಾತನಾದ್ದರಿಂದ **ವತ್ಸಲನು**. 'ವತ್ಸಾಂಸಾಭ್ಯಾಂ ಕಾಮಬಲೇ' ಎಂಬ ಸೂತ್ರದಿಂದ ಲಚ್ ಪ್ರತ್ಯಯವು (ಬಂದಿದೆ). ಕರುಗಳನ್ನು ಕಾಪಾಡಿದವನು, ಆದ್ದರಿಂದ **ವತ್ಸೀ** - (ಎನಿಸುವನು) **ಅಥವಾ** ಜಗತ್ತಿಗೆಲ್ಲ ತಂದೆಯಾದ ಆತನಿಗೆ ಪ್ರಜೆಗಳು ಮಕ್ಕಳಿದ್ದಂತೆ; ಆದ್ದರಿಂದ **ವತ್ಸೀ** ಎಂದೂ (ಅರ್ಥವನ್ನು ಹೇಳಬಹುದು). ಇದಕ್ಕೆ ರತ್ನಗಳು ಗರ್ಭವಾಗಿರುತ್ತವೆ; ಆದ್ದರಿಂದ **ರತ್ನಗರ್ಭ**ವಾಗಿರುವದು ಸಮುದ್ರವು.[2] ಧನಗಳಿಗೆ ಒಡೆಯನು, ಆದ್ದರಿಂದ **ಧನೇಶ್ವರನು**.

**ಧರ್ಮಗುಪ್ ಧರ್ಮಕೃದ್ಧರ್ಮೀ ಸದಸತ್ ಕ್ಷರಮಕ್ಷರಮ್।**
**ಅವಿಜ್ಞಾತಾ ಸಹಸ್ರಾಂಶುರ್ವಿಧಾತಾ ಕೃತಲಕ್ಷಣಃ ॥೬೪॥**

## (ಭಾಷ್ಯ)

೪೭೫. ಧರ್ಮಂ ಗೋಪಾಯತೀತಿ ಧರ್ಮಗುಪ್। 'ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ' (ಗೀ.೪-೮) ಇತಿ ಭಗವದ್ವಚನಾತ್ ೪೭೬. ಧರ್ಮಾಧರ್ಮವಿಹೀನೋಽಪಿ ಧರ್ಮಮರ್ಯಾದಾಸ್ಥಾಪನಾರ್ಥಂ ಧರ್ಮಮೇವ

1. ಸೃಷ್ಟಿ, ಸ್ಥಿತಿ, ಪ್ರಲಯ - ಮುಂತಾದ
2. ಸಮುದ್ರವೂ ವಿಷ್ಣುವಿನ ವಿಭೂತಿಯಾದ್ದರಿಂದ ಹೀಗೆಂದಿದೆ.

ಕರೋತೀತಿ ಧರ್ಮಕೃತ್। ೪೭೭. ಧರ್ಮಾನ್ ಧಾರಯತೀತಿ ಧರ್ಮೀ। ೪೭೮. ಅವಿತಥಂ ಪರಂ ಬ್ರಹ್ಮ ಸತ್। 'ಸದೇವ ಸೋಮ್ಯೇದಮ್' (ಛಾಂ. ೬-೨-೧) ಇತಿ ಶ್ರುತೇಃ। ೪೭೯. ಅಪರಂ ಬ್ರಹ್ಮ ಅಸತ್। 'ವಾಚಾರಮ್ಭಣಂ ವಿಕಾರೋ ನಾಮಧೇಯಮ್' (ಛಾಂ. ೬-೧-೪) ಇತಿ ಶ್ರುತೇಃ। ೪೮೦. ಸರ್ವಾಣಿ ಭೂತಾನಿ ಕ್ಷರಮ್। ೪೮೧. ಕೂಟಸ್ಥಃ ಅಕ್ಷರಮ್। 'ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ' (ಗೀ. ೧೫-೧೬) ಇತಿ ಭಗವದ್ವಚನಾತ್''

## (ಭಾಷ್ಯಾರ್ಥ)

ಧರ್ಮಗಳನ್ನು (ಗೋಪಾಯತಿ) ರಕ್ಷಿಸುತ್ತಾನೆ; ಆದ್ದರಿಂದ **ಧರ್ಮಗುಪ್.** 'ಧರ್ಮವನ್ನು ಕಾಪಾಡುವದಕ್ಕೆ ಯುಗಯುಗಲ್ಲಿಯೂ ಹುಟ್ಟುವೆನು' ಎಂಬ ಭಗವದ್ವಚನದಿಂದ (ಈ ಅರ್ಥ). ಧರ್ಮಾಧರ್ಮಗಳೆರಡೂ ಇಲ್ಲದವನಾದರೂ ಧರ್ಮದ ಎಲ್ಲೆಕಟ್ಟನ್ನು ಸ್ಥಾಪಿಸುವದಕ್ಕಾಗಿ ಧರ್ಮವನ್ನೇ ಮಾಡುತ್ತಿರುತ್ತಾನೆ; ಆದ್ದರಿಂದ **ಧರ್ಮಕೃತ್**. ಧರ್ಮಗಳನ್ನು ಧಾರಣೆಮಾಡುತ್ತಾನೆ (?) ಆದ್ದರಿಂದ **ಧರ್ಮಿಯು.** ಸತ್ಯವಾದ ಪರಬ್ರಹ್ಮವೇ **ಸತ್** (ಎನಿಸುವದು). 'ಅಪ್ಪ, ಇದು ಸತ್ತೇ' ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). ಅಪರ (ಸವಿಶೇಷ) ಬ್ರಹ್ಮವೇ **ಅಸತ್** (?) 'ವಿಕಾರ (ಕಾರ್ಯ) ವೆಂಬುದು ಬರಿಯ ಮಾತೇ; ಹೆಸರು ಮಾತ್ರವೇ' ಎಂದು ಶ್ರುತಿಯಿದೆ. ಎಲ್ಲಾ ಭೂತಗಳೂ **ಕ್ಷರವು**, ಕೂಟಸ್ಥವಾದದ್ದು **ಅಕ್ಷರವು**. ಕ್ಷರ (ಪುರುಷನೆಂದರೆ) ಸರ್ವಭೂತಗಳು; ಅಕ್ಷರವೆಂದರೆ ಕೂಟಸ್ಥವಾದ (ಅವ್ಯಾಕೃತವು) ಎಂಬ ಭಗವದ್ವಚನದಿಂದ (ಈ ಅರ್ಥ).

## (ಭಾಷ್ಯ)

೪೮೨. ಆತ್ಮನಿ ಕರ್ತೃತ್ವಾದಿವಿಕಲ್ಪವಿಜ್ಞಾನಂ ಕಲ್ಪಯತೀತಿ ತದ್ವಾಸನಾವಗುಣ್ಠಿತೋ ಜೀವೋ ವಿಜ್ಞಾತಾ, ತದ್ವಿಲಕ್ಷಣೋ ವಿಷ್ಣುಃ ಅವಿಜ್ಞಾತಾ। ೪೮೩. ಆದಿತ್ಯಾದಿಗತಾ ಅಂಶವೋಽಸ್ಯ - ಇತ್ಯಯಮೇವ ಮುಖ್ಯಃ ಸಹಸ್ರಾಂಶುಃ। 'ಯೇನ ಸೂರ್ಯಸ್ತಪತಿ ತೇಜಸೇದ್ಧಃ' (ತೈ.ಬ್ರಾ.೩-೧೨-೮) ಇತಿ ಶ್ರುತೇಃ। 'ಯದಾದಿತ್ಯಗತಂ ತೇಜಃ' (ಗೀ.೧೫-೧೨) ಇತಿ ಸ್ಮೃತೇಶ್ಚ। ೪೮೪. ವಿಶೇಷೇಣ ಶೇಷದಿಗ್ಗಜಭೂಧರಾನ್ ಸರ್ವಭೂತಾನಾಂ ಧಾತ್ರ್ನ್ ದಧಾತೀತಿ ವಿಧಾತಾ। ೪೮೫. ನಿತ್ಯನಿಷ್ಪನ್ನ - ಚೈತನ್ಯರೂಪತ್ವಾತ್ ಕೃತಲಕ್ಷಣಃ। ಕೃತಾನಿ ಲಕ್ಷಣಾನಿ ಶಾಸ್ತ್ರಾಣಿ ಅನೇನ ಇತಿ ವಾ। 'ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್' (ಶ್ಲೋ. ೧೩೯) ಇತ್ಯತ್ರ ಏವಂ ವಕ್ಷ್ಯತಿ। ಸಜಾತೀಯವಿಜಾತೀಯವ್ಯವಚ್ಛೇದಕಂ ಲಕ್ಷಣಂ ಸರ್ವಭಾವಾನಾಂ ಕೃತಮ್ ಅನೇನ ಇತಿ ವಾ। ಆತ್ಮನಃ ಶ್ರೀವತ್ಸಲಕ್ಷಣಂ ವಕ್ಷಸಿ ತೇನ ಕೃತಮ್ ಇತಿ ವಾ ಕೃತಲಕ್ಷಣಃ। ॥೬೪॥

(ಭಾಷ್ಯಾರ್ಥ).

ತನ್ನಲ್ಲಿ ಕರ್ತೃತ್ವವೇ ಮುಂತಾದ ವಿಕಲ್ಪಜ್ಞಾನಗಳು ಕಲ್ಪಿತವಾಗಿರುವದರಿಂದ ಆ ವಾಸನೆಯಿಂದ ಮರೆಯಾಗಿರುವ ಜೀವನು ವಿಜ್ಞಾತೃವೆನಿಸಿರುವನು. ಅವನಿಗಿಂತ ವಿಲಕ್ಷಣನಾಗಿರುವ ವಿಷ್ಣುವು **ಅವಿಜ್ಞಾತನು.** ಆದಿತ್ಯನಲ್ಲಿರುವ ಅಂಶ (ಕಿರಣ)ಗಳು ಈತನವೇ, ಆದ್ದರಿಂದ ಈತನೇ ಮುಖ್ಯಾರ್ಥದಲ್ಲಿ **ಸಹಸ್ರಾಂಶುವು.** 'ಯಾವ ತೇಜಸ್ಸಿನಿಂದ ಹೊತ್ತಿಕೊಂಡು ಸೂರ್ಯನು ತಪಿಸುತ್ತಾನೋ' ಎಂಬ ಶ್ರುತಿಯಿಂದಲೂ 'ಆದಿತ್ಯನಲ್ಲಿರುವ ತೇಜಸ್ಸಿದೆಯಲ್ಲ (ಅದು ನನ್ನದೇ ಎಂದು ತಿಳಿ) ಎಂಬ ಸ್ಮೃತಿಯಿಂದಲೂ (ಇದು ಏರ್ಪಡುತ್ತದೆ). ವಿಶೇಷವಾಗಿ ಶೇಷ, ದಿಗ್ಗಜಗಳು, ಪರ್ವತಗಳು - ಎಂಬ ಸರ್ವಭೂತಗಳನ್ನೂ (ಧರಿಸಿರುವ) ಧಾತೃಗಳನ್ನೂ ಧರಿಸಿರುತ್ತಾನೆ; ಆದ್ದರಿಂದ **ವಿಧಾತೃವು.** ನಿತ್ಯಸಿದ್ಧವಾಗಿರುವ ಚೈತನ್ಯರೂಪವುಳ್ಳಾತನಾದ್ದರಿಂದ **ಕೃತಲಕ್ಷಣನು;** ಅಥವಾ ಲಕ್ಷಣಗಳು ಎಂದರೆ ಶಾಸ್ತ್ರಗಳು ಈತನಿಂದ ಮಾಡಲ್ಪಟ್ಟಿರುತ್ತವೆ ಎಂಬ ಕಾರಣದಿಂದ (ಈತನು) **ಕೃತಲಕ್ಷಣನು.** 'ವೇದಗಳು, ಶಾಸ್ತ್ರಗಳು, ವಿಜ್ಞಾನವು ಇದೆಲ್ಲವೂ ಜನಾರ್ದನನಿಂದಲೇ (ಆಗಿರುತ್ತವೆ), ಎಂದು (ಈ ಸ್ತೋತ್ರ)ದಲ್ಲಿಯೇ (ಮುಂದೆ) ಹೇಳುವರು. ತನ್ನ ಜಾತಿಯ, ಮತ್ತು ಬೇರೆ ಜಾತಿಯ (ವಸ್ತುವನ್ನು) ಬೇರ್ಪಡಿಸಿ (ತಿಳಿಯಿಸುವ) ವಸ್ತುಗಳ ಲಕ್ಷಣವು ಈತನಿಂದಲೇ ಮಾಡಲ್ಪಟ್ಟಿರುತ್ತದೆ ಎಂಬ ಕಾರಣದಿಂದ **ಕೃತಲಕ್ಷಣನು** - ಎಂದಾದರೂ ಅರ್ಥವನ್ನು ಹೇಳಬಹುದು, ಅಥವಾ 'ಶ್ರೀವತ್ಸ' ಲಕ್ಷಣವು ಆತನ ಎದೆಯಲ್ಲಿ ಆತನಿಂದ ಮಾಡಲ್ಪಟ್ಟಿದೆಯಾದ್ದರಿಂದ **ಕೃತಲಕ್ಷಣನು.**

**ಗಭಸ್ತಿನೇಮಿಃ ಸತ್ತ್ವಸ್ಥಃ ಸಿಂಹೋ ಭೂತಮಹೇಶ್ವರಃ।**
**ಆದಿದೇವೋ ಮಹಾದೇವೋ ದೇವೇಶೋ ದೇವಭೃದ್ಗುರುಃ ॥೬೫॥**

(ಭಾಷ್ಯ)

೪೮೬. ಗಭಸ್ತಿಚಕ್ರಸ್ಯ ಮಧ್ಯೇ ಸೂರ್ಯಾತ್ಮನಾ ಸ್ಥಿತಃ - ಇತಿ ಗಭಸ್ತಿನೇಮಿಃ। ೪೮೭. ಸತ್ತ್ವಂ ಗುಣಂ ಪ್ರಕಾಶಕಂ ಪ್ರಾಧಾನ್ಯೇನಾಧಿತಿಷ್ಠತಿ ಇತಿ, ಸರ್ವಪ್ರಾಣಿಷು ತಿಷ್ಠತೀತಿ ವಾ ಸತ್ತ್ವಸ್ಥಃ। ೪೮೮. ವಿಕ್ರಮಶಾಲಿತ್ವಾತ್ ಸಿಂಹವತ್ ಸಿಂಹಃ। ನೃಶಬ್ದಲೋಪೇನ ಸತ್ಯಭಾಮಾ ಭಾಮಾ ಇತಿವತ್ ವಾ ಸಿಂಹಃ। ೪೮೯. ಭೂತಾನಾಂ ಮಹಾನ್ ಈಶ್ವರಃ, ಭೂತೇನ ಸತ್ಯೇನ ಸ ಏವ ಪರಮೋ ಮಹಾನೀಶ್ವರ ಇತಿ ವಾ ಭೂತಮಹೇಶ್ವರಃ॥

(ಭಾಷ್ಯಾರ್ಥ)

ಗಭಸ್ತಿ (ಕಿರಣ) ಗಳ ಚಕ್ರದ ನಡುವೆ ಸೂರ್ಯರೂಪದಿಂದ ಇರುವನಾದ್ದರಿಂದ **ಗಭಸ್ತಿನೇಮಿಯು.** ಪ್ರಕಾಶಕವಾದ ಸತ್ತ್ವಗುಣಕ್ಕೆ ಅಧಿಷ್ಠಾತೃವಾಗಿರುತ್ತಾನೆ. ಆದ್ದರಿಂದ; ಅಥವಾ ಎಲ್ಲಾ (ಸತ್ತ್ವ) ಪ್ರಾಣಿಗಳಲ್ಲಿಯೂ ಇರುತ್ತಾನೆ, ಆದ್ದರಿಂದ **ಸತ್ತ್ವಸ್ಥನು.**

ವಿಕ್ರಮಶಾಲಿಯಾಗಿರುವದರಿಂದ ಸಿಂಹನಂತೆ ಇರುವವನು, ಆದ್ದರಿಂದ **ಸಿಂಹನು.** ಅಥವಾ (ಇಲ್ಲಿ) ನೃಶಬ್ದವು ಲೋಪವಾಗಿ - ಸತ್ಯಭಾಮೆಯನ್ನು ಭಾಮೆ ಎನ್ನುವಂತೆ - (ನೃಸಿಂಹನೇ) **ಸಿಂಹನು.** ಭೂತ (ಪ್ರಾಣಿ)ಗಳಿಗೆ ದೊಡ್ಡ ಒಡೆಯನು; ಆದ್ದರಿಂದ, ಅಥವಾ ಸತ್ಯವಾಗಿ ಆತನೇ ಮುಖ್ಯನಾದ ಎಲ್ಲಕ್ಕೂ ಹೆಚ್ಚಿನ ಒಡೆಯನು, ಆದ್ದರಿಂದ **ಭೂತಮಹೇಶ್ವರನು.**

## (ಭಾಷ್ಯ)

೪೯೦. ಸರ್ವಭೂತಾನಿ ಆದೀಯನ್ತೇ ಅನೇನ ಇತಿ ಆದಿಃ। ಆದಿಶ್ಚಾಸೌ ದೇವಶ್ಚ ಇತಿ ಆದಿದೇವಃ। ೪೯೧. ಸರ್ವಾನ್ ಭಾವಾನ್ ಪರಿತ್ಯಜ್ಯ ಆತ್ಮಜ್ಞಾನ-ಯೋಗೈಶ್ವರ್ಯೇ ಮಹತಿ ಮಹೀಯತೇ, ತಸ್ಮಾದುಚ್ಯತೇ ಮಹಾದೇವಃ। ೪೯೨. ಪ್ರಾಧಾನ್ಯೇನ ದೇವಾನಾಮೀಶಃ ದೇವೇಶಃ। ೪೯೩. ದೇವಾನ್ ಬಿಭರ್ತೀತಿ ದೇವಭೃತ್ ಶಕ್ರಃ। ತಸ್ಯಾಪಿ ಶಾಸಿತಾ ಇತಿ ದೇವಭೃದ್‌ಗುರುಃ। ದೇವಾನಾಂ ಭರಣಾತ್, ಸರ್ವವಿದ್ಯಾನಾಂ ಚ ನಿಗರಣಾದ್ವಾ ದೇವಭೃದ್ಗುರುಃ॥ ॥೬೫॥

## (ಭಾಷ್ಯಾರ್ಥ)

ಎಲ್ಲಾ ಭೂತಗಳನ್ನೂ ಆದಾನಮಾಡುತ್ತಾನೆ. (ಸ್ವೀಕರಿಸಿ ತನ್ನಲ್ಲಿಟ್ಟುಕೊಳ್ಳುತ್ತಾನೆ). ಆದ್ದರಿಂದ **ಆದಿ;** ಆದಿಯಾದ ದೇವನು **ಆದಿದೇವನು.** ಎಲ್ಲಾ ಭಾವ (ಪದಾರ್ಥ)ಗಳನ್ನು ಬಿಟ್ಟು 'ಆತ್ಮಜ್ಞಾನ, ಯೋಗ, ಐಶ್ವರ್ಯ ಎಂಬಿವುಗಳಲ್ಲಿ ಪೂಜ್ಯನಾಗಿರುತ್ತಾನೆ, ಆದ್ದರಿಂದ **ಮಹಾದೇವನೆ**ನಿಸಿರುತ್ತಾನೆ. ಮುಖ್ಯವಾಗಿ ದೇವತೆಗಳಿಗೆ ಒಡೆಯನಾದ್ದರಿಂದ **ದೇವೇಶನು.** ದೇವತೆಗಳನ್ನು ಕಾಪಾಡುತ್ತಾನಾದ್ದರಿಂದ **ದೇವಭೃತ್** ಎನಿಸಿರುವಾತನು ಇಂದ್ರನು; ಅವನಿಗೂ ತತ್ತ್ವವನ್ನು ಹೇಳಿಕೊಡುವಾತನು, ಆದ್ದರಿಂದ **ದೇವಭೃದ್ಗುರುವು.** ದೇವತೆಗಳನ್ನು ಭರಿಸಿರುವದರಿಂದ, ಅಥವಾ ಎಲ್ಲಾ ವಿದ್ಯೆಗಳನ್ನೂ ನುಂಗಿರುವನಾದ್ದರಿಂದ **ದೇವಭೃದ್ಗುರು** ಎಂದಾಗಬಹುದು.

**ಉತ್ತರೋ ಗೋಪತಿರ್ಗೋಪ್ತಾ ಜ್ಞಾನಗಮ್ಯಃ ಪುರಾತನಃ।**
**ಶರೀರಭೂತಭೃದ್ ಭೋಕ್ತಾ ಕಪೀನ್ದ್ರೋ ಭೂರಿದಕ್ಷಿಣಃ। ॥೬೬॥**

## (ಭಾಷ್ಯ)

೪೯೪. ಜನ್ಮಸಂಸಾರಬನ್ಧನಾದುತ್ತರತಿ ಇತಿ ಉತ್ತರಃ। ಸರ್ವೋತ್ಕೃಷ್ಟ ಇತಿ ವಾ, 'ವಿಶ್ವಸ್ಮಾದಿನ್ದ್ರ ಉತ್ತರಃ' (ಋ.೧೦-೭-೮೬-೧೧) ಇತಿ ಶ್ರುತೇಃ। ೪೯೫. ಗವಾಂ ಪಾಲನಾದ್ ಗೋಪವೇಷಧರೋ ಗೋಪತಿಃ। ಗೌರ್ಮಹೀ ತಸ್ಯಾಃ ಪತಿತ್ವಾದ್ವಾ। ೪೯೬. ಸಮಸ್ತಭೂತಾನಿ ಪಾಲಯನ್ ರಕ್ಷಕೋ ಜಗತಃ ಇತಿ ಗೋಪ್ತಾ।

೪೯೭. ನ ಕರ್ಮಣಾ ನ ಜ್ಞಾನಕರ್ಮಭ್ಯಾಂ ವಾ ಗಮ್ಯತೇ, ಕಿಂ ತು ಜ್ಞಾನೇನ ಗಮ್ಯತೇ ಇತಿ ಜ್ಞಾನಗಮ್ಯಃ। ೪೯೮. ಕಾಲೇನಾಪರಿಚ್ಛಿನ್ನತ್ವಾತ್ ಪುರಾಪಿ ಭವತೀತಿ ಪುರಾತನಃ। ೪೯೯. ಶರೀರಾರಮ್ಭಕಭೂತಾನಾಂ ಭರಣಾತ್ ಪ್ರಾಣರೂಪಧರಃ ಶರೀರಭೂತಭೃತ್। ೫೦೦. ಪಾಲಕತ್ವಾದ್ ಭೋಕ್ತಾ, ಪರಮಾನನ್ದಸನ್ದೋಹಸಂಭೋಗಾದ್ ವಾ ಭೋಕ್ತಾ॥

ಇತಿ ನಾಮ್ನಾಂ ಪಞ್ಚಮಂ ಶತಂ ವಿವೃತಮ್॥

## (ಭಾವಾರ್ಥ)

ಜನ್ಮಸಂಸಾರದ ಬಂಧನದಿಂದ (ಆಚೆಗೆ) ದಾಟಿರುತ್ತಾನೆ; ಆದ್ದರಿಂದ **ಉತ್ತರನು**; ಅಥವಾ ಎಲ್ಲಕ್ಕಿಂತಲೂ ಉತ್ಕೃಷ್ಟನಾದವನು; ಆದ್ದರಿಂದ (**ಉತ್ತರನು** ಎಂದೂ ವಾಖ್ಯಾನಮಾಡಬಹುದು). 'ಎಲ್ಲಕ್ಕಿಂತಲೂ ಇಂದ್ರ (ಈಶ್ವರ)ನು ಉತ್ತಮನು' ಎಂಬ ಶ್ರುತಿಯಿಂದ (ಇದು ಸಿದ್ಧವಾಗಿದೆ). ಗೋಗಗಳನ್ನು ಕಾಪಾಡುವದರಿಂದ ಗೋಪವೇಷಧರನಾದ (ಈತನು) **ಗೋಪತಿಯು**. ಗೌ ಎಂದರೆ ಭೂಮಿ, ಅದಕ್ಕೆ ಒಡೆಯನಾದ್ದರಿಂದ (**ಗೋಪತಿ** ಎಂದೂ ಹೇಳಬಹುದು). ಎಲ್ಲಾ ಪ್ರಾಣಿಗಳನ್ನೂ ಕಾಪಾಡುವವನಾಗಿ ಜಗತ್ತನ್ನು ರಕ್ಷಿಸುವಾತನಾಗಿರುವದರಿಂದ **ಗೋಪ್ತನು**. ಕರ್ಮದಿಂದಲ್ಲ, ಜ್ಞಾನಕರ್ಮಗಳ (ಸಮುಚ್ಚಯದಿಂದಲೂ)ಅಲ್ಲ; ಮತ್ತೇತರಿಂದ ಎಂದರೆ ಜ್ಞಾನದಿಂದಲೇ ಪಡೆಯುವದಕ್ಕೆ ಆಗುತ್ತದೆಯಾದ್ದರಿಂದ (ಈತನು) **ಜ್ಞಾನಗಮ್ಯನು**. ಕಾಲದ ಎಲ್ಲೆಕಟ್ಟಿಲ್ಲದವನಾದ್ದರಿಂದ ಮುಂಚೆಯೂ ಇರುತ್ತಾನೆ; ಆದ್ದರಿಂದ **ಪುರಾತನನು**. ಶರೀರಕ್ಕೆ ಕಾರಣವಾಗಿರುವ ಭೂತಗಳಿಗೆ ಪ್ರಾಣರೂಪದಿಂದ ಪಾಲಕನಾಗಿರುವದರಿಂದ **ಶರೀರಭೂತಭೃತ್** (ಎನಿಸಿರುತ್ತಾನೆ). ಕಾಪಾಡುವವನಾದ್ದರಿಂದ **ಭೋಕ್ತನು**. ಅಥವಾ ಪರಮಾನಂದದ ರಾಶಿಯನ್ನು ಭೋಗಿಸುವವನಾದ್ದರಿಂದ **ಭೋಕ್ತಾ** (ಎಂದೂ ಹೇಳಬಹುದು).

ಇಲ್ಲಿಗೆ ನಾಮಗಳ ಐದನೆಯ ಶತಕವನ್ನು ವಿವರಿಸಿದ್ದಾಯಿತು.

## ಷಷ್ಠಶತಕ

### (ಭಾಷ್ಯ)

೫೦೧. ಕಪಿಶ್ಚಾಸಾವಿನ್ದ್ರಶ್ಚೇತಿ (ಕಪಿರ್ವರಾಹಃ, ವಾರಾಹಂ ವಪುರಾಸ್ಥಿತಃ) ಕಪೀನ್ದ್ರಃ। ಕಪೀನಾಂ ವಾನರಾಣಾಮಿನ್ದ್ರಃ ಕಪೀನ್ದ್ರೋ ರಾಘವೋ ವಾ। ೫೦೨. ಭೂರಯೋ ಬಹ್ವ್ಯಃ ಯಜ್ಞದಕ್ಷಿಣಾಃ ಧರ್ಮಮರ್ಯಾದಾಂ ದರ್ಶಯತೋ ಯಜ್ಞಂ ಕುರ್ವತೋ ವಿದ್ಯನ್ತೇ ಇತಿ ಭೂರಿದಕ್ಷಿಣಃ॥೬೬॥

### (ಭಾಷ್ಯಾರ್ಥ)

ಕಪಿಯೂ ಇಂದ್ರನೂ ಆಗಿರುವ - ಎಂದರೆ (ಕಪಿಯು ವರಾಹನು - ವಾರಾಹ (ಹಂದಿ) ಶರೀರವನ್ನು ಧರಿಸಿದವನಾದ್ದರಿಂದ) **ಕಪೀಂದ್ರನು.** ಕಪಿಗಳಿಗೆ - ಕೋತಿಗಳಿಗೆ ಒಡೆಯನಾದ್ದರಿಂದ ಕಪೀಂದ್ರನು, ರಾಘವ (ರಾಮ)ನು ಎಂದಾದರೂ ಆಗಬಹುದು. (ಭೂರಿ=) ಬಹಳವಾದ ಯಜ್ಞದಕ್ಷಿಣೆಗಳು ಧರ್ಮದ ಪದ್ಧತಿಯನ್ನು ತೋರಿಸಿಕೊಡುವದಕ್ಕೆಂದು ಯಜ್ಞವನ್ನು ಮಾಡುವಾಗ - ಈತನಿಗೆ ಇರುತ್ತವೆ; ಆದ್ದರಿಂದ **ಭೂರಿದಕ್ಷಿಣನು.**

**ಸೋಮಪೋಽಮೃತಪಸ್ಸೋಮಃ ಪುರುಜಿತ್ ಪುರುಸತ್ತಮಃ।**
**ವಿನಯೋ ಜಯಃ ಸತ್ಯಸನ್ಧೋ ದಾಶಾರ್ಹಃ ಸಾತ್ವತಾಂ ಪತಿಃ ॥೬೭॥**

### (ಭಾಷ್ಯ)

೫೦೩. ಸೋಮಂ ಪಿಬತಿ ಸರ್ವಯಜ್ಞೇಷು ಯಷ್ಟವ್ಯದೇವತಾರೂಪೇಣ ಇತಿ ಸೋಮಪಃ। ಧರ್ಮಮರ್ಯಾದಾಂ ದರ್ಶಯನ್ ಯಜಮಾನರೂಪೇಣ ವಾ ಸೋಮಪಃ। ೫೦೪. ಸ್ವಾತ್ಮಾಮೃತರಸಂ ಪಿಬನ್ ಅಮೃತಪಃ। ಅಸುರೈಃ ಹ್ರಿಯಮಾಣಮಮೃತಂ ರಕ್ಷಿತ್ವಾ ದೇವಾನ್ ಪಾಯಯಿತ್ವಾ ಸ್ವಯಮಪಿ ಅಪಿಬತ್ ಇತಿ ವಾ। ೫೦೫. ಸೋಮರೂಪೇಣ ಓಷಧೀಃ ಪೋಷಯನ್ ಸೋಮಃ। ಉಮಯಾ ಸಹಿತಃ ಶಿವೋ ವಾ। ೫೦೬. ಪುರೂನ್ ಬಹೂನ್ ಜಯತೀತಿ ಪುರುಜಿತ್। ೫೦೭. ವಿಶ್ವರೂಪಾತ್ ಪುರುಃ, ಉತ್ಕೃಷ್ಟತ್ವಾತ್ ಸತ್ತಮಃ, ಪುರುಶ್ಚಾಸೌ ಸತ್ತಮಶ್ಚೇತಿ ಪುರುಸತ್ತಮಃ॥

### (ಭಾಷ್ಯಾರ್ಥ)

ಎಲ್ಲಾ ಯಜ್ಞಗಳಲ್ಲಿ ಯಾವ ದೇವತೆಗೆ ಯಾಗಮಾಡುತ್ತಾರೋ (ಆ ದೇವತೆಯ) ರೂಪದಿಂದ ಸೋಮವನ್ನು ಪಾನಮಾಡುತ್ತಾನೆ; ಆದ್ದರಿಂದ **ಸೋಮಪನು.** ಅಥವಾ ಧರ್ಮದ ಎಲ್ಲೆಕಟ್ಟನ್ನು ತೋರಿಸಿಕೊಡುವದಕ್ಕಾಗಿ ಯಜಮಾನನ ರೂಪದಿಂದ, ಸೋಮಪಾನವನ್ನು ಮಾಡುತ್ತಾನೆ. ಆದ್ದರಿಂದ **ಸೋಮಪನು.** ತನ್ನ ಆತ್ಮನೆಂಬ ಅಮೃತರಸವನ್ನು ಪಾನಮಾಡುವವನಾದ್ದರಿಂದ **ಅಮೃತಪನು.** ಅಸುರರು

ಅಪಹರಿಸುತ್ತಿದ್ದ ಅಮೃತವನ್ನು ಕಾಪಾಡಿ ದೇವತೆಗಳಿಗೆ ಕುಡಿಸಿ ತಾನೂ (ಅಮೃತವನ್ನು) ಕುಡಿದನು; ಆದ್ದರಿಂದ (**ಅಮೃತಪನು**) ಎಂದಾದರೂ (ಇದರ ಅರ್ಥ). **ಸೋಮ** (ಚಂದ್ರ) ರೂಪದಿಂದ ಗಿಡಮರಗಳನ್ನು ಪೋಷಿಸುವನಾದ್ದರಿಂದ **ಸೋಮನು.** ಉಮಾಸಹಿತನಾದ ಶಿವನು; (ಆದ್ದರಿಂದ **ಸೋಮನು**) ಎಂದಾದರೂ (ಅರ್ಥ). (ಪುರೂನ್) ಬಹುಜನರನ್ನು ಜಯಿಸುತ್ತಾನೆ; ಆದ್ದರಿಂದ **ಪುರುಜಿತ್** (ಎನಿಸುವನು) ಎಲ್ಲದರ ರೂಪದಿಂದಿರುವದರಿಂದ **ಪುರುವು**, ಉತ್ಕೃಷ್ಟನಾಗಿರುವದರಿಂದ **ಸತ್ತಮನು.** ಪುರುವಾದ **ಸತ್ತಮನು;** ಆದ್ದರಿಂದ **ಪುರುಸತ್ತಮನು.**

## (ಭಾಷ್ಯ)

೫೦೮. ವಿನಯಂ ದಣ್ಡಂ ಕರೋತಿ ದುಷ್ಟಾನಾಮ್ ಇತಿ ವಿನಯಃ। ೫೦೯. ಸಮಸ್ತಾನಿ ಭೂತಾನಿ ಜಯತೀತಿ ಜಯಃ। ೫೧೦. ಸತ್ಯಾ ಸನ್ಧಾ ಸಙ್ಕಲ್ಪಃ ಅಸ್ಯೇತಿ ಸತ್ಯಸನ್ಧಃ, 'ಸತ್ಯಸಙ್ಕಲ್ಪಃ' (ಛಾಂ. ೮-೧-೫) ಇತಿ ಶ್ರುತೇಃ। ೫೧೧. ದಾಶೋ ದಾನಂ ತದರ್ಹತೀತಿ ದಾಶಾರ್ಹಃ। ದಶಾರ್ಹಕುಲೋದ್ಭವತ್ವಾದ್ವಾ। ೫೧೨. ಸಾತ್ವತಂ ನಾಮ ತನ್ತ್ರಮ್, 'ತತ್ಕರೋತಿ ತದಾಚಷ್ಟೇ' (ಗ.ಸೂ.೨೦೪) ಇತಿ ಣಿಚಿ ಕೃತೇ ಕ್ವಿಪ್‌ಪ್ರತ್ಯಯೇ ಣಿಲೋಪೇ ಚ ಕೃತಂ ಪದಂ ಸಾತ್ವತ್, ತೇಷಾಂ ಪತಿಃ ಯೋಗಕ್ಷೇಮಕರಃ ಇತಿ ಸಾತ್ವತಾಂ ಪತಿಃ॥೬೭॥

## (ಭಾಷ್ಯಾರ್ಥ)

ವಿನಯವನ್ನು ಎಂದರೆ ದುಷ್ಟರಿಗೆ ದಂಡ(ಶಿಕ್ಷೆ)ವನ್ನು ಮಾಡುತ್ತಾನೆ; ಆದ್ದರಿಂದ (ಈತನು) **ವಿನಯನು**. ಎಲ್ಲಾ ಪ್ರಾಣಿಗಳನ್ನೂ ಗೆಲ್ಲುತ್ತಾನೆ; ಆದ್ದರಿಂದ **ಜಯನು.** ಸತ್ಯವಾದ ಸಂಧವು, ಎಂದರೆ ಸಂಕಲ್ಪವು ಈತನದು; ಆದ್ದರಿಂದ **ಸತ್ಯಸಂಧನು.** "ಸತ್ಯಸಂಕಲ್ಪನು" ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). ದಾಶವೆಂದರೆ ದಾನವು, ಅದಕ್ಕೆ ತಕ್ಕವನಾದ್ದರಿಂದ **ದಾಶಾರ್ಹನು.**[1] ಅಥವಾ ದಾಶಾರ್ಹನ ಕುಲದಲ್ಲಿ[2] ಹುಟ್ಟಿದವನಾದ್ದರಿಂದ **ದಾಶಾರ್ಹನು.** ಸಾತ್ವತ ಎಂಬುದು ಒಂದು ತಂತ್ರ (ದ ಹೆಸರು). ಅದನ್ನು ಮಾಡುತ್ತಾನೆ, ಅಥವಾ ಹೇಳಿರುತ್ತಾನೆ ಎಂಬರ್ಥದಲ್ಲಿ ಣಿಚ್ ಪ್ರತ್ಯಯವು ಬಂದು, ಅದಕ್ಕೆ ಕ್ವಿಪ್‌ಪ್ರತ್ಯಯವು ಬರಲಾಗಿ ಣಿಲೋಪವನ್ನು ಮಾಡಿದರೆ ಸಾತ್ವತ್ ಎಂಬ ಪದವಾಗುತ್ತದೆ.[3] ಆ (ಸಾತ್ವತ)ರಿಗೆ ಪತಿಯು (ಅವರ) ಯೋಗಕ್ಷೇಮವನ್ನು ವಹಿಸುವಾತನು; ಆದ್ದರಿಂದ **ಸಾತ್ವತಾಂಪತಿಯು.**

1. ಭಕ್ತರು ಕೊಟ್ಟ ದಾನಕ್ಕೆ ಅರ್ಹನು ಎಂದು ಮೊದಲನೆಯ ಅರ್ಥ.
2. ದಾಶಾರ್ಹನೆಂಬಾತನು ಒಬ್ಬ ಯಾದವನು, ಅವನ ಕುಲದಲ್ಲಿ ಹುಟ್ಟಿದವನು ಎಂದು ಎರಡನೆಯ ಅರ್ಥ.
3. ಸಾತ್ವತವೆಂಬುದು ಭಾಗವತಮತವನ್ನು ವಿವರಿಸುವ ತಂತ್ರವು. ಅದನ್ನು ಮಾಡಿದವನು, ವಿವರಿಸಿರುವವನು - ಎಂಬರ್ಥದಲ್ಲಿ ಣಿಚ್‌ಪ್ರತ್ಯಯ; ಅದಕ್ಕೆ ಕ್ವಿಪ್ (ಲೋಪ). ವ್ಯಾಕರಣದಲ್ಲಿ ಹೇಳಿರುವ ಪ್ರತ್ಯಯಗಳಿವು, ಇವುಗಳ ವಿವರವನ್ನು ಪಾಣಿನೀಯವ್ಯಾಕರಣವನ್ನು ಬಲ್ಲವರಿಂದ ಅರಿತುಕೊಳ್ಳಬೇಕು. ಸಾತ್ವತತಂತ್ರವನ್ನು ಹೇಳುವ ಭಕ್ತರ ಯೋಗಕ್ಷೇಮವನ್ನು ವಹಿಸುವಾತನು - ಎಂದರ್ಥ.

**ಜೀವೋ ವಿನಯಿತಾ ಸಾಕ್ಷೀ ಮುಕುನ್ದೋಽಮಿತವಿಕ್ರಮಃ।**
**ಅಮ್ಭೋನಿಧಿರನನ್ತಾತ್ಮಾ ಮಹೋದಧಿಶಯೋಽನ್ತಕಃ ॥೬೮॥**

(ಭಾಷ್ಯ)

೫೧೩. ಪ್ರಾಣಾನ್ ಕ್ಷೇತ್ರಜ್ಞರೂಪೇಣ ಧಾರಯನ್ ಜೀವ ಇತ್ಯುಚ್ಯತೇ। ೫೧೪. ವಿನಯಿತ್ವಂ ವಿನಯಿತಾ ತಾಂ ಚ ಸಾಕ್ಷಾತ್ ಪಶ್ಯತಿ ಪ್ರಜಾನಾಮ್ ಇತಿ ವಿನಯಿತಾ ಸಾಕ್ಷೀ। ಅಥವಾ ನಯತೇರ್ಗತಿವಾಚಿನೋ ರೂಪಂ ವಿನಯಿತಾ, ಅಸಾಕ್ಷೀ ಅಸಾಕ್ಷಾದ್ದ್ರಷ್ಟಾ ಆತ್ಮಾತಿರಿಕ್ತಂ ವಸ್ತು ನ ಪಶ್ಯತೀತ್ಯರ್ಥಃ। ೫೧೫. ಮುಕ್ತಿಂ ದದಾತೀತಿ ಮುಕುನ್ದಃ, ಪೃಷೋದರಾದಿತ್ವಾತ್ ಸಾಧುತ್ವಮ್। ಅಕ್ಷರಸಾಮ್ಯಾನ್ನಿರುಕ್ತಿವಚನಾದ್ ನೈರುಕ್ತಾನಾಂ ಮುಕುನ್ದ ಇತಿ ನಿರುಕ್ತಿಃ। ೫೧೬. ಅಮಿತಾ ಅಪರಿಚ್ಛಿನ್ನಾ ವಿಕ್ರಮಾಃ ತ್ರಯಃ ಪಾದವಿಕ್ಷೇಪಾಃ ಅಸ್ಯ ಅಮಿತಂ ವಿಕ್ರಮಣಂ ಶೌರ್ಯಮಸ್ಯೇತಿ ವಾ ಅಮಿತವಿಕ್ರಮಃ॥

(ಭಾಷ್ಯಾರ್ಥ)

ಪ್ರಾಣ (-ಇಂದ್ರಿಯ)ಗಳನ್ನು ಜೀವರೂಪದಿಂದ ಧರಿಸಿರುತ್ತಾನಾದ್ದರಿಂದ **ಜೀವ**ನೆನಿಸಿರುತ್ತಾನೆ. ವಿನಯಿಯಾಗಿರುವದೇ ವಿನಯಿತ್ವವು; ಪ್ರಜೆಗಳಲ್ಲಿರುವ ಆ (ವಿನಯಿತ್ವವನ್ನು) ನೇರಾಗಿ ನೋಡುತ್ತಿರುತ್ತಾನಾದ್ದರಿಂದ **ವಿನಯಿತಾ ಸಾಕ್ಷಿ** (ಎನಿಸಿರುತ್ತಾನೆ). ಅಥವಾ ಗತಿವಾಚಕವಾದ ನೀಧಾತುವಿನಿಂದ ಬಂದಿರುವ ರೂಪವು **ವಿನಯಿತಾ;** ಅಸಾಕ್ಷೀ ಸಾಕ್ಷಾತ್ತಾಗಿ ಕಾಣದೆ ಇರುವಾತನು ತನಗಿಂತ ವ್ಯತಿರಿಕ್ತವಾದ ವಸ್ತುವನ್ನು ಕಾಣದೆ ಇರುವಾತನು **ಅಸಾಕ್ಷೀ** (ಎನಿಸುವನು).[1] ಮುಕ್ತಿಯನ್ನು ಕೊಡುತ್ತಾನಾದ್ದರಿಂದ **ಮುಕುಂದನು.** ಪೃಷೋದರಾದಿ (ಗಣದಲ್ಲಿರು)ವದರಿಂದ ಈ (ಮುಕುಂದ) ಶಬ್ದರೂಪವು ಸಾಧು. ಅಕ್ಷರಸಾಮ್ಯವಿರುವದರಿಂದ ನಿರುಕ್ತವಚನಪ್ರಾಮಾಣ್ಯದಿಂದ[2] ಮುಕುಂದನು ಎಂದು ನಿರುಕ್ತ? ಅಮಿತವಾದ ಎಂದರೆ ಇಷ್ಟೆಂಬ ಮಿತಿಯಿಲ್ಲದ ವಿಕ್ರಮಗಳು ಮೂರು ದಾಟುಗಾಲುಗಳು ಈತನವು; ಆದ್ದರಿಂದ ಅಥವಾ ಅಮಿತವಾದ ವಿಕ್ರಮಣವು, ಶೌರ್ಯವು ಈತನದು; ಆದ್ದರಿಂದ **ಅಮಿತವಿಕ್ರಮನು.**

(ಭಾಷ್ಯ)

೫೧೭. ಅಮ್ಭಾಂಸಿ ದೇವಾದಯೋಽಸ್ಮಿನ್ ನಿಧೀಯನ್ತ ಇತಿ ಅಮ್ಭೋನಿಧಿಃ। 'ತಾನಿ ವಾ ಏತಾನಿ ಚತ್ವಾರ್ಯಮ್ಭಾಂಸಿ। ದೇವಾ ಮನುಷ್ಯಾಃ ಪಿತರೋಽಸುರಾಃ'

---

1. ಈ ನಾಮದ ಎರಡನೆಯ ಅರ್ಥವು ಸ್ಪಷ್ಟವಾಗಿಲ್ಲ. ವಿನಯತೇ - ಎಲ್ಲೆಲ್ಲಿಯೂ ವ್ಯಾಪಿಸಿರುತ್ತಾನೆ; ವಿನಯಿತ್ವವಾದ ಅಸಾಕ್ಷಿ - ಎಂದು ವಿಗ್ರಹವಾಕ್ಯವನ್ನು ಮಾಡಿರುವ ವ್ಯಾಖ್ಯಾವವು ಮೈ॥ ಪಾಠದಲ್ಲಿದೆ. ಅಲ್ಲಿ ಇನ್ನೂ ಎರಡರ್ಥಗಳಿವೆ. ಅಷ್ಟು ಒಪ್ಪಾಗಿಲ್ಲ. 'ವಿನಯಿತಾ ಸಾಕ್ಷೀತ್ಯೇಕಂ ನಾಮ' ಇದು ಒಂದೇ ನಾಮವು ಎಂದು ಭಾಷ್ಯದಲ್ಲಿ ಅಧಿಕಪಾಠವೂ ಮೈ॥ ಪಾಠದಲ್ಲಿದೆ.

2. ಅಕ್ಷರವರ್ಣಸಾಮಾನ್ಯಾನ್ನಿಬ್ರೂಯಾತ್ - ಎಂದು ನಿರುಕ್ತವಚನ.

(ತೈ.ಬ್ರಾ.೨-೩-೮) ಇತಿ ಶ್ರುತೇಃ। ಸಾಗರೋ ವಾ; 'ಸರಸಾಮಸ್ಮಿ ಸಾಗರಃ' (ಗೀ.೧೦-೨೪) ಇತಿ ಭಗವದ್ವಚನಾತ್। ೫೧೮. ದೇಶತಃ ಕಾಲತಃ ವಸ್ತುತಶ್ಚ ಅಪರಿಚ್ಛಿನ್ನತ್ವಾತ್ ಅನನ್ತಾತ್ಮಾ। ೫೧೯. ಸಂಹೃತ್ಯ ಸರ್ವಭೂತಾನ್ಯೇಕಾರ್ಣವಂ ಜಗತ್ಕೃತ್ವಾ ಅಧಿಶೇತೇ ಮಹೋದಧಿಮಿತಿ ಮಹೋದಧಿಶಯಃ। ೫೨೦. ಅನ್ತಂ ಕರೋತಿ ಭೂತಾನಾಮಿತಿ ಅನ್ತಕಃ, "ತತ್ಕರೋತಿ ತದಾಚಷ್ಟೇ" (ಚುರಾದಿಗಣಸೂತ್ರಮ್) ಇತಿ ಣಿಚಿ 'ಣ್ವುಲ್ ತೃಚೌ' (ಪಾ.ಸೂ.೩-೧-೧೩೩) ಇತಿ ಣ್ವುಲಿ 'ಯುವೋರನಾಕೌ' (ಪಾ.ಸೂ.೭-೧-೧) ಇತಿ ಅಕಾದೇಶಃ॥ ೬೮॥

(ಭಾಷ್ಯಾರ್ಥ)

ಅಂಭವೆಂದರೆ ದೇವಾದಿಗಳು ಈತನಲ್ಲಿ ಇಡಲ್ಪಟ್ಟಿರುತ್ತಾರೆ, ಆದ್ದರಿಂದ (ಈತನು) **ಅಮ್ಭೋನಿಧಿಯು**. ಈ ನಾಲ್ಕೇ ಅಂಭವು, (ಯಾವವೆಂದರೆ) ದೇವತೆಗಳು, ಮನುಷ್ಯರು, ಪಿತೃಗಳು, ಅಸುರರು ಎಂಬ ಶ್ರುತಿಯ (ಪ್ರಮಾಣ) ದಿಂದ (ಈ ಅರ್ಥ). ಅಥವಾ **ಅಮ್ಭೋನಿಧಿ** ಎಂದರೆ ಸಾಗರವು; 'ಸರೋವರಗಳಿಗೆ ಸಾಗರವಾಗಿರುವೆನು' ಎಂಬ **ಭಗದ್ವಚನ**ದಿಂದ (ಇದು ಸಿದ್ಧವಾಗುತ್ತದೆ). ದೇಶದಿಂದಲೂ, ಕಾಲದಿಂದಲೂ, ವಸ್ತುವಿನಿಂದಲೂ ಎಲ್ಲೆಕಟ್ಟಿಲ್ಲದವನಾದ್ದರಿಂದ **ಅನನ್ತಾತ್ಮನು**. ಸರ್ವಭೂತಗಳನ್ನೂ ಸಂಹರಿಸಿ ಜಗತ್ತೆಲ್ಲವನ್ನೂ ಒಂದೇ ಸಮುದ್ರವಾಗಿ ಮಾಡಿ ಮಹೋದಧಿಯ ಮೇಲೆ ಮಲಗಿರುತ್ತಾನೆ, ಆದ್ದರಿಂದ **ಮಹೋದಧಿಶಯನು**. ಭೂತಗಳ ಅಂತ (ನಾಶ)ವನ್ನು ಮಾಡುವದರಿಂದ **ಅಂತಕನು**. 'ತತ್ಕರೋತಿ ತದಾಚಷ್ಟೇ' ಎಂಬ ಗಣಸೂತ್ರವಿರುವದರಿಂದ (ಅದನ್ನು ಮಾಡುತ್ತಾರೆ, ಅಥವಾ ಹೇಳುತ್ತಾನೆ ಎಂಬ ಅರ್ಥದಲ್ಲಿ) ಣಿಚ್ ಪ್ರತ್ಯಯವೂ 'ಣ್ವುಲ್...' ಎಂಬ ಸೂತ್ರದಿಂದ ಣ್ವುಲ್ ಬರಲಾಗಿ 'ಯುವೋ'; ...... ಎಂಬ ಸೂತ್ರದಿಂದ ಅದಕ್ಕೆ ಅಕ ಎಂಬ ಆದೇಶವಾಗಿದೆ.

**ಅಜೋ ಮಹಾರ್ಹಃ ಸ್ವಾಭಾವ್ಯೋ ಜಿತಾಮಿತ್ರಃ ಪ್ರಮೋದನಃ।**
**ಆನನ್ದೋ ನನ್ದನೋ ನನ್ದಃ ಸತ್ಯಧರ್ಮಾ ತ್ರಿವಿಕ್ರಮಃ ॥೬೯॥**

(ಭಾಷ್ಯ)

೫೨೧. ಅತ್ ವಿಷ್ಣೋರಜಾಯತ ಇತಿ ಕಾಮಃ ಅಜಃ। ೫೨೨. ಮಹಃ ಪೂಜಾ ತದರ್ಹತ್ವಾತ್ ಮಹಾರ್ಹಃ। ೫೨೩. ಸ್ವಭಾವೇನೈವಾಭಾವ್ಯೋ ನಿತ್ಯ ನಿಷ್ಪನ್ನರೂಪತ್ವಾತ್ ಇತಿ ಸ್ವಾಭಾವ್ಯಃ। ೫೨೪. ಜಿತಾಃ ಅಮಿತ್ರಾಃ ಅನ್ತರ್ವರ್ತಿನೋ ರಾಗದ್ವೇಷಾದಯೋ ಬಾಹ್ಯಾಶ್ಚ ರಾವಣಕುಮ್ಭಕರ್ಣಶಿಶುಪಾಲಾದಯೋ ಯೇನಾಸೌ ಜಿತಾಮಿತ್ರಃ। ೫೨೫. ಸ್ವಾತ್ಮಾಮೃತರಸಾಸ್ವಾದಾನ್ನಿತ್ಯಂ ಪ್ರಮೋದತೇ ಧ್ಯಾಯಿನಾಂ ಧ್ಯಾನಮಾತ್ರೇಣ ಪ್ರಮೋದಂ ಕರೋತಿ ಇತಿ ವಾ ಪ್ರಮೋದನಃ॥

(ಭಾಷ್ಯಾರ್ಥ)

ಅಕಾರ (ರೂಪ)ನಾದ ವಿಷ್ಣುವಿನಿಂದ ಹುಟ್ಟಿದವನಾದ್ದರಿಂದ **ಅಜನು** ಎಂದರೆ ಕಾಮನು. ಮಹವು ಎಂದರೆ ಗೌರವವು; ಅದಕ್ಕೆ ತಕ್ಕವನಾದ್ದರಿಂದ **ಮಹಾರ್ಹನು.** ಸ್ವಭಾವದಿಂದಲೇ ಅಭಾವ್ಯನು (ಉಂಟುಮಾಡಲ್ಪಡತಕ್ಕವನಲ್ಲ). ಏಕೆಂದರೆ ನಿತ್ಯಸಿದ್ಧನಾಗಿರುತ್ತಾನೆ. ಆದ್ದರಿಂದ **ಸ್ವಾಭಾವ್ಯನು.** ಅಮಿತ್ರರು ಎಂದರೆ ಒಳಗಿನ ರಾಗದ್ವೇಷಾದಿಗಳು, ಮತ್ತು ಹೊರಗಿನ ರಾವಣ, ಕುಂಭಕರ್ಣ, ಶಿಶುಪಾಲ - ಮುಂತಾದ ಅಮಿತ್ರರು (ಶತ್ರುಗಳು) ಯಾವನಿಂದ ಜಿತರಾಗುವರೋ ಅವನು **ಜಿತಾಮಿತ್ರನು.** ತನ್ನ ಆತ್ಮನೆಂಬ ಅಮೃತರಸವನ್ನು ಸವಿಯುವದರಿಂದ ಯಾವಾಗಲೂ ಪ್ರಮೋದ (ಸಂತೋಷ)ವನ್ನು ಪಡೆಯುತ್ತಿರುತ್ತಾನೆ, ಅಥವಾ ಧ್ಯಾನಮಾಡುವವರಿಗೆ ಚಿಂತನಮಾಡಿದಮಾತ್ರದಿಂದ ಪ್ರಮೋದವನ್ನುಂಟುಮಾಡುತ್ತಾನೆ, ಆದ್ದರಿಂದ **ಪ್ರಮೋದನನು.**

(ಭಾಷ್ಯ)

೫೨೬. ಆನನ್ದಂ ಸ್ವರೂಪಮಸ್ಯೇತಿ ಆನನ್ದಃ । 'ಏತಸ್ಯೈವಾನನ್ದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ' (ಬೃ. ೪-೩-೩೨) ಇತಿ ಶ್ರುತೇಃ। ೫೨೭. ನನ್ದಯತೀತಿ ನನ್ದನಃ। ೫೨೮. ಸರ್ವಾಭಿರುಪಪತ್ತಿಭಿಃ ಸಮೃದ್ಧೋ ನನ್ದಃ। ಸುಖಂ ವೈಷಯಿಕಂ ನಾಸ್ಯ ವಿದ್ಯತೇ ಇತ್ಯನನ್ದಃ। 'ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ' (ಛಾಂ.೭-೨೩-೧) ಇತಿ ಶ್ರುತೇಃ। ೫೨೯. ಸತ್ಯಾಃ ಧರ್ಮಜ್ಞಾನಾದಯೋಽಸ್ಯೇತಿ ಸತ್ಯಧರ್ಮಾ। ೫೩೦. ತ್ರಯೋ ವಿಕ್ರಮಾಃ ತ್ರಿಷು ಲೋಕೇಷು ಕ್ರಾನ್ತಾಃ ಯಸ್ಯ ಸ ತ್ರಿವಿಕ್ರಮಃ। 'ತ್ರೀಣಿ ಪದಾ ವಿಚಕ್ರಮೇ' (ತೈ. ಬ್ರಾ. ೨-೪-೬) ಇತಿ ಶ್ರುತೇಃ। ತ್ರಯೋ ಲೋಕಾಃ ಕ್ರಾನ್ತಾ ಯೇನ ಇತಿ ವಾ ತ್ರಿವಿಕ್ರಮಃ॥

ತ್ರಿರಿತ್ಯೇವ ತ್ರಯೋ ಲೋಕಾಃ ಕೀರ್ತಿತಾ ಮುನಿಸತ್ತಮೈಃ।
ಕ್ರಮತೇ ತಾಂಸ್ತ್ರಿಧಾ ಸರ್ವಾಂಸ್ತ್ರಿವಿಕ್ರಮ ಇತಿ ಶ್ರುತಃ॥

ಇತಿ ಹರಿವಂಶೇ ॥೬೯॥ ಹರಿ. ೩-೮೮-೫೧

(ಭಾಷ್ಯಾರ್ಥ)

ಆನಂದವು ಈತನಿಗೆ ಸ್ವರೂಪವು; ಆದ್ದರಿಂದ **ಆನಂದನು.** 'ಈ ಆನಂದದ ಒಂದಂಶವನ್ನೇ ಉಳಿದ ಪ್ರಾಣಿಗಳು ಆಶ್ರಯಿಸಿಕೊಂಡು ಬದುಕಿರುತ್ತವೆ' ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು).[1] ಸುಖವನ್ನುಂಟುಮಾಡುತ್ತಾನೆ. ಆದ್ದರಿಂದ **ನಂದನನು.** ಎಲ್ಲಾ ಉಪಕರಣಗಳಿಂದಲೂ[2] ಹೇರಳವಾಗಿ ಕೂಡಿರುತ್ತಾನೆ. ಆದ್ದರಿಂದ **ನಂದನು.** ಅಥವಾ ವಿಷಯದಿಂದುಂಟಾಗುವ ಸುಖವು ಈತನಿಗೆ ಇಲ್ಲ ಎಂಬ

1. ಪರಮಾತ್ಮನ ಸ್ವರೂಪವಾದ ಆನಂದದ ಅಂಶವೇ ವಿಷಯಸುಖವು ಎಂದು ಶ್ರುತಿಯ ಅರ್ಥ.
2. ಈ ಅರ್ಥವು ವ್ಯಾಖ್ಯಾನದಂತೆ ಬರೆದದ್ದು. ಈತನ ಸ್ವರೂಪವೇ ಎಲ್ಲಾ ಉಪಕರಣಗಳು - ಎಂಬ ಅಭಿಪ್ರಾಯವಿರಬಹುದು.

ಕಾರಣದಿಂದ **ಆನಂದನು.**[1] 'ಭೂಮವಿದೆಯಲ್ಲ, ಅದೇ ಸುಖವು; ಅಲ್ಪವಾದದ್ದರಲ್ಲಿ ಸುಖವಿಲ್ಲ' ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ).[2] ಈತನಿಗೆ ಧರ್ಮ, ಜ್ಞಾನ - ಮುಂತಾದವು ಸತ್ಯವಾಗಿರುತ್ತವೆಯಾದ್ದರಿಂದ **ಸತ್ಯಧರ್ಮನು.** ಯಾವನ ಮೂರು ದಾಟುಗಾಲುಗಳು ಮೂರು ಲೋಕಗಳಲ್ಲಿಯೂ ಹಬ್ಬಿಕೊಂಡವೋ ಆ ಈತನು **ತ್ರಿವಿಕ್ರಮನು;** 'ಮೂರು ಹೆಜ್ಜೆಗಳನ್ನು (ಮೂರು ಲೋಕಗಳಲ್ಲಿ) ಇಟ್ಟನು' ಎಂಬ ಶ್ರುತಿಯ (ಪ್ರಮಾಣದಿಂದ ಈ ಅರ್ಥ). ಮೂರು ಲೋಕಗಳು ಯಾವಾತನಿಂದ ವ್ಯಾಪ್ತವಾಗಿರುವವೋ ಅವನು(ತ್ರಿವಿಕ್ರಮನು) ಎಂದಾದರೂ (ಅರ್ಥವನ್ನು ಮಾಡಬಹುದು). 'ತ್ರಿ (ಮೂರು) ಎಂದರೆ ಮೂರು ಲೋಕಗಳು ಎಂದು ಮುನಿಶ್ರೇಷ್ಠರು ಹೇಳುತ್ತಾರೆ; ಅವನ್ನೆಲ್ಲವನ್ನೂ ಮೂರು ಬಗೆಯಿಂದ ವ್ಯಾಪಿಸಿ ಕೊಂಡಿರುತ್ತಾನಾದ್ದರಿಂದ ತ್ರಿವಿಕ್ರಮನೆಂದು ಪ್ರಸಿದ್ಧನಾಗಿರುತ್ತಾನೆ' - ಎಂದು **ಹರಿವಂಶದಲ್ಲಿದೆ.**

**ಮಹರ್ಷಿಃ ಕಪಿಲಾಚಾರ್ಯಃ ಕೃತಜ್ಞೋ ಮೇದಿನೀಪತಿಃ।**
**ತ್ರಿಪದಸ್ತ್ರಿದಶಾಧ್ಯಕ್ಷೋ ಮಹಾಶೃಙ್ಗಃ ಕೃತಾನ್ತಕೃತ್ ॥೬೦॥**

## (ಭಾಷ್ಯ)

೫೩೧. ಮಹರ್ಷಿಃ ಕಪಿಲಾಚಾರ್ಯಃ - ಇತಿ ಸವಿಶೇಷಣಮೇಕಂ ನಾಮ। ಮಹಾಂಶ್ಚಾಸೌ ಋಷಿಶ್ಚೇತಿ ಮಹರ್ಷಿಃ। ಕೃತ್ಸ್ನಸ್ಯ ವೇದಸ್ಯ ದರ್ಶನಾತ್। ಅನ್ಯೇ ತು ವೇದೈಕದೇಶದರ್ಶನಾದ್ ಋಷಯಃ। ಕಪಿಲಶ್ಚಾಸೌ ಸಾಙ್ಖ್ಯಸ್ಯ ಶುದ್ಧತತ್ತ್ವವಿಜ್ಞಾನಸ್ಯ ಆಚಾರ್ಯಶ್ಚ ಇತಿ ಕಪಿಲಾಚಾರ್ಯಃ। 'ಶುದ್ಧಾತ್ಮತತ್ತ್ವವಿಜ್ಞಾನಂ ಸಾಙ್ಖ್ಯಮಿತ್ಯಭಿಧೀಯತೇ' (?) ಇತಿ ಸ್ಮೃತೇಃ। 'ಋಷಿಂ ಪ್ರಸೂತಂ ಕಪಿಲಂ ಮಹಾನ್ತಮ್' (ಶ್ವೇ.೫-೨) ಇತಿ ಶ್ರುತೇಶ್ಚ। 'ಸಿದ್ಧಾನಾಂ ಕಪಿಲೋ ಮುನಿಃ' (ಗೀ.೧೦-೨೬) ಇತಿ ಸ್ಮೃತೇಶ್ಚ। ೫೩೨. ಕೃತಂ ಕಾರ್ಯಂ ಜಗತ್, ಜ್ಞಃ ಆತ್ಮಾ; ಕೃತಂ ಚ ತತ್ ಜ್ಞಶ್ಚ - ಇತಿ ಕೃತಜ್ಞಃ। ೫೩೩. ಮೇದಿನ್ಯಾಃ ಭೂಮ್ಯಾಃ ಪತಿಃ ಮೇದಿನೀಪತಿಃ॥

## (ಭಾಷ್ಯಾರ್ಥ)

'ಮಹರ್ಷಿಃ ಕಪಿಲಾಚಾರ್ಯಃ' ಎಂಬಿದು ವಿಶೇಷಣಸಹಿತವಾಗಿರುವ ಒಂದೇ ನಾಮವು. ಮಹಾನ್ (ದೊಡ್ಡವನಾದ) ಋಷಿಯು, **ಮಹರ್ಷಿಯು;** ಏಕೆಂದರೆ ಇಡಿಯ ವೇದವನ್ನೇ ಈತನು ಕಂಡಿರುವದರಿಂದ **ಮಹರ್ಷಿಯು;** (ಉಳಿದ ಋಷಿಗಳಾದರೋ) ವೇದದ ಒಂದು ಭಾಗವನ್ನು ಮಾತ್ರ ಕಂಡವರಾದ್ದರಿಂದ (ಈ

1. 'ಅನನ್ದಃ' ಎಂದು ಮೂಲದಲ್ಲಿ ಪದಚ್ಛೇದವನ್ನು ಮಾಡಿದಾಗ ಈ ಅರ್ಥವೆಂದು ಭಾವ.
2. ಅದ್ವಿತೀಯವಾದ ಆತ್ಮರೂಪವೇ ನಿಜವಾದ ಸುಖವು; ಪರಿಚ್ಛಿನ್ನವಾದದ್ದರಲ್ಲಿ ನಿಜವಾದ ಸುಖವಿಲ್ಲ - ಎಂದರ್ಥ.

ವಿಶೇಷಣವಿಲ್ಲದ) ಋಷಿಗಳು (ಮಾತ್ರ). ಕಪಿಲನು ಮತ್ತು ಶುದ್ಧತತ್ತ್ವಜ್ಞಾನವಾದ ಸಾಂಖ್ಯಕ್ಕೆ ಆಚಾರ್ಯನಾದ್ದರಿಂದ **ಕಪಿಲಾಚಾರ್ಯನು.** 'ಶುದ್ಧವಾದ ಆತ್ಮತತ್ತ್ವದ ವಿಜ್ಞಾನವನ್ನು ಸಾಂಖ್ಯವೆಂದು ಹೇಳುವರು (?) ಎಂಬ ಸ್ಮೃತಿಯ (ಪ್ರಮಾಣದಿಂದ) ಅರ್ಥ. 'ಮಹಾತ್ಮನಾಗಿ ಹುಟ್ಟಿದ ಕಪಿಲಋಷಿಯನ್ನು ಯಾವನು ವೇದಗಳಿಂದ ಅನುಗ್ರಹಿಸುವನೋ' ಎಂಬ ಶ್ರುತಿಯಿಂದಲೂ 'ಸಿದ್ಧರುಗಳಲ್ಲಿ ಕಪಿಲನು ನಾನು' ಎಂಬ ಸ್ಮೃತಿಯಿಂದಲೂ (ಈ ಅರ್ಥ). 'ಕೃತ'ವೆಂದರೆ ಕಾರ್ಯವಾದ ಜಗತ್ತು; ಜ್ಞ ಎಂದರೆ ಆತ್ಮನು, ಕೃತವೂ ಜ್ಞನೂ ಆಗಿರುವದರಿಂದ **ಕೃತಜ್ಞನು.**[1] ಮೇದಿನಿಗೆ ಎಂದರೆ ಭೂಮಿಗೆ ಪತಿಯು (ಆದ್ದರಿಂದ) **ಮೇದಿನೀಪತಿಯು.**

### (ಭಾಷ್ಯ)

೫೩೪. ತ್ರೀಣಿ ಪದಾನಿ ಅಸ್ಯೇತಿ ತ್ರಿಪದಃ। 'ತ್ರೀಣಿ ಪದಾ ವಿಚಕ್ರಮೇ' (ತೈ.ಬ್ರಾ.೨-೪-೬) ಇತಿ ಶ್ರುತೇಃ। ೫೩೫. ಗುಣಾವೇಶೇನ ಸಞ್ಜಾತಾಃ ತಿಸ್ರೋ ದಶಾಅವಸ್ಥಾಃ ಜಾಗ್ರದಾದಯಃ, ತಾಸಾಮಧ್ಯಕ್ಷಃ ಇತಿ ತ್ರಿದಶಾಧ್ಯಕ್ಷಃ। ೫೩೬. ಮತ್ಸ್ಯರೂಪೀ ಮಹತಿ ಶೃಙ್ಗೇ ಪ್ರಲಯಾಮ್ಭೋಧೌ ನಾವಂ ಬದ್ಧ್ವಾ ಚಿಕ್ರೀಡ ಇತಿ ಮಹಾಶೃಙ್ಗಃ। ೫೩೭. ಕೃತಸ್ಯ ಅನ್ತಂ ಸಂಹಾರಂ ಕರೋತೀತಿ, ಕೃತಾನ್ತಂ ಮೃತ್ಯುಂ ಕೃನ್ತತಿ ಇತಿ ವಾ ಕೃತಾನ್ತಕೃತ್॥೭೦॥

### (ಭಾಷ್ಯಾರ್ಥ)

ಮೂರು ಪದ (ಹೆಜ್ಜೆಗಳು) ಇವನವು, ಆದ್ದರಿಂದ **ತ್ರಿಪದನು.** 'ಮೂರು ಹೆಜ್ಜೆಗಳನ್ನು ಹಾಕಿ ವ್ಯಾಪಿಸಿಕೊಂಡನು' ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ).[2] ಗುಣಗಳ ಅವೇಶದಿಂದ ಉಂಟಾದ ಎಚ್ಚರವೇ ಮುಂತಾದ ಮೂರು ಅವಸ್ಥೆಗಳು (ತ್ರಿದಶೆಗಳು); ಅವಕ್ಕೆ ಅಧ್ಯಕ್ಷನು (ಸಾಕ್ಷಿ). ಆದ್ದರಿಂದ **ತ್ರಿದಶಾಧ್ಯಕ್ಷನು.** ಮತ್ಸ್ಯರೂಪಿಯಾಗಿ (ತನ್ನ) ಮಹಾಶೃಂಗದ ಮೇಲೆ ಮಹಾಸಾಗರದಲ್ಲಿ ಹಡಗನ್ನು ಕಟ್ಟಿಹಾಕಿ ಲೀಲೆಯನ್ನು ತೋರಿಸಿದನು, ಆದ್ದರಿಂದ **ಮಹಾಶೃಂಗನು.** ಕೃತ (ಸೃಷ್ಟ)ವಾದ ಸಂಸಾರದ ಅಂತವನ್ನು - ಸಂಹಾರವನ್ನು ಮಾಡುತ್ತಾನೆ, ಆದ್ದರಿಂದ **ಕೃತಾಂತಕೃತ್** (ಎಂದು ಹೆಸರು). ಅಥವಾ ಕೃತಾಂತನನ್ನು, ಎಂದರೆ ಮೃತ್ಯುವನ್ನು ಕತ್ತರಿಸಿಹಾಕುತ್ತಾನೆ, ಆದ್ದರಿಂದ **ಕೃತಾಂತಕೃತ್** (ಎನಿಸುವನು).

**ಮಹಾವರಾಹೋ ಗೋವಿನ್ದಃ ಸುಷೇಣಃ ಕನಕಾಙ್ಗದೀ।**
**ಗುಹ್ಯೋ ಗಭೀರೋ ಗಹನೋ ಗುಪ್ತಶ್ಚಕ್ರಗದಾಧರಃ ॥೭೧॥**

---

1. ಕಾರ್ಯವಾದ ಜಗತ್ತೂ ಅದನ್ನು ಅರಿಯುವ ಆತ್ಮನೂ ಈತನೇ ಎಂದರ್ಥ.
2. ಮೂರೇ ಹೆಜ್ಜೆಗಳು ಲೋಕಗಳನ್ನು ವ್ಯಾಪಿಸುವದಕ್ಕೆ ಇವನಿಗೆ ಸಾಕು - ಎಂದು ಅಭಿಪ್ರಾಯ.

## (ಭಾಷ್ಯ)

೫೩೮. ಮಹಾಂಶ್ಚಾಸೌ ವರಾಹಶ್ಚೇತಿ ಮಹಾವರಾಹಃ। ೫೩೯. ಗೋಭಿಃ ವಾಣೀಭಿಃ ವಿನ್ದತೇ, ವೇತ್ತಿ ವೇದಾನ್ತವಾಕ್ಯೈರಿತಿ ವಾ ಗೋವಿನ್ದಃ। 'ಗೋಭಿರೇವ ಯತೋ ವೇದ್ಯಃ ಗೋವಿನ್ದಃ ಸಮುದಾಹೃತಃ' (?) ಇತಿ ಶ್ರೀವಿಷ್ಣುತಿಲಕೇ। ೫೪೦. ಶೋಭನಾ ಸೇನಾ ಗಣಾತ್ಮಿಕಾ ಯಸ್ಯ ಇತಿ ಸುಷೇಣಃ। ೫೪೧. ಕನಕಮಯಾನಿ ಅಙ್ಗದಾನಿ ಅಸ್ಯೇತಿ ಕನಕಾಙ್ಗದೀ॥

## (ಭಾಷ್ಯಾರ್ಥ)

ಮಹಾ (ದೊಡ್ಡ) ವರಾಹನಾದ್ದರಿಂದ **ಮಹಾವರಾಹನು**. ಗೋಗಳಿಂದ ಎಂದರೆ ವಾಣಿಗಳಿಂದ ತಿಳಿಯಲ್ಪಡುತ್ತಾನೆ, ಅಥವಾ ವೇದಾಂತವಾಕ್ಯಗಳಿಂದ ತಿಳಿಯಬರುತ್ತಾನೆ,[1] ಆದ್ದರಿಂದ **ಗೋವಿಂದ**ನು. 'ಗೋಗಳಿಂದಲೇ ತಿಳಿಯತಕ್ಕವನಾದ್ದರಿಂದ ಗೋವಿಂದನೆನಿಸಿರುತ್ತಾನೆ' (?) ಎಂದು **ವಿಷ್ಣುತಿಲಕ** (?) ದಲ್ಲಿದೆ. ಒಳ್ಳೆಯ ಗಣರೂಪವಾದ[2] ಸೇನೆಯು ಯಾವನಿಗಿದೆಯೋ (ಆ ಈತನು) **ಸುಷೇಣನು**. ಕನಕದ (ಚಿನ್ನದ) ವಿಕಾರವಾದ ಅಂಗದ (ಭುಜಕೀರ್ತಿ)ಗಳು ಈತನಿಗೆ ಇವೆಯಾದ್ದರಿಂದ **ಕನಕಾಂಗದಿಯು**.

## (ಭಾಷ್ಯ)

೫೪೨. ರಹಸ್ಯೋಪನಿಷದ್ವೇದ್ಯತ್ವಾತ್, ಗುಹಾಯಾಂ ಹೃದಯಾಕಾಶೇ ನಿಹಿತ ಇತಿ ವಾ ಗುಹ್ಯಃ। ೫೪೩. ಜ್ಞಾನೈಶ್ವರ್ಯಬಲವೀರ್ಯಾದಿಭಿರ್ಗಮ್ಭೀರೋ ಗಭೀರಃ। ೫೪೪. ದುಷ್ಪ್ರವೇಶತ್ವಾತ್ ಗಹನಃ। ಅವಸ್ಥಾತ್ರಯಭಾವಾಭಾವಸಾಕ್ಷಿತ್ವಾತ್ ಗಹನೋ ವಾ। ೫೪೫. ವಾಙ್ಮನಸಾಗೋಚರತ್ವಾತ್ ಗುಪ್ತಃ। 'ಏಷ ಸರ್ವೇಷು ಭೂತೇಷು ಗೂಢೋಽಽತ್ಮಾ ನ ಪ್ರಕಾಶತೇ' (ಕಾ. ೩-೧೨) ಇತಿ ಶ್ರುತೇಃ। ೫೪೬. 'ಮನಸ್ತತ್ತ್ವಾತ್ಮಕಂ ಚಕ್ರಂ ಬುದ್ಧಿತತ್ತ್ವಾತ್ಮಿಕಾಂ ಗದಾಮ್। ಧಾರಯನ್ ಲೋಕರಕ್ಷಾರ್ಥಮುಕ್ತಃ ಚಕ್ರಗಧಾಧರಃ' - ಇತಿ ಚಕ್ರಗದಾಧರಃ॥೭೧॥

## (ಭಾಷ್ಯಾರ್ಥ)

ರಹಸ್ಯವಾದ ಉಪನಿಷತ್ತುಗಳಿಂದ ತಿಳಿಯಬರತಕ್ಕವನಾದ್ದರಿಂದ, ಅಥವಾ ಗುಹೆಯಲ್ಲಿ ಎಂದರೆ ಹೃದಯಾಕಾಶದಲ್ಲಿ ಇರತಕ್ಕವನಾದ್ದರಿಂದ **ಗುಹ್ಯನು**. ಜ್ಞಾನ, ಐಶ್ವರ್ಯ, ಬಲ, ವೀರ್ಯ - ಮುಂತಾದವುಗಳಿಂದ ಗಂಭೀರನಾದವನು, ಆದ್ದರಿಂದ **ಗಭೀರನು**.

---

1. ವೇದ್ಯತೇ, ವಿದ್ಯತೇ - ಎಂದು ಎರಡು ಪಾಠಗಳಿವೆ. ಅರಿಯಲ್ಪಡುತ್ತಾನೆ, ಪಡೆಯತಕ್ಕವನು - ಎಂದರ್ಥ, ಇಲ್ಲಿ ವಾಣಿಗಳೆಂದರೆ ಪ್ರಣವ, ಅಷ್ಟಾಕ್ಷರಾದಿ ಮಂತ್ರಗಳು ಎಂದು ವ್ಯಾಖ್ಯಾನ. ಮೂಲದ ವಿವಿಧಪಾಠಾಂತರಗಳನ್ನು ವ್ಯಾಖ್ಯಾನದಲ್ಲಿ ಕೊಟ್ಟಿದೆ.
2. ವಸು, ರುದ್ರ, - ಮುಂತಾದ ಗಣಗಳ ರೂಪದ - ಎಂದರ್ಥ.

(ಎಲ್ಲರಿಗೂ)[1] ಇವನಲ್ಲಿ ಪ್ರವೇಶವು ಕಷ್ಟವಾಗಿರುವದರಿಂದ **ಗಹನನು**. ಅವಸ್ಥಾತ್ರಯದ ಇರವಿಗೂ ಅಭಾವಕ್ಕೂ ಸಾಕ್ಷಿಯಾಗಿರುವದರಿಂದ **ಗಹನನು** - ಎಂದಾದರೂ (ಅರ್ಥವನ್ನು ಹೇಳಬಹುದು).[2] ವಾಕ್ಕು, ಮನಸ್ಸು - ಇವುಗಳಿಗೆ ಅಗೋಚರನಾಗಿ ಇರುವದರಿಂದ **ಗುಪ್ತನು**. 'ಸರ್ವಭೂತಗಳಲ್ಲಿ ಗೂಢನಾಗಿರುವ ಈ ಆತ್ಮನು (ಎಲ್ಲರಿಗೂ) ಕಾಣಿಸದೆ ಇರುತ್ತಾನೆ' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ). ಮನಸ್ತತ್ತ್ವರೂಪವಾದ ಚಕ್ರವನ್ನೂ ಬುದ್ಧಿತತ್ತ್ವರೂಪವಾದ ಗದೆಯನ್ನೂ ಲೋಕದ ರಕ್ಷಣೆಗಾಗಿ ಧರಿಸಿರುತ್ತಾನಾದ್ದರಿಂದ **ಚಕ್ರಗಧಾಧರನು**.

**ವೇಧಾಃ ಸ್ವಾಙ್ಗೋಽಜಿತಃ ಕೃಷ್ಣೋ ದೃಢಃ ಸಂಕರ್ಷಣೋಽಚ್ಯುತಃ।**
**ವರುಣೋ ವಾರುಣೋ ವೃಕ್ಷಃ ಪುಷ್ಕರಾಕ್ಷೋ ಮಹಾಮನಾಃ ॥೭೨॥**

**(ಭಾಷ್ಯ)**

೫೪೭. ವಿಧಾತಾ ವೇಧಾಃ। ಪೃಷೋದರಾದಿತ್ವಾತ್ ಸಾಧುತ್ವಮ್। ೫೪೮. ಸ್ವಯಮೇವ ಕಾರ್ಯಕರಣೇ ಅಙ್ಗಂ ಸಹಕಾರೀ ಇತಿ ಸ್ವಾಙ್ಗಃ। ೫೪೯. ನ ಕೇನಾಪ್ಯವತಾರೇಷು ಜಿತ ಇತಿ ಅಜಿತಃ। ೫೫೦. ಕೃಷ್ಣಃ ಕೃಷ್ಣದ್ವೈಪಾಯನಃ। 'ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಮ್। ಕೋ ಹ್ಯನ್ಯಃ ಪುಣ್ಡರೀಕಾಕ್ಷಾತ್ ಮಹಾಭಾರತಕೃದ್ಭವೇತ್' (ವಿ.ಪು. ೩-೪-೫) ಇತಿ ವಿಷ್ಣುಪುರಾಣವಚನಾತ್। ೫೫೧. ಸ್ವರೂಪಸಾಮರ್ಥ್ಯಾದೇಃ ಪ್ರಚ್ಯುತ್ಯಭಾವಾತ್ ದೃಢಃ। ೫೫೨. ಸಂಸಾರಸಮಯೇ ಯುಗಪತ್ ಪ್ರಜಾಃ ಸಙ್ಕರ್ಷತೀತಿ ಸಙ್ಕರ್ಷಣಃ, ನ ಚ್ಯೋತತಿ ಸ್ವರೂಪಾದಿತ್ಯಚ್ಯುತಃ, ಸಙ್ಕರ್ಷಣೋಽಚ್ಯುತಃ ಇತಿ ನಾಮೈಕಂ ಸವಿಶೇಷಣಮ್॥

**(ಭಾಷ್ಯಾರ್ಥ)**

(ವಿಧಾತಾ = ಸೃಷ್ಟಿಸುತ್ತಾನೆ ಆದ್ದರಿಂದ) **ವೇಧಾಃ** - ಬ್ರಹ್ಮನು. ಪೃಷೋದರಾದಿಗಣಕ್ಕೆ ಸೇರಿರುವದರಿಂದ (ಶಬ್ದರೂಪವು) ಸರಿ. ತಾನೇ ಕಾರ್ಯವನ್ನು ಮಾಡುವದರಲ್ಲಿ ಅಂಗವಾಗಿರುತ್ತಾನೆ, ಸಹಕಾರಿಯಾಗುತ್ತಾನೆ, ಆದ್ದರಿಂದ **ಸ್ವಾಂಗನು**. ಅವತಾರಗಳಲ್ಲಿ ಯಾರಿಂದಲೂ ಜಿತನಾಗಿರುವದಿಲ್ಲ, ಆದ್ದರಿಂದ **ಅಜಿತನು**. **ಕೃಷ್ಣನೆಂದರೆ** ಕೃಷ್ಣದ್ವೈಪಾಯನನು ; 'ಕೃಷ್ಣದ್ವೈಪಾಯನನೇ ಪ್ರಭುವಾದ ನಾರಾಯಣಸ್ವರೂಪನಾದ ವ್ಯಾಸನೆಂದು ತಿಳಿ; ಕಮಲನೇತ್ರನಾದ (ಆತನಿಗಿಂತ) ಮತ್ತೆ ಯಾರು ತಾನೆ ಮಹಾಭಾರತಕರ್ತೃವಾಗಿದ್ದಾನು ?' ಎಂದು ವಿಷ್ಣುಪುರಾಣವಚನದಿಂದ (ಇದು ಸಿದ್ಧವಾಗುತ್ತದೆ). ಸ್ವರೂಪ, ಸಾಮರ್ಥ್ಯ - ಮುಂತಾದವುಗಳಿಗೆ ಪ್ರಚ್ಯುತಿಯಿಲ್ಲದಿರುವದರಿಂದ **ದೃಢನು**. ಸಂಹಾರಕಾಲದಲ್ಲಿ ಒಮ್ಮೆಗೆ ಎಲ್ಲಾ ಜಂತುಗಳನ್ನೂ ಎಳೆದುಕೊಳ್ಳುತ್ತಾನೆ,

1. ಜ್ಞಾನವೈರಾಗ್ಯವಿಲ್ಲದವರಿಗೆ ಇವನನ್ನು ಅರಿಯುವದಕ್ಕೆ ಆಗಲಾರದು - ಎಂದರ್ಥ.
2. ಅವಿಷಯನಾದ್ದರಿಂದ ಎಂದರ್ಥ. 'ಅವಸ್ಥಾರಹಿತತ್ವಾತ್' ಎಂಬುದಕ್ಕಿಂತ ಈ ಪಾಠವೇ ಮೇಲು.

ಆದ್ದರಿಂದ **ಸಂಕರ್ಷಣನು**, ಸ್ವರೂಪದಿಂದ ಕೆಳಕ್ಕೆ ಬೀಳುವದಿಲ್ಲವಾದ್ದರಿಂದ **ಅಚ್ಯುತನು**. **'ಸಂಕರ್ಷಣೋಽಚ್ಯುತಃ'** ಎಂಬುದು ವಿಶೇಷಣಸಹಿತವಾಗಿರುವ ಒಂದೇ ನಾಮವು.

## (ಭಾಷ್ಯ)

೫೫೩. ಸ್ವರಶ್ಮೀನಾಂ ಸಂವರಣಾತ್ ಸಾಯಂ ಗತಃ ಸೂರ್ಯೋ ವರುಣಃ। 'ಇಮಂ ಮೇ ವರುಣ ಶ್ರುಧೀ ಹವಮ್' (ತೈ.ಸಂ.೨-೧-೧೧) ಇತಿ ಮನ್ತ್ರವರ್ಣಾತ್। ೫೫೪. ವರುಣಸ್ಯಾಪತ್ಯಂ ವಸಿಷ್ಠೋ ಅಗಸ್ತ್ಯೋ ವಾ ವಾರುಣಃ. ೫೫೫. ವೃಕ್ಷ ಇವ ಅಚಲತಯಾ ಸ್ಥಿತ ಇತಿ ವೃಕ್ಷಃ। 'ವೃಕ್ಷ ಇವ ಸ್ತಬ್ಧೋ ದಿವಿ ತಿಷ್ಠತ್ಯೇಕಃ' (ಶ್ವೇ. ೩-೯) ಇತಿ ಶ್ರುತೇಃ। ೫೫೬. ವ್ಯಾಪ್ತ್ಯರ್ಥಾದಕ್ಷತೇರ್ಧಾತೋ ಪುಷ್ಕರೋಪಪದಾತ್, ಅಣ್ಪ್ರತ್ಯಯೋ ಪುಷ್ಕರಾಕ್ಷಃ। ಹೃದಯಪುಣ್ಡರೀಕೇ ಚಿನ್ತಿತಃ ಸ್ವರೂಪೇಣ ಪ್ರಕಾಶತೇ ಇತಿ ವಾ ಪುಷ್ಕರಾಕ್ಷಃ। ೫೫೭. ಸೃಷ್ಟಿಸ್ಥಿತ್ಯನ್ತಕರ್ಮಾಣಿ ಮನಸೈವ ಕರೋತೀತಿ ಮಹಾಮನಾಃ। "ಮನಸೈವ ಜಗತ್ಸೃಷ್ಟಿಂ ಸಂಹಾರಂ ಚ ಕರೋತಿ ಯಃ" (ವಿ.ಪು.೫-೨೩-೧೫) ಇತಿ ವಿಷ್ಣುಪುರಾಣೇ॥೭೨॥

## (ಭಾಷ್ಯಾರ್ಥ)

ತನ್ನ ರಶ್ಮಿಗಳನ್ನು ಹಿಂದಕ್ಕೆಳೆದುಕೊಳ್ಳುವದರಿಂದ ಸಾಯಂಕಾಲದ ಸೂರ್ಯನು **ವರುಣನು**. "ವರುಣನೆ, ಈ ನನ್ನ ಆಹ್ವಾನವನ್ನು ಕೇಳು" ಎಂಬ ಮಂತ್ರವರ್ಣದಿಂದ (ಇದು ಸಾಯಂಸೂರ್ಯನ ವಿಷಯವೆಂದು ಗೊತ್ತಾಗುತ್ತದೆ). ವರುಣನ ಮಗನಾದ ವಸಿಷ್ಠನು, ಅಥವಾ ಅಗಸ್ತ್ಯನು, **ವಾರುಣನು**. "ವೃಕ್ಷದಂತೆ ಅಲುಗಾಡದೆ ದ್ಯೋತನಸ್ವಭಾವನಾದ (ಆದಿತ್ಯನಲ್ಲಿ) ಒಬ್ಬನೇ ಇದ್ದುಕೊಂಡಿರುತ್ತಾನೆ" ಎಂಬ ಶ್ರುತಿಯಿರುವದರಿಂದ ವೃಕ್ಷದಂತೆ ಅಚಲನಾಗಿರುವವನು, ಸ್ಥಿರವಾಗಿರುವಾತನು, ಆದ್ದರಿಂದ **ವೃಕ್ಷನು**. ವ್ಯಾಪ್ತಿ ಎಂಬರ್ಥದ 'ಅಕ್ಷೂ' ಧಾತುವಿಗೆ ಪುಷ್ಕರ ಎಂಬ ಉಪಪದವು ಸೇರಿರುವಾಗ ಅಣ್ಪ್ರತ್ಯಯವು ಬರಲಾಗಿ **ಪುಷ್ಕರಾಕ್ಷ** (ಎಂಬ ರೂಪವಾಗುವದು).[1] ಅಥವಾ ಹೃದಯಪುಂಡರೀಕ್ಷದಲ್ಲಿ ಚಿಂತನೆಮಾಡಿದರೆ ಸ್ವರೂಪದಿಂದ ಬೆಳಗುತ್ತಾನೆ, ಆದ್ದರಿಂದ **ಪುಷ್ಕರಾಕ್ಷನು**[2] (ಎಂದೂ ಹೇಳಬಹುದು). ಸೃಷ್ಟಿಸ್ಥಿತಿಲಯಗಳೆಂಬ ಕರ್ಮಗಳನ್ನು ಮನಸ್ಸಿನಿಂದಲೇ ಮಾಡುತ್ತಾನೆ, ಆದ್ದರಿಂದ

1. ಹೃದಯಪುಂಡರೀಕವನ್ನು ಅಂತರ್ಯಾಮಿಯಾಗಿ ವ್ಯಾಪಿಸಿಕೊಂಡಿರುತ್ತಾನೆ - ಎಂದು ಈ ವಾಕ್ಯಕ್ಕೆ ಅರ್ಥ.
2. ಸ್ವಚ್ಛವಾಗಿರುವ ಅಂತಃಕರಣದಲ್ಲಿ ತೋರಿಕೊಳ್ಳುತ್ತಾನಾದ್ದರಿಂದ ಸರ್ವವ್ಯಾಪಿಯಾಗಿದ್ದರೂ ಪುಷ್ಕರ (ಹೃದಯಪುಂಡರೀಕ)ವನ್ನು ವ್ಯಾಪಿಸಿಕೊಂಡಿದ್ದಾನೆ - ಎಂದು ಹೇಳಿದೆ ಎಂಬುದು ನಾಮದ ಅರ್ಥಸ್ವಾರಸ್ಯವೆಂದು ಭಾವ.

**ಮಹಾಮನನು** ಎನಿಸಿರುತ್ತಾನೆ. "ಮನಸ್ಸಿನಿಂದಲೇ ಜಗತ್ತಿನ ಸೃಷ್ಟಿಯನ್ನೂ ಸಂಹಾರವನ್ನೂ ಯಾವಾತನು ಮಾಡುತ್ತಾನೋ" ಎಂದು **ವಿಷ್ಣುಪುರಾಣದಲ್ಲಿದೆ.**

**ಭಗವಾನ್ ಭಗಹಾಽಽನನ್ದೀ ವನಮಾಲೀ ಹಲಾಯುಧಃ।**
**ಆದಿತ್ಯೋ ಜ್ಯೋತಿರಾದಿತ್ಯಃ ಸಹಿಷ್ಣುರ್ಗತಿಸತ್ತಮಃ ॥೭೩॥**

**(ಭಾಷ್ಯ)**

೫೫೮. "ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ। ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀಙ್ಗನಾ" (ವಿ.ಪು. ೬-೫-೭೪) ಸೋಽಸ್ಯಾಸ್ತೀತಿ ಭಗವಾನ್। "ಉತ್ಪತ್ತಿಂ ಪ್ರಲಯಂ ಚೈವ ಭೂತಾನಾಮಾಗತಿಂ ಗತಿಮ್। ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ" (ವಿ.ಪು.೬-೫-೭೮) ಇತಿ ವಿಷ್ಣುಪುರಾಣೇ। ೫೫೯. ಐಶ್ವರ್ಯಾದಿಕಂ ಸಂಹಾರಸಮಯೇ ಹನ್ತೀತಿ ಭಗಹಾ। ೫೬೦. ಸುಖಸ್ವರೂಪತ್ವಾದಾನನ್ದೀ। ಸರ್ವಸಂಪತ್ಸಮೃದ್ಧತ್ವಾದಾನನ್ದೀ ವಾ। ೫೬೧. ಭೂತತನಾತ್ರರೂಪಾಂ ವೈಜಯನ್ತ್ಯಾಖ್ಯಾಂ ವನಮಾಲಾಂ ವಹನ್ ವನಮಾಲೀ। ೫೬೨. ಹಲಮ್ ಆಯುಧಮಸ್ಯೇತಿ ಹಲಾಯುಧಃ ಬಲಭದ್ರಾಕೃತಿಃ॥

**(ಭಾಷ್ಯಾರ್ಥ)**

'ಸಮಗ್ರವಾದ ಐಶ್ವರ್ಯ, ವೀರ್ಯ, ಕೀರ್ತಿ, ಸಂಪತ್ತು, ಜ್ಞಾನವೈರಾಗ್ಯಗಳು (ಈ) ಆರಕ್ಕೂ ಭಗ ಎಂದು ಹೆಸರು' ಆ (ಭಗವು) ಈತನಿಗಿದೆಯಾಗಿ **ಭಗವಾನ್** (ಎಂದು ಹೆಸರು). "ಪ್ರಾಣಿಗಳ ಉತ್ಪತ್ತಿ, ಪ್ರಲಯ, ಬರುವಿಕೆ, ಹೋಗುವಿಕೆ, ವಿದ್ಯೆ, ಅವಿದ್ಯೆ - (ಇವುಗಳನ್ನು, ಅರಿತಿರುತ್ತಾನಲ್ಲ, ಆತನನ್ನು **ಭಗವಾನ್** ಎಂದು ಕರೆಯಬೇಕು" ಎಂದು **ವಿಷ್ಣುಪುರಾಣದಲ್ಲಿದೆ.** ಐಶ್ವರ್ಯವೇ ಮುಂತಾದವುಗಳನ್ನು ಸಂಹಾರಕಾಲದಲ್ಲಿ ನಾಶಮಾಡುತ್ತಾನಾದ್ದರಿಂದ **ಭಗಹಾ** - (ಎನಿಸುವನು). ಸುಖ ಸ್ವರೂಪನಾಗಿರುವದರಿಂದ **ಆನಂದಿಯು.** ಸರ್ವಸಂಪತ್ತುಗಳಿಂದಲೂ ತುಂಬಿರುತ್ತಾನೆ, ಆದ್ದರಿಂದ **ಆನಂದೀ** ಎಂದಾದರೂ (ಅರ್ಥ). ಭೂತತನಾತ್ರೆಗಳ ರೂಪವಾದ 'ವೈಜಯಂತಿ' ಎಂಬ ಹೆಸರಿನ ವನಮಾಲೆಯನ್ನು ಧರಿಸಿರುವವನು **ವನಮಾಲಿಯು.** ಹಲವು (ನೇಗಿಲು) ಈತನಿಗೆ ಆಯುಧವು; ಆದ್ದರಿಂದ **ಹಲಾಯುಧನು,** ಬಲಭದ್ರನ ರೂಪದವನು.

**(ಭಾಷ್ಯ)**

೫೬೩. ಅದಿತ್ಯಾಂ ಕಶ್ಯಪಾದ್ ವಾಮನರೂಪೇಣ ಜಾತ ಇತ್ಯಾದಿತ್ಯಃ। ೫೬೪. ಜ್ಯೋತಿಷಿ ಸವಿತೃಮಣ್ಡಲೇ ಸ್ಥಿತೋ ಜ್ಯೋತಿರಾದಿತ್ಯಃ। ೫೬೫. ದ್ವನ್ದ್ವಾನಿ

ಶೀತೋಷ್ಣಾದೀನಿ ಸಹತೇ ಇತಿ ಸಹಿಷ್ಣುಃ। ೫೬೬. ಗತಿಶ್ಚಾಸೌ ಸತ್ತಮಶ್ಚೇತಿ ಗತಿಸತ್ತಮಃ॥೭೩॥

ಭಾಷ್ಯಾರ್ಥ

ಅದಿತಿಯಲ್ಲಿ ಕಶ್ಯಪನಿಂದ ವಾಮನರೂಪದಿಂದ ಹುಟ್ಟಿದನು, ಆದ್ದರಿಂದ **ಆದಿತ್ಯನು.** ಜ್ಯೋತಿಯಲ್ಲಿ ಎಂದರೆ ಸೂರ್ಯಮಂಡಲದಲ್ಲಿ ಇರುವವನು, (ಆದ್ದರಿಂದ) **ಜ್ಯೋತಿರಾದಿತ್ಯನು.** ದ್ವಂದ್ವಗಳಾದ ಶೀತೋಷ್ಣಾದಿಗಳನ್ನು ಸಹಿಸಿಕೊಳ್ಳುತ್ತಾನೆ, ಆದ್ದರಿಂದ **ಸಹಿಷ್ಣುವು.** ಗತಿಯಾದ ಶ್ರೇಷ್ಠನು, ಆದ್ದರಿಂದ **ಗತಿಸತ್ತಮನು.**

**ಸುಧನ್ವಾ ಖಣ್ಡಪರಶುರ್ದಾರುಣೋ ದ್ರವಿಣಪ್ರದಃ।**
**ದಿವಃಸ್ಪೃಕ್ ಸರ್ವದೃಗ್ ವ್ಯಾಸೋ ವಾಚಸ್ಪತಿರಯೋನಿಜಃ ॥೭೪॥**

(ಭಾಷ್ಯ)

೫೬೭. ಶೋಭನಮ್ ಇನ್ದ್ರಿಯಾದಿಮಯಂ ಶಾರ್ಙ್ಗಂ ಧನುಃ ಅಸ್ಯಾಸ್ತೀತಿ ಸುಧನ್ವಾ। ೫೬೮. ಶತ್ರೂಣಾಂ ಖಣ್ಡನಾತ್ ಖಣ್ಡಃ ಪರಶುಃ ಅಸ್ಯ ಜಾಮದಗ್ನ್ಯಾಕೃತೇಃ ಇತಿ ಖಣ್ಡಪರಶುಃ। ಅಖಣ್ಡಃ ಪರಶುಃ ಅಸ್ಯಾಸ್ತೀತಿ ವಾ ಅಖಣ್ಡಪರಶುಃ। ೫೬೯.ಸನ್ಮಾರ್ಗವಿರೋಧಿನಾಂ ದಾರುಣತ್ವಾತ್ ದಾರುಣಃ। ೫೭೦. ದ್ರವಿಣಂ ವಾಞ್ಛಿತಂ ಭಕ್ತೇಭ್ಯಃ ಪ್ರದದಾತಿ ಇತಿ ದ್ರವಿಣಪ್ರದಃ॥

(ಭಾಷ್ಯಾರ್ಥ)

ಇಂದ್ರಿಯಾದಿಮಯವಾದ ಒಳ್ಳೆಯ ಶಾರ್ಙ್ಗಧನಸ್ಸು ಈತನಿಗಿದೆಯಾದ್ದರಿಂದ **ಸುಧನ್ವನು.** ಶತ್ರುಗಳನ್ನು ಖಂಡಿಸುವದರಿಂದ ಖಂಡವೆನಿಸುವ ಪರಶು (ಗಂಡುಕೊಡಲಿಯು) ಜಮದಗ್ನಿಯ ಮಗನಾದ (ಪರಶುರಾಮನ) ಆಕೃತಿಯುಳ್ಳ ಈತನಿಗೆ ಇದೆ; ಆದ್ದರಿಂದ (ಈತನು) **ಖಂಡಪರಶುವು.** ಅಥವಾ ಖಂಡವಾಗದ ಪರಶು ಈತನಿಗೆ ಇದೆಯಾದರಿಂದ (ಈತನು) **ಅಖಂಡಪರಶುವು.** ಸನ್ಮಾರ್ಗಕ್ಕೆ ಅಡ್ಡಬರುವವರಿಗೆ ದಾರುಣ (ಕ್ರೂರ)ನಾಗಿರುವದರಿಂದ **ದಾರುಣನು.** ಭಕ್ತರಿಗೆ ಬೇಕಾಗಿರುವ (ಧನ)ವನ್ನು ಕೊಡುತ್ತಾನಾದ್ದರಿಂದ **ದ್ರವಿಣಪ್ರದನು.**

(ಭಾಷ್ಯ)

೫೭೧. ದಿವಃ ಸ್ಪರ್ಶನಾತ್ ದಿವಃಸ್ಪೃಕ್। ೫೭೨. ಸರ್ವದೃಶಾಂ ಸರ್ವಜ್ಞಾನಾನಾಂ ವಿಸ್ತಾರಕೃದ್ ವ್ಯಾಸಃ ಸರ್ವದೃಗ್ವ್ಯಾಸಃ। ಅಥವಾ ಸರ್ವಾ ಚ ಸಾ ದೃಕ್ ಚ ಇತಿ ಸರ್ವದೃಕ್, ಸರ್ವಾಕಾರಂ ಜ್ಞಾನಂ ಸರ್ವಸ್ಯ ದೃಷ್ಟಿತ್ವಾದ್ ವಾ ಸರ್ವದೃಕ್। ಋಗ್ವೇದಾದಿವಿಭಾಗೇನ ಚತುರ್ಧಾ ವೇದಾಃ ವ್ಯಸ್ತಾಃ ಕೃತಾಃ - ಆದ್ಯೋ ವೇದಃ ಏಕವಿಂಶತಿಧಾ ಕೃತಃ ದ್ವಿತೀಯಃ ಏಕೋತ್ತರಶತಧಾ ಕೃತಃ, ಸಾಮವೇದಃ ಸಹಸ್ರಧಾ

ಕೃತಃ, ಅಥರ್ವವೇದೋ ನವಧಾ ಶಾಖಾಭೇದೇನ ಕೃತಃ। ಏವಮನ್ಯಾನಿ ಚ ಪುರಾಣಾನಿ ವ್ಯಸ್ತಾನಿ ಅನೇನ ಇತಿ ವ್ಯಾಸಃ। ೫೭೩. ವಾಚಸ್ಪತಿರಯೋನಿಜಃ, ವಾಚೋ ವಿದ್ಯಾಯಾಃ ಪತಿಃ ವಾಚಸ್ಪತಿಃ। ಜನನ್ಯಾಂ ನ ಜಾಯತ ಇತ್ಯಯೋನಿಜಃ, ಇತಿ ಸವಿಶೇಷಣಮೇಕಂ ನಾಮ॥೭೪॥

## (ಭಾಷ್ಯಾರ್ಥ)

ಸ್ವರ್ಗವನ್ನು ಮುಟ್ಟುವದರಿಂದ ದಿವಃಸ್ಪೃಕ್, ಸರ್ವದೃಕ್ಕುಗಳನ್ನು ಎಂದರೆ ಎಲ್ಲಾ ಜ್ಞಾನಗಳನ್ನೂ ವಿಸ್ತಾರವಾಗಿ (ವಿಂಗಡ) ಮಾಡಿದವನಾದ್ದರಿಂದ ವ್ಯಾಸನು **ಸರ್ವದೃಗ್ವ್ಯಾಸನು**. ಅಥವಾ ಎಲ್ಲಾ ದೃಕ್ಕು ಎಂದರೆ ಎಲ್ಲಾ ರೂಪವಾಗಿರುವ ಜ್ಞಾನವು, ಎಲ್ಲಕ್ಕೂ ದೃಷ್ಟಿಯಾಗಿರುವದರಿಂದ **ಸರ್ವದೃಕ್**. ಋಗ್ವೇದವೇ ಮುಂತಾದ ವಿಭಾಗಗಳಾಗಿ ವೇದಗಳು ನಾಲ್ಕು ಬಗೆಯಾಗಿ ವಿಂಗಡಿಸಲ್ಪಟ್ಟಿವೆ. ಮೊದಲನೆಯ ವೇದವು ಇಪ್ಪತ್ತೊಂದು ಬಗೆಯಾಗಿ ವಿಂಗಡಮಾಡಲ್ಪಟ್ಟಿದೆ. ಎರಡನೆಯದು ನೂರೊಂದುಬಗೆಯಾಗಿ ಮಾಡಲ್ಪಟ್ಟಿದೆ; ಸಾಮವೇದವು ಸಾವಿರವಿಧವಾಗಿ ಮಾಡಲ್ಪಟ್ಟಿದೆ; ಅಥರ್ವವೇದವು ಶಾಖಾಭೇದದಿಂದ ಒಂಬತ್ತುಬಗೆಯಾಗಿ ವಿಂಗಡಿಸಲ್ಪಟ್ಟಿದೆ. ಹೀಗೆಯೇ ಮಿಕ್ಕ ಪುರಾಣಗಳೂ ಈತನಿಂದ ವಿಂಗಡಮಾಡಲ್ಪಟ್ಟಿವೆ; ಆದ್ದರಿಂದ **ವ್ಯಾಸನು**. **ವಾಚಸ್ಪತಿರಯೋನಿಜಃ** - ಎಂದು ಸವಿಶೇಷಣವಾದ ಒಂದೇ ನಾಮವು. ವಾಚಃ ಎಂದರೆ ವಿದ್ಯೆಗೆ ಪತಿಯು **ವಾಚಸ್ಪತಿಯು**. ಜನನಿಯಲ್ಲಿ[1] ಹುಟ್ಟುವದಿಲ್ಲವಾದ್ದರಿಂದ **ಅಯೋನಿಜನು**.

**ತ್ರಿಸಾಮಾ ಸಾಮಗಃ ಸಾಮ ನಿರ್ವಾಣಂ ಭೇಷಜಂ ಭಿಷಕ್।**
**ಸಂನ್ಯಾಸಕೃಚ್ಛಮಃ ಶಾನ್ತೋ ನಿಷ್ಠಾ ಶಾನ್ತಿಃ ಪರಾಯಣಮ್ ॥೭೫॥**

## (ಭಾಷ್ಯ)

೫೭೪. ದೇವವ್ರತಸಮಾಖ್ಯೈಃ ತ್ರಿಭಿಃ ಸಾಮಭಿಃ ಸಾಮಗೈಃ ಸ್ತುತ ಇತಿ ತ್ರಿಸಾಮಾ। ೫೭೫. ಸಾಮ ಗಾಯತೀತಿ ಸಾಮಗಃ। ೫೭೬. 'ವೇದಾನಾಂ ಸಾಮವೇದೋಽಸ್ಮಿ' (ಗೀ.೧೦-೨೨) ಇತಿ ಭಗವದ್ವಚನಾತ್ ಸಾಮವೇದಃ ಸಾಮ। ೫೭೭. ಸರ್ವದುಃಖೋಪಶಮಲಕ್ಷಣಂ ಪರಮಾನನ್ದರೂಪಂ ನಿರ್ವಾಣಮ್। ೫೭೮. ಸಂಸಾರರೋಗಸ್ಯೌಷಧಂ ಭೇಷಜಮ್। ೫೭೯. ಸಂಸಾರರೋಗನಿರ್ಮೋಕ್ಷಕಾರಿಣೀಂ ಪರಾಂ ವಿದ್ಯಾಮುಪದಿದೇಶ ಗೀತಾಸು ಇತಿ ಭಿಷಕ್। 'ಭಿಷಕ್ತಮಂ ತ್ವಾ ಭಿಷಜಾಂ ಶೃಣೋಮಿ' (ಋ.೨-೪-೩೩-೪) ಇತಿ ಶ್ರುತೇಃ॥

1. 'ಯೋನ್ಯಾಮ್' ಎಂಬ ಮೈ॥ ಪಾಠಕ್ಕನುಗುಣವಾಗಿ ಯೋನಿಯಲ್ಲಿ ಎಂದೇ ಕನ್ನಡಿಸಬೇಕು.

## (ಭಾಷ್ಯಾರ್ಥ)

ದೇವವ್ರತಗಳೆಂದು ಹೆಸರಾಗಿರುವ ಮೂರು ಸಾಮಗಳಿಂದ ಸ್ತುತನಾಗಿರುವದರಿಂದ **ತ್ರಿಸಾಮನು.** ಸಾಮವನ್ನು ಗಾನಮಾಡುವದರಿಂದ **ಸಾಮಗನು.** 'ವೇದಗಳೊಳಗೆ ಸಾಮವೇದವು ನಾನಾಗಿರುವೆ' - ಎಂಬ ಭಗವದ್ವಚನವಿರುವದರಿಂದ ಸಾಮವೇದವೇ **ಸಾಮ.** (ಆ ರೂಪದವನು ಈತನು). ಎಲ್ಲಾ ದುಃಖವನ್ನೂ ಶಾಂತಿಗೊಳಿಸುವ ರೂಪದ ಪರಮಾನಂದರೂಪನಾಗಿರುವದು **ನಿರ್ವಾಣವು.** ಸಂಸಾರರೋಗಕ್ಕೆ ಔಷಧವು **ಭೇಷಜವು.** ಸಂಸಾರರೋಗದಿಂದ ಬಿಡುಗಡೆಯನ್ನುಂಟುಮಾಡುವ ಪರವಿದ್ಯೆಯನ್ನು ಗೀತೆಗಳಲ್ಲಿ ಉಪದೇಶಮಾಡಿದನು; ಆದ್ದರಿಂದ **ಭಿಷಕ್** (=ವೈದ್ಯನು) ಎನಿಸುವನು. 'ವೈದ್ಯರಲ್ಲೆಲ್ಲ ಉತ್ತಮನಾದ ವೈದ್ಯನೆಂದು ನಿನ್ನನ್ನು ಕೇಳಿದೇನೆ' ಎಂಬ ಶ್ರುತಿಯು (ಇದಕ್ಕೆ ಪ್ರಮಾಣ).

## (ಭಾಷ್ಯ)

೫೮೦. ಮೋಕ್ಷಾರ್ಥಂ ಚತುರ್ಥಮಾಶ್ರಮಂ ಕೃತವಾನಿತಿ ಸಂನ್ಯಾಸಕೃತ್। ೫೮೧. ಸಂನ್ಯಾಸಿನಾಂ ಪ್ರಾಧಾನ್ಯೇನ ಜ್ಞಾನಸಾಧನಂ ಶಮಮಾಚಷ್ಟೇ ಇತಿ ಶಮಃ। 'ಯತೀನಾಂ ಪ್ರಶಮೋ ಧರ್ಮೋ ನಿಯಮೋ ವನವಾಸಿನಾಮ್। ದಾನಮೇವ ಗೃಹಸ್ಥಾನಾಂ ಶುಶ್ರೂಷಾ ಬ್ರಹ್ಮಚಾರಿಣಾಮ್॥' (?) ಇತಿ ಸ್ಮೃತೇಃ। 'ತತ್ಕರೋತಿ ತದಾಚಷ್ಟೇ' (ಚುರಾದಿಗಣಸೂತ್ರಮ್) ಇತಿ ಣಿಚಿ ಪಚಾದ್ಯಚಿ ಕೃತೇ ರೂಪಂ ಶಮ ಇತಿ। ಸರ್ವಭೂತಾನಾಂ ಶಮಯಿತೇತಿ ವಾ ಶಮಃ। ೫೮೨. ವಿಷಯಸುಖೇಷು ಅಸಜ್ಗತಯಾ ಶಾನ್ತಃ। 'ನಿಷ್ಕಲಂ ನಿಷ್ಕ್ರಿಯಂ ಶಾನ್ತಮ್' (ಶ್ವೇ.೬-೧೯) ಇತಿ ಶ್ರುತೇಃ। ೫೮೩. ಪ್ರಲಯೇ ನಿತರಾಂ ತತ್ರೈವ ತಿಷ್ಠನ್ತಿ ಭೂತಾನಿ ಇತಿ ನಿಷ್ಠಾ। ೫೮೪. ಸಮಸ್ತಾವಿದ್ಯಾ ನಿವೃತ್ತಿಃ ಶಾನ್ತಿಃ, ಸಾ ಬ್ರಹ್ಮೈವ। ೫೮೫. ಪರಮ್ ಉತ್ಕೃಷ್ಟಮ್ ಅಯನಂ ಸ್ಥಾನಂ ಪುನರಾವೃತ್ತಿಶಜ್ಕಾರಹಿತಮ್ ಇತಿ ಪರಾಯಣಮ್। ಪುಲ್ಲಿಜ್ಗಪಕ್ಷೇ ಬಹುವ್ರೀಹಿಃ॥೭೫॥

## (ಭಾಷ್ಯಾರ್ಥ)

ಮೋಕ್ಷಕ್ಕಾಗಿ ನಾಲ್ಕನೆಯ ಆಶ್ರಮವನ್ನು ಮಾಡಿರುತ್ತಾನೆ; ಆದ್ದರಿಂದ **ಸಂನ್ಯಾಸಕೃತ್** (ಎನಿಸುವನು). ಸಂನ್ಯಾಸಿಗಳಿಗೆ ಮುಖ್ಯವಾಗಿ ಜ್ಞಾನಸಾಧನವಾದ ಶಮವನ್ನು ಹೇಳಿರುತ್ತಾನೆ; ಆದ್ದರಿಂದ **ಶಮನು.** 'ಯತಿಗಳಿಗೆ ಪ್ರಶಮವೇ ಧರ್ಮವು. ವನವಾಸಿಗಳಿಗೆ ನಿಯಮವು (ಧರ್ಮವು), ಗೃಹಸ್ಥನಿಗೆ ದಾನವೇ (ಧರ್ಮವು), ಬ್ರಹ್ಮಚಾರಿಗಳಿಗೆ ಶುಶ್ರೂಷೆಯೇ (ಧರ್ಮವು)' (?) ಎಂಬ ಸ್ಮೃತಿಯಿಂದ[1] ಇದು ಸಿದ್ಧವಾಗಿದೆ. 'ತತ್ಕರೋತಿ ತದಾಚಷ್ಟೇ' ಎಂಬ (ಗಣಸೂತ್ರದಿಂದ) ಣಿಚ್ ಪ್ರತ್ಯಯವು ಬಂದು, ಪಚಾದಿಗಣವಾದ್ದರಿಂದ ಅಚ್‌ಪ್ರತ್ಯಯವನ್ನು ಸೇರಿಸಲಾಗಿ **'ಶಮಃ'** ಎಂಬ ರೂಪವಾಗುತ್ತದೆ. ಸರ್ವಪ್ರಾಣಿಗಳನ್ನೂ ನಾಶಗೊಳಿಸುತ್ತಾನೆ, ಆದ್ದರಿಂದ **ಶಮ**

1. ಈ ಸ್ಮೃತಿಯು ಯಾವುದೆಂಬುದು ತಿಳಿಯಲಿಲ್ಲ

ಎಂದಾದರೂ (ಅರ್ಥವನ್ನು) ಹೇಳಬಹುದು. ಯಾವ ಸುಖಗಳಲ್ಲಿಯೂ ಆಸಕ್ತಿಯಿಲ್ಲದವನಾದ್ದರಿಂದ **ಶಾಂತನು**. 'ನಿಷ್ಕಲನು, ನಿಷ್ಕ್ರಿಯನು, ಶಾಂತನು' ಎಂಬ ಶ್ರುತಿಯಿಂದ (ಈ ಅರ್ಥವು ಸಿದ್ಧವಾಗುತ್ತದೆ). ಪ್ರಲಯಕಾಲದಲ್ಲಿ ಸಂಪೂರ್ಣವಾಗಿ (ನಿತರಾಮ್) ಆತನಲ್ಲಿಯೇ ಪ್ರಾಣಿಗಳು ಇರುತ್ತವೆ (ತ್ರಿಷ್ಠನ್ತಿ), ಆದ್ದರಿಂದ (ಆತನು) ನಿಷ್ಠಾ (ಎನಿಸಿರುತ್ತಾನೆ). ಅವಿದ್ಯೆಯು ತೀರ ತೊಲಗುವದು **ಶಾಂತಿಯು**. ಅದು ಬ್ರಹ್ಮವೇ. ಪರ ಎಂದರೆ ಉತ್ಕೃಷ್ಟವಾದ, ಮರಳಿ ಹಿಂದಕ್ಕೆ ಬರುವದೆಂಬ ಶಂಕೆಯಿಲ್ಲದ ಅಯನವು ಸ್ಥಾನವು (ಈತನು), ಆದ್ದರಿಂದ **ಪರಾಯಣವು**. 'ಪರಾಯಣಃ' ಎಂಬ ಪುಲ್ಲಿಂಗ (ಪಾಠವಿರುವ) ಪಕ್ಷದಲ್ಲಿ (ಉತ್ಕೃಷ್ಟಸ್ಥಾನವು ಯಾವನಿಗಿದೆಯೋ ಆತನು) ಎಂದು ಬಹುವ್ರೀಹಿಯನ್ನಿಟ್ಟುಕೊಂಡು (ವ್ಯಾಖ್ಯಾನ) ಮಾಡಬೇಕು.

**ಶುಭಾಙ್ಗಃ ಶಾನ್ತಿದಃ ಸ್ರಷ್ಟಾ ಕುಮುದಃ ಕುವಲೇಶಯಃ।**
**ಗೋಹಿತೋ ಗೋಪತಿರ್ಗೋಪ್ತಾ ವೃಷಭಾಕ್ಷೋ ವೃಷಪ್ರಿಯಃ ॥೭೬॥**

(ಭಾಷ್ಯ)

೫೮೬. ಸುನ್ದರಾಂ ತನುಂ ಧಾರಯನ್ ಶುಭಾಙ್ಗಃ। ೫೮೭. ರಾಗದ್ವೇಷಾದಿನಿರ್ಮೋಕ್ಷಲಕ್ಷಣಾಂ ಶಾನ್ತಿಂ ದದಾತೀತಿ ಶಾನ್ತಿದಃ। ೫೮೮. ಸರ್ಗಾದೌ ಸರ್ವಭೂತಾನಿ ಸಸರ್ಜ ಇತಿ ಸ್ರಷ್ಟಾ। ೫೮೯. ಕೌ ಭೂಮ್ಯಾಂ ಮೋದತ ಇತಿ ಕುಮುದಃ। ೫೯೦. ಕೋಃ ಕ್ಷಿತೇಃ ವಲನಾತ್ ಸಂಸರಣಾತ್ ಕುವಲಂ ಜಲಮ್, ತಸ್ಮಿನ್ ಶೇತೇ ಇತಿ ಕುವಲೇಶಯಃ। 'ಶಯವಾಸವಾಸಿಷ್ವಕಾಲಾತ್' (ಪಾ.೬-೩-೧೮) ಇತಿ ಅಲುಕ್ ಸಪ್ತಮ್ಯಾಃ। ಕುವಲಸ್ಯ ಬದರೀಫಲಸ್ಯ ಮಧ್ಯೇ ಶೇತೇ ತಕ್ಷಕಃ, ಸೋಽಪಿ ತಸ್ಯ ವಿಭೂತಿರಿತಿ ವಾ ಹರಿಃ ಕುವಲೇಶಯಃ। ಕೌ ಭೂಮ್ಯಾಂ ವಲತೇ ಸಂಶ್ರಯತೇ ಇತಿ ಸರ್ಪಾಣಾಮುದರಂ ಕುವಲಮ್, ತಸ್ಮಿನ್ ಶೇಷೋದರೇ ಶೇತೇ ಇತಿ ಕುವಲೇಶಯಃ॥

(ಭಾಷ್ಯಾರ್ಥ)

ಸುಂದರವಾದ ಶರೀರವನ್ನು ಧರಿಸಿದಾತನು, (ಆದ್ದರಿಂದ) **ಶುಭಾಙ್ಗನು**. ರಾಗದ್ವೇಷಾದಿಗಳನ್ನು ಬಿಡಿಸುವದೆಂಬ ಶಾಂತಿಯನ್ನು ಕೊಡುತ್ತಾನೆ, ಆದ್ದರಿಂದ **ಶಾನ್ತಿದನು**. ಸೃಷ್ಟಿಯನ್ನು ಮಾಡುವಾಗ ಎಲ್ಲ ಭೂತಗಳನ್ನೂ ಸೃಷ್ಟಿಸಿರುತ್ತಾನೆ, ಆದ್ದರಿಂದ **ಸ್ರಷ್ಟಾ** (ಎನಿಸುವನು). ಕು ಎಂದರೆ ಭೂಮಿ, ಅದರಲ್ಲಿ ಮೋದಿಸುತ್ತಾನೆ, ಆದ್ದರಿಂದ **ಕುಮುದನು**. ಕು ಎಂದರೆ ಭೂಮಿ, ಅದರಲ್ಲಿ ವಲನಮಾಡುವದರಿಂದ ಸಂಚರಿಸು (=ಪ್ರವಹಿಸು) ತ್ತಿರುವದರಿಂದ ಕುವಲವೆಂದರೆ ಜಲವು, ಅದರಲ್ಲಿ

ಮಲಗಿರುತ್ತಾನೆ, ಆದ್ದರಿಂದ **ಕುವಲೇಶಯನು.** 'ಶಯವಾಸವಾಸಿಷ್ವಕಾಲಾತ್' ಎಂಬ ವ್ಯಾಕರಣಸೂತ್ರದಿಂದ 'ಕುವಲೇ' ಎಂಬ ಸಪ್ತಮೀವಿಭಕ್ತಿಗೆ ಲೋಪವಾಗಿಲ್ಲ. ಅಥವಾ ಕುವಲದ, ಎಂದರೆ ಬದರೀಫಲದ ನಡುವೆ ಶಯನಮಾಡುತ್ತಿರುವವನು ತಕ್ಷಕನು, ಆತನೂ ಆ (ಹರಿಗೆ) ವಿಭೂತಿಯಾಗಿರುವದರಿಂದ, ಅವನು **ಕುವಲೇಶಯನು.** ಕು ಎಂದರೆ ಭೂಮಿ, ಅದರಲ್ಲಿ ವಲತೇ - ಆಶ್ರಯಿಸಿಕೊಂಡು ಹರಿದಾಡುತ್ತಿರುತ್ತದೆ, ಆದ್ದರಿಂದ ಕುವಲವೆಂದರೆ ಸರ್ಪಗಳ ಹೊಟ್ಟೆ; ಅದರಲ್ಲಿ ಎಂದರೆ ಶೇಷನ ಉದರದ ಮೇಲೆ ಮಲಗಿರುತ್ತಾನೆ, ಆದ್ದರಿಂದ **ಕುವಲೇಶಯನು.**

## (ಭಾಷ್ಯ)

೫೯೧. ಗವಾಂ ವೃದ್ಧ್ಯರ್ಥಂ ಗೋವರ್ಧನಂ ಧೃತವಾನ್ ಇತಿ ಗೋಭ್ಯೋ ಹಿತಃ **ಗೋಹಿತಃ।** ಗೋರ್ಭೂಮೇಃ ಭಾರಾವತರಣೇಚ್ಛಯಾ ಶರೀರಗ್ರಹಣಂ ಕುರ್ವನ್ ವಾ ಗೋಹಿತಃ। ೫೯೨. ಗೋರ್ಭೂಮ್ಯಾಃ ಪತಿಃ ಗೋಪತಿಃ। ೫೯೩. ರಕ್ಷಕೋ ಜಗತಃ ಇತಿ ಗೋಪ್ತಾ। ಸ್ವಮಾಯಯಾ ಸ್ವಮಾತ್ಮಾನಂ ಸಂವೃಣೋತೀತಿ ವಾ ಗೋಪ್ತಾ। ೫೯೪. ಸಕಲಾನ್ ಕಾಮಾನ್ ವರ್ಷುಕೇ ಅಕ್ಷಿಣೀ ಅಸ್ಯೇತಿ, ವೃಷಭೋ ಧರ್ಮಃ, ಸ ಏವ ವಾ ದೃಷ್ಟಿರಸ್ಯೇತಿ ವೃಷಭಾಕ್ಷಃ। ೫೯೫. ವೃಷೋ ಧರ್ಮಃ ಪ್ರಿಯೋ ಯಸ್ಯ ಸ ವೃಷಪ್ರಿಯಃ। 'ವಾ ಪ್ರಿಯಸ್ಯ' (ವಾರ್ತಿಕಮ್ ೨೪೨೮) ಇತಿ ಪೂರ್ವನಿಪಾತವಿಕಲ್ಪವಿಧಾನಾತ್। ಪರನಿಪಾತಃ, ವೃಷಶ್ಚಾಸೌ ಪ್ರಿಯಶ್ಚ ಇತಿ ವಾ ॥೭೬॥

## (ಭಾಷ್ಯಾರ್ಥ)

ಗೋಗಳ ಏಳಿಗೆಗಾಗಿ ಗೋವರ್ಧನವನ್ನು ಎತ್ತಿದನು, ಆದ್ದರಿಂದ ಗೋಗಳಿಗೆ ಹಿತನು, **ಗೋಹಿತನು.** ಗೋವಿನ ಎಂದರೆ ಭೂಮಿಯ ಭಾರವನ್ನು ಇಳಿಯಿಸುವ ಇಚ್ಛೆಯಿಂದ ಶರೀರಗ್ರಹಣವನ್ನು ಮಾಡಿದವನಾದ್ದರಿಂದ **ಗೋಹಿತನು** - ಎಂದಾದರೂ (ಅರ್ಥವನ್ನು ಹೇಳಬಹುದು). ಗೋವಿನ ಎಂದರೆ ಭೂಮಿಯ ಪತಿ, ಆದ್ದರಿಂದ **ಗೋಪತಿಯು.** ಜಗತ್ತನ್ನು ರಕ್ಷಿಸುವಾತನಾದ್ದರಿಂದ **ಗೋಪ್ತಾ** (ಎನಿಸುವನು). ಅಥವಾ ತನ್ನ ಸ್ವರೂಪವನ್ನು ತನ್ನ ಮಾಯೆಯಿಂದ ಮರೆಮಾಡಿಕೊಂಡಿರುತ್ತಾನೆ, ಆದ್ದರಿಂದ **ಗೋಪ್ತಾ** (ಎಂದೂ ಹೇಳಬಹುದು). ಎಲ್ಲಾ ಕಾಮಗಳನ್ನೂ ಮಳೆಗರೆಯುವ ಕಣ್ಣುಗಳು ಈತನವು, ಆದ್ದರಿಂದ **ವೃಷಭಾಕ್ಷನು.** ಅಥವಾ ವೃಷಭವೆಂದರೆ ಧರ್ಮವು, ಅದೇ ಈತನಿಗೆ ಕಣ್ಣು, ಆದ್ದರಿಂದ **ವೃಷಭಾಕ್ಷನು.** ವೃಷವು ಎಂದರೆ ಧರ್ಮವು ಯಾವನಿಗೆ ಪ್ರಿಯವೋ ಅವನು **ವೃಷಪ್ರಿಯನು.** 'ವಾ ಪ್ರಿಯಸ್ಯ' ಎಂಬ (ವಾರ್ತಿಕದಿಂದ) ಪೂರ್ವನಿಪಾತಕ್ಕೆ ವಿಕಲ್ಪವನ್ನು ಹೇಳಿರುವದರಿಂದ

ಪರನಿಪಾತವಾಗಿದೆ. (ಆದ್ದರಿಂದ ಈ ಶಬ್ದರೂಪವು ಸಾಧು). ಅಥವಾ ವೃಷನಾದ ಪ್ರಿಯನು - ಎಂದಾದರೂ (ಈ ಶಬ್ದಕ್ಕೆ ವಿಗ್ರಹವಾಕ್ಯವನ್ನು ಹೇಳಬಹುದು.[1])

**ಅನಿವರ್ತೀ ನಿವೃತ್ತಾತ್ಮಾ ಸಂಕ್ಷೇಪ್ತಾ ಕ್ಷೇಮಕೃಚ್ಛಿವಃ।**
**ಶ್ರೀವತ್ಸವಕ್ಷಾಃ ಶ್ರೀವಾಸಃ ಶ್ರೀಪತಿಃ ಶ್ರೀಮತಾಂ ವರಃ ॥೬೬॥**

### (ಭಾಷ್ಯ)

೫೯೬. ದೇವಾಸುರಸಂಗ್ರಾಮಾನ್ನ ನಿವರ್ತತ ಇತಿ ಅನಿವರ್ತೀ। ವೃಷಪ್ರಿಯತ್ವಾದ್ ಧರ್ಮಾನ್ನ ನಿವರ್ತತ ಇತಿ ವಾ। ೫೯೭. ಸ್ವಭಾವತೋ ವಿಷಯೇಭ್ಯೋ ನಿವೃತ್ತ ಆತ್ಮಾ ಮನೋಽಸ್ಯೇತಿ ನಿವೃತ್ತಾತ್ಮಾ। ೫೯೮. ವಿಸ್ತೃತಂ ಜಗತ್ ಸಂಹಾರಸಮಯೇ ಸೂಕ್ಷ್ಮರೂಪೇಣ ಸಂಕ್ಷಿಪನ್ ಸಙ್ಕ್ಷೇಪ್ತಾ। ೫೯೯. ಉಪಾತ್ತಸ್ಯ ಪರಿರಕ್ಷಣಂ ಕರೋತೀತಿ ಕ್ಷೇಮಕೃತ್। ೬೦೦. ಸ್ವನಾಮಸ್ಮೃತಿಮಾತ್ರೇಣ ಪಾವಯನ್ ಶಿವಃ॥

ಇತಿ ನಾಮ್ನಾಂ ಷಷ್ಠಂ ಶತಮ್॥

### (ಭಾಷ್ಯಾರ್ಥ)

ದೇವಾಸುರರ ಸಂಗ್ರಾಮದಲ್ಲಿ (ಎಂದಿಗೂ) ಹಿಂಜರಿಯುವದಿಲ್ಲ, ಆದ್ದರಿಂದ **ಅನಿವರ್ತೀ** (ಎನಿಸುವನು). ಅಥವಾ ವೃಷಪ್ರಿಯನಾಗಿರುವದರಿಂದ ಧರ್ಮವನ್ನು ಬಿಟ್ಟು ಹಿಂಜರಿಯುವದಿಲ್ಲವಾದ್ದರಿಂದ (**ಅನಿವರ್ತೀ** - ಎಂದಾಗಬಹುದು). ಸ್ವಭಾವದಿಂದಲೇ ವಿಷಯಗಳಿಂದ ಹಿಂತಿರುಗಿದ ಮನಸ್ಸುಳ್ಳಾತನು, ಆದ್ದರಿಂದ **ನಿವೃತ್ತಾತ್ಮನು**. (ಬಿಡಿಬಿಡಿಯಾಗಿ) ಹರಡಿಕೊಂಡಿರುವ ಜಗತ್ತನ್ನು ಸಂಹಾರಕಾಲದಲ್ಲಿ ಸೂಕ್ಷ್ಮರೂಪದಿಂದ ಸಂಕ್ಷೇಪಗೊಳಿಸುವದರಿಂದ **ಸಂಕ್ಷೇಪ್ತಾ** ಎನಿಸುವನು. ಸಂಪಾದಿಸಿಕೊಂಡದ್ದನ್ನು ಕಾಪಾಡಿಕೊಡುವನಾದ್ದರಿಂದ **ಕ್ಷೇಮಕೃತ್** (ಎಂದು ಹೆಸರು). ತನ್ನ ನಾಮವನ್ನು ಸ್ಮರಿಸಿದ ಮಾತ್ರದಿಂದ ಪವಿತ್ರಗೊಳಿಸುತ್ತಾನಾದ್ದರಿಂದ **ಶಿವನು.**

ಹೀಗೆ ಇಲ್ಲಿಗೆ ನಾಮಗಳ ಆರನೆಯ ಶತಕವನ್ನು ವಿವರಿಸಿದ್ದಾಯಿತು.

---

1. ಪ್ರಿಯವೃಷ ಎಂದು ಪ್ರಿಯಶಬ್ದವು ಪೂರ್ವಪದವಾಗಲೇ ಬೇಕೆಂಬ ನಿಯಮವಿಲ್ಲ; ಆದ್ದರಿಂದ ವೃಷಪ್ರಿಯ ಎಂದು ಪ್ರಿಯಶಬ್ದವು ಇಲ್ಲಿ ಉತ್ತರಪದವಾಗಿದೆ ಎಂದರ್ಥ.

## ಸಪ್ತಮಶತಕ

### (ಭಾಷ್ಯ)

೬೦೧. ಶ್ರೀವತ್ಸಸಂಜ್ಞಂ ಚಿಹ್ನಮಸ್ಯ ವಕ್ಷಸಿ ಸ್ಥಿತಮ್ ಇತಿ ಶ್ರೀವತ್ಸವಕ್ಷಾಃ। ೬೦೨. ಅಸ್ಯ ವಕ್ಷಸಿ ಶ್ರೀರನಪಾಯಿನೀ ವಸತೀತಿ ಶ್ರೀವಾಸಃ। ೬೦೩. ಅಮೃತಮನ್ಥನೇ ಸರ್ವಾನ್ ಸುರಾಸುರಾದೀನ್ ವಿಹಾಯ ಶ್ರೀರೇನಂ ಪತಿತ್ವೇನ ವರಯಾಮಾಸ ಇತಿ ಶ್ರೀಪತಿಃ। ಶ್ರೀಃ ಪರಾಶಕ್ತಿಃ ತಸ್ಯಾಃ ಪತಿರಿತಿ ವಾ। 'ಪರಾಽಸ್ಯಶಕ್ತಿರ್ವಿವಿಧೈವ ಶ್ರೂಯತೇ' (ಶ್ವೇ.೬-೮) ಇತಿ ಶ್ರುತೇಃ। ೬೦೪. ಋಗ್ಯಜುಃಸಾಮಲಕ್ಷಣಾ ಶ್ರೀರ್ಯೇಷಾಂ ತೇಷಾಂ ಸರ್ವೇಷಾಂ ಶ್ರೀಮತಾಂ ವಿರಿಞ್ಚ್ಯಾದೀನಾಂ ಪ್ರಧಾನಭೂತಃ ಶ್ರೀಮತಾಂ ವರಃ। 'ಋಚಃ ಸಾಮಾನಿ ಯಜೂಗ್ಂಷಿ। ಸಾ ಹಿ ಶ್ರೀರಮೃತಾ ಸತಾಮ್' (ತೈ.ಬ್ರಾ. ೧-೨-೧) ಇತಿ ಶ್ರುತೇಃ ॥೭೭॥

### (ಭಾಷ್ಯಾರ್ಥ)

'ಶ್ರೀವತ್ಸ' ಎಂಬ ಹೆಸರಿನ ಚಿಹ್ನವು ಈತನ ಎದೆಯಲ್ಲಿದೆ, ಆದ್ದರಿಂದ **ಶ್ರೀವತ್ಸವಕ್ಷನು.** ಈತನ ಎದೆಯ ಮೇಲೆ ಎಂದಿಗೂ ಅಗಲದೆ ಶ್ರೀಯು ವಾಸವಾಗಿರುತ್ತಾಳೆ, ಆದ್ದರಿಂದ **ಶ್ರೀವಾಸನು.** ಅಮೃತಮಥನ ಸಮಯದಲ್ಲಿ ಸುರಾಸುರೆಲ್ಲರನ್ನೂ ಬಿಟ್ಟು ಶ್ರೀಯು ಈತನನ್ನು ಪತಿಯಾಗಿ ವರಿಸಿದಳು, ಆದ್ದರಿಂದ (ಈತನು) **ಶ್ರೀಪತಿಯು.** ಅಥವಾ ಶ್ರೀ ಎಂದರೆ ಪರಾಶಕ್ತಿಯು, ಆ (ಶಕ್ತಿಗೆ) ಪತಿಯಾದ್ದರಿಂದ **ಶ್ರೀಪತಿಯು.** 'ಈತನ ಪರಾಶಕ್ತಿಯು ವಿವಿಧವಾಗಿದೆ ಎಂದೇ ಶ್ರುತವಾಗಿದೆ' ಎಂಬ ಶ್ರುತಿಯು (ಇಲ್ಲಿ ಪ್ರಮಾಣ). ಋಗ್ಯಜುಸ್ಸಾಮರೂಪವಾದ ಶ್ರೀಯು ಯಾರುಯಾರಿಗೆ ಇರುತ್ತದೆಯೋ ಅಂಥವರಲ್ಲೆಲ್ಲ ಎಂದರೆ ಬ್ರಹ್ಮನೇ ಮುಂತಾದವರಲ್ಲೆಲ್ಲ ಮುಖ್ಯನು, ಆದ್ದರಿಂದ **ಶ್ರೀಮತಾಂವರನು.** 'ಋಕ್ಕುಗಳು, ಸಾಮಗಳು, ಯಜುಸ್ಸುಗಳು.ಅದೇ ಅಲ್ಲವೆ ಸತ್ಪುರುಷರಿಗೆ ಅಮೃತವಾದ ಶ್ರೀಯು?' ಎಂಬ ಶ್ರುತಿಯ ಪ್ರಮಾಣದಿಂದ(ಈ ಅರ್ಥ).

**ಶ್ರೀದಃ ಶ್ರೀಶಃ ಶ್ರೀನಿವಾಸಃ ಶ್ರೀನಿಧಿಃ ಶ್ರೀವಿಭಾವನಃ।**
**ಶ್ರೀಧರಃ ಶ್ರೀಕರಃ ಶ್ರೇಯಃ ಶ್ರೀಮಾನ್ ಲೋಕತ್ರಯಾಶ್ರಯಃ॥ ॥೭೮॥**

### ಭಾಷ್ಯ

೬೦೫. ಶ್ರಿಯಂ ದದಾತಿ ಭಕ್ತಾನಾಮಿತಿ ಶ್ರೀದಃ। ೬೦೬. ಶ್ರಿಯ ಈಶಃ ಶ್ರೀಶಃ। ೬೦೭. ಶ್ರೀಮತ್ಸು ನಿತ್ಯಂ ವಸತೀತಿ ಶ್ರೀನಿವಾಸಃ। ಶ್ರೀಶಬ್ದೇನ ಶ್ರೀಮನ್ತೋ ಲಕ್ಷ್ಯನ್ತೇ। ೬೦೮. ಸರ್ವಶಕ್ತಿಮಯೇಽಸ್ಮಿನ್ ಅಖಿಲಾಃ ಶ್ರಿಯೋ ನಿಧೀಯನ್ತ ಇತಿ

ಶ್ರೀನಿಧಿಃ। ೬೦೯. ಕರ್ಮಾನುರೂಪೇಣ ವಿವಿಧಾಃ ಶ್ರಿಯಃ ಸರ್ವಭೂತಾನಾಂ ವಿಭಾವಯತೀತಿ ಶ್ರೀವಿಭಾವನಃ॥

(ಭಾಷ್ಯಾರ್ಥ)

ಭಕ್ತರಿಗೆ ಶ್ರೀಯನ್ನು ಕೊಡುತ್ತಾನೆ, ಆದ್ದರಿಂದ **ಶ್ರೀದನು**. ಶ್ರೀಗೆ ಒಡೆಯನಾಗಿರುವದರಿಂದ **ಶ್ರೀಶನು**. ಶ್ರೀವಂತರಲ್ಲಿ ಯಾವಾಗಲೂ ವಾಸಮಾಡಿಕೊಂಡಿರುತ್ತಾನೆ, ಆದ್ದರಿಂದ **ಶ್ರೀನಿವಾಸನು**. (ಇಲ್ಲಿ) ಶ್ರೀಶಬ್ದದಿಂದ ಶ್ರೀಮಂತರನ್ನು ಲಕ್ಷಣೆಯಿಂದ (ಹೇಳಲಾಗಿದೆ). ಸರ್ವಶಕ್ತಿರೂಪನಾದ ಈತನಲ್ಲಿ ಎಲ್ಲಾ ಶ್ರೀಗಳೂ ಇದ್ದುಕೊಂಡಿರುತ್ತವೆ, ಆದ್ದರಿಂದ **ಶ್ರೀನಿಧಿಯು**. ಕರ್ಮಕ್ಕೆ ಅನುಗುಣವಾಗಿ ಬಗೆಬಗೆಯ ಶ್ರೀಗಳನ್ನು ಎಲ್ಲಾ ಭೂತಗಳಿಗೂ ಉಂಟುಮಾಡುತ್ತಾನೆ, ಆದ್ದರಿಂದ **ಶ್ರೀವಿಭಾವನನು**.

(ಭಾಷ್ಯ)

೬೧೦. ಸರ್ವಭೂತಾನಾಂ ಜನನೀಂ ಶ್ರಿಯಂ ವಕ್ಷಸಿ ವಹನ್ ಶ್ರೀಧರಃ। ೬೧೧. ಸ್ಮರತಾಂ ಸ್ತುವತಾಮ್ ಅರ್ಚಯತಾಂ ಚ ಭಕ್ತಾನಾಂ ಶ್ರಿಯಂ ಕರೋತೀತಿ ಶ್ರೀಕರಃ। ೬೧೨. ಅನಪಾಯಿಸುಖಾವಾಪ್ತಿಲಕ್ಷಣಂ ಶ್ರೇಯಃ, ತಚ್ಚ ಪರಸ್ಯೈವ ರೂಪಮಿತಿ ಶ್ರೇಯಃ। ೬೧೩. ಶ್ರಿಯೋಽಸ್ಯ ಸನ್ತೀತಿ ಶ್ರೀಮಾನ್। ೬೧೪. ತ್ರಯಾಣಾಂ ಲೋಕಾನಾಮಾಶ್ರಯತ್ವಾತ್ ಲೋಕತ್ರಯಾಶ್ರಯಃ॥ ೭೮॥

(ಭಾಷ್ಯಾರ್ಥ)

ಸರ್ವಭೂತಗಳಿಗೂ ಜನನಿಯಾದ ಶ್ರೀಯನ್ನು ಎದೆಯಲ್ಲಿ ಧರಿಸಿರುತ್ತಾನೆ, ಆದ್ದರಿಂದ **ಶ್ರೀಧರನು**. ಸ್ಮರಿಸುತ್ತಿರುವ ಸ್ತುತಿಸುತ್ತಿರುವ ಮತ್ತು ಅರ್ಚಿಸುತ್ತಿರುವ ಭಕ್ತರುಗಳಿಗೆ ಶ್ರೀಯನ್ನುಂಟುಮಾಡುತ್ತಾನೆ, ಆದ್ದರಿಂದ **ಶ್ರೀಕರನು**. ಎಂದಿಗೂ ಬಿಟ್ಟಗಲದ ಸುಖಪ್ರಾಪ್ತಿರೂಪವಾದದ್ದು ಶ್ರೇಯಸ್ಸು; ಆ ಮೋಕ್ಷವು ಪರಮಾತ್ಮನದೇ ರೂಪವು, ಆದ್ದರಿಂದ ಆತನು **ಶ್ರೇಯಸ್ಸೆನಿಸಿರುತ್ತಾನೆ**. ಈತನಿಗೆ ಶ್ರೀಗಳು ಇವೆ, ಆದ್ದರಿಂದ (ಈತನು) **ಶ್ರೀಮಾನ್**. ಮೂರು ಲೋಕಗಳಿಗೂ ಆಶ್ರಯನಾಗಿರುವದರಿಂದ **ಲೋಕತ್ರಯಾಶ್ರಯನು**.

**ಸ್ವಕ್ಷಃ ಸ್ವಙ್ಗಃ ಶತಾನನ್ದೋ ನನ್ದಿರ್ಜ್ಯೋತಿರ್ಗಣೇಶ್ವರಃ।**
**ವಿಜಿತಾತ್ಮಾऽವಿಧೇಯಾತ್ಮಾ ಸತ್ಕೀರ್ತಿಶ್ಛಿನ್ನಸಂಶಯಃ ॥೭೯॥**

(ಭಾಷ್ಯ)

೬೧೫ ಶೋಭನೇ ಪುಣ್ಡರೀಕಾಕಾರೇ ಅಕ್ಷಿಣೀ ಅಸ್ಯ ಇತಿ ಸ್ವಕ್ಷಃ। ೬೧೬. ಶೋಭನಾನ್ಯಙ್ಗಾನಿ ಅಸ್ಯ ಇತಿ ಸ್ವಙ್ಗಃ। ೬೧೭. ಏಕ ಏವ ಪರಮಾನನ್ದಃ

ಉಪಾಧಿಭೇದಾತ್ ಶತಧಾ ಭಿದ್ಯತ ಇತಿ ಶತಾನನ್ದಃ। 'ಏತಸ್ಯೈವಾನನ್ದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ' (ಬೃ. ೪-೩-೩೨) ಇತಿ ಶ್ರುತೇಃ। ೬೧೮. ಪರಮಾನನ್ದವಿಗ್ರಹೋ ನನ್ದಿಃ। ೬೧೯. ಜ್ಯೋತಿರ್ಗಣಾನಾಮೀಶ್ವರಃ ಜ್ಯೋತಿರ್ಗಣೇಶ್ವರಃ। "ತಮೇವ ಭಾನ್ತಮನುಭಾತಿ ಸರ್ವಮ್" (ಮುಂ.೨.೨.೧೧) ಇತಿ ಶ್ರುತೇಃ। 'ಯದಾದಿತ್ಯಗತಂ ತೇಜಃ' (ಗೀ.೧೫-೧೨) ಇತ್ಯಾದಿಸ್ಮೃತೇಶ್ಚ॥

(ಭಾಷ್ಯಾರ್ಥ)

ಒಳ್ಳೆಯ ಪುಂಡರೀಕದಂತೆ ಹೊಳೆಯುವ ಕಣ್ಣುಗಳು ಈತನವು, ಆದ್ದರಿಂದ **ಸ್ವಕ್ಷನು.** ಸುಂದರವಾದ ಅಂಗಗಳು ಈತನವು, ಆದ್ದರಿಂದ **ಸ್ವಂಗನು.** ಒಂದೇ ಆಗಿರುವ ಪರಮಾನಂದವು ಬೇರೆಬೇರೆಯ ಉಪಾಧಿಗಳಿಂದ ನೂರು ಬಗೆಯಾಗಿ ಭಿನ್ನವಾಗಿರುತ್ತದೆ, ಆದ್ದರಿಂದ **ಶತಾನಂದನು.** 'ಇದೇ ಆನಂದದ ಒಂದಂಶವನ್ನು ಮಿಕ್ಕ ಭೂತಗಳು ಉಪಜೀವಿಸಿಕೊಂಡಿರುತ್ತವೆ ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು). ಪರಮಾನಂದರೂಪನಾದ ಶರೀರವುಳ್ಳಾತನು, ಆದ್ದರಿಂದ **ನಂದಿಯು.** ಜ್ಯೋತಿಗಳ ಗಣಗಳಿಗೆ ಈಶ್ವರನು, **ಜ್ಯೋತಿರ್ಗಣೇಶ್ವರನು.** 'ಬೆಳಗುತ್ತಿರುವ ಆತನನ್ನೇ ಅನುಸರಿಸಿ ಎಲ್ಲವೂ ಹೊಳೆಯುತ್ತಿರುವದು' ಎಂಬ ಶ್ರುತಿಯಿಂದಲೂ 'ಆದಿತ್ಯನಲ್ಲಿರುವ ತೇಜಸ್ಸು ಯಾವದೋ' ಮುಂತಾದ ಸ್ಮೃತಿಯಿಂದಲೂ (ಈ ಅರ್ಥವು ಹೊಂದುತ್ತದೆ).

(ಭಾಷ್ಯ)

೬೨೦. ವಿಜಿತಃ ಆತ್ಮಾ ಮನೋ ಯೇನ ಸಃ ವಿಜಿತಾತ್ಮಾ। ೬೨೧. ನ ಕೇನಾಪಿ ವಿಧೇಯ ಆತ್ಮಾ ಸ್ವರೂಪಮಸ್ಯ ಇತಿ ಅವಿಧೇಯಾತ್ಮಾ। ೬೨೨. ಸತೀ ಅವಿತಥಾ ಕೀರ್ತಿಃ ಅಸ್ಯ ಇತಿ ಸತ್ಕೀರ್ತಿಃ। ೬೨೩. ಕರತಲಾಮಲಕವತ್ ಸರ್ವಂ ಸಾಕ್ಷಾತ್ಕೃತವತಃ ಕ್ವಾಪಿ ಸಂಶಯೋ ನಾಸ್ತೀತಿ ಛಿನ್ನಸಂಶಯಃ ॥೭೯॥

(ಭಾಷ್ಯಾರ್ಥ)

ಯಾವನಿಂದ, ಆತ್ಮವು ಎಂದರೆ ಮನಸ್ಸು ಗೆಲ್ಲಲ್ಪಟ್ಟಿರುವದೋ ಆ (ಈತನು) **ವಿಜಿತಾತ್ಮನು.** ಯಾರಿಗೂ ವಿಧೇಯವಾಗದ ಆತ್ಮವು ಎಂದರೆ ಸ್ವರೂಪವು ಯಾವಾತನದೋ ಆ (ಈತನು) **ಅವಿಧೇಯಾತ್ಮನು.** ಸತ್ತಾದ ಎಂದರೆ ಹುಸಿಯಾಗದ ಕೀರ್ತಿಯು ಈತನದು, ಆದ್ದರಿಂದ **ಸತ್ಕೀರ್ತಿಯು.** ಅಂಗೈನೆಲ್ಲಿಕಾಯಿಯಂತೆ ಎಲ್ಲವನ್ನೂ ಸಾಕ್ಷಾತ್ಕರಿಸಿಕೊಂಡಿರುವ (ಈತನಿಗೆ) ಯಾವದರಲ್ಲಿಯೂ ಸಂಶಯವಿಲ್ಲ, ಆದ್ದರಿಂದ **ಛಿನ್ನಸಂಶಯನು.**

**ಉದೀರ್ಣಃ ಸರ್ವತಶ್ಚಕ್ಷುರನೀಶಃ ಶಾಶ್ವತಸ್ಥಿರಃ।**
**ಭೂಶಯೋ ಭೂಷಣೋ ಭೂತಿರ್ವಿಶೋಕಃ ಶೋಕನಾಶನಃ ॥೮೦॥**

## (ಭಾಷ್ಯ)

೬೨೪. ಸರ್ವಭೂತೇಭ್ಯಃ ಸಮುದ್ರಿಕ್ತತ್ವಾತ್ ಉದೀರ್ಣಃ। ೬೨೫. ಸರ್ವತಃ ಸರ್ವಂ ಸ್ವಚೈತನ್ಯೇನ ಪಶ್ಯತೀತಿ ಸರ್ವತಶ್ಚಕ್ಷುಃ। 'ವಿಶ್ವತಶ್ಚಕ್ಷುಃ' (ಶ್ವೇ.೩-೨) ಇತಿ ಶ್ರುತೇಃ। ೬೨೬. ನ ವಿದ್ಯತೇ ಅಸ್ಯ ಈಶಃ ಇತಿ ಅನೀಶಃ। 'ನ ತಸ್ಯೇಶೇ ಕಶ್ಚನ (ಮ.ನಾ.೨) ಇತಿ ಶ್ರುತೇಃ। ೬೨೭. ಶಶ್ವದ್ ಭವನ್ನಪಿ ನ ವಿಕ್ರಿಯಾಂ ಕದಾಚಿದುಪೈತೀತಿ ಶಾಶ್ವತಸ್ಥಿರಃ ಇತಿ ನಾಮೈಕಮ್॥

## (ಭಾಷ್ಯಾರ್ಥ)

ಎಲ್ಲಾ ಪ್ರಾಣಿಗಳಿಗಿಂತಲೂ ಉತ್ಕೃಷ್ಟನಾಗಿರುವದರಿಂದ **ಉದೀರ್ಣನು**. ಎಲ್ಲಾ ಕಡೆಯಲ್ಲಿಯೂ ಎಲ್ಲವನ್ನೂ ತನ್ನ ಚೈತನ್ಯ(ಸ್ವರೂಪ)ದಿಂದ ನೋಡುತ್ತಿರುತ್ತಾನೆ, ಆದ್ದರಿಂದ **ಸರ್ವತಶ್ಚಕ್ಷುವು**. 'ಎಲ್ಲೆಲ್ಲಿಯೂ ಚಕ್ಷುವುಳ್ಳಾತನು' ಎಂಬ ಶ್ರುತಿಯಿಂದ (ಈ ನಾಮವು) ಒಪ್ಪುತ್ತದೆ. ಈತನಿಗೆ ಈಶ (ಒಡೆಯ)ನು ಇಲ್ಲ, ಆದ್ದರಿಂದ **ಅನೀಶನು**. 'ಆತನನ್ನು ಆಳುವವನು ಯಾವನೊಬ್ಬನೂ ಇಲ್ಲ' ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). ಯಾವಾಗಲೂ ಇರುವಾತನಾದರೂ ಎಂದಿಗೂ ಮಾರ್ಪಾಡನ್ನು ಪಡೆಯುವದಿಲ್ಲವಾದ್ದರಿಂದ **ಶಾಶ್ವತಸ್ಥಿರನು** ಎಂದು (ಇದು) ಒಂದೇ ನಾಮವು.

## (ಭಾಷ್ಯ)

೬೨೮. ಲಙ್ಕಾಂ ಪ್ರತಿ ಮಾರ್ಗಮನ್ವೇಷಯನ್ ಸಾಗರಂ ಪ್ರತಿ ಭೂಮೌ ಶೇತೇ ಇತಿ ಭೂಶಯಃ। ೬೨೯. ಸ್ವೇಚ್ಛಾವತಾರೈರ್ಬಹುಭಿಃ ಭೂಮಿಂ ಭೂಷಯನ್ ಭೂಷಣಃ। ೬೩೦. ಭೂತಿರ್ಭವನಮ್ ಸತ್ತಾ; ವಿಭೂತಿರ್ವಾ, ಸರ್ವವಿಭೂತೀನಾಂ ಕಾರಣತ್ವಾದ್ ವಾ ಭೂತಿಃ। ೬೩೧. ವಿಗತಃ ಶೋಕೋಽಸ್ಯ ಪರಮಾನನ್ದರೂಪತ್ವಾತ್ ಇತಿ ವಿಶೋಕಃ। ೬೩೨. ಸ್ಮೃತಿಮಾತ್ರೇಣ ಭಕ್ತಾನಾಂ ಶೋಕಂ ನಾಶಯತೀತಿ ಶೋಕನಾಶನಃ ॥೮೦॥

## (ಭಾಷ್ಯಾರ್ಥ)

ಲಂಕೆಯ ಮಾರ್ಗವನ್ನು ಹುಡುಕುತ್ತಾ ಸಾಗರದ ದಡದಲ್ಲಿ ಭೂಮಿಯ ಮೇಲೆ ಮಲಗಿದ್ದನು, ಆದ್ದರಿಂದ **ಭೂಶಯನು**. ತನ್ನ ಇಚ್ಛೆಯಿಂದ (ಪಡೆದ) ಅನೇಕ ಅವತಾರಗಳಿಂದ ಭೂಮಿಯನ್ನು ಅಲಂಕರಿಸಿರುತ್ತಾನೆ, (ಆದ್ದರಿಂದ) **ಭೂಷಣನು**. **ಭೂತಿ** ಎಂದರೆ ಇರುವದು, ಇರುವಿಕೆ, ಸತ್ತೆ, ಅಥವಾ ವಿಭೂತಿಯು. ಅಥವಾ ಎಲ್ಲಾ ವಿಭೂತಿಗಳಿಗೂ ಕಾರಣನಾಗಿರುವದರಿಂದ **ಭೂತಿ**(ಯೆಂದು) ಈ ನಾಮಕ್ಕೆ ವ್ಯಾಖ್ಯಾನಮಾಡಬಹುದು. ಪರಮಾನಂದರೂಪನಾಗಿರುವದರಿಂದ ಇವನಿಗೆ ಶೋಕವಿಲ್ಲವಾಗಿದೆ, ಆದ್ದರಿಂದ **ವಿಶೋಕನು**. ಸ್ಮರಿಸಿದಮಾತ್ರದಿಂದ ಭಕ್ತರ ಶೋಕವನ್ನು ನಾಶಗೊಳಿಸುತ್ತಾನೆ, ಆದ್ದರಿಂದ **ಶೋಕನಾಶನನು**.

**ಅರ್ಚಿಷ್ಮಾನರ್ಚಿತಃ ಕುಮ್ಭೋ ವಿಶುದ್ಧಾತ್ಮಾ ವಿಶೋಧನಃ।**
**ಅನಿರುದ್ಧೋಽಪ್ರತಿರಥಃ ಪ್ರದ್ಯುಮ್ನೋಽಮಿತವಿಕ್ರಮಃ। ॥೮೧॥**

## (ಭಾಷ್ಯ)

೬೩೩. ಅರ್ಚಿಷ್ಮನ್ತಃ ಯದೀಯೇನಾರ್ಚಿಷಾ ಚನ್ದ್ರಸೂರ್ಯಾದಯಃ ಸ ಏವ ಮುಖ್ಯಃ ಅರ್ಚಿಷ್ಮಾನ್। ೬೩೪. ಸರ್ವಲೋಕಾರ್ಚಿತೈರ್ವಿರಿಞ್ಚ್ಯಾದಿಭಿರಪ್ಯರ್ಚಿತಃ ಇತಿ ಅರ್ಚಿತಃ। ೬೩೫. ಕುಮ್ಭವದ್ ಅಸ್ಮಿನ್ ಸರ್ವಂ ಪ್ರತಿಷ್ಠಿತಮಿತಿ ಕುಮ್ಭಃ। ೬೩೬. ಗುಣತ್ರಯಾತೀತತಯಾ ವಿಶುದ್ಧಶ್ಚಾಸಾವಾತ್ಮೇತಿ ವಿಶುದ್ಧಾತ್ಮಾ। ೬೩೭. ಸ್ಮೃತಿಮಾತ್ರೇಣ ಪಾಪಾನಾಂ ಕ್ಷರಣಾತ್ ವಿಶೋಧನಃ॥

## (ಭಾಷ್ಯಾರ್ಥ)

ಯಾವಾತನ ಬೆಳಕಿನಿಂದ ಚಂದ್ರಸೂರ್ಯಾದಿಗಳು ಬೆಳಕುಳ್ಳವರಾಗಿರುವರೋ ಆತನೇ ಮುಖ್ಯ(ವಾದ ಅರ್ಥದಲ್ಲಿ) **ಅರ್ಚಿಷ್ಮಂತನು.** ಎಲ್ಲಾ ಜನರಿಂದಲೂ ಅರ್ಚಿತರಾಗಿರುವ ಬ್ರಹ್ಮಾದಿಗಳಿಂದ ಅರ್ಚಿತ - (ಪೂಜಿತ)ನಾಗಿರುವಾತನು, ಆದ್ದರಿಂದ **ಅರ್ಚಿತನು.** ಕುಂಭದಲ್ಲಿ ಹೇಗೋ ಹಾಗೆ ಈತನಲ್ಲಿ ಎಲ್ಲವೂ ಇದ್ದುಕೊಂಡಿದೆ, ಆದ್ದರಿಂದ **ಕುಂಭನು.** (ಸತ್ತ್ವವೇ ಮುಂತಾದ) ಮೂರು ಗುಣಗಳನ್ನು ಮೀರಿರುವನಾದ್ದರಿಂದ ವಿಶುದ್ಧವಾಗಿರುವ ಆತ್ಮನಿವನು ಆದ್ದರಿಂದ **ವಿಶುದ್ಧಾತ್ಮನು.** ಸ್ಮರಿಸಿದಮಾತ್ರದಿಂದ ಪಾಪಗಳನ್ನು ಕ್ಷಯಿಸುವಾತನು, ಆದ್ದರಿಂದ **ವಿಶೋಧನನು.**

## (ಭಾಷ್ಯ)

೬೩೮. ಚತುರ್ವ್ಯೂಹೇಷು ಚತುರ್ಥಃ ವ್ಯೂಹಃ ಅನಿರುದ್ಧಃ। ನ ನಿರುಧ್ಯತೇ ಶತ್ರುಭಿಃ ಕದಾಚಿತ್ ಇತಿ ವಾ । ೬೩೯. ಪ್ರತಿರಥಃ ಪ್ರತಿಪಕ್ಷಃ ಅಸ್ಯ ನ ವಿದ್ಯತೇ ಇತಿ ಅಪ್ರತಿರಥಃ। ೬೪೦. ಪ್ರಕೃಷ್ಟಂ ದ್ಯುಮ್ನಂ ದ್ರವಿಣಮ್ ಅಸ್ಯ ಇತಿ ಪ್ರದ್ಯುಮ್ನಃ। ಚತುರ್ವ್ಯೂಹಾತ್ಮಾ ವಾ। ೬೪೧. ಅಮಿತಃ ಅತುಲಿತಃ ವಿಕ್ರಮಃ ಅಸ್ಯ ಇತಿ ಅಮಿತವಿಕ್ರಮಃ। ಅಹಿಂಸಿತವಿಕ್ರಮೋ ವಾ। ಮೀಙ್ ಹಿಂಸಾಯಾಮ್॥೮೧॥

## (ಭಾಷ್ಯಾರ್ಥ)

ನಾಲ್ಕು[1] ವ್ಯೂಹಗಳಲ್ಲಿ ನಾಲ್ಕನೆಯ ವ್ಯೂಹವು **ಅನಿರುದ್ಧನು.** ಅಥವಾ ಶತ್ರುಗಳಿಂದ ಎಂದಿಗೂ (ನ ನಿರುಧ್ಯತೇ) ಇವನು ತಡೆಗಟ್ಟಲಾರದವನು, ಆದ್ದರಿಂದ **ಅನಿರುದ್ಧನು.** ಪ್ರತಿರಥನು, ಎಂದರೆ ಪ್ರತಿಪಕ್ಷವಾದವನು ಇವನಿಗೆ ಇಲ್ಲವಾದ್ದರಿಂದ **ಅಪ್ರತಿರಥನು.** ಪ್ರಕೃಷ್ಟವಾದ (ಹೆಚ್ಚಿನ) ದ್ಯುಮ್ನವು, ಧನವು ಇವನಿಗೆ (ಇದೆ) ಆದ್ದರಿಂದ **ಪ್ರದ್ಯುಮ್ನನು.** ಅಥವಾ ನಾಲ್ಕು ವ್ಯೂಹಗಳೊಳಗೆ ಸೇರಿರುವಾತನು (ಪ್ರದ್ಯುಮ್ನನು). ಅಮಿತವಾದ ಎಂದರೆ, ಅಸಮಾನವಾದ ವಿಕ್ರಮವು ಈತನದು, ಆದ್ದರಿಂದ **ಅಮಿತವಿಕ್ರಮನು.**

1. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ - ಇವು ನಾಲ್ಕು ನಾರಾಯಣ ವ್ಯೂಹಗಳು.

ಅಹಿಂಸಿತ (ನಾಶಪಡಿಸುವದಕ್ಕಾಗದ) ವಿಕ್ರಮ (ವುಳ್ಳಾತನು) ಎಂದಾದರೂ (ಅರ್ಥವಾಗಬಹುದು).

**ಕಾಲನೇಮಿನಿಹಾ ವೀರಃ ಶೌರಿಃ ಶೂರಜನೇಶ್ವರಃ।**
**ತ್ರಿಲೋಕಾತ್ಮಾ ತ್ರಿಲೋಕೇಶಃ ಕೇಶವಃ ಕೇಶಿಹಾ ಹರಿಃ ॥೬೨॥**

(ಭಾಷ್ಯ)

೬೪೨. ಕಾಲನೇಮಿಮ್ ಅಸುರಂ ನಿಜಘಾನ ಇತಿ ಕಾಲನೇಮಿನಿಹಾ। ೬೪೬. ವೀರಃ ಶೂರಃ ೬೪೪. ಶೂರಕುಲೋದ್ಭವತ್ವಾತ್ ಶೌರಿಃ ೬೪೫. ಶೂರಜನಾನಾಂ ವಾಸವಾದೀನಾಂ ಶೌರ್ಯಾತಿಶಯೇನ ಈಷ್ಟೇ ಇತಿ ಶೂರಜನೇಶ್ವರಃ॥

(ಭಾಷ್ಯಾರ್ಥ)

'ಕಾಲನೇಮಿ' ಎಂಬ ಅಸುರನನ್ನು (ನಿಜಘಾನ) ಕೊಂದನು, ಆದ್ದರಿಂದ **ಕಾಲನೇಮಿನಿಹಾ** (ಎನಿಸುತ್ತಾನೆ). **ವೀರನು**, ಎಂದರೆ ಶೂರನು. ಶೂರನ ಕುಲದಲ್ಲಿ ಹುಟ್ಟಿದ್ದರಿಂದ **ಶೌರಿ**ಯು. ಶೂರಜನರಾದ ಇಂದ್ರನೇ ಮೊದಲಾದವರನ್ನು ಹೆಚ್ಚಿನ ಶೌರ್ಯದಿಂದ ಆಳುತ್ತಾನೆ; (ಈಷ್ಟೇ) ಆದ್ದರಿಂದ **ಶೂರಜನೇಶ್ವರನು.**

(ಭಾಷ್ಯ)

೬೪೬. ತ್ರಯಾಣಾಂ ಲೋಕಾನಾಮ್ ಅನ್ತರ್ಯಾಮಿತಯಾ ಆತ್ಮಾ ಇತಿ। ತ್ರಯೋ ಲೋಕಾ ಅಸ್ಮಾತ್ ಪರಮಾರ್ಥತೋ ನ ಭಿದ್ಯನ್ತ ಇತಿ ವಾ ತ್ರಿಲೋಕಾತ್ಮಾ। ೬೪೭. ತ್ರಯೋ ಲೋಕಾಃ ತದಾಜ್ಞಪ್ತಾಃ ಸ್ವೇಷು ಸ್ವೇಷು ಕರ್ಮಸು ವರ್ತನ್ತ ಇತಿ ತ್ರಿಲೋಕೇಶಃ। ೬೪೮. ಕೇಶಸಂಜ್ಞಿತಾಃ ಸೂರ್ಯಾದಿಸಙ್ಕ್ರಾನ್ತಾ ಅಂಶವಃ ತದ್ವತ್ತಯಾ ಕೇಶವಃ। 'ಅಂಶವೋ ಯೇ ಪ್ರಕಾಶನ್ತೇ ಮಮ ತೇ ಕೇಶಸಂಜ್ಞಿತಾಃ। ಸರ್ವಜ್ಞಾಃ ಕೇಶವಂ ತಸ್ಮಾನ್ಮಾಮಾಹುರ್ದ್ವಿಜಸತ್ತಮಾಃ।' (ಶಾಂತಿ ೩೪೧-೪೮) ಇತಿ ಮಹಾಭಾರತೇ। ಬ್ರಹ್ಮವಿಷ್ಣುಶಿವಾಖ್ಯಾಃ ಶಕ್ತಯಃ ಕೇಶಸಂಜ್ಞಿತಾಃ, ತದ್ವತ್ತಯಾ ವಾ ಕೇಶವಃ। 'ತ್ರಯಃ ಕೇಶಿನಃ' (ಋ.ಸಂ.೧-೧೬೪-೪೪) ಇತಿ ಶ್ರುತೇಃ। 'ಮತ್ಕೇಶೌ ವಸುಧಾತಲೇ' (ವಿ.ಪು.೫-೧-೬೦) ಇತಿ ಕೇಶಶಬ್ದಃ ಶಕ್ತಿಪರ್ಯಾಯತ್ವೇನ ಪ್ರಯುಕ್ತಃ। 'ಕೋ ಬ್ರಹ್ಮೇತಿ ಸಮಾಖ್ಯಾತ ಈಶೋಽಹಂ ಸರ್ವದೇಹಿನಾಮ್। ಆವಾಂ ತದಂಶಸಂಭೂತೌ ತಸ್ಮಾತ್ ಕೇಶವನಾಮವಾನ್' (ಹರಿ. ೩-೮೮-೪೮) ಇತಿ ಹರಿವಂಶೇ। ೬೪೯. ಕೇಶಿನಾಮಾನಮಸುರಂ ಹತವಾನಿತಿ ಕೇಶಿಹಾ। ೬೫೦. ಸಹೇತುಕಂ ಸಂಸಾರಂ ಹರತೀತಿ ಹರಿಃ॥ ೬೨॥

(ಭಾಷ್ಯಾರ್ಥ)

ಮೂರು ಲೋಕಗಳಿಗೂ ಅಂತರ್ಯಾಮಿಯಾಗಿರುವದರಿಂದ ಆತ್ಮನು, ಆದ್ದರಿಂದ **ತ್ರಿಲೋಕಾತ್ಮನು.** ಅಥವಾ ಮೂರು ಲೋಕಗಳೂ ಪರಮಾರ್ಥವಾಗಿ ಈತನಿಗಿಂತ

ಭಿನ್ನವಾಗಿಲ್ಲವಾದ್ದರಿಂದ **ತ್ರಿಲೋಕಾತ್ಮನು**. ಮೂರು ಲೋಕಗಳೂ ಅವನ ಅಪ್ಪಣೆಗೆ ಒಳಪಟ್ಟು ತಮ್ಮ ತಮ್ಮ ಕರ್ಮಗಳಲ್ಲಿ ಇರುತ್ತವೆಯಾದ್ದರಿಂದ **ತ್ರಿಲೋಕೇಶನು**. 'ಕೇಶ'ವೆಂಬ ಹೆಸರುಳ್ಳ ಕಿರಣಗಳು ಸೂರ್ಯಾದಿಗಳಲ್ಲಿ ಸೇರಿಕೊಂಡಿರುತ್ತವೆ. ಅವನ್ನುಳ್ಳವನಾದ್ದರಿಂದ **ಕೇಶವನು**. 'ಕೇಶಗಳೆಂಬ ಹೆಸರಿನ ಯಾವ ನನ್ನ ಅಂಶಗಳು ಪ್ರಕಾಶಿಸುತ್ತಿರುವವೋ, ಆದ್ದರಿಂದ ಸರ್ವಜ್ಞರಾದ ದ್ವಿಜಶ್ರೇಷ್ಠರು ನನ್ನನ್ನು ಕೇಶವನೆನ್ನುವರು' (ಆದರಿಂದ ನಾನು ಯುಗಯುಗದಲ್ಲಿಯೂ ಕೇಶವನೆಂದು ಲೋಕದಲ್ಲಿ ಪ್ರಖ್ಯಾತನಾಗಿರುತ್ತೇನೆ) ಎಂದು **ಮಹಾಭಾರತ**ದಲ್ಲಿದೆ. ಬ್ರಹ್ಮ ವಿಷ್ಣು ಶಿವ - ಎಂಬ ಹೆಸರಿನ ಶಕ್ತಿಗಳಿಗೆ ಕೇಶಗಳೆಂದು ಸಂಜ್ಞೆ, ಅವನ್ನುಳ್ಳವನಾದ್ದರಿಂದ **ಕೇಶವನು** - ಎಂದಾದರೂ ವ್ಯಾಖ್ಯೆ. 'ಮೂರು ಕೇಶಿಗಳು' ಎಂದು ಶ್ರುತಿಯಿರುವದರಿಂದ (ಹೀಗೆ ಅರ್ಥ). 'ಮತ್ಕೇಶೌ ವಸುಧಾತಲೇ' ಮುಂತಾದ ಕಡೆಗಳಲ್ಲಿ ಕೇಶಶಬ್ದವು ಶಕ್ತಿ ಎಂಬರ್ಥದಲ್ಲಿ ಪ್ರಯುಕ್ತವಾಗಿರುತ್ತದೆ. 'ಕ - ಎಂದು ಬ್ರಹ್ಮನ ಹೆಸರು, ನಾನು ಸರ್ವಜೀವರುಗಳಿಗೂ ಈಶನು; ನಾವಿಬ್ಬರೂ ಆತನ ಅಂಶದಿಂದ ಉಂಟಾದವರು, ಆದ್ದರಿಂದ (ಆತನು) ಕೇಶವನೆಂಬ ಹೆಸರುಳ್ಳವನು' ಎಂದು ಹರಿವಂಶದಲ್ಲಿದೆ. ಕೇಶಿ ಎಂಬ ಹೆಸರಿನ ಅಸುರನನ್ನು ಕೊಂದಿರುತ್ತಾನೆ, ಆದ್ದರಿಂದ **ಕೇಶಿಹಾ** (ಎಂದು ಹೆಸರು). ಸಂಸಾರವನ್ನು ಕಾರಣಸಹಿತನಾಗಿ ಹರಣಮಾಡುವದರಿಂದ **ಹರಿಯು**.

**ಕಾಮದೇವಃ ಕಾಮಪಾಲಃ ಕಾಮೀ ಕಾನ್ತಃ ಕೃತಾಗಮಃ।**
**ಅನಿರ್ದೇಶ್ಯವಪುರ್ವಿಷ್ಣುರ್ವೀರೋಽನನ್ತೋ ಧನಞ್ಜಯಃ ॥೮೩॥**

### (ಭಾಷ್ಯ)

೭೫೧. ಧರ್ಮಾದಿಪುರುಷಾರ್ಥಚತುಷ್ಟಯಂ ವಾಞ್ಛದ್ಭಿಃ ಕಾಮ್ಯತ ಇತಿ ಕಾಮಃ। ಸ ಚಾಸೌ ದೇವಶ್ಚೇತಿ ಕಾಮದೇವಃ। ೭೫೨. ಕಾಮಿನಾಂ ಕಾಮಾನ್ ಪಾಲಯತೀತಿ ಕಾಮಪಾಲಃ। ೭೫೩. ಪೂರ್ಣಕಾಮಸ್ವಭಾವತ್ವಾತ್ ಕಾಮೀ। ೭೫೪. ಅಭಿರೂಪತಮಂ ದೇಹಂ ವಹನ್ ಕಾನ್ತಃ। ದ್ವಿಪರಾರ್ಧಾನ್ತೇ ಕಸ್ಯ ಬ್ರಹ್ಮಣೋಽಪ್ಯನ್ತೋಽಸ್ಮಾದಿತಿ ವಾ ಕಾನ್ತಃ। ೭೫೫. ಕೃತಃ ಆಗಮಃ ಶ್ರುತಿಸ್ಮೃತ್ಯಾದಿಲಕ್ಷಣೋ ಯೇನ ಸ ಕೃತಾಗಮಃ। 'ಶ್ರುತಿಸ್ಮೃತೀ ಮಮೈವಾಜ್ಞೇ' (?) ಇತಿ ಭಗವದ್ವಚನಾತ್। 'ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್' (ಶ್ಲೋ. ೧೩೯) ಇತ್ಯತ್ರೈವ ವಕ್ಷ್ಯತಿ॥

### (ಭಾಷ್ಯಾರ್ಥ)

ಧರ್ಮವೇ ಮುಂತಾದ ನಾಲ್ಕು ಪುರುಷಾರ್ಥಗಳನ್ನು ಬಯಸುವವರು ಈತನನ್ನು ಕಾಮಿಸುತ್ತಾರೆ; ಆದ್ದರಿಂದ 'ಕಾಮ'ನು. ಕಾಮನೂ ದೇವನೂ ಆಗಿರುವದರಿಂದ **ಕಾಮದೇವನು**. ಅಧಿಕಾರಿಗಳಾದ ಕಾಮಿಗಳಿಗೆ ಕಾಮಗಳನ್ನು ಕಾಪಾಡಿಕೊಡುತ್ತಾನೆ. ಆದ್ದರಿಂದ **ಕಾಮಪಾಲನು**. ಪೂರ್ಣಕಾಮನಾಗಿರುವ ಸ್ವಭಾವದವನಾಗಿರುವದರಿಂದ

**ಕಾಮಿಯು.** ಸುಂದರತರವಾದ ದೇಹವನ್ನು ವಹಿಸುವವನಾದ್ದರಿಂದ **ಕಾಂತನು.** ಅಥವಾ ಎರಡು ಪರಾರ್ಧಗಳ ಕೊನೆಯಲ್ಲಿ 'ಕ' ನಿಗೆ ಎಂದರೆ ಬ್ರಹ್ಮನಿಗೂ, ಅಂತವು ಈತನಿಂದ ಆಗುತ್ತದೆಯಾದ್ದರಿಂದ **ಕಾಂತನು.** ಶ್ರುತಿಸ್ಮೃತಿರೂಪವಾದ ಆಗಮವು ಯಾವಾತನಿಂದ ಮಾಡಲ್ಪಡುವದೋ ಆತನು **ಕೃತಾಗಮನು.** 'ಶ್ರುತಿಸ್ಮೃತಿಗಳು ನನ್ನದೇ ಆಜ್ಞೆಗಳು' ಎಂದು ಭಗವದ್ವಚನವಿರುವದರಿಂದ[1] ಈ ಅರ್ಥ, 'ವೇದಗಳು, ಶಾಸ್ತ್ರಗಳು, ವಿಜ್ಞಾನ - ಇದೆಲ್ಲವೂ ಜನಾರ್ದನನಿಂದಲೇ' - ಎಂದು ಇಲ್ಲಿಯೇ ಮುಂದೆ ಹೇಳುವರು.

## (ಭಾಷ್ಯ)

೬೫೬. ಇದಂ ತದೀದೃಶಂ ವಾ ನಿರ್ದೇಷ್ಟುಂ ಯನ್ನ ಶಕ್ಯತೇ ಗುಣಾದ್ಯತೀತತ್ವಾತ್ ತದೇವ ರೂಪಮಸ್ಯ ಇತಿ ಅನಿರ್ದೇಶ್ಯವಪುಃ। ೬೫೭. ರೋದಸೀ ವ್ಯಾಪ್ಯ ಕಾನ್ತಿರಭ್ಯಧಿಕಾ ಸ್ಥಿತಾ ಅಸ್ಯ ಇತಿ ವಿಷ್ಣುಃ। "ವ್ಯಾಪ್ಯ ಮೇ ರೋದಸೀ ಪಾರ್ಥ ಕಾನ್ತಿರಭ್ಯಧಿಕಾ ಸ್ಥಿತಾ। ಕ್ರಮಣಾದ್ವಾಪ್ಯಹಂ ಪಾರ್ಥ ವಿಷ್ಣುರಿತ್ಯಭಿಸಂಜ್ಞಿತಃ' (ಶಾಂತಿ. ೩೪೧-೪೨,೪೩) ಇತಿ ಮಹಾಭಾರತೇ। ೬೫೮. ಗತ್ಯಾದಿಮತ್ತ್ವಾತ್ ವೀರಃ। 'ವೀ - ಗತಿವ್ಯಾಪ್ತಿಪ್ರಜನಕಾನ್ತ್ಯಸನಖಾದನೇಷು' (ಧಾ.೨-೩೮) ಇತಿ ಧಾತುಪಾಠಾತ್। ೬೫೯. ವ್ಯಾಪಿತ್ವಾತ್ ನಿತ್ಯತ್ವಾತ್ ಸರ್ವಾತ್ಮತ್ವಾತ್ ದೇಶತಃ ಕಾಲತಃ ವಸ್ತುತಶ್ಚ ಅಪರಿಚ್ಛಿನ್ನಃ ಅನನ್ತಃ। 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) ಇತಿ ಶ್ರುತೇಃ। 'ಗನ್ಧರ್ವಾಪ್ಸರಸಃ ಸಿದ್ಧಾಃ ಕಿನ್ನರೋರಗಚಾರಣಾಃ। ನಾನ್ತಂ ಗುಣಾನಾಂ ಗಚ್ಛನ್ತಿ ತೇನಾನನ್ತೋಽಯಮವ್ಯಯಃ' (ವಿ.ಪು.೨-೫-೨೪) ಇತಿ ವಿಷ್ಣುಪುರಾಣವಚನಾದ್ವಾ ಅನನ್ತಃ। ೬೬೦. ಯದ್ದಿಗ್ವಿಜಯೇ ಪ್ರಭೂತಂ ಧನಮಜಯತ್ತೇನ ಧನಞ್ಜಯಃ ಅರ್ಜುನಃ। "ಪಾಣ್ಡವಾನಾಂ ಧನಞ್ಜಯಃ" (ಗೀ. ೧೦-೩೭) ಇತಿ ಭಗವದ್ವಚನಾತ್ ॥೮೩॥

## (ಭಾಷ್ಯಾರ್ಥ)

ಅದು, ಇದು, ಅಥವಾ ಹೀಗಿದೆ - ಎಂದು ಗೊತ್ತುಪಡಿಸಿ ಹೇಳುವದಕ್ಕೆ ಯಾವದು ಗುಣಾದಿಗಳನ್ನು ಮೀರಿರುವದರಿಂದ - ಆಗದೆ ಇರುವದೋ ಅದೇ ರೂಪವು ಈತನದು, ಆದ್ದರಿಂದ **ಅನಿರ್ದೇಶ್ಯವಪುವು.** ರೋದಸ್ಸು (ದ್ಯಾವಾಪೃಥಿವಿ)ಗಳನ್ನು ವ್ಯಾಪಿಸಿಕೊಂಡು ಈತನ ಕಾಂತಿಯು ಇರುತ್ತದೆ, ಆದ್ದರಿಂದ **ವಿಷ್ಣುವು.** "ಎಲೈ ಪಾರ್ಥನೆ, ನನ್ನ ಹೆಚ್ಚಿನ ಕಾಂತಿಯು ಭೂಮ್ಯಂತರಿಕ್ಷಗಳನ್ನು ವ್ಯಾಪಿಸಿಕೊಂಡು ಇರುತ್ತದೆ, ಮತ್ತು ಕ್ರಮಣದಿಂದ (ದಾಟುವಿಕೆಯಿಂದ)ಲೂ ನಾನು

1. ಈ ಭಗವಂತನ ವಚನದಲ್ಲಿ ಶ್ರುತಿಸ್ಮೃತಿಗಳು ನನ್ನ ಆಜ್ಞೆಯೆಂದಿಷ್ಟೇ ಇದೆ; ಶ್ರುತಿಸ್ಮೃತಿಗಳ ಕರ್ತೃ ನಾನು ಎಂದೇನೂ ಇಲ್ಲ. ಶ್ರುತಿನಿತ್ಯತ್ವವಾದಕ್ಕೆ ಈ ವ್ಯಾಖ್ಯಾನವನ್ನು ಹೇಗೆ ಹೊಂದಿಸಬೇಕೆಂಬುದನ್ನು ಬಲ್ಲವರು ವಿವರಿಸಬೇಕು.

ವಿಷ್ಣುವೆಂಬ ಹೆಸರುಳ್ಳವನಾಗಿರುವೆನು" ಎಂದು ಮಹಾಭಾರತದಲ್ಲಿದೆ. ವಿಶಿಷ್ಟಗತಿಯೇ ಮುಂತಾದವುಗಳನ್ನುಳ್ಳವನಾದ್ದರಿಂದ **ವೀರನು**. "ವೀ" ಎಂಬ ಧಾತುವಿಗೆ ಗತಿ, ವ್ಯಾಪ್ತಿ, ಜನನ, ಕಾಂತಿ, ಎಸೆಯುವದು, ತಿನ್ನುವದು - ಎಂಬರ್ಥಗಳಿವೆ ಎಂದು ಧಾತುಪಾಠವಿದೆ. ವ್ಯಾಪಿಸಿಕೊಂಡಿರುವದರಿಂದಲೂ, ನಿತ್ಯವಾಗಿರುವದರಿಂದಲೂ, ಸರ್ವಕ್ಕೂ ಆತ್ಮನಾಗಿರುವದರಿಂದಲೂ, ದೇಶಕಾಲವಸ್ತುಗಳ ಪರಿಚ್ಛೇದವಿಲ್ಲದಿರುವದರಿಂದಲೂ **ಅನಂತನು**. "ಸತ್ಯವೂ ಜ್ಞಾನವೂ ಅನಂತವೂ ಆದದ್ದು ಬ್ರಹ್ಮವು" ಎಂಬ ಶ್ರುತಿಯ ಪ್ರಮಾಣದಿಂದ ಈ ಅರ್ಥ. "ಗಂಧರ್ವರು, ಅಪ್ಸರಸರು, ಸಿದ್ಧರು, ಕಿನ್ನರರು, ಉರಗರು, ಚಾರಣರು - (ಯಾರೂ ಈತನ) ಗುಣಗಳಿಗೆ ಕೊನೆಯನ್ನು ಕಾಣಲರಿಯರು. ಆದ್ದರಿಂದ ಈ ಅವ್ಯಯನು **ಅನಂತನು**" ಎಂಬ ವಿಷ್ಣುಪುರಾಣವಚನದಿಂದ (ಅನಂತನು) ಎಂದಾದರೂ (ಹೇಳಬಹುದು). ದಿಗ್ವಿಜಯಕಾಲದಲ್ಲಿ ಹೇರಳವಾಗಿ ಧನವನ್ನು ಗೆದ್ದುಕೊಂಡನು, ಆದ್ದರಿಂದ **ಧನಂಜಯನು** ಎಂದರೆ ಅರ್ಜುನನು. "ಪಾಂಡವರಲ್ಲಿ ಧನಂಜಯನು" ಎಂಬ ಭಗವದ್ವಚನದಿಂದ (ಈತನು ಧನಂಜಯನು).

**ಬ್ರಹ್ಮಣ್ಯೋ ಬ್ರಹ್ಮಕೃದ್ ಬ್ರಹ್ಮಾ ಬ್ರಹ್ಮ ಬ್ರಹ್ಮವಿವರ್ಧನಃ।**
**ಬ್ರಹ್ಮವಿದ್ ಬ್ರಾಹ್ಮಣೋ ಬ್ರಹ್ಮೀ ಬ್ರಹ್ಮಜ್ಞೋ ಬ್ರಾಹ್ಮಣಪ್ರಿಯಃ॥ ॥೮೪॥**

## (ಭಾಷ್ಯ)

೬೬೧. 'ತಪೋ ವೇದಾಶ್ಚ ವಿಪ್ರಾಶ್ಚ ಜ್ಞಾನಂ ಚ ಬ್ರಹ್ಮಸಂಜ್ಞಿತಮ್।' (?) ತೇಭ್ಯೋ ಹಿತತ್ವಾದ್ ಬ್ರಹ್ಮಣ್ಯಃ। ೬೬೨. ತಪಆದೀನಾಂ ಕರ್ತೃತ್ವಾತ್ ಬ್ರಹ್ಮಕೃತ್। ೬೬೩. ಬ್ರಹ್ಮಾತ್ಮನಾ ಸರ್ವಂ ಸೃಜತೀತಿ ಬ್ರಹ್ಮಾ। ೬೬೪. ಬೃಹತ್ವಾದ್ಬೃಂಹಣತ್ವಾಚ್ಚ ಸತ್ಯಾದಿಲಕ್ಷಣಂ ಬ್ರಹ್ಮ। 'ಸತ್ಯಂ ಜ್ಞಾನಮನನ್ತಂ ಬ್ರಹ್ಮ' (ತೈ. ೨-೧) ಇತಿ ಶ್ರುತೇಃ। 'ಪ್ರತ್ಯಸ್ತಮಿತಭೇದಂ ಯತ್ ಸತ್ತಾಮಾತ್ರಮಗೋಚರಮ್। ವಚಸಾಮಾತ್ಮಸಂವೇದ್ಯಂ ತಜ್ಜ್ಞಾನಂ ಬ್ರಹ್ಮಸಂಜ್ಞಿತಮ್' (ವಿ.ಪು.೬-೭-೫೩) ಇತಿ ವಿಷ್ಣುಪುರಾಣೇ। ೬೬೫. ತಪಆದೀನಾಂ ವಿವರ್ಧನಾತ್ ಬ್ರಹ್ಮವಿವರ್ಧನಃ॥

## (ಭಾಷ್ಯಾರ್ಥ)

ತಪಸ್ಸು, ವೇದಗಳು, ವಿಪ್ರರು ಮತ್ತು ಜ್ಞಾನ - ಇವುಗಳಿಗೆ ಬ್ರಹ್ಮ ಎಂದು ಹೆಸರು. ಅವುಗಳಿಗೆ ಹಿತನಾಗಿರುವದರಿಂದ **ಬ್ರಹ್ಮಣ್ಯನು**. ತಪಸ್ಸೇ ಮುಂತಾದವುಗಳಿಗೆ ಕರ್ತೃವಾಗಿರುವದರಿಂದ **ಬ್ರಹ್ಮಕೃತ್** (ಎನಿಸುವನು). ಬ್ರಹ್ಮನ ರೂಪದಿಂದ ಎಲ್ಲವನ್ನೂ ಸೃಷ್ಟಿಸುತ್ತಾನೆ, ಆದ್ದರಿಂದ **ಬ್ರಹ್ಮಾ** (ಎಂದು ಹೆಸರು). ದೊಡ್ಡವನಾಗಿರುವದರಿಂದ, ಎಲ್ಲವನ್ನೂ ಬೆಳೆಯಿಸುತ್ತಾನಾದ್ದರಿಂದಲೂ ಸತ್ಯವೇ ಮುಂತಾದ ಲಕ್ಷಣವುಳ್ಳ **ಬ್ರಹ್ಮವು** (ಈತನು). "ಸತ್ಯವೂ ಜ್ಞಾನವೂ ಅನಂತವೂ ಆದದ್ದು ಬ್ರಹ್ಮವು" ಎಂಬ ಶ್ರುತಿಯು

(ಇದಕ್ಕೆ ಪ್ರಮಾಣ). "ಯಾವದು (ಯಾವ) ಭೇದವೂ ಇಲ್ಲದ್ದೋ, ಸತ್ತಾ (ಇರವಿನ) ಸ್ವರೂಪಮಾತ್ರವಾಗಿರುವದೋ, ವಾಕ್ಕುಗಳಿಗೆ ಅಗೋಚರವಾಗಿ ಇದೆಯೋ, ತನ್ನನ್ನು ತಾನೇ ಅನುಭವಿಸಿ ತಿಳಿಯತಕ್ಕದ್ದೋ ಆ ಜ್ಞಾನ (ಚೈತನ್ಯ)ವು ಬ್ರಹ್ಮವೆಂಬ ಹೆಸರುಳ್ಳದ್ದು" ಎಂದು **ವಿಷ್ಣುಪುರಾಣ**ದಲ್ಲಿದೆ. ತಪಸ್ಸೇ ಮುಂತಾದವನ್ನು ಬೆಳೆಯುವಂತೆ ಮಾಡುವದರಿಂದ (ಈತನು) **ಬ್ರಹ್ಮವಿವರ್ಧನನು**.

(ಭಾಷ್ಯ)

೬೬೬. ವೇದಂ ವೇದಾರ್ಥಂ ಚ ಯಥಾವದ್ ವೇತ್ತೀತಿ ಬ್ರಹ್ಮವಿತ್। ೬೬೭. ಬ್ರಾಹ್ಮಣಾತ್ಮನಾ ಸಮಸ್ತಾನಾಂ ಲೋಕಾನಾಂ ಪ್ರವಚನಂ ಕುರ್ವನ್ ಬ್ರಹ್ಮಣಃ ವೇದಸ್ಯ ಅಯಮ್ ಇತಿ ಬ್ರಾಹ್ಮಣಃ। ೬೬೮. ಬ್ರಹ್ಮಸಂಜ್ಞಿತಾಃ ತಚ್ಛೇಷಭೂತಾಃ ಸನ್ತಿ ಅಸ್ಯ ಇತಿ ಬ್ರಹ್ಮೀ। ೬೬೯. ವೇದಾನ್ ಸ್ವಾತ್ಮಭೂತಾನ್ ಜಾನಾತೀತಿ ಬ್ರಹ್ಮಜ್ಞಃ। ೬೭೦. ಬ್ರಾಹ್ಮಣಾನಾಂ ಪ್ರಿಯೋ ಬ್ರಾಹ್ಮಣಪ್ರಿಯಃ। ಬ್ರಾಹ್ಮಣಾಃ ಪ್ರಿಯಾ ಅಸ್ಯೇತಿ ವಾ। 'ಸನ್ತಂ ಶಪನ್ತಂ ಪರುಷಂ ವದನ್ತಂ ಯೋ ಬ್ರಾಹ್ಮಣಂ ನ ಪ್ರಣಮೇದ್ ಯಥಾಽಹಮ್[1]। ಸ ಪಾಪಕೃದ್ ಬ್ರಹ್ಮದವಾಗ್ನಿದಗ್ಧೋ ವಧ್ಯಶ್ಚ ದಣ್ಡ್ಯಶ್ಚ ನ ಚಾಸ್ಮದೀಯಃ'॥ (?) ಇತಿ ಭಗವದ್ವಚನಾತ್। 'ಯಂ ದೇವಂ ದೇವಕೀದೇವೀ ವಸುದೇವಾದಜೀಜನತ್। ಭೌಮಸ್ಯ ಬ್ರಹ್ಮಣೋ ಗುಪ್ತ್ಯೈ ದೀಪ್ತಮಗ್ನಿಮಿವಾರಣಿಃ' (ಮಹಾ.ಭಾ.ಶಾಂ.೪೭-೨೯) ಇತಿ ಮಹಾಭಾರತೇ॥೮೪॥

(ಭಾಷ್ಯಾರ್ಥ)

ವೇದವನ್ನೂ ವೇದಾರ್ಥವನ್ನೂ ಇದ್ದದ್ದು ಇದ್ದಂತೆ ಬಲ್ಲವನಾದ್ದರಿಂದ **ಬ್ರಹ್ಮವಿತ್** (ಎನಿಸುವನು). ಬ್ರಾಹ್ಮಣರೂಪದಿಂದ ಎಲ್ಲಾ ಜನರಿಗೂ ಉಪದೇಶಮಾಡುವದರಿಂದ ಬ್ರಹ್ಮದ ಎಂದರೆ ವೇದದ ಸಂಬಂಧಿ ಇವನು, ಆದ್ದರಿಂದ (ಇವನು) **ಬ್ರಾಹ್ಮಣನು**. ಬ್ರಹ್ಮವೆಂಬ ಹೆಸರಿನವನಾಗಿ ಆ (ಬ್ರಹ್ಮಕ್ಕೆ) ಶೇಷವಾಗಿರುವ (ತಪಸ್ಸೇ ಮುಂತಾದವು) ಈತನಲ್ಲಿದೆಯಾದ್ದರಿಂದ **ಬ್ರಹ್ಮೀ** (ಎನಿಸುವನು). ತನ್ನ ಸ್ವರೂಪವೇ ಆಗಿರುವ ವೇದಗಳನ್ನು ಅರಿತಿರುತ್ತಾನೆ, ಆದ್ದರಿಂದ **ಬ್ರಹ್ಮಜ್ಞನು**. ಬ್ರಾಹ್ಮಣರಿಗೆ ಪ್ರಿಯನಾದವನು, (ಆದ್ದರಿಂದ) **ಬ್ರಾಹ್ಮಣಪ್ರಿಯನು**. ಅಥವಾ ಬ್ರಾಹ್ಮಣರು ಈತನಿಗೆ ಪ್ರಿಯರು, ಆದ್ದರಿಂದ **ಬ್ರಾಹ್ಮಣಪ್ರಿಯ**. ಸತ್ಪುರುಷನಾಗಿರಲಿ, ಬಯ್ಯುತ್ತಿರುವವನಾಗಿರಲಿ, ಕಠಿನವಾದ ಮಾತುಗಳನ್ನು ಆಡುತ್ತಿರುವವನಾಗಲೀ, (ಅಂಥ) ಬ್ರಾಹ್ಮಣನನ್ನು ವಿಧಿವತ್ತಾಗಿ ಯಾವನು ನನ್ನಂತೆಯೇ[1] ನಮಸ್ಕರಿಸುವದಿಲ್ಲವೋ ಆ ಪಾಪಕಾರಿಯು ಬ್ರಹ್ಮದವಾಗ್ನಿಯಿಂದ ಸುಟ್ಟುಹೋಗಿರುವನು. ಅವನನ್ನು ಕೊಂದುಹಾಕಬೇಕು, ಅವನಿಗೆ ದಂಡವನ್ನು ವಿಧಿಸಬೇಕು, (ಅವನು) ಎಂದಿಗೂ ನನ್ನವನಲ್ಲ' (?) ಎಂದು ಭಗವದ್ವಚನವಿರುವದರಿಂದ

1. ಯಥಾಽಹಮ್ - ಎಂಬ ಪಾಠಕ್ಕೆ ನಾನು ನಮಸ್ಕರಿಸುವಂತೆ ಎಂದೇ ಅರ್ಥ, ಯಥಾರ್ಹಂ ಎಂಬ ಪಾಠಕ್ಕೆ ವಿಧಿವತ್ತಾಗಿ ಎಂದರ್ಥ.

ಹೀಗೆ (ಅರ್ಥ). 'ಯಾವ ದೇವನನ್ನು ದೇವಕೀದೇವಿಯು ಭೂಮಿಯ ಬ್ರಹ್ಮವಾದ ಬ್ರಾಹ್ಮಣ್ಯದ ರಕ್ಷಣೆಗಾಗಿ ಅರಣಿಯು ಉರಿಯುವ ಅಗ್ನಿಯನ್ನು ಉಂಟುಮಾಡುವಂತೆ ಪಡೆದಳೋ (ಅಂಥ ದೇವನಿಗೆ ನಮಸ್ಕಾರ) - ಎಂದು ಮೋಕ್ಷಧರ್ಮದಲ್ಲಿ ಹೇಳಿಯೂ ಇದೆ.

**ಮಹಾಕ್ರಮೋ ಮಹಾಕರ್ಮಾ ಮಹಾತೇಜಾ ಮಹೋರಗಃ।**
**ಮಹಾಕ್ರತುರ್ಮಹಾಯಜ್ವಾ ಮಹಾಯಜ್ಞೋ ಮಹಾಹವಿಃ॥ ॥೮೫॥**

## (ಭಾಷ್ಯ)

೬೭೧. ಮಹಾನ್ತಃ ಕ್ರಮಾಃ ಪಾದವಿಕ್ಷೇಪಾ ಅಸ್ಯೇತಿ ಮಹಾಕ್ರಮಃ। 'ಶಂ ನೋ ವಿಷ್ಣುರುರುಕ್ರಮಃ' (ಶೀಕ್ಷಾ.೧-೧) ಇತಿ ಶ್ರುತೇಃ। ೬೭೨. ಮಹತ್ ಜಗದುತ್ಪತ್ತ್ಯಾದಿಕರ್ಮ ಅಸ್ಯೇತಿ ಮಹಾಕರ್ಮಾ। ೬೭೩. ಯದೀಯೇನ ತೇಜಸಾ ತೇಜಸ್ವಿನೋ ಭಾಸ್ಕರಾದಯಃ, ತತ್ತೇಜಃ ಮಹದಸ್ಯೇತಿ ಮಹಾತೇಜಾಃ। 'ಯೇನ ಸೂರ್ಯಸ್ತಪತಿ ತೇಜಸೇದ್ಧಃ' (ತೈ.ಬ್ರಾ. ೩-೧೨-೯-೭) ಇತಿ ಶ್ರುತೇಃ। 'ಯದಾದಿತ್ಯಗತಂ ತೇಜೋ ಜಗದ್ಭಾಸಯತೇಽಖಿಲಮ್। ಯಚ್ಚನ್ದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಮ್' (ಗೀ. ೧೫-೧೨) ಇತಿ ಭಗವದ್ವಚನಾಚ್ಚ। ಕ್ರೌರ್ಯಶೌರ್ಯಾದಿಭಿರ್ಧರ್ಮೈರ್ಮಹದ್ಭಿಃ ಸಮಲಙ್ಕೃತ ಇತಿ ವಾ ಮಹಾತೇಜಾಃ। ೬೭೪. ಮಹಾಂಶ್ಚಾಸೌ ಉರಗಶ್ಚೇತಿ ಮಹೋರಗಃ। 'ಸರ್ಪಾಣಾಮಸ್ಮಿ ವಾಸುಕಿಃ' (ಗೀ. ೧೦-೨೮) ಇತಿ ಭಗವದ್ವಚನಾತ್।

## (ಭಾಷ್ಯಾರ್ಥ)

ದೊಡ್ಡದಾದ ಕ್ರಮಗಳು ಎಂದರೆ ದಾಟುಗಾಲುಗಳು ಈತನಿಗಿವೆ, ಆದ್ದರಿಂದ **ಮಹಾಕ್ರಮನು**. "ಹೆಚ್ಚಿನ ಕ್ರಮಗಳುಳ್ಳ ವಿಷ್ಣುವು ನಮಗೆ ಸುಖವನ್ನುಂಟು ಮಾಡಲಿ" ಎಂಬ ಶ್ರುತಿಯಿಂದ (ಈ ಅರ್ಥವು ಏರ್ಪಡುತ್ತದೆ). ಮಹತ್ತಾದ ಜಗತ್ತಿನ ಸೃಷ್ಟಿಯೇ ಮುಂತಾದ ಕರ್ಮವು ಈತನದು, ಆದ್ದರಿಂದ **ಮಹಾಕರ್ಮನು.** ಸೂರ್ಯನೇ ಮೊದಲಾದವರು ಯಾವಾತನ ತೇಜಸ್ಸಿನಿಂದ ತೇಜಸ್ವಿಗಳಾಗಿರುವರೋ ಆ ಮಹಾತೇಜಸ್ಸು ಈತನದು, ಆದ್ದರಿಂದ **ಮಹಾತೇಜಾಃ** (ಎನಿಸುವನು). "ಯಾವ ತೇಜಸ್ಸಿನಿಂದ ಹೊತ್ತಿಕೊಂಡು ಸೂರ್ಯನು ಉರಿಯುತ್ತಿರುವನೋ" ಎಂಬ ಶ್ರುತಿಯಿಂದ (ಇದು ಸಿದ್ಧವಾಗುತ್ತದೆ). 'ಸೂರ್ಯನಲ್ಲಿರುವ ಯಾವ ತೇಜಸ್ಸು ಜಗತ್ತೆಲ್ಲವನ್ನೂ ಬೆಳಗುತ್ತಿರುವದೋ, ಚಂದ್ರನಲ್ಲಿ ಯಾವ (ತೇಜಸ್ಸಿದೆಯೋ), ಅಗ್ನಿಯಲ್ಲಿ ಯಾವ (ತೇಜಸ್ಸಿದೆಯೋ), ಆ ತೇಜಸ್ಸು ನನ್ನದೇ ಎಂದು ಅರಿತುಕೊ' ಎಂಬ ಭಗವದ್ವಚನ (ಪ್ರಾಮಾಣ್ಯ)ದಿಂದಲೂ (ಹೀಗೆಂದು ತಿಳಿಯಬೇಕು). ಅಥವಾ ಕ್ರೌರ್ಯ, ಶೌರ್ಯ ಮುಂತಾದ ಮಹಾಧರ್ಮಗಳಿಂದ ಅಲಂಕೃತನಾಗಿರುವದರಿಂದ **ಮಹಾತೇಜಾಃ**

(ಎನಿಸುತ್ತಾನೆ). ದೊಡ್ಡವನಾದ ಉರಗನು, ಆದ್ದರಿಂದ (ವಾಸುಕಿಯು) **ಮಹೋರಗನು.** "ಸರ್ಪಗಳೊಳಗೆ ವಾಸುಕಿಯು ನಾನಾಗಿದ್ದೇನೆ" ಎಂಬ ಭಗವಂತನ ವಚನವು ಇದಕ್ಕೆ ಪ್ರಮಾಣವು.

(ಭಾಷ್ಯ)

೬೭೫. ಮಹಾಂಶ್ಚಾಸೌ ಕ್ರತುಶ್ಚ ಇತಿ ಮಹಾಕ್ರತುಃ। "ಯಥಾಶ್ವಮೇಧಃ ಕ್ರತುರಾಟ್" (ಮನು. ೧೧-೨೬೦) ಇತಿ ಮನುವಚನಾತ್। ಸೋಽಪಿ ಸ ಏವೇತಿ ಸ್ತುತಿಃ। ೬೭೬. ಮಹಾಂಶ್ಚಾಸೌ ಯಜ್ವಾ ಚೇತಿ ಲೋಕಸಙ್ಗ್ರಹಾರ್ಥಂ ಯಜ್ಞಾನ್ ನಿರ್ವರ್ತಯನ್ ಮಹಾಯಜ್ವಾ। ೬೭೭. ಮಹಾಂಶ್ಚಾಸೌ ಯಜ್ಞಶ್ಚೇತಿ ಜಪಯಜ್ಞೋ ಮಹಾಯಜ್ಞಃ। "ಯಜ್ಞಾನಾಂ ಜಪಯಜ್ಞೋಽಸ್ಮಿ" (ಗೀ. ೧೦-೨೫) ಇತಿ ಭಗವದ್ವಚನಾತ್। ೬೭೮. ಮಹಚ್ಚ ತತ್ ಹವಿಶ್ಚೇತಿ ಬ್ರಹ್ಮಾತ್ಮನಿ ಸರ್ವಂ ಜಗತ್ ತದಾತ್ಮತಯಾ ಹೂಯತೇ ಇತಿ ಮಹಾಹವಿಃ। ಮಹಾಕ್ರತುಃ ಇತ್ಯಾದಯೋ ಬಹುವ್ರೀಹಯೋ ವಾ॥೮೫॥

(ಭಾಷ್ಯಾರ್ಥ)

ದೊಡ್ಡದಾದ ಕ್ರತುವಾದ್ದರಿಂದ **ಮಹಾಕ್ರತುವು.** 'ಅಶ್ವಮೇಧವು ಕ್ರತುಗಳಲ್ಲೆಲ್ಲ ರಾಜನಾಗಿರುವಂತೆ' ಎಂದು ಮನುವಚನವಿರುವದರಿಂದ (ಮಹಾಕ್ರತುವೆಂದರೆ ಅಶ್ವಮೇಧವು). ಆ (ಕ್ರತುವೂ) ಆತನೇ ಎಂದು (ಇಲ್ಲಿ) ಸ್ತುತಿ(ಸಿರುತ್ತದೆ). ದೊಡ್ಡವನಾದ ಯಾಜ್ಞಿಕನು, ಆದ್ದರಿಂದ (ಹೀಗೆಂದಿದೆ). ಲೋಕಸಂಗ್ರಹಕ್ಕಾಗಿ[1] ಯಜ್ಞಗಳನ್ನು ಮಾಡುವನಾದ್ದರಿಂದ **ಮಹಾಯಜ್ವಾ** (ಎನಿಸುವನು). ದೊಡ್ಡದಾದ ಯಜ್ಞವಾದ್ದರಿಂದ ಜಪಯಜ್ಞವು **ಮಹಾಯಜ್ಞವೆ**ನಿಸಿರುತ್ತದೆ. 'ಯಜ್ಞಗಳೊಳಗೆ ಜಪಯಜ್ಞವಾಗಿರುತ್ತೇನೆ' ಎಂದು ಭಗದ್ವಚನವಿರುವದರಿಂದ (ಭಗವಂತನು **ಮಹಾಯಜ್ಞನು**). ಹೆಚ್ಚಿನ ಹವಿಸ್ಸು ಬ್ರಹ್ಮಾತ್ಮನಲ್ಲಿ ಜಗತ್ತೆಲ್ಲವೂ ಹೋಮಮಾಡಲ್ಪಡುತ್ತದೆಯಾದ್ದರಿಂದ (ಈತನು) **ಮಹಾಹವಿಯು.** 'ಮಹಾಕ್ರತುಃ' ಮುಂತಾದವುಗಳು (ಮಹಾಕ್ರತುವು ಯಾವಾತನದೋ ಆತನು ಎಂದು) ಬಹುವ್ರೀಹಿಸಮಾಸಗಳೆಂದೂ (ಭಾವಿಸಬಹುದು).

**ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಂ ಸ್ತುತಿಃ ಸ್ತೋತಾ ರಣಪ್ರಿಯಃ।**
**ಪೂರ್ಣಃ ಪೂರಯಿತಾ ಪುಣ್ಯಃ ಪುಣ್ಯಕೀರ್ತಿರನಾಮಯಃ ॥೮೬॥**

(ಭಾಷ್ಯ)

೬೭೯. ಸರ್ವೈಃ ಸ್ತೂಯತೇ ನ ಸ್ತೋತಾ ಕಸ್ಯಚಿತ್ ಇತಿ ಸ್ತವ್ಯಃ। ೬೮೦. ಅತ ಏವ ಸ್ತವಪ್ರಿಯಃ। ೬೮೧. ಯೇನ ಸ್ತೂಯತೇ ತತ್ ಸ್ತೋತ್ರಮ್।

1. ಲೋಕದ ಜನರನ್ನು ಕೆಟ್ಟ ಮಾರ್ಗದಿಂದ ಹಿಂದಿರುಗಿಸುವದೇ ಲೋಕಸಂಗ್ರಹವು.

ಗುಣಸಂಕೀರ್ತನಾತ್ಮಕಮ್, ತದ್ಧರಿರೇವೇತಿ। ೬೮೨. ಸ್ತುತಿಃ ಸ್ತವನಕ್ರಿಯಾ ೬೮೩. ಸ್ತೋತಾ ಅಪಿ ಸ ಏವ। ೬೮೪. ಪ್ರಿಯೋ ರಣೋ ಯಸ್ಯ ಯತಃ ಪಞ್ಚ ಮಹಾಯುಧಾನಿ ಧತ್ತೇ ಸತತಂ ಲೋಕರಕ್ಷಣಾರ್ಥಮತೋ ರಣಪ್ರಿಯಃ॥

(ಭಾಷ್ಯಾರ್ಥ)

ಎಲ್ಲರಿಂದಲೂ ಸ್ತುತಿಸಲ್ಪಡುತ್ತಾನೆ, ಯಾರನ್ನೂ ಸ್ತೋತ್ರಮಾಡುವವನಲ್ಲ, ಆದ್ದರಿಂದ **ಸ್ತವ್ಯನು.** ಆದ್ದರಿಂದಲೇ **ಸ್ತವಪ್ರಿಯನು.**[1] ಯಾವದರಿಂದ ಈತನನ್ನು ಸ್ತುತಿಮಾಡುತ್ತಾರೋ, ಅದು **ಸ್ತೋತ್ರವು.** ಗುಣಸಂಕೀರ್ತನರೂಪವಾದ (ಆ ಸ್ತೋತ್ರವು) ಹರಿಯೇ. **ಸ್ತುತಿ** ಎಂದರೆ ಹೊಗಳುವದೆಂಬ ಕ್ರಿಯೆ. **ಸ್ತೋತಾ** (ಹೊಗಳುವಾತನು) ಕೂಡ ಅವನೇ. ಪ್ರಿಯವಾಗಿರುವ ರಣವು ಯಾವಾತನದೋ (ಯುದ್ಧವು ಯಾವನಿಗೆ ಪ್ರಿಯವಾಗಿರುವದೋ) ಆತನು **ರಣಪ್ರಿಯನು.** ಏಕೆಂದರೆ ಐದು ಮಹಾಯುಧಗಳನ್ನು[2] ಯಾವಾಗಲೂ ಲೋಕರಕ್ಷಣೆಗಾಗಿ ಧರಿಸಿರುತ್ತಾನೆ, ಆದ್ದರಿಂದ ರಣಪ್ರಿಯನು.

(ಭಾಷ್ಯ)

೬೮೫. ಸಕಲೈಃ ಕಾಮೈಃ ಸಕಲಾಭಿಃ ಶಕ್ತಿಭಿಶ್ಚ ಸಂಪನ್ನಃ ಇತಿ ಪೂರ್ಣಃ। ೬೮೬. ನ ಕೇವಲಂ ಪೂರ್ಣ ಏವ; ಪೂರಯಿತಾ ಚ ಸರ್ವೇಷಾಂ ಸಂಪದ್ಭಿಃ। ೬೮೭. ಸ್ತುತಿಮಾತ್ರೇಣ ಕಲ್ಮಷಾಣಿ ಕ್ಷಪಯತೀತಿ ಪುಣ್ಯಃ। ೬೮೮. ಪುಣ್ಯಾ ಕೀರ್ತಿಃ ಅಸ್ಯ ಯತಃ ಪುಣ್ಯಮ್ ಆವಹತಿ ಅಸ್ಯ ನೃಣಾಮಿತಿ ಪುಣ್ಯಕೀರ್ತಿಃ। ೬೮೯. ಆನ್ತರೈಃ ಬಾಹ್ಯೈಶ್ಚ ವ್ಯಾಧಿಭಿಃ ಕರ್ಮಜೈರ್ನ ಪೀಡ್ಯತ ಇತಿ ಅನಾಮಯಃ ॥೮೭॥

(ಭಾಷ್ಯಾರ್ಥ)

ಸಕಲಕಾಮಗಳಿಂದಲೂ ಸಕಲಶಕ್ತಿಗಳಿಂದಲೂ ಕೂಡಿರುತ್ತಾನೆ, ಆದ್ದರಿಂದ **ಪೂರ್ಣನು.** ಬರಿಯ ಪೂರ್ಣನು ಎಂಬುದಿಷ್ಟೇ ಅಲ್ಲ, ಎಲ್ಲರನ್ನೂ ಸಂಪತ್ತುಗಳಿಂದ **ಪೂರಯಿತಾ** ಪೂರ್ಣರನ್ನಾಗಿ ಮಾಡುವಾತನು (ಆತನೇ). ಸ್ತುತಿಮಾಡಿದ ಮಾತ್ರದಿಂದ[3] ಪಾಪಗಳನ್ನು ಕಳೆಯುತ್ತಾನೆ; ಆದ್ದರಿಂದ **ಪುಣ್ಯನು.** ಪುಣ್ಯವಾದ ಕೀರ್ತಿಯು ಈತನದು, ಏಕೆಂದರೆ ಜನಗಳಿಗೆ ಈತನ ಕೀರ್ತಿಯು (ಎಂದರೆ ಮಾಹಾತ್ಮ್ಯವನ್ನು ಹೇಳುವದು) ಪುಣ್ಯವನ್ನುಂಟುಮಾಡುತ್ತದೆ, ಆದ್ದರಿಂದ **ಪುಣ್ಯಕೀರ್ತಿಯು.** ಕರ್ಮದಿಂದಾಗುವ ಒಳಗಿನ ಮತ್ತು ಹೊರಗಿನ ವ್ಯಾಧಿಗಳಿಂದ ಸಂಕಟಪಡುವದಿಲ್ಲ, ಆದ್ದರಿಂದ (ಈತನು) **ಅನಾಮಯನು.**

**ಮನೋಜವಸ್ತೀರ್ಥಕರೋ ವಸುರೇತಾ ವಸುಪ್ರದಃ।**
**ವಸುಪ್ರದೋ ವಾಸುದೇವೋ ವಸುರ್ವಸುಮನಾ ಹವಿಃ ॥೮೮॥**

1. ಸ್ತೋತ್ರಮಾಡಲ್ಪಡುವವನಾದ್ದರಿಂದಲೇ.
2. ಶಂಖ, ಚಕ್ರ, ಗದೆ, ಖಡ್ಗ, ಶಾರ್ಙ್ಗ (ಧನುಸ್ಸು) - ಎಂಬಿವು ಆಯುಧಗಳು.
3. 'ಸ್ಮೃತಿಮಾತ್ರೇಣ' ಎಂಬ ಪಾಠಕ್ಕೆ 'ಸ್ಮರಣೆಮಾಡಿದ ಮಾತ್ರದಿಂದ' ಎಂದು ಅರ್ಥ.

### (ಭಾಷ್ಯ)

೬೯೦. ಮನಸೋ ವೇಗ ಇವ ವೇಗಃ ಅಸ್ಯ; ಸರ್ವಗತತ್ವಾತ್ ಮನೋಜವಃ। ೬೯೧. ಚತುರ್ದಶವಿದ್ಯಾನಾಂ ಬಾಹ್ಯವಿದ್ಯಾಸಮಯಾನಾಂ ಚ ಪ್ರಣೇತಾ ಪ್ರವಕ್ತಾ ಚೇತಿ ತೀರ್ಥಕರಃ। ಹಯಗ್ರೀವರೂಪೇಣ ಮಧುಕೈಟಭೌ ಹತ್ವಾ ವಿರಿಞ್ಚಾಯ ಸರ್ಗಾದೌ ಸರ್ವಾಃ ಶ್ರುತೀಃ, ಅನ್ಯಾಶ್ಚ ವಿದ್ಯಾಃ ಉಪದಿಶನ್ ವೇದಬಾಹ್ಯಾ ವಿದ್ಯಾಃ ಸುರವೈರಿಣಾಂ ವಞ್ಚನಾಯ ಉಪದಿದೇಶ ಇತಿ ಪೌರಾಣಿಕಾಃ ಕಥಯನ್ತಿ। ೬೯೨. ವಸು ಸುವರ್ಣಂ ರೇತಃ ಅಸ್ಯ ಇತಿ ವಸುರೇತಾಃ। "ದೇವಃ ಪೂರ್ವಮಪಃ ಸೃಷ್ಟ್ವಾ ತಾಸು ವೀರ್ಯಮಪಾಸೃಜತ್। ತದಣ್ಡಮಭವದ್ಧೈಮಂ ಬ್ರಹ್ಮಣಃ ಕಾರಣಂ ಪರಮ್।" ಇತಿ ವ್ಯಾಸವಚನಾತ್। ೬೯೩. ವಸು ಧನಂ ಪ್ರಕರ್ಷೇಣ ದದಾತಿ ಸಾಕ್ಷಾದ್ ಧನಾಧ್ಯಕ್ಷೋಽಯಮ್, ಇತರಸ್ತು ತತ್ಪ್ರಸಾದಾತ್ ಧನಾಧ್ಯಕ್ಷ ಇತಿ ವಸುಪ್ರದಃ॥

### (ಭಾಷ್ಯಾರ್ಥ)

ಮನಸ್ಸಿನ ವೇಗದಂತೆ (ಇರುವ) ವೇಗವು ಈತನದು, ಏಕೆಂದರೆ (ಈತನು) ಸರ್ವಗತನಾಗಿರುತ್ತಾನೆ, (ಆದ್ದರಿಂದ) ಮನೋಜವನು. ಹದಿನಾಲ್ಕು[1] ವಿದ್ಯೆಗಳನ್ನು, ವೇದ ಮತ್ತು ಬಾಹ್ಯವಿದ್ಯೆಗಳ ಶಾಸ್ತ್ರಗಳನ್ನು ನಿರ್ಮಿಸಿ ಹೇಳಿಕೊಟ್ಟವನು; ಆದ್ದರಿಂದ **ತೀರ್ಥಕರನು**. ಹಯಗ್ರೀವರೂಪದಿಂದ ಮಧುಕೈಟಭರನ್ನು ಕೊಂದು ಬ್ರಹ್ಮನಿಗೆ ಸೃಷ್ಟಿಯ ಆದಿಯಲ್ಲಿ ಎಲ್ಲಾ ಶ್ರುತಿಗಳನ್ನೂ ಬೇರೆಯ ವಿದ್ಯೆಗಳನ್ನೂ ಉಪದೇಶಮಾಡುವಾತನು, ವೇದಬಾಹ್ಯವಾದ ವಿದ್ಯೆಗಳನ್ನು ದೇವತೆಗಳ ವೈರಿಗಳಾದ (ಅಸುರರನ್ನು) ವಂಚಿಸುವದಕ್ಕಾಗಿ ಉಪದೇಶಿಸುತ್ತಾನೆ ಎಂದು **ಪೌರಾಣಿಕರು** ಹೇಳುತ್ತಾರೆ. ವಸು ಎಂದರೆ ಸುವರ್ಣವು ಈತನ ರೇತಸ್ಸು; ಆದ್ದರಿಂದ **ವಸುರೇತಾ** (ಎನಿಸುವನು). ದೇವನಾಗಿ ಮೊದಲು ಅಪ್ಪನ್ನು ಸೃಷ್ಟಿಸಿ,[2] ಅದರಲ್ಲಿ ವೀರ್ಯವನ್ನು ಹಾಕಿದನು, ಅದು ಚಿನ್ನದ ಅಂಡವಾಯಿತು. ಅದು ಬ್ರಹ್ಮನಿಗೆ ಹೆಚ್ಚಿನ ಕಾರಣವು - ಎಂದು ವ್ಯಾಸವಚನದಿಂದ (ಹೀಗೆ ವ್ಯಾಖ್ಯಾನ). ವಸು ಎಂದರೆ ಧನವನ್ನು ಪ್ರಕರ್ಷವಾಗಿ (ಇದಕ್ಕಾಗಿ) ಕೊಡುತ್ತಾನೆ. ಆದ್ದರಿಂದ ಇವನು ಸಾಕ್ಷಾತ್ ಧನಾಧ್ಯಕ್ಷನು. ಇನ್ನೊಬ್ಬನಾದ (ಕುಬೇರ)ನಾದರೂ, ಆತನ ಪ್ರಸಾದದಿಂದ ಧನಾಧ್ಯಕ್ಷನು; ಆದ್ದರಿಂದ **ವಸುಪ್ರದನು**.

### (ಭಾಷ್ಯ)

೬೯೪. ವಸು ಪ್ರಕೃಷ್ಟಂ ಮೋಕ್ಷಾಖ್ಯಂ ಫಲಂ ಭಕ್ತೇಭ್ಯಃ ಪ್ರದದಾತೀತಿ ದ್ವಿತೀಯೋ ವಸುಪ್ರದಃ, 'ವಿಜ್ಞಾನಮಾನನ್ದಂ ಬ್ರಹ್ಮ ರಾತಿರ್ದಾತುಃ ಪರಾಯಣಂ ತಿಷ್ಠಮಾನಸ್ಯ

1. ಆರು ಅಂಗಗಳು, ವೇದಗಳು ನಾಲ್ಕು, ಮೀಮಾಂಸೆ, ನ್ಯಾಯ, ಪುರಾಣ, ಧರ್ಮಶಾಸ್ತ್ರ - ಎಂಬಿವು ಹದಿನಾಲ್ಕು.
2. 'ಅಪ ಏವ ಸಸರ್ಜಾದೌ' ಎಂಬ ಪಾಠಾಂತರಕ್ಕೆ 'ಅಪ್ಪನ್ನೇ ಮೊದಲು ಸೃಷ್ಟಿಸಿದನು' ಎಂದು ಅನುವಾದ.

ತದ್ವಿದಃ' (ಬೃ.೩-೯-೨೮) ಇತಿ ಶ್ರುತೇಃ। ಸುರಾರೀಣಾಂ ವಸೂನಿ ಪ್ರಕರ್ಷೇಣ ಖಣ್ಡಯನ್ ವಾ ವಸುಪ್ರದಃ। ೬೯೫. ವಸುದೇವಸ್ಯ ಅಪತ್ಯಂ ವಾಸುದೇವಃ। ೬೯೬. ವಸನ್ತಿ ಸರ್ವಭೂತಾನಿ ತತ್ರ, ತೇಷ್ವಯಮಪಿ ವಸತೀತಿ ವಸುಃ। ೬೯೭. ಅವಿಶೇಷೇಣ ಸರ್ವೇಷು ವಿಷಯೇಷು ವಸತೀತಿ ವಸು, ತಾದೃಶಂ ಮನೋಽ ಸ್ಯಾಸ್ತೀತಿ ವಸುಮನಾಃ। ೬೯೮. 'ಬ್ರಹ್ಮಾರ್ಪಣಂ ಬ್ರಹ್ಮ ಹವಿಃ' (ಗೀ.೪-೨೪) ಇತಿ ಭಗವದ್ವಚನಾತ್ ಹವಿಃ॥೮೭॥

(ಭಾಷ್ಯಾರ್ಥ)

**ವಸು**ವನ್ನು ಎಂದರೆ ನೇರಾಗಿ ಮೋಕ್ಷವನ್ನೇ ಭಕ್ತರಿಗೆ ಕೊಡುತ್ತಾನೆ, ಆದ್ದರಿಂದ ಎರಡನೆಯ (ಅರ್ಥದಲ್ಲಿ) **ವಸುಪ್ರದನು**. 'ವಿಜ್ಞಾನವೂ ಆನಂದವೂ ಆಗಿರುವ ಬ್ರಹ್ಮವು ಧನವನ್ನು ದಾನಮಾಡುವವನಿಗೆ (ಅದು) ಪರಮಗತಿಯು. ಬ್ರಹ್ಮದಲ್ಲಿಯೇ ನೆಲೆನಿಂತಿರುವ ಬ್ರಹ್ಮಜ್ಞಾನಿಗೆ ಪರಾಯಣವು' ಎಂಬ ಶ್ರುತಿಯು (ಈ ಅರ್ಥಕ್ಕೆ ಪ್ರಮಾಣ). ದೇವತೆಗಳ ಶತ್ರುಗಳ ಧನಗಳನ್ನು ಬಲವಾಗಿ ಖಂಡಿಸು (ನಾಶಗೊಳಿಸು)ವದರಿಂದ **ವಸುಪ್ರದನು** - ಎಂದಾದರೂ (ಈ ನಾಮಕ್ಕೆ ಅರ್ಥ). ವಸುದೇವನ ಮಗನಾದ್ದರಿಂದ **ವಾಸುದೇವನು**. ಸರ್ವಪ್ರಾಣಿಗಳೂ ಆತನಲ್ಲಿ ವಾಸವಾಗಿರುತ್ತವೆ. ಅವುಗಳಲ್ಲಿ ಈತನೂ ವಾಸವಾಗಿರುತ್ತಾನೆ; ಆದ್ದರಿಂದ **ವಸು** (ಎನಿಸಿರುತ್ತಾನೆ). ಎಲ್ಲಾ ವಸ್ತುಗಳಲ್ಲಿಯೂ ಸಮಾನವಾಗಿ ವಾಸವಾಗಿರುತ್ತಾನೆ; ಆದ್ದರಿಂದ ವಸು; ಅಂಥ ಮನಸ್ಸು ಈತನದು, ಆದ್ದರಿಂದ (ಈತನು) **ವಸುಮನಾಃ** (ಎನಿಸುವನು). "ಬ್ರಹ್ಮವೇ ಅರ್ಪಣ, ಬ್ರಹ್ಮವೇ ಹವಿಸ್ಸು" ಎಂಬ ಭಗವದ್ವಚನ ಪ್ರಮಾಣದಿಂದ **ಹವಿಯು** (ಈತನು).

**ಸದ್ಗತಿಃ ಸತ್ಕೃತಿಃ ಸತ್ತಾ ಸದ್ಭೂತಿಃ ಸತ್ಪರಾಯಣಃ।**
**ಶೂರಸೇನೋ ಯದುಶ್ರೇಷ್ಠಃ ಸನ್ನಿವಾಸಃ ಸುಯಾಮುನಃ ॥೮೮॥**

(ಭಾಷ್ಯ)

೬೯೯. "ಅಸ್ತಿ ಬ್ರಹ್ಮೇತಿ ಚೇದ್ ವೇದ। ಸನ್ತಮೇನಂ ತತೋ ವಿದುಃ" (ತೈ.೨-೬) ಇತಿ ಶ್ರುತೇಃ, ಬ್ರಹ್ಮಾಸ್ತೀತಿ ಯೇ ವಿದುಃ ತೇ ಸನ್ತಃ ತೈಃ ಪ್ರಾಪ್ಯತೇ ಇತಿ ಸದ್ಗತಿಃ। ಸತಾಂ ಗತಿರ್ಬುದ್ಧಿಃ ಸಮುತ್ಕೃಷ್ಟಾ ಅಸ್ಯೇತಿ ವಾ ಸದ್ಗತಿಃ। ೭೦೦. ಸತಾಂ ಕೃತಿಃ ಜಗದ್ರಕ್ಷಣಲಕ್ಷಣಾ ಅಸ್ಯ ಯಸ್ಮಾತ್ ತೇನ ಸತ್ಕೃತಿಃ॥

ಇತಿ ನಾಮ್ನಾಂ ಸಪ್ತಮಂ ಶತಂ ವಿವೃತಮ್॥

## (ಭಾಷ್ಯಾರ್ಥ)

'ಬ್ರಹ್ಮವಿದೆ - ಎಂದು ಅರಿತುಕೊಂಡನಾದರೆ, (ಬಲ್ಲವರು) ಈತನನ್ನು ಸಂತನೆನ್ನುವರು' ಎಂದು ಶ್ರುತಿಯು ಇರುವದರಿಂದ ಬ್ರಹ್ಮವು ಇದೆ ಎಂದು ಯಾರು ಅರಿತುಕೊಂಡಿರುವರೋ ಅವರು ಸಂತರು; ಅವರಿಗೆ (ಈತನು) ಪ್ರಾಪ್ಯನು, ಆದ್ದರಿಂದ **ಸದ್ಗತಿಯು**. ಅಥವಾ ಸತ್ಪುರುಷರ ಗತಿ ಎಂದರೆ ಬಹಳ ಉತ್ಕೃಷ್ಟರೂಪವಾದ ಬುದ್ಧಿಯು ಈತನಿಗೆ (ಇದೆ). ಆದ್ದರಿಂದ **ಸದ್ಗತಿಯು**. ಸತ್ಪುರುಷರ ಕೃತಿಯು ಎಂದರೆ ಕಾರ್ಯವು ಜಗತ್ತನ್ನು ಕಾಪಾಡುವದೇ ಮುಂತಾದ ರೂಪದ (ಕೃತಿಯು) ಈತನದು, ಆದ್ದರಿಂದ (ಈತನು) **ಸತ್ಕೃತಿಯು**.

ಇಲ್ಲಿಗೆ ಏಳನೆಯ ಶತಕವನ್ನು ವಿವರಿಸಿದ್ದಾಯಿತು.

## ಅಷ್ಟಮಶತಕ

### (ಭಾಷ್ಯ)

೭೦೧. ಸಜಾತೀಯವಿಜಾತೀಯಸ್ವಗತಭೇದರಹಿತಾ ಅನುಭೂತಿಃ ಸತ್ತಾ, 'ಏಕಮೇವಾದ್ವಿತೀಯಮ್' (ಛಾಂ.೬-೨-೧) ಇತಿ ಶ್ರುತೇಃ। ೭೦೨. ಸನ್ನೇವ ಪರಮಾತ್ಮಾ ಚಿದಾತ್ಮಕಃ ಅಬಾಧಾತ್ ಭಾಸಮಾನತ್ವಾಚ್ಚ ಸದ್ಭೂತಿಃ, ನಾನ್ಯಃ; ಪ್ರತೀತೇರ್ಬಾಧ್ಯಮಾನತ್ವಾಚ್ಚ। ನ ಸನ್, ನಾಪ್ಯಸನ್, ಶ್ರೌತೋ ಯೌಕ್ತಿಕೋ ವಾ ಬಾಧಃ ಪ್ರಪಞ್ಚಸ್ಯ ವಿವಕ್ಷಿತಃ। ೭೦೩. ಸತಾಂ ತತ್ತ್ವವಿದಾಂ ಪರಂ ಪ್ರಕೃಷ್ಟಮ್ ಅಯನಮಿತಿ ಸತ್ಪರಾಯಣಃ॥

### (ಭಾಷ್ಯಾರ್ಥ)

ಸಜಾತೀಯ, ವಿಜಾತೀಯ, ಸ್ವಗತ - ಎಂಬೀ (ಮೂರು) ಭೇದವೂ ಇಲ್ಲದ[1] ಅನುಭವವೇ **'ಸತ್ತಾ'** 'ಇರವು' ಎನಿಸುತ್ತದೆ; 'ತನಗೆರಡನೆಯದಿಲ್ಲದ ಒಂದೇ' ಎಂಬ ಶ್ರುತಿಯು ಇದಕ್ಕೆ ಪ್ರಮಾಣ. ಚಿದಾತ್ಮಕನಾದ ಪರಮಾತ್ಮನು ಸದ್ರೂಪನಾಗಿಯೇ ಇರುತ್ತಾನೆ, ಏಕೆಂದರೆ ಬಾಧರಹಿತನಾಗಿರುತ್ತಾನೆ, ಮತ್ತು ತೋರುತ್ತಲೇ ಇರುತ್ತಾನೆ, ಆದ್ದರಿಂದ ಆತನೇ **ಸದ್ಭೂತಿಯು**. ಮತ್ತೆ ಯಾವದೂ ಅಲ್ಲ. ಏಕೆಂದರೆ ಮಿಕ್ಕದ್ದರ ಪ್ರತೀತಿಯು ಬಾಧಿತವಾಗುತ್ತಿರುತ್ತದೆ. (ಅದು) ಸತ್ತೂ ಅಲ್ಲ, ಅಸತ್ತೂ ಅಲ್ಲ. ಹೀಗೆ ಶ್ರುತಿಯಿಂದ ಅಥವಾ ಯುಕ್ತಿಯಿಂದ ಪ್ರಪಂಚಕ್ಕೆ ಬಾಧವಾಗುವದೆಂದು ವಿವಕ್ಷಿತವಾಗಿದೆ. ಸತ್ಪುರುಷರಾದ ತತ್ತ್ವಜ್ಞಾನಿಗಳಿಗೆ ಪರವಾದ ಎಂದರೆ ಹೆಚ್ಚಿನ ಅಯನವು (ಗತಿಯು) ಆದ್ದರಿಂದ **ಸತ್ಪರಾಯಣನು**.

### (ಭಾಷ್ಯ)

೭೦೪. ಹನೂಮತ್ಪ್ರಮುಖಾಃ ಸೈನಿಕಾಃ ಶೌರ್ಯಶಾಲಿನಃ, ಯಸ್ಯಾಂ ಸೇನಾಯಾಂ ಸಾ ಶೂರಸೇನಾ ಯಸ ಸ ಶೂರಸೇನಃ। ೭೦೫. ಯದೂನಾಂ ಪ್ರಧಾನತ್ವಾದ್ ಯದುಶ್ರೇಷ್ಠಃ। ೭೦೬. ಸತಾಂ ವಿದುಷಾಮಾಶ್ರಯಃ ಸನ್ನಿವಾಸಃ। ೭೦೭. ಶೋಭನಾಃ ಯಾಮುನಾಃ ಯಮುನಾಸಮ್ಬನ್ಧಿನೋ ದೇವಕೀವಸುದೇವನನ್ದ ಯಶೋದಾಬಲಭದ್ರಸುಭದ್ರಾದಯಃ ಪರಿವೇಷ್ಟಾರಃ ಅಸ್ಯ ಇತಿ ಸುಯಾಮುನಃ। ಗೋಪವೇಷಧರಾ ಯಾಮುನಾಃ ಪರಿವೇಷ್ಟಾರಃ ಪದ್ಮಾಸನಾದಯಃ ಶೋಭನಾ ಅಸ್ಯೇತಿ ವಾ ಸುಯಾಮುನಃ॥ ೮೮॥

1. ಈ ಭಾಷ್ಯಭಾಗದಲ್ಲಿರುವ ಸಜಾತೀಯವಿಜಾತೀಯಶಬ್ದಪ್ರಯೋಗಗಳೂ ಶ್ರೌತ ಯೌಕ್ತಿಕ ಬಾಧಶಬ್ದಗಳೂ ಪ್ರಸ್ಥಾನತ್ರಯಭಾಷ್ಯಗಳಲ್ಲಿ ಕಾಣಬರುವದಿಲ್ಲ. ಆದ್ದರಿಂದ ಇದು ವ್ಯಾಖ್ಯಾನಪ್ರಸ್ಥಾನದವರು ಸೇರಿಸಿದ ಭಾಗವೆ? ಎಂದು ಮುಂತಾಗಿ ಕೆಲವರು ಶಂಕಿಸಿರುತ್ತಾರೆ. ಪೀಠಿಕೆಯನ್ನು ನೋಡಿರಿ.

(ಭಾಷ್ಯಾರ್ಥ)

ಹನುಮಂತನೇ ಮೊದಲಾದ ಶೌರ್ಯಶಾಲಿಗಳಾದ ಸೈನಿಕರು ಯಾವ ಸೇನೆಯಲ್ಲಿದ್ದರೋ ಅದು ಶೂರಸೇನಾ; ಆ ಶೂರಸೇನೆಯು ಯಾವಾತನದೋ ಆ (ಈತನು) **ಶೂರಸೇನನು.** ಯದುಗಳಲ್ಲಿ ಮುಖ್ಯನಾದ್ದರಿಂದ **ಯದುಶ್ರೇಷ್ಠನು.** ಸತ್ಪುರುಷರಾದ ಜ್ಞಾನಿಗಳಿಗೆ ಆಶ್ರಯನಾದವನು, ಆದ್ದರಿಂದ **ಸನ್ನಿವಾಸನು.** ಸು (ಒಳ್ಳೆಯವರಾದ) ಯಾಮುನರು ಎಂದರೆ ಯಮುನೆಯ ಸಂಬಂಧಿಗಳಾದ ದೇವಕಿ, ವಸುದೇವ, ನಂದ, ಯಶೋದೆ, ಬಲರಾಮ, ಸುಭದ್ರೆ - ಮೊದಲಾದವರು ಈತನಿಗೆ ಪರಿವಾರವಾದ್ದರಿಂದ **ಸುಯಾಮುನನು.** ಗೋಪಾಲರ ವೇಷವನ್ನು ಧರಿಸಿದ ಯಾಮುನರು - ಎಂದರೆ ಕಮಲಾಸನ (ಬ್ರಹ್ಮ)ನೇ ಮೊದಲಾದ ಪರಿವಾರದವರು, ಶೋಭನರೂಪದವರಾದ್ದರಿಂದ **(ಸುಯಾಮುನನು)** ಎಂದಾದರೂ ಈ ನಾಮಕ್ಕೆ ಅರ್ಥ॥

**ಭೂತಾವಾಸೋ ವಾಸುದೇವಃ ಸರ್ವಾಸುನಿಲಯೋಽನಲಃ।**
**ದರ್ಪಹಾ ದರ್ಪದೋ ದೃಪ್ತೋ ದುರ್ಧರೋಽಥಾಪರಾಜಿತಃ॥॥೯॥**

(ಭಾಷ್ಯ)

೭೦೮. ಭೂತಾನಿ ಅತ್ರ ಆಭಿಮುಖ್ಯೇನ ವಸನ್ತಿ ಇತಿ ಭೂತಾವಾಸಃ। 'ವಸನ್ತಿ ತ್ವಯಿ ಭೂತಾನಿ ಭೂತಾವಾಸಸ್ತತೋ ಭವಾನ್' (ಹರಿ.೩-೮೮-೫೩) ಇತಿ ಹರಿವಂಶೇ। ೭೦೯. ಜಗದಾಚ್ಛಾದಯತಿ ಮಾಯಯಾ ಇತಿ ವಾಸುಃ, ಸ ಏವ ದೇವಃ ಇತಿ ವಾಸುದೇವಃ। 'ಛಾದಯಾಮಿ ಜಗದ್ವಿಶ್ವಂ ಭೂತ್ವಾ ಸೂರ್ಯ ಇವಾಂಶುಭಿಃ' (ಶಾಂ.ಮೋ.ಧ೩೪೧-೪೧) ಇತಿ ಭಗವದ್ವಚನಾತ್। ೭೧೦. ಸರ್ವ ಏವಾಸನಃ ಪ್ರಾಣಾಃ ಜೀವಾತ್ಮಕೇ ಯಸ್ಮಿನ್ನಾಶ್ರಯೇ ನಿಲೀಯನ್ತೇ ಸ ಸರ್ವಾಸುನಿಲಯಃ। ೭೧೧. ಅಲಂ ಪರ್ಯಾಪ್ತಿಃ ಶಕ್ತಿಸಮ್ಪದಾಂ ನಾಸ್ಯ ವಿದ್ಯತ ಇತಿ ಅನಲಃ॥

(ಭಾಷ್ಯಾರ್ಥ)

ಭೂತ (ಪ್ರಾಣಿ)ಗಳೂ ಅಭಿಮುಖ್ಯವಾಗಿ (?)[1] ಈತನಲ್ಲಿ ವಾಸಮಾಡುತ್ತಿವೆ. ಆದ್ದರಿಂದ **ಭೂತಾವಾಸನು.** "(ನಿನ್ನಲ್ಲಿಯೇ) ಭೂತಗಳು ವಾಸಮಾಡುತ್ತಿವೆ, ಆದ್ದರಿಂದ ನೀನು ಭೂತಾವಾಸನು" ಎಂದು (ಹರಿ.೩-೮೮-೫೨) ಹರಿವಂಶದಲ್ಲಿದೆ. ಜಗತ್ತನ್ನು ಮಾಯೆಯಿಂದ ಮುಚ್ಚಿರುತ್ತಾನೆ, ಆದ್ದರಿಂದ **ವಾಸು** (ಎನ್ನಿಸುವನು). ಆ (ವಾಸುವೆಂಬ) ದೇವನು **ವಾಸುದೇವನು.** "ಜಗತ್ತೆಲ್ಲವನ್ನೂ ನನ್ನ ವಿಭೂತಿಯಿಂದ - ಸೂರ್ಯನು ಕಿರಣಗಳಿಂದ ಮುಚ್ಚುವಂತೆ ಮುಚ್ಚಿರುತ್ತೇನೆ" ಎಂಬ ಭಗವಂತನ

1. 'ಅಭಿಮುಖ್ಯತ್ವಮ್ ಅಧಿಷ್ಠಾನಚೈತನ್ಯದೃಶ್ಯತ್ವಮ್' ಅಭಿಮುಖ್ಯವೆಂದರೆ ಅಧಿಷ್ಠಾನಚೈತನ್ಯಕ್ಕೆ ದೃಶ್ಯವಾಗಿರುವದು ಎಂದು ಮೈ॥ ವ್ಯಾಖ್ಯಾನ.

ವಚನದಿಂದ (ಈ ಅರ್ಥವು ಸಿದ್ಧವಾಗುತ್ತದೆ). ಎಲ್ಲಾ ಅಸುಗಳು, ಎಂದರೆ ಪ್ರಾಣಗಳು, ಜೀವರೂಪವಾದ ಯಾವನ ಆಶ್ರಯದಲ್ಲಿ ಇದ್ದುಕೊಂಡಿರುವವೋ ಆತನು **ಸರ್ವಾಸುನಿಲಯನು.** ಅಲಮ್ ಎಂದರೆ ಮುಗಿಯಿತೆನ್ನುವದು ಈತನ ಶಕ್ತಿಸಂಪತ್ತುಗಳಿಗೆ ಇಲ್ಲ, ಆದ್ದರಿಂದ **ಅನಲನು.**

## (ಭಾಷ್ಯ)

೭೧೨. ಧರ್ಮವಿರುದ್ಧೇ ಪಥಿ ತಿಷ್ಠತಾಂ ದರ್ಪಂ ಹನ್ತೀತಿ ದರ್ಪಹಾ। ೭೧೩. ಧರ್ಮವರ್ತ್ಮನಿ ವರ್ತಮಾನಾನಾಂ ದರ್ಪಂ ದದಾತೀತಿ ದರ್ಪದಃ. ೭೧೪. ಸ್ವಾತ್ಮಾಮೃತರಸಾಸ್ವಾದನಾತ್ ನಿತ್ಯಂ ಪ್ರಮುದಿತೋ ದೃಪ್ತಃ। ೭೧೫. ನ ಶಕ್ಯಾ ಧಾರಣಾ ಯಸ್ಯ ಪ್ರಣಿಧಾನಾದಿಷು ಸರ್ವೋಪಾಧಿವಿನಿರ್ಮುಕ್ತತ್ವಾತ್, ತಥಾಪಿ ತತ್ಪ್ರಸಾದತಃ ಕೈಶ್ಚಿತ್ ದುಃಖೇನ ಧಾರ್ಯತೇ ಹೃದಯೇ ಜನ್ಮಾನ್ತರಸಹಸ್ರೇಷು ಭಾವನಾಯೋಗಾತ್, ತಸ್ಮಾದ್ ದುರ್ಧರಃ। 'ಕ್ಲೇಶೋಽಧಿಕತರಸ್ತೇಷಾಮ-ವ್ಯಕ್ತಾಸಕ್ತಚೇತಸಾಮ್। ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ' (ಗೀ.೧೨-೫) ಇತಿ ಭಗವದ್ವಚನಾತ್। ೭೧೬. ನ ಆನ್ತರೈಃ ರಾಗಾದಿಭಿಃ ಬಾಹ್ಯೈರಪಿ ದಾನವಾದಿಭಿಃ ಶತ್ರುಭಿಃ ಪರಾಜಿತ ಇತಿ ಅಪರಾಜಿತಃ॥೮೯॥

## (ಭಾಷ್ಯಾರ್ಥ)

ಧರ್ಮವಿರುದ್ಧವಾದ ಮಾರ್ಗದಲ್ಲಿರುವವರ ಸೊಕ್ಕನ್ನು ನಾಶಮಾಡುತ್ತಾನೆ, ಆದ್ದರಿಂದ **ದರ್ಪಹಾ** (ಎನಿಸುವನು) - ಧರ್ಮಮಾರ್ಗದಲ್ಲಿ ಇದ್ದುಕೊಂಡಿರುವವರಿಗೆ ದರ್ಪವನ್ನು ಕೊಡುತ್ತಾನೆ, ಆದ್ದರಿಂದ **ದರ್ಪದನು.** ತನ್ನ ಆತ್ಮಾಮೃತರಸವನ್ನು ಸವಿಯುವದರಿಂದ ಯಾವಾಗಲೂ ಪ್ರಮೋದವನ್ನು ಹೊಂದುವಾತನು, ಆದ್ದರಿಂದ **ದೃಪ್ತನು.** ಎಲ್ಲಾ ಉಪಾಧಿಗಳಿಂದಲೂ ಬಿಡಲ್ಪಟ್ಟವನಾದ್ದರಿಂದ ಪ್ರಣಿಧಾನವೇ ಮುಂತಾದ (ಅನುಷ್ಠಾನ)ಗಳಲ್ಲಿ ಈತನನ್ನು ಧಾರಣೆಮಾಡುವದು ಶಕ್ಯವಲ್ಲ; ಆದರೂ ಆತನ ಪ್ರಸಾದದಿಂದ ಕೆಲವರು ಕಷ್ಟದಿಂದ ಜನ್ಮಾಂತರಸಹಸ್ರಗಳೊಳಗೆ ಭಾವನಾಯೋಗದಿಂದ ಹೃದಯದಲ್ಲಿ ಧಾರಣೆಮಾಡಬಲ್ಲರು, ಆದ್ದರಿಂದ **ದುರ್ಧರನು.** "ಅವ್ಯಕ್ತದಲ್ಲಿ ಆಸಕ್ತಿಯುಳ್ಳ ಚಿತ್ತದವರಾದ ಅವರಿಗೆ ಕ್ಲೇಶವು ಇನ್ನೂ ಹೆಚ್ಚು; ಏಕೆಂದರೆ ದೇಹಾಭಿಮಾನವುಳ್ಳವರಿಗೆ ಅವ್ಯಕ್ತದ ಜ್ಞಾನವು ಕಷ್ಟದಿಂದ ದೊರಕುತ್ತದೆ" ಎಂದು ಭಗವದ್ವಚನವಿರುವದರಿಂದ (ಈ ನಾಮಕ್ಕೆ ಹೀಗೆ ಅರ್ಥವನ್ನು ಮಾಡಬೇಕು). ಒಳಗಿನ ರಾಗಾದಿಗಳೆಂಬ ಶತ್ರುಗಳಿಂದಲಾಗಲಿ ಹೊರಗಿನ ದಾನವರೇ ಮುಂತಾದ ಶತ್ರುಗಳಿಂದಲಾಗಲಿ ಪರಾಜಿತ (ಸೋಲಿಸಲ್ಪಟ್ಟ) ನಾಗಿಲ್ಲವಾದ್ದರಿಂದ **ಅಪರಾಜಿತನು.**

**ವಿಶ್ವಮೂರ್ತಿರ್ಮಹಾಮೂರ್ತಿರ್ದೀಪ್ತಮೂರ್ತಿರಮೂರ್ತಿಮಾನ್।**
**ಅನೇಕಮೂರ್ತಿರವ್ಯಕ್ತಃ ಶತಮೂರ್ತಿಃ ಶತಾನನಃ ॥೯೦॥**

### (ಭಾಷ್ಯ)

೭೦೭. ವಿಶ್ವಂ ಮೂರ್ತಿರಸ್ಯ ಸರ್ವಾತ್ಮಕತ್ವಾತ್ ಇತಿ ವಿಶ್ವಮೂರ್ತಿಃ। ೭೦೮. ಶೇಷಪರ್ಯಙ್ಕಶಾಯಿನೋಽಸ್ಯ ಮಹತೀ ಮೂರ್ತಿರಿತಿ ಮಹಾಮೂರ್ತಿಃ। ೭೦೯. ದೀಪ್ತಾ ಜ್ಞಾನಮಯೀ ಮೂರ್ತಿರಸ್ಯೇತಿ, ಸ್ವೇಚ್ಛಯಾ ಗೃಹೀತಾ ತೈಜಸೀ ಮೂರ್ತಿರ್ದೀಪ್ತಾ ಅಸ್ಯ ಇತಿ ವಾ ದೀಪ್ತಮೂರ್ತಿಃ। ೭೧೦. ಕರ್ಮನಿಬನ್ಧನಾ ಮೂರ್ತಿಃ ಅಸ್ಯ ನ ವಿದ್ಯತ ಇತಿ ಅಮೂರ್ತಿಮಾನ್॥

### (ಭಾಷ್ಯಾರ್ಥ)

ಸರ್ವಾತ್ಮನಾಗಿರುವದರಿಂದ ವಿಶ್ವವು (-ಎಲ್ಲಾ ಜಗತ್ತು) ಈತನ ಮೂರ್ತಿ, ಆದ್ದರಿಂದ **ವಿಶ್ವಮೂರ್ತಿಯು**. ಶೇಷವೆಂಬ ಮಂಚದ ಮೇಲೆ ಮಲಗಿರುವ ಈತನಿಗೆ ಮಹಾ (ದೊಡ್ಡ) ಮೂರ್ತಿಯು ಇರುತ್ತದೆಯಾದ್ದರಿಂದ (ಈತನು) **ಮಹಾಮೂರ್ತಿಯು**. ದೀಪ್ತವಾದ ಎಂದರೆ ಜ್ಞಾನಮಯವಾದ ಮೂರ್ತಿಯು ಈತನದು, ಆದ್ದರಿಂದ (ಈತನು) **ದೀಪ್ತಮೂರ್ತಿಯು**. ತನ್ನ ಇಚ್ಛೆಯಿಂದ ಸ್ವೀಕರಿಸಿದ ತೇಜೋಮಯವಾದ ಮೂರ್ತಿಯು ಇರುತ್ತದೆಯಾದ್ದರಿಂದ ದೀಪ್ತಮೂರ್ತಿ - ಎಂದಾದರೂ(ಈ ನಾಮಕ್ಕೆ ಅರ್ಥವನ್ನು ಹೇಳಬಹುದು). ಕರ್ಮನಿಮಿತ್ತವಾದ ಮೂರ್ತಿಯು (ಶರೀರದಲ್ಲಿ) ಈತನಿಗೆ ಇಲ್ಲವಾದ್ದರಿಂದ **ಅಮೂರ್ತಿಮಾನ್** (ಎನಿಸುವನು).

### (ಭಾಷ್ಯ)

೭೧೧. ಅವತಾರೇಷು ಸ್ವೇಚ್ಛಯಾ ಲೋಕೋಪಕಾರಿಣೀಃ ಬಹ್ವೀಃ ಮೂರ್ತೀಃ ಭಜತ ಇತಿ ಅನೇಕಮೂರ್ತಿಃ। ೭೧೨. ಯದ್ಯಪ್ಯನೇಕಮೂರ್ತಿತ್ವಮಸ್ಯ ತಥಾಪ್ಯಯಮೀದೃಶ ಏವೇತಿ ನ ವ್ಯಜ್ಯತೇ ಇತಿ ಅವ್ಯಕ್ತಃ। ೭೧೩. ನಾನಾವಿಕಲ್ಪಜಾ ಮೂರ್ತಯಃ ಸಂವಿದಾಕೃತೇಃ ಸನ್ತಿ ಇತಿ ಶತಮೂರ್ತಿಃ। ೭೧೪. ವಿಶ್ವಾದಿಮೂರ್ತಿತ್ವಂ ಯತಃ ಅತ ಏವ ಶತಾನನಃ॥೯೦॥

### (ಭಾಷ್ಯಾರ್ಥ)

ಅವತಾರಗಳಲ್ಲಿ ತನ್ನ ಇಚ್ಛೆಯಿಂದ ಜನರಿಗೆ ಉಪಕಾರಕವಾದ ಬಹುಮೂರ್ತಿಗಳನ್ನು ಪಡೆಯುತ್ತಾನೆ, ಆದ್ದರಿಂದ (ಇವನು) **ಅನೇಕಮೂರ್ತಿಯು**. ಈತನಿಗೆ (ಹೀಗೆ) ಅನೇಕರೂಪಗಳಿದ್ದರೂ ಇವನು ಇಂಥ (ಗೊತ್ತಾದ) ರೂಪದವನೇ ಎಂದು ವ್ಯಕ್ತವಾಗುವದಿಲ್ಲವಾದ್ದರಿಂದ **ಅವ್ಯಕ್ತನು**. ಬೇರೆಬೇರೆಯ ವಿಕಲ್ಪಗಳಿಂದ ಉಂಟಾದ ಮೂರ್ತಿಗಳು (ಈ) ಜ್ಞಾನ ಸ್ವರೂಪನಾದ (ವಿಷ್ಣುವಿಗೆ) ಇರುವವಾದ್ದರಿಂದ ಇವನು **ಶತಮೂರ್ತಿಯು**. ವಿಶ್ವಮೂರ್ತಿತ್ವವೇ ಮುಂತಾದ (ಅನೇಕ ರೂಪಗಳಿರುವಾತ)ನಷ್ಟೆ, ಆದ್ದರಿಂದಲೇ ಈತನು **ಶತಾನನನು**.

**ಏಕೋ ನೈಕಃ ಸವಃ ಕಃ ಕಿಂ ಯತ್ತತ್ಪದಮನುತ್ತಮಮ್।**
**ಲೋಕಬನ್ಧುರ್ಲೋಕನಾಥೋ ಮಾಧವೋ ಭಕ್ತವತ್ಸಲಃ ॥೯೧॥**

## (ಭಾಷ್ಯ)

೭೨೫. ಪರಮಾರ್ಥತಃ ಸಜಾತೀಯ[1] ವಿಜಾತೀಯಸ್ವಗತಭೇದವಿನಿರ್ಮುಕ್ತತ್ವಾತ್ ಏಕಃ। 'ಏಕಮೇವಾದ್ವಿತೀಯಮ್' (ಛಾಂ.೬-೨-೧) ಇತಿ ಶ್ರುತೇಃ। ೭೨೬. ಮಾಯಯಾ ಬಹುರೂಪತ್ವಾತ್ ನೈಕಃ। 'ಇನ್ದ್ರೋ ಮಾಯಾಭಿಃ ಪುರುರೂಪ ಈಯತೇ' (ಬೃ. ೨-೫-೧೯) ಇತಿ ಶ್ರುತೇಃ। ೭೨೭. ಸೋಮೋ ಯತ್ರ ಅಭಿಷೂಯತೇ ಸೋಽಧ್ವರಃ ಸವಃ। ೭೨೮. ಕಶಬ್ದಃ ಸುಖವಾಚಕಃ ತೇನ ಸ್ತೂಯತ ಇತಿ ಕಃ। 'ಕಂ ಬ್ರಹ್ಮ' (ಛಾಂ. ೪-೧೦-೪) ಇತಿ ಶ್ರುತೇಃ। ೭೨೯. ಸರ್ವಪುರುಷಾರ್ಥರೂಪತ್ವಾದ್ ಬ್ರಹ್ಮೈವ ವಿಚಾರ್ಯಮಿತಿ ಬ್ರಹ್ಮ ಕಿಮ್। ೭೩೦. ಯಚ್ಛಬ್ದೇನ ಸ್ವತಃಸಿದ್ಧವಸ್ತೂದ್ದೇಶವಾಚಿನಾ ಬ್ರಹ್ಮ ನಿರ್ದಿಶ್ಯತ ಇತಿ ಬ್ರಹ್ಮ ಯತ್। 'ಯತೋ ವಾ ಇಮಾನಿ ಭೂತಾನಿ ಜಾಯನ್ತೇ' (ತೈ. ೩-೧) ಇತಿ ಶ್ರುತೇಃ। ೭೩೧. ತನೋತೀತಿ ಬ್ರಹ್ಮ ತತ್। 'ಓಂತತ್ಸದಿತಿ ನಿರ್ದೇಶೋ ಬ್ರಹ್ಮಣಸ್ತ್ರಿವಿಧಃ ಸ್ಮೃತಃ' (ಗೀ.೧೭-೨೩) ಇತಿ ಭಗವದ್ವಚನಾತ್। ೭೩೨. ಪದ್ಯತೇ ಗಮ್ಯತೇ ಮುಮುಕ್ಷುಭಿಃ ಇತಿ ಪದಮ್। ಯಸ್ಮಾದುತ್ಕೃಷ್ಟಂ ನಾಸ್ತಿ ತತ್ ಅನುತ್ತಮಮ್। ಸವಿಶೇಷಣಮೇಕಂ ನಾಮ ಪದಮನುತ್ತಮಮಿತಿ॥

## (ಭಾಷ್ಯಾರ್ಥ)

ಪರಮಾರ್ಥದೃಷ್ಟಿಯಿಂದ ನೋಡಿದರೆ ತನ್ನ ಜಾತಿಯ, ತನಗಿಂತ ಬೇರೆಯ ಮತ್ತು ತನ್ನೊಳಗಿನ ಭೇದವಿಲ್ಲದ್ದರಿಂದ ಏಕನು. 'ತನಗೆರಡನೆಯದಿಲ್ಲದ ಒಂದೇ' ಎಂಬ ಶ್ರುತಿಯು ಇದಕ್ಕೆ ಪ್ರಮಾಣ. ಮಾಯೆಯಿಂದ ಬಹುರೂಪಗಳನ್ನು (ಪಡೆಯುತ್ತಿರುವದರಿಂದ) **ನೈಕನು**. 'ಇಂದ್ರ (-ಪರಮೇಶ್ವರ)ನು ಮಾಯೆಗಳಿಂದ ಬಹುರೂಪನಾಗಿ ಕಾಣಬರುತ್ತಾನೆ' ಎಂಬ ಶ್ರುತಿಯು ಇದಕ್ಕೆ ಪ್ರಮಾಣ. ಯಾವ (ಯಜ್ಞ)ದಲ್ಲಿ ಸೋಮವನ್ನು ಹಿಂಡುವರೋ ಆ (ಯಜ್ಞವು) **ಸವವು**. (ಆ ರೂಪದವನು) ಈತನು. 'ಕ' (ಎಂಬ) ಶಬ್ದವು ಸುಖದ ವಾಚಕವು. ಅದರಿಂದ ಸ್ತುತಿಸಲ್ಪಡುತ್ತಾನೆ, ಆದ್ದರಿಂದ (ಈತನು) **ಕ** (ಎನಿಸಿರುತ್ತಾನೆ). 'ಬ್ರಹ್ಮವು ಕ (ಎನಿಸುತ್ತದೆ)' ಎಂಬ ಶ್ರುತಿಯಿಂದ (ಹೀಗೆ ಅರ್ಥ). ಎಲ್ಲಾ ಪುರುಷಾರ್ಥಗಳ ರೂಪವಾಗಿರುವದರಿಂದ ಬ್ರಹ್ಮವೊಂದೇ ವಿಚಾರಕ್ಕೆ ಅರ್ಹವಾದದ್ದು, ಆದ್ದರಿಂದ ಬ್ರಹ್ಮವು **ಕಿಮ್**? (ಏನು? ಎನಿಸಿಕೊಂಡಿದೆ). ('ಆ ಬ್ರಹ್ಮವೆಂದರೆ ಯಾವದು? ಅಧ್ಯಾತ್ಮವು ಯಾವದು' ಎಂಬ **ಸ್ಮೃತಿ**ಯಿಂದ[1] ಈ ಅರ್ಥ). ಸ್ವತಃಸಿದ್ಧವಸ್ತುವನ್ನು ಹೇಳುವ ಯತ್

1.ಕಂಸದಲ್ಲಿ ಕೊಟ್ಟಿರುವ ಈ ವಾಕ್ಯಭಾಗವು ವಾ॥ಗೀ॥ಪಾಠಗಳಲ್ಲಿಲ್ಲ. ಇದು ಅರ್ಜುನನು ಶ್ರೀಕೃಷ್ಣನಿಗೆ ಕೇಳಿದ ಪ್ರಶ್ನೆ; ಇಷ್ಟು ಮಾತ್ರದಿಂದ ಕಿಮ್ ಎಂಬಿದು ಬ್ರಹ್ಮದ ನಾಮವು ಎಂದು ಹೇಗಾಯಿತೆಂಬುದು ಸ್ಪಷ್ಟವಾಗುವಂತಿಲ್ಲ. ವ್ಯಾ॥ ವಿವೃತಿಯಲ್ಲಿಯೂ ಇದರ ವ್ಯಾಖ್ಯಾನವು ಸ್ಪಷ್ಟವಾಗಿಲ್ಲ. 'ಕಃ' 'ಕಿಮ್' 'ಯತ್' 'ತತ್' - ಎಂಬೀ ಸರ್ವನಾಮಗಳಿಂದ ಯಾವಯಾವದನ್ನು ಪರಾಮರ್ಶಿಸಿದರೂ ಅದರ ಪರಮಾರ್ಥವು ಬ್ರಹ್ಮವೇ - ಎಂಬ ಅರ್ಥವನ್ನು ಈ ನಾಮಗಳಿಗೆ ಮಾಡಬಹುದೆಂದು ತೋರುತ್ತದೆ.

ಎಂಬ ಶಬ್ದದಿಂದ ಬ್ರಹ್ಮವನ್ನು ನಿರ್ದೇಶಮಾಡಲಾಗುತ್ತದೆ; ಆದ್ದರಿಂದ ಬ್ರಹ್ಮವು **ಯತ್** (ಎನಿಸಿರುತ್ತದೆ). 'ಯಾವದರಿಂದ ಈ ಭೂತಗಳು ಹುಟ್ಟುತ್ತಿರುವವೋ' ಎಂಬ ಶ್ರುತಿಯು ಇದಕ್ಕೆ ಆಧಾರ. ತನೋತಿ (ವ್ಯಾಪಿಸಿಕೊಂಡಿರುತ್ತದೆ), ಆದ್ದರಿಂದ ಬ್ರಹ್ಮವು **ತತ್**. 'ಓಂ ತತ್ ಸತ್ ಎಂದು ಬ್ರಹ್ಮದ ನಿರ್ದೇಶವು ಮೂರು ಬಗೆಯೆಂದು ಹೇಳುತ್ತಾರೆ" ಎಂಬ ಭಗದ್ವಚನದಿಂದ (ಇದು ಹೀಗೆಂದು ನಿರ್ಣಯವಾಗುತ್ತದೆ). ಮುಮುಕ್ಷುಗಳಿಂದ ಪದ್ಯತೇ - ಗಮ್ಯತೇ ಪಡೆಯಲ್ಪಡುತ್ತದೆ, ಆದ್ದರಿಂದ **ಪದವು**. ಯಾವದಕ್ಕಿಂತ ಹೆಚ್ಚಿನದು ಇಲ್ಲವೋ ಅದು **ಅನುತ್ತಮವು**. (ಅಂತೂ ಹೀಗೆ) **'ಪದಮನುತ್ತಮಮ್'** ಎಂಬಿದು ವಿಶೇಷಣಸಹಿತವಾದ ಒಂದೇ ನಾಮವು.

### (ಭಾಷ್ಯ)

೭೩೩. ಆಧಾರಭೂತೇ ಅಸ್ಮಿನ್ ಸಕಲಾ ಲೋಕಾ ಬಧ್ಯನ್ತ ಇತಿ ಲೋಕಬನ್ಧುಃ। ಲೋಕಾನಾಂ ಜನಕತ್ವಾತ್ ಜನಕೋಪಮೋ ಬನ್ಧುರ್ನಾಸ್ತೀತಿ ವಾ, ಲೋಕಾನಾಂ ಬನ್ಧುಕೃತ್ಯಂ ಹಿತಾಹಿತೋಪದೇಶಂ ಶ್ರುತಿಸ್ಮೃತಿಲಕ್ಷಣಂ ಕೃತವಾನ್ ಇತಿ ವಾ ಲೋಕಬನ್ಧುಃ। ೭೩೪. ಲೋಕೈರ್ನಾಥ್ಯತೇ ಯಾಚ್ಯತೇ ಲೋಕಾನುಪತಪತಿ ಆಶಾಸ್ತೇ ಲೋಕಾನಾಮೀಷ್ಟೇ ಇತಿ ವಾ ಲೋಕನಾಥಃ। ೭೩೫. ಮಧುಕುಲೇ ಜಾತತ್ವಾತ್ ಮಾಧವಃ। ೭೩೬. ಭಕ್ತಸ್ನೇಹವಾನ್ ಭಕ್ತವತ್ಸಲಃ॥೮೧॥

### (ಭಾಷ್ಯಾರ್ಥ)

ಆಧಾರನಾಗಿರುವ ಈತನಲ್ಲಿ ಎಲ್ಲಾ ಲೋಕಗಳಿಗೂ ಬಂಧಿಸಲ್ಪಟ್ಟಿವೆ (ಯಾದ್ದರಿಂದ) **ಲೋಕಬಂಧುವು**. ಅಥವಾ ಲೋಕಗಳಿಗೆಲ್ಲ ತಂದೆಯಾದ್ದರಿಂದ, ತಂದೆಗೆ ಸಮಾನವಾದ ನೆಂಟನು (ಬೇರೊಬ್ಬನು) ಇಲ್ಲವಾದ್ದರಿಂದ (ಲೋಕಬಂಧುವಾಗಬಹುದು). ಅಥವಾ ಲೋಕಗಳಿಗೆ ಶ್ರುತಿಸ್ಮೃತಿರೂಪವಾದ - ಒಳ್ಳೆಯದು ಕೆಟ್ಟದ್ದನ್ನು (ತಿಳಿಸಿಕೊಡುವ) ಹಿತೋಪದೇಶವನ್ನು ಮಾಡಿರುತ್ತಾನಾದ್ದರಿಂದ (ಲೋಕಬಂಧುವೆನಿಸುವನು). ಲೋಕಗಳಿಂದ (ಜನರಿಂದ) 'ನಾಥ್ಯತೇ' ಯಾಚಿಸಲ್ಪಡುತ್ತಿದ್ದಾನೆ, ಆದ್ದರಿಂದ **ಲೋಕನಾಥನು** ಅಥವಾ ಲೋಕಗಳನ್ನು (ಅಂತಕಾಲದಲ್ಲಿ) ತಪಿಸುತ್ತಾನೆ, (ಒಳ್ಳೆಯದನ್ನು) ಬಯಸುತ್ತಾನೆ, ಲೋಕಗಳನ್ನು ಆಳುತ್ತಾನೆ - ಎಂಬ ಕಾರಣದಿಂದಲೂ **ಲೋಕನಾಥ** (ನಿವನು). ಮಧುಕುಲದಲ್ಲಿ ಹುಟ್ಟಿದವನಾದ್ದರಿಂದ **ಮಾಧವನು**. ಭಕ್ತರಲ್ಲಿ ಪ್ರೀತಿಯುಳ್ಳವನಾದ್ದರಿಂದ **ಭಕ್ತವತ್ಸಲನು**.

**ಸುವರ್ಣವರ್ಣೋ ಹೇಮಾಙ್ಗೋ ವರಾಙ್ಗಶ್ಚನ್ದನಾಙ್ಗದೀ।**
**ವೀರಹಾ ವಿಷಮಃ ಶೂನ್ಯೋ ಘೃತಾಶೀರಚಲಶ್ಚಲಃ॥ ॥೮೨॥**

### (ಭಾಷ್ಯ)

೭೩೭. ಸುವರ್ಣಸ್ಯೇವ ವರ್ಣೋಽಸ್ಯೇತಿ ಸುವರ್ಣವರ್ಣಃ। 'ಯದಾ ಪಶ್ಯಃ

ಪಶ್ಯತೇ ರುಕ್ಮವರ್ಣಮ್' (ಮುಂ. ೩-೧-೩) ಇತಿ ಶ್ರುತೇಃ। ೭೩೮. ಹೇಮೇವ ಅಙ್ಗಂ ವಪುಃ ಅಸ್ಯ ಇತಿ ಹೇಮಾಙ್ಗಃ। 'ಯ ಏಷೋಽನ್ತರಾದಿತ್ಯೇ ಹಿರಣ್ಮಯಃ ಪುರುಷಃ' (ಛಾಂ. ೧-೬-೬) ಇತಿ ಶ್ರುತೇಃ। ೭೩೯. ವರಾಣಿ ಶೋಭನಾನ್ಯಙ್ಗಾನಿ ಅಸ್ಯೇತಿ ವರಾಙ್ಗಃ। ೭೪೦. ಚನ್ದನೈರಾಹ್ಲಾದನೈಃ ಅಙ್ಗದೈಃ ಕೇಯೂರೈಃ ಭೂಷಿತ ಇತಿ ಚನ್ದನಾಙ್ಗದೀ॥

## (ಭಾಷ್ಯಾರ್ಥ)

ಸುವರ್ಣದಂತೆ ಇರುವ ಬಣ್ಣವು ಈತನದು, ಆದ್ದರಿಂದ **ಸುವರ್ಣವರ್ಣನು**. 'ಯಾವಾಗ ದ್ರಷ್ಟೃವಾದವನು ಚಿನ್ನದ ವರ್ಣವುಳ್ಳ (ಈತನನ್ನು) ಕಾಣುವನೋ' ಎಂಬ ಶ್ರುತಿಯು ಇದಕ್ಕೆ ಆಧಾರ. ಹೇಮ (ಚಿನ್ನ)ದಂತೆ ಇರುವ ಅಂಗವು ಎಂದರೆ ಶರೀರವು ಈತನದು; ಆದ್ದರಿಂದ **ಹೇಮಾಙ್ಗನು**. 'ಆದಿತ್ಯನೊಳಗೆ ಯಾವ ಈತನು ಹಿರಣ್ಯವರ್ಣನಾಗಿರುವನೋ' ಎಂಬ ಶ್ರುತಿಯಿಂದ (ಈ ಅರ್ಥ). ವರವಾದ ಉತ್ತಮವಾದ ಅಂಗಗಳು ಈತನವು, ಆದ್ದರಿಂದ **ವರಾಂಗನು**. ಚಂದನದಂತೆ ಆಹ್ಲಾದಕರವಾದ ಅಂಗದಗಳಿಂದ ಎಂದರೆ ಭುಜಕೀರ್ತಿಗಳಿಂದ ಅಲಂಕೃತನಾಗಿರುತ್ತಾನೆ, ಆದ್ದರಿಂದ **ಚಂದನಾಂಗದಿಯು**.

## (ಭಾಷ್ಯ)

೭೪೧. ಧರ್ಮತ್ರಾಣಾಯ ವೀರಾನ್ ಅಸುರಮುಖ್ಯಾನ್ ಹನ್ತೀತಿ ವೀರಹಾ। ೭೪೨. ಸಮೋ ನಾಸ್ಯ ವಿದ್ಯತೇ ಸರ್ವವಿಲಕ್ಷಣತ್ವಾತ್ ಇತಿ ವಿಷಮಃ 'ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯಃ' (ಗೀ. ೧೧-೪೩) ಇತಿ ಭಗವದ್ವಚನಾತ್।[1] ೭೪೩. ಸರ್ವವಿಶೇಷರಹಿತತ್ವಾತ್ ಶೂನ್ಯವತ್ ಶೂನ್ಯಃ। ೭೪೪. ಘೃತಾ ವಿಗಲಿತಾ ಆಶಿಷಃ ಪ್ರಾರ್ಥನಾ ಅಸ್ಯೇತಿ ಘೃತಾಶೀಃ। ೭೪೫. ನ ಸ್ವರೂಪಾತ್, ನ ಸಾಮರ್ಥ್ಯಾತ್, ನ ಚ ಜ್ಞಾನಾದಿಕಾದ್ ಗುಣಾತ್ ಚಲನಂ ವಿದ್ಯತೇ ಅಸ್ಯ ಇತಿ ಅಚಲಃ। ೭೪೬. ವಾಯುರೂಪೇಣ ಚಲತೀತಿ ಚಲಃ॥೯೨॥

## (ಭಾಷ್ಯಾರ್ಥ)

ಧರ್ಮರಕ್ಷಣೆಗಾಗಿ ವೀರರನ್ನು ಎಂದರೆ ಅಸುರರೇ ಮುಂತಾದವರನ್ನು ಕೊಲ್ಲುತ್ತಾನೆ; ಆದ್ದರಿಂದ **ವೀರಹಾ** (ಎನಿಸಿರುತ್ತಾನೆ). ಎಲ್ಲಕ್ಕೂ ವಿಲಕ್ಷಣನಾಗಿರುವದರಿಂದ ಇವನಿಗೆ ಸಮನಾದವನು ಇಲ್ಲವಾದ್ದರಿಂದ **ವಿಷಮನು**. 'ನಿನಗೆ ಸಮಾನನೇ ಇಲ್ಲ, ಇನ್ನು ಹೆಚ್ಚಾದವನು ಎಲ್ಲಿಂದ ಬರಬೇಕು?' ಎಂಬ ಭಗವದ್ವಚನದಿಂದ[1] ಇದು ಏರ್ಪಡುತ್ತದೆ. ಯಾವ ವಿಶೇಷವೂ ಇಲ್ಲದವನಾದ್ದರಿಂದ ಶೂನ್ಯದಂತೆ ಇರುವದರಿಂದ **ಶೂನ್ಯನು**.

1. ಇದು ಅರ್ಜುನನ ವಾಕ್ಯ. ಆದ್ದರಿಂದ 'ಭಗವದ್ಗೀತಾವಚನಾತ್' ಎಂತ ಪಾಠವಿದ್ದರೆ ಚೆನ್ನಾಗಿತ್ತೆಂದು ತೋರುತ್ತದೆ.

ಈತನ ಆಶೆಗಳು ಎಂದರೆ ಕೋರಿಕೆಗಳು ಧೃತವಾಗಿವೆ, ಇಲ್ಲವಾಗಿವೆ; ಆದ್ದರಿಂದ **ಧೃತಾಶೀಃ** (ಎನಿಸುವನು). ತನ್ನ ಸ್ವರೂಪದಿಂದಲಾಗಲಿ, ಸಾಮರ್ಥ್ಯದಿಂದಲಾಗಲಿ ಜ್ಞಾನಾದಿಗುಣದಿಂದಲೇ ಆಗಲಿ (ಯಾವದೊಂದರಿಂದಲೂ) ಇವನಿಗೆ ಚಲನೆಯಿಲ್ಲ; ಆದ್ದರಿಂದ **ಅಚಲನು**. ವಾಯುರೂಪದಿಂದ ಚಲಿಸುತ್ತಿರುತ್ತಾನೆ, ಆದ್ದರಿಂದ **ಚಲನು**.

**ಅಮಾನೀ ಮಾನದೋ ಮಾನ್ಯೋ ಲೋಕಸ್ವಾಮೀ ತ್ರಿಲೋಕಧೃಕ್।**
**ಸುಮೇಧಾ ಮೇಧಜೋ ಧನ್ಯಃ ಸತ್ಯಮೇಧಾ ಧರಾಧರಃ ॥೯೩॥**

### (ಭಾಷ್ಯ)

೭೪೭. ಅನಾತ್ಮವಸ್ತುಷು ಆತ್ಮಾಭಿಮಾನೋ ನಾಸ್ತ್ಯಸ್ಯ ಸ್ವಚ್ಛಸಂವೇದನಾಕೃತೇಃ ಇತಿ ಅಮಾನೀ। ೭೪೮. ಸ್ವಮಾಯಯಾ ಸರ್ವೇಷಾಮ್ ಅನಾತ್ಮಸು ಆತ್ಮಾಭಿಮಾನಂ ದದಾತಿ, ಭಕ್ತಾನಾಂ ಸತ್ಕಾರಂ ಮಾನಂ ದದಾತೀತಿ, ತತ್ತ್ವವಿದಾಮನಾತ್ಮಸು ಆತ್ಮಾಭಿಮಾನಂ ಖಣ್ಡಯತೀತಿ ವಾ ಮಾನದಃ ೭೪೯. ಸರ್ವೈಃ ಮಾನನೀಯಃ ಪೂಜನೀಯಃ, ಸರ್ವೇಶ್ವರತ್ವಾತ್ ಇತಿ ಮಾನ್ಯಃ। ೭೫೦. ಚತುರ್ದಶಾನಾಂ ಲೋಕಾನಾಮೀಶ್ವರತ್ವಾತ್ ಲೋಕಸ್ವಾಮೀ। ೭೫೧. ತ್ರೀನ್ ಲೋಕಾನ್ ಧಾರಯತೀತಿ ತ್ರಿಲೋಕಧೃಕ್॥

### (ಭಾಷ್ಯಾರ್ಥ)

ಅನಾತ್ಮವಸ್ತುಗಳಲ್ಲಿ ತಾನೆಂಬ ಅಭಿಮಾನವು ನಿರ್ಮಲವಾದ ಜ್ಞಾನರೂಪಿಯಾದ ಈತನಿಗೆ ಇಲ್ಲವಾದ್ದರಿಂದ (ಇವನು) **ಅಮಾನಿಯು**. ತನ್ನ ಮಾಯೆಯಿಂದ ಎಲ್ಲರಿಗೂ ಅನಾತ್ಮದಲ್ಲಿ ಮಾನವನ್ನು ಎಂದರೆ ತಾನೆಂಬ ಅಭಿಮಾನವನ್ನು ಉಂಟುಮಾಡುತ್ತಾನೆ, ಭಕ್ತರಿಗೆ ಮಾನವನ್ನು ಎಂದರೆ ಸತ್ಕಾರವನ್ನು ಕೊಡುತ್ತಾನೆ; ಅಥವಾ ತತ್ತ್ವವನ್ನು ಬಲ್ಲವರಿಗೆ ಅನಾತ್ಮಗಳಲ್ಲಿ ತಾವೆಂಬ ಅಭಿಮಾನವನ್ನು ಖಂಡಿಸುತ್ತಾನೆ, ಆದ್ದರಿಂದ **ಮಾನದನು**. (ಎಂದೂ ವ್ಯಾಖ್ಯಾನಮಾಡಬಹುದು). ಎಲ್ಲರಿಗೂ ಮಾನನೀಯನಾಗಿ ಪೂಜಿಸಲ್ಪಡತಕ್ಕವನಾಗಿ ಇರುತ್ತಾನೆ, ಆದ್ದರಿಂದ **ಮಾನ್ಯನು**. ಏಕೆಂದರೆ (ಈತನು) ಸರ್ವರಿಗೂ ಈಶ್ವರನಾಗಿರುತ್ತಾನೆ, ಹದಿನಾಲ್ಕುಲೋಕಗಳಿಗೂ ಒಡೆಯನಾದ್ದರಿಂದ **ಲೋಕಸ್ವಾಮಿಯು**. ಮೂರುಲೋಕಗಳನ್ನೂ ಧರಿಸಿರುತ್ತಾನೆ, ಆದ್ದರಿಂದ **ತ್ರಿಲೋಕಧೃಕ್** (ಎನಿಸುವನು).

### (ಭಾಷ್ಯ)

೭೫೨. ಶೋಭನಾ ಮೇಧಾ ಪ್ರಜ್ಞಾ ಅಸ್ಯ ಇತಿ ಸುಮೇಧಾಃ। 'ನಿತ್ಯಮಸಿಚ್ ಪ್ರಜಾಮೇಧಯೋಃ' (ಪಾ. ೫-೪-೧೨೨) ಇತಿ ಸಮಾಸಾನ್ತೋಽಸಿಚ್।

೭೫೩. ಮೇಘೇಽಧ್ವರೇ ಜಾಯತೇ ಇತಿ ಮೇಧಜಃ। ೭೫೪. ಕೃತಾರ್ಥೋ ಧನ್ಯಃ ೭೫೫. ಸತ್ಯಾ ಅವಿತಥಾ ಮೇಧಾ ಅಸ್ಯೇತಿ ಸತ್ಯಮೇಧಾಃ। ೭೫೬. ಅಂಶೈರಶೇಷೈಃ ಶೇಷಾದ್ಯೈರಶೇಷಾಂ ಧರಾಂ ಧಾರಯನ್ ಧರಾಧರಃ॥೮೩॥

## (ಭಾಷ್ಯಾರ್ಥ)

(ಸು-) ಒಳ್ಳೆಯ ಮೇಧೆಯು ಎಂದರೆ ಪ್ರಜ್ಞೆಯು ಈತನದು, ಆದ್ದರಿಂದ **ಸುಮೇಧಾಃ** (ಎನಿಸುವನು). 'ನಿತ್ಯಮಸಿಚ್ ಪ್ರಜಾಮೇಧಯೋಃ' ಎಂಬ ವ್ಯಾಕರಣಸೂತ್ರದಿಂದ ಸಮಾಸದ ಕೊನೆಯಲ್ಲಿ 'ಅಸಿಚ್' ಪ್ರತ್ಯಯವು ಬಂದಿದೆ.[1] ಮೇಧದಲ್ಲಿ ಎಂದರೆ ಯಜ್ಞದಲ್ಲಿ ಹುಟ್ಟುತ್ತಾನೆ, ಆದ್ದರಿಂದ **ಮೇಧಜನು.**[2] **ಧನ್ಯನು** ಎಂದರೆ ಕೃತಾರ್ಥನು, ಸತ್ಯವಾದ ಎಂದರೆ ಹುಸಿಯಲ್ಲದ ಮೇಧೆಯು ಈತನಿಗಿದೆಯಾದ್ದರಿಂದ **ಸತ್ಯಮೇಧಾ** (ಎನಿಸುವನು). ಶೇಷನೇ ಮುಂತಾದ ಎಲ್ಲಾ ಅಂಶಭೂತರಾದವರ ಮೂಲಕ ಧರೆ (ಭೂಮಿ)ಯನ್ನು ಧರಿಸುವನಾದ್ದರಿಂದ **ಧರಾಧರನು.**

**ತೇಜೋವೃಷೋ ದ್ಯುತಿಧರಃ ಸರ್ವಶಸ್ತ್ರಭೃತಾಂ ವರಃ।**
**ಪ್ರಗ್ರಹೋ ನಿಗ್ರಹೋ ವ್ಯಗ್ರೋ ನೈಕಶೃಙ್ಗೋ ಗದಾಗ್ರಜಃ ॥೮೪॥**

## (ಭಾಷ್ಯ)

೭೫೭. ತೇಜಸಾಮಮ್ಭಸಾಂ ಸರ್ವದಾ ಆದಿತ್ಯರೂಪೇಣ ವರ್ಷಣಾತ್ ತೇಜೋವೃಷಃ। ೭೫೮. ದ್ಯುತಿಮ್ ಅಙ್ಗಗತಾಂ ಕಾನ್ತಿಂ ಧಾರಯನ್ ದ್ಯುತಿಧರಃ। ೭೫೯. ಸರ್ವಶಸ್ತ್ರಭೃತಾಂ ಶ್ರೇಷ್ಠಃ ಸರ್ವಶಸ್ತ್ರಭೃತಾಂ ವರಃ॥

## (ಭಾಷ್ಯಾರ್ಥ)

ತೇಜಸ್ಸುಗಳನ್ನು ಎಂದರೆ ನೀರನ್ನು ಯಾವಾಗಲೂ ಆದಿತ್ಯರೂಪದಿಂದ ಮಳೆಗರೆಯುತ್ತಿರುವುದರಿಂದ **ತೇಜೋವೃಷನು.** ದ್ಯುತಿಯನ್ನು ಎಂದರೆ ಅಂಗಗಳ ಕಾಂತಿಯನ್ನು ಧರಿಸಿರುವನಾದ್ದರಿಂದ **ದ್ಯುತಿಧರನು.** ಶಸ್ತ್ರಗಳನ್ನು ಧರಿಸಿರುವವರಲ್ಲೆಲ್ಲ ಶ್ರೇಷ್ಠನು, (ಆದ್ದರಿಂದ) **ಸರ್ವಶಸ್ತ್ರಭೃತಾಂ ವರನು.**

---

1. ನಞ್, ದುಸ್, ಸು - ಇವುಗಳ ಮುಂದೆ ಇರುವ ಪ್ರಜ್ಞಾ, ಮೇಧಾ - ಶಬ್ದಗಳಿಗೆ ಮತ್ತು ಪ್ರಜ್ಞಾ, ಮೇಧಾಶಬ್ದಗಳ ಕೊನೆಯಲ್ಲಿರುವ ಬಹುವ್ರೀಹಿಗೆ ಈ ಪ್ರತ್ಯಯವು ಬರುವದು. ಇಲ್ಲಿ ಸು (ಒಳ್ಳೆಯ) ಪ್ರಜ್ಞೆ ಎಂದರೆ ನಾಶವಿಲ್ಲದೆ ಯಾವಾಗಲೂ ಇರುವ (ಬೃ.೪-೩-೨) ಚೈತನ್ಯರೂಪದೃಷ್ಟಿ ಎಂದರ್ಥ - ಎಂದು ವ್ಯಾ॥ ವಿವೃತಿಯಲ್ಲಿದೆ.
2. ಯಜಮಾನನು ದೀಕ್ಷೆಗಳಿಂದ ಹುಟ್ಟುತ್ತಾನಾದ್ದರಿಂದ ಮೇಧಜನು ಎಂದು ವ್ಯಾ॥ ವ್ಯಾಖ್ಯಾನ.

## (ಭಾಷ್ಯ)

೭೬೦. ಭಕ್ತೈರುಪಹೃತಂ ಪತ್ರಪುಷ್ಪಾದಿಕಂ ಪ್ರಗೃಹ್ಣಾತೀತಿ ಪ್ರಗ್ರಹಃ। ಧಾವತೋ ವಿಷಯಾರಣ್ಯೇ ದುರ್ದಾನ್ತೇನ್ದ್ರಿಯವಾಜಿನಃ ತತ್ಪ್ರಸಾದೇನ ರಶ್ಮಿನೇವ ಬಧ್ನಾತಿ ಇತಿ ವಾ ಪ್ರಗ್ರಹವತ್ ಪ್ರಗ್ರಹಃ। 'ರಶ್ಮೌ ಚ' (ಪಾ. ೩-೩-೫೩) ಇತಿ ಪಾಣಿನಿವಚನಾತ್ ಪ್ರಗ್ರಹಶಬ್ದಸ್ಯ ಸಾಧುತ್ವಮ್। ೭೬೧. ಸ್ವವಶೇನ ಸರ್ವಂ ನಿಗೃಹ್ಣಾತೀತಿ ನಿಗ್ರಹಃ। ೭೬೨. ವಿಗತಮ್ ಅನ್ತಃ ವಿನಾಶಃ ಅಸ್ಯೇತಿ ವ್ಯಗ್ರಃ। ಭಕ್ತಾನಾಮಭೀಷ್ಟಪ್ರದಾನೇಷು ವ್ಯಗ್ರ ಇತಿ ವಾ। ೭೬೩. ಚತುಃಶೃಙ್ಗೋ ನೈಕಶೃಙ್ಗಃ। 'ಚತ್ವಾರಿ ಶೃಙ್ಗಾಃ' (ಮಹಾ.ನಾ ೧೨-೨೭) ಇತಿ ಮನ್ತ್ರವರ್ಣಾತ್। ೭೬೪. ನಿಗದೇನ ಮನ್ತ್ರೇಣ ಅಗ್ರೇ ಜಾಯತೇ ಇತಿ ವಾ ನಿಶಬ್ದಲೋಪಂ ಕೃತ್ವಾ ಗದಾಗ್ರಜಃ। ಯದ್ವಾ ಗದೋ ನಾಮ ಶ್ರೀವಾಸುದೇವಾವರಜಃ ತಸ್ಮಾದಗ್ರೇ ಜಾಯತೇ ಇತಿ ಗದಾಗ್ರಜಃ॥೯೪॥

## (ಭಾಷ್ಯಾರ್ಥ)

ಭಕ್ತರು ತಂದು ಸಮರ್ಪಿಸಿದ ಎಲೆ, ಹೂ - ಮೊದಲಾದವುಗಳನ್ನು ಸ್ವೀಕರಿಸುತ್ತಾನಾದ್ದರಿಂದ **ಪ್ರಗ್ರಹನು.** ಅಥವಾ ವಿಷಯಗಳೆಂಬ ಕಾಡಿನಲ್ಲಿ ಓಡುತ್ತಿರುವ ಪಳಗದೆ ಇರುವ ಇಂದ್ರಿಯಗಳೆಂಬ ಕುದುರೆಗಳನ್ನು ಆತನ ಪ್ರಸಾದದಿಂದ - ಲಗಾಮಿನಿಂದ ಕಟ್ಟುವಂತೆ - ಕಟ್ಟುತ್ತಾರಾದ್ದರಿಂದ ಈತನು **ಪ್ರಗ್ರಹನು.** 'ರಶ್ಮೌ ಚ' ಎಂಬ ಪಾಣಿನಿಯ ವಚನದಿಂದ ಪ್ರಗ್ರಹಶಬ್ದವು ಸಾಧು. ತನ್ನ ವಶದಲ್ಲಿರುವಂತೆ ಎಲ್ಲವನ್ನೂ ಕಟ್ಟಿನಲ್ಲಿಟ್ಟಿರುತ್ತಾನಾದ್ದರಿಂದ **ನಿಗ್ರಹನು.** ಇವನ ಅಗ್ರವು, ಎಂದರೆ ಅಂತವು, ವಿನಾಶವು ವಿಗತವಾಗಿದೆ. (ಇಲ್ಲವಾಗಿದೆ). ಆದ್ದರಿಂದ **ವ್ಯಗ್ರನು.** ಅಥವಾ ಭಕ್ತರಿಗೆ ಬೇಕೆನಿಸುವವನ್ನು ಕೊಡುವಿಕೆಯಲ್ಲಿ ವ್ಯಗ್ರನಾಗಿರುತ್ತಾನೆ, ಆದ್ದರಿಂದ **ವ್ಯಗ್ರನು.** ಚತುಃಶೃಙ್ಗ ಎಂದರೆ ನಾಲ್ಕು ಕೋಡುಗಳು ಇರುವಾತನು, ಆದ್ದರಿಂದ **ನೈಕಶೃಂಗನು.** 'ನಾಲ್ಕು ಶೃಂಗಗಳು ಈ (ವೃಷಭನಿಗೆ) ಇವೆ' ಎಂಬ ಮಂತ್ರವರ್ಣವು[1] ಇದಕ್ಕೆ ಪ್ರಮಾಣ. ನಿಗದದಿಂದ ಎಂದರೆ ಮಂತ್ರದಿಂದ ಮೊದಲು ಹುಟ್ಟುತ್ತಾನೆ,[2] ಆದ್ದರಿಂದ 'ನಿಗದಾಗ್ರಜನು'. ಇಲ್ಲಿ ನಿಶಬ್ದವು ಲೋಪವಾಗಿ **(ಗದಾಗ್ರಜ ಎಂದಾಗಿದೆ).** ಅಥವಾ ಗದನೆಂಬವನು ಶ್ರೀವಾಸುದೇವನ ತಮ್ಮನು, ಅವನಿಗಿಂತ ಮುಂಚೆ ಹುಟ್ಟಿದವನಾದ್ದರಿಂದ **ಗದಾಗ್ರಜನು.**

---

1. 'ನಾಲ್ಕು ವೇದಗಳೇ ಯಜ್ಞಪುರುಷನೆಂಬ ವೃಷಭನಿಗೆ ಕೋಡುಗಳು ಎಂದಾಗಿರುತ್ತವೆ' ಎಂಬ ಆಧಾರದಿಂದ ವ್ಯಾಖ್ಯಾನದಲ್ಲಿ ಇವನ್ನು ವಿವರಿಸಿದೆ.

2. ಪೂರ್ವಜನ್ಮದಲ್ಲಿ ಮಾಡಿದ ಅಶ್ವಮೇಧಾದಿಯಾಗದಿಂದ ಸೃಷ್ಟಿಯಲ್ಲಿ ಮೊಟ್ಟ ಮೊದಲು ಹಿರಣ್ಯಗರ್ಭರೂಪದಿಂದ ಹುಟ್ಟುತ್ತಾನೆ ಎಂದು ವ್ಯಾಖ್ಯಾನ.

**ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಶ್ಚತುರ್ಗತಿಃ।**
**ಚತುರಾತ್ಮಾ ಚತುರ್ಭಾವಶ್ಚತುರ್ವೇದವಿದೇಕಪಾತ್ ॥೮೫॥**

## ಭಾಷ್ಯ

೭೬೫. ಚತಸ್ರೋ ಮೂರ್ತಯಃ ವಿರಾಟ್ - ಸೂತ್ರಾವ್ಯಾಕೃತತುರೀಯಾತ್ಮಾನಃ ಅಸ್ಯ - ಇತಿ ಚತುರ್ಮೂರ್ತಿಃ। ಸಿತಾ, ರಕ್ತಾ, ಪೀತಾ, ಕೃಷ್ಣಾ ಚೇತಿ ಚತಸ್ರೋ ಮೂರ್ತಯಃ ಅಸ್ಯ ಇತಿ ವಾ। ೭೬೬. ಚತ್ವಾರಃ ಬಾಹವಃ ಅಸ್ಯೇತಿ ಚತುರ್ಬಾಹುಃ ಇತಿ ನಾಮ ವಾಸುದೇವೇ ರೂಢಮ್। ೭೬೭. 'ಶರೀರಪುರುಷಃ ಛನ್ದಃಪುರುಷೋ ವೇದಪುರುಷಃ ಮಹಾಪುರುಷಃ' (ಐ. ಆ. ೩-೪-೨) ಇತಿ ಬಹ್ವೃಚೋಪನಿಷದುಕ್ತಾಃ ಚತ್ವಾರಃ ಪುರುಷಾ ವ್ಯೂಹಾ ಅಸ್ಯ - ಇತಿ ಚತುರ್ವ್ಯೂಹಃ। ೭೬೮. ಆಶ್ರಮಾಣಾಂ ವರ್ಣಾನಾಂ ಚತುರ್ಣಾಂ ಯಥೋಕ್ತಕಾರಿಣಾಂ ಗತಿಃ ಚತುರ್ಗತಿಃ॥

## (ಭಾಷ್ಯಾರ್ಥ)

ವಿರಾಟ್, ಸೂತ್ರ, ಅವ್ಯಾಕೃತ, ತುರೀಯಾತ್ಮ - ಎಂಬ ನಾಲ್ಕು ಮೂರ್ತಿಗಳು ಈತನವು, ಆದ್ದರಿಂದ **ಚತುರ್ಮೂರ್ತಿಯು**.[1] ಬಿಳಿಯದು, ಕೆಂಪನೆಯದು, ಹಳದಿ, ಕಪ್ಪು - ಹೀಗೆ ನಾಲ್ಕು ಮೂರ್ತಿಗಳು ಈತನವು. ಆದ್ದರಿಂದ **(ಚತುರ್ಮೂರ್ತಿ)** ಎಂದಾದರೂ ವ್ಯಾಖ್ಯಾನಮಾಡಬಹುದು. ನಾಲ್ಕು ಬಾಹುಗಳು ಈತನವು, ಆದ್ದರಿಂದ **ಚತುರ್ಬಾಹು** ಎಂದು ವಾಸುದೇವನಿಗೆ ರೂಢನಾಮವಿದೆ.[2] 'ಶರೀರಪುರುಷ, ಛನ್ದಃಪುರುಷ, ವೇದಪುರುಷ, ಮಹಾಪುರುಷ' ಎಂದು **ಬಹ್ವೃಚೋಪನಿಷತ್ತಿನಲ್ಲಿ** ಹೇಳಿರುವ ನಾಲ್ಕು ಪುರುಷರು ಈತನ ವ್ಯೂಹಗಳು, ಆದ್ದರಿಂದ (ಇವನು) **ಚತುರ್ವ್ಯೂಹನು**. ನಾಲ್ಕು ವರ್ಣಗಳಿಗೂ ನಾಲ್ಕು ಆಶ್ರಮಗಳಿಗೂ ಹೇಳಿರುವ ಕರ್ಮಗಳನ್ನು ಸರಿಯಾಗಿ ಅನುಷ್ಠಾನಮಾಡುವವರಿಗೆ ಗತಿಯು, (ಆದ್ದರಿಂದ) **ಚತುರ್ಗತಿಯು**.

## (ಭಾಷ್ಯ)

೭೬೯. ರಾಗದ್ವೇಷಾದಿರಹಿತತ್ವಾತ್ ಚತುರ ಆತ್ಮಾ ಮನಃ ಅಸ್ಯೇತಿ, ಮನೋಬುದ್ಧ್ಯಹಙ್ಕಾರ ಚಿತ್ತಾಖ್ಯಾನ್ತಃಕರಣಚತುಷ್ಟಯಾತ್ಮಕತ್ವಾದ್ ವಾ ಚತುರಾತ್ಮಾ। ೭೭೦. ಧರ್ಮಾರ್ಥಕಾಮಮೋಕ್ಷಾಖ್ಯಪುರುಷಾರ್ಥಚತುಷ್ಟಯಂ ಭವತಿ ಉತ್ಪದ್ಯತೇ ಅಸ್ಮಾದಿತಿ ವಾ ಚತುರ್ಭಾವಃ। ೭೭೧. ಯಥಾವದ್ ವೇತ್ತಿ ಚತುರ್ಣಾಂ ವೇದಾನಾಮ್ ಅರ್ಥಮ್ ಇತಿ ಚತುರ್ವೇದವಿತ್। ೭೭೨. ಏಕಃ ಪಾದಃ ಅಸ್ಯ ಇತಿ ಏಕಪಾತ್।

1. ಮಾಂಡೂಕ್ಯದಲ್ಲಿರುವ ವೈಶ್ವಾನರ, ತೈಜಸ, ಪ್ರಾಜ್ಞ, ತುರೀಯ - ಎಂಬ ನಾಲ್ಕನ್ನು ಅಲ್ಲಿ 'ಪಾದ'ಗಳೆಂದು ಕರೆದಿದೆ. 'ಮೂರ್ತಿ'ಗಳೆಂಬ ಹೆಸರು ಎಲ್ಲಿದೆಯೋ ತಿಳಿಯಲಿಲ್ಲ.
2. ಬೇರೆಯ ದೇವತೆಗಳಿಗೂ ನಾಲ್ಕು ಬಾಹುಗಳಿದ್ದರೂ ಈ ಹೆಸರು ವಾಸುದೇವನಿಗೆ ಮಾತ್ರ ಸಲ್ಲುವದು.

'ಪಾದೋಽಸ್ಯ ವಿಶ್ವಾಭೂತಾನಿ' (ಪು.ಸೂ. ೩) ಇತಿ ಶ್ರುತೇಃ। 'ವಿಷ್ಟಭ್ಯಾಹಮಿದಂ ಕೃತ್ಸ್ನಮೇಕಾಂಶೇನ ಸ್ಥಿತೋ ಜಗತ್' (ಗೀ.೧೦-೪೨) ಇತಿ ಭಗವದ್ವಚನಾಚ್ಚ ॥೯೫॥

## (ಭಾಷ್ಯಾರ್ಥ)

ರಾಗದ್ವೇಷಾದಿಗಳು ಇಲ್ಲವಾದ್ದರಿಂದ ಚತುರ (ನಿಪುಣ)ವಾದ ಆತ್ಮವು ಎಂದರೆ ಅಂತಃಕರಣವು ಈತನದು, ಆದ್ದರಿಂದ **ಚತುರಾತ್ಮನು**. ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ (ಎಂಬ) ನಾಲ್ಕು ಬಗೆಯ (ವೃತ್ತಿಗಳುಳ್ಳ) ಅಂತಃಕರಣವುಳ್ಳವನಾದ್ದರಿಂದ **ಚತುರಾತ್ಮನು** ಎಂದಾದರೂ (ಈ ನಾಮಕ್ಕೆ ಅರ್ಥವನ್ನು ಹೇಳಬಹುದು). ಧರ್ಮ, ಅರ್ಥ, ಕಾಮ, ಮೋಕ್ಷ - ಎಂಬ ನಾಲ್ಕು ಬಗೆಯ ಪುರುಷಾರ್ಥವು ಈತನಿಂದ ಆಗುತ್ತದೆ, ಆದ್ದರಿಂದ **ಚತುರ್ಭಾವನು**. ನಾಲ್ಕು ವೇದಗಳ ಅರ್ಥವನ್ನು ಇದ್ದದ್ದು ಇದ್ದಂತೆ ಬಲ್ಲವನು, ಆದ್ದರಿಂದ **ಚತುರ್ವೇದವಿತ್** (ಎನಿಸುವನು). ಒಂದು ಪಾದವು ಆತನದು, ಆದ್ದರಿಂದ **ಏಕಪಾತ್**. 'ಎಲ್ಲಾ ಭೂತಗಳೂ ಈತನ ಒಂದು ಪಾದವು' ಎಂಬ ಶ್ರುತಿಯು ಇದಕ್ಕೆ ಆಧಾರ.[1] 'ಈ ಇಡಿಯ ಜಗತ್ತೆಲ್ಲವನ್ನೂ ಒಂದು ಅಂಶದಿಂದ ಹಿಡಿದೆತ್ತಿಕೊಂಡಿರುವೆನು' ಎಂಬ ಭಗವದ್ವಚನದಿಂದಲೂ (ಹೀಗೆ ಅರ್ಥ).

**ಸಮಾವರ್ತೋಽನಿವೃತ್ತಾತ್ಮಾ ದುರ್ಜಯೋ ದುರತಿಕ್ರಮಃ।**
**ದುರ್ಲಭೋ ದುರ್ಗಮೋ ದುರ್ಗೋ ದುರಾವಾಸೋ ದುರಾರಿಹಾ ॥೯೬॥**

## (ಭಾಷ್ಯ)

೭೭೩. ಸಂಸಾರಚಕ್ರಸ್ಯ ಸಮ್ಯಗಾವರ್ತಕ ಇತಿ ಸಮಾವರ್ತಃ। ೭೭೪. ಸರ್ವತ್ರ ವರ್ತಮಾನತ್ವಾತ್ ನ ನಿವೃತ್ತಃ ಆತ್ಮಾ ಕುತೋಽಪೀತಿ ಅನಿವೃತ್ತಾತ್ಮಾ। ನಿವೃತ್ತಃ ಆತ್ಮಾ ಮನಃ ವಿಷಯೇಭ್ಯಃ ಅಸ್ಯೇತಿ ವಾ ನಿವೃತ್ತಾತ್ಮಾ। ೭೭೫. ಜೇತುಂ ನ ಶಕ್ಯತ ಇತಿ ದುರ್ಜಯಃ। ೭೭೬. ಭಯಹೇತುತ್ವಾದ್ ಅಸ್ಯ ಆಜ್ಞಾಂ ಸೂರ್ಯಾದಯೋ ನಾತಿಕ್ರಾಮನ್ತೀತಿ ದುರತಿಕ್ರಮಃ। 'ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ। ಭಯಾದಿನ್ದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಞ್ಚಮಃ' (ಕಾ. ೬-೩) ಇತಿ ಮನ್ತ್ರವರ್ಣಾತ್। 'ಮಹದ್ಭಯಂ ವಜ್ರಮುದ್ಯತಮ್' (ಕಾ.೬-೨) ಇತಿ ಚ॥

1. ಜಗತ್ತೆಲ್ಲವೂ ಈತನ ಕಾಲುಪಾಲು - ಎಂದು ಶ್ರುತಿಗೆ ಅರ್ಥ, ಸ್ಮೃತಿಯಲ್ಲಂತೂ ಅಂಶವೆಂದೇ ಸ್ಪಷ್ಟವಾಗಿದೆ.

(ಭಾಷ್ಯಾರ್ಥ)

ಸಂಸಾರಚಕ್ರವನ್ನು ಚೆನ್ನಾಗಿ ತಿರುಗಿಸುತ್ತಿರುವವನು, ಆದ್ದರಿಂದ **ಸಮಾವರ್ತನು.** ಎಲ್ಲೆಲ್ಲಿಯೂ ಇರುವದರಿಂದ ಇವನ ಆ ಆತ್ಮ (ಸ್ವರೂಪ)ವು ಎಲ್ಲಿಂದಲೂ ಹಿಂತಿರುಗಿ ಬಂದಿಲ್ಲ, ಆದ್ದರಿಂದ **ಅನಿವೃತ್ತಾತ್ಮನು.** ವಿಷಯಗಳಿಂದ ಹಿಮ್ಮೆಟ್ಟಿದ ಆತ್ಮವು, ಎಂದರೆ ಮನಸ್ಸು ಈತನದು, ಆದ್ದರಿಂದ **ನಿವೃತ್ತಾತ್ಮನು** ಎಂದು (ಅಕಾರಪ್ರಶ್ಲೇಷವಿಲ್ಲದೆಯೂ ಒಂದು ನಾಮ). ಜಯಿಸುವದಕ್ಕೆ (ಯಾರಿಂದಲೂ) ಆಗಲಾರದು, ಆದ್ದರಿಂದ **ದುರ್ಜಯನು.** ಭಯಕ್ಕೆ ಕಾರಣನಾಗಿರುವದರಿಂದ ಈತನ ಆಜ್ಞೆಯನ್ನು ಸೂರ್ಯಾದಿಗಳು (ಕೂಡ) ಮೀರುವದಿಲ್ಲ, ಆದ್ದರಿಂದ **ದುರತಿಕ್ರಮನು.** 'ಈತನ ಭಯದಿಂದ ಅಗ್ನಿಯು ಸುಡುತ್ತಿರುವನು, (ಈತನ) ಭಯದಿಂದ ಸೂರ್ಯನು ತಪಿಸುತ್ತಿರುವನು, (ಈತನ) ಭಯದಿಂದಲೇ ಇಂದ್ರನೂ ವಾಯುವೂ (ತಮ್ಮ ತಮ್ಮ ಕರ್ಮವನ್ನು ಮಾಡುತ್ತಿರುವರು), 'ಮೃತ್ಯುವು ಐದನೆಯವನಾಗಿ ಓಡುತ್ತಿರುವನು' ಎಂದೂ '(ಈತನು) ಎತ್ತಿದ ವಜ್ರಾಯುಧದಂತೆ ಮಹಾಭಯ(ನಾಗಿರುವನು)' ಎಂದೂ ಮಂತ್ರವರ್ಣವಿರುವದರಿಂದ (ಹೀಗೆ ಅರ್ಥ).

(ಭಾಷ್ಯ)

೭೭೭. ದುರ್ಲಭಯಾ ಭಕ್ತ್ಯಾ ಲಭ್ಯತ ಇತಿ ದುರ್ಲಭಃ। 'ಜನ್ಮಾನ್ತರಸಹಸ್ರೇಷು ತಪೋಜ್ಞಾನಸಮಾಧಿಭಿಃ। ನರಾಣಾಂ ಕ್ಷೀಣಪಾಪಾನಾಂ ಕೃಷ್ಣೇ ಭಕ್ತಿಃ ಪ್ರಜಾಯತೇ'(?) ಇತಿ ವ್ಯಾಸವಚನಾತ್। 'ಭಕ್ತ್ಯಾ ಲಭ್ಯಸ್ತ್ವನನ್ಯಯಾ' (ಗೀ. ೮-೨೨) ಇತಿ ಭಗವದ್ವಚನಾಚ್ಚ। ೭೭೮. ದುಃಖೇನ ಗಮ್ಯತೇ ಜ್ಞಾಯತೇ ಇತಿ ದುರ್ಗಮಃ। ೭೭೯. ಅನ್ತರಾಯಪ್ರತಿಹತೈರ್ದುಃಖಾದವಾಪ್ಯತ ಇತಿ ದುರ್ಗಃ। ೭೮೦. ದುಃಖೇನಾವಾಸ್ಯತೇ ಚಿತ್ತೇ ಯೋಗಿಭಿಃ ಸಮಾಧೌ ಇತಿ ದುರಾವಾಸಃ। ೭೮೧. ದುರಾರಿಣೋ ದಾನವಾದಯಃ, ತಾನ್ ಹನ್ತೀತಿ ದುರಾರಿಹಾ ॥೯೭॥

(ಭಾಷ್ಯಾರ್ಥ)

ಸಿಕ್ಕುವದು ಕಷ್ಟವಾಗಿರುವ ಭಕ್ತಿಯಿಂದ ಲಭಿಸತಕ್ಕವನಾದ್ದರಿಂದ **ದುರ್ಲಭನು.** 'ಸಾವಿರಾರು ಜನ್ಮಾಂತರಗಳಲ್ಲಿ ಮಾಡಿದ ತಪಸ್ಸು, ಜ್ಞಾನ, ಸಮಾಧಿ - ಇವುಗಳಿಂದ ಪಾಪವು ಸವೆದಿರುವ ಮನುಷ್ಯರಿಗೆ ಕೃಷ್ಣನಲ್ಲಿ ಭಕ್ತಿಯು ಉಂಟಾಗುವದು' (?) ಎಂದು **ವ್ಯಾಸವಚನ**ವಿರುವದರಿಂದಲೂ ('ಆ ಪರಮಪುರುಷನು) ಅನನ್ಯ ಭಕ್ತಿಯಿಂದಲಾದರೆ ಲಭ್ಯನು' ಎಂದು ಭಗವದ್ವಚನವಿರುವದರಿಂದಲೂ (ಹೀಗೆ ಅರ್ಥ). ದುಃಖದಿಂದ (ಕಷ್ಟದಿಂದ) ಪಡೆಯಲ್ಪಡುತ್ತಾನೆ ಎಂದರೆ ಅರಿಯಲು ಬರುತ್ತಾನೆ, ಆದ್ದರಿಂದ **ದುರ್ಗಮನು.** ಅಡ್ಡಿಗಳನ್ನು ನಾಶಗೊಳಿಸಿಕೊಂಡದ್ದರಿಂದ ಕಷ್ಟದಿಂದ (ಇವನನ್ನು) ಪಡೆಯುವದಕ್ಕೆ ಆಗುತ್ತದೆ, ಆದ್ದರಿಂದ **ದುರ್ಗನು.**

ಯೋಗಿಗಳಾದವರು ಸಮಾಧಿಯಲ್ಲಿ ಕಷ್ಟದಿಂದ ಚಿತ್ತದಲ್ಲಿ (ಈತನನ್ನು) ನಿಲ್ಲಿಸಿಕೊಳ್ಳುತ್ತಾರೆ, ಆದ್ದರಿಂದ **ದುರಾವಾಸನು**. ದಾನವರೇ ಮುಂತಾದ ದುರಾರಿ (ಕೆಟ್ಟಶತ್ರು)ಗಳನ್ನು ಕೊಲ್ಲುತ್ತಾನೆ, ಆದ್ದರಿಂದ **ದುರಾರಿಹಾ** (ಎನಿಸುವನು).

**ಶುಭಾಙ್ಗೋ ಲೋಕಸಾರಙ್ಗಃ ಸುತನ್ತುಸ್ತನ್ತುವರ್ಧನಃ।**
**ಇನ್ದ್ರಕರ್ಮಾ ಮಹಾಕರ್ಮಾ ಕೃತಕರ್ಮಾ ಕೃತಾಗಮಃ ॥೯೭॥**

(ಭಾಷ್ಯ)

೭೮೨. ಶುಭೈರಙ್ಗೈರ್ಧ್ಯೇಯತ್ವಾತ್ ಶುಭಾಙ್ಗಃ। ೭೮೩. ಲೋಕಾನಾಂ ಸಾರಂ ಸಾರಙ್ಗವದ್ ಭೃಙ್ಗವದ್ ಗೃಹ್ಣಾತೀತಿ ಲೋಕಸಾರಙ್ಗಃ। 'ಪ್ರಜಾಪತಿರ್ಲೋಕಾನಭ್ಯತಪತ್' (ಛಾಂ.೨-೨೩-೨) ಇತಿ ಶ್ರುತೇಃ। ಲೋಕಸಾರಃ ಪ್ರಣವಃ, ತೇನ ಪ್ರತಿಪತ್ತವ್ಯಃ ಇತಿ ವಾ ಪೃಷೋದರಾದಿತ್ವಾತ್ ಸಾಧುತ್ವಮ್। ೭೮೪. ಶೋಭನಃ ತನ್ತುಃ ವಿಸ್ತೀರ್ಣಃ ಪ್ರಪಞ್ಚಃ ಅಸ್ಯ - ಇತಿ ಸುತನ್ತುಃ। ೭೮೫. ತಮೇವ ವರ್ಧಯತಿ ಛೇದಯತಿ ಇತಿ ವಾ ತನ್ತುವರ್ಧನಃ॥

(ಭಾಷ್ಯಾರ್ಥ)

ಉತ್ತಮವಾದ ಅಂಗಗಳಿಂದ ಕೂಡಿದವನೆಂದು ಧ್ಯಾನಮಾಡತಕ್ಕವನು, ಆದ್ದರಿಂದ **ಶುಭಾಂಗನು**. ಲೋಕಗಳ ಸಾರವನ್ನು ಸಾರಂಗದಂತೆ ಎಂದರೆ ಭ್ರಮರದಂತೆ ಹೀರಿ ತೆಗೆದುಕೊಳ್ಳುತ್ತಾನೆ, ಆದ್ದರಿಂದ **ಲೋಕಸಾರಂಗನು**. 'ಪ್ರಜಾಪತಿಯು ಲೋಕಗಳನ್ನು ಕುರಿತು ಆಲೋಚಿಸಿದನು' ಎಂಬ ಶ್ರುತಿಯು (ಇದಕ್ಕೆ ಪ್ರಮಾಣವು). ಲೋಕದ ಸಾರವು ಪ್ರಣವವು, ಅದರಿಂದ ಅರಿಯಲ್ಪಡತಕ್ಕವನು, ಆದ್ದರಿಂದ (**ಲೋಕಸಾರಂಗನು**) ಎಂದಾದರೂ (ಈ ನಾಮದ ಅರ್ಥ). ಪೃಷೋದರಾದಿಗಣಕ್ಕೆ ಸೇರಿದ್ದರಿಂದ (ಸಾರಂಗ ಎಂಬ ಶಬ್ದವು) ಸಾಧುವಾಗಿರುತ್ತದೆ. ಸು (ಒಳ್ಳೆಯ) ತಂತು ಎಂದರೆ ಹರಡಿರುವ ಪ್ರಪಂಚವು ಈತನದು, ಆದ್ದರಿಂದ **ಸುತಂತುವು**. ಆ (ತಂತು)ವನ್ನೇ ಬೆಳೆಯಿಸುತ್ತಾನೆ ಅಥವಾ ಕತ್ತರಿಸುತ್ತಾನೆ[1] ಆದ್ದರಿಂದ **ತಂತುವರ್ಧನನು**.

(ಭಾಷ್ಯ)

೭೮೬. ಇನ್ದ್ರಸ್ಯ ಕರ್ಮೇವ ಕರ್ಮ ಅಸ್ಯ ಇತಿ ಇನ್ದ್ರಕರ್ಮಾ। ಐಶ್ವರ್ಯಕರ್ಮೇತ್ಯರ್ಥಃ। ೭೮೭. ಮಹಾನ್ತಿ ವಿಯದಾದೀನಿ ಭೂತಾನಿ ಕರ್ಮಾಣಿ ಕಾರ್ಯಾಣಿ ಅಸ್ಯ ಇತಿ ಮಹಾಕರ್ಮಾ. ೭೮೮. ಕೃತಮೇವ ಸರ್ವಂ ಕೃತಾರ್ಥತ್ವಾತ್,

1. ಪುಣ್ಯಪಾಪಕರ್ಮಗಳ ಸಂಸಾರಪ್ರಪಂಚವನ್ನು ಬೆಳೆಯಿಸುತ್ತಾನೆ, ಭಕ್ತರ ಸಂಸಾರವನ್ನು ಕತ್ತರಿಸಿ ಹಾಕುತ್ತಾನೆ.

ನ ಕರ್ತವ್ಯಂ ಕಿಞ್ಚಿದಪಿ ಕರ್ಮ ಅಸ್ಯ ವಿದ್ಯತೇ ಇತಿ ಕೃತಕರ್ಮಾ। ಧರ್ಮಾತ್ಮಕಂ ಕರ್ಮ ಕೃತವಾನ್ ಇತಿ ವಾ। ೭೮೯. ಕೃತೋ ವೇದಾತ್ಮಕೋ ಆಗಮಃ ಯೇನ ಇತಿ ಕೃತಾಗಮಃ। 'ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದಃ' (ಬೃ.೨-೪-೧೦) ಇತ್ಯಾದಿಶ್ರುತೇಃ॥ ೯೭॥

(ಭಾಷ್ಯಾರ್ಥ)

ಇಂದ್ರನ ಕರ್ಮದಂತೆ ಇರುವ ಕರ್ಮವು ಈತನದು, ಆದ್ದರಿಂದ, **ಇಂದ್ರಕರ್ಮನು.** ಸ್ವತಂತ್ರವಾದ ಕರ್ಮವುಳ್ಳವನು - ಎಂದರ್ಥ. ಆಕಾಶವೇ ಮುಂತಾದ ಮಹಾಭೂತಗಳು ಈತನ ಕರ್ಮಗಳು ಕಾರ್ಯಗಳು, ಆದ್ದರಿಂದ **ಮಹಾಕರ್ಮನು.** ಎಲ್ಲವನ್ನೂ ಮಾಡಿದ್ದೇ ಆಗಿದೆ, ಏಕೆಂದರೆ ಇವನು ಕೃತಾರ್ಥನು. ಮಾಡಬೇಕಾದದ್ದು ಏನೊಂದೂ ಉಳಿದಿಲ್ಲವಾದ್ದರಿಂದ **ಕೃತಕರ್ಮನು.** ಅಥವಾ ಧರ್ಮಸ್ವರೂಪವಾದ ಕರ್ಮವನ್ನು ಸೃಷ್ಟಿಮಾಡಿದವನು ಎಂದಾದರೂ (ಕೃತಕರ್ಮಾ ಎಂದು ಈ ನಾಮಕ್ಕೆ ಅರ್ಥ). ವೇದರೂಪವಾದ ಆಗಮವು ಯಾವನಿಂದ ಮಾಡಲ್ಪಟ್ಟಿದೆಯೋ ಆ ಈತನು **ಕೃತಾಗಮನು.** 'ಈ ಮಹಾಭೂತದ ನಿಟ್ಟುಸಿರೇ ಯಾವದೆಂದರೆ ಋಗ್ವೇದವು' ಮುಂತಾದ ಶ್ರುತಿಯು ಇದಕ್ಕೆ ಪ್ರಮಾಣವು.

**ಉದ್ಭವಃ ಸುನ್ದರಃ ಸುನ್ದೋ ರತ್ನನಾಭಃ ಸುಲೋಚನಃ।**
**ಅರ್ಕೋ ವಾಜಸನಃ ಶೃಙ್ಗೀ ಜಯನ್ತಃ ಸರ್ವವಿಜ್ಜಯೀ ॥೯೮॥**

(ಭಾಷ್ಯ)

೭೯೦. ಉತ್ಕೃಷ್ಟಂ ಭವಂ ಜನ್ಮ ಸ್ವೇಚ್ಛಯಾ ಭಜತಿ ಇತಿ, ಉದ್ಗತಮ್ ಅಪಗತಂ ಜನ್ಮ ಸರ್ವಕಾರಣತ್ವಾತ್ ಇತಿ ವಾ ಉದ್ಭವಃ। ೭೯೧. ವಿಶ್ವಾತಿಶಾಯಿ ಸೌಭಾಗ್ಯಶಾಲಿತ್ವಾತ್ ಸುನ್ದರಃ। ೭೯೨. ಸುಷ್ಠು ಉನತ್ತೀತಿ ಸುನ್ದಃ। 'ಉನ್ದೀ ಕ್ಲೇದನೇ' ಇತಿ ಧಾತೋಃ ಪಚಾದ್ಯಚ್। ಆರ್ದ್ರೀಭಾವಸ್ಯ ವಾಚಕಃ। ಕರುಣಾಕರಃ ಇತ್ಯರ್ಥಃ, ಪೃಷೋದರಾದಿತ್ವಾತ್ ಪರರೂಪತ್ವಮ್। ೭೯೩. ರತ್ನಶಬ್ದೇನ ಶೋಭಾ ಲಕ್ಷ್ಯತೇ, ರತ್ನವತ್ ಸುನ್ದರಾ ನಾಭಿರಸ್ಯೇತಿ ರತ್ನನಾಭಃ। ೭೯೪. ಶೋಭನಂ ಲೋಚನಂ ನಯನಂ ಜ್ಞಾನಂ ವಾ ಅಸ್ಯ ಇತಿ ಸುಲೋಚನಃ॥

(ಭಾಷ್ಯಾರ್ಥ)

ಉತ್ಕೃಷ್ಟವಾದ ಭವವನ್ನು ಜನ್ಮವನ್ನು ತನ್ನ ಇಚ್ಛೆಯಿಂದ ಪಡೆದುಕೊಳ್ಳುತ್ತಾನೆ, ಆದ್ದರಿಂದ **(ಉದ್ಭವನು).** ಅಥವಾ ಮೇಲಿನ, ಕೀಳಿನ ಜನ್ಮವು ಈತನದು; ಏಕೆಂದರೆ ಎಲ್ಲಕ್ಕೂ ಈತನು ಕಾರಣನು, ಆದ್ದರಿಂದ **ಉದ್ಭವನು.** ಎಲ್ಲಕ್ಕೂ ಮಿಗಿಲೆನಿಸಿದ ಸೌಭಾಗ್ಯವುಳ್ಳವನಾದ್ದರಿಂದ **ಸುಂದರನು.** ಚೆನ್ನಾಗಿ 'ಉನತ್ತಿ' ನೆನೆಯಿಸುತ್ತಾನೆ, ಆದ್ದರಿಂದ **ಸುಂದನು.** 'ಉನ್ದೀ-ಕ್ಲೇದನೇ' ಎಂಬೀ ಧಾತುವಿನಿಂದ

ಹುಟ್ಟಿದ ಶಬ್ದವಿದು. ಪಚಾದಿಯಾದ್ದರಿಂದ ಅಚ್‌ಪ್ರತ್ಯಯವು ಬಂದಿದೆ. ಇದು ಆರ್ದ್ರೀಭಾವ (ಕರಗುವದು) ವಾಚಕವಾದ (ಶಬ್ದ). (ಇವನು) ಕರುಣಾಕರನು ಎಂದು ಅರ್ಥ. ಪೃಷೋದರಾದಿಗಣಕ್ಕೆ ಸೇರಿರುವದರಿಂದ (ಸುನ್ದ ಎಂಬಲ್ಲಿ ಉಕಾರಕ್ಕೆ) ಪರರೂಪವು ಬಂದಿದೆ. 'ರತ್ನ' ಎಂಬ ಶಬ್ದಕ್ಕೆ ಶೋಭಾ (ಕಾಂತಿ)ಯು ಎಂದು ಲಕ್ಷಣೆಯಿಂದ (ಅರ್ಥ). ರತ್ನದಂತೆ ಸುಂದರವಾದ ನಾಭಿ (ಹೊಕ್ಕುಳು), ಈತನದು ಆದ್ದರಿಂದ **ರತ್ನನಾಭನು.** ಸು - ಒಳ್ಳೆಯ ಲೋಚನವು (ಕಣ್ಣು) ಅಥವಾ ಜ್ಞಾನವು ಈತನದು, ಆದ್ದರಿಂದ **ಸುಲೋಚನನು.**

## (ಭಾಷ್ಯ)

೭೯೫. ಬ್ರಹ್ಮಾದಿಭಿಃ ಪೂಜ್ಯತಮೈರಪ್ಯರ್ಚನೀಯತ್ವಾತ್ ಅರ್ಕಃ। ೭೯೬. ವಾಜಮನ್ನಮರ್ಥಿನಾಂ ಸನೋತಿ ದದಾತೀತಿ ವಾಜಸನಃ। ೭೯೭. ಪ್ರಲಯಾಮ್ಭಸಿ ಶೃಙ್ಗವತ್ ಮತ್ಸ್ಯವಿಶೇಷರೂಪಃ ಇತಿ ಶೃಙ್ಗೀ। ಮತ್ವರ್ಥೀಯೋಽತಿಶಾಯನೇ ಇನಿಪ್ರತ್ಯಯಃ। ೭೯೮. ಅರೀನ್ ಅತಿಶಯೇನ ಜಯತಿ। ಜಯಹೇತುರ್ವಾ ಜಯನ್ತಃ। ೭೯೯. ಸರ್ವವಿಷಯಂ ಜ್ಞಾನಮಸ್ಯೇತಿ ಸರ್ವವಿತ್। ಅಭ್ಯನ್ತರಾನ್ ರಾಗಾದೀನ್ ಬಾಹ್ಯಾನ್ ಹಿರಣ್ಯಾಕ್ಷಾದೀಂಶ್ಚ ದುರ್ಜಯಾನ್ ಜೇತುಂ ಶೀಲಮಸ್ಯ ಇತಿ ಜಯೀ। ತಚ್ಛೀಲಾಧಿಕಾರೇ "ಜಿದೃಕ್ಷಿ" (ಪಾ.ಸೂ.೩-೨-೧೫೭) ಇತ್ಯಾದಿಪಾಣಿನೀಯವಚನಾತ್ ಇನಿಪ್ರತ್ಯಯಃ। ಸರ್ವವಿಚ್ಚ ಅಸೌ ಜಯೀ ಚೇತಿ ಸರ್ವವಿಜ್ಜಯೀ ಇತ್ಯೇಕಂ ನಾಮ ॥೯೮॥

## (ಭಾಷ್ಯಾರ್ಥ)

ಹೆಚ್ಚಿನ ಪೂಜೆಗೆ ಅರ್ಹರಾದ ಬ್ರಹ್ಮಾದಿಗಳಿಂದಲೂ ಅರ್ಚಿಸಲ್ಪಡತಕ್ಕವನಾದ್ದರಿಂದ **ಅರ್ಕನು.** ವಾಜವನ್ನು ಎಂದರೆ ಅನ್ನವನ್ನು ಬೇಡುವವರಿಗೆ (ಸನೋತಿ) ಕೊಡುತ್ತಾನೆ. ಆದ್ದರಿಂದ **ವಾಜಸನನು.** ಪ್ರಲಯಕಾಲದಲ್ಲಿ ನೀರಿನಲ್ಲಿ (ಸಮುದ್ರದಲ್ಲಿ) ಕೋಡುಳ್ಳ ಒಂದು ಬಗೆಯ ಮತ್ಸ್ಯದ ರೂಪವುಳ್ಳವನಾದ್ದರಿಂದ **ಶೃಙ್ಗೀ** (ಎನಿಸುವನು). ಮತ್ವರ್ಥವುಳ್ಳ - ಹೆಚ್ಚು ಎಂಬುದನ್ನು ಹೇಳುವ - 'ಇನಿ' ಪ್ರತ್ಯಯವು (ಬಂದಿದೆ). ಅರಿಗಳನ್ನು ಹೆಚ್ಚಾಗಿ ಗೆಲ್ಲುತ್ತಾನೆ, ಅಥವಾ ಜಯಕ್ಕೆ ಕಾರಣನಾಗಿರುತ್ತಾನೆ, ಆದ್ದರಿಂದ **ಜಯಂತನು.** ಎಲ್ಲಾ ವಿಷಯದ ಜ್ಞಾನವೂ ಈತನಿಗೆ (ಇದೆ), ಆದ್ದರಿಂದ **ಸರ್ವವಿತ್** (ಎಂದು ಹೆಸರು). ಒಳಗಿನ ರಾಗವೇ ಮುಂತಾದ ಮತ್ತು ಹೊರಗಿನ ಹಿರಣ್ಯಾಕ್ಷನೇ ಮೊದಲಾದವರನ್ನು ಗೆಲ್ಲುವದಕ್ಕೆ ಅಸಾಧ್ಯರಾದವರನ್ನು ಗೆಲ್ಲುವ ಶೀಲ (ಸ್ವಭಾವ)ವು ಈತನದು, ಆದ್ದರಿಂದ **ಜಯೀ** (ಎನಿಸುವನು), ತಾಚ್ಛೀಲ್ಯಪ್ರತ್ಯಯದ ಅಧಿಕಾರದಲ್ಲಿ 'ಜಿದೃಕ್ಷಿ' ಮುಂತಾದ **ಪಾಣಿನೀಯವಚನ**ವಿರುವದರಿಂದ 'ಇನಿ'[1] ಪ್ರತ್ಯಯವು ತಾಚ್ಛೀಲ್ಯವನ್ನು ಹೇಳುವದಕ್ಕೆ ಬಂದಿದೆ. "ಸರ್ವವಿಧನಾದ ಜಯೀ - **ಸರ್ವವಿಜ್ಜಯೀ**' ಎಂದು ಒಂದೇ ನಾಮವಿದು.

---

1. ಜಯೀ, ದರೀ, ಕ್ಷಯೀ, ವಿಶ್ರಯೀ, ಅತ್ಯಯೀ, ವಮೀ, ಅವ್ಯಥೀ, ಅಭ್ಯಮೀ, ಪರಿಭವೀ, ಪ್ರಸವೀ - ಈ ಶಬ್ದಗಳಿಗೆ ಈ ಇನಿಪ್ರತ್ಯಯವೆಂದು ಸೂತ್ರಾರ್ಥ.

- ಈ ಶಬ್ದಗಳಿಗೆ ಈ ಇನಿಪ್ರತ್ಯಯವೆಂದು ಸೂತ್ರಾರ್ಥ.

**ಸುವರ್ಣಬಿನ್ದುರಕ್ಷೋಭ್ಯಃ ಸರ್ವವಾಗೀಶ್ವರೇಶ್ವರಃ।**
**ಮಹಾಹ್ರದೋ ಮಹಾಗರ್ತೋ ಮಹಾಭೂತೋ ಮಹಾನಿಧಿಃ ॥೯೯॥**

(ಭಾಷ್ಯ)

೮೦೦. ಬಿನ್ದವಃ ಅವಯವಾಃ ಸುವರ್ಣಸದೃಶಾಃ ಅಸ್ಯೇತಿ ಸುವರ್ಣಬಿನ್ದುಃ। 'ಆ ಪ್ರಣಖಾತ್ ಸರ್ವ ಏವ ಸುವರ್ಣಃ' (ಛಾಂ.೧-೬-೬) ಇತಿ ಶ್ರುತೇಃ। ಶೋಭನೋ ವರ್ಣೋಽಕ್ಷರಂ ಬಿನ್ದುಶ್ಚ ಯಸ್ಮಿನ್ ಮನ್ತ್ರೇ ತನ್ಮನ್ತ್ರಾತ್ಮಾ ವಾ ಸುವರ್ಣಬಿನ್ದುಃ॥

ಇತಿ ನಾಮ್ನಾಮ್ ಅಷ್ಟಮಂ ಶತಂ ವಿವೃತಮ್॥

(ಭಾಷ್ಯಾರ್ಥ)

ಈತನ ಬಿಂದುಗಳು ಎಂದರೆ ಅವಯವಗಳು ಸುವರ್ಣದಂತೆ (ಹೊಳೆಯುತ್ತಾ ಇವೆ). ಆದ್ದರಿಂದ **ಸುವರ್ಣಬಿಂದುವು**. 'ಉಗುರಿನ ಕೊನೆಯವರೆಗೂ ಎಲ್ಲವೂ ಸುವರ್ಣವೇ' ಎಂಬ ಶ್ರುತಿಯು ಇದಕ್ಕೆ ಪ್ರಮಾಣ. ಒಳ್ಳೆಯ ವರ್ಣವು ಎಂದರೆ ಅಕ್ಷರವೂ ಬಿಂದುವೂ ಯಾವ ಮಂತ್ರದಲ್ಲಿದೆಯೋ ಆ (ಓಂಕಾರ) ಮಂತ್ರಾತ್ಮಕನಾದವನು, ಆದ್ದರಿಂದ **ಸುವರ್ಣಬಿಂದು** ಎಂದಾದರೂ (ಅರ್ಥವನ್ನು ಹೇಳಬಹುದು).

ಇಲ್ಲಿಗೆ ನಾಮಗಳ ಎಂಟನೆಯ ಶತಕವನ್ನು ವಿವರಿಸಿದ್ದಾಯಿತು.

## ನವಮಶತಕ

### (ಭಾಷ್ಯ)

೮೦೧. ರಾಗದ್ವೇಷಾದಿಭಿಃ ಶಬ್ದಾದಿವಿಷಯೈಶ್ಚ ತ್ರಿದಶಾರಿಭಿಶ್ಚ ನ ಕ್ಷೋಭ್ಯತ ಇತ್ಯಕ್ಷೋಭ್ಯಃ। ೮೦೨. ಸರ್ವೇಷಾಂ ವಾಗೀಶ್ವರಾಣಾಂ ಬ್ರಹ್ಮಾದೀನಾಮಪೀಶ್ವರಃ ಸರ್ವವಾಗೀಶ್ವರೇಶ್ವರಃ॥

### (ಭಾಷ್ಯಾರ್ಥ)

ರಾಗದ್ವೇಷಾದಿಗಳಿಂದಲೂ ಶಬ್ದವೇ ಮುಂತಾದ ವಿಷಯಗಳಿಂದಲೂ ದೇವತೆಗಳ ಶತ್ರುಗಳಿಂದಲೂ ಅಲುಗಾಡಿಸುವದಕ್ಕಾಗುವದಿಲ್ಲ, ಆದ್ದರಿಂದ **ಅಕ್ಷೋಭ್ಯನು.** ಬ್ರಹ್ಮನೇ ಮುಂತಾದ ಎಲ್ಲಾ ವಾಗೀಶ್ವರರಿಗೂ ಈಶ್ವರನು, ಆದ್ದರಿಂದ **ಸರ್ವವಾಗೀಶ್ವರೇಶ್ವರನು.**

### (ಭಾಷ್ಯ)

೮೦೩. ಅವಗಾಹ್ಯ ತದಾನನ್ದಂ ವಿಶ್ರಮ್ಯ ಸುಖಮಾಸತೇ ಯೋಗಿನ ಇತಿ ಮಹಾಹ್ರದ ಇವ ಮಹಾಹ್ರದಃ। ೮೦೪. ಗರ್ತವದಸ್ಯ ಮಾಯಾ ಮಹತೀ ದುರತ್ಯಯೇತಿ ಮಹಾಗರ್ತಃ, 'ಮಮ ಮಾಯಾ ದುರತ್ಯಯಾ' (ಗೀ. ೭-೧೪) ಇತಿ ಭಗವದ್ವಚನಾತ್। ಯದ್ವಾ ಗರ್ತಶಬ್ದೋ ರಥಪರ್ಯಾಯೋ ನೈರುಕ್ತೈರುಕ್ತಃ, ತಸ್ಮಾತ್ ಮಹಾರಥೋ ಮಹಾಗರ್ತಃ, ಮಹಾರಥತ್ವಮಸ್ಯ ಪ್ರಸಿದ್ಧಂ ಭಾರತಾದಿಷು। ೮೦೫. ಕಾಲತ್ರಯಾನವಚ್ಛಿನ್ನಸ್ವರೂಪತ್ವಾತ್ ಮಹಾಭೂತಃ। ೮೦೬. ಸರ್ವಭೂತಾನಿ ಅಸ್ಮಿನ್ ನಿಧೀಯನ್ತೇ ಇತಿ ನಿಧಿಃ। ಮಹಾಂಶ್ಚಾಸೌ ನಿಧಿಶ್ಚೇತಿ ಮಹಾನಿಧಿಃ॥೯೧॥

### (ಭಾಷ್ಯಾರ್ಥ)

ದೊಡ್ಡ ಮಡುವಿನಲ್ಲಿ ಹೇಗೋ ಹಾಗೆ ಆತನ ಮಹಾನಂದದಲ್ಲಿ ಮುಳುಗಿ ಯೋಗಿಗಳು ವಿಶ್ರಾಂತಿಯನ್ನು ಹೊಂದಿ ಸುಖವಾಗಿ ಇರುತ್ತಾರೆ, ಆದ್ದರಿಂದ **ಮಹಾಹ್ರದನು** (ದೊಡ್ಡ ಮಡು). ದೊಡ್ಡ ಗುಂಡಿಯಂತೆ ಈತನ ಮಾಯೆಯು ದೊಡ್ಡದು, ದಾಟುವದಕ್ಕೆ ಅಶಕ್ಯವು, ಆದ್ದರಿಂದ **ಮಹಾಗರ್ತನು.** 'ನನ್ನ ಮಾಯೆ, ದಾಟಲಶಕ್ಯವಾದದ್ದು' ಎಂದು ಭಗವದ್ವಚನವಿರುವದರಿಂದ (ಹೀಗೆ ಅರ್ಥ). ಅಥವಾ ಗರ್ತಶಬ್ದವು ರಥಶಬ್ದದ ಪರ್ಯಾಯವೆಂದು **ನೈರುಕ್ತರು**[1]. ಹೇಳುತ್ತಾರೆ, ಆ ವಚನಪ್ರಮಾಣದಂತೆ ಮಹಾಗರ್ತನೆಂದರೆ ಮಹಾರಥನು (ಎಂದು ಅರ್ಥ). ಈತನು

---

1. 'ರಥೋಽಪಿ ಗರ್ತ ಉಚ್ಯತೇ। ಗೃಣಾತೇಃ ಸ್ತುತಿಕರ್ಮಣಃ। ಸ್ತುತತಮಂ ಯಾನಮ್' (ನಿರುಕ್ತ.೩-೧-೫) ಎಂಬ ನಿರುಕ್ತವಾಕ್ಯದಂತೆ ಈ ಅರ್ಥವೆಂದು ಭಾವ.

ಮಹಾರಥನೆಂಬುದು ಭಾರತವೇ ಮುಂತಾದವುಗಳಲ್ಲಿ ಪ್ರಸಿದ್ಧವಾಗಿರುತ್ತದೆ. ಮೂರು ಕಾಲಗಳ ಪರಿಚ್ಛೇದವೂ ಇಲ್ಲದ ರೂಪವುಳ್ಳವನಾಗಿರುವದರಿಂದ **ಮಹಾಭೂತನು.** ಎಲ್ಲಾ ಭೂತಗಳೂ ಈತನಲ್ಲಿ ಇಡಲ್ಪಟ್ಟಿವೆ, ಆದ್ದರಿಂದ ನಿಧಿ, ದೊಡ್ಡದಾದ ನಿಧಿಯಾಗಿರುವದರಿಂದ **ಮಹಾನಿಧಿಯು.**

**ಕುಮುದಃ ಕುನ್ದರಃ ಕುನ್ದಃ ಪರ್ಜನ್ಯಃ ಪಾವನೋಽನಿಲಃ।**
**ಅಮೃತಾಶೋಽಮೃತವಪುಃ ಸರ್ವಜ್ಞಃ ಸರ್ವತೋಮುಖಃ॥॥೧೦೦॥**

## (ಭಾಷ್ಯ)

೮೦೭. ಕುಂ ಧರಣೀಂ ಭಾರಾವತರಣಂ ಕುರ್ವನ್ ಮೋದಯತೀತಿ ಕುಮುದಃ। ಮುದಿರತ್ರ ಅನ್ತರ್ಭಾವಿತಣಿಜರ್ಥಃ। ೮೦೮. ಕುನ್ದಪುಷ್ಪತುಲ್ಯಾನಿ ಶುದ್ಧಾನಿ ಫಲಾನಿ ರಾತಿ ದದಾತಿ ಲಾತಿ ಆದತ್ತೇ ಇತಿ ವಾ ಕುನ್ದರಃ। ರಲಯೋರ್ವ್ಯತ್ಯೇಕತ್ವಸ್ಮರಣಾತ್। 'ಕುಂ ಧರಾಂ ಧಾರಯಾಮಾಸ ಹಿರಣ್ಯಾಕ್ಷಜಿಘಾಂಸಯಾ। ವಾರಾಹಂ ರೂಪಮಾಸ್ಥಾಯ' - ಇತಿ ವಾ ಕುನ್ದರಃ। ೮೦೯. ಕುನ್ದೋಪಮಸುನ್ದರಾಙ್ಗತ್ವಾತ್ ಸ್ವಚ್ಛತಯಾ ಸ್ಫಟಿಕ ನಿರ್ಮಲಃ ಕುನ್ದಃ, ಕುಂ ಪೃಥ್ವೀಂ ಕಶ್ಯಪಾಯ ಪ್ರಾದಾದಿತಿ ವಾ ಕುನ್ದಃ।

ಸರ್ವಪಾಪವಿಶುದ್ಧ್ಯರ್ಥಂ ವಾಜಿಮೇಧೇನ ಚೇಷ್ಟವಾನ್।
ತಸ್ಮಿನ್ ಯಜ್ಞೇ ಮಹಾದಾನೇ ದಕ್ಷಿಣಾಂ ಭೃಗುನನ್ದನಃ॥
ಮಾರೀಚಾಯ ದದೌ ಪ್ರೀತಃ ಕಶ್ಯಪಾಯ ವಸುನ್ಧರಾಮ್।

ಹರಿ. ೧-೪೧-೧೬, ೧೭.

ಇತಿ ಹರಿವಂಶೇ। ಕುಂ ಪೃಥ್ವೀಂ ದ್ಯತಿ ಖಣ್ಡಯತೀತಿ ವಾ ಕುನ್ದಃ। ಕುಶಬ್ದೇನ ಪೃಥ್ವೀಶ್ವರಾ ಲಕ್ಷ್ಯನ್ತೇ। 'ನಿಃಕ್ಷತ್ರಿಯಾಂ ಯಶ್ಚ ಚಕಾರ ಮೇದಿನೀಮ್। ಅನೇಕಶೋ ಬಾಹುವನಂ ತಥಾಚ್ಛಿನತ್। ಯಃ ಕಾರ್ತವೀರ್ಯಸ್ಯ ಸ ಭಾರ್ಗವೋತ್ತಮೋ ಮಮಾಸ್ತು ಮಾಙ್ಗಲ್ಯವಿವೃದ್ಧಯೇ ಹರಿಃ' (ವಿ.ಧ.೪೩-೩೭) ಇತಿ ವಿಷ್ಣುಧರ್ಮೇ। ೮೧೦. ಪರ್ಜನ್ಯವತ್ ಆಧ್ಯಾತ್ಮಿಕಾದಿತಾಪತ್ರಯಂ ಶಮಯತೀತಿ ಸರ್ವಾನ್ ಕಾಮಾನಭಿವರ್ಷತೀತಿ ವಾ ಪರ್ಜನ್ಯಃ। ೮೧೧. ಸ್ಮೃತಿಮಾತ್ರೇಣ ಪುನಾತೀತಿ ಪಾವನಃ ೮೧೨. ಇಲತಿ ಪ್ರೇರಣಂ ಕರೋತೀತಿ ಇಲಃ ತದ್ರಹಿತತ್ವಾತ್ ಅನಿಲಃ। ಇಲತಿ ಸ್ವಪಿತಿ ಇತ್ಯಜ್ಞಃ ಇಲಃ ತದ್ವಿಪರೀತಃ ಅನಿಲಃ ನಿತ್ಯಪ್ರಬುದ್ಧರೂಪತ್ವಾತ್ ಇತಿ ವಾ। ಅಥವಾ ನಿಲತೇರ್ಗಹನಾರ್ಥಾತ್ ಕಪ್ರತ್ಯಯಾನ್ತಾತ್ ರೂಪಮ್। ಅಗಹನಃ ಅನಿಲಃ ಭಕ್ತೇಭ್ಯಃ ಸುಲಭ ಇತಿ॥

## (ಭಾಷ್ಯಾರ್ಥ)

'ಕು'ವನ್ನು ಎಂದರೆ ಭೂಮಿಯನ್ನು (ಅದರ) ಭಾರವನ್ನು ಇಳಿಯಿಸುವದರಿಂದ ಸಂತೋಷಗೊಳಿಸುತ್ತಾನೆ, ಆದ್ದರಿಂದ **ಕುಮುದನು.** ಈ (ಶಬ್ದ) ದಲ್ಲಿರುವ

'ಮುದ್' ಧಾತುವು ಪ್ರೇರಣಾರ್ಥವನ್ನು ಅಡಕಮಾಡಿಕೊಂಡಿರುತ್ತದೆ. ಕುಂದಪುಷ್ಪದಂತೆ ಶುದ್ಧವಾಗಿರುವ ಫಲಗಳನ್ನು (ರಾತಿ-) ಕೊಡುತ್ತಾನೆ, ಆದ್ದರಿಂದ **ಕುಂದರನು.** ಅಥವಾ ಕುಂದಪುಷ್ಪದಂತೆ ಶುದ್ಧವಾಗಿರುವ ಹಣ್ಣುಗಳನ್ನು (ಲಾತಿ-) ತೆಗೆದುಕೊಳ್ಳುತ್ತಾನೆ, ಆದ್ದರಿಂದ **ಕುಂದರನು.** ರಕಾರಲಕಾರಗಳಿಗೆ ಒಂದೇ ಅರ್ಥವಿರುವದೆಂದು ಸ್ಮೃತಿಯಿರುವದರಿಂದ (ಈ ಅರ್ಥ).[1] ಕುವನ್ನು ಎಂದರೆ ಭೂಮಿಯನ್ನು - ಹಿರಣ್ಯಾಕ್ಷನನ್ನು ಕೊಲ್ಲುವ ಉದ್ದೇಶದಿಂದ - ವರಾಹನ ರೂಪವನ್ನು ಧರಿಸಿಕೊಂಡು ಸೀಳಿದನು, ಆದ್ದರಿಂದ **ಕುಂದರ** ಎಂದೂ ವ್ಯಾಖ್ಯಾನ. ಕುಂದದಂತೆ ಸುಂದರವಾದ ಶರೀರವುಳ್ಳವನಾದ್ದರಿಂದ ಸ್ಫಟಿಕದಂತೆ ನಿರ್ಮಲವಾಗಿರುವಾತನು, (ಆದ್ದರಿಂದ) **ಕುಂದನು।** ಕುವನ್ನು ಎಂದರೆ ಭೂಮಿಯನ್ನು ಕಶ್ಯಪನಿಗೆ ದಾನಮಾಡಿದನು, ಆದ್ದರಿಂದ **ಕುಂದನು** ಎಂದಾದರೂ (ವ್ಯಾಖ್ಯಾನ). 'ಎಲ್ಲಾ ಪಾಪಗಳೂ ಹೋಗುವದಕ್ಕಾಗಿ ವಾಜಪೇಯಯಾಗವನ್ನು ಮಾಡಿದನು. ಆ ಯಜ್ಞದಲ್ಲಿ ಭೃಗುನಂದನನಾದ (ರಾಮನು) ಮಹಾದಾನದ ದಕ್ಷಿಣೆಯಾಗಿ ಮರೀಚನ ಮಗನಾದ ಕಶ್ಯಪನಿಗೆ ಭೂಮಿಯನ್ನು ಸಂತೋಷದಿಂದ ಕೊಟ್ಟನು' ಎಂದು **ಹರಿವಂಶದಲ್ಲಿದೆ.** ಕುವನ್ನು ಎಂದರೆ ಪೃಥ್ವಿಯನ್ನು - (- ಪೃಥ್ವೀಪತಿಗಳಾದ ಕ್ಷತ್ರಿಯರಾಜರುಗಳನ್ನು) ಖಂಡಿಸಿದುತ್ತಾನೆ, ಆದ್ದರಿಂದ **ಕುಂದನು** ಎಂದಾದರೂ (ವ್ಯಾಖ್ಯಾನ). 'ಯಾವಾತನು ಭೂಮಿಯನ್ನು ಬಹುಸಲ ಕ್ಷತ್ರಿಯಶೂನ್ಯವಾಗಿ ಮಾಡಿದನೋ, ಕಾರ್ತವೀರ್ಯನ ಬಾಹುಗಳ ವನವನ್ನು ಕತ್ತರಿಸಿದನೋ ಆ ಭಾರ್ಗವೋತ್ತಮ (ಪರುಶುರಾಮ)ನಾದ ಹರಿಯು ನನಗೆ ಜ್ಞಾನಂಗಳ್ಯದ ವೃದ್ಧಿಯನ್ನು ಕೊಡುವವನಾಗಲಿ' ಎಂದು **ವಿಷ್ಣುಧರ್ಮ**ದಲ್ಲಿದೆ. ಪರ್ಜನ್ಯದಂತ (ಮೋಡದಂತೆ) ಆಧ್ಯಾತ್ಮಿಕವೇ ಮುಂತಾದ ತಾಪತ್ರಯಗಳನ್ನು ಶಾಂತಿಗೊಳಿಸುತ್ತಾನೆ, ಅಥವಾ ಕಾಮಿತಾರ್ಥಗಳನ್ನು ಮಳೆಗರೆಯುತ್ತಾನೆ, ಆದ್ದರಿಂದ **ಪರ್ಜನ್ಯನು.** ನೆನೆದ ಮಾತ್ರದಿಂದ ಪವಿತ್ರಗೊಳಿಸುತ್ತಾನೆ, ಆದ್ದರಿಂದ **ಪಾವನನು.** (ಇಲತಿ-) ಪ್ರೇರಣೆಯನ್ನು ಮಾಡುತ್ತದೆಯಾದ್ದರಿಂದ **ಇಲವು.** (ಆ ಪ್ರೇರಣೆಮಾಡುವದು) ಇಲ್ಲವಾದ್ದರಿಂದ **ಅನಿಲನು.** ಇಲತಿ - ನಿದ್ರಿಸುತ್ತಾನೆ, ಆದ್ದರಿಂದ ಅಜ್ಞನು **ಇಲನು.** ಅವನಿಗೆ ವಿಪರೀತವಾಗಿ (ಬೇರೆಯ ಪ್ರಕಾರದವನು). ಯಾವಾಗಲೂ ಎಚ್ಚತ್ತಿರುವ ಸ್ವರೂಪದವನಾದ್ದರಿಂದ **ಅನಿಲನು** ಎಂದಾದರೂ (ವ್ಯಾಖ್ಯಾನ). ಅಥವಾ ಗಹನವೆಂಬರ್ಥದ 'ನಿಲ್' ಎಂಬ ಧಾತುವಿಗೆ ಕಪ್ರತ್ಯಯವು ಬಂದು (ನಿಲ ಎಂದಾಗುವದು, ಆದ್ದರಿಂದ ಅನಿಲ ಎಂದರೆ) ಗಹನವಲ್ಲದವನು ಭಕ್ತರಿಗೆ ಸುಲಭನು, (ಆದ್ದರಿಂದ **ಅನಿಲನು**) ಎಂದರ್ಥ.

1. ಕುಂದ ಎಂಬುದು ಮೊಲ್ಲೆಹೂವಿಗೆ ಹೆಸರು. ಅದರಂತೆ ಶುದ್ಧವಾದ ಪುಣ್ಯದ ಫಲವನ್ನು ಕೊಡುತ್ತಾನೆ. ಅಥವಾ ಪರಿಶುದ್ಧವಾದ ಧ್ಯಾನಯಿಂದ ಕೂಡಿ ಭಕ್ತಿಯಿಂದ ಕೊಟ್ಟ ಫಲವನ್ನು ಸ್ವೀಕರಿಸುತ್ತಾನೆ, ಆದ್ದರಿಂದ ಕುಂದರ - ಎಂದು ಮೊದಲನೆಯ ಎರಡರ್ಥಗಳ ಸಾರ.

(ಭಾಷ್ಯ)

೮೧೩. ಸ್ವಾತ್ಮಾಮೃತಮಶ್ನಾತೀತಿ ಅಮೃತಾಶಃ.। ಮಥಿತಮಮೃತಂ ಸುರಾನ್ ಪಾಯಯಿತ್ವಾ ಸ್ವಯಂ ಚಾಶ್ನಾತೀತಿ ವಾ ಅಮೃತಾಶಃ। ಅಮೃತಾ ಅನಶ್ವರಫಲತ್ವಾತ್ ಆಶಾ ವಾಞ್ಛಾ ಅಸ್ಯೇತಿ ವಾ। ೮೧೪. ಮೃತಂ ಮರಣಮ್ ತದ್ರಹಿತಂ ವಪುಃ ಅಸ್ಯೇತಿ ಅಮೃತವಪುಃ। ೮೧೫. ಸರ್ವಂ ಜಾನಾತೀತಿ ಸರ್ವಜ್ಞಃ 'ಯಃ ಸರ್ವಜ್ಞಃ ಸರ್ವವಿತ್' (ಮುಂ.೧-೧-೯) ಇತಿ ಶ್ರುತೇಃ। ೮೧೬. 'ಸರ್ವತೋಽಕ್ಷಿಶಿರೋಮುಖಮ್' (ಗೀ.೧೩-೧೩) ಇತಿ ಭಗವದ್ವಚನಾತ್ ಸರ್ವತೋಮುಖಃ ॥೧೦೦॥

(ಭಾಷ್ಯಾರ್ಥ)

ತನ್ನ ಸ್ವರೂಪವಾದ ಅಮೃತವನ್ನು ಅನುಭವಿಸುತ್ತಾನೆ, ಆದ್ದರಿಂದ **ಅಮೃತಾಶನು.** ಕಡೆದ ಅಮೃತವನ್ನು ದೇವತೆಗಳಿಗೆ ಕುಡಿಸಿದನು, ತಾನೂ ಕುಡಿದನು, ಆದ್ದರಿಂದ **ಅಮೃತಾಶನು** ಎಂದಾದರೂ (ವ್ಯಾಖ್ಯಾನ). ನಾಶವಾಗದಿರುವ ಫಲವುಳ್ಳದ್ದಾದ್ದರಿಂದ ಅಮೃತವಾದ ಆಶೆಯು ಎಂದರೆ ಇಚ್ಛೆಯು ಈತನದು, ಆದ್ದರಿಂದ **ಅಮೃತಾಶನು** ಎಂದಾದರೂ (ವ್ಯಾಖ್ಯಾನ). ಮೃತವೆಂದರೆ ಮರಣವು, ಅದಿಲ್ಲದ ಶರೀರವು ಈತನದು, ಆದ್ದರಿಂದ **ಅಮೃತವಪುವು.** ಸರ್ವವನ್ನೂ ಅರಿತಿರುವವನಾದ್ದರಿಂದ **ಸರ್ವಜ್ಞನು.** 'ಯಾವನು ಸಾಮಾನ್ಯವಾಗಿ ಸರ್ವವನ್ನೂ ಅರಿತಿರುವನೋ, (ವಿಶೇಷದಿಂದಲೂ) ಅರಿಯುತ್ತಾನೋ' ಎಂಬ ಶ್ರುತಿಯು ಇವಕ್ಕೆ ಪ್ರಮಾಣವು, 'ಎಲ್ಲೆಲ್ಲಿಯೂ ಅಕ್ಷಿಗಳೂ ಇರುವವು' ಎಂದು ಭಗದ್ವಚನವಿರುವದರಿಂದ **ಸರ್ವತೋಮುಖನು.**

**ಸುಲಭಃ ಸುವ್ರತಃ ಸಿದ್ಧಃ ಶತ್ರುಜಿಚ್ಛತ್ರುತಾಪನಃ।**
**ನ್ಯಗ್ರೋಧೋದುಮ್ಬರೋಽಶ್ವತ್ಥಶ್ಚಾಣೂರಾನ್ಧ್ರನಿಷೂದನಃ ॥೧೦೧॥**

(ಭಾಷ್ಯ)

೮೧೭. ಪತ್ರಪುಷ್ಪಫಲಾದಿಭಿರ್ಭಕ್ತಿಮಾತ್ರಸಮರ್ಪಿತೈಃ ಸುಖೇನ ಲಭ್ಯತೇ ಇತಿ ಸುಲಭಃ। 'ಪತ್ರೇಷು ಪುಷ್ಪೇಷು ಫಲೇಷು ತೋಯೇಷ್ವಕ್ರೀತಲಭ್ಯೇಷು ಸದೈವ ಸತ್ಸು। ಭಕ್ತ್ಯೈಕಲಭ್ಯೇ ಪುರುಷೇ ಪುರಾಣೇ ಮುಕ್ತ್ಯೈ ಕಥಂ ನ ಕ್ರಿಯತೇ ಪ್ರಯತ್ನಃ' (?) ಇತಿ ಮಹಾಭಾರತೇ। ೮೧೮. ಶೋಭನಂ ವ್ರತಯತಿ ಭುಙ್ಕ್ತೇ ಭೋಜನಾನ್ನಿವರ್ತತೇ ಇತಿ ವಾ ಸುವ್ರತಃ। ೮೧೯. ಅನನ್ಯಾಧೀನಸಿದ್ಧಿತ್ವಾತ್ ಸಿದ್ಧಃ। ೮೨೦. ಸುರಶತ್ರವ ಏವಾಸ್ಯ ಶತ್ರವಃ, ತಾನ್ ಜಯತೀತಿ ಶತ್ರುಜಿತ್। ೮೨೧. ಸುರಶತ್ರೂಣಾಂ ತಾಪನಃ ಶತ್ರುತಾಪನಃ॥

## (ಭಾಷ್ಯಾರ್ಥ)

ಕೇವಲ ಭಕ್ತಿಯಿಂದ ಸಮರ್ಪಿಸಿದ ಪತ್ರಫಲಪುಷ್ಪಗಳೇ ಮುಂತಾದವುಗಳಿಂದ ಕಷ್ಟವಿಲ್ಲದೆ ದೊರಕುತ್ತಾನೆ; ಆದ್ದರಿಂದ **ಸುಲಭನು**. 'ಎಲೆಗಳೂ ಹೂಗಳೂ ಹಣ್ಣುಗಳೂ ನೀರೂ ಕೊಂಡುಕೊಳ್ಳದೆ ಸಿಕ್ಕುವವಾಗಿ ಯಾವಾಗಲೂ ಇರುತ್ತಿದ್ದರೂ ಭಕ್ತಿಮಾತ್ರದಿಂದ ದೊರಕುವ ಪುರಾಣಪುರುಷನಿರುವಲ್ಲಿ ಮುಕ್ತಿಗೆ ಪ್ರಯತ್ನಮಾಡದೆ ಇರುವರಲ್ಲ, ಇದು ಹೇಗೆ?' ಎಂದು **ಮಹಾಭಾರತ**ದಲ್ಲಿದೆ. ಒಳ್ಳೆಯದನ್ನು ವ್ರತವಾಗಿ ಮಾಡಿಕೊಂಡಿರುತ್ತಾನೆ, ಎಂದರೆ ಭುಂಜಿಸುತ್ತಾನೆ, ಅಥವಾ ಭೋಜನವನ್ನು ಬಿಟ್ಟುಬಿಟ್ಟಿರುತ್ತಾನೆ, ಆದ್ದರಿಂದ **ಸುವ್ರತನು**. ಮತ್ತೊಬ್ಬರಿಗೆ ಅಧೀನವಲ್ಲದ ಸಿದ್ಧಿಗಳುಳ್ಳವನಾದ್ದರಿಂದ **ಸಿದ್ಧನು**. ದೇವತೆಗಳ ಶತ್ರುಗಳೇ ಈತನಿಗೆ ಶತ್ರುಗಳು, ಅವರನ್ನು ಜಯಿಸುತ್ತಾನಾದ್ದರಿಂದ **ಶತ್ರುಜಿತ್** (ಎನಿಸುವನು). ದೇವತೆಗಳ ಶತ್ರುಗಳಿಗೆ ತಾಪವನ್ನುಂಟುಮಾಡುತ್ತಾನೆ, ಆದ್ದರಿಂದ **ಶತ್ರುತಾಪನನು**.

## (ಭಾಷ್ಯ)

೮೨೨. ನ್ಯಕ್ ಅರ್ವಾಕ್ ರೋಹತಿ ಸರ್ವೇಷಾಮುಪರಿ ವರ್ತತ ಇತಿ ನ್ಯಗ್ರೋಧಃ। ಪೃಷೋದರಾದಿತ್ವಾತ್ ಹಕಾರಸ್ಯ ಧಕಾರಾದೇಶಃ। ಸರ್ವಾಣಿ ಭೂತಾನಿ ನ್ಯಕ್ಕೃತ್ಯ ನಿಜಮಾಯಾಂ ವೃಣೋತಿ ನಿರುಣದ್ಧೀತಿ ವಾ। ೮೨೩. ಅಮ್ಬರಾದ್ ಉದ್ಗತಃ ಕಾರಣತ್ವೇನ ಇತಿ ಉದುಮ್ಬರಃ। ಪೃಷೋದರಾದಿತ್ವಾದೇವ ಉಕಾರಾದೇಶಃ। ಯದ್ವಾ ಉದುಮ್ಬರಮ್ ಅನ್ನಾದ್ಯಮ್, ತೇನ ತದಾತ್ಮನಾ ವಿಶ್ವಂ ಪೋಷಯನ್ ಉದುಮ್ಬರಃ। 'ಊರ್ಗ್ವಾ ಅನ್ನಮುದುಮ್ಬರಃ' (ತೈ.ಬ್ರಾ.೧-೨-೬-೫) ಇತಿ ಶ್ರುತೇಃ। 'ನ್ಯಗ್ರೋಧೋದುಮ್ಬರಃ. ಇತ್ಯತ್ರ ವಿಸರ್ಗಲೋಪಸನ್ಧಿರಾರ್ಷಃ। ೮೨೪. ಶ್ವೋಽಪಿ ನ ಸ್ಥಾತಾ ಇತಿ ಅಶ್ವತ್ಥಃ। ಪೃಷೋದರಾದಿತ್ವಾದೇವ ಸಕಾರಸ್ಯ ತಕಾರಾದೇಶಃ। "ಊರ್ಧ್ವಮೂಲೋಽವಾಕ್ಶಾಖಃ ಏಷೋಽಶ್ವತ್ಥಃ ಸನಾತನಃ' (ಕಾ. ೬-೧) ಇತಿ ಶ್ರುತೇಃ। "ಅಶ್ವತ್ಥಂ ಪ್ರಾಹುರವ್ಯಯಮ್" (ಗೀ. ೧೫-೧) ಇತಿ ಸ್ಮೃತೇಶ್ಚ। ೮೨೫. ಚಾಣೂರನಾಮಾನಮಾನ್ಧ್ರಂ ನಿಷೂದಿತವಾನ್ ಇತಿ ಚಾಣೂರಾನ್ಧ್ರನಿಷೂದನಃ॥೧೦೧॥

## (ಭಾಷ್ಯಾರ್ಥ)

ನ್ಯಕ್ - ಎಂದರೆ ಈಚೆಗೆ, ರೋಹತಿ (ಬೆಳೆದಿರುತ್ತಾನೆ) - ಎಲ್ಲರಿಗಿಂತಲೂ ಮೇಲೆ ಇರುತ್ತಾನೆ, ಆದ್ದರಿಂದ **ನ್ಯಗ್ರೋಧನು**. (ಈ ಶಬ್ದವು) ಪೃಷೋದರಾದಿಗಣಕ್ಕೆ ಸೇರಿರುವವದರಿಂದ (**ರುಹ್** - ಎಂಬ ಧಾತುವಿನ) ಹಕಾರಕ್ಕೆ ಧಕಾರಾದೇಶವಾಗಿ (ನ್ಯಗ್ರೋಧ) ಎಂದಾಗಿದೆ. ಎಲ್ಲಾ ಪ್ರಾಣಿಗಳನ್ನೂ ಈಚೆಗಿಳಿಸಿ ಮಾಯೆಯನ್ನು ಆವರಿಸಿಕೊಂಡಿರುತ್ತಾನೆ, ಅಥವಾ ತಡೆಗಟ್ಟಿರುತ್ತಾನೆ, ಆದ್ದರಿಂದ **ನ್ಯಗ್ರೋಧನು** ಎಂದಾದರೂ (ವ್ಯಾಖ್ಯಾನ). ಅಮ್ಬರ (ಆಕಾಶ)ಕ್ಕಿಂತ ಉದ್ಗತ (ಮೇಲಕ್ಕೆ) ಕಾರಣವಾಗಿ

ಎದ್ದುಕೊಂಡಿರುತ್ತಾನೆ, ಆದ್ದರಿಂದ **ಉದುಂಬರನು**. (ಈ ಶಬ್ದವು) ಪೃಷೋದರಾದಿಗಣಕ್ಕೆ ಸೇರಿದ್ದಾದ್ದರಿಂದಲೇ ಅಕಾರಕ್ಕೆ ಉಕಾರಾದೇಶವು ಬಂದಿದೆ. ಅಥವಾ ಉದುಮ್ಬರವೆಂದರೆ ಅನ್ನಾದ್ಯವು. 'ಊರ್ಗ್ ಎಂಬುದೇ ಅನ್ನವು, (ಅದೇ) ಉದುಂಬರವು' ಎಂಬ ಶ್ರುತಿಯ ಪ್ರಮಾಣದಿಂದ (ಉದುಂಬರಶಬ್ದಕ್ಕೆ) ಅನ್ನವೆಂಬ ಅರ್ಥವಿದೆ. ಆದ್ದರಿಂದ ಆ (ಸ್ವರೂಪನಾಗಿ) ಜಗತ್ತನ್ನು ಪೋಷಿಸುವವರಿಂದ **ಉದುಮ್ಬರನು** (ಎಂದಾದರೂ ಹೇಳಬಹುದು). ನ್ಯಗ್ರೋಧೋದುಮ್ಬರ - ಎಂಬಲ್ಲಿ ವಿಸರ್ಗಲೋಪವಾಗಿರುವದು ಆರ್ಷಸಂಧಿ. ನಾಳೆಗೆ ಇರುವದಿಲ್ಲವಾದ್ದರಿಂದ (ಸಂಸಾರವು) **ಅಶ್ವತ್ಥವು**. (ಶಬ್ದವು) ಪೃಷೋದರಾದಿಗಣಕ್ಕೆ ಸೇರಿರುವದರಿಂದ ಸಕಾರಕ್ಕೆ ತಕಾರಾದೇಶವಾಗಿದೆ. 'ಊರ್ಧ್ವ (ಮೇಲೆ) ಬೇರುಳ್ಳದ್ದು, ಈಚೆಗೆ ಕೊಂಬೆಗಳುಳ್ಳದ್ದು, ಈ ಸನಾತನವಾದ ಅಶ್ವತ್ಥವು'' ಎಂಬ ಶ್ರುತಿಯೂ 'ಅವ್ಯಯವಾದ ಅಶ್ವತ್ಥವೆನ್ನುವರು' ಎಂಬ ಸ್ಮೃತಿಯೂ (ಇದಕ್ಕೆ ಆಧಾರ). ಚಾಣೂರನೆಂಬ ಹೆಸರಿನ ಆನ್ಧ್ರನನ್ನು ಕೊಂದನು, ಆದ್ದರಿಂದ **ಚಾಣೂರಾನ್ಧ್ರನಿಷೂದನನು**.

**ಸಹಸ್ರಾರ್ಚಿಃ ಸಪ್ತಜಿಹ್ವಃ ಸಪ್ತೈಧಾಃ ಸಪ್ತವಾಹನಃ।**
**ಅಮೂರ್ತಿರನಘೋಽಚಿನ್ತ್ಯೋ ಭಯಕೃದ್ಭಯನಾಶನಃ ॥೧೦೨॥**

(ಭಾಷ್ಯ)

೮೨೬. ಸಹಸ್ರಾಣಿ ಅನನ್ತಾನಿ ಅರ್ಚೀಂಷಿ ಯಸ್ಯ ಸಃ ಸಹಸ್ರಾರ್ಚಿಃ। 'ದಿವಿ ಸೂರ್ಯಸಹಸ್ರಸ್ಯ ಭವೇದ್ಯುಗಪದುತ್ಥಿತಾ। ಯದಿ ಭಾಃ ಸದೃಶೀ ಸಾ ಸ್ಯಾದ್ ಭಾಸಸ್ತಸ್ಯ ಮಹಾತ್ಮನಃ'[1] (ಗೀ.೧೧-೧೨) ಇತಿ ಗೀತಾವಚನಾತ್। ೮೨೭. ಸಪ್ತ ಜಿಹ್ವಾಃ ಅಸ್ಯ ಸನ್ತೀತಿ ಸಪ್ತಜಿಹ್ವಃ। 'ಕಾಲೀ ಕರಾಲೀ ಚ ಮನೋಜವಾ ಚ ಸುಲೋಹಿತಾ ಯಾ ಚ ಸುಧೂಮ್ರವರ್ಣಾ। ಸ್ಫುಲಿಙ್ಗಿನೀ ವಿಶ್ವರುಚೀ ಚ ದೇವೀ ಲೇಲಾಯಮಾನಾ ಇತಿ ಸಪ್ತ ಜಿಹ್ವಾಃ' (ಮುಂ. ೧-೨-೪) ಇತಿ ಶ್ರುತೇಃ। ೮೨೮. ಸಪ್ತ ಏಧಾಂಸಿ ದೀಪ್ತಯಃ ಅಸ್ಯ ಇತಿ ಸಪ್ತೈಧಾ ಅಗ್ನಿಃ। 'ಸಪ್ತ ತೇ ಅಗ್ನೇ ಸಮಿಧಃ ಸಪ್ತ ಜಿಹ್ವಾಃ' (ತೈ. ಸಂ. ೧-೫-೩) ಇತಿ ಮನ್ತ್ರವರ್ಣಾತ್। ೮೨೯. ಸಪ್ತ ಅಶ್ವಾ ವಾಹನಾನಿ ಅಸ್ಯ ಇತಿ ಸಪ್ತವಾಹನಃ। ಸಪ್ತನಾಮಕೋಽಶ್ವೋ ವಾಹನಮಸ್ಯ - ಇತಿ ವಾ। 'ಏಕೋ ಅಶ್ವೋ ವಹತಿ ಸಪ್ತನಾಮಾ' (ತೈ. ಆ. ೩-೧೧, ಋ.ಸಂ.೧-೧೬೪-೨) ಇತಿ ಶ್ರುತೇಃ॥

(ಭಾಷ್ಯಾರ್ಥ)

ಸಹಸ್ರ ಎಂದರೆ ಲೆಕ್ಕವಿಲ್ಲದಷ್ಟು ಅರ್ಚಿಗಳು (ಕಿರಣಗಳು) ಯಾವನಿಗೆ ಇವೆಯೋ ಆತನು **ಸಹಸ್ರಾರ್ಚಿಯು**. 'ಅಂತರಿಕ್ಷದಲ್ಲಿ ಸಾವಿರಸೂರ್ಯರ ಕಾಂತಿಯು ಒಮ್ಮೆಗೇ

1. ವಾ॥ ಪಾಠದಲ್ಲಿ ಈ ಶ್ಲೋಕದ ಮೊದಲನೆಯ ಪಾದವು ಮಾತ್ರ ಇದೆ.

ಎದ್ದು ತೋರಿಕೊಂಡರೆ ಹೇಗೆ ಆಗುವದೋ ಅದು ಆ ಮಹಾತ್ಮನ ಕಾಂತಿಗೆ ಸಮವಾದೀತು' ಮುಂತಾದ **ಗೀತಾವಚನವು** ಇದಕ್ಕೆ ಪ್ರಮಾಣ. ಏಳು ನಾಲಗೆಗಳು ಈತನಿಗೆ ಇವೆ; ಆದ್ದರಿಂದ **ಸಪ್ತಜಿಹ್ವನು** ಎಂದರೆ ಅಗ್ನಿರೂಪನು. ಕಾಲಿ, ಕರಾಲಿ, ಮನೋಜವೆ, ಸುಲೋಹಿತೆ, ಸುಧೂಮ್ರವರ್ಣೆ, ಸ್ಫುಲಿಙ್ಗಿನಿ, ವಿಶ್ವರುಚಿ - ಎಂಬ ಎದ್ದುರಿಯುವ ದೇವಿ -ಹೀಗೆ ಏಳು ಜಿಹ್ವೆಗಳು ಎಂದು ಶ್ರುತಿಯಿರುವದರಿಂದ ಹೀಗೆಂದು ತಿಳಿಯಬೇಕು. ಉರಿಗಳು ಈತನಿಗಿವೆ, ಆದ್ದರಿಂದ ಅಗ್ನಿಯು **ಸಪ್ತೈಧಾಃ** ಏಳು ಏಧಸ್ಸುಗಳು (ಎನಿಸಿರುತ್ತಾನೆ). "ಅಗ್ನಿಯೇ, ನಿನಗೆ ಏಳು ಸಮಿತ್ತುಗಳು, ಏಳು ಜಿಹ್ವೆಗಳು" ಎಂಬ ಮಂತ್ರವರ್ಣದಿಂದ (ಇದು ಸಿದ್ಧವಾಗಿದೆ, ಆ ಅಗ್ನಿಯ ರೂಪದವನು ಈತನು). ಏಳು ಕುದುರೆಗಳು ಇವನಿಗೆ ವಾಹನಗಳು, ಆದ್ದರಿಂದ (ಇವನು) **ಸಪ್ತವಾಹನನು**. (ಎಂದರೆ) ಸೂರ್ಯನು.[1] ಅಥವಾ 'ಸಪ್ತ' ಎಂಬ ಹೆಸರಿನ ಕುದುರೆಯು ಈತನಿಗೆ ವಾಹನವು - ಎಂಬರ್ಥದಿಂದಲೂ (ಸಪ್ತವಾಹನನು). 'ಸಪ್ತ ಎಂಬ ಹೆಸರಿನ ಒಂದೇ ಕುದುರೆಯು ಇವನನ್ನು ಹೊರುತ್ತದೆ' ಎಂಬ ಶ್ರುತಿಯು ಇದಕ್ಕೆ ಪ್ರಮಾಣ.

## (ಭಾಷ್ಯ)

೮೩೦. ಮೂರ್ತಿಃ ಘನರೂಪಂ ಧಾರಣಸಮರ್ಥಂ ಚರಾಚರಲಕ್ಷಣಮ್ 'ತಾಭ್ಯೋಽಭಿತಪ್ತಾಭ್ಯೋ ಮೂರ್ತಿರಜಾಯತ' (ಐ.೩-೨) ಇತಿ ಶ್ರುತೇಃ। ತದ್ರಹಿತಃ ಇತಿ ಅಮೂರ್ತಿಃ । ಅಥವಾ ದೇಹಸಂಸ್ಥಾನಲಕ್ಷಣಾ ಮೂರ್ಛಿತಾಙ್ಗಾವಯವಾ ಮೂರ್ತಿಃ ತದ್ರಹಿತಃ ಇತಿ ಅಮೂರ್ತಿಃ। ೮೩೧. ಅಘಂ ದುಃಖಂ ಪಾಪಂ ಚಾಸ್ಯ ನ ವಿದ್ಯತ ಇತ್ಯನಘಃ। ೮೩೨. ಪ್ರಮಾತ್ರಾದಿಸಾಕ್ಷಿತ್ವೇನ ಸರ್ವಪ್ರಮಾಣಗೋಚರತ್ವಾತ್ ಅಚಿನ್ತ್ಯಃ, ಅಯಮೀದೃಶ ಇತಿ ವಿಶ್ವಪ್ರಪಞ್ಚವಿಲಕ್ಷಣತ್ವೇನ ಚಿನ್ತಯಿತುಮ್ ಅಶಕ್ಯತ್ವಾದ್ವಾ ಅಚಿನ್ತ್ಯಃ। ೮೩೩. ಅಸನ್ಮಾರ್ಗವರ್ತಿನಾಂ ಭಯಂ ಕರೋತಿ, ಭಕ್ತಾನಾಂ ಚ ಭಯಂ ಕೃನ್ತತೀತಿ ವಾ ಭಯಕೃತ್। ೮೩೪. ವರ್ಣಾಶ್ರಮಾಚಾರವತಾಂ ಭಯಂ ನಾಶಯತೀತಿ ಭಯನಾಶನಃ। 'ವರ್ಣಾಶ್ರಮಾಚಾರವತಾ ಪುರುಷೇಣ ಪರಃ ಪುಮಾನ್। ವಿಷ್ಣುರಾರಾಧ್ಯತೇ ಪನ್ಥಾ ನಾನ್ಯಸ್ತತ್ತೋಷಕಾರಕಃ' (ವಿ.ಪು. ೩-೮-೯) ಇತಿ ಪರಾಶರವಚನಾತ್॥ ೧೦೨॥

## (ಭಾಷ್ಯಾರ್ಥ)

ಮೂರ್ತಿ ಎಂದರೆ ಗಟ್ಟಿಯಾದ ರೂಪವನ್ನು ಧರಿಸಬಲ್ಲ ಚರಾಚರರೂಪವಾದದ್ದು. "ಅವುಗಳನ್ನು ಕುರಿತು ತಪಸ್ಸು ಮಾಡಲಾಗಿ ಮೂರ್ತಿಯು ಹುಟ್ಟಿತು" ಎಂಬ ಶ್ರುತಿಯು ಇದಕ್ಕೆ ಪ್ರಮಾಣ. ಆ ಮೂರ್ತಿ ಇಲ್ಲದವನಾದ್ದರಿಂದ **ಅಮೂರ್ತಿಯು.**

1. ಆ ಸೂರ್ಯನು ವಿಷ್ಣುವಿನ ವಿಭೂತಿ ಎಂದು ಭಾವ.

ಅಥವಾ ದೇಹದ ಆಕಾರರೂಪವಾದ ಉಂಡೆಯಾವ ಅವಯವಗಳನ್ನು ಕೂಡಿಸಿರುವದು **ಮೂರ್ತಿ.** ಅದಿಲ್ಲದವನಾದ್ದರಿಂದ **ಅಮೂರ್ತಿಯು. ಅಘ**ವೆಂದರೆ ದುಃಖವು ಮತ್ತು ಪಾಪವು; ಈ ಎರಡೂ ಈತನಿಗೆ ಇಲ್ಲವಾದ್ದರಿಂದ **ಅನಘನು.** ಪ್ರಮಾತೃವೇ ಮುಂತಾದವುಗಳಿಗೆ[1] ಸಾಕ್ಷಿಯಾಗಿರುವದರಿಂದಲೂ ಯಾವ ಪ್ರಮಾಣಗಳಿಗೂ ಗೋಚರನಲ್ಲವಾದ್ದರಿಂದಲೂ **ಅಚಿಂತ್ಯನು** ಇವನು ಇಂಥವನು ಎಂದು - ಎಲ್ಲಾ ಪ್ರಪಂಚಕ್ಕಿಂತಲೂ ವಿಲಕ್ಷಣರೂಪನಾಗಿರುವದರಿಂದ ಚಿಂತಿಸಿ (ಕಲ್ಪಿಸುವದಕ್ಕೆ) ಆಗದವನಾಗಿರುತ್ತಾನೆ, ಆದ್ದರಿಂದ **ಅಚಿಂತ್ಯನು.** ಎಂದಾದರೂ (ವ್ಯಾಖ್ಯಾನ). ತಪ್ಪು ಹಾದಿಯಲ್ಲಿರುವವರಿಗೆ ಭಯವನ್ನುಂಟುಮಾಡುತ್ತಾನೆ, ಅಥವಾ ಭಕ್ತರ ಭಯವನ್ನು ಕತ್ತರಿಸಿಹಾಕುತ್ತಾನೆ, ಆದ್ದರಿಂದ **ಭಯಕೃತ್** ಎಂದು (ಹೆಸರು). ವರ್ಣಾಶ್ರಮಗಳ ಆಚಾರವುಳ್ಳವರ ಅಂಜಿಕೆಯನ್ನು ನಾಶಗೊಳಿಸುತ್ತಾನೆ, ಆದ್ದರಿಂದ **ಭಯನಾಶನನು.** ಇದಕ್ಕೆ "ವರ್ಣಾಶ್ರಮಗಳ ಆಚಾರವುಳ್ಳ ಪುರುಷನಿಂದ ಪರಮಪುರುಷನಾದ ವಿಷ್ಣುವು ಆರಾಧಿಸುವದಕ್ಕೆ ಶಕ್ಯನಾಗಿರುತ್ತಾನೆ. ಇಲ್ಲಿ ಮತ್ತೆ ಯಾವ (ಸಾಧನವೂ) ಆತನ ಸಂತೋಷಕ್ಕೆ ಉಪಕಾರಕವಾಗಿರುವದಿಲ್ಲ" ಎಂಬ ಪರಾಶರೋಕ್ತಿಯು ಪ್ರಮಾಣವು.

**ಅಣುರ್ಬೃಹತ್ ಕೃಶಃ ಸ್ಥೂಲೋ ಗುಣಭೃನ್ನಿರ್ಗುಣೋ ಮಹಾನ್।**
**ಅಧೃತಃ ಸ್ವಧೃತಃ ಸ್ವಾಸ್ಯಃ ಪ್ರಾಗ್ವಂಶೋ ವಂಶವರ್ಧನಃ ॥೧೦೩॥**

**(ಭಾಷ್ಯ)**

೮೩೫. ಸೌಕ್ಷ್ಮ್ಯಾತಿಶಯಶಾಲಿತ್ವಾತ್ ಅಣುಃ। 'ಏಷೋಽಣುರಾತ್ಮಾ ಚೇತಸಾ ವೇದಿತವ್ಯಃ' (ಮುಂ. ೩-೧-೯) ಇತಿ ಶ್ರುತೇಃ। ೮೩೬. ಬೃಹತ್ತ್ವಾತ್ ಬೃಂಹಣತ್ವಾಚ್ಚ ಬ್ರಹ್ಮ ಬೃಹತ್। "ಮಹತೋ ಮಹೀಯಾನ್" (ಕಾ. ೨-೨೦) ಇತಿ ಶ್ರುತೇಃ। ೮೩೭. "ಅಸ್ಥೂಲಮ್" (ಬೃ.೩-೮-೮) ಇತ್ಯಾದಿನಾ ದ್ರವ್ಯತ್ವಪ್ರತಿಷೇಧಾತ್ ಕೃಶಃ। ೮೩೮. ಸ್ಥೂಲ ಇತ್ಯುಪಚರ್ಯತೇ ಸರ್ವಾತ್ಮಕತ್ವಾತ್। ೮೩೯. ಸತ್ತ್ವರಜಸ್ತಮಸಾಂ ಸೃಷ್ಟಿಸ್ಥಿತಿಲಯಕರ್ಮಸು ಅಧಿಷ್ಠಾತೃತ್ವಾತ್ ಗುಣಭೃತ್। ೮೪೦. ವಸ್ತುತಃ ಗುಣಾಭಾವಾತ್ ನಿರ್ಗುಣಃ। "ಕೇವಲೋ ನಿರ್ಗುಣಶ್ಚ" (ಶ್ವೇ. ೬-೧೧) ಇತಿ ಶ್ರುತೇಃ। ೮೪೧. ಶಬ್ದಾದಿಗುಣರಹಿತತ್ವಾತ್ ನಿರತಿಶಯಸೂಕ್ಷ್ಮತ್ವಾತ್ ನಿತ್ಯಶುದ್ಧಸರ್ವಗತತ್ವಾದಿನಾ ಚ ಪ್ರತಿಬನ್ಧಕಧರ್ಮಜಾತಂ ತರ್ಕತೋಽಪಿ ಯತೋ ವಕ್ತುಂ ನ ಶಕ್ಯತೇ ಅತ ಏವ ಮಹಾನ್। "ಅಶಬ್ದೋಽಶರೀರೋಽಸ್ಪರ್ಶಶ್ಚ ಮಹಾನ್ ಶುಚಿಃ" (ಆಪ. ೮-೭) ಇತಿ ಆಪಸ್ತಮ್ಬಃ॥

1. ಆತ್ಮನು ಪ್ರಮಾತೃ, ಪ್ರಮಾಣ, ಪ್ರಮೇಯಗಳನ್ನೆಲ್ಲ ಬೆಳಗುವ ಪ್ರತ್ಯಕ್‌ಸ್ವರೂಪನಾದ್ದರಿಂದ ಸಾಕ್ಷಿಯು. ಆದ್ದರಿಂದಲೇ ಅಚಿಂತ್ಯನು; ಪ್ರಮಾಣಗೋಚರನಲ್ಲ ಎಂದು ವಿವೃತಿ.

## (ಭಾಷ್ಯಾರ್ಥ)

ಎಲ್ಲಕ್ಕಿಂತ ಸೂಕ್ಷ್ಮವಾಗಿರುವ ಸ್ವಭಾವದವನಾಗಿರುವದರಿಂದ **ಅಣುವು**. 'ಈ ಅಣುವಾಗಿರುವ ಆತ್ಮನನ್ನು ಚಿತ್ತದಿಂದ ಅರಿತುಕೊಳ್ಳಬೇಕು' ಎಂಬ ಶ್ರುತಿಯು ಇದಕ್ಕೆ ಪ್ರಮಾಣ. ದೊಡ್ಡದಾಗಿರುವದರಿಂದಲೂ ದೊಡ್ಡದಾಗಿ ತೋರುವದರಿಂದಲೂ ಬ್ರಹ್ಮವು **ಬೃಹತ್ತು**. 'ಮಹತ್ತಿಗಿಂತಲೂ ಮಹತ್ತಾದದ್ದು' ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. 'ಸ್ಥೂಲವಲ್ಲದ್ದು' ಎಂಬಿದೇ ಮುಂತಾದ (ಶ್ರುತಿಯಿಂದ) ಈತನಲ್ಲಿ ದ್ರವ್ಯತ್ವವನ್ನು ಅಲ್ಲಗಳೆದಿರುವದರಿಂದ **ಕೃಶನು**. ಎಲ್ಲದರ ರೂಪವಾಗಿಯೂ ಇರುವದರಿಂದ **ಸ್ಥೂಲ** ಎಂದು ಉಪಚಾರಕ್ಕಾಗಿ ಹೇಳುವರು. ಸತ್ತ್ವ, ರಜಸ್ಸು, ತಮಸ್ಸು - ಇವುಗಳಿಗೆ ಸೃಷ್ಟಿ ಸ್ಥಿತಿ ಲಯ ಕರ್ಮಗಳಲ್ಲಿ ಅಧಿಷ್ಠಾತೃವಾಗಿರುವದರಿಂದ **ಗುಣಭೃತ್** (ಎನಿಸುವವನು). ನಿಜವಾಗಿ (ಈತನಲ್ಲಿ) ಗುಣಗಳೇ ಇಲ್ಲದಿರುವದರಿಂದ **ನಿರ್ಗುಣನು**. 'ಕೇವಲನು ಮತ್ತು ನಿರ್ಗುಣನೂ (ಆಗಿರುತ್ತಾನೆ)' ಎಂಬ ಶ್ರುತಿಯು ಇದಕ್ಕೆ ಪ್ರಮಾಣವು. ಶಬ್ದಾದಿಗುಣಗಳೂ ಇಲ್ಲದವನಾದ್ದರಿಂದ ಮಿಗಿಲಿಲ್ಲದಷ್ಟು ಸೂಕ್ಷ್ಮನಾಗಿರುವದರಿಂದ ನಿತ್ಯಶುದ್ಧನೂ ಸರ್ವಗತವಾಗಿರುವದು -ಮುಂತಾದ ಕಾರಣದಿಂದಲೂ ಪ್ರತಿಬಂಧಕವಾಗಿರುವ ಧರ್ಮಸಮೂಹವನ್ನು ತರ್ಕದಿಂದಲೂ ಹೇಳುವದಕ್ಕೆ ಆಗುವದಿಲ್ಲವಾದ್ದರಿಂದಲೂ ಇವನು **ಮಹಾನ್** (ಎನಿಸಿರುತ್ತಾನೆ). 'ಶಬ್ದವಿಲ್ಲದವನೂ ಶರೀರವಿಲ್ಲದವನೂ ಸ್ಪರ್ಶವಿಲ್ಲದವನೂ ಮಹಾಂತನೂ ಶುಚಿಯೂ(ಆಗಿರುವನು)' ಎಂದು ಆಪಸ್ತಂಬರು ಹೇಳಿರುತ್ತಾರೆ.

## (ಭಾಷ್ಯ)

೮೪೨. ಪೃಥಿವ್ಯಾದೀನಾಂ ಧಾರಕಾಣಾಮಪಿ ಧಾರಕತ್ವಾತ್ ನ ಕೇನಾಪಿ ಧ್ರಿಯತ ಇತಿ ಅಧೃತಃ। ೮೪೩. ಯದ್ಯೇವಮ್ ಅಯಂ ಕೇನ ಧಾರ್ಯತೇ ಇತ್ಯಾಶಙ್ಕ್ಯ ಆಹ 'ಸ್ವೇನೇವ ಧಾರ್ಯತೇ' ಇತಿ ಸ್ವಧೃತಃ। 'ಸ ಭಗವಃ ಕಸ್ಮಿನ್ ಪ್ರತಿಷ್ಠಿತ ಇತಿ ಸ್ವೇ ಮಹಿಮ್ನಿ' (ಛಾಂ. ೭-೨೪-೧) ಇತಿ ಶ್ರುತೇಃ। ೮೪೪. ಶೋಭನಂ ಪದ್ಮೋದರತಲತಾಮ್ರಮ್ ಅಭಿರೂಪಮ್ ಅಸ್ಯಾಸ್ಯಮಿತಿ ಸ್ವಾಸ್ಯಃ। ವೇದಾತ್ಮಕೋ ಮಹಾನ್ ಶಬ್ದರಾಶಿಃ ತಸ್ಯ ಮುಖಾನ್ನಿರ್ಗತಃ ಪುರುಷಾರ್ಥೋಪದೇಶಾರ್ಥಮಿತಿ ವಾ ಸ್ವಾಸ್ಯಃ। 'ಅಸ್ಯ ಮಹತೋ ಭೂತಸ್ಯ' (ಬೃ.೨-೪-೧೦) ಇತ್ಯಾದಿಶ್ರುತೇಃ। ೮೪೫. ಅನ್ಯಸ್ಯ ವಂಶಿನೋ ವಂಶಾಃ ಪಾಶ್ಚಾತ್ತ್ಯಾಃ ಅಸ್ಯ ವಂಶಃ ಪ್ರಪಞ್ಚಃ ಪ್ರಾಗೇವ ನ ಪಾಶ್ಚಾತ್ತ್ಯ ಇತಿ ಪ್ರಾಗ್ವಂಶಃ। ೮೪೬. ವಂಶಂ ಪ್ರಪಞ್ಚಂ ವರ್ಧಯನ್ ಛೇದಯನ್ ವಾ ವಂಶವರ್ಧನಃ॥ ೧೦೩॥

## (ಭಾಷ್ಯಾರ್ಥ)

ಪೃಥಿವಿಯೇ ಮುಂತಾದ ಧಾರಕಗಳೆಲ್ಲಕ್ಕೂ ಧಾರಕನಾದ್ದರಿಂದ, ಮತ್ತು ಈತನನ್ನು ಧರಿಸುವವನು ಮತ್ತೊಬ್ಬನು ಯಾರೂ ಇಲ್ಲ, ಆದ್ದರಿಂದ **ಅಧೃತನು**. ಹಾಗಾದರೆ

ಇವನನ್ನು ಧರಿಸಿರುವವನು ಯಾರು? - ಎಂಬ ಆಶಂಕೆಯುಂಟಾಗಲಾಗಿ ತಾನೇ ತನ್ನಿಂದಲೇ ಧರಿಸಲ್ಪಟ್ಟಿರುತ್ತಾನೆ, ಆದ್ದರಿಂದ **ಸ್ವಧೃತನು** ಎಂದು ಹೇಳುತ್ತಾರೆ. ಭಗವಂತನೆ, ಆತನು ಏತರಮೇಲೆ ನಿಂತಿರುತ್ತಾನೆ? ಎಂದು (ನಾರದರು ಕೇಳಲು) 'ತನ್ನ ಮಹಿಮೆಯ ಮೇಲೆ' (ಎಂದು ಸನತ್ಕುಮಾರರು ಉತ್ತರಕೊಟ್ಟರು) ಎಂದು ಶ್ರುತಿಯಿರುವದರಿಂದ (ಈ ಅರ್ಥ). (ಸು) ಒಳ್ಳೆಯ ಕಮಲದ ಒಳಭಾಗದ ಮೇಲ್ಮೈಯಂತೆ ಕೆಂಪಾಗಿ ಸುಂದರವಾಗಿರುವ ಮುಖವು ಈತನದು, ಆದ್ದರಿಂದ **ಸ್ವಾಸ್ಯನು**. ವೇದರೂಪವಾದ ಮಹಾಶಬ್ದರಾಶಿಯು ಆತನ ಮುಖದಿಂದ ಪುರುಷಾರ್ಥಗಳನ್ನು ಉಪದೇಶಮಾಡುವದಕ್ಕೆ ಹೊರಕ್ಕೆ ಬಂದಿದೆ, ಆದ್ದರಿಂದ **ಸ್ವಾಸ್ಯನು** ಎಂದಾದರೂ (ಈ ನಾಮಕ್ಕೆ ಅರ್ಥ). 'ಈ ಋಗ್ವೇದವು ..... ಈ ಮಹಾಭೂತದ ನಿಟ್ಟುಸಿರು' ಎಂದು ಮುಂತಾಗಿ ಶ್ರುತಿಯಿರುವದರಿಂದ (ಹೀಗೆ ಅರ್ಥ). (ಇವನಿಗಿಂತ) ಬೇರೆಯವನಾದ ವಂಶಿಯ ವಂಶಗಳು ಈಚಿನವು; ಇವನ ವಂಶವಾದ ಪ್ರಪಂಚವು (ಎಲ್ಲಕ್ಕಿಂತಲೂ) ಮೊದಲೇ; ಈಚಿನದಲ್ಲ - ಆದ್ದರಿಂದ **ಪ್ರಾಗ್ವಂಶನು**. ವಂಶವನ್ನು ಎಂದರೆ ಪ್ರಪಂಚವನ್ನು ವೃದ್ಧಿಗೊಳಿಸುವಾತನು, ಅಥವಾ ಖಂಡಿಸುವಾತನು, ಆದ್ದರಿಂದ **ವಂಶವರ್ಧನನು**.[1]

**ಭಾರಭೃತ್ ಕಥಿತೋ ಯೋಗೀ ಯೋಗೀಶಃ ಸರ್ವಕಾಮದಃ।**
**ಆಶ್ರಮಃ ಶ್ರಮಣಃ, ಕ್ಷಾಮಃ ಸುಪರ್ಣೋ ವಾಯುವಾಹನಃ ॥೧೦೪॥**

**(ಭಾಷ್ಯ)**

೮೪೭. ಅನನ್ತಾದಿರೂಪೇಣ ಭುವೋ ಭಾರಂ ಬಿಭ್ರತ್ ಭಾರಭೃತ್। ೮೪೮. ವೇದಾದಿಭಿಃ ಅಯಮೇವ ಪರತ್ವೇನ ಕಥಿತಃ, ಸರ್ವೈರ್ವೇದೈಃ ಕಥಿತ ಇತಿ ವಾ ಕಥಿತಃ। 'ಸರ್ವೇ ವೇದಾ ಯತ್ಪದಮಾಮನನ್ತಿ' (ಕಾ. ೨-೧೫) 'ವೇದೈಶ್ಚ ಸರ್ವೈರಹಮೇವ ವೇದ್ಯಃ' (ಗೀ. ೧೫-೧೫) 'ವೇದೇ ರಾಮಾಯಣೇ ಪುಣ್ಯೇ ಭಾರತೇ ಭರತರ್ಷಭ। ಆದೌ ಮಧ್ಯೇ ತಥಾ ಚಾನ್ತೇ ವಿಷ್ಣುಃ ಸರ್ವತ್ರ ಗೀಯತೇ' (ಹರಿ.೩-೧೩೨-೯೫) ಇತಿ ಶ್ರುತಿಸ್ಮೃತ್ಯಾದಿವಚನೇಭ್ಯಃ। 'ಸೋಽಧ್ವನಃ ಪಾರಮಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್' (ಕಾ. ೩-೯) ಇತ್ಯುಕ್ತಮ್। ಕಿಂ ತದಧ್ವನೋ ವಿಷ್ಣೋರ್ವ್ಯಾಪನಶೀಲಸ್ಯ ಪರಮಂ ಪದಂ ಸತತ್ತ್ವಮಿತ್ಯಾಕಾಙ್ಕ್ಷಾಯಾಮ್ ಇನ್ದ್ರಿಯಾದಿಭ್ಯಃ ಸರ್ವೇಭ್ಯಃ ಪರತ್ವೇನ ಪ್ರತಿಪಾದ್ಯತೇ 'ಇನ್ದ್ರಿಯೇಭ್ಯಃ ಪರಾ ಹ್ಯರ್ಥಾಃ' (ಕಾ. ೩-೧೦) ಇತ್ಯಾರಭ್ಯ 'ಪುರುಷಾನ್ನ ಪರಂ ಕಿಞ್ಚಿತ್ ಸಾ ಕಾಷ್ಠಾ ಸಾ ಪರಾ ಗತಿಃ' (ಕಾ. ೩-೧೧) ಇತ್ಯನ್ತೇನ ಯಃ ಕಥಿತಃ ಸ ಕಥಿತಃ। ೮೪೯.

1. 'ವೃಧ್' ಧಾತುವಿಗೆ ಈ ಎರಡು ಅರ್ಥಗಳೂ ಇವೆ; ಭಗವಂತನು ಪ್ರಪಂಚದ ಬೆಳವಣಿಗೆಗೂ ಪ್ರಲಯಕ್ಕೂ ಕಾರಣನು.

ಯೋಗೋ ಜ್ಞಾನಮ್, ತೇನೈವ ಗಮ್ಯತ್ವಾತ್ ಯೋಗೀ. ಯೋಗಃ ಸಮಾಧಿಃ ಸ ಹಿ ಸ್ವಾತ್ಮನಿ ಸರ್ವದಾ ಸಮಾಧತ್ತೇ ಸ್ವಮಾತ್ಮಾನಮ್. ತೇನ ವಾ ಯೋಗೀ। ೮೫೦. ಅನ್ಯೇ ಯೋಗಿನಃ ಯೋಗಾನ್ತರಾಯೈರ್ಹನ್ಯನ್ತೇ ಸ್ವರೂಪಾತ್ ಪ್ರಮಾದ್ಯನ್ತಿ, ಅಯಂ ತು ತದ್ರಹಿತತ್ವಾತ್ ತೇಷಾಮೀಶಃ ಯೋಗೀಶಃ। ೮೫೧. ಸರ್ವಾನ್ ಕಾಮಾನ್ ಸದಾ ದದಾತೀತಿ ಸರ್ವಕಾಮದಃ। 'ಫಲಮತ ಉಪಪತ್ತೇಃ' (ವೇ.ಸೂ.೩-೨-೩೮) ಇತಿ ವ್ಯಾಸೇನಾಭಿಹಿತತ್ವಾತ್॥

## (ಭಾಷ್ಯಾರ್ಥ)

ಅನಂತನೇ ಮೊದಲಾದವರ ರೂಪದಿಂದ ಭೂಮಿಯ ಭಾರವನ್ನು ಹೊತ್ತಿರುತ್ತಾನೆ, ಆದ್ದರಿಂದ **ಭಾರಭೃತ್** ಎನಿಸುವನು. ವೇದಗಳೇ ಮುಂತಾದವುಗಳಿಂದ ಈತನೊಬ್ಬನೇ ಎಲ್ಲಕ್ಕೂ ಉತ್ತಮನೆಂದು ಹೇಳಲ್ಪಟ್ಟಿರುತ್ತಾನಾದ್ದರಿಂದ **ಕಥಿತ** (ನೆನಿಸಿರುತ್ತಾನೆ). ಎಲ್ಲಾ ವೇದಗಳಿಂದಲೂ ಉಕ್ತನಾಗಿರುತ್ತಾನೆ, ಆದ್ದರಿಂದ **ಕಥಿತನು** ಎಂದಾದರೂ (ಅರ್ಥ). 'ಎಲ್ಲಾ ವೇದಗಳೂ ಯಾವ ಸ್ಥಾನವನ್ನು ಹೇಳುತ್ತಿವೆಯೋ' 'ಎಲ್ಲಾ ವೇದಗಳಿಂದಲೂ ತಿಳಿಯಲ್ಪಡತಕ್ಕವನು ನಾನೇ' 'ಎಲೈ ಭರತಶ್ರೇಷ್ಠನೆ, ವೇದದಲ್ಲಿಯೂ ಪುಣ್ಯಕರವಾದ ರಾಮಾಯಣದಲ್ಲಿಯೂ, ಭಾರತದಲ್ಲಿಯೂ, ಮೊದಲು, ನಡುವೆ ಮತ್ತು ಕೊನೆಯಲ್ಲಿ ವಿಷ್ಣುವು ಎಲ್ಲೆಲ್ಲಿಯೂ ಉಕ್ತನಾಗಿರುತ್ತಾನೆ' ಎಂದು ಶ್ರುತಿಸ್ಮೃತ್ಯಾದಿವಚನಗಳಿರುವದರಿಂದ (ಹೀಗೆ ನಾಮಕ್ಕೆ ವ್ಯಾಖ್ಯಾನಮಾಡಬೇಕು). 'ಅವನು ಆ ವಿಷ್ಣುವಿನ ಪರಮಪದವೆಂಬ ಮಾರ್ಗದ ಕೊನೆಯನ್ನು ಮುಟ್ಟುತ್ತಾನೆ' ಎಂದು ಹೇಳಿದ್ದಾಗಿದೆ. ಆ ವ್ಯಾಪನಸ್ವಭಾವದ ವಿಷ್ಣುವಿನ ಮಾರ್ಗದ ಪರಮಪದವು ಯಾವದು? - ಎಂದು ಶಂಕೆಯುಂಟಾಗಲಾಗಿ ಇಂದ್ರಿಯಗಳೇ ಮುಂತಾದವುಗಳೆಲ್ಲಕ್ಕಿಂತಲೂ ಪರಮಸೂಕ್ಷ್ಮನು ಎಂದು 'ಇಂದ್ರಿಯಗಳಿಗಿಂತ ಭೂತಸೂಕ್ಷ್ಮವಾದ ಅರ್ಥಗಳು ಹೆಚ್ಚಿನವು' ಎಂದು ಆರಂಭಿಸಿ, 'ಪುರುಷನಿಗಿಂತ ಪರವಾದದ್ದು ಯಾವದೂ ಇಲ್ಲ, ಅದೇ ಕೊನೆ, ಅದೇ ಪರಗತಿಯು' ಎಂಬವರೆಗಿನ ಗ್ರಂಥದಿಂದ ಯಾವನು ಉಕ್ತನಾಗಿರುತ್ತಾನೋ ಆ (ಈತನು) **ಕಥಿತನು**. ಯೋಗವೆಂದರೆ ಜ್ಞಾನವು, ಅದರಿಂದಲೇ ಅರಿಯತಕ್ಕವನಾದ್ದರಿಂದ **ಯೋಗೀ** (ಎನಿಸುವನು), ಯೋಗವೆಂದರೆ ಸಮಾಧಿಯು. ಆತನಲ್ಲವೆ, ಯಾವಾಗಲೂ ತನ್ನ ರೂಪವನ್ನು ತನ್ನಲ್ಲಿ (ಸಮಾಧತ್ತೇ=) ನಿಲ್ಲಿಸಿಕೊಂಡಿರುತ್ತಾನೆ? ಆದ್ದರಿಂದ (ಆತನು) **ಯೋಗೀ** ಎಂದಾದರೂ (ನಾಮಕ್ಕೆ ಅರ್ಥ). ಉಳಿದ ಯೋಗಿಗಳು ಯೋಗಾಂತರಾಯಗಳಿಂದ ವಿಘ್ನಿತರಾಗಿರುತ್ತಾರೆ, ಸ್ವರೂಪದಿಂದಲೂ ಜಾರುತ್ತಾರೆ, ಆದರೆ ಈತನು ಆ ಅಡ್ಡಿಗಳಿಲ್ಲದವನಾದ್ದರಿಂದ ಅವರಿಗೆ ಈಶನು, ಆದ್ದರಿಂದ **ಯೋಗೀಶನು**. ಎಲ್ಲಾ ಕಾಮಗಳನ್ನೂ ಯಾವಾಗಲೂ

ಕೊಡುತ್ತಾನೆ, ಆದ್ದರಿಂದ **ಸರ್ವಕಾಮದನು**. 'ಈ (ಈಶ್ವರ) ನಿಂದಲೇ ಕರ್ಮಫಲವಾಗುತ್ತದೆ; ಏಕೆಂದರೆ ಅದು ಯುಕ್ತವಾಗಿದೆ' ಎಂದು ವ್ಯಾಸರಿಂದ[1] ಉಕ್ತವಾಗಿರುತ್ತದೆಯಾದ್ದರಿಂದ ಹೀಗೆಂದು ತಿಳಿಯಬೇಕು.

## (ಭಾಷ್ಯ)

೮೫೨. ಆಶ್ರಮವತ್ ಸರ್ವೇಷಾಂ ಸಂಸಾರಾರಣ್ಯೇ ಭ್ರಮತಾಂ ವಿಶ್ರಾಮ-ಸ್ಥಾನತ್ವಾತ್ ಆಶ್ರಮಃ। ೮೫೩. ಅವಿವೇಕಿನಃ ಸರ್ವಾನ್ ಸನ್ತಾಪಯತೀತಿ ಶ್ರಮಣಃ। ೮೫೪. ಕ್ಷಾಮಾಃ ಕ್ಷೀಣಾಃ ಸರ್ವಾಃ ಪ್ರಜಾಃ ಕರೋತೀತಿ ಕ್ಷಾಮಃ। 'ತತ್ಕರೋತಿ ತದಾಚಷ್ಟೇ' (ಚುರಾದಿಗಣಸೂತ್ರಮ್) ಇತಿ ಣಿಚಿ ಪಚಾದ್ಯಚಿ ಕೃತೇ ಸಂಪನ್ನಃ ಕ್ಷಾಮ ಇತಿ। ೮೫೫. ಶೋಭನಾನಿ ಪರ್ಣಾನಿ ಛನ್ದಾಂಸಿ ಸಂಸಾರಸ್ವರೂಪಿಣೋಽಸ್ಯ ಇತಿ ಸುಪರ್ಣಃ। 'ಛನ್ದಾಂಸಿ ಯಸ್ಯ ಪರ್ಣಾನಿ' (ಗೀ. ೧೫-೧) ಇತಿ ಭಗವದ್ವಚನಾತ್। ೮೫೬. ವಾಯುರ್ವಹತಿ ಯದ್ಭೀತ್ಯಾ ಭೂತಾನೀತಿ ಸ ವಾಯುವಾಹನಃ। 'ಭೀಷಾಸ್ಮಾದ್ ವಾತಃ ಪವತೇ' (ತೈ.೨-೮) ಇತಿ ಶ್ರುತೇಃ॥೧೦೪॥

## (ಭಾಷ್ಯಾರ್ಥ)

ಆಶ್ರಮದಂತೆ ಸಂಸಾರವೆಂಬ ಕಾಡಿನಲ್ಲಿ ಸುತ್ತಾಡುತ್ತಿರುವವರಿಗೆ ವಿಶ್ರಾಂತಿಗೆ ಸ್ಥಾನವಾಗಿರುವದರಿಂದ **ಆಶ್ರಮನು**. ಅವಿವೇಕಿಗಳನ್ನೆಲ್ಲ ಸಂತಾಪಗೊಳಿಸುತ್ತಾನೆ, ಆದ್ದರಿಂದ **ಶ್ರಮಣನು**. ಎಲ್ಲಾ ಪ್ರಾಣಿಗಳನ್ನೂ (ಪ್ರಲಯದಲ್ಲಿ) ಕ್ಷಾಮದಿಂದ ಕ್ಷೀಣರನ್ನಾಗಿ ಮಾಡುತ್ತಾನೆ, ಆದ್ದರಿಂದ **ಕ್ಷಾಮನು**. 'ತತ್ಕರೋತಿ ತದಾಚಷ್ಟೇ' (ಅದನ್ನು ಮಾಡುತ್ತಾನೆ, ಅಥವಾ ಹೇಳುತ್ತಾನೆ) ಎಂಬ ಸೂತ್ರದಿಂದ ಣಿಚ್ ಪ್ರತ್ಯಯವು ಬಂದು ಅದಕ್ಕೆ ಪಚಾದಿಗಣಕ್ಕೆ ಬರುವ ಅಚ್‌ಪ್ರತ್ಯಯವನ್ನು ಸೇರಿಸಲು 'ಕ್ಷಾಮಃ' ಎಂಬ ಶಬ್ದರೂಪವಾಗಿರುತ್ತದೆ. (ಸು) ಎಂದರೆ ಒಳ್ಳೆಯ, ಪರ್ಣಗಳು ಎಂದರೆ ಛಂದಸ್ಸುಗಳು - ಸಂಸಾರವೃಕ್ಷರೂಪಿಯಾದ ಈತನಿಗೆ ಇವೆಯಾದ್ದರಿಂದ **ಸುಪರ್ಣನು**. 'ಯಾವ (ಅಶ್ವತ್ಥರೂಪಸಂಸಾರವೃಕ್ಷಕ್ಕೆ) ಛಂದಸ್ಸುಗಳೇ ಪರ್ಣ (ಎಲೆ) ಗಳೋ' ಎಂಬ ಭಗವದ್ವಚನದಿಂದ ಹೀಗೆ ಅರ್ಥಮಾಡಬೇಕು. ಯಾವಾತನ ಅಂಜಿಕೆಯಿಂದ ವಾಯುವು ಎಲ್ಲಾ ಭೂತಗಳನ್ನೂ ಒಯ್ಯುತ್ತಾನೋ - ಅವನು **ವಾಯುವಾಹನನು**[2]. 'ಈತನ ಭಯದಿಂದ ಗಾಳಿಯು ಬೀಸುತ್ತದೆ' ಎಂದು ಶ್ರುತಿಯಿರುವದರಿಂದ ಈ (ಅರ್ಥ).

1. ಸೂತ್ರಕಾರರನ್ನು ಬಾದರಾಯಣನೆಂಬ ಹೆಸರಿನಿಂದಲೇ ಭಾಷ್ಯದಲ್ಲಿ ಕರೆಯುವದು ರೂಢಿ; ವ್ಯಾಸರೆಂಬ ಹೆಸರನ್ನು ಈ ಸಂದರ್ಭದಲ್ಲಿ ಬಳಸಿಕೊಂಡಿರುವದು ಸೂತ್ರಭಾಷ್ಯದಲ್ಲಿಲ್ಲ.

2. ಹಿಂದೆ 'ವರದೋ ವಾಯುವಾಹನಃ' ೪೯ನೆಯ ಶ್ಲೋಕದಲ್ಲಿರುವ ಈ ನಾಮಕ್ಕೆ ಬೇರೆ ಅರ್ಥವನ್ನು ಹೇಳಿರುವದರಿಂದ ಪುನರುಕ್ತಿದೋಷವಿಲ್ಲ ಎಂದು ವ್ಯಾಖ್ಯಾನ

**ಧನುರ್ಧರೋ ಧನುರ್ವೇದೋ ದಣ್ಡೋ ದಮಯಿತಾ ದಮಃ।**
**ಅಪರಾಜಿತಃ ಸರ್ವಸಹೋ ನಿಯನ್ತಾಽನಿಯಮೋಽಯಮಃ॥೧೦೫॥**

(ಭಾಷ್ಯ)

೮೫೭. ಶ್ರೀಮಾನ್ ರಾಮೋ ಮಹದ್ಧನುರ್ಧಾರಯಾಮಾಸ ಇತಿ ಧನುರ್ಧರಃ। ೮೫೮. ಸ ಏವ ದಾಶರಥಿಃ ಧನುರ್ವೇದಂ ವೇತ್ತೀತಿ ಧನುರ್ವೇದಃ। ೮೫೯. ದಮನಂ ದಮಯತಾಂ ದಣ್ಡಃ, 'ದಣ್ಡೋ ದಮಯತಾಮಸ್ಮಿ' (ಗೀ. ೧೦-೩೮) ಇತಿ ಭಗವದ್ವಚನಾತ್। ೮೬೦. ವೈವಸ್ವತನರೇನ್ದ್ರಾದಿ ರೂಪೇಣ ಪ್ರಜಾಃ ದಮಯತೀತಿ ದಮಯಿತಾ। ೮೬೧. ದಮಃ ದಮ್ಯೇಷು ದಣ್ಡಕಾರ್ಯಂ ಫಲಮ್, ತಚ್ಚ ಸ ಏವ ಇತಿ ದಮಃ॥

(ಭಾಷ್ಯಾರ್ಥ)

ಶ್ರೀಮಂತನಾದ ರಾಮನೆಂಬ ಹೆಸರುಳ್ಳ (ವಿಷ್ಣುವು) ದೊಡ್ಡ ಧನುಸ್ಸನ್ನು ಧರಿಸಿದ್ದನು, ಆದ್ದರಿಂದ **ಧನುರ್ಧರನು**. ಅದೇ ದಶರಥಪುತ್ರನಾದ (ರಾಮನು) ಧನುರ್ವೇದವನ್ನು ಬಲ್ಲವನು, ಆದ್ದರಿಂದ **ಧನುರ್ವೇದ** (ನೆನಿಸಿರುತ್ತಾನೆ). ಆಳವಡಿಸಿಕೊಂಡು ಆಳುವದರಲ್ಲಿರುವ ದಮನಶಕ್ತಿಯು **ದಂಡವು**; 'ದಮನಮಾಡುವವರಲ್ಲಿರುವ **ದಂಡ**ವಾಗಿರುತ್ತೇನೆ' ಎಂಬ ಭಗದ್ವಚನವು (ಇದಕ್ಕೆ ಪ್ರಮಾಣ). ವೈವಸ್ವತಮನು, ರಾಜರು, ಮೊದಲಾದವರ ರೂಪದಿಂದ ಪ್ರಜೆಗಳನ್ನು ದಮನಮಾಡುತ್ತಾನೆ, ಆದ್ದರಿಂದ **ದಮಯಿತಾ** (ಎನಿಸುವನು). ದಮವೆಂದರೆ ಯಾರನ್ನು ದಮನಮಾಡಬೇಕೋ ಅವರಲ್ಲಿ ದಂಡದಿಂದ ಆಗುವ ಕಾರ್ಯರೂಪವಾದ ಫಲವು; ಅದೂ ಆ (ವಿಷ್ಣುವೇ) ಆದ್ದರಿಂದ (ಆತನೂ) **ದಮವು**.

(ಭಾಷ್ಯ)

೮೬೨. ಶತ್ರುಭಿರ್ನ ಪರಾಜಿತ ಇತಿ ಅಪರಾಜಿತಃ। ೮೬೩. ಸರ್ವಕರ್ಮಸು ಸಮರ್ಥ ಇತಿ ಸರ್ವಾನ್ ಶತ್ರೂನ್ ಸಹತೇ ಇತಿ ವಾ ಸರ್ವಸಹಃ। ೮೬೪. ಸರ್ವಾನ್ ಸ್ವೇಷು ಸ್ವೇಷು ಕೃತ್ಯೇಷು ವ್ಯವಸ್ಥಾಪಯತೀತಿ ನಿಯನ್ತಾ। ೮೬೫. ನ ನಿಯಮೋ ನಿಯತಿಸ್ತಸ್ಯ ವಿದ್ಯತ ಇತಿ ಅನಿಯಮಃ। ಸರ್ವನಿಯನ್ತುರ್ನಿಯನ್ತ್ರನ್ತರಾಭಾವಾತ್. ೮೬೬. ನಾಸ್ಯ ವಿದ್ಯತೇ ಯಮೋ ಮೃತ್ಯುರಿತಿ ಅಯಮಃ। ಅಥವಾ ಯಮನಿಯಮೌ ಯೋಗಾಜ್ಞೌ; ತದ್ಗಮ್ಯತ್ವಾತ್ ಸ ಏವ ನಿಯಮಃ ಯಮಃ॥೧೦೫॥

(ಭಾಷ್ಯಾರ್ಥ)

ಶತ್ರುಗಳಿಗೆ ಸೋತವನಲ್ಲವಾದ್ದರಿಂದ **ಅಪರಾಜಿತನು**. ಎಲ್ಲಾ ಕಾರ್ಯಗಳಲ್ಲಿಯೂ ಸಮರ್ಥನಾದ್ದರಿಂದ ಅಥವಾ ಎಲ್ಲಾ ಶತ್ರುಗಳನ್ನೂ ಸಹಿಸಿಕೊಳ್ಳಬಲ್ಲನು, ಆದ್ದರಿಂದ

**ಸರ್ವಸಹನು** ಎಂದಾದರೂ (ಅರ್ಥ). ಎಲ್ಲರನ್ನೂ ತಮ್ಮ ತಮ್ಮ ಕಾರ್ಯಗಳಲ್ಲಿ ಕಟ್ಟುಮಾಡಿ ನಿಲ್ಲಿಸಿರುತ್ತಾನೆ, ಆದ್ದರಿಂದ **ನಿಯಂತನು.** ನಿಯಮವು ಎಂದರೆ ನಿಯತಿ (ಕಟ್ಟುಪಾಡು), ಈತನಿಗೆ ಇಲ್ಲ, ಆದ್ದರಿಂದ **ಅನಿಯಮನು;** ಏಕೆಂದರೆ ಎಲ್ಲವನ್ನೂ ಕಟ್ಟುಪಾಡಿನಲ್ಲಿಟ್ಟಿರುವ (ಈತನಿಗೆ) ಮತ್ತೊಬ್ಬ ನಿಯಂತೃವು ಇರುವದಿಲ್ಲ. ಈತನಿಗೆ ಯಮನು ಎಂದರೆ ಮೃತ್ಯುವು ಇಲ್ಲ, ಆದ್ದರಿಂದ **ಅಯಮನು.** ಅಥವಾ ಯಮನಿಯಮಗಳೆಂದರೆ ಯೋಗಕ್ಕೆ ಸಂಬಂಧಿಸಿದವುಗಳು ಅವುಗಳಿಂದ ಅರಿಯಲ್ಪಡತಕ್ಕವನು, ಆದ್ದರಿಂದ **ನಿಯಮೋಯಮನು.**[1]

**ಸತ್ತ್ವವಾನ್ ಸಾತ್ತ್ವಿಕಃ ಸತ್ಯಃ ಸತ್ಯಧರ್ಮಪರಾಯಣಃ।**
**ಅಭಿಪ್ರಾಯಃ ಪ್ರಿಯಾರ್ಹೋಽರ್ಹಃ ಪ್ರಿಯಕೃತ್ ಪ್ರೀತಿವರ್ಧನಃ॥**
**॥೧೦೬॥**

(ಭಾಷ್ಯ)

೮೬೭. ಶೌರ್ಯವೀರ್ಯಾದಿಕಂ ಸತ್ತ್ವಮಸ್ಯೇತಿ ಸತ್ತ್ವವಾನ್। ೮೬೮. ಸತ್ತ್ವೇ ಗುಣೇ ಪ್ರಾಧಾನ್ಯೇನ ಸ್ಥಿತ ಇತಿ ಸಾತ್ತ್ವಿಕಃ। ೮೬೯. ಸತ್ಸು ಸಾಧುತ್ವಾತ್ ಸತ್ಯಃ । ೮೭೦. ಸತ್ಯೇ ಯಥಾಭೂತಾರ್ಥಕಥನೇ ಧರ್ಮೇ ಚ ಚೋದನಾಲಕ್ಷಣೇ ನಿಯತ ಇತಿ ಸತ್ಯಧರ್ಮಪರಾಯಣಃ॥

(ಭಾಷ್ಯಾರ್ಥ)

ಶೌರ್ಯ, ವೀರ್ಯ - ಮುಂತಾದ ಬಲವು ಈತನದು; ಆದ್ದರಿಂದ **ಸತ್ತ್ವವಾನ್** (ಎನಿಸುವನು). ಸತ್ತ್ವವೆಂಬ ಗುಣದಲ್ಲಿಯೇ ಮುಖ್ಯವಾಗಿ ಇರುತ್ತಾನೆ, ಆದ್ದರಿಂದ **ಸಾತ್ತ್ವಿಕನು.** ಸತ್ಪುರುಷನಲ್ಲಿ ಹೊಂದಿಕೊಂಡಿರುತ್ತಾನೆ, ಆದ್ದರಿಂದ **ಸತ್ಯನು.** ಸತ್ಯದಲ್ಲಿ ಎಂದರೆ ಇದ್ದದ್ದನ್ನು ಇದ್ದಂತೆ ಹೇಳುವದರಲ್ಲಿಯೂ ಚೋದನಾಪ್ರಮಾಣದಿಂದ ಧರ್ಮದಲ್ಲಿಯೂ ನಿಯತವಾಗಿರುತ್ತಾನೆ, ಆದ್ದರಿಂದ **ಸತ್ಯಧರ್ಮಪರಾಯಣನು.**

(ಭಾಷ್ಯ)

೮೭೧. ಅಭಿಪ್ರೇಯತೇ ಪುರುಷಾರ್ಥಕಾಙ್ಕ್ಷಿಭಿಃ, ಆಭಿಮುಖ್ಯೇನ ಪ್ರಲಯೇಽಸ್ಮಿನ್ ಪ್ರೈತಿ ಜಗದಿತಿ ವಾ ಅಭಿಪ್ರಾಯಃ। ೮೭೨. ಪ್ರಿಯಾಣಿ ಇಷ್ಟಾನಿ ಅರ್ಹತೀತಿ ಪ್ರಿಯಾರ್ಹಃ। 'ಯದ್ಯದಿಷ್ಟತಮಂ ಲೋಕೇ ಯಚ್ಚಾಸ್ಯ ದಯಿತಂ ಗೃಹೇ। ತತ್ತದ್ ಗುಣವತೇ ದೇಯಂ ತದೇವಾಕ್ಷಯಮಿಚ್ಛತಾ' (ದಕ್ಷ.೩-೩೧) ಇತಿ ಸ್ಮರಣಾತ್। ೮೭೩. ಸ್ವಾಗತಾಸನಪ್ರಶಂಸಾರ್ಘ್ಯಪಾದ್ಯಸ್ತುತಿನಮಸ್ಕಾರಾದಿಭಿಃ ಪೂಜಾಸಾಧನೈಃ ಪೂಜನೀಯಃ ಇತಿ ಅರ್ಹಃ। ೮೭೪. ನ ಕೇವಲಂ ಪ್ರಿಯಾರ್ಹ ಏವ, ಕಿಂ ತು

1. ಇದು ಒಂದೇ ನಾಮವೆಂದು ಭಾವವಿರಬಹುದು; ಅಥವಾ ನಿಯಮನು, ಯಮನು ಎಂದು ಅಕಾರವನ್ನು ಬಿಟ್ಟು ಬೇರೆಯ ನಾಮಗಳು ಎಂದೂ ಅಭಿಪ್ರಾಯವಿರಬಹುದು.

ಸ್ತುತ್ಯಾದಿಭಿರ್ಭಜತಾಂ ಪ್ರಿಯಂ ಕರೋತೀತಿ ಪ್ರಿಯಕೃತ್। ೮೭೫. ತೇಷಾಮೇವ ಪ್ರೀತಿಂ ವರ್ಧಯತೀತಿ ಪ್ರೀತಿವರ್ಧನಃ॥೧೦೬॥

### (ಭಾಷ್ಯಾರ್ಥ)

ಪುರುಷಾರ್ಥಗಳನ್ನು ಬಯಸುವವರಿಂದ ಇಚ್ಛಿಸಲ್ಪಡುತ್ತಾನೆ, ಅಥವಾ ಪ್ರಲಯದಲ್ಲಿ ಇವನಲ್ಲಿಗೆ ಅಭಿಮುಖವಾಗಿ ಜಗತ್ತು ಹೋಗಿ ಸೇರುತ್ತದೆ, ಆದ್ದರಿಂದ **ಅಭಿಪ್ರಾಯನು.** ಪ್ರಿಯವಾದವುಗಳನ್ನು - ಎಂದರೆ ಇಷ್ಟವಾದವುಗಳನ್ನು ಸಮರ್ಪಿಸಲು ಯೋಗ್ಯನಾಗಿದ್ದಾನೆ, ಆದ್ದರಿಂದ **ಪ್ರಿಯಾರ್ಹನು.** 'ಈ (ಯಜಮಾನನಿಗೆ) ಮನೆಯಲ್ಲಿ ಹಾಗೂ ಪ್ರಪಂಚದಲ್ಲಿ ಯಾವಯಾವ ಇಷ್ಟತಮವಾದ (ಪದಾರ್ಥಗಳುಂಟೋ) ಅವುಗಳನ್ನೇ ಗುಣವಂತನಾದ (ಶ್ರೋತ್ರಿಯನಿಗೆ ಈಶ್ವರನು ಸಂತುಷ್ಟನಾಗಲಿ, ಎಂಬ ಉದ್ದೇಶದಿಂದ) ಅಕ್ಷಯ (ವಾದ ಫಲವನ್ನು) ಬಯಸಿ ದಾನಮಾಡಬೇಕು' ಎಂದು ಸ್ಮೃತಿಯಲ್ಲಿದೆ. ಸ್ವಾಗತ, ಪೀಠ (ಸಮರ್ಪಣೆ), ಸ್ತುತಿ, ಅರ್ಘ್ಯ, ಪಾದ್ಯ, ಹೊಗಳಿಕೆ, ನಮಸ್ಕಾರ -ಮುಂತಾದ ಪೂಜಾಸಾಧನಗಳಿಂದ ಪೂಜಿಸಲ್ಪಡುವವನು, ಆದ್ದರಿಂದ **ಅರ್ಹನು.** ಪ್ರಿಯಾರ್ಹ(ನೆಂಬುದಷ್ಟೇ) ಅಲ್ಲ; ಸ್ತೋತ್ರಾದಿಗಳಿಂದ ಸೇವಿಸುವವರ ಇಷ್ಟಾರ್ಥಗಳನ್ನುಂಟುಮಾಡುತ್ತಾನೆ, ಆದ್ದರಿಂದ **ಪ್ರಿಯಕೃತ್** (ಎನಿಸುವನು). ಅಂಥವರ ಪ್ರೀತಿ (ಭಕ್ತಿ)ಯನ್ನೇ ಬೆಳೆಸುತ್ತಾನೆ, ಆದ್ದರಿಂದ **ಪ್ರೀತಿವರ್ಧನನು.**

**ವಿಹಾಯಸಗತಿರ್ಜ್ಯೋತಿಃ ಸುರುಚಿರ್ಹುತಭುಗ್ ವಿಭುಃ।**
**ರವಿರ್ವಿರೋಚನಃ ಸೂರ್ಯಃ ಸವಿತಾ ರವಿಲೋಚನಃ ॥೧೦೭॥**

### (ಭಾಷ್ಯ)

೮೭೬. ವಿಹಾಯಸಃ - ವಿಹಾಯಾಃ ಗತಿಃ ಆಶ್ರಯಃ ಅಸ್ಯೇತಿ - ವಿಹಾಯಸಗತಿಃ, ವಿಷ್ಣುಪದಮ್; ಆದಿತ್ಯೋ ವಾ। ೮೭೭. ಸ್ವತ ಏವ ದ್ಯೋತತೇ ಇತಿ ಜ್ಯೋತಿಃ। 'ನಾರಾಯಣಪರೋ ಜ್ಯೋತಿಃ' (ಮಹಾ. ನಾ. ೧೩-೨೯) ಇತಿ ಮನ್ತ್ರವರ್ಣಾತ್। ೮೭೮. ಶೋಭನಾ ರುಚಿಃ ದೀಪ್ತಿಃ ಇಚ್ಛಾ ವಾ ಅಸ್ಯೇತಿ ಸುರುಚಿಃ। ೮೭೯. ಸಮಸ್ತದೇವತೋದ್ದೇಶೇನ ಪ್ರವೃತ್ತೇಷ್ವಪಿ ಕರ್ಮಸು ಹುತಂ ಭುಙ್ಕ್ತೇ ಭುನಕ್ತಿ ಇತಿ ವಾ ಹುತಭುಕ್। ೮೮೦. ಸರ್ವತ್ರ ವರ್ತಮಾನತ್ವಾತ್ ತ್ರಯಾಣಾಂ ಲೋಕಾನಾಂ ವಿಭುತ್ವಾದ್ ವಾ ವಿಭುಃ॥

### (ಭಾಷ್ಯಾರ್ಥ)

ಆಕಾಶಕ್ಕೆ ಇವನು ಗತಿಯು ಆಶ್ರಯವು; (ಆದ್ದರಿಂದ) **ವಿಹಾಯಸಗತಿಯು.** (ಈತನು) ವಿಷ್ಣುಪದವು ಎಂದರ್ಥ.[1] ಅಥವಾ (ವಿಹಾಯಸಗತಿ) ಎಂದರೆ ಸೂರ್ಯನು (ಎಂದಾದರೂ ಆಗಬಹುದು). ತಾನೇ ಪ್ರಕಾಶಿಸುತ್ತಾನಾದ್ದರಿಂದ **ಜ್ಯೋತಿಯು.**

---

1. ಆಕಾಶಕ್ಕೂ ವಿಷ್ಣುಪದವೆಂಬ ಹೆಸರು ಕೋಶದಲ್ಲಿದೆ, ಆಗ್ಗೆ ಬ್ರಹ್ಮದ ಹೆಸರಿನಿಂದಲೇ ಆಕಾಶವನ್ನು ಕರೆದಿದೆ - ಎಂದು ತಿಳಿಯಬೇಕು.

'ನಾರಾಯಣನೇ ಪರಮವಾದ ಜ್ಯೋತಿಯು' ಎಂದು ಮಂತ್ರವರ್ಣವಿದೆ. ಶೋಭನವಾದ ಕಾಂತಿಯು - ದೀಪ್ತಿಯು ಅಥವಾ (ರುಚಿ ಎಂದರೆ) ಇಚ್ಛೆಯು ಇವನದು, ಆದ್ದರಿಂದ **ಸುರುಚಿಯು.** ಎಲ್ಲಾ ದೇವತೆಗಳ (ತೃಪ್ತಿ)ಗಾಗಿ ಪ್ರಾರಂಭಿಸಲ್ಪಟ್ಟ ಕರ್ಮಗಳಲ್ಲಿ ಹವಿಸ್ಸನ್ನು ತಿನ್ನುತ್ತಾನೆ ಅಥವಾ ಕಾಪಾಡುತ್ತಾನೆ, ಆದ್ದರಿಂದ **ಹುತಭುಕ್** (ಎನಿಸುವನು). ಎಲ್ಲೆಲ್ಲಿಯೂ ಇರುವದರಿಂದ ಅಥವಾ ಮೂರು ಲೋಕಗಳಿಗೂ ಒಡೆಯನಾಗಿರುವದರಿಂದ **ವಿಭುವು.**

## (ಭಾಷ್ಯ)

೮೮೧. ರಸಾನಾದತ್ತೇ ಇತಿ ರವಿಃ ಆದಿತ್ಯಾತ್ಮಾ। 'ರಸಾನಾಂ ಚ ತಥಾಽಽದಾನಾದ್ ರವಿರಿತ್ಯಭಿಧೀಯತೇ' (ವಿ.ಧ.೧-೩೦-೧೬) ಇತಿ ವಿಷ್ಣುಧರ್ಮೋತ್ತರೇ। ೮೮೨. ವಿವಿಧಂ ರೋಚತ ಇತಿ ವಿರೋಚನಃ। ೮೮೩. ಸೂತೇ ಸರ್ವಮಿತಿ ಸೂರ್ಯಃ, ಸೂತೇ ಶ್ರಿಯಮಿತಿ ವಾ ಸೂರ್ಯಃ, ಸೂತೇಃ ಸುವತೇರ್ವಾ ಸೂರ್ಯಶಬ್ದೋ ನಿಪಾತ್ಯತೇ, 'ರಾಜಸೂಯಸೂರ್ಯ' (ಪಾ. ಸೂ.೩-೧-೧೧೪) ಇತಿ ಪಾಣಿನಿವಚನಾತ್। ೮೮೪. ಸರ್ವಸ್ಯ ಜಗತಃ ಪ್ರಸವಿತಾ ಸವಿತಾ। 'ಪ್ರಜಾನಾಂ ತು ಪ್ರಸವನಾತ್ ಸವಿತೇತಿ ನಿಗದ್ಯತೇ' (ವಿ.ಧ.೬-೩೦-೧೫) ಇತಿ ವಿಷ್ಣುಧರ್ಮೋತ್ತರೇ। ೮೮೫. ರವಿರ್ಲೋಚನಂ ಚಕ್ಷುರಸ್ಯೇತಿ ರವಿಲೋಚನಃ। 'ಅಗ್ನಿರ್ಮೂರ್ಧಾ ಚಕ್ಷುಷೀ ಚನ್ದ್ರಸೂರ್ಯೌ' (ಮುಂ.೨-೧-೪) ಇತಿ ಶ್ರುತೇಃ॥ ೧೦೭॥

## (ಭಾಷ್ಯಾರ್ಥ)

ರಸಗಳನ್ನು ತೆಗೆದುಕೊಳ್ಳುತ್ತಾನಾದ್ದರಿಂದ **ರವಿಯು.** ಆದಿತ್ಯರೂಪನಿವನು (ಎಂದರ್ಥ). "ರಸಗಳನ್ನು ಸ್ವೀಕರಿಸುವದರಿಂದ ರವಿಯೆನಿಸಿರುತ್ತಾನೆ" ಎಂದು ವಿಷ್ಣುಧರ್ಮೋತ್ತರದಲ್ಲಿದೆ. ಅನೇಕಪ್ರಕಾರವಾಗಿ ಪ್ರಕಾಶಿಸುತ್ತಾನೆ, ಆದ್ದರಿಂದ **ವಿರೋಚನನು.** ಎಲ್ಲವನ್ನೂ ಹಡೆಯುವನಾದ್ದರಿಂದ **ಸೂರ್ಯನು** ಅಥವಾ ಸಂಪತ್ತನ್ನು ಉಂಟುಮಾಡುತ್ತಾನಾದ್ದರಿಂದ ಸೂರ್ಯ (ನೆಂದಾದರೂ ಆಗಬಹುದು). "ಷೂಙ್" ಅಥವಾ "ಷೂ" ಎಂಬ ಧಾತುವಿನ[1] ನಿಪಾತವಾಗಿ ಸೂರ್ಯಶಬ್ದವು (ವ್ಯುತ್ಪನ್ನವಾಗಿದೆ). "ರಾಜಸೂಯಸೂರ್ಯ"[2] ಎಂಬ ಪಾಣಿನಿಯ ವಚನದಂತೆ (ಸೂರ್ಯಶಬ್ದವು) ನಿಪಾತವಾಗಿದೆ. ಎಲ್ಲಾ ಜಗತ್ತಿನ ಪ್ರಸವಿತೃವು - (ಹುಟ್ಟಿಸುವವನು) **ಸವಿತಾ** (ಎನಿಸುತ್ತಾನೆ). 'ಪ್ರಜೆಗಳನ್ನು ಉಂಟುಮಾಡುವದರಿಂದ ಸವಿತಾ ಎಂದು ಕರೆಯಲ್ಪಡುತ್ತಾನೆ' ಎಂಬ ವಿಷ್ಣುಧರ್ಮೋತ್ತರ (ವಚನದಿಂದ ಇದು ಸಿದ್ಧವಾಗುತ್ತದೆ).

---

1. 'ಷೂಙ್ ಪ್ರಾಣಿಗರ್ಭವಿಮೋಚನೇ' (ಸೂತೇ) 'ಷೂ ಪ್ರೇರಣೇ' (ಸುವತಿ) ಎಂಬ ಧಾತುಗಳ ರೂಪಗಳನ್ನು ಅನುಸರಿಸಿ - ಎಂದಭಿಪ್ರಾಯ.
2. 'ರಾಜಸೂಯಸೂರ್ಯಮೃಷೋದ್ಯರುಚ್ಯಕುಪ್ಯಕೃಷ್ಟಪಚ್ಯಾವ್ಯಥ್ಯಾಃ' ಎಂದು ಪೂರ್ಣಸೂತ್ರ.

ಸೂರ್ಯನು (ಇವನಿಗೆ) ಲೋಚನವು - ಕಣ್ಣು; ಆದ್ದರಿಂದ **ರವಿಲೋಚನನು.** "ಅಗ್ನಿಯೇ ತಲೆ, ಚಂದ್ರಸೂರ್ಯರೇ ಕಣ್ಣುಗಳು" ಎಂಬ ಶ್ರುತಿಯಿಂದ (ಹೀಗೆ ಸಿದ್ಧವಾಗುತ್ತದೆ).

**ಅನನ್ತೋ ಹುತಭುಕ್ ಭೋಕ್ತಾ ಸುಖದೋ ನೈಕಜೋಽಗ್ರಜಃ।**
**ಅನಿರ್ವಿಣ್ಣಃ ಸದಾಮರ್ಷೀ ಲೋಕಾಧಿಷ್ಠಾನಮದ್ಭುತಃ ॥೧೦೪॥**

(ಭಾಷ್ಯ)

೪೪೬. ನಿತ್ಯತ್ವಾತ್ ಸರ್ವಗತತ್ವಾತ್ ದೇಶಕಾಲವಸ್ತುಪರಿಚ್ಛೇದಾಭಾವಾತ್ ಅನನ್ತಃ ಶೇಷರೂಪೋ ವಾ। ೪೪೭. ಹುತಂ ಭುನಕ್ತೀತಿ ಹುತಭುಕ್। ೪೪೮. ಪ್ರಕೃತಿಂ ಭೋಗ್ಯಾಮ್ ಅಚೇತನಾಂ ಭುಙ್ಕ್ತೇ ಇತಿ, ಜಗತ್ ಪಾಲಯತೀತಿ ವಾ ಭೋಕ್ತಾ। ೪೪೯. ಭಕ್ತಾನಾಂ ಸುಖಂ ಮೋಕ್ಷಲಕ್ಷಣಂ ದದಾತೀತಿ ಸುಖದಃ। ಅಸುಖಂ ದ್ಯತಿ ಖಣ್ಡಯತೀತಿ ವಾ ಅಸುಖದಃ। ೪೫೦. ಧರ್ಮಗುಪ್ತಯೇ ಅಸಕೃಜ್ಜಾಯಮಾನತ್ವಾತ್ ನೈಕಜಃ। ೪೫೧. ಅಗ್ರೇ ಜಾಯತ ಇತಿ ಅಗ್ರಜಃ। 'ಹಿರಣ್ಯಗರ್ಭಃ ಸಮವರ್ತತಾಗ್ರೇ' (ಋ. ಸಂ. ೧೦-೧೨೧-೧) ಇತ್ಯಾದಿಶ್ರುತೇಃ॥

(ಭಾಷ್ಯಾರ್ಥ)

ನಿತ್ಯನೂ ಸರ್ವಗತನೂ ದೇಶಕಾಲವಸ್ತುಗಳ ಪರಿಚ್ಛೇದವಿಲ್ಲದವನೂ ಆದ್ದರಿಂದ **ಅನಂತನು.** ಅಥವಾ (ಅನಂತನೆಂದರೆ) ಆದಿಶೇಷನ ರೂಪನೆಂದಾದರೂ (ಅರ್ಥಮಾಡಬಹುದು). ಹೋಮಮಾಡಿದ್ದನ್ನು ತಿನ್ನುತ್ತಾನಾದ್ದರಿಂದ **ಹುತಭುಕ್** (ಎನಿಸುವನು) ಅಚೇತನವಾದ ಭೋಗ್ಯವಾದ ಪ್ರಕೃತಿಯನ್ನು ಅನುಭವಿಸುತ್ತಾನೆ, ಅಥವಾ ಪ್ರಪಂಚವನ್ನು ಆಳುತ್ತಾನೆ, ಆದ್ದರಿಂದ **ಭೋಕ್ತನು.** ಭಕ್ತರಿಗೆ ಮೋಕ್ಷರೂಪವಾದ ಸುಖವನ್ನು ಕೊಡುತ್ತಾನಾದ್ದರಿಂದ **ಸುಖದನು.** ಅಥವಾ ಅಸುಖವನ್ನು (ದುಃಖವನ್ನು) ದ್ಯತಿ- ಕತ್ತರಿಸುತ್ತಾನೆ, ಆದ್ದರಿಂದ ಅಸುಖದನು[1] (ಎಂದೂ ಹೇಳಬಹುದು). ಧರ್ಮವನ್ನು ಕಾಪಾಡುವದಕ್ಕಾಗಿ ಅನೇಕ ಸಲ ಹುಟ್ಟುತ್ತಾನಾದ್ದರಿಂದ **ನೈಕಜನು.** ಮೊದಲು ಹುಟ್ಟುತ್ತಾನಾದ್ದರಿಂದ **ಅಗ್ರಜನು.** 'ಹಿರಣ್ಯಗರ್ಭನು ಮೊದಲು ಉಂಟಾದನು' ಎಂಬಿದೇ ಮೊದಲಾದ ಶ್ರುತಿಯಿಂದ (ಈ ಅರ್ಥವು ಹೊಂದುತ್ತದೆ).

(ಭಾಷ್ಯ)

೪೫೨. ಅವಾಪ್ತಸರ್ವಕಾಮತ್ವಾತ್ ಅಪ್ರಾಪ್ತಿಹೇತ್ವಭಾವಾತ್ ನಿರ್ವೇದೋಽಸ್ಯ ನಾಸ್ತೀತಿ ಅನಿರ್ವಿಣ್ಣಃ। ೪೫೩. ಸತಃ ಸಾಧೂನ್ ಅಭಿಮುಖ್ಯೇನ ಮೃಷ್ಯತೇ ಕ್ಷಮತ

1. "ಭೋಕ್ತಾಽಸುಖದೋ...." ಎಂದು ಮೂಲದಲ್ಲಿ ಅಕಾರವನ್ನು ಸಂಧಿಯಿಂದ ಕಲ್ಪಿಸಿ 'ಅಸುಖದಃ' ಎಂದು ಪದಚ್ಛೇದಮಾಡಿದರೆ ಈ ಅರ್ಥ - ಎಂದು ಭಾವ.

ಇತಿ ಸದಾಮರ್ಷೀ। ೮೯೪. ತಮನಾಧಾರಮಾಧಾರಮಧಿಷ್ಠಾಯ ತ್ರಯೋ ಲೋಕಾಸ್ತಿಷ್ಠನ್ತೀತಿ ಲೋಕಾಧಿಷ್ಠಾನಂ ಬ್ರಹ್ಮ। ೮೯೫. ಅದ್ಭುತತ್ವಾತ್ ಅದ್ಭುತಃ। 'ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ। ಶೃಣ್ವನ್ತೋಽಪಿ ಬಹವೋ ಯಂ ನ ವಿದ್ಯುಃ। ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ' (ಕಾ. ೨-೭) ಇತಿ ಶ್ರುತೇಃ। 'ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಮ್।' (ಗೀ. ೨-೨೯) ಇತಿ ಭಗವದ್ವಚನಾಚ್ಚ। ಸ್ವರೂಪಶಕ್ತಿವ್ಯಾಪಾರಕಾರ್ಯೈರದ್ಭುತತ್ವಾದ್ ವಾ ಅದ್ಭುತಃ ॥೧೦೮॥

## (ಭಾಷ್ಯಾರ್ಥ)

ಎಲ್ಲಾ ಕಾಮಗಳನ್ನೂ ಪಡೆದುಕೊಂಡಿರುವನಾದ್ದರಿಂದಲೂ (ಕಾಮಗಳು) ಸಿಗದೆ ಇರುವದಕ್ಕೆ ಕಾರಣವೇನೂ (ಈತನಿಗೆ) ಇಲ್ಲವಾದ್ದರಿಂದಲೂ ನಿರ್ವೇದವು ಎಂದರೆ ಬೇಜಾರು ಈತನಿಗೆ ಇಲ್ಲವಾದ್ದರಿಂದ **ಅನಿರ್ವಿಣ್ಣನು.** ಸತ್ಪುರುಷರಾದ ಸಾಧುಗಳನ್ನು (ಅವರು ಹಿಂದೆ ಅಪರಾಧಮಾಡಿದ್ದರೂ) ಎದುರಿಗೇ ಸಹಿಸಿಕೊಳ್ಳುತ್ತಾನೆ - ಎಂದರೆ ಕ್ಷಮಿಸುತ್ತಾನೆ; ಆದ್ದರಿಂದ **ಸದಾಮರ್ಷಿಯು.**[1] ಆಧಾರವಿಲ್ಲದೆ (ತನಗೆ ತಾನೇ ಆಧಾರವಾಗಿರುವ) ಆ ಬ್ರಹ್ಮವನ್ನು ಆಶ್ರಯಿಸಿ ಮೂರು ಲೋಕಗಳೂ ಇವೆಯಾದ್ದರಿಂದ **ಲೋಕಾಧಿಷ್ಠಾನನು.** ಆಶ್ಚರ್ಯಕರನಾಗಿರುವದರಿಂದ **ಅದ್ಭುತನು.** "ಕೇಳುವದಕ್ಕೂ ಅನೇಕರಿಗೆ ಯಾವನು ಸಿಕ್ಕುವಂತಿಲ್ಲವೋ, ಕೇಳಿದ ಮೇಲೂ ಅನೇಕರು ಯಾವನನ್ನು ಅರಿಯರೋ, (ಅಂಥ) ಇವನನ್ನು ಹೇಳುವವನು ಆಶ್ಚರ್ಯರೂಪನು; ಪಡೆಯುವವನು ಕುಶಲನು, ಕುಶಲನಿಂದ ಹೇಳಿಸಿಕೊಂಡು ತಿಳಿದುಕೊಳ್ಳುವಾತನು ಆಶ್ಚರ್ಯರೂಪನು" ಎಂದು ಶ್ರುತಿಯಿದೆ. "ಇವನನ್ನು ಒಬ್ಬನು ಯಾವದೋ (ಅದ್ಭುತವನ್ನು) ಕಂಡಂತೆ ಕಾಣುವನು" ಎಂದು ಭಗವಂತನ ವಚನವೂ ಇದೆ. ಅಥವಾ (ತನ್ನ) ಸ್ವರೂಪ, ಶಕ್ತಿ, ಕಾರ್ಯಗಳು, ಕ್ರಿಯೆ ಮುಂತಾದವುಗಳಿಂದ ಅದ್ಭುತನಾಗಿರುವದರಿಂದ **"ಅದ್ಭುತ"** (ನೆಂದಾದರೂ ಹೇಳಬಹುದು).

**ಸನಾತ್ಸನಾತನತಮಃ ಕಪಿಲಃ ಕಪಿರಪ್ಯಯಃ।**
**ಸ್ವಸ್ತಿದಃ ಸ್ವಸ್ತಿಕೃತ್ ಸ್ವಸ್ತಿ ಸ್ವಸ್ತಿಭುಕ್ ಸ್ವಸ್ತಿದಕ್ಷಿಣಃ ॥೧೦೯॥**

## (ಭಾಷ್ಯ)

೮೯೬. ಸನಾತ್ ಇತಿ ನಿಪಾತಶ್ಚಿರಾರ್ಥವಚನಃ। ಕಾಲಶ್ಚ ಪರಸ್ಯೈವ ವಿಕಲ್ಪನಾ ಕಾಪಿ। 'ಪರಸ್ಯಬ್ರಹ್ಮಣೋ ರೂಪಂ ಪುರುಷಃ ಪ್ರಥಮಂ ದ್ವಿಜ। ವ್ಯಕ್ತಾವ್ಯಕ್ತೇ

[1] ವ್ಯಾ॥ ಪಾಠದ ವಿವೃತಿಯಲ್ಲಿ ಕೊಟ್ಟಿರುವ 'ನ ಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ' ಎಂಬ ವಾಲ್ಮೀಕಿರಾಮಾಯಣ ವಾಕ್ಯವು ಈ ಸಂದರ್ಭಕ್ಕೆ ತುಂಬ ಹೊಂದುಗೆಯಾಗಿದೆ.

ತಥೈವಾನ್ಯೇ ರೂಪೇ ಕಾಲಸ್ತಥಾಪರಮ್' (ವಿ.ಪು. ೧-೨-೧೫) ಇತಿ ವಿಷ್ಣುಪುರಾಣೇ। ೮೯೭. ಸರ್ವಕಾರಣತ್ವಾತ್ ವಿರಿಞ್ಚ್ಯಾದೀನಾಮಪಿ ಸನಾತನಾನಾಮ್ ಅತಿಶಯೇನ ಸನಾತನತ್ವಾತ್ - ಸನಾತನತಮಃ। ೮೯೮. ವಡವಾನಲಸ್ಯ ಕಪಿಲೋ ವರ್ಣ ಇತಿ ತದ್ರೂಪೀ ಕಪಿಲಃ। ೮೯೯. ಕಂ ಜಲಂ ರಶ್ಮಿಭಿಃ ಪಿಬನ್ ಕಪಿಃ ಸೂರ್ಯಃ, ಕಪಿರ್ವರಾಹೋ ವಾ, 'ಕಪಿರ್ವರಾಹಃ ಶ್ರೇಷ್ಠಶ್ಚ'(?) ಇತಿ ವಚನಾತ್। ೯೦೦. ಪ್ರಲಯೇ ಅಸ್ಮಿನ್ನಪಿಯನ್ತಿ ಜಗನ್ತೀತಿ - ಅಪ್ಯಯಃ॥

ಇತಿ ನಾಮ್ನಾಂ ನವಮಂ ಶತಂ ವಿವೃತಮ್

## (ಭಾಷ್ಯಾರ್ಥ)

**ಸನಾತ್** - ಎಂಬುದು ಚಿರಕಾಲ - ಎಂಬರ್ಥದ ನಿಪಾತವು. ಕಾಲವೂ ಭಗವಂತನ ಒಂದು ವಿಕಲ್ಪವೇ. 'ಎಲೈ ದ್ವಿಜನೆ, ಪುರುಷನು ಪರಬ್ರಹ್ಮದ ಮೊದಲನೆಯ ರೂಪವು, ವ್ಯಕ್ತ ಮತ್ತು ಅವ್ಯಕ್ತ ಎಂಬಿವು (ಪುರುಷನಿಗಿಂತ) ಎರಡನೆಯ ರೂಪ(ಗಳು), ಕಾಲವೆಂಬುದೂ ಮತ್ತೊಂದು ರೂಪವು' ಎಂದು ವಿಷ್ಣುಪುರಾಣದಲ್ಲಿದೆ. ಸನಾತನರಾದ ವಿರಿಂಚಿ (ಬ್ರಹ್ಮದೇವ)ಯೇ ಮೊದಲಾದವರಿಗಿಂತಲೂ ಹೆಚ್ಚಿನ ಸನಾತನ (ಹಿಂದಿನವ)ನಾಗಿರುವದರಿಂದಲೂ ಸರ್ವಕ್ಕೂ ಕಾರಣನಾಗಿರುವದರಿಂದಲೂ **ಸನಾತನತಮನು.** (ಸಮುದ್ರಮಧ್ಯದಲ್ಲಿರುವ) ಬಡಬಾಗ್ನಿಗೆ ಕಂದುಬಣ್ಣವಿರುತ್ತದೆಯಾಗಿ ಆ ರೂಪದವನಾದ್ದರಿಂದ **ಕಪಿಲನು.** ಕಂ ಎಂದರೆ ನೀರನ್ನು ಕಿರಣಗಳಿಂದ ಕುಡಿಯುವವನು (ಎಂದರೆ) ಸೂರ್ಯನು **ಕಪಿಯು.** ಅಥವಾ ಕಪಿ ಎಂದರೆ ವರಾಹ (ರೂಪಿ) ಯಾದ ಭಗವಂತನೆಂದೂ ಆಗಬಹುದು. ಕಪಿ, ವರಾಹ, ಶ್ರೇಷ್ಠ - (ಎಲ್ಲವೂ ಭಗವಂತನ ವಾಚಕಗಳು ಎಂದು ವಚನವಿದೆ.[1] ಪ್ರಲಯ (ಕಾಲ)ದಲ್ಲಿ ಲೋಕಗಳೆಲ್ಲವೂ ಈತನಲ್ಲಿ ಲಯವಾಗುತ್ತವೆಯಾದ್ದರಿಂದ **ಅಪ್ಯಯನು.**

ಇಲ್ಲಿಗೆ ನಾಮಗಳ ಒಂಬತ್ತನೆಯ ಶತಕವನ್ನು ವಿವರಿಸಿದ್ದಾಯಿತು.

1. ಇದು ಯಾವ ವಚನವೋ ತಿಳಿದಿಲ್ಲ, 'ಸ್ಮೃತಿವಾಕ್ಯ' ವೆಂದಿಷ್ಟೇ ಮೈ॥ ವಿವೃತಿ.

# ದಶಮಶತಕ

## (ಭಾಷ್ಯ)

೯೦೧. ಭಕ್ತಾನಾಂ ಸ್ವಸ್ತಿ ಮಙ್ಗಲಂ ದದಾತೀತಿ ಸ್ವಸ್ತಿದಃ। ೯೦೨. ತದೇವ ಕರೋತೀತಿ ಸ್ವಸ್ತಿಕೃತ್। ೯೦೩. ಮಙ್ಗಲಸ್ವರೂಪಮಾತ್ಮೀಯಂ ಪರಮಾನನ್ದಲಕ್ಷಣಂ ಸ್ವಸ್ತಿ। ೯೦೪. ತದೇವ ಭುಙ್ಕ್ತೇ ಇತಿ ಸ್ವಸ್ತಿಭುಕ್। ಭಕ್ತಾನಾಂ ಮಙ್ಗಲಂ ಸ್ವಸ್ತಿ ಭುನಕ್ತೀತಿ ವಾ ಸ್ವಸ್ತಿಭುಕ್। ೯೦೫. ಸ್ವಸ್ತಿರೂಪೇಣ ದಕ್ಷತೇ ವರ್ಧತೇ, ಸ್ವಸ್ತಿ ದಾತುಂ ಸಮರ್ಥ ಇತಿ ವಾ ಸ್ವಸ್ತಿದಕ್ಷಿಣಃ। ಅಥವಾ ದಕ್ಷಿಣಶಬ್ದಃ ಆಶುಕಾರಿಣಿ ವರ್ತತೇ, ಶೀಘ್ರಂ ಸ್ವಸ್ತಿ ದಾತುಮ್ ಅಯಮೇವ ಸಮರ್ಥ ಇತಿ॥೧೦೯॥

"ಸ್ಮರಣಾದೇವ ದೇವಸ್ಯ ಸಿದ್ಧ್ಯನ್ತೇ ಸರ್ವಸಿದ್ಧಯಃ।
ಸ್ಮೃತೇ ಸಕಲಕಲ್ಯಾಣಭಾಜನಂ ಯತ್ರ ಜಾಯತೇ॥
ಪುರುಷಸ್ತಮಜಂ ನಿತ್ಯಂ ವ್ರಜಾಮಿ ಶರಣಂ ಹರಿಮ್।
ಸ್ಮರಣಾದೇವ ಕೃಷ್ಣಸ್ಯ ಪಾಪಸಙ್ಘಾತಪಞ್ಜರಮ್॥
ಶತಧಾ ಭೇದಮಾಯಾತಿ ಗಿರಿರ್ವಜ್ರಹತೋ ಯಥಾ॥

ಇತ್ಯಾದಿವಚನೇಭ್ಯಃ॥

## (ಭಾವಾರ್ಥ)

ಭಕ್ತರಿಗೆ ಸ್ವಸ್ತಿ ಎಂದರೆ ಮಂಗಳವನ್ನು ಕೊಡುವವನು, ಆದ್ದರಿಂದ **ಸ್ವಸ್ತಿದನು.** ಅದನ್ನೇ (ಮಂಗಳವನ್ನೇ) ಉಂಟುಮಾಡುವವನಾದ್ದರಿಂದ **ಸ್ವಸ್ತಿಕೃತ್** (ಎನಿಸುವನು). ತನ್ನ ಸ್ವರೂಪವೇ ಆದ ಪರಮಾನಂದಲಕ್ಷಣವಾದ ಮಂಗಳಸ್ವರೂಪನಾದ್ದರಿಂದ **ಸ್ವಸ್ತಿ** (ಎನಿಸುವನು). ಅದನ್ನೇ ಅನುಭವಿಸುತ್ತಾನಾದ್ದರಿಂದ **ಸ್ವಸ್ತಿಭುಕ್** (ಎಂದು ಹೆಸರು). ಅಥವಾ ಭಕ್ತರುಗಳ ಮಂಗಳ (ಶುಭಫಲ)ವನ್ನು ರಕ್ಷಿಸುತ್ತಾನೆ, ಆದ್ದರಿಂದ **ಸ್ವಸ್ತಿಭುಕ್** (ಎಂದೂ ಆಗಬಹುದು). ಸ್ವಸ್ತಿರೂಪದಿಂದ ವರ್ಧಿಸುತ್ತಾನೆ, ಬೆಳೆಯುತ್ತಾನೆ; ಅಥವಾ ಸ್ವಸ್ತಿ (ಶುಭ)ಯನ್ನು ಕೊಡುವದಕ್ಕೆ ಸಮರ್ಥನಾಗಿರುತ್ತಾನೆ, ಆದ್ದರಿಂದ **ಸ್ವಸ್ತಿದಕ್ಷಿಣನು.** ಅಥವಾ ದಕ್ಷಿಣ ಎಂಬ ಶಬ್ದವು ಶೀಘ್ರವಾಗಿ ಫಲವನ್ನು ಕೊಡುವವನು ಎಂಬರ್ಥದಲ್ಲಿಯೂ ಇದೆ. ಬೇಗನೆ ಸ್ವಸ್ತಿಯನ್ನು ಕೊಡುವದಕ್ಕೆ ಇವನೇ ಸಮರ್ಥನು- (ಎಂದೂ ಆಗಬಹುದು). "ಈ ದೇವನನ್ನು ಸ್ಮರಿಸಿದ ಮಾತ್ರದಿಂದಲೇ ಎಲ್ಲಾ ಸಿದ್ಧಿಗಳೂ ಫಲಿಸುವವು; ಪುರುಷನು ಯಾವನ ಸ್ಮರಣೆಯಿಂದ ಎಲ್ಲಾ ಮಂಗಳವನ್ನೂ ಹೊಂದಲು ಅರ್ಹನಾಗುವನೋ ಆ ಅಜನಾದ ಶ್ರೀಹರಿಯನ್ನು ಶರಣುಹೋಗುತ್ತೇನೆ. ಕೃಷ್ಣನನ್ನು ನೆನೆದ ಮಾತ್ರದಿಂದ ಪಾಪಗಳ ಗುಂಪಿನ ಪಂಜರವು-ವಜ್ರಾಯುಧದಿಂದ ಹೊಡೆಯಲ್ಪಟ್ಟ ಬೆಟ್ಟದಂತೆ-ನೂರಾಗಿ ಸೀಳಿಹೋಗುವದು" ಇವೇ ಮೊದಲಾದ ವಚನಗಳಿಂದ [1] (ಹೀಗೆ ಅರ್ಥ).

1. ಈ ವಾಕ್ಯಗಳು ಯಾವ ಪುರಾಣದ್ದೆಂಬುದು ತಿಳಿದಿಲ್ಲ. 'ಸ್ಮೃತೇ ಸಕಲ ಕಲ್ಯಾಣ...' ಎಂಬ ಶ್ಲೋಕವು ಮಾತ್ರ ಬ್ರಹ್ಮಪುರಾಣ (೮೩-೧೭) ದಲ್ಲಿದೆಯಂತ ಗೀ॥ ಪಾಠದಲ್ಲಿ ಕೊಟ್ಟಿದೆ. ವೈದಿಕರು 'ಪುಣ್ಯಾಹವಾಚನ' ಪ್ರಯೋಗಕಾಲದಲ್ಲಿ ಈ ಶ್ಲೋಕವನ್ನು ಪಠಿಸುವ ಪದ್ಧತಿಯಿದೆ.

**ಅರೌದ್ರಃ ಕುಣ್ಡಲೀ ಚಕ್ರೀ ವಿಕ್ರಮ್ಯೂರ್ಜಿತಶಾಸನಃ।**
**ಶಬ್ದಾತಿಗಃ ಶಬ್ದಸಹಃ ಶಿಶಿರಃ ಶರ್ವರೀಕರಃ ॥೧೧೦॥**

## (ಭಾಷ್ಯ)

೯೦೬. ಕರ್ಮ ರೌದ್ರಮ್, ರಾಗಶ್ಚ ರೌದ್ರಃ ಕೋಪಶ್ಚ ರೌದ್ರಃ; ರೌದ್ರತ್ರಯಂ ಅಸ್ಯ ನಾಸ್ತಿ, ಅವಾಪ್ತಸರ್ವಕಾಮತ್ವೇನ ರಾಗದ್ವೇಷಾದೇರಭಾವಾತ್ ಇತಿ ಅರೌದ್ರಃ। ೯೦೭. ಶೇಷರೂಪಭಾಕ್ ಕುಣ್ಡಲೀ। ಸಹಸ್ರಾಂಶುಮಣ್ಡಲೋಪಮಕುಣ್ಡಲಧಾರಣಾದ್ವಾ; ಯದ್ವಾ ಸಾಙ್ಖ್ಯಯೋಗಾತ್ಮಕೇ ಕುಣ್ಡಲೇ ಮಕರಾಕಾರೇ ಅಸ್ಯ ಸ್ತ ಇತಿ ವಾ ಕುಣ್ಡಲೀ। ೯೦೮. ಸಮಸ್ತಲೋಕರಕ್ಷಾರ್ಥಂ ಮನಸತ್ತಾತ್ಮಕಂ ಸುದರ್ಶನಾಖ್ಯಂ ಚಕ್ರಂ ಧತ್ತೇ ಇತಿ ಚಕ್ರೀ। 'ಚಲತ್ಸ್ವರೂಪಮತ್ಯನ್ತಂ ಜವೇನಾನ್ತರಿತಾನಿಲಮ್। ಚಕ್ರಸ್ವರೂಪಂ ಚ ಮನೋ ಧತ್ತೇ ವಿಷ್ಣುಕರೇ ಸ್ಥಿತಮ್' (ವಿ.ಪು.೧-೨೨-೭೧) ಇತಿ ವಿಷ್ಣುಪುರಾಣವಚನಾತ್। ೯೦೯. ವಿಕ್ರಮಃ ಪಾದವಿಕ್ಷೇಪಃ ಶೌರ್ಯಂ ವಾ, ದ್ವಯಂ ಚಾಶೇಷಪುರುಷೇಭ್ಯೋ ವಿಲಕ್ಷಣಮ್ ಅಸ್ಯೇತಿ ವಿಕ್ರಮೀ। ೯೧೦. ಶ್ರುತಿ ಸ್ಮೃತಿಲಕ್ಷಣಮ್ ಊರ್ಜಿತಂ ಶಾಸನಮಸ್ಯೇತಿ ಊರ್ಜಿತಶಾಸನಃ। 'ಶ್ರುತಿಸ್ಮೃತೀ ಮಮೈವಾಜ್ಞೇ ಯಸ್ತೇ ಉಲ್ಲಙ್ಘ್ಯ ವರ್ತತೇ। ಆಜ್ಞಾಚ್ಛೇದೀ ಮಮ ದ್ವೇಷೀ ಮದ್ಭಕ್ತೋಽಪಿ ನ ವೈಷ್ಣವಃ' (?) ಇತಿಭಗವದ್ವಚನಾತ್॥

## (ಭಾಷ್ಯಾರ್ಥ)

ಉಗ್ರವಾದ ಕೆಲಸ, ಕೆಟ್ಟದ್ದಾದ ಪ್ರೀತಿ, ಭಯಂಕರವಾದ ಸಿಟ್ಟು-ಈ ಮೂರು ಇವನಿಗೆ ಇಲ್ಲ; ಎಲ್ಲಾ ಕಾಮಗಳನ್ನೂ ಪಡೆದುಕೊಂಡಿರುವದರಿಂದ ರಾಗದ್ವೇಷಾದಿಗಳು (ಯಾವವೂ) ಇಲ್ಲವಾದ್ದರಿಂದ **ಅರೌದ್ರನು.** ಆದಿಶೇಷನ ರೂಪದಲ್ಲಿರುವ(ದರಿಂದ) ಈತನು **ಕುಂಡಲಿಯು.** ಅಥವಾ ಸೂರ್ಯಮಂಡಲಕ್ಕೆ ಸಮಾನವಾದ ಕರ್ಣಾಭರಣಗಳನ್ನು ಧರಿಸಿರುವದರಿಂದ ಅಥವಾ ಸಾಂಖ್ಯಯೋಗಗಳೆಂಬ ಮಕರದ (ಮೊಸಳೆ) ಆಕಾರವುಳ್ಳ ಕುಂಡಲಗಳು[1] ಈತನಿಗೆ ಇವೆಯಾದ್ದರಿಂದ (ಕುಂಡಲೀ - ಎಂದೂ ಆಗಬಹುದು). ಎಲ್ಲಾ ಲೋಕಗಳನ್ನೂ ಕಾಪಾಡುವದಕ್ಕಾಗಿ ಮನಸ್ತತ್ತ್ವಾತ್ಮಕವಾದ ಸುದರ್ಶನವೆಂಬ ಚಕ್ರವನ್ನು ಧರಿಸಿದ್ದಾನಾದ್ದರಿಂದ **ಚಕ್ರಿಯು.** 'ತನ್ನ ವೇಗದಿಂದ ಗಾಳಿಯನ್ನೂ ಸೋಲಿಸುವಂಥ ಅತ್ಯಂತಚಂಚಲವಾದ (ಸಾತ್ತ್ವಿಕ) ಮನಸ್ಸೆಂಬ, ಶ್ರೀವಿಷ್ಣುವಿನ ಕೈಯಲ್ಲಿರುವ (ಸುದರ್ಶನವು) ಚಕ್ರದ ರೂಪವನ್ನು ಧರಿಸಿರುತ್ತದೆ' ಎಂಬ

---

1. ಭಗವಂತನ ಕರ್ಣಭೂಷಣಗಳನ್ನು ಸಾಂಖ್ಯಯೋಗಗಳೆಂಬ ಸಾಧನೆಗಳಿಗೆ ಹೋಲಿಸಿರುವ ವರ್ಣನೆಯು ಯಾವ ಪುರಾಣದಲ್ಲಿದೆಯೆಂಬುದು ತಿಳಿದಿಲ್ಲ. 'ಈ ಭಾಗಕ್ಕೆ ವಿವೃತಿಯಿಲ್ಲವೆಂತ ಮೈ॥ ಪಾಠದ ಟಿಪ್ಪಣಿಯಲ್ಲಿದೆ.

ವಿಷ್ಣುಪುರಾಣದ ವಾಕ್ಯದಂತೆ (ಚಕ್ರೀ ಎನಿಸಿರುತ್ತಾನೆ). ವಿಕ್ರಮವೆಂದರೆ ಕಾಲುಗಳನ್ನು ಇಡುವಿಕೆಯು ಅಥವಾ ಶೌರ್ಯವು; ಇವೆರಡೂ ಉಳಿದ ಎಲ್ಲಾ ಪುರುಷರಿಗಿಂತಲೂ ಇವನಲ್ಲಿ ಅತಿಶಯವಾಗಿದೆಯಾದ್ದರಿಂದ **ವಿಕ್ರಮಿಯು.** ಶ್ರುತಿಸ್ಮೃತಿರೂಪವಾದ ಮೀರಲಸಾಧ್ಯವಾದ ಅಪ್ಪಣೆಯು ಇವನದು, ಆದ್ದರಿಂದ **ಊರ್ಜಿತಶಾಸನನು.** 'ಶ್ರುತಿಸ್ಮೃತಿಗಳೆರಡೂ ನನ್ನದೇ ಆಜ್ಞೆಗಳು. ಅವುಗಳನ್ನು ಯಾವನು ಮೀರಿ ನಡೆಯುವನೋ, ಆಜ್ಞೆಯನ್ನು ಉಲ್ಲಂಘಿಸುವ ನನ್ನ ಹಗೆಯಾದ ಅವನು ನನ್ನ ಭಕ್ತನಾದರೂ ವೈಷ್ಣವನಲ್ಲ' (?) ಎಂದು ಭಗವಂತನ ವಚನವಿದೆ.

## (ಭಾಷ್ಯ)

೯೧೧. ಶಬ್ದಪ್ರವೃತ್ತಿಹೇತೂನಾಂ ಜಾತ್ಯಾದೀನಾಮಸಮ್ಭವಾತ್ ಶಬ್ದೇನ ವಕ್ತುಮಶಕ್ಯತ್ವಾತ್ ಶಬ್ದಾತಿಗಃ 'ಯತೋ ವಾಚೋ ನಿವರ್ತನ್ತೇ। ಅಪ್ರಾಪ್ಯ ಮನಸಾ ಸಹ' (ತೈ. ೨-೯) 'ನ ಶಬ್ದಗೋಚರಂ ಯಸ್ಯ ಯೋಗಿಧ್ಯೇಯಂ ಸನಾತನಮ್' (ವಿ.ಪು. ೧-೧೭-೨೨) ಇತ್ಯಾದಿಶ್ರುತಿಸ್ಮೃತಿಭ್ಯಃ। ೯೧೨. ಸರ್ವೇ ವೇದಾಃ ತಾತ್ಪರ್ಯೇಣ ತಮೇವ ವದನ್ತೀತಿ ಶಬ್ದಸಹಃ। 'ಸರ್ವೇ ವೇದಾ ಯತ್ಪದಮಾಮನನ್ತಿ (ಕಾ.೨-೧೫) ಇತಿ ಶ್ರುತೇಃ, 'ವೇದೈಶ್ಚ ಸರ್ವೈರಹಮೇವ ವೇದ್ಯಃ' (ಗೀ. ೧೫-೧೫) ಇತಿ ಸ್ಮೃತೇಶ್ಚ। ೯೧೩. ತಾಪತ್ರಯಾಭಿತಪ್ತಾನಾಂ ವಿಶ್ರಾಮಸ್ಥಾನತ್ವಾತ್ ಶಿಶಿರಃ। ೯೧೪. ಸಂಸಾರಿಣಾಮಾತ್ಮಾ ಶರ್ವರೀವ ಶರ್ವರೀ; ಜ್ಞಾನಿನಾಂ ಪುನಃ ಸಂಸಾರಃ ಶರ್ವರೀ, ತಾಮುಭಯೇಷಾಂ ಕರೋತೀತಿ ಶರ್ವರೀಕರಃ। 'ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ। ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ' (ಗೀ. ೨-೬೯) ಇತಿ ಭಗವದ್ವಚನಾತ್॥೧೧೦॥

## (ಭಾಷ್ಯಾರ್ಥ)

ಶಬ್ದಗಳ ವ್ಯಾಪಾರಕ್ಕೆ ಕಾರಣವಾದ ಜಾತಿಯೇ ಮುಂತಾದ (ಧರ್ಮ)ಗಳಿಲ್ಲದ್ದರಿಂದ, ಶಬ್ದದಿಂದ ಹೇಳಲು ಸಾಧ್ಯವಿಲ್ಲದ್ದರಿಂದ **ಶಬ್ದಾತಿಗನು.** 'ವಾಕ್ಕುಗಳು ಮನಸ್ಸಿನೊಡನೆ ಯಾವನನ್ನು ವರ್ಣಿಸಲಾರದೆ ಹಿಂದಿರುಗುವವೋ' "ಯಾವನ ಸನಾತನವಾದ, ಯೋಗಿಗಳು(ಮಾತ್ರ) ಚಿಂತಿಸಬಹುದಾದಂಥ ಶಬ್ದಗೋಚರವಲ್ಲದ (ಸ್ವರೂಪವುಂಟೋ)" ಇವೇ ಮುಂತಾದ ಶ್ರುತಿಸ್ಮೃತಿಗಳಿಂದ (ಶಬ್ದಾತಿಗನೆಂಬುದು ಹೊಂದುತ್ತದೆ). ಎಲ್ಲಾ ವೇದಗಳೂ ತಾತ್ಪರ್ಯದಿಂದ ಆತನನ್ನೇ ಹೇಳುತ್ತವೆಯಾದ್ದರಿಂದ **ಶಬ್ದಸಹನು.** "ಎಲ್ಲಾ ವೇದಗಳೂ ಯಾವ ಸ್ಥಾನವನ್ನು ತಿಳಿಸುತ್ತವೆಯೋ" ಎಂಬ ಶ್ರುತಿಯಿಂದಲೂ ಮತ್ತು "ಎಲ್ಲಾ ವೇದಗಳಿಂದಲೂ ತಿಳಿಯಲ್ಪಡುವವನು ನಾನೇ" ಎಂಬ ಸ್ಮೃತಿಯಿಂದಲೂ (ಶಬ್ದಸಹನೆಂಬುದು ಹೊಂದುತ್ತದೆ). ಮೂರು ತಾಪಗಳಿಂದ[1]

1. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ - ಎಂಬಿವೇ ಮೂರು ತಾಪಗಳು.

ಬಳಲಿದವನಿಗೆ ವಿಶ್ರಾಂತಿಸ್ಥಾನನಾದ್ದರಿಂದ **ಶಿಶಿರನು**. ಸಂಸಾರಿಗಳಿಗೆ ಆತ್ಮನು ಕತ್ತಲೆಯಂತೆ ಇರುವ ರಾತ್ರಿಯು; ಜ್ಞಾನಿಗಳಿಗಾದರೋ ಸಂಸಾರವೇ ರಾತ್ರಿಯು; ಆ (ಶರ್ವರಿಯನ್ನು) ಇಬ್ಬರಿಗೂ ಉಂಟುಮಾಡುತ್ತಾನಾದ್ದರಿಂದ **ಶರ್ವರೀಕರನು**. "ಎಲ್ಲಾ ಭೂತಗಳಿಗೂ ಯಾವದು ರಾತ್ರಿಯೋ ಅದರಲ್ಲಿ ಸಂಯಮಿ (ಜ್ಞಾನಿ)ಯು ಎಚ್ಚತ್ತಿರುತ್ತಾನೆ. ಯಾವ (ಅವಿದ್ಯಾನಿಶೆಯಲ್ಲಿ) ಭೂತಗಳು ಎಚ್ಚತ್ತಿರುವವೋ ಅದು ತತ್ತ್ವವನ್ನು ಬಲ್ಲ ಜ್ಞಾನಿಗೆ ರಾತ್ರಿಯು" ಎಂದು ಭಗವಂತನ ವಚನವಿದೆ.

**ಅಕ್ರೂರಃ ಪೇಶಲೋ ದಕ್ಷೋ ದಕ್ಷಿಣಃ ಕ್ಷಮಿಣಾಂ ವರಃ।**
**ವಿದ್ವತ್ತಮೋ ವೀತಭಯಃ ಪುಣ್ಯಶ್ರವಣಕೀರ್ತನಃ ॥೧೧೧॥**

## (ಭಾಷ್ಯ)

೯೧೫. ಕ್ರೌರ್ಯಂ ನಾಮ ಮನೋಧರ್ಮಃ ಪ್ರಕೋಪಃ ಆನ್ತರಃ ಸನ್ತಾಪಃ ಸಾಭಿನಿವೇಶಃ। ಅವಾಪ್ತಸಮಸ್ತಕಾಮತ್ವಾತ್ ಕಾಮಾಭಾವಾದೇವ ಕೋಪಾಭಾವಃ, ತಸ್ಮಾತ್ ಕ್ರೌರ್ಯಮಸ್ಯ ನಾಸ್ತೀತಿ - ಅಕ್ರೂರಃ। ೯೧೬. ಕರ್ಮಣಾ ಮನಸಾ ವಾಚಾ ವಪುಷಾ ಚ ಶೋಭನತ್ವಾತ್ ಪೇಶಲಃ। ೯೧೭. ಪ್ರವೃದ್ಧಃ ಶಕ್ತಃ ಶೀಘ್ರಕಾರೀ ಚ ದಕ್ಷಃ, ತ್ರಯಂ ಚೈತತ್ ಪರಸ್ಮಿನ್ ನಿಯತಮಿತಿ ದಕ್ಷಃ। ೯೧೮. ದಕ್ಷಿಣಶಬ್ದ ಸ್ಯಾಪಿ ದಕ್ಷ ಏವಾರ್ಥಃ। ಪುನರುಕ್ತಿದೋಷೋ ನಾಸ್ತಿ ಶಬ್ದಭೇದಾತ್; ಅಥವಾ ದಕ್ಷತೇ ಗಚ್ಛತಿ ಹಿನಸ್ತೀತಿ ವಾ ದಕ್ಷಿಣಃ; 'ದಕ್ಷಗತಿಹಿಂಸನಯೋಃ' ಇತಿ ಧಾತುಪಾಠಾತ್। ೯೧೯. ಕ್ಷಮವತಾಂ ಯೋಗಿನಾಂ ಪೃಥಿವ್ಯಾದೀನಾಂ ಭಾರಧಾರಕಾಣಾಂ ಚ ಶ್ರೇಷ್ಠ ಇತಿ - ಕ್ಷಮಿಣಾಂ ವರಃ। 'ಕ್ಷಮಯಾ ಪೃಥಿವೀ ಸಮಃ' (ವಾ.ರಾ.೧-೧-೧೮) ಇತಿ ವಾಲ್ಮೀಕಿವಚನಾತ್। ಬ್ರಹ್ಮಾಣ್ಡಮಖಿಲಂ ವಹನ್ ಪೃಥಿವೀವ ಭಾರೇಣ ನಾರ್ದಿತ ಇತಿ ಪೃಥಿವ್ಯಾ ಅಪಿ ವರೋ ವಾ; ಕ್ಷಮಿಣಃ ಶಕ್ತಾಃ, ಅಯಂ ತು ಸರ್ವಶಕ್ತಿಮತ್ತ್ವಾತ್ ಸಕಲಾಃ ಕ್ರಿಯಾಃ ಕರ್ತುಂ ಕ್ಷಮತೇ ಇತಿ ವಾ ಕ್ಷಮಿಣಾಂ ವರಃ॥

## (ಭಾಷ್ಯಾರ್ಥ)

ಕ್ರೌರ್ಯವೆಂದರೆ ಹೆಚ್ಚಿನ ಕೋಪದಿಂದುಂಟಾದ ಹಟದಿಂದ ಕೂಡಿದ ಒಳಗಿನ ಸಂಕಟರೂಪವಾದ ಒಂದು ಮನೋಧರ್ಮವು. (ಈತನು) ಎಲ್ಲಾ ಕಾಮಗಳನ್ನೂ ಪಡೆದುಕೊಂಡುಬಿಟ್ಟಿರುವದರಿಂದ ಕಾಮವಿಲ್ಲದ್ದರಿಂದಲೇ ಕೋಪವಿಲ್ಲ; ಆದ್ದರಿಂದ ಇವನಿಗೆ ಕ್ರೌರ್ಯವು ಇಲ್ಲವಾದ್ದರಿಂದ **ಅಕ್ರೂರನು**. ಕರ್ಮದಿಂದಲೂ ಮನಸ್ಸಿನಿಂದಲೂ ಮಾತಿನಿಂದಲೂ ಶರೀರದಿಂದಲೂ ಸುಂದರನಾಗಿರುವದರಿಂದ **ಪೇಶಲನು**. ಚೆನ್ನಾಗಿ ಬೆಳೆದವನು ಸಮರ್ಥನು, ಶೀಘ್ರಕಾರಿಯೂ (ಆದವನು) ದಕ್ಷನೆನಿಸುವನು; ಈ ಪರ (ಮಾತ್ಮ) ನಲ್ಲಿ ಈ ಮೂರೂ ನಿತ್ಯವಾಗಿವೆಯಾದ್ದರಿಂದ **ದಕ್ಷನು**. ದಕ್ಷಿಣ -

ಎಂಬ ಶಬ್ದಕ್ಕೂ ದಕ್ಷನೆಂದೇ ಅರ್ಥ. ಶಬ್ದಗಳು ಬೇರೆಬೇರೆಯಾದ್ದರಿಂದ ಪುನರುಕ್ತಿದೋಷವಿಲ್ಲ. ಅಥವಾ ದಕ್ಷತೇ - ಹೋಗುತ್ತಾನೆ, (ದೈತ್ಯರನ್ನು) ಹಿಂಸಿಸುತ್ತಾನೆ; ಆದ್ದರಿಂದ **ದಕ್ಷಿಣನು** - (ಎಂದೂ ಆಗಬಹುದು). 'ದಕ್ಷ' ಧಾತುವಿಗೆ ಗತಿ, ಹಿಂಸೆ - ಎಂಬರ್ಥಗಳೆರಡೂ ಇವೆಯೆಂತ ಧಾತುಪಾಠವಿದೆ. ಸಹನಶೀಲರಾದ ಯೋಗಿಗಳಲ್ಲಿ ಹಾಗೂ ಭಾರವನ್ನು ಹೊತ್ತಿರುವ ಭೂಮಿಯೇ ಮುಂತಾದವುಗಳಲ್ಲಿ ಶ್ರೇಷ್ಠನು - ಎಂಬರ್ಥದಲ್ಲಿ **ಕ್ಷಮಿಣಾಂವರನು**. 'ಕ್ಷಮಾ (ಗುಣದಲ್ಲಿ) ಭೂಮಿಗೆ ಸಮನು' ಎಂದು ವಾಲ್ಮೀಕಿಗಳ ವಚನವಿದೆ. ಇಡಿಯ ಬ್ರಹ್ಮಾಂಡವನ್ನೇ ಹೊತ್ತಿದ್ದರೂ ಭೂಮಿಯಂತೆ ಭಾರದಿಂದ ಬಳಲಿಲ್ಲವಾದ್ದರಿಂದ ಭೂಮಿಗಿಂತಲೂ ಹೆಚ್ಚಿನವನು (ಎಂಬರ್ಥದಲ್ಲೂ **ಕ್ಷಮಿಣಾಂವರನು** ಎಂದಾಗಬಹುದು). ಕ್ಷಮಿಗಳು - ಎಂದರೆ ಸಮರ್ಥರು, ಇವನಾದರೋ ಸರ್ವಶಕ್ತಿಯುಳ್ಳವನಾದ್ದರಿಂದ ಎಲ್ಲಾ ಕರ್ಮಗಳನ್ನೂ ಮಾಡಲು ಸಮರ್ಥನು ಎಂಬರ್ಥದಲ್ಲಾದರೂ ಕ್ಷಮಿಣಾಂವರ (ನೆಂದು ಹೆಸರು).

## (ಭಾಷ್ಯ)

೯೨೦. ನಿರಸ್ತಾತಿಶಯಂ ಜ್ಞಾನಂ ಸರ್ವದಾ ಸರ್ವಗೋಚರಮಸ್ಯಾಸ್ತಿ ನೇತರೇಷಾಮಿತಿ ವಿದ್ವತ್ತಮಃ। ೯೨೧. ವೀತಂ ವಿಗತಂ ಭಯಂ ಸಾಂಸಾರಿಕಂ ಸಂಸಾರಲಕ್ಷಣಂ ವಾ ಅಸ್ಯೇತಿ ವೀತಭಯಃ। ಸರ್ವೇಶ್ವರತ್ವಾತ್ ನಿತ್ಯಮುಕ್ತತ್ವಾಚ್ಚ। ೯೨೨. ಪುಣ್ಯಂ ಪುಣ್ಯಕರಂ ಶ್ರವಣಂ ಕೀರ್ತನಂ ಚಾಸ್ಯೇತಿ ಪುಣ್ಯಶ್ರವಣಕೀರ್ತನಃ। "ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್। ನಾಶುಭಂ ಪ್ರಾಪ್ನುಯಾತ್ ಕಿಞ್ಚಿತ್ ಸೋಽಮುತ್ರೇಹ ಚ ಮಾನವಃ" (೧೨೨) ಇತಿ ಶ್ರವಣಾದಿಫಲವಚನಾತ್ ॥೧೧೧॥

## (ಭಾಷ್ಯಾರ್ಥ)

ಮಿಗಿಲಿಲ್ಲದ, ಎಲ್ಲವನ್ನೂ ಅರಿಯುವ ಜ್ಞಾನವು ಯಾವಾಗಲೂ ಇವನಿಗೆ ಇದೆ, ಉಳಿದವರಿಗೆ (ಇಲ್ಲ), ಆದ್ದರಿಂದ **ವಿದ್ವತ್ತಮನು**. ಸಂಸಾರದ ಸಂಬಂಧವಾದ ಅಥವಾ ಸಂಸಾರರೂಪವಾದ ಭಯವು ಹೋಗಿಬಿಟ್ಟಿದೆ, ಇಲ್ಲವಾಗಿದೆಯಾದ್ದರಿಂದ ಈತನು **ವೀತಭಯನು**. (ಏಕೆಂದರೆ ಇವನು) ಸರ್ವೇಶ್ವರನೂ ನಿತ್ಯಮುಕ್ತನೂ ಆಗಿರುತ್ತಾನೆ. ಪುಣ್ಯವನ್ನುಂಟುಮಾಡುವ ಪವಿತ್ರವಾದ ಶ್ರವಣವೂ ಕೀರ್ತನವೂ ಇವನದಾದ್ದರಿಂದ **ಪುಣ್ಯಶ್ರವಣಕೀರ್ತನನು**. "ಯಾರು ಈ (ಸ್ತೋತ್ರವನ್ನು) ಕೇಳುವರೋ ಮತ್ತು ಯಾವನು ಚೆನ್ನಾಗಿ ಕೀರ್ತನ ಮಾಡುವನೋ ಆ ಮನುಷ್ಯನು ಪರಲೋಕದಲ್ಲಿಯೂ ಇಲ್ಲಿಯೂ ಸ್ವಲ್ಪವೂ ಕೆಟ್ಟದ್ದನ್ನು ಹೊಂದುವದಿಲ್ಲ" ಎಂದು ಫಲಶ್ರುತಿವಚನವಿದೆ.

**ಉತ್ತಾರಣೋ ದುಷ್ಕೃತಿಹಾ ಪುಣ್ಯೋ ದುಃಸ್ವಪ್ನನಾಶನಃ।**
**ವೀರಹಾ ರಕ್ಷಣಃ ಸನ್ತೋ ಜೀವನಃ ಪರ್ಯವಸ್ಥಿತಃ ॥೧೧೨॥**

## (ಭಾಷ್ಯ)

೯೨೩. ಸಂಸಾರಸಾಗರಾದುತ್ತಾರಯತೀತಿ ಉತ್ತಾರಣಃ। ೯೨೪. ದುಷ್ಕೃತೀಃ[1] ಪಾಪಸಂಜ್ಞಿತಾಃ ಹನ್ತೀತಿ ದುಷ್ಕೃತಿಹಾ। [1] ೯೨೫. ಸ್ಮರಣಾದಿ ಕುರ್ವತಾಂ ಸರ್ವೇಷಾಂ ಪುಣ್ಯಂ ಕರೋತೀತಿ, ಸರ್ವೇಷಾಂ ಶ್ರುತಿಸ್ಮೃತಿಲಕ್ಷಣಯಾ ವಾಚಾ ಪುಣ್ಯಮಾಚಷ್ಟೇ ಇತಿ ವಾ ಪುಣ್ಯಃ। ೯೨೬. ಭಾವಿನೋಽನರ್ಥಸ್ಯ ಸೂಚಕಾನ್ ದುಃಸ್ವಪ್ನಾನ್ ನಾಶಯತಿ ಧ್ಯಾತಃ ಸ್ತುತಃ ಕೀರ್ತಿತಃ ಪೂಜಿತಶ್ಚೇತಿ ದುಃಸ್ವಪ್ನನಾಶನಃ॥

## (ಭಾಷ್ಯಾರ್ಥ)

ಸಂಸಾರಸಮುದ್ರದಿಂದ ಮೇಲಕ್ಕೆತ್ತುತ್ತಾನೆ (ದಾಟಿಸುತ್ತಾನೆ), ಆದ್ದರಿಂದ **ಉತ್ತಾರಣನು.** ಪಾಪಗಳೆಂಬ ಕೆಟ್ಟಕೃತಿಗಳನ್ನು ನಾಶಮಾಡುತ್ತಾನೆ; ಆದ್ದರಿಂದ **ದುಷ್ಕೃತಿಹಾ** (ಎನಿಸುವನು). ನೆನೆಯುವದೇ ಮುಂತಾದ (ಸಾಧನಗಳನ್ನು) ಮಾಡುವವರೆಲ್ಲರಿಗೂ ಪುಣ್ಯವನ್ನುಂಟುಮಾಡುತ್ತಾನೆ; ಅಥವಾ ಶ್ರುತಿಸ್ಮೃತಿರೂಪವಾದ ವಾಕ್ಯಗಳಿಂದ ಎಲ್ಲರಿಗೂ ಪುಣ್ಯ (ಕರ್ಮ)ಗಳನ್ನು ಹೇಳುತ್ತಾನೆ, ಆದ್ದರಿಂದ **ಪುಣ್ಯನು.** ಮುಂದೆ ಬರಬಹುದಾದ ಕೆಟ್ಟಫಲಗಳನ್ನು ಸೂಚಿಸುವ ಕೆಟ್ಟಕನಸುಗಳನ್ನು - (ಆತನನ್ನು) ಧ್ಯಾನಮಾಡುವದರಿಂದ ಸ್ತುತಿಸುವದರಿಂದ, ಕೀರ್ತನಮಾಡುವದರಿಂದ ಮತ್ತು ಪೂಜಿಸುವದರಿಂದ - ನಾಶಮಾಡುತ್ತಾನೆ; ಆದ್ದರಿಂದ **ದುಃಸ್ವಪ್ನನಾಶನನು.**

## (ಭಾಷ್ಯ)

೯೨೭. ವಿವಿಧಾಃ ಸಂಸಾರಿಣಾಂ ಗತೀಃ ಮುಕ್ತಿಪ್ರದಾನೇನ ಹನ್ತೀತಿ ವೀರಹಾ। ೯೨೮. ಸತ್ತ್ವಂ ಗುಣಮಧಿಷ್ಠಾಯ ಜಗತ್ತ್ರಯಂ ರಕ್ಷನ್ ರಕ್ಷಣಃ। ನನ್ದ್ಯಾದಿತ್ವಾತ್ ಕರ್ತರಿ ಲ್ಯುಃ। ೯೨೯. ಸನ್ಮಾರ್ಗವರ್ತಿನಃ ಸನ್ತಃ; ತದ್ರೂಪೇಣ ವಿದ್ಯಾವಿನಯವೃದ್ಧಯೇ ಸ ಏವ ವರ್ತತೇ ಇತಿ ಸನ್ತಃ। ೯೩೦. ಸರ್ವಾಃ ಪ್ರಜಾಃ ಪ್ರಾಣರೂಪೇಣ ಜೀವಯನ್ ಜೀವನಃ। ೯೩೧. ಪರಿತಃ ಸರ್ವತೋ ವಿಶ್ವಂ ವ್ಯಾಪ್ಯ ಅವಸ್ಥಿತ ಇತಿ ಪರ್ಯವಸ್ಥಿತಃ॥೧೧೨॥

## (ಭಾಷ್ಯಾರ್ಥ)

ಸಂಸಾರಿಗಳಾದ (ಜೀವರುಗಳ) ನಾನಾವಿಧವಾದ (ಕರ್ಮ)ಗತಿಗಳನ್ನು, ಮುಕ್ತಿಯನ್ನು ಕೊಡುವದರ ಮೂಲಕ, ನಾಶಮಾಡುತ್ತಾನಾದ್ದರಿಂದ **ವೀರಹಾ** (ಎನಿಸುವನು). ಸತ್ತ್ವಗುಣವನ್ನಾಶ್ರಯಿಸಿ ಮೂರುಲೋಕಗಳನ್ನೂ ಕಾಪಾಡುತ್ತಾ **ರಕ್ಷಣ** (ನೆನಿಸಿರುತ್ತಾನೆ). (ರಕ್ಷ್‌ಧಾತುವು) ನಂದ್ಯಾದಿ(ಗಣಗಳೊಳಗೆ ಸೇರಿರುವದರಿಂದ) ಕರ್ತ್ರರ್ಥದಲ್ಲಿ 'ಲ್ಯು' ಎಂಬ (ಕೃದಂತ)ಪ್ರತ್ಯಯವು ಬಂದು (ರಕ್ಷಣಃ ಎಂದು

1. 'ಯೇ ಪಾಪಕಾರಿಣಃ ತಾನ್ ಹನ್ತೀತಿ ವಾ ದುಷ್ಕೃತಿಹಾ' - ಎಂದು ಅಧಿಕವಾಗಿ ಗೀ||ವಾ||ಪಾಠಗಳು. ಯಾರು ಪಾಪಕರ್ಮಿಗಳೋ ಅವರನ್ನು ನಾಶಮಾಡುತ್ತಾನಾದ್ದರಿಂದಲಾದರೂ ದುಷ್ಕೃತಿಹಾ (ಎಂದು ಹೆಸರು) ಎಂದು ಅರ್ಥ.

ರೂಪವಾಗಿದೆ)[1] ಒಳ್ಳೆಯ ಮಾರ್ಗವನ್ನು ಅನುಸರಿಸುವವರು ಸಂತರು; ವಿದ್ಯೆ, ವಿನಯ - ಇವುಗಳನ್ನು ಬೆಳೆಯಿಸುವದಕ್ಕಾಗಿ ಅವನೇ (ಸಂತರ) ರೂಪದಿಂದ ಇರುತ್ತಾನೆ; ಆದ್ದರಿಂದ **ಸಂತನು.** ಎಲ್ಲಾ ಜೀವರುಗಳನ್ನೂ ಪ್ರಾಣರೂಪದಿಂದ ಜೀವಿಸುವಂತೆ ಮಾಡುವವನಾದ್ದರಿಂದ **ಜೀವನನು.** ಪರಿತಃ ಎಂದರೆ ಸುತ್ತಲೂ ಪ್ರಪಂಚವನ್ನು ವ್ಯಾಪಿಸಿಕೊಂಡು ಇರುವನಾದ್ದರಿಂದ **ಪರ್ಯವಸ್ಥಿತನು.**

**ಅನನ್ತರೂಪೋಽನನ್ತಶ್ರೀಃ ಜಿತಮನ್ಯುರ್ಭಯಾಪಹಃ।**
**ಚತುರಶ್ರೋ ಗಭೀರಾತ್ಮಾ ವಿದಿಶೋ ವ್ಯಾದಿಶೋ ದಿಶಃ ॥೧೧೩॥**

(ಭಾಷ್ಯ)

೯೩೨. ಅನನ್ತಾನಿ ರೂಪಾಣ್ಯಸ್ಯ ವಿಶ್ವಪ್ರಪಞ್ಚರೂಪೇಣ ಸ್ಥಿತಸ್ಯೇತಿ-ಅನನ್ತರೂಪಃ। ೯೩೩. ಅನನ್ತಾ ಅಪರಿಮಿತಾ ಶ್ರೀಃ ಪರಾ ಶಕ್ತಿರಸ್ಯೇತಿ ಅನನ್ತಶ್ರೀಃ। 'ಪರಾಽಸ್ಯ ಶಕ್ತಿರ್ವಿವಿಧೈವ ಶ್ರೂಯತೇ' (ಶ್ವೇ. ೬-೮) ಇತಿ ಶ್ರುತೇಃ। ೯೩೪. ಮನ್ಯುಃ ಕ್ರೋಧಃ ಜಿತಃ ಯೇನ ಸಃ ಜಿತಮನ್ಯುಃ। ೯೩೫. ಭಯಂ ಸಂಸಾರಜಂ ಪುಂಸಾಮಪಘ್ನನ್ ಭಯಾಪಹಃ॥

(ಭಾಷ್ಯಾರ್ಥ)

ನಾನಾಪ್ರಪಂಚರೂಪದಿಂದಿರುವ ಇವನಿಗೆ ಲೆಕ್ಕವಿಲ್ಲದಷ್ಟು ರೂಪಗಳಿವೆಯಾದ್ದರಿಂದ **ಅನಂತರೂಪನು.** ಮಿಗಿಲಿಲ್ಲದ ಅನಂತವಾದ ಶ್ರೀಃ ಎಂದರೆ ಪರಾಶಕ್ತಿಯು ಇವನದಾದ್ದರಿಂದ **ಅನಂತಶ್ರೀ** - (ಎನಿಸುವನು). "ಇವನ ಪರಮವಾದ ಶಕ್ತಿಯು ನಾನಾಪ್ರಕಾರವಾಗಿ ಕೇಳಬರುತ್ತಿದೆ" ಎಂಬ ಶ್ರುತಿಯಿಂದ ಹೀಗೆ ಸಿದ್ಧವಾಗುತ್ತದೆ. ಮನ್ಯುವೆಂದರೆ ಕೋಪವು ಯಾವನಿಂದ ಜಯಿಸಲ್ಪಟ್ಟಿದೆಯೋ ಅವನು **ಜಿತಮನ್ಯುವು.** ಮನುಷ್ಯರ ಸಂಸಾರನಿಮಿತ್ತವಾದ ಭಯವನ್ನು ಪರಿಹರಿಸುವನಾದ್ದರಿಂದ **ಭಯಾಪಹನು.**

(ಭಾಷ್ಯ)

೯೩೬. ನ್ಯಾಯಸಮವೇತಃ ಚತುರಶ್ರಃ ಪುಂಸಾಂ ಕರ್ಮಾನುರೂಪಂ ಫಲಂ ಪ್ರಯಚ್ಛತೀತಿ। ೯೩೭. ಆತ್ಮಾ ಸ್ವರೂಪಂ ಚಿತ್ತಂ ವಾ ಗಭೀರಂ ಪರಿಚ್ಛೇತ್ತುಮಶಕ್ಯಮಸ್ಯೇತಿ ಗಭೀರಾತ್ಮಾ। ೯೩೮. ವಿವಿಧಾನಿ ಫಲಾನಿ ಅಧಿಕಾರಿಭ್ಯೋ ವಿಶೇಷೇಣ ದಿಶತೀತಿ ವಿದಿಶಃ।

---

1. 'ನನ್ದಿಗ್ರಹಿಪಚಾದಿಭ್ಯೋ ಲ್ಯುಣಿನ್ಯಚಃ' (ಪಾ.ಸೂ.೩-೧-೧೩೪) ಎಂಬ ಸೂತ್ರದಿಂದ ಲ್ಯುಪ್ರತ್ಯಯವು ಬಂದು 'ರಕ್ಷಣಃ' ಎಂದು ಶಬ್ದರೂಪವಾಗಿದೆ - ಎಂದು ಭಾವ. 'ಸೂದಯತೀತಿ ಸೂದನಃ' ಎಂಬುದು ಮತ್ತೊಂದು ಉದಾಹರಣೆ.

೯೩೬. ವಿವಿಧಾಮಾಜ್ಞಾಂ ಶಕ್ರಾದೀನಾಂ ಕುರ್ವನ್ ವ್ಯಾದಿಶಃ। ೯೪೦. ಸಮಸ್ತಾನಾಂ ಕರ್ಮಣಾಂ ಫಲಾನಿ ದಿಶನ್ ವೇದಾತ್ಮನಾ ದಿಶಃ ॥೧೧೩॥

(ಭಾಷ್ಯಾರ್ಥ)

ಪುರುಷರಿಗೆ ಕರ್ಮಕ್ಕನುಗುಣವಾದ ಫಲವನ್ನು ಕೊಡುತ್ತಾನೆ; ಆದ್ದರಿಂದ ನ್ಯಾಯದಿಂದ ಕೂಡಿದ ಈತನು **ಚತುರಶ್ರನು.**[1] (ಇವನ) ಆತ್ಮವು ಎಂದರೆ ಸ್ವರೂಪವು ಅಥವಾ ಚಿತ್ತವು ಆಳವಾದದ್ದು; ಅಳತೆಮಾಡಲು ಸಾಧ್ಯವಿಲ್ಲದ್ದು ಎಂಬರ್ಥದಲ್ಲಿ **ಗಭೀರಾತ್ಮನು.** ಅನೇಕವಿಧವಾದ ಫಲಗಳನ್ನು ಅಧಿಕಾರಿಗಳಿಗೆ ವಿಶೇಷವಾಗಿ ಕೊಡುತ್ತಾನಾದ್ದರಿಂದ **ವಿದಿಶನು.** ನಾನಾರೀತಿಯ ಆಜ್ಞೆಗಳನ್ನು ಇಂದ್ರನೇ (ಮೊದಲಾದ ದೇವತೆಗಳಿಗೆ) ಕೊಡುತ್ತಾನೆ; ಆದ್ದರಿಂದ **ವ್ಯಾದಿಶನು.** ವೇದರೂಪದಿಂದ ಎಲ್ಲಾ ಕರ್ಮಗಳ ಫಲವನ್ನೂ ಉಪದೇಶಿಸುವನಾದ್ದರಿಂದ **ದಿಶನು.**

**ಅನಾದಿರ್ಭೂರ್ಭುವೋ ಲಕ್ಷ್ಮೀಃ ಸುವೀರೋ ರುಚಿರಾಙ್ಗದಃ।**
**ಜನನೋ ಜನಜನ್ಮಾದಿರ್ಭೀಮೋ ಭೀಮಪರಾಕ್ರಮಃ ॥೧೧೪॥**

(ಭಾಷ್ಯ)

೯೪೧. ಆದಿಃ ಕಾರಣಮ್ ಅಸ್ಯ ನ ವಿದ್ಯತ ಇತಿ ಅನಾದಿಃ। ಸರ್ವಕಾರಣತ್ವಾತ್। ೯೪೨. ಭೂಃ ಆಧಾರಃ, ಭುವಃ ಸರ್ವಭೂತಾಶ್ರಯತ್ವೇನ ಪ್ರಸಿದ್ಧಾಯಾಃ ಭೂಮ್ಯಾಃ, ಭುವೋಽಪಿ ಭೂರಿತಿ ಭೂರ್ಭುವಃ। ೯೪೩. ಅಥವಾ ನ ಕೇವಲಮಸೌ ಭೂಃ ಭುವಃ, ಲಕ್ಷ್ಮೀಃ ಶೋಭಾ ಚೇತಿ ಭುವೋ ಲಕ್ಷ್ಮೀಃ। ಅಥವಾ ಭೂಃ ಭೂಲೋಕಃ, ಭುವಃ ಭುವರ್ಲೋಕಃ, ಲಕ್ಷ್ಮೀ ಆತ್ಮವಿದ್ಯಾ; 'ಆತ್ಮವಿದ್ಯಾ ಚ ದೇವಿ ತ್ವಮ್' (ವಿ.ಪು. ೧-೯-೧೨೦) ಇತಿ ಶ್ರೀಸ್ತುತೌ। ಭೂಮ್ಯನ್ತರಿಕ್ಷಯೋಃ ಶೋಭೇತಿ ವಾ ಭೂರ್ಭುವೋ ಲಕ್ಷ್ಮೀಃ। ೯೪೪. ಶೋಭನಾ ವಿವಿಧಾ ಈರಾಃ ಗತಯಃ ಯಸ್ಯ ಸಃ ಸುವೀರಃ। ಶೋಭನಂ ವಿವಿಧಂ ಈರ್ತೇ ಇತಿ ವಾ ಸುವೀರಃ। ೯೪೫. ರುಚಿರೇ ಕಲ್ಯಾಣೇ ಅಙ್ಗದೇ ಯಸ್ಯೇತಿ ರುಚಿರಾಙ್ಗದಃ॥

(ಭಾಷ್ಯಾರ್ಥ)

ಇವನಿಗೆ ಆದಿಯು, ಕಾರಣವು ಇಲ್ಲವಾದ್ದರಿಂದ **ಅನಾದಿಯು.** (ಏಕೆಂದರೆ ಇವನೇ) ಎಲ್ಲಕ್ಕೂ ಕಾರಣನಾಗಿರುತ್ತಾನೆ. ಭೂಃ ಎಂದರೆ ಆಧಾರವು; ಎಲ್ಲಾ ಪ್ರಾಣಿಗಳಿಗೂ ಆಶ್ರಯವಾಗಿರುವ ಪ್ರಸಿದ್ಧವಾದ ಭೂಮಿಯುಂಟಷ್ಟೆ, (ಆ) ಭೂಮಿಗೂ

---

1. ಚತುರಶ್ರವೆಂದರೆ ನಾಲ್ಕು ಮೂಲೆಗಳೂ ಸಮವಾಗಿರುವ square ಚಚ್ಚೌಕವೆಂದರ್ಥ. ಎಲ್ಲವೂ ಚತುರಶ್ರವಾಗಿದೆ - ಎಂದರೆ ನ್ಯಾಯದಿಂದ ಕೂಡಿದೆ, ಸರಿಯಾಗಿದೆ ಎಂದು ಲೋಕರೂಢಿಯಲ್ಲಿ ಹೇಳುತ್ತಾರೆ, ಭಗವಂತನು ಕರ್ಮಗಳಿಗೆ ತಕ್ಕಂತೆ ನ್ಯಾಯವಾದ ಫಲಗಳನ್ನು ಕೊಡುವನಾದ್ದರಿಂದ ಚತುರಶ್ರನು - ಎಂದು ವ್ಯೈ॥ ವಿವೃತಿ.

ಇವನು ಭೂಃ (ಎಂದರೆ ಆಧಾರನು) ಎಂಬರ್ಥದಲ್ಲಿ **ಭೂರ್ಭುವನು.** ಇವನು ಕೇವಲ ಭೂರ್ಭುವನೇ ಅಲ್ಲ; **ಲಕ್ಷ್ಮೀ** ಎಂದರೆ ಕಾಂತಿಯೂ ಆಗಿದ್ದಾನಾದ್ದರಿಂದ ಭುವೋ **ಲಕ್ಷ್ಮಿಯು;** ಅಥವಾ ಭೂಃ ಎಂದರೆ ಭೂಲೋಕವು; ಭುವಃ ಎಂದರೆ ಭುವರ್ಲೋಕವು; ಲಕ್ಷ್ಮೀಃ ಎಂದರೆ ಆತ್ಮವಿದ್ಯೆಯು; 'ಎಲೈ ದೇವಿಯೆ, ನೀನು ಆತ್ಮವಿದ್ಯೆಯೂ ಆಗಿರುವೆ' ಎಂದು ಲಕ್ಷ್ಮೀಸ್ತುತಿ(ಯಲ್ಲಿರುವದರಿಂದ ಈ ಅರ್ಥ). ಭೂಮಿ ಹಾಗೂ ಅಂತರಿಕ್ಷಗಳ ಕಾಂತಿಯು ಎಂಬರ್ಥದಲ್ಲಿಯಾದರೂ **ಭೂರ್ಭುವೋ ಲಕ್ಷ್ಮೀಃ**[1] (ಎಂದಾಗಬಹುದು). ಶೋಭನವಾದ ನಾನಾವಿಧವಾದ ಈರಗಳು ಎಂದರೆ ಗತಿಗಳು ಉಳ್ಳವನು ಯಾವನೋ ಅವನು **ಸುವೀರನು.** ಶೋಭನವಾಗಿ ಎಂದರೆ ವಿಧವಿಧವಾಗಿ (ಮತ್ಸ್ಯಕೂರ್ಮಾದಿರೂಪಗಳನ್ನು) ಹೊಂದುತ್ತಾನೆ - ಆದ್ದರಿಂದ **ಸುವೀರನು** ಎಂದೂ ಆಗಬಹುದು. ಸುಂದರವಾದ ಎಂದರೆ ಕಲ್ಯಾಣಕರವಾದ(ಎರಡು) ಕೇಯೂರ (ಭುಜಕೀರ್ತಿ)ಗಳು ಉಳ್ಳವನು ಯಾವನೋ ಅವನು **ರುಚಿರಾಂಗದನು.**

## (ಭಾಷ್ಯ)

೯೪೬. ಜನ್ತೂನ್ ಜನಯನ್ ಜನನಃ। ಲ್ಯುಡ್‌ವಿಧೌ ಬಹುಲಗ್ರಹಣಾತ್ ಕರ್ತರಿ ಲ್ಯುಟ್‌ಪ್ರತ್ಯಯಃ ಪ್ರಯೋಗವಚನಾತ್। ೯೪೭. ಜನಸ್ಯ ಜನಿಮತಃ, ಜನ್ಮ ಉದ್ಭವಃ, ತಸ್ಯಾದಿಃ ಮೂಲಕಾರಣಮಿತಿ ಜನಜನ್ಮಾದಿಃ। ೯೪೮. ಭಯಹೇತುತ್ವಾತ್ ಭೀಮಃ। 'ಭೀಮಾದಯೋಽಪಾದಾನೇ' (ಪಾ.ಸೂ.೩-೪-೭೪) ಇತಿ ನಿಪಾತನಾತ್। 'ಮಹದ್ಭಯಂ ವಜ್ರಮುದ್ಯತಮ್' (ಕಾ.೬-೨) ಇತಿ ಶ್ರುತೇಃ। ೯೪೯. ಅಸುರಾದೀನಾಂ ಭಯಹೇತುಃ ಪರಾಕ್ರಮೋಽಸ್ಯಾವತಾರೇಷ್ವಿತಿ ಭೀಮಪರಾಕ್ರಮಃ॥೧೧೪॥

## (ಭಾಷ್ಯಾರ್ಥ)

ಜಂತುಗಳನ್ನು ಹುಟ್ಟಿಸುತ್ತಾನಾದ್ದರಿಂದ **ಜನನನು.** ('ಕೃತ್ಯಲ್ಯುಟೋ ಬಹುಲಮ್') ಎಂಬ ಸೂತ್ರದಲ್ಲಿ ಲ್ಯುಡ್ ವಿಧಾನಮಾಡುವಾಗ ಬಹುಲಮ್ ಎಂದು (ವಿಕಲ್ಪವಾಚಕಶಬ್ದವನ್ನು) ಹೇಳಿರುವದರಿಂದ ಕರ್ತ್ರರ್ಥದಲ್ಲಿಯೂ ಲ್ಯುಟ್ ಪ್ರತ್ಯಯವು (ಬರಬಹುದಾಗಿದೆ).[2] ಏಕೆಂದರೆ ಹಾಗೆ (ವೃದ್ಧರ) ಪ್ರಯೋಗವಿದೆ. ಹುಟ್ಟುವಂಥ ಜನರ ಜನ್ಮವು ಎಂದರೆ ಉದ್ಭವವು; ಅದಕ್ಕೆ ಆದಿಯಾದ್ದರಿಂದ ಎಂದರೆ

---

1. ಭೂರ್ಭುವಃ, ಲಕ್ಷ್ಮೀಃ - ಎಂದು ಎರಡು ನಾಮಗಳನ್ನೇ ಇಲ್ಲಿ ಒಪ್ಪಿದೆ; ಭುವೋ ಭುವೇ ನಮಃ, ಲಕ್ಷ್ಮ್ಯೈ ನಮಃ ಎಂದು ನಾಮಾವಳಿಯಲ್ಲಿಯೂ ಇದೆ. ಭಾಷ್ಯಕಾರರು 'ಭುವಃ' ಎಂಬ ಶಬ್ದವನ್ನು ಮಧ್ಯದೀಪಿಕಾನ್ಯಾಯದಿಂದ ಗ್ರಹಿಸಿ ಭೂರ್ಭುವಃ ಎಂಬ ನಾಮದ ಅನಂತರ 'ಭುವೋ ಲಕ್ಷ್ಮೀಃ' ಎಂದೂ, ಮೂರೂ ಪದಗಳನ್ನೂ ಒಟ್ಟಿಗೆಯೇ ಸೇರಿಸಿ 'ಭೂರ್ಭುವೋಲಕ್ಷ್ಮೀಃ' ಎಂದೂ ನಾಮಗಳಿಗೆ ವಿಶೇಷಾರ್ಥಗಳನ್ನು ಇಲ್ಲಿ ವರ್ಣಿಸಿದ್ದಾರೆ - ಎಂದು ಮೈ॥ ವಿವೃತಿ.

2. ಸೂತ್ರದ ಪ್ರಕಾರ ಕರಣಾರ್ಥ, ಅಧಿಕರಣಾರ್ಥಗಳಲ್ಲಿ ಮಾತ್ರ ಲ್ಯುಟ್ ಪ್ರತ್ಯಯವು ಬರುತ್ತದೆ. ಆದರೆ ಸೂತ್ರದಲ್ಲಿರುವ ಬಹುಲಶಬ್ದವು ಕರ್ತ್ರರ್ಥದಲ್ಲಿಯೂ ಬರಬಹುದೆಂತ ತಿಳಿಸುತ್ತದೆ. ಹಾಗೆ ಬಲ್ಲವರು ಉಪಯೋಗಿಸುವದೂ ಕಂಡುಬಂದಿದೆ ಎಂತ ಭಾವ.

ಮೂಲಕಾರಣನಾದ್ದರಿಂದ **ಜನಜನ್ಮಾದಿಯು**. ಭಯಕ್ಕೆ ಕಾರಣನಾಗಿರುವದರಿಂದ **ಭೀಮನು**. 'ಭೀಮಾದಯೋಽಪಾದಾನೇ' ಎಂಬ ಸೂತ್ರದಂತೆ ನಿಪಾತಮಾಡಿದೆ. 'ಮಹಾಭಯರೂಪವಾದ ಎತ್ತಿದ ವಜ್ರ(ವಾಗಿರುವ ಈತನು)' ಎಂದು ಶ್ರುತಿಯಿದೆ. ಅಸುರರೇ ಮುಂತಾದವರಿಗೆ ಭಯಕ್ಕೆ ಕಾರಣವಾದ ಪರಾಕ್ರಮವು ಈತನ ಅವತಾರಗಳಲ್ಲಿ (ಕಂಡುಬಂದಿದೆಯಾಗಿ) **ಭೀಮಪರಾಕ್ರಮನು**.

**ಆಧಾರನಿಲಯೋಽಧಾತಾ ಪುಷ್ಪಹಾಸಃ ಪ್ರಜಾಗರಃ।**
**ಊರ್ಧ್ವಗಃ ಸತ್ಪಥಾಚಾರಃ ಪ್ರಾಣದಃ ಪ್ರಣವಃ ಪಣಃ ॥೧೧೫॥**

(ಭಾಷ್ಯ)

೯೫೦. ಪೃಥಿವ್ಯಾದಿನಾಂ ಪಞ್ಚಭೂತಾನಾಮಾಧಾರಾಣಾಮಾಧಾರತ್ವಾತ್ ಆಧಾರನಿಲಯಃ। ೯೫೧. ಸ್ವಾತ್ಮನಾ ಧೃತಸ್ಯ ಅನ್ಯೋ ಧಾತಾ ನಾಸ್ತೀತಿ ಅಧಾತಾ। 'ನದ್ಯೃತಶ್ಚ' (ಪಾ.ಸೂ.೫-೪-೧೫೩) ಇತಿ ಸಮಾಸಾನ್ತವಿಧಿರನಿತ್ಯ ಇತಿ ಕಪ್ ಪ್ರತ್ಯಯಾಭಾವಃ। ಸಂಸಾರಸಮಯೇ ಸರ್ವಾಃ ಪ್ರಜಾಃ ಧಯತಿ ಪಿಬತೀತಿ ವಾ ಧಾತಾ। 'ಧೇಟ್ ಪಾನೇ' ಇತಿ ಧಾತುಃ। ೯೫೨. ಮುಕುಲಾತ್ಮನಾ ಸ್ಥಿತಾನಾಂ ಪುಷ್ಪಾಣಾಂ ಹಾಸವತ್ ಪ್ರಪಞ್ಚರೂಪೇಣ ವಿಕಾಸೋಽಸ್ಯೇತಿ ಪುಷ್ಪಹಾಸಃ। ೯೫೩. ನಿತ್ಯಪ್ರಬುದ್ಧಸ್ವರೂಪತ್ವಾತ್ ಪ್ರಕರ್ಷೇಣ ಜಾಗರ್ತೀತಿ ಪ್ರಜಾಗರಃ॥

(ಭಾಷ್ಯಾರ್ಥ)

ಆಧಾರಗಳಾದ ಭೂಮಿಯೇ ಮುಂತಾದ ಐದು ಭೂತಗಳಿಗೂ ಆಧಾರನಾದ್ದರಿಂದ **ಆಧಾರನಿಲಯನು**. ತನ್ನನ್ನು ತಾನೇ ಧರಿಸಿರುವ (ಇವನಿಗೆ) ಮತ್ತೊಬ್ಬ ಧಾತನು (ಧಾರಕನು) ಇಲ್ಲವಾದ್ದರಿಂದ **ಅಧಾತನು**. 'ನದ್ಯೃತಶ್ಚ' ಎಂಬ ಸೂತ್ರದಿಂದ ಪ್ರಾಪ್ತವಾದ 'ಕಪ್' ಪ್ರತ್ಯಯವು ಸಮಾಸಾಂತವಿಧಿಯು ಅನಿತ್ಯವಾದ್ದರಿಂದ (ಬರಲೇಬೇಕೆಂಬ ನಿಯಮವಿಲ್ಲ) ಎಂಬ ಪರಿಭಾಷೆಯಂತೆ ಇಲ್ಲಿ ಬಂದಿರುವದಿಲ್ಲ. ಸಂಹಾರಕಾಲದಲ್ಲಿ ಎಲ್ಲಾ ಪ್ರಜೆಗಳನ್ನೂ ಧಯತಿ - ಕುಡಿಯುತ್ತಾನಾದ್ದರಿಂದ **ಧಾತಾ** (ಎನಿಸುವನು)[1] ಎಂದಾದರೂ ಅರ್ಥ. ಧೇಟ್ -ಪಾನೇ ಎಂಬ ಧಾತುಪಾಠದಂತೆ (ಪಾನಾರ್ಥವಿದೆ). ಮೊಗ್ಗಾಗಿರುವ ಹೂವುಗಳ ಅರಳುವಿಕೆಯಂತೆ ಪ್ರಪಂಚರೂಪದಿಂದ ಈತನ ವಿಕಾಸವು (ಹರಡುವಿಕೆಯು) ಇದೆಯಾಗಿ **ಪುಷ್ಪಹಾಸನು**. ನಿತ್ಯವೂ ಎಚ್ಚತ್ತಸ್ವರೂಪನಾದ್ದರಿಂದ ಚೆನ್ನಾಗಿ ಎಚ್ಚತ್ತಿರುತ್ತಾನೆ ಎಂಬರ್ಥದಲ್ಲಿ **ಪ್ರಜಾಗರನು**.

---

1. 'ಆಧಾರನಿಲಯೋ ಧಾತಾ' ಎಂದು ಅಕಾರಪ್ರಶ್ಲೇಷವಿಲ್ಲದೆ ಧಾತಾ - ಎಂದೇ ಪದಚ್ಛೇದಮಾಡಿದರೆ ಈ ಅರ್ಥ - ಎಂದು ಭಾವ.

## (ಭಾಷ್ಯ)

೯೫೪. ಸರ್ವೇಷಾಮುಪರಿ ತಿಷ್ಠನ್ ಊರ್ಧ್ವಗಃ। ೧೫೫ ಸತಾಂ ಪನ್ಥಾನಃ ಕರ್ಮಾಣಿ ಸತ್ಪಥಾಃ। ತಾನಾಚರತ್ಯೇಷ ಇತಿ ಸತ್ಪಥಾಚಾರಃ। ೯೫೬. ಮೃತಾನ್ ಪರೀಕ್ಷಿತ್‌ಪ್ರಭೃತೀನ್ ಜೀವಯನ್ ಪ್ರಾಣದಃ। ೯೫೭. ಪ್ರಣವೋ ನಾಮ ಪರಮಾತ್ಮನೋ ವಾಚಕ ಓಙ್ಕಾರಃ, ತದಭೇದೋಪಚಾರೇಣಾಯಂ ಪ್ರಣವಃ। ೯೫೮. ಪಣತಿರ್ವ್ಯವಹಾರಾರ್ಥಃ। ತಂ ಕುರ್ವನ್ ಪಣಃ। 'ಸರ್ವಾಣಿ ರೂಪಾಣಿ ವಿಚಿತ್ಯ ಧೀರೋ ನಾಮಾನಿ ಕೃತ್ವಾಽಭಿವದನ್ ಯದಾಸ್ತೇ' (ತೈ. ಆ. ೩-೧೨) ಇತಿ ಶ್ರುತೇಃ। ಪುಣ್ಯಾನಿ ಸರ್ವಾಣಿ ಕರ್ಮಾಣಿ ಪಣಂ ಸಂಗೃಹ್ಯಾಧಿಕಾರಿಭ್ಯಃ ತತ್ಫಲಂ ಪ್ರಯಚ್ಛತೀತಿ ವಾ ಲಕ್ಷಣಯಾ ಪಣಃ ॥೧೧೫॥

## (ಭಾಷ್ಯಾರ್ಥ)

ಎಲ್ಲರಿಗಿಂತಲೂ ಮೇಲೆ ಇರುವನಾದ್ದರಿಂದ **ಊರ್ಧ್ವಗನು.** ಸತ್ಪುರುಷರ ಹಾದಿ- ಎಂದರೆ ಕರ್ಮಗಳು ಸತ್ಪಥಗಳು. ಅವುಗಳನ್ನು ಇವನು ಆಚರಿಸುತ್ತಾನಾಗಿ **ಸತ್ಪಥಾಚಾರನು.** ಸತ್ತುಹೋದ ಪರೀಕ್ಷಿತನೇ ಮೊದಲಾದವರನ್ನು[1] ಬದುಕಿಸಿರುತ್ತಾನಾದ್ದರಿಂದ **ಪ್ರಾಣದನು.** ಪ್ರಣವವೆಂಬುದು ಪರಮಾತ್ಮನನ್ನು ಹೇಳುವ ಓಂಕಾರವು. ಅದೇ ಇವನು ಎಂದು ಅಭೇದದಿಂದ ಹೇಳುವಾಗ ಈತನೇ **ಪ್ರಣವನು.**[2] ಪಣ(ಧಾತು)ವಿಗೆ ವ್ಯವಹಾರವೆಂಬರ್ಥವಿದೆ. ಅದನ್ನು ಮಾಡುವದರಿಂದ **ಪಣನು** (ಎಂದರ್ಥ). 'ಧೀರನಾದ (ಈ ಪುರುಷನು) ಎಲ್ಲಾ ರೂಪ (ಶರೀರ)ಗಳನ್ನೂ ವಿಚಾರಮಾಡಿ (ಸೃಷ್ಟಿಸಿ) ಅವುಗಳ ಹೆಸರುಗಳ್ನೂ ಇಟ್ಟು ವ್ಯವಹಾರಮಾಡುತ್ತಿರುವವನು' ಎಂಬ ಶ್ರುತಿಯಿಂದ (ಹೀಗೆ ಸಿದ್ಧವಾಗುತ್ತದೆ). ಅಥವಾ ಪುಣ್ಯವಾದ ಎಲ್ಲಾ ಕರ್ಮಗಳನ್ನೂ ಪಣವಾಗಿ ಕೂಡಿಹಾಕಿ ಅಧಿಕಾರಿಗಳಿಗೆ ಅವುಗಳ ಫಲವನ್ನು ಕೊಡುವ (ವ್ಯವಹಾರವನ್ನು ಮಾಡುವದರಿಂದ) ಪಣನು ಎಂದಾದರೂ ಲಕ್ಷಣೆಯಿಂದ (ಅರ್ಥಮಾಡಬಹುದು).

**ಪ್ರಮಾಣಂ ಪ್ರಾಣನಿಲಯಃ ಪ್ರಾಣಭೃತ್ ಪ್ರಾಣಜೀವನಃ।**
**ತತ್ತ್ವಂ ತತ್ತ್ವವಿದೇಕಾತ್ಮಾ ಜನ್ಮಮೃತ್ಯುಜರಾತಿಗಃ ॥೧೧೬॥**

---

1. ಸಾಂದೀಪನಿಯ ಪುತ್ರ, ಯುದ್ಧದಲ್ಲಿ ಮಡಿದಿದ್ದ ವಾನರರು - ಇವರುಗಳನ್ನು ಆದಿಶಬ್ದದಿಂದ ಗ್ರಹಿಸಬೇಕೆಂದು ಮೈ॥ ವಿವೃತಿ. ಗರ್ಭದಲ್ಲಿದ್ದಾಗಲೇ ಅಶ್ವತ್ಥಾಮನ ನಾರಾಯಣಾಸ್ತ್ರದಿಂದ ಸುಟ್ಟುಹೋಗಲಿದ್ದ ಪರೀಕ್ಷಿತನನ್ನು - ಚಕ್ರವನ್ನು ಮರೆಮಾಡಿ ಭಗವಂತನು ಕಾಪಾಡಿದನೆಂಬ ಭಾಗವತಕಥೆಯನ್ನೂ ಇಲ್ಲಿ ಸ್ಮರಿಸಬಹುದಾಗಿದೆ.
2. ವಾಚ್ಯವಾಚಕಗಳಿಗೆ ಅಭೇದೋಪಚಾರದಿಂದ ಈ ನಾಮವು ಸಿದ್ಧವಾಗುತ್ತದೆ ಎಂದು ಭಾವ.

(ಭಾಷ್ಯ)

೯೫೯. ಪ್ರಮಿತಿಃ ಸಂವಿತ್ ಸ್ವಯಂ ಪ್ರಮಾ, ಪ್ರಮಾಣಮ್। 'ಪ್ರಜ್ಞಾನಂ ಬ್ರಹ್ಮ' (ಐ. ೫-೩) ಇತಿ ಶ್ರುತೇಃ। 'ಜ್ಞಾನಸ್ವರೂಪಮತ್ಯನ್ತ ನಿರ್ಮಲಂ ಪರಮಾರ್ಥತಃ। ತಮೇವಾರ್ಥಸ್ವರೂಪೇಣ ಭ್ರಾನ್ತಿದರ್ಶನತಃ ಸ್ಥಿತಮ್' (ವಿ.ಪು.೧-೨-೬) ಇತಿ ವಿಷ್ಣುಪುರಾಣೇ। ೯೬೦. ಪ್ರಾಣಾಃ ಇನ್ದ್ರಿಯಾಣಿ ಯತ್ರ ಜೀವೇ ನಿಲೀಯನ್ತೇ ತತ್ಪರತನ್ತ್ರತ್ವಾತ್, ದೇಹಸ್ಯ ಧಾರಕಾಃ ಪ್ರಾಣಾಪಾನಾದಯೋ ವಾ ತಸ್ಮಿನ್ ನೀಲಿಯನ್ತೇ, ಪ್ರಾಣಿತೀತಿ ಪ್ರಾಣೋ ಜೀವಃ ಪರೇ ಪುಂಸಿ ನಿಲೀಯತ ಇತಿ ವಾ, ಪ್ರಾಣಾನ್ ಜೀವಾಂಶ್ಚ ಸಂಹರತೀತಿ ವಾ ಪ್ರಾಣನಿಲಯಃ। ೯೬೧. ಪೋಷಯನ್ ಅನ್ನರೂಪೇಣ ಪ್ರಾಣಾನ್ ಪ್ರಾಣಭೃತ್। ೯೬೨. ಪ್ರಾಣಿನೋ ಜೀವಯನ್ ಪ್ರಾಣಾಖ್ಯೈಃ; ಪವನೈಃ ಪ್ರಾಣಜೀವನಃ। 'ನ ಪ್ರಾಣೇನ ನಾಪಾನೇನ ಮರ್ತ್ಯೋ ಜೀವತಿ ಕಶ್ಚನ। ಇತರೇಣ ತು ಜೀವನ್ತಿ ಯಸ್ಮಿನ್ನೇತಾವುಪಾಶ್ರಿತೌ' (ಕಾ.೫-೫) ಇತಿ ಮನ್ತ್ರವರ್ಣಾತ್॥

(ಭಾಷ್ಯಾರ್ಥ)

ಪ್ರಮಿತಿ ಎಂದರೆ ಜ್ಞಾನವು; ತಾನೇ ಪ್ರಮೆಯಾದ **ಪ್ರಮಾಣವು**. (ಈತನು) "ಪ್ರಜ್ಞಾನವೇ ಬ್ರಹ್ಮವು" ಎಂದು ಶ್ರುತಿ(ಯಿದೆ). "ಅತ್ಯಂತಪರಮಾರ್ಥವೂ ನಿರ್ಮಲವೂ ಆದ ಜ್ಞಾನಸ್ವರೂಪನೂ ಭ್ರಾಂತಿಜ್ಞಾನ (ನಿಮಿತ್ತದಿಂದ) ಪದಾರ್ಥರೂಪವಾಗಿಯೂ ಇರುವಂತೆ ತೋರುವ ಅವನನ್ನೇ (ನಮಸ್ಕರಿಸುತ್ತೇನೆ)" ಎಂದು ವಿಷ್ಣುಪುರಾಣದಲ್ಲಿದೆ. ಪ್ರಾಣಗಳು ಎಂದರೆ ಇಂದ್ರಿಯಗಳು ಯಾವ ಜೀವನಲ್ಲಿ ಒಂದಾಗುವವೋ - ಏಕೆಂದರೆ ಅವನಿಗೆ ಪ್ರಾಣಗಳು ಅಧೀನವಾಗಿವೆಯಾಗಿ- (ಅವನು ಪ್ರಾಣನಿಲಯನು). ಅಥವಾ ದೇಹವನ್ನು ಧಾರಣೆಮಾಡಿರುವ ಪ್ರಾಣಾಪಾನಾದಿಗಳು ಅವನಲ್ಲಿ ಲಯವಾಗುತ್ತವೆ ಎಂದಾಗಲಿ, ಅಥವಾ ಉಸಿರಾಡುತ್ತಾನಾದ್ದರಿಂದ ಪ್ರಾಣನೆಂದರೆ ಜೀವನು; ಅವನು ಪರಮಪುರುಷನಲ್ಲಿ ಲಯವಾಗುತ್ತಾನೆ - ಎಂಬರ್ಥದಲ್ಲಾಗಲಿ, ಅಥವಾ ಪ್ರಾಣಗಳನ್ನೂ ಜೀವರನ್ನೂ ಸಂಹಾರಮಾಡುತ್ತಾನೆ - ಎಂಬರ್ಥದಲ್ಲಿಯಾದರೂ - **ಪ್ರಾಣನಿಲಯನು.** ಅನ್ನರೂಪದಿಂದ ಪ್ರಾಣಗಳನ್ನು ಪೋಷಿಸುತ್ತಾನಾದ್ದರಿಂದ **ಪ್ರಾಣಭೃತ್** (ಎನಿಸುವನು). ಪ್ರಾಣಗಳೆಂಬ ವಾಯುಗಳಿಂದ ಪ್ರಾಣಿಗಳನ್ನು ಜೀವಧಾರಣೆ ಮಾಡಿಸಿರುತ್ತಾನಾದ್ದರಿಂದ **ಪ್ರಾಣಜೀವನನು.** 'ಪ್ರಾಣದಿಂದಾಗಲಿ, ಅಪಾನದಿಂದಾಗಲಿ ಯಾವ ಮನುಷ್ಯನೂ ಬದುಕಿರುವದಿಲ್ಲ; ಯಾವನಲ್ಲಿ ಇವೆರಡೂ ಆಶ್ರಯಿಸಿಕೊಂಡಿರುವವೋ ಅಂಥ ಇನ್ನೊಬ್ಬನಿಂದಲೇ ಜೀವಿಸಿರುತ್ತಾರೆ' ಎಂದು ಮಂತ್ರವರ್ಣವಿದೆ.

(ಭಾಷ್ಯ)

೯೬೩. ತತ್ತ್ವಮ್ ಅಮೃತಮ್ ಸತ್ಯಂ ಪರಮಾರ್ಥಸತತ್ತ್ವಮ್ ಇತ್ಯೇತೇ ಏಕಾರ್ಥವಾಚಿನಃ। ಪರಮಾರ್ಥಸತೋ ಬ್ರಹ್ಮಣೋ ವಾಚಕಃ ಶಬ್ದಃ ತತ್ತ್ವಮ್। ೯೬೪. ತತ್ತ್ವಂ ಸ್ವರೂಪಮ್ ಯಥಾವದ್ ವೇತ್ತೀತಿ ತತ್ತ್ವವಿತ್। ೯೬೫. ಏಕಶ್ಚ

ಅಸೌ ಆತ್ಮಾ ಚೇತಿ ಏಕಾತ್ಮಾ। 'ಆತ್ಮಾ ವಾ ಇದಮೇಕ ಏವಾಗ್ರ ಆಸೀತ್' (ಐ. ೧-೧) ಇತಿ ಶ್ರುತೇಃ। 'ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ। ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಗೀಯತೇ' (ಲಿಂಗ. ೧-೭೦-೯೬) ಇತಿ ಸ್ಮೃತೇಶ್ಚ[1]। ೯೬೬. ಜಾಯತೇ, ಅಸ್ತಿ, ವರ್ಧತೇ, ವಿಪರಿಣಮತೇ, ಅಪಕ್ಷೀಯತೇ, ನಶ್ಯತಿ' (ನಿರು. ೧-೧-೨) ಇತಿ ಷಡ್‌ಭಾವವಿಕಾರಾನತೀತ್ಯ ಗಚ್ಛತೀತಿ ಜನ್ಮಮೃತ್ಯುಜರಾತಿಗಃ। 'ನ ಜಾಯತೇ ಮ್ರಿಯತೇ ವಾ ವಿಪಶ್ಚಿತ್। ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್। ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ' (ಕಾ. ೧-೨-೧೮) ಇತಿ ಮನ್ತ್ರವರ್ಣಾತ್ ॥೧೧೬॥

## (ಭಾಷ್ಯಾರ್ಥ)

ತತ್ತ್ವವು, ಅಮೃತವು, ಸತ್ಯವು, ಪರಮಾರ್ಥಸತತ್ತ್ವವು -ಎಂಬಿವು ಒಂದೇ ಅರ್ಥವನ್ನು ಹೇಳುವ (ಪರ್ಯಾಯಶಬ್ದಗಳು). ತತ್ತ್ವವೆಂಬುದು ಪರಮಾರ್ಥಸತ್ಯವಾಗಿರುವ ಬ್ರಹ್ಮದ ವಾಚಕಶಬ್ದವು. ತತ್ತ್ವವನ್ನು ಎಂದರೆ ಸ್ವರೂಪವನ್ನು ಇದ್ದದ್ದು ಇದ್ದಂತೆ ತಿಳಿಯುವನಾದ್ದರಿಂದ **ತತ್ತ್ವವಿತ್** (ಎನಿಸುವನು). ಒಬ್ಬನೇ ಆಗಿರುವ ಆತ್ಮನು **ಏಕಾತ್ಮನು**. 'ಇದೆಲ್ಲವೂ ಮೊದಲು ಆತ್ಮನೊಬ್ಬನೇ ಆಗಿತ್ತು' ಎಂದು ಶ್ರುತಿಯಿದೆ. 'ಇಲ್ಲಿರುವ ವಿಷಯಗಳನ್ನು ವ್ಯಾಪಿಸಿಕೊಂಡಿರುವದರಿಂದಲೂ ತೆಗೆದುಕೊಳ್ಳುವದರಿಂದಲೂ ಅವುಗಳನ್ನು ತಿನ್ನುತ್ತಿರುವದರಿಂದಲೂ ಇವನ ಸ್ವರೂಪವು ಕಡಿವಡೆಯದೆ ಇರುವದರಿಂದಲೂ (ಇವನು) ಆತ್ಮನೆನಿಸಿಕೊಂಡಿರುತ್ತಾನೆ'' ಎಂದು ಸ್ಮೃತಿಯೂ ಇದೆ. ಹುಟ್ಟುತ್ತದೆ, ಇದೆ, ಬೆಳೆಯುತ್ತದೆ, ಬದಲಾಯಿಸುತ್ತದೆ, ಸೊರಗುತ್ತದೆ, ನಾಶವಾಗುತ್ತದೆ - ಎಂಬೀ ಆರು ಭಾವ(ವಸ್ತು) ವಿಕಾರಗಳನ್ನು ಮೀರಿರುತ್ತಾನೆ. ಆದ್ದರಿಂದ **ಜನ್ಮಮೃತ್ಯುಜರಾತಿಗನು**. 'ತಿಳಿದಂಥವನು ಹುಟ್ಟುವದೂ ಇಲ್ಲ, ಸಾಯುವದೂ ಇಲ್ಲ. ಈತನು ಏತರಿಂದಲೂ ಹುಟ್ಟಲಿಲ್ಲ. (ಈತನಿಂದ) ಯಾರೂ ಹುಟ್ಟಲಿಲ್ಲ. ಈತನು ಅಜನು, ನಿತ್ಯನು, ಶಾಶ್ವತನು, ಪುರಾಣನು, ಶರೀರವು ಕೊಲ್ಲಲ್ಪಟ್ಟರೂ ಕೊಲ್ಲಲ್ಪಡುವದಿಲ್ಲ' ಹೀಗೆಂದು ಮಂತ್ರವರ್ಣವಿದೆ.

**ಭೂರ್ಭುವಃಸ್ವಸ್ತರುಸ್ತಾರಃ ಸವಿತಾ ಪ್ರಪಿತಾಮಹಃ।**
**ಯಜ್ಞೋ ಯಜ್ಞಪತಿರ್ಯಜ್ವಾ ಯಜ್ಞಾಙ್ಗೋ ಯಜ್ಞವಾಹನಃ॥ ॥೧೧೭॥**

## (ಭಾಷ್ಯ)

೯೬೭. ಭೂರ್ಭುವಃಸ್ವಃ ಸಮಾಖ್ಯಾನಿ ತ್ರೀಣಿ ವ್ಯಾಹೃತಿರೂಪಾಣಿ ಶುಕ್ರಾಣಿ ತ್ರಯೀಸಾರಾಣಿ ಬಹ್ವೃಚಾ ಆಹುಃ। ತೈರ್ಹೋಮಾದಿನಾ ಜಗತ್ತ್ರಯಂ ತರತಿ ಪ್ಲವತೇ

1. ಮುದ್ರಿತ ಲಿಂಗಪುರಾಣಪುಸ್ತಕದಲ್ಲಿ ಶ್ಲೋಕವು ಹೀಗಿದೆ:-
ಯದಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಯಮ್।
ಯಚ್ಚಾಸ್ಯ ಸತತಂ ಭಾವಃ ತಸ್ಮಾದಾತ್ಮಾ ನಿರುಚ್ಯತೇ॥ (ಲಿಂಗ.ಪು.೧-೭೦-೯೬)
ಈ ಶ್ಲೋಕವು ಮನುಸ್ಮೃತಿಯಲ್ಲಿದೆಯೆಂತ ವಿವೃತಿಯಲ್ಲಿದೆ. ಆದರೆ ಮನುಸ್ಮೃತಿಯಲ್ಲಿ ಇಲ್ಲ.

ವಾ ಇತಿ ಭೂರ್ಭುವಃಸ್ವಸ್ತರುಃ। 'ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ। ಆದಿತ್ಯಾಜ್ಜಾಯತೇ ವೃಷ್ಟಿರ್ವೃಷ್ಟೇರನ್ನಂ ತತಃ ಪ್ರಜಾಃ' (ಮನು. ೩-೭೬) ಇತಿ ಮನುವಚನಾತ್। ಅಥವಾ ಭೂರ್ಭುವಃಸ್ವಃಸಮಾಖ್ಯಲೋಕತ್ರಯಸಂಸಾರವೃಕ್ಷಃ ಭೂರ್ಭುವಸ್ಸ್ವಸ್ತರುಃ, ಭೂರ್ಭುವಃಸ್ವರಾಖ್ಯಂ ಲೋಕತ್ರಯಂ ವೃಕ್ಷವದ್ ವ್ಯಾಪ್ಯ ತಿಷ್ಠತೀತಿ ವಾ ಭೂರ್ಭುವಃಸ್ವಸ್ತರುಃ। ೯೬೮. ಸಂಸಾರಸಾಗರಂ ತಾರಯನ್ ತಾರಃ ಪ್ರಣವೋ ವಾ। ೯೬೯. ಸರ್ವಸ್ಯ ಲೋಕಸ್ಯ ಜನಕ ಇತಿ ಸವಿತಾ। ೯೭೦. ಪಿತಾಮಹಸ್ಯ ಬ್ರಹ್ಮಣೋಽಪಿ ಪಿತಾ ಇತಿ ಪ್ರಪಿತಾಮಹಃ॥

## (ಭಾಷ್ಯಾರ್ಥ)

ವೇದಗಳ ಸಾರವಾದ ರಸ (ರೂಪ)ವಾದ ಭೂಃ, ಭುಃ, ಸುವಃ - ಎಂಬ ಹೆಸರಿನ ಮೂರು ವ್ಯಾಹೃತಿಗಳನ್ನು ಬಹ್ವೃಚರು ಹೇಳುವರು. ಆ (ವ್ಯಾಹೃತಿ)ಗಳಿಂದ ಹೋಮವೇ ಮುಂತಾದವುಗಳನ್ನು ಮಾಡುವದರಿಂದ ಲೋಕತ್ರಯದ (ಜನರನ್ನೂ) ದಾಟಿಸುತ್ತಾನೆ, ತೇಲಿಸುತ್ತಾನೆ, ಆದ್ದರಿಂದ **ಭೂರ್ಭುವಃಸ್ವಸ್ತರುವು**.[1] 'ಅಗ್ನಿಯಲ್ಲಿ ಸರಿಯಾಗಿ ಹಾಕಿದ ಹೋಮವು ಆದಿತ್ಯನನ್ನು ಹೋಗಿ ಮುಟ್ಟುತ್ತದೆ. ಆದಿತ್ಯನಿಂದ ಮಳೆಯಾಗುತ್ತದೆ. ಮಳೆಯಿಂದ ಅನ್ನವಾಗುತ್ತದೆ. ಅದರಿಂದ ಪ್ರಜೆಗಳು ಉಂಟಾಗುತ್ತಾರೆ' ಎಂದು ಮನುವಚನವಿದೆ. ಅಥವಾ ಭೂಃ, ಭುವಃ, ಸುವಃ - ಎಂಬ ಹೆಸರಿನ ಮೂರುಲೋಕಗಳ (ರೂಪ)ವಾದ ಸಂಸಾರವೃಕ್ಷವೇ ಭೂರ್ಭವಸ್ಸ್ವಸ್ತರುವು. ಭೂರ್ಭುವಃಸ್ವರೆಂಬ ಮೂರು ಲೋಕಗಳನ್ನೂ - ಮರವು ಬೇರಿನಿಂದ ಕೆಳಕ್ಕೆ ವ್ಯಾಪಿಸಿಕೊಂಡು ನಿಂತಿರುವಂತೆ - (ಭಗವಂತನು ಮೂರು ಲೋಕಗಳನ್ನೂ ವ್ಯಾಪಿಸಿಕೊಂಡಿದ್ದಾನೆ - ಎಂಬರ್ಥದಲ್ಲಿ) **ಭೂರ್ಭುವಸ್ಸ್ವಸ್ತರುವು**. ಸಂಸಾರ ಸಮುದ್ರವನ್ನು ದಾಟಿಸುವವನು **ತಾರನು**. ಅಥವಾ ತಾರವೆಂದರೆ ಪ್ರಣವವೆಂದೂ (ಆಗಬಹುದು). ಎಲ್ಲಾ ಲೋಕಕ್ಕೂ ತಂದೆಯಾದ್ದರಿಂದ **ಸವಿತಾ** (ಎನಿಸುವನು). ಪಿತಾಮಹನಾದ ಬ್ರಹ್ಮನಿಗೂ ತಂದೆಯಾದ್ದರಿಂದ **ಪ್ರಪಿತಾಮಹನು**.

## (ಭಾಷ್ಯ)

೯೭೧. ಯಜ್ಞಾತ್ಮನಾ ಯಜ್ಞಃ।[2] ೯೭೨. ಯಜ್ಞಾನಾಂ ಪಾತಾ ಸ್ವಾಮೀ ವಾ ಯಜ್ಞಪತಿಃ। 'ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ' (ಗೀ. ೯-೨೪) ಇತಿ ಭಗವದ್ವಚನಾತ್। ೯೭೩. ಯಜಮಾನಾತ್ಮನಾ ತಿಷ್ಠನ್ ಯಜ್ವಾ। ೯೭೪. ಯಜ್ಞಾ ಅಜ್ಗಾನಿ ಅಸ್ಯೇತಿ ವರಾಹಮೂರ್ತಿಃ - ಯಜ್ಞಾಙ್ಗಃ।

---

1. ತರತಿ - ಎಂಬುದು ತಾರಯತಿ ಎಂಬರ್ಥದಲ್ಲಿ ಪ್ರೇರಣಾರ್ಥದಿಂದ ಒಳಗೊಂಡಿದೆ - ಎಂಬ ಮೈ॥ ವಿವೃತಿಗೆ ಅನುಸಾರವಾಗಿ ಅನುವಾದಮಾಡಿದೆ. ಭಗವಂತನೇ ಮೂರು ವ್ಯಾಹೃತಿಗಳ ರೂಪದಿಂದಿದ್ದುಕೊಂಡು ಕರ್ಮಗಳಲ್ಲಿ ಸಂಭವಿಸಬಹುದಾದ ನ್ಯೂನಾತಿರೇಕಗಳನ್ನು ಪರಿಹರಿಸಿ ಫಲವನ್ನು ಕೊಡುತ್ತಾನೆ - ಎಂದು ತಾತ್ಪರ್ಯ.
2. 'ಸಂಗನ್ತಾ ಯಜ್ಞಃ' ಎಂದು ಮೇ॥ವಾ॥ ಪಾಠಗಳು. ನಾವು ಕೊಟ್ಟಿರುವದು ಗೀ॥ ಪಾಠ. ಪ್ರಾಣಿಗಳನ್ನು ಕರ್ಮಫಲಗಳೊಡನೆ ಸೇರಿಸುತ್ತಾನಾದ್ದರಿಂದ ಯಜ್ಞನು ಎಂದು ಅಲ್ಲಿ ಅರ್ಥ.

ವೇದಪಾದೋ ಯೂಪದಂಷ್ಟ್ರಃ ಕ್ರತುಹಸ್ತಶ್ಚಿತೀಮುಖಃ।
ಅಗ್ನಿಜಿಹ್ವೋ ದರ್ಭರೋಮಾ ಬ್ರಹ್ಮಶೀರ್ಷೋ ಮಹಾತಪಾಃ॥
ಅಹೋರಾತ್ರೇಕ್ಷಣೋ ದಿವ್ಯೋ ವೇದಾಙ್ಗಶ್ರುತಿಭೂಷಣಃ।
ಆಜ್ಯನಾಸಃ ಸ್ರುವತುಣ್ಡಃ ಸಾಮಘೋಷಸ್ವನೋ ಮಹಾನ್॥
ಧರ್ಮಸತ್ಯಮಯಶ್ಶ್ರೀಮಾನ್ ಕ್ರಮವಿಕ್ರಮಸತ್ಕ್ರಿಯಃ।
ಪ್ರಾಯಶ್ಚಿತ್ತನಖೋ ಘೋರಃ ಪಶುಜಾನುರ್ಮಹಾಭುಜಃ॥
ಉದ್ಗಾತ್ರನ್ತ್ರೋ ಹೋಮಲಿಙ್ಗೋ ಬೀಜೌಷಧಿಮಹಾಫಲಃ।
ವಾಯ್ವನ್ತರಾತ್ಮಾ ಮನ್ತ್ರಸ್ಫಿಗ್ ವಿಕೃತಃ ಸೋಮಶೋಣಿತಃ॥
ವೇದೀಸ್ಕನ್ಧೋ ಹವಿರ್ಗನ್ಧೋ ಹವ್ಯಕವ್ಯಾತಿವೇಗವಾನ್।
ಪ್ರಾಗ್ವಂಶಕಾಯೋ ದ್ಯುತಿಮಾನ್ ನಾನಾದೀಕ್ಷಾಭಿರರ್ಚಿತಃ॥
ದಕ್ಷಿಣಾಹೃದಯೋ ಯೋಗೀ ಮಹಾಸತ್ರಮಯೋ ಮಹಾನ್।
ಉಪಾಕರ್ಮೋಷ್ಠರುಚಕಃ ಪ್ರವರ್ಗ್ಯಾವರ್ತಭೂಷಣಃ॥
ನಾನಾಛನ್ದೋ ಗತಿಪಥೋ ಗುಹ್ಯೋಪನಿಷದಾಸನಃ।
ಛಾಯಾಪತ್ನೀಸಹಾಯೋ ವೈ ಮೇರುಶೃಙ್ಗಮಿವೋಚ್ಛ್ರಿತಃ॥

(ಹರಿ.೩-೩೪-೩೪ ರಿಂದ ೪೧)

ಇತಿಹರಿವಂಶೇ। ೯೭೫. ಫಲಹೇತುಭೂತಾನ್ ಯಜ್ಞಾನ್ ವಾಹಯತೀತಿ ಯಜ್ಞವಾಹನಃ॥೧೧೭॥

## (ಭಾಷ್ಯಾರ್ಥ)

ಯಜ್ಞಾತ್ಮಕನಾದ್ದರಿಂದ **ಯಜ್ಞನು.** ಯಜ್ಞಗಳನ್ನು ಕಾಪಾಡುತ್ತಾನೆ, ಅಥವಾ (ಯಜ್ಞಗಳಿಗೆ) ಒಡೆಯನು - ಎಂಬರ್ಥದಲ್ಲಿ **ಯಜ್ಞಪತಿಯು.** 'ನಾನೇ ಎಲ್ಲಾ ಯಜ್ಞಗಳ ಭೋಕ್ತೃವೂ ಪ್ರಭುವೂ ಆಗಿರುತ್ತೇನೆ' ಎಂದು ಭಗವಂತನ ವಚನವಿದೆ. ಯಜಮಾನನ ರೂಪದಿಂದಿರುವನಾದ್ದರಿಂದ **ಯಜ್ವಾ** (ಎನಿಸುವನು). ವರಾಹರೂಪಿಯಾದ ಇವನಿಗೆ ಯಜ್ಞಗಳೇ ಅಂಗ (ಅವಯವ) ಗಳು, ಆದ್ದರಿಂದ **ಯಜ್ಞಾಂಗನು.** 'ವೇದಗಳೇ ಕಾಲುಗಳಾಗಿ ಉಳ್ಳ ಯೂಪಸ್ತಂಭವೇ ಕೋರೆವಾಡೆಯಾಗುಳ್ಳ, ಕ್ರತುಗಳೇ ಹಸ್ತವಾಗುಳ್ಳ, ಚಿತಿಯೇ ಮುಖವಾಗಿರುವ, ಅಗ್ನಿಯೇ ನಾಲಿಗೆಯಾಗುಳ್ಳ, ದರ್ಭೆಗಳೇ ಕೂದಲುಗಳಾಗುಳ್ಳ, ಪರಬ್ರಹ್ಮವೇ (ಅಥವಾ ಬ್ರಾಹ್ಮಣಜಾತಿಯೇ) ತಲೆಯಾಗುಳ್ಳ, ಮಹಾತಪನಾದ, ಹಗಲುರಾತ್ರೆಗಳೆಂಬ ಬೆಳಗುವ ಕಣ್ಣುಗಳು, ವೇದಾಂಗ (ಶಿಕ್ಷಾವ್ಯಾಕರಣಾದಿಗಳು) ಗಳೆಂಬ ಕಿವಿಯ ಆಭರಣಗಳು, ತುಪ್ಪವೆಂಬ ಮೂಗು, ಸ್ರುವ (ದರ್ವಿ)ಯೆಂಬ ಹಲ್ಲು, ಸಾಮವೇದವೆಂಬ ಮಹಾಧ್ವನಿ - ಇವುಗಳುಳ್ಳ ಸತ್ಯಧರ್ಮಸ್ವರೂಪನೂ ಲಕ್ಷ್ಮೀಯುಕ್ತನೂ ಆದ (ಹೋಮಕ್ಕಾಗಿ) ಹೋಗುವಿಕೆ,

ಹಿಂತಿರುಗುವಿಕೆಗಳೆಂಬ ಸತ್ಕ್ರಿಯೆಗಳುಳ್ಳ, ಪ್ರಾಯಶ್ಚಿತ್ತಗಳೆಂಬ ಭಯಂಕರವಾದ ಉಗುರು, (ಯಜ್ಞ)ಪಶುವೆಂಬ ಮಂಡಿ, ಮಹಾಭುಜಗಳು, ಉದ್ಗಾತೃವೆಂಬ ಮಾಂಸ (ಖಂಡ)ವಿಶೇಷಗಳು, ಹೋಮವೆಂಬ ಲಿಂಗ (ಗುಹ್ಯವಾದ ಅಂಗ), ಸಸ್ಯಗಳ ಬೀಜಗಳೆಂಬ ಮಹಾಫಲ (ವೃಷಣ)ಗಳು, ವಾಯುವೆಂಬ ಅಂತರಾತ್ಮನು, ಮಂತ್ರಗಳೆಂಬ ಸೊಂಟವೂ ಸೋಮರಸವೆಂಬ ರಕ್ತವೂ (ಯಜ್ಞ) ವೇದಿಕೆಯೆಂಬ ಭುಜವೂ ಹವಿಸ್ಸೆಂಬ ಗಂಧವೂ ಹವ್ಯಕವ್ಯಗಳೆಂಬ ಅತಿವೇಗ (ಮನಸ್ಸು) ವುಳ್ಳವನೂ ಪ್ರಾಗ್ವಂಶವೆಂಬ ಶರೀರದ ಮಧ್ಯಭಾಗವುಳ್ಳವನೂ ತೇಜೋವಂತನೂ ನಾನಾವಿಧವಾದ ದೀಕ್ಷೆ (ಯಜ್ಞನಿಯಮ)ಗಳಿಂದ ಪೂಜಿತನೂ ದಕ್ಷಿಣೆಯೆಂಬ ಹೃದಯವುಳ್ಳವನೂ ಯೋಗಿಯೂ ಮಹಾಸತ್ರ (ಯಜ್ಞ)ಮಯನೂ ಮಹಾಂತನೂ ಉಪಾಕರ್ಮವೆಂಬ ತುಟಿಗಳ ಅಲಂಕಾರವುಳ್ಳವನೂ ಪ್ರವರ್ಗ್ಯಗಳೆಂಬ ನಾಭಿಭೂಷಣನೂ (ಗಾಯತ್ರಿ)ಯೇ ಮುಂತಾದ ನಾನಾ ಛಂದಸ್ಸುಗಳೆಂಬ ಓಡಾಡುವ ಮಾರ್ಗವುಳ್ಳವನೂ ರಹಸ್ಯವಾದ ಉಪನಿಷತ್ತೆಂಬ (ಪ್ರಣವರೂಪವಾದ)ಆಸನವುಳ್ಳವನೂ ತನ್ನ ನೆರಳೆಂಬ ಪತ್ನಿಯ ಸಹಾಯವುಳ್ಳವನೂ ಮೇರುಪರ್ವತದ ಶಿಖರದಂತೆ ಉನ್ನತವಾಗಿರುವವನೂ (ಆದ ಯಜ್ಞವರಾಹಮೂರ್ತಿಯು ಭೂಮಿಯನ್ನು ಮೇಲಕ್ಕೆತ್ತಿ ಕಾಪಾಡಿದನು)''[1] ಎಂದು **ಹರಿವಂಶ**ದಲ್ಲಿದೆ. ಫಲಕ್ಕೆ ಕಾರಣವಾದ ಯಜ್ಞಗಳನ್ನು ಮಾಡುವಂತೆ ಪ್ರೇರಣೆ ಮಾಡುತ್ತಾನೆ. ಆದ್ದರಿಂದ **ಯಜ್ಞವಾಹನನು.**

**ಯಜ್ಞಭೃದ್ ಯಜ್ಞಕೃದ್ ಯಜ್ಞೀ ಯಜ್ಞಭುಗ್ ಯಜ್ಞಸಾಧನಃ।**
**ಯಜ್ಞಾನ್ತಕೃದ್ ಯಜ್ಞಗುಹ್ಯಮನ್ನಮನ್ನಾದ ಏವ ಚ ॥೧೧೮॥**

## (ಭಾಷ್ಯ)

೯೭೬. ಯಜ್ಞಂ ಭಿಭರ್ತಿ ಪಾತೀತಿ ವಾ ಯಜ್ಞಭೃತ್। ೯೭೭. ಜಗದಾದೌ ತದನ್ತೇ ಚ ಯಜ್ಞಂ ಕರೋತಿ ಕೃನ್ತತೀತಿ ವಾ ಯಜ್ಞಕೃತ್। ೯೭೮. ಯಜ್ಞಾನಾಂ ತತ್ಸಮಾರಾಧನಾತ್ಮನಾಂ ಶೇಷೀತಿ ಯಜ್ಞೀ। ೯೭೯. ಯಜ್ಞಂ ಭುಙ್ಕ್ತೇ ಭುನಕ್ತೀತಿ ವಾ ಯಜ್ಞಭುಕ್। ೯೮೦. ಯಜ್ಞಾಃ ಸಾಧನಂ ತತ್ಪ್ರಾಪ್ತೌ - ಇತಿ ಯಜ್ಞಸಾಧನಃ॥

## (ಭಾಷ್ಯಾರ್ಥ)

ಯಜ್ಞವನ್ನು ಧರಿಸುತ್ತಾನೆ ಅಥವಾ ಕಾಪಾಡುತ್ತಾನಾದ್ದರಿಂದ **ಯಜ್ಞಭೃತ್** (ಎಂದು ಹೆಸರು). ಪ್ರಪಂಚದ (ಸೃಷ್ಟಿಯ) ಪ್ರಾರಂಭದಲ್ಲಿ ಹಾಗೂ ಕೊನೆಯಲ್ಲಿ ಯಜ್ಞವನ್ನು ಮಾಡುತ್ತಾನೆ ಅಥವಾ ನಾಶಗೊಳಿಸುತ್ತಾನೆ - ಆದ್ದರಿಂದ **ಯಜ್ಞಕೃತ್** ಎನಿಸುವನು.

1. ಇಲ್ಲಿ ಕೊಟ್ಟಿರುವ ವರ್ಣನೆಯಲ್ಲಿ ವೈದಿಕವಾದ ಯಜ್ಞದ ಅವಯವಗಳನ್ನೂ ಸಾಮಗ್ರಿಗಳನ್ನೂ ಅಂಗೋಪಾಂಗಗಳನ್ನೂ ಭಗವಂತನ ಶರೀರದ ಅವಯವಗಳಿಗೆ ಅಭೇದವಾಗಿ ಕಲ್ಪಿಸಿ ರೂಪಕವಾಗಿ ವರ್ಣಿಸಿದೆ. ಇಲ್ಲಿರುವ ವೈದಿಕಶಬ್ದಗಳ ಅರ್ಥವಿಶೇಷಗಳನ್ನು ಬಲ್ಲವರಿಂದ ತಿಳಿದುಕೊಳ್ಳಬೇಕು.

ಆ(ಭಗವಂತನು) ಅರ್ಚನಾರೂಪವಾದ ಯಜ್ಞಗಳ ಶೇಷಿಯಾದ್ದರಿಂದ[1] **ಯಜ್ಞಿಯು.** ಯಜ್ಞವನ್ನು ಅನುಭವಿಸುತ್ತಾನೆ ಅಥವಾ ಕಾಪಾಡುತ್ತಾನಾದ್ದರಿಂದ **ಯಜ್ಞಭುಜನು.** ಆ (ಭಗವಂತನನ್ನು) ಪಡೆಯುವದಕ್ಕೆ ಯಜ್ಞಗಳು ಸಾಧನಗಳಾದ್ದರಿಂದ ಇವನು **ಯಜ್ಞಸಾಧನನು.**

## (ಭಾಷ್ಯ)

೯೮೧. ಯಜ್ಞಸ್ಯ ಅನ್ತಂ ಫಲಪ್ರಾಪ್ತಿಂ ಕುರ್ವನ್ ಯಜ್ಞಾನ್ತಕೃತ್। ವೈಷ್ಣವ್ಯಖುಕ್‌ಶಂಸನೇ ಪೂರ್ಣಾಹುತ್ಯಾ ವಾ ಯಜ್ಞಸಮಾಪ್ತಿಂ ಕರೋತೀತಿ ಯಜ್ಞಾನ್ತಕೃತ್। ೯೮೨. ಯಜ್ಞಾನಾಂ ಗುಹ್ಯಂ ಜ್ಞಾನಯಜ್ಞಃ, ಫಲಾಭಿಸನ್ಧಿರಹಿತೋ ವಾ ಯಜ್ಞಃ। ತದಭೇದೋಪಚಾರಾತ್ ಬ್ರಹ್ಮ ಯಜ್ಞಗುಹ್ಯಮ್। ೯೮೩. ಅದ್ಯತೇ ಅತ್ತಿ ಚ ಭೂತಾನಿ ಇತ್ಯನ್ನಮ್। ೯೮೪. ಅನ್ನಮತ್ತೀತಿ ಅನ್ನಾದಃ। ಸರ್ವಂ ಜಗದನ್ನಾದಿರೂಪೇಣ ಭೋಕ್ತೃಭೋಗ್ಯಾತ್ಮಕಮೇವೇತಿ ದರ್ಶಯಿತುಮ್ ಏವಕಾರಃ। ಚಶಬ್ದಃ ಸರ್ವನಾಮ್ನಾಮ್ ಏಕಸ್ಮಿನ್ ಪರಸ್ಮಿನ್ ಪುಂಸಿ ಸಮುಚ್ಚಿತ್ಯ ವೃತ್ತಿಂ ದರ್ಶಯಿತುಮ್ ॥೧೧೮॥

## (ಭಾಷ್ಯಾರ್ಥ)

ಯಜ್ಞದ ಕೊನೆ ಎಂದರೆ ಫಲಪ್ರಾಪ್ತಿಯನ್ನುಂಟುಮಾಡುತ್ತಾನಾದ್ದರಿಂದ **ಯಜ್ಞಾನ್ತಕೃತ್** (ಎನಿಸುವನು). ವಿಷ್ಣುದೇವತಾಕವಾದ ಋಕ್ಕನ್ನು ಹೇಳುವ ಮೂಲಕ ಅಥವಾ ಪೂರ್ಣಾಹುತಿಯಿಂದ ಯಜ್ಞವನ್ನು ಪೂರ್ಣಗೊಳಿಸುತ್ತಾನೆ, ಆದ್ದರಿಂದ[2] **ಯಜ್ಞಾನ್ತಕೃತ್** ಎಂದೂ ಆಗಬಹುದು. ಯಜ್ಞಗಳೊಳಗೆಲ್ಲ ರಹಸ್ಯವಾದದ್ದು ಜ್ಞಾನ (ವೆಂಬ) ಯಜ್ಞವು; ಅಥವಾ ಫಲದ ಆಶೆಯನ್ನು ಬಿಟ್ಟು ಮಾಡುವ ಯಜ್ಞ (ವೆಂದಾದರೂ ಆಗಬಹುದು). ಅದಕ್ಕೂ ಬ್ರಹ್ಮಕ್ಕೂ ಅಭೇದೋಪಚಾರದಿಂದ (ಒಂದೇ ಎಂಬ ಅರ್ಥದಲ್ಲಿ) ಬ್ರಹ್ಮವು **ಯಜ್ಞಗುಹ್ಯವು.** ತಿನ್ನಲ್ಪಡುತ್ತದೆ ಮತ್ತು ಭೂತಗಳನ್ನು ತಿನ್ನುತ್ತದೆಯಾದ್ದರಿಂದ (ಬ್ರಹ್ಮವು) **ಅನ್ನವು.** ಅನ್ನವನ್ನು ತಿನ್ನುವದರಿಂದ **ಅನ್ನಾದನು.** (ಅನ್ನಾದ ಏವ ಚ ಎಂಬಲ್ಲಿ) ಇಡಿಯ ಜಗತ್ತೆಲ್ಲವೂ (ಅನ್ಯೋನ್ಯವಾಗಿ) ಅನ್ನಾನ್ನಾದರೂಪದಿಂದ[3] ಭೋಕ್ತೃಭೋಗ್ಯಾತ್ಮಕವಾಗಿದೆ - ಎಂದು ತಿಳಿಸುವದಕ್ಕೆ 'ಏವ' ಎಂದು ಹೇಳಿರುತ್ತದೆ. ಒಬ್ಬನೇ ಆದ ಪರಮಪುರುಷನಾದ (ವಿಷ್ಣುವಿನಲ್ಲಿ) ಎಲ್ಲಾ ನಾಮಗಳೂ ಒಂದಾಗಿ ಸೇರಿಕೊಂಡಿವೆ'[1] - ಎಂದು ತಿಳಿಸುವದಕ್ಕಾಗಿ 'ಚ' ಶಬ್ದವು (ಬಂದಿರುತ್ತದೆ).

---

1. ಭಗವಂತನಿಗೂ ಜಗತ್ತಿಗೂ ಶೇಷಶೇಷಿಭಾವವಿದೆಯೆಂದು ವಿಶಿಷ್ಟಾದ್ವೈತಸಿದ್ಧಾಂತಿಗಳು ಹೇಳುತ್ತಾರೆ.
2. 'ವೈಷ್ಣವೀಂ ಪೂರ್ಣಾಹುತಿಮುದವಸಾನೀಯಸ್ಥಾನೇ ವಾಜಸನೇಯಿನಃ ಸಮಾಮನನ್ತಿ', 'ದ್ವಾದಶಗೃಹೀತೇನ ಸ್ರುಚಂ ಪೂರಯಿತ್ವಾ ಇದಂ ವಿಷ್ಣುರ್ವಿಚಕ್ರಮೇ ಇತ್ಯನ್ತರ್ವೇದ್ಯೂರ್ಧ್ವಸ್ತಿಷ್ಠನ್ ಜುಹೋತಿ' ಎಂಬ ಅಪಸ್ತಂಬಶ್ರೌತಸೂತ್ರ (೧೩-೨೫-೭, ೮) ವಾಕ್ಯಗಳನ್ನು ವಿವೃತಿಯಲ್ಲಿ ಉದಾಹರಿಸಿ ಈ ನಾಮದ ಅರ್ಥವನ್ನು ವಿವರಿಸಿದೆ.
3. ಸಸ್ಯಗಳಿಗೆ ಗೊಬ್ಬರ, ಮಣ್ಣು, ನೀರು - ಇವು ಅನ್ನವು. ಪಕ್ಷಿಪ್ರಾಣಿಗಳಿಗೆ ಗಿಡಮರಗಳ ಎಲೆ, ಹಣ್ಣುಕಾಯಿಗಳು ಅನ್ನವು; ಹೀಗೆ ಜಗತ್ತೆಲ್ಲವೂ ಒಂದಕ್ಕೊಂದು ಅನ್ನವಾಗಿಯೂ ಅನ್ನಾದವಾಗಿಯೂ ಇದೆ ಎಂದರ್ಥ.

**ಆತ್ಮಯೋನಿಃ ಸ್ವಯಂಜಾತೋ ವೈಖಾನಃ ಸಾಮಗಾಯನಃ।**
**ದೇವಕೀನನ್ದನಃ ಸ್ರಷ್ಟಾ ಕ್ಷಿತೀಶಃ ಪಾಪನಾಶನಃ ॥೧೧೯॥**

## (ಭಾಷ್ಯ)

೯೮೫. ಆತ್ಮೈವ ಯೋನಿರುಪಾದಾನಕಾರಣಂ ನಾನ್ಯದಿತಿ ಆತ್ಮಯೋನಿಃ। ೯೮೬. ನಿಮಿತ್ತಕಾರಣಮಪಿ ಸ ಏವೇತಿ ದರ್ಶಯಿತುಂ ಸ್ವಯಂಜಾತ ಇತಿ। 'ಪ್ರಕೃತಿಶ್ಚ ಪ್ರತಿಜ್ಞಾದೃಷ್ಟಾನ್ತಾನುಪರೋಧಾತ್' (ಬ್ರ.ಸೂ. ೧-೪-೨೩) ಇತ್ಯತ್ರ ಸ್ಥಾಪಿತಮುಭಯಕಾರಣತ್ವಂ ಹರೇಃ। ೯೮೭. ವಿಶೇಷೇಣ ಖನನಾದ್ ವೈಖಾನಃ। ಧರಣೀಂ ವಿಶೇಷೇಣ ಖನಿತ್ವಾ ಪಾತಾಲವಾಸಿನಂ ಹಿರಣ್ಯಾಕ್ಷಂ ವಾರಾಹಂ ರೂಪಮಾಸ್ಥಾಯ ಜಘಾನೇತಿ ಪುರಾಣೇ ಪ್ರಸಿದ್ಧಮ್। ೯೮೮. ಸಾಮಾನಿ ಗಾಯತೀತಿ ಸಾಮಗಾಯನಃ॥

## (ಭಾಷ್ಯಾರ್ಥ)

ತಾನೇ (ತನಗೆ) ಯೋನಿಯು ಉಪಾದಾನಕಾರಣವು; ಮತ್ತೊಂದಲ್ಲ - ಎಂಬರ್ಥದಲ್ಲಿ **ಆತ್ಮಯೋನಿಯು.** ನಿಮಿತ್ತಕಾರಣನೂ ಅವನೇ ಎಂದು ತಿಳಿಸುವದಕ್ಕಾಗಿ **ಸ್ವಯಂಜಾತನು.** - ಎಂದಿದೆ. '(ಬ್ರಹ್ಮವೇ) ಉಪಾದಾನಕಾರಣವೂ ಆಗಿದೆ. ಪ್ರತಿಜ್ಞೆಗೂ ದೃಷ್ಟಾಂತಕ್ಕೂ ಅವಿರೋಧವಾಗುವದಕ್ಕಾಗಿ (ಹೀಗೆ ಒಪ್ಪಬೇಕು)' ಎಂಬಲ್ಲಿ ಎರಡು ವಿಧವಾದ ಕಾರಣವೂ ಹರಿಯೇ ಎಂದು ನಿರ್ಣಯಮಾಡಿದ್ದಾಗಿದೆ. ವಿಶೇಷ (ರೂಪ) ದಿಂದ ಅಗೆದದ್ದರಿಂದ **ವೈಖಾನನು.** ಭೂಮಿಯನ್ನು ವಿಶೇಷವಾಗಿ ಅಗೆದು ಪಾತಾಳತಳದಲ್ಲಿದ್ದ ಹಿರಣ್ಯಾಕ್ಷನನ್ನು ವಾರಾಹ (ಹಂದಿಯ) ರೂಪವನ್ನು ಧರಿಸಿ ಸಂಹಾರಮಾಡಿದನು[2] - ಎಂದು ಪುರಾಣಗಳಲ್ಲಿ ಪ್ರಸಿದ್ಧವಾಗಿದೆ. ಸಾಮಗಳನ್ನು ಹಾಡುವವನಾದ್ದರಿಂದ **ಸಾಮಗಾಯನನು.**

## (ಭಾಷ್ಯ)

೯೮೯. ದೇವಕ್ಯಾಃ ಸುತಃ ದೇವಕೀನನ್ದನಃ। 'ಜ್ಯೋತೀಂಷಿ ಶುಕ್ರಾಣಿ ಚ ಯಾನಿ ಲೋಕೇ ತ್ರಯೋ ಲೋಕಾ ಲೋಕಪಾಲಾಸ್ತ್ರಯೀ ಚ। ತ್ರಯೋಽಗ್ನಯಶ್ಚಾಹುತಯಶ್ಚ ಪಞ್ಚ ಸರ್ವೇ ದೇವಾ ದೇವಕೀಪುತ್ರ ಏವ' (ಮಹಾ.ಭಾ.ಅನು.೧೫೮-೩೧) ಇತಿ ಮಹಾಭಾರತೇ। ೯೯೦. ಸ್ರಷ್ಟಾ ಸರ್ವಸ್ಯ ಲೋಕಸ್ಯ। ೯೯೧. ಕ್ಷಿತೇಃ ಭೂಮೇಃ ಈಶಃ ಕ್ಷಿತೀಶಃ ದಶರಥಾತ್ಮಜಃ। ೯೯೨. ಕೀರ್ತಿತಃ ಪೂಜಿತೋ ಧ್ಯಾತಃ ಸ್ಮೃತಃ ಪಾಪರಾಶಿಂ ನಾಶಯನ್ ಪಾಪನಾಶನಃ। 'ಪಕ್ಷೋಪವಾಸಾದ್ ಯತ್ಪಾಪಂ ನಶ್ಯತೇ

---

1. ಸಾಮಗಳೆಲ್ಲದರ ಸಾರವೂ ವಿಷ್ಣುವೇ - ಎಂದಭಿಪ್ರಾಯ
2. ವೈಖಾನನೆಂದರೆ ವಾರಾಹಮೂರ್ತಿಯಾದ ವಿಷ್ಣುವು - ಎಂದಭಿಪ್ರಾಯ.

ನೃಣಾಮ್। ಪ್ರಾಣಾಯಾಮಸಹಸ್ರೇಣ ಯತ್ಪಾಪಂ ಪುರುಷಸ್ಯ ಪ್ರಣಶ್ಯತಿ। ಪ್ರಾಣಾಯಾಮ ಶತೇನೈವ ತತ್ಪಾಪಂ ನಶ್ಯತೇ ನೃಣಾಮ್। ಕ್ಷಣಮಾತ್ರೇಣ ತತ್ಪಾಪಂ ಹರೇರ್ಧ್ಯಾನಾತ್ ಪ್ರಣಶ್ಯತಿ' ಇತಿ ವೃದ್ಧಶಾತಾತಪೇ॥೧೧೯॥

(ಭಾವ್ಯಾರ್ಥ)

ದೇವಕಿಯ ಮಗನು **ದೇವಕೀನಂದನನು.** ಲೋಕಗಳಲ್ಲಿರುವ ಶುಭ್ರವಾದ ಯಾವ ಜ್ಯೋತಿಗಳಿವೆಯೋ (ಅವುಗಳು), 'ಮೂರು ಲೋಕಗಳು, ಲೋಕಪಾಲಕರುಗಳು, ವೇದಗಳು, ತ್ರೇತಾಗ್ನಿಗಳು, ಐದು ಆಹುತಿಗಳು, ಎಲ್ಲಾ ದೇವತೆಗಳು - ಎಲ್ಲವೂ ದೇವಕೀಪುತ್ರ (ನಾದ[1] ಶ್ರೀಕೃಷ್ಣನೇ), ಎಂದು **ಮಹಾಭಾರತದಲ್ಲಿದೆ.** ಎಲ್ಲಾ ಲೋಕಗಳ ಸೃಷ್ಟಿಕರ್ತನಾದ್ದರಿಂದ **ಸ್ರಷ್ಟಾ** ಎನಿಸುವವನು. ಕ್ಷಿತಿಗೆ ಎಂದರೆ ಭೂಮಿಗೆ ಒಡೆಯನಾದ್ದರಿಂದ **ಕ್ಷಿತೀಶನು.** ದಶರಥಪುತ್ರನಾದ (ಶ್ರೀರಾಮ)ನೆಂದರ್ಥ. ಕೀರ್ತನೆ ಮಾಡಿದವರ (ಮತ್ತು) ಪೂಜೆ, ಧ್ಯಾನ, ಸ್ಮರಣೆ - ಇವುಗಳನ್ನು ಮಾಡಿದವರ ಪಾಪರಾಶಿಗಳನ್ನು ಕಳೆಯುತ್ತಾನಾದ್ದರಿಂದ **ಪಾಪನಾಶನನು.** 'ಪಕ್ಷ (೧೫ ದಿನಗಳ) ಕಾಲವೂ ಉಪವಾಸಮಾಡಿದ್ದರಿಂದ ಪುರುಷನ ಯಾವ ಪಾಪವು ನಾಶವಾಗುವದೋ ಆ ಪಾಪವು ಒಂದುನೂರು ಪ್ರಾಣಾಯಾಮಗಳನ್ನು ಮಾಡುವದರಿಂದಲೇ ಮನುಷ್ಯರಿಗೆ ಕಳೆಯುತ್ತದೆ. ಸಾವಿರಪ್ರಾಣಾಯಾಮಗಳಿಂದ ಮನುಷ್ಯರ ಯಾವ ಪಾಪವು ನಾಶವಾಗುವದೋ ಆ ಪಾಪವು ಕ್ಷಣಕಾಲ ಹರಿಯ ಧ್ಯಾನಮಾಡಿದ ಮಾತ್ರದಿಂದ ನಾಶವಾಗುವದು' ಎಂದು **ವೃದ್ಧಶಾತಾತಪ** (ಸ್ಮೃತಿ)ಯಿದೆ.

**ಶಙ್ಖಭೃನ್ನನ್ದಕೀ ಚಕ್ರೀ ಶಾರ್ಙ್ಗಧನ್ವಾ ಗದಾಧರಃ।**
**ರಥಾಙ್ಗಪಾಣಿರಕ್ಷೋಭ್ಯಃ ಸರ್ವಪ್ರಹರಣಾಯುಧಃ॥**
**ಸರ್ವಪ್ರಹರಣಾಯುಧ ಓಂ ನಮ ಇತಿ ॥೧೨೦॥**

(ಭಾಷ್ಯ)

೯೯೩. ಪಾಞ್ಚಜನ್ಯಾಖ್ಯಂ ಭೂತಾದ್ಯಹಙ್ಕಾರಾತ್ಮಕಂ ಶಙ್ಖಂ ಬಿಭ್ರತ್ ಶಙ್ಖಭೃತ್। ೯೯೪. ವಿದ್ಯಾಮಯೋ ನನ್ದಕಾಖ್ಯೋ ಅಸಿರಸ್ಯೇತಿ ನನ್ದಕೀ। ೯೯೫. ಮನಸ್ತತ್ವಾತ್ಮಕಂ ಸುದರ್ಶನಾಖ್ಯಂ ಚಕ್ರಮಸ್ಯಾಸ್ತೀತಿ, ಸಂಸಾರಚಕ್ರಮಸ್ಯ ಆಜ್ಞಯಾ ಪರಿವರ್ತತೇ ಇತಿ ವಾ ಚಕ್ರೀ। ೯೯೬. ಇನ್ದ್ರಿಯಾದ್ಯಹಙ್ಕಾರಾತ್ಮಕಂ ಶಾರ್ಙ್ಗಂ ನಾಮ ಧನುರಸ್ಯಾಸ್ತೀತಿ ಶಾರ್ಙ್ಗಧನ್ವಾ। 'ಧನುಷಶ್ಚ' (ಪಾ.ಸೂ.೫-೪-೧೩೨) ಇತ್ಯನಙ್ ಸಮಾಸಾನ್ತಃ।೯೯೭. ಬುದ್ಧಿತತ್ತ್ವಾತ್ಮಿಕಾಂ ಕೌಮೋದಕೀಂ ನಾಮ ಗದಾಂ ವಹನ್ ಗಧಾಧರಃ॥

---

1. 'ಏಕಂ ಶಾಸ್ತ್ರಂ ದೇವಕೀಪುತ್ರಗೀತಂ। ಏಕೋ ದೇವೋ ದೇವಕೀಪುತ್ರ ಏವ। ಏಕೋ ಮನ್ತ್ರಸ್ತಸ್ಯ ನಾಮಾನಿ ಯಾನಿ। ಕರ್ಮಾಪ್ಯೇಕಂ ತಸ್ಯ ದೇವಸ್ಯ ಸೇವಾ' ಎಂಬ ಶ್ಲೋಕವನ್ನೂ ಇಲ್ಲಿ ಸ್ಮರಿಸಬಹುದಾಗಿದೆ.

(ಭಾಷ್ಯಾರ್ಥ)

ಭೂತಾದ್ಯಹಂಕಾರಾತ್ಮಕ[1]ವಾದ ಪಾಂಚಜನ್ಯವೆಂಬ ಶಂಖವನ್ನು ಧರಿಸಿರುವನಾದ್ದರಿಂದ **ಶಂಖಭೃತ್** (ಎನಿಸುವವನು). ವಿದ್ಯಾಮಯುವಾದ ನಂದಕವೆಂಬ ಕತ್ತಿಯು ಇವನದಾದ್ದರಿಂದ **ನಂದಕಿಯು.** ಮನಸ್ತತ್ತ್ವಾತ್ಮಕವಾದ ಸುದರ್ಶನವೆಂಬ ಚಕ್ರವು ಇವನಿಗೆ ಇದೆ; ಅಥವಾ ಸಂಸಾರಚಕ್ರವು ಇವನ ಅಪ್ಪಣೆಯಿಂದ ತಿರುಗುತ್ತದೆಯಾದ್ದರಿಂದ **ಚಕ್ರಿಯು.** ಇಂದ್ರಿಯಾದಿಯಾದ ಅಹಂಕಾರಾತ್ಮಕವಾದ ಶಾರ್ಙ್ಗವೆಂಬ ಬಿಲ್ಲು ಇವನಿಗೆ ಇದೆಯಾದ್ದರಿಂದ **ಶಾರ್ಙ್ಗಧನ್ವನು.** 'ಧನುಷಶ್ಚ' ಎಂಬ (ಪಾಣಿನಿಯ ಸೂತ್ರದಂತೆ) ಸಮಾಸಾನ್ತದಲ್ಲಿ 'ಅನಙ್' ಎಂಬ ಪ್ರತ್ಯಯವು ಬಂದು (ಧನ್ವಾ) ಎಂದಾಗಿರುತ್ತದೆ. ಬುದ್ಧಿತತ್ತ್ವಾತ್ಮಕವಾದ ಕೌಮೋದಕೀ ಎಂಬ ಗದೆಯನ್ನು ಧರಿಸಿರುವದರಿಂದ **ಗದಾಧರನು.**

(ಭಾಷ್ಯ)

೯೯೮. ರಥಾಙ್ಗಂ ಚಕ್ರಮ್ ಅಸ್ಯ ಪಾಣೌ ಸ್ಥಿತಮಿತಿ ರಥಾಙ್ಗಪಾಣಿಃ। ೯೯೯. ಅತ ಏವ ಅಶಕ್ಯಕ್ಷೋಭಣ ಇತಿ ಅಕ್ಷೋಭ್ಯಃ। ೧೦೦೦. ಏತಾವನ್ತ್ಯೇವ ಆಯುಧಾನಿ ಅಸ್ಯೇತಿ ನ ನಿಯಮ್ಯತೇ, ಅಪಿ ತು ಸರ್ವಾಣ್ಯೇವ ಪ್ರಹರಣಾನ್ಯಾಯುಧಾನಿ ಅಸ್ಯ ಇತಿ ಸರ್ವಪ್ರಹರಣಾಯುಧಃ। ಆಯುಧತ್ವೇನ ಅಪ್ರಸಿದ್ಧಾನ್ಯಪಿ ಕರಜಾದೀನಿ ಅಸ್ಯ ಆಯುಧಾನಿ ಭವನ್ತೀತಿ। ಅನ್ತೇ ಸರ್ವಪ್ರಹರಣಾಯುಧ ಇತಿ ವಚನಂ ಸತ್ಯಸಙ್ಕಲ್ಪತ್ವೇನ ಸರ್ವೇಶ್ವರತ್ವಂ ದರ್ಶಯಿತುಮ್। 'ಏಷ ಸರ್ವೇಶ್ವರಃ' (ಬೃ. ೪-೪-೨೨) ಇತಿ ಶ್ರುತೇಃ। ದ್ವಿರ್ವಚನಂ ಸಮಾಪ್ತಿಂ ದ್ಯೋತಯತಿ॥

(ಭಾಷ್ಯಾರ್ಥ)

ರಥಾಂಗವು ಎಂದರೆ ಚಕ್ರವು (ಇದು) ಇವನ ಕೈಯಲ್ಲಿದೆಯಾಗಿ **ರಥಾಂಗಪಾಣಿ** (ಎನಿಸುವನು). ಆದ್ದರಿಂದಲೇ ಇವನು ಶತ್ರುಗಳಿಂದ ಧರ್ಷಣಕ್ಕೆ (ಹಿಮ್ಮೆಟ್ಟಿಸಲು) ಅಸಾಧ್ಯನು ಎಂಬರ್ಥದಲ್ಲಿ **ಅಕ್ಷೋಭ್ಯನು.** ಇವನ ಆಯುಧಗಳು ಇಷ್ಟೇ ಎಂದು ಗೊತ್ತುಮಾಡಲು ಆಗುವದಿಲ್ಲ; ಆದರೆ ಎಲ್ಲವೂ ಇವನಿಗೆ ಹೊಡೆಯುವ ಆಯುಧಗಳೇ ಎಂಬರ್ಥದಲ್ಲಿ **ಸರ್ವಪ್ರಹರಣಾಯುಧನು.** ಆಯುಧಗಳೆಂದು ಪ್ರಸಿದ್ಧವಲ್ಲದ ಉಗುರು - ಮುಂತಾದವುಗಳು ಕೂಡ ಇವನಿಗೆ ಆಯುಧಗಳಾಗಿವೆ.[2] ಕಡೆಯಲ್ಲಿ ಸರ್ವಪ್ರಹರಣಾಯುಧನು ಎಂದು ಹೇಳಿರುವದು (ಭಗವಂತನು) ಸತ್ಯಸಂಕಲ್ಪನಾದ್ದರಿಂದ ಸರ್ವೇಶ್ವರನು ಎಂದು ತೋರಿಸುವದಕ್ಕಾಗಿ (ಎಂದು ತಿಳಿಯಬೇಕು). 'ಇವನೇ

---

1. ಭೂತಾದಿ, ಇಂದ್ರಿಯಾದಿ, ಸಾತ್ತ್ವಿಕ - ಎಂದು ಅಹಂಕಾರವು ಮೂರು ಬಗೆ, ವಿಷ್ಣುಪುರಾಣ ೧-೨-೩ನ್ನು ನೋಡಿರಿ.

2. ನರಸಿಂಹಾವತಾರದಲ್ಲಿ ಉಗುರಿನ ತುದಿಯಿಂದ ದೈತ್ಯನನ್ನು ಸಂಹರಿಸಿದ ಸರ್ವಶಕ್ತನು ಎಂಬುದರ ಸೂಚನೆಯಿದು.

ಸರ್ವೇಶ್ವರನು' ಎಂದು ಶ್ರುತಿ ಇದೆ. ಎರಡು ಬಾರಿ ಹೇಳಿರುವದು (ಸಹಸ್ರನಾಮಗಳು) ಪೂರೈಸಿದವೆಂದು ತಿಳಿಸುವದಕ್ಕಾಗಿ (ಎಂದು ಭಾವ).

(ಭಾಷ್ಯ)

ಓಙ್ಕಾರಶ್ಚ ಮಙ್ಗಲಾರ್ಥಃ। 'ಓಂಕಾರಶ್ಚಾಥಶಬ್ದಶ್ಚ ದ್ವಾವೇತೌ ಬ್ರಹ್ಮಣಃ ಪುರಾ। ಕಣ್ಠಂ ಭಿತ್ವಾ ವಿನಿರ್ಯಾತೌ ತಸ್ಮಾನ್ಮಾಙ್ಗಲಿಕಾವುಭೌ' (ಬೃಹನ್ನಾರ.೧-೫೧-೧೦) ಇತಿ ವಚನಾತ್। ಅನ್ತೇ ನಮಃ ಇತ್ಯುಕ್ತ್ವಾ ಪರಿಚರಣಂ ಕೃತವಾನ್। 'ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ' (ಈ.೧೮) ಇತಿ ಮನ್ತ್ರವರ್ಣಾತ್। 'ಧನ್ಯಂ ತದೇವ ಲಗ್ನಂ ತನ್ನಕ್ಷತ್ರಂ ತದೇವ ಪುಣ್ಯಮಹಃ। ಕರಣಸ್ಯ ಚ ಸಾ ಸಿದ್ಧಿರ್ಯತ್ರ ಹರಿಃ ಪ್ರಾಙ್ ನಮಸ್ಕ್ರಿಯತೇ' ಇತಿ ಚ। ಪ್ರಾಗಿತ್ಯುಪಲಕ್ಷಣಮ್। ಅನ್ತೇಽಪಿ ನಮಸ್ಕಾರಸ್ಯ ಶಿಷ್ಟೈರಾಚರಣಾತ್। ನಮಸ್ಕಾರಫಲಂ ಪ್ರಾಗೇವ ದರ್ಶಿತಮ್। 'ಏಕೋಽಪಿ ಕೃಷ್ಣಸ್ಯ ಕೃತಃ ಪ್ರಣಾಮೋ ದಶಾಶ್ವಮೇಧಾವಭೃಥೇನ ತುಲ್ಯಃ। ದಶಾಶ್ವಮೇಧೀ ಪುನರೇತಿ ಜನ್ಮ ಕೃಷ್ಣಪ್ರಣಾಮೀ ನ ಪುನರ್ಭವಾಯ' ॥ 'ಅತಸೀಪುಷ್ಪಸಂಕಾಶಂ ಪೀತವಾಸಸಮಚ್ಯುತಮ್। ಯೇ ನಮಸ್ಯನ್ತಿ ಗೋವಿನ್ದಂ ನ ತೇಷಾಂ ವಿದ್ಯತೇ ಭಯಮ್॥' (ಮಹಾಭಾ. ಶಾಂ. ೪೭-೯೦,೯೧) 'ಲೋಕತ್ರಯಾಧಿಪತಿಮಪ್ರತಿಮಪ್ರಭಾವಂ। ಈಷತ್ ಪ್ರಣಮ್ಯ ಶಿರಸಾ ಪ್ರಭವಿಷ್ಣುಮೀಶಮ್। ಜನ್ಮಾನ್ತರಪ್ರಲಯಕಲ್ಪಸಹಸ್ರಜಾತಮ್। ಆಶುಪ್ರಣಾಶಮುಪಯಾತಿ ನರಸ್ಯ ಪಾಪಮ್' ॥೧೨೦॥

॥ಇತಿ ನಾಮ್ನಾಂ ದಶಮಂ ಶತಂ ವಿವೃತಮ್॥

(ಭಾಷ್ಯಾರ್ಥ)

ಓಂಕಾರವು ಮಂಗಳವನ್ನು ಸೂಚಿಸುತ್ತದೆ. 'ಓಂಕಾರ, ಅಥ - ಎಂಬ ಶಬ್ದಗಳೆರಡೂ ಮೊದಲು ಬ್ರಹ್ಮನ ಕಂಠವನ್ನು ಒಡೆದುಕೊಂಡು ಹೊರಬಂದವು. ಆದ್ದರಿಂದ ಇವೆರಡೂ ಮಂಗಲಪ್ರಯೋಜನವುಳ್ಳವು' ಎಂದು ವಚನವಿದೆ. ಕೊನೆಯಲ್ಲಿ 'ನಮಃ' ಎಂದು ಹೇಳಿರುವದರಿಂದ (ಭೀಷ್ಮನು) ಪರಿಚರ್ಯೆಯನ್ನು (ನಮಸ್ಕಾರ ಶಬ್ದೋಚ್ಚಾರಣೆಯಿಂದ) ಮಾಡಿದ್ದಾನೆ. 'ನಿನಗೆ ಹೆಚ್ಚಿನ (ಬಹಳವಾದ) ನಮಸ್ಕಾರೋಕ್ತಿಯನ್ನು ಹೇಳುತ್ತಿದ್ದೇವೆ' ಎಂದು ಮಂತ್ರವರ್ಣವಿದೆ.[1] "ಎಲ್ಲಿ ಶ್ರೀಹರಿಯನ್ನು ಮೊದಲು ನಮಸ್ಕರಿಸುವರೋ ಅದೇ ಲಗ್ನವೇ ಧನ್ಯವು. ಅದೇ ನಕ್ಷತ್ರ; ಅದೇ ಹಗಲು ಪುಣ್ಯವಾದದ್ದು. ಕರಣದ ಸಿದ್ಧಿಯೂ ಅದೇ" - ಎಂದೂ ಹೇಳಿದೆ. (ಈ ಶ್ಲೋಕದಲ್ಲಿ) ಮೊದಲು ಎಂದು ಹೇಳಿರುವದು ಉಪಲಕ್ಷಣವಾಗಿದೆ. ಏಕೆಂದರೆ

1. ಕರ್ಮನಿಷ್ಠನಾದವನು ತನ್ನ ಅವಸಾನಕಾಲದಲ್ಲಿ ಅಗ್ನಿಪರಿಚರ್ಯೆಯನ್ನು ಮಾಡಲು ಅಶಕ್ತನಾದಾಗ ಈ ಮಂತ್ರದಿಂದ ಪ್ರಾರ್ಥಿಸುತ್ತಾನೆಂತ ಈಶಾವಾಸ್ಯೋಪನಿಷತ್ತಿನಲ್ಲಿದೆ. ಭೀಷ್ಮರು ಶರಪಂಜರದಲ್ಲಿ ಮಲಗಿದ್ದುಕೊಂಡೇ ಧರ್ಮರಾಯನಿಗೆ ಉಪದೇಶ ಮಾಡಿದರಾದ್ದರಿಂದ ಅಶಕ್ತತೆಯಿಂದ ವಾಚಿಕ ನಮಸ್ಕಾರ ರೂಪದ ಪರಿಚರ್ಯೆಯನ್ನು ಈ ಸ್ತೋತ್ರದ ಕೊನೆಯಲ್ಲಿ ಮಾಡಿದ್ದಾರೆಂಬುದನ್ನು ಈ ವಾಕ್ಯದಿಂದ ಸಮರ್ಥಿಸಿದೆ.

ಶಿಷ್ಟರು (ಕಾರ್ಯಗಳ) ಕೊನೆಯಲ್ಲೂ ನಮಸ್ಕಾರವನ್ನು (ಮಾಡುವದು) ಆಚರಣೆಯಲ್ಲಿದೆ. ನಮಸ್ಕಾರದ ಫಲವೇನೆಂಬುದನ್ನು ಹಿಂದೆಯೇ ಹೇಳಿದೆ."ಕೃಷ್ಣನಿಗೆ ಚೆನ್ನಾಗಿ ಮಾಡಿದ ಒಂದೇ ನಮಸ್ಕಾರವು ಕೂಡ ಹತ್ತು ಅಶ್ವಮೇಧಯಜ್ಞಗಳ ಫಲಕ್ಕೆ ಸಮಾನವು. (ಅಥವಾ ಅದಕ್ಕಿಂತಲೂ ಹೆಚ್ಚು; ಏಕೆಂದರೆ) ದಶಾಶ್ವಮೇಧಯಾಜಿಯು (ಪುಣ್ಯವು ಮುಗಿದ ಬಳಿಕ) ಮತ್ತೆ ಜನ್ಮವನ್ನು ಪಡೆಯುವನು; ಕೃಷ್ಣನಿಗೆ ನಮಸ್ಕರಿಸಿದವನು ಎಂದಿಗೂ ಸಂಸಾರಕ್ಕೆ ಹಿಂತಿರುಗುವದಿಲ್ಲ" "ಅಗಸೆಹೂವಿನಂತೆ ಕಾಂತಿಯುಳ್ಳ ಪೀತಾಂಬರಧಾರಿಯಾದ ಅಚ್ಯುತನಾದ ಈ ಗೋವಿಂದನನ್ನು ಯಾರು ನಮಸ್ಕರಿಸುವರೋ ಅವರಿಗೆ ಭಯವಿಲ್ಲ". ಮೂರು ಲೋಕಗಳಿಗೂ ಒಡೆಯನಾದ, ಮಿಗಿಲಿಲ್ಲದ ಪರಾಕ್ರಮವುಳ್ಳ ಸಮರ್ಥನಾದ, ಈಶನಾದ (ವಿಷ್ಣುವನ್ನು) ಸ್ವಲ್ಪ ನಮಸ್ಕರಿಸಿದರೆ (ಅಂಥ) ಮನುಷ್ಯನ - ಸಹಸ್ರಾರುಪ್ರಲಯಕಲ್ಪಗಳಲ್ಲಿ, ಜನ್ಮಾಂತರಗಳಲ್ಲಿ ಮಾಡಿರುವ - ಪಾಪಗಳೆಲ್ಲವೂ ಕೂಡಲೆ ವಿನಾಶವನ್ನು ಹೊಂದುವವು' (?) ಎಂದೂ ಹೇಳಿದೆ.

ಹೀಗೆ ನಾಮಗಳ ಹತ್ತನೆಯ ಶತಕವನ್ನು ವಿವರಿಸಿದ್ದಾಯಿತು.

## ಉಪಸಂಹಾರ

**ಇತೀದಂ ಕೀರ್ತನೀಯಸ್ಯ ಕೇಶವಸ್ಯ ಮಹಾತ್ಮನಃ।**
**ನಾಮ್ನಾಂ ಸಹಸ್ರಂ ದಿವ್ಯಾನಾಮಶೇಷೇಣ ಪ್ರಕೀರ್ತಿತಮ್ ॥೧೨೧॥**

೧೨೧. ಕೀರ್ತನೀಯನಾದ ಮಹಾತ್ಮನಾದ ಕೇಶವನ ದಿವ್ಯವಾದ ನಾಮಗಳ ಸಹಸ್ರವು ಪೂರ್ಣವಾಗಿ ಈ ರೀತಿಯಾಗಿ ಚೆನ್ನಾಗಿ ಕೀರ್ತನೆಮಾಡಲ್ಪಟ್ಟಿತು.

### (ಭಾಷ್ಯ)

ಇತೀದಮ್ - ಇತ್ಯನೇನ ನಾಮಸಹಸ್ರಮ್ ಅನ್ಯೂನಾನತಿರಿಕ್ತಮ್ ಉಕ್ತಮಿತಿ ದರ್ಶಯಿತಿ। ದಿವ್ಯಾನಾಮ್ ಅಪ್ರಾಕೃತಾನಾಂ ನಾಮ್ನಾಂ ಸಹಸ್ರಂ ಪ್ರಕೀರ್ತಿತಮ್ ಇತಿ ವದತಾ ಪ್ರಕಾರಾನ್ತರೇಣಾಪಿ ಸಙ್ಖ್ಯೋಪಪತ್ತಿರ್ದರ್ಶಿತಾ॥

### (ಭಾಷ್ಯಾರ್ಥ)

ಇತೀದಮ್ - ಎಂದದ್ದರಿಂದ ಸಹಸ್ರನಾಮಗಳು ಹೆಚ್ಚುಕಡಿಮೆಯಿಲ್ಲದೆ (ಸರಿಯಾಗಿ) ಹೇಳಲ್ಪಟ್ಟಿವೆ - ಎಂಬುದನ್ನು ತಿಳಿಸುತ್ತಾರೆ. ಅಪ್ರಾಕೃತ (ಪ್ರಕೃತಿ ಸಂಬಂಧವಿಲ್ಲ)ವಾದ ದಿವ್ಯವಾದ ಸಹಸ್ರನಾಮಗಳು ಕೀರ್ತನೆಮಾಡಲ್ಪಟ್ಟವು - ಎಂದು ಹೇಳುವದರ ಮೂಲಕ ಮತ್ತೊಂದು ರೀತಿಯಿಂದಲೂ (ಸಹಸ್ರ) ಸಂಖ್ಯೆಗಳು[1] ಸರಿಯಾಗಿವೆಯೆಂಬುದನ್ನು ಸ್ಪಷ್ಟಗೊಳಿಸಿದಂತಾಗಿದೆ.

## ಫಲಶ್ರುತಿ

**ಯ ಇದಂ ಶೃಣುಯಾನ್ನಿತ್ಯಂ ಯಶ್ಚಾಪಿ ಪರಿಕೀರ್ತಯೇತ್।**
**ನಾಶುಭಂ ಪ್ರಾಪ್ನುಯಾತ್ ಕಿಞ್ಚಿತ್ ಸೋಽಮುತ್ರೇಹ ಚ ಮಾನವಃ ॥೧೨೨॥**

೧೨೨. ಯಾವ ಮನುಷ್ಯನು ಇದನ್ನು ನಿತ್ಯವೂ ಕೇಳುವನೋ, ಯಾವನು ಕೀರ್ತನೆಮಾಡುವನೋ ಅವನೂ ಇಲ್ಲಿ ಹಾಗೂ ಪರಲೋಕದಲ್ಲಿ ಸ್ವಲ್ಪವೂ ಕೆಟ್ಟದ್ದನ್ನು ಪಡೆಯಲಾರನು.

### (ಭಾಷ್ಯ)

ಪ್ರಕ್ರಮೇ 'ಕಿಂ ಜಪನ್ ಮುಚ್ಯತೇ ಜನ್ತುಃ' (ಶ್ಲೋ.೩) ಇತಿ ಜಪಶಬ್ದೋಪಾದಾನಾತ್ ಕೀರ್ತಯೇದ್ ಇತ್ಯನೇನಾಪಿ ತ್ರಿವಿಧಜಪೋ ಲಕ್ಷ್ಯತೇ। ಉಚ್ಚೋಪಾಂಶುಮಾನಸಲಕ್ಷಣಃ ತ್ರಿವಿಧೋ ಜಪಃ॥

'ಯ ಇದಂ ಶೃಣುಯಾತ್' ಇತ್ಯಾದಿಃ ಸ್ಪಷ್ಟಾರ್ಥಃ। ಪರಲೋಕಂ ಪ್ರಾಪ್ತಸ್ಯಾಪಿ

1. ನಾಮಗಳ ಸಂಖ್ಯೆಯು ಲೆಕ್ಕಕ್ಕೆ ಸರಿಯಾಗಿದ್ದರೆ ಮಾತ್ರ, ಸಹಸ್ರನಾಮಗಳೆನಿಸುವವು - ಎಂದು ಅಭಿಪ್ರಾಯ.

ಯಯಾತಿನಹುಷಾದಿವತ್ ಅಶುಭಪ್ರಾಪ್ತ್ಯಭಾವಂ ಸೂಚಯಿತುಮ್' 'ಅಮುತ್ರ' ಇತ್ಯುಕ್ತಮ್॥

(ಭಾಷ್ಯಾರ್ಥ)

ಉಪಕ್ರಮದಲ್ಲಿ 'ಏನನ್ನು ಜಪಮಾಡುವ ಜಂತುವು ಮುಕ್ತನಾಗುತ್ತಾನೆ?' (ಶ್ಲೋ.೩) ಎಂಬಲ್ಲಿ ಜಪವೆಂಬ ಶಬ್ದವನ್ನು ಸ್ವೀಕರಿಸಿರುವದರಿಂದ (ಕೊನೆಯಲ್ಲಿ) 'ಕೀರ್ತಯೇತ್' ಎಂಬುದರಿಂದಲೂ ಮೂರು ವಿಧವಾದ ಜಪವನ್ನೇ ಹೇಳಿದೆ - ಎಂದು ಕಂಡುಬರುತ್ತದೆ. ಉಚ್ಚ, ಉಪಾಂಶು, ಮಾನಸ ಎಂಬಿವೇ ಮೂರು ವಿಧವಾದ ಜಪವು.

'ಯಾವನು ಇದನ್ನು ಕೇಳುವನೋ' ಮುಂತಾದ (ಶ್ಲೋಕವು) ಸ್ಪಷ್ಟವಾದ ಅರ್ಥವುಳ್ಳದ್ದಾಗಿದೆ. ಪರಲೋಕವನ್ನೇ ಹೊಂದಿದರೂ ಯಯಾತಿ, ನಹುಷ - ಮುಂತಾದವರಂತೆ [1] ಅಶುಭವನ್ನು ಹೊಂದುವದಿಲ್ಲವೆಂತ ಸೂಚಿಸುವದಕ್ಕಾಗಿ 'ಅಮುತ್ರ' (ಪರಲೋಕದಲ್ಲಿ) ಎಂದು ಹೇಳಿದೆ.

**ವೇದಾನ್ತಗೋ ಬ್ರಾಹ್ಮಣಃ ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್।**
**ವೈಶ್ಯೋ ಧನಸಮೃದ್ಧಃ ಸ್ಯಾತ್ ಶೂದ್ರಃ ಸುಖಮವಾಪ್ನುಯಾತ್॥॥೧೨೩॥**

೧೨೩. ಬ್ರಾಹ್ಮಣನು ವೇದಾಂತಗಳನ್ನು ಬಲ್ಲವನಾಗುವನು, ಕ್ಷತ್ರಿಯನು ವಿಜಯಿಯಾಗುವನು, ವೈಶ್ಯನು ಧನಸಮೃದ್ಧನಾಗುವನು, ಶೂದ್ರನು ಸುಖವನ್ನು ಪಡೆಯುವನು.

(ಭಾಷ್ಯ)

ವೇದಾನ್ತಾನಾಮ್ ಉಪನಿಷದಾಮ್ ಅರ್ಥಂ ಬ್ರಹ್ಮ ಗಚ್ಛತಿ ಅವಗಚ್ಛತೀತಿ ವೇದಾನ್ತಗಃ। 'ಕಿಂ ಜಪನ್ ಮುಚ್ಯತೇ ಜನ್ತುರ್ಜನ್ಮಸಂಸಾರಬನ್ಧನಾತ್' (ಶ್ಲೋ.೩) ಇತಿ ವಚನಾತ್ ಜಪಕರ್ಮಣಾ ಸಾಕ್ಷಾತ್ ಮುಕ್ತಿಶಙ್ಕಾಯಾಂ ಕರ್ಮಣಾಂ ಸಾಕ್ಷಾನ್ಮುಕ್ತಿಹೇತುತ್ವಂ ನಾಸ್ತಿ, ಅಪಿ ತು ಜ್ಞಾನೇನೈವ ಮೋಕ್ಷಃ ಇತಿ ದರ್ಶಯಿತುಮ್ 'ವೇದಾನ್ತಗೋ ಬ್ರಾಹ್ಮಣಃ ಸ್ಯಾತ್' ಇತ್ಯುಕ್ತಮ್। ಕರ್ಮಣಾಂ ತು ಅನ್ತಃಕರಣಶುದ್ಧಿದ್ವಾರೇಣ ಮೋಕ್ಷಹೇತುತ್ವಮ್।

---

1. ಯಯಾತಿಯು ತಾನು ಮಾಡಿದ ಧರ್ಮವನ್ನು ಹೊಗಳಿಕೊಂಡು ದೇವತೆಗಳನ್ನು ಕಡೆಗಣಿಸಿದ್ದರಿಂದಲೂ, ನಹುಷನು ಬ್ರಾಹ್ಮಣಾವಮಾನ ಮಾಡಿದ್ದರಿಂದ ಎಂದರೆ ಸಪ್ತರ್ಷಿಗಳಿಂದ ಪಲ್ಲಕ್ಕಿಯನ್ನು ಹೊರಿಸಿದ್ದರಿಂದಲೂ ಇಬ್ಬರೂ ಸ್ವರ್ಗದಿಂದ ಚ್ಯುತರಾದರು. ಅವರಿಗೆ ಧರ್ಮದ ಫಲವು ದಕ್ಕಲಿಲ್ಲ. ಆದರೆ ಈ ಸ್ತೋತ್ರಪಾಠಕನಿಗೆ ಹಾಗೆ ಆಗುವದಿಲ್ಲ ಎಂದಭಿಪ್ರಾಯ.

ಕಷಾಯಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾ ಗತಿಃ।
ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ॥ [1]

ನಿತ್ಯೈರ್ಜ್ಞಾನಂ ಸಮಾಸಾದ್ಯ ನರೋ ಬನ್ಧಾತ್ ಪ್ರಮುಚ್ಯತೇ।
ಧರ್ಮಾತ್ ಸುಖಂ ಚ ಜ್ಞಾನಂ ಚ ಜ್ಞಾನಾನ್ಮೋಕ್ಷೋಽಧಿಗಮ್ಯತೇ॥

ಯೋಗಿನಃ ಕರ್ಮ ಕುರ್ವನ್ತಿ ಸಙ್ಗಂ ತ್ಯಕ್ತ್ವಾಽಽತ್ಮಶುದ್ಧಯೇ। [2]
ಕರ್ಮಣಾ ಬಧ್ಯತೇ ಜನ್ತುರ್ವಿದ್ಯಯಾ ಚ ವಿಮುಚ್ಯತೇ॥

ತಸ್ಮಾತ್ ಕರ್ಮ ನ ಕುರ್ವನ್ತಿ ಯತಯಃ ಪಾರದರ್ಶಿನಃ। [3]
ಯಥೋಕ್ತಾನ್ಯಪಿ ಕರ್ಮಾಣಿ ಪರಿಹಾಯ ದ್ವಿಜೋತ್ತಮಃ।

ಆತ್ಮಜ್ಞಾನೇ ಶಮೇ ಚ ಸ್ಯಾದ್ ವೇದಾಭ್ಯಾಸೇ ಚ ಯತ್ನವಾನ್॥ [4]
ತಪಸಾ ಕಲ್ಮಷಂ ಹನ್ತಿ ವಿದ್ಯಯಾಽಮೃತಮಶ್ನುತೇ॥ [5]

ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ ಪಾಪಸ್ಯ ಕರ್ಮಣಃ।
ಯಥಾದರ್ಶತಲಪ್ರಖ್ಯೇ ಪಶ್ಯತ್ಯಾತ್ಮಾನಮಾತ್ಮನಿ॥ [6]

ಇತ್ಯಾದಿಸ್ಮೃತಿಭ್ಯಃ । 'ತಮೇತಂ ವೇದಾನುವಚನೇನ ಬ್ರಾಹ್ಮಣಾ ವಿವಿದಿಷನ್ತಿ ಯಜ್ಞೇನ ದಾನೇನ ತಪಸಾಽನಾಶಕೇನ' (ಬೃ.೪-೪-೨೨) 'ಯೇನ ಕೇನ ಚ ಯಜೇತ ಅಪಿ ವಾ ದರ್ವಿಹೋಮೇನಾನುಪಹತಮನಾ ಏವ ಭವತಿ'(?) ಇತ್ಯಾದಿಶ್ರುತಿಭ್ಯಶ್ಚ ಜ್ಞಾನಾದೇವ ಮೋಕ್ಷೋ ಭವತಿ। 'ಜ್ಞಾನಾದೇವ ತು ಕೈವಲ್ಯಂ ಪ್ರಾಪ್ಯತೇ ತೇನ ಮುಚ್ಯತೇ', (?) 'ಬ್ರಹ್ಮವಿದಾಪ್ನೋತಿ ಪರಮ್' (ತೈ.೨-೧) 'ತರತಿ ಶೋಕಮಾತ್ಮವಿತ್' (ಛಾಂ. ೭-೧-೩) 'ಬ್ರಹ್ಮ ವೇದ ಬ್ರಹ್ಮೈವ ಭವತಿ' (ಮು.೩-೨-೯), 'ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ' (ಬೃ.೪-೪-೬), 'ತಮೇವ ವಿದಿತ್ವಾ ಅತಿಮೃತ್ಯುಮೇತಿ ನಾನ್ಯಃ ಪನ್ಥಾಃ ವಿದ್ಯತೇಽಯನಾಯ' (ಶ್ವೇ. ೨-೯). 'ಆನನ್ದಂ ಬ್ರಹ್ಮಣೋ ವಿದ್ವಾನ್ ನ ಬಿಭೇತಿ ಕುತಶ್ಚನ' (ತೈ.೨-೯) 'ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತೀ ವಿನಷ್ಟಿಃ' (ಕೇ. ೨-೫) 'ಯದಾ ಚರ್ಮವದಾಕಾಶಂ ವೇಷ್ಟಯಿಷ್ಯನ್ತಿ ಮಾನವಾಃ। ತದಾ ದೇವಮವಿಜ್ಞಾಯ ದುಃಖಸ್ಯಾನ್ತೋ ಭವಿಷ್ಯತಿ' (ಶ್ವೇ. ೭-೨೦) 'ನ ಕರ್ಮಣಾ ನ ಪ್ರಜಯಾ ಧನೇನ

---

1. ಅಚ್ಚಿನ ಮಹಾಭಾರತದಲ್ಲಿ ; 'ಶರೀರಪಕ್ತಿಃ ಕರ್ಮಾಣಿ ಜ್ಞಾನಂ ತು ಪರಮಾ ಗತಿಃ। ಕಷಾಯೇ ಕರ್ಮಭಿಃ ಪಕ್ವೇ ರಸಜ್ಞಾನೇ ಚ ತಿಷ್ಠತಿ' (ಮೋ.ಧ.೨೭೦-೩೮) ಎಂಬ ಶ್ಲೋಕವಿದೆ. ಬ್ರಹ್ಮಸೂತ್ರಶಾಂಕರಭಾಷ್ಯ (೩-೪-೨೬)ದಲ್ಲಿಯೂ 'ಕಷಾಯಪಕ್ತಿಃ' ಎಂದೇ ಶ್ಲೋಕವನ್ನು ಉದಾಹರಿಸಿದೆ. ಆದ್ದರಿಂದ ಈ ಎರಡೂ ಶ್ಲೋಕಗಳು ಬೇರೆ ಬೇರೆಯೋ, ಅಲ್ಲವೋ? ಎಂಬುದನ್ನು ಬಲ್ಲವರು ನಿರ್ಣಯಿಸಬೇಕಾಗಿದೆ.

2. ಗೀ.೫-೧೧
3. ಮಹಾ.ಭಾ.ಶಾಂತಿ. ೨೪೧-೭
4. ಮನು ೧೨-೬೯
5. ಮನು. ೧೨-೧೦೪
6. ಮಹಾ.ಭಾ.ಶಾಂತಿ.೨೦೪-೮

ತ್ಯಾಗೇನೈಕೇ ಅಮೃತತ್ವಮಾನಶುಃ' (ತೈ.ನಾ.೧೨-೨೮) 'ವೇದಾನ್ತವಿಜ್ಞಾನ ಸುನಿಶ್ಚಿತಾರ್ಥಾಸ್ಸಂನ್ಯಾಸಯೋಗಾದ್ ಯತಯಃ ಶುದ್ಧಸತ್ತ್ವಾಃ। ತೇ ಬ್ರಹ್ಮಲೋಕೇಷು ಪರಾನ್ತಕಾಲೇ ಪರಾಮೃತಾಃ ಪರಿಮುಚ್ಯನ್ತಿ ಸರ್ವೇ' (ಮುಂ. ೩-೨೬) ಇತ್ಯಾದಿಶ್ರುತಿಭ್ಯಶ್ಚ॥

ಶೂದ್ರಃ ಸುಖಮವಾಪ್ನುಯಾತ್ ಶ್ರವಣೇನೈವ। ನ ತು ಜಪಯಜ್ಞೇನ। 'ತಸ್ಮಾತ್ ಶೂದ್ರೋ ಯಜ್ಞೇಽನವಕ್ಲೃಪ್ತಃ' (ತೈ.ಸಂ.೭-೧-೧-೬) ಇತಿ ಶ್ರುತೇಃ। 'ಶ್ರಾವಯೇಚ್ಚತುರೋ ವರ್ಣಾನ್ ಕೃತ್ವಾ ಬ್ರಾಹ್ಮಣಮಗ್ರತಃ' (ಮಹಾಭಾ.ಶಾಂ. ೩೨೭-೪೯) ಇತಿ ಮಹಾಭಾರತೇ ಶ್ರವಣಮನುಜ್ಞಾಯತೇ । 'ಸುಗತಿಮಿಯಾತ್ ಶ್ರವಣಾಚ್ಚ ಶೂದ್ರಯೋನಿಃ'(?) ಇತಿ ಹರಿವಂಶೇ। ಯಃ ಶೂದ್ರಃ ಶೃಣುಯಾತ್ ಸಃ ಸುಖಮವಾಪ್ನುಯಾದ್ ಇತಿ ವ್ಯವಹಿತೇನ ಸಂಬನ್ಧಃ। ತ್ರೈವರ್ಣಿಕಾನಾಂ ಕೀರ್ತಯೇದಿತ್ಯನೇನ॥

## (ಭಾಷ್ಯಾರ್ಥ)

ವೇದಾಂತಗಳ ಎಂದರೆ ಉಪನಿಷತ್ತುಗಳ ಅರ್ಥವನ್ನು (ಎಂದರೆ) ಬ್ರಹ್ಮವನ್ನು ಹೊಂದುತ್ತಾನೆ-ಅರಿತುಕೊಳ್ಳುತ್ತಾನೆ; ಆದ್ದರಿಂದ ವೇದಾಂತಗನು. 'ಏನನ್ನು ಜಪಿಸುವ ಜಂತುವು ಜನ್ಮಸಂಸಾರಬಂಧದಿಂದ ಮುಕ್ತನಾಗುವನು?' ಎಂಬ ವಚನದಂತೆ ಜಪಕರ್ಮ (ದಿಂದಲೇ) ನೇರಾಗಿ ಮೋಕ್ಷಪ್ರಾಪ್ತಿಯಾಗುವದೆಂಬ ಸಂಶಯವು ಬರಲಾಗಿ ಕರ್ಮಗಳಿಗೆ ನೇರಾಗಿ ಮೋಕ್ಷಕಾರಣತ್ವವು ಇರುವದಿಲ್ಲ. ಮತ್ತೇನೆಂದರೆ ಜ್ಞಾನದಿಂದಲೇ ಮೋಕ್ಷವು - ಎಂಬುದನ್ನು ತೋರಿಸುವದಕ್ಕಾಗಿ 'ಬ್ರಾಹ್ಮಣನು ವೇದಾಂತವನ್ನು ಬಲ್ಲವನಾಗುವನು' ಎಂದು ಹೇಳಿದೆ. ಕರ್ಮಗಳಿಗೆ ಚಿತ್ತಶುದ್ಧಿಯನ್ನುಂಟುಮಾಡುವದರ ಮೂಲಕ ಮೋಕ್ಷಕಾರಣತ್ವವು (ಇದೆ), "ಕರ್ಮಗಳು, ಮನಸ್ಸಿನ ದೋಷಗಳ ನಿವಾರಣೆಗಾಗಿ (ಹೇಳಲ್ಪಟ್ಟಿವೆ), ಜ್ಞಾನವೇ ಪರಮಗತಿಯು; (ನೇರಾಗಿ ಮೋಕ್ಷಕಾರಣವು). (ಮನಸ್ಸಿನ) ಕಲ್ಮಷವು ಕರ್ಮಗಳಿಂದ ತೊಳೆಯಲ್ಪಡಲಾಗಿ ಅನಂತರ ಜ್ಞಾನವು ಉಂಟಾಗುತ್ತದೆ'. (?) 'ನಿತ್ಯ (ಕರ್ಮ) ಗಳಿಂದ ಮನುಷ್ಯನು ಜ್ಞಾನವನ್ನು ಪಡೆದುಕೊಂಡು ಬಂಧನದಿಂದ ಬಿಡುಗಡೆಯನ್ನು ಹೊಂದುವನು. ಧರ್ಮದಿಂದ ಸುಖವೂ ಜ್ಞಾನವೂ (ಉಂಟಾಗಿ) ಜ್ಞಾನದಿಂದ ಮೋಕ್ಷವು ದೊರಕುತ್ತದೆ'. (?) "ಯೋಗಿಗಳು ಚಿತ್ತಶುದ್ಧಿಗಾಗಿ ಫಲಾಸಕ್ತಿಯನ್ನು ಬಿಟ್ಟು ಕರ್ಮ(ಗಳನ್ನು) ಮಾಡುತ್ತಾರೆ". 'ಜಂತುವು ಕರ್ಮದಿಂದ (ಸಂಸಾರ) ಬಂಧವನ್ನು ಹೊಂದುತ್ತಾನೆ; ವಿದ್ಯೆಯಿಂದ ಬಿಡುಗಡೆಯನ್ನು ಹೊಂದುತ್ತಾನೆ. ಆದ್ದರಿಂದ (ಸಂಸಾರದ ಆಚೆಯ) ದಡವನ್ನು (ಎಂದರೆ ಬ್ರಹ್ಮವನ್ನು) ಬಲ್ಲ ಯತಿಗಳು ಕರ್ಮವನ್ನು ಮಾಡುವದಿಲ್ಲ' ('ವಿಧಿಸಲ್ಪಟ್ಟಿರುವ) ಕರ್ಮಗಳನ್ನು ಕೂಡ ದ್ವಿಜೋತ್ತಮನಾದವನು ಬಿಟ್ಟು ಆತ್ಮಜ್ಞಾನ, ಇಂದ್ರಿಯನಿಗ್ರಹ, ವೇದಾಭ್ಯಾಸ - ಇವುಗಳಲ್ಲಿ ಪ್ರಯತ್ನಮಾಡಬೇಕು' ('ತನ್ನ ಆಶ್ರಮವಿಹಿತವಾದ) ಕರ್ಮಗಳಿಂದ ಚಿತ್ತದೋಷವು ಪರಿಹಾರವಾಗುತ್ತದೆ; (ಅನಂತರ)

ವಿದ್ಯೆಯಿಂದ ಅಮೃತತತ್ವವನ್ನು ಪಡೆಯುತ್ತಾನೆ'. "ಮನುಷ್ಯರಿಗೆ ಪಾಪಕರ್ಮಗಳು ನಾಶವಾಗುವದರಿಂದ ಕನ್ನಡಿಯ ಮೈಯಂತೆ ಶುಭ್ರವಾದ ಮನಸ್ಸಿನಲ್ಲಿ ಸ್ವಸ್ವರೂಪವು ತೋರಿಕೊಂಡು ಜ್ಞಾನವುಂಟಾಗುವದು". ಇವೇ ಮುಂತಾದ ಸ್ಮೃತಿಗಳಿಂದ (ಕರ್ಮಗಳಿಗೆ ನೇರಾಗಿ ಮೋಕ್ಷಸಾಧನತ್ವವಿಲ್ಲವೆಂದು ಏರ್ಪಡುತ್ತದೆ). 'ವೇದಾನುವಚನದಿಂದಲೂ ಯಜ್ಞದಿಂದಲೂ ದಾನದಿಂದಲೂ ಅನಾಶಕವಾದ ತಪಸ್ಸಿನಿಂದಲೂ ಆ ಇವನನ್ನು ಬ್ರಾಹ್ಮಣರು ತಿಳಿಯಲಿಚ್ಛಿಸುತ್ತಾರೆ' 'ಯಾವದರಿಂದಲಾದರೂ ಹೋಮಮಾಡಬೇಕು; ದರ್ವಿಹೋಮ[1] ದಿಂದಲಾದರೂ ಸರಿ; ಶುದ್ಧಾಂತಃಕರಣನಾಗುವನು' (?) ಇವೇ ಮೊದಲಾದ ಶ್ರುತಿಗಳಿಂದ (ತಿಳಿದು ಬರುವಂತೆ) ಜ್ಞಾನದಿಂದಲೇ ಮೋಕ್ಷವಾಗುತ್ತದೆ. "ಜ್ಞಾನದಿಂದಲೇ ಕೈವಲ್ಯವು ದೊರಕುತ್ತದೆ; ಆದರಿಂದ ಮುಕ್ತನಾಗುವನು;" (?) "ಬ್ರಹ್ಮವಿದನು ಪರ (ಬ್ರಹ್ಮ)ವನ್ನು ಹೊಂದುತ್ತಾನೆ" "ಆತ್ಮಜ್ಞಾನಿಯು ಶೋಕವನ್ನು ದಾಟುವನು" ಬ್ರಹ್ಮವನ್ನೇ ಬಲ್ಲವನು ಬ್ರಹ್ಮವೇ ಆಗುವನು" "ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಸೇರಿಹೋಗುವನು" "ಅವನನ್ನೇ ಅರಿತುಕೊಂಡು ಮೃತ್ಯುವನ್ನು ದಾಟುವನು; (ಬ್ರಹ್ಮ) ಪ್ರಾಪ್ತಿಗೆ ಬೇರೊಂದು ಮಾರ್ಗವು ಇರುವದಿಲ್ಲ" "ಬ್ರಹ್ಮದ ಆನಂದವನ್ನು ತಿಳಿದವನು ಏತಕ್ಕೂ ಅಂಜುವದಿಲ್ಲ" "ಇಲ್ಲಿಯೇ ಅರಿತುಕೊಂಡನಾದರೆ ಆಗ ಸತ್ಯವುಂಟು; ಇಲ್ಲಿ ಅರಿತುಕೊಳ್ಳಲಿಲ್ಲವಾದರೆ ದೊಡ್ಡವಿನಾಶವು" "ಯಾವಾಗ ಮಾನವರು ಚರ್ಮದಂತೆ ಆಕಾಶವನ್ನು ಸುರುಳಿ ಸುತ್ತುವರೋ ಆಗ ದೇವನನ್ನು ಅರಿತುಕೊಳ್ಳದೆಯೂ ದುಃಖವು ಕೊನೆಗಾಣುವದು" "ಕರ್ಮದಿಂದಲ್ಲ, ಪ್ರಜೆಯಿಂದಲ್ಲ, ಧನದಿಂದಲ್ಲ, ತ್ಯಾಗ (ಸಂನ್ಯಾಸ) ವೊಂದರಿಂದಲೇ (ಮಹಾತ್ಮರು) ಅಮೃತತ್ವವನ್ನು ಪಡೆದುಕೊಂಡರು" "ವೇದಾಂತವಿಜ್ಞಾನದ ಅರ್ಥವನ್ನು ಚೆನ್ನಾಗಿ ನಿಶ್ಚಯಮಾಡಿಕೊಂಡವರಾಗಿ ಸಂನ್ಯಾಸಯೋಗದಿಂದ ಶುದ್ಧಸತ್ವರಾಗಿ ಅವರು ಬ್ರಹ್ಮಲೋಕಗಳಲ್ಲಿ ಪರಾಂತಕಾಲದಲ್ಲಿ ಹೆಚ್ಚಿನ ಅಮೃತರಾಗಿ ಎಲ್ಲರೂ ಪರಿಮುಕ್ತರಾಗುವರು" ಇವೇ ಮೊದಲಾದ ಶ್ರುತಿಗಳಿಂದಲೂ (ಜ್ಞಾನದಿಂದಲೇ ಮೋಕ್ಷವೆಂದು ಸಿದ್ಧವಾಗುತ್ತದೆ).

ಶೂದ್ರನು ಶ್ರವಣದಿಂದಲೇ ಸುಖವನ್ನು ಹೊಂದುವನು. ಜಪಯಜ್ಞದಿಂದಲ್ಲ. "ಆದ್ದರಿಂದ ಶೂದ್ರನು ಯಜ್ಞಕ್ಕೆ ತಕ್ಕವನಲ್ಲ" ಎಂದು ಶ್ರುತಿಯಿದೆ. "ಬ್ರಾಹ್ಮಣನನ್ನು ಮುಂದಿಟ್ಟುಕೊಂಡು ನಾಲ್ಕು ವರ್ಣಗಳವರಿಗೂ ಶ್ರವಣಮಾಡಿಸಬೇಕು" ಎಂದು ಮಹಾಭಾರತದಲ್ಲಿ ಶ್ರವಣವನ್ನು ಒಪ್ಪಿ ಹೇಳಿದೆ. 'ಶೂದ್ರಜಾತಿಯಲ್ಲಿ ಹುಟ್ಟಿದವನು ಶ್ರವಣದಿಂದ ಒಳ್ಳೆಯ ಗತಿಯನ್ನು ಹೊಂದುವನು' (ಹರಿ ?) ಎಂದು ಹರಿವಂಶದಲ್ಲಿದೆ. ಯಾವ ಶೂದ್ರನು (ಇದನ್ನು) ಕೇಳುತ್ತಾನೋ ಅವನು ಸುಖವನ್ನು ಹೊಂದುವನು ಎಂದು ದೂರದಿಂದ ಅನ್ವಯಮಾಡಿಕೊಳ್ಳಬೇಕು. ತ್ರೈವರ್ಣಿಕರಿಗೆ ಕೀರ್ತಯೇದ್ ಎಂಬ (ಕ್ರಿಯಾಪದದೊಡನೆ) ಸಂಬಂಧವನ್ನು ಮಾಡಿಕೊಳ್ಳಬೇಕು.

1. ದರ್ವೀಹೋಮವೆಂದರೆ ಪ್ರಕೃತಿಯಲ್ಲದ ವಿಕೃತಿ - ಎಂದು ಮೈ॥

**ಧರ್ಮಾರ್ಥೀ ಪ್ರಾಪ್ನುಯಾದ್ಧರ್ಮಮರ್ಥಾರ್ಥೀ ಚಾರ್ಥಮಾಪ್ನುಯಾತ್।**
**ಕಾಮಾನವಾಪ್ನುಯಾತ್ ಕಾಮೀ ಪ್ರಜಾರ್ಥೀ ಚಾಪ್ನುಯಾತ್ ಪ್ರಜಾಮ್**
**॥೧೨೪॥**

೧೨೪. ಧರ್ಮವನ್ನು ಬಯಸುವವನು ಧರ್ಮವನ್ನು ಪಡೆಯುವನು. ಅರ್ಥ (ಧನ)ವನ್ನು ಬಯಸುವವನು ಧನವನ್ನು ಹೊಂದುವನು. ಇಷ್ಟಾರ್ಥಗಳನ್ನು ಬಯಸುವವನು (ತಾನು ಬಯಸಿದ) ಕಾಮಗಳನ್ನು ಪಡೆಯುವನು. ಪ್ರಜೆಯನ್ನು ಬಯಸುವವನು ಸಂತಾನವನ್ನು ಪಡೆಯುವನು.

(ಭಾಷ್ಯ)

ಚಕ್ಷುರಾದೀನಾಮ್ ಆತ್ಮಯುಕ್ತೇನ ಮನಸಾಧಿಷ್ಠಿತಾನಾಂ ಸ್ವೇಷು ಸ್ವೇಷು ವಿಷಯೇಷು ಆನುಕೂಲ್ಯಾತ್ ಪ್ರವೃತ್ತಿಃ ಕಾಮಃ। ಪ್ರಜಾಯತ ಇತಿ ಪ್ರಜಾಸನ್ತತಿಃ॥

(ಭಾಷ್ಯಾರ್ಥ)

ಆತ್ಮ (ಚೈತನ್ಯ)ದಿಂದ ಕೂಡಿದ ಮನಸ್ಸಿನೊಡನೆ (ವ್ಯಾಪಾರಮಾಡುವ) ಕಣ್ಣೇ ಮುಂತಾದ (ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಲ್ಲಿ ಅನುಕೂಲವಾಗಿ ಪ್ರವರ್ತಿಸುವದೇ ಕಾಮವು.[1] ಹುಟ್ಟುತ್ತದೆಯಾದ್ದರಿಂದ ಪ್ರಜೆಯು, ಸಂತತಿಯು - (ಎಂದರ್ಥ).

**ಭಕ್ತಿಮಾನ್ ಯಃ ಸದೋತ್ಥಾಯ ಶುಚಿಸ್ತದ್ಗತಮಾನಸಃ।**
**ಸಹಸ್ರಂ ವಾಸುದೇವಸ್ಯ ನಾಮ್ನಾಮೇತತ್ ಪ್ರಕೀರ್ತಯೇತ್ ॥೧೨೫॥**
**ಯಶಃ ಪ್ರಾಪ್ನೋತಿ ವಿಪುಲಂ ಜ್ಞಾತಿಪ್ರಾಧಾನ್ಯಮೇವ ಚ।**
**ಅಚಲಾಂ ಶ್ರಿಯಮಾಪ್ನೋತಿ ಶ್ರೇಯಃ ಪ್ರಾಪ್ನೋತ್ಯನುತ್ತಮಮ್॥೧೨೬॥**
**ನ ಭಯಂ ಕ್ವಚಿದಾಪ್ನೋತಿ ವೀರ್ಯಂ ತೇಜಶ್ಚ ವಿನ್ದತಿ।**
**ಭವತ್ಯರೋಗೋ ದ್ಯುತಿಮಾನ್ ಬಲರೂಪಗುಣಾನ್ವಿತಃ ॥೧೨೭॥**

೧೨೫-೨೭. ಯಾವನು ಯಾವಾಗಲೂ ಪ್ರಮಾದರಹಿತನಾಗಿ (ಎಚ್ಚತ್ತವನಾಗಿ) ಶುಚಿಯಾಗಿ ಅವನಲ್ಲೇ ಮನಸ್ಸಿಟ್ಟವನಾಗಿ ಭಕ್ತಿಯುಳ್ಳವನಾಗಿ ವಾಸುದೇವನ ಈ ಸಹಸ್ರನಾಮವನ್ನು ಕೀರ್ತನೆಮಾಡುವನೋ (ಅವನು) ಹೆಚ್ಚಿನ ಯಶಸ್ಸನ್ನೂ ಬಂಧುಗಳಲ್ಲಿ ಗೌರವವನ್ನೂ ಪಡೆಯುವನು. ಮತ್ತು ಸ್ಥಿರವಾದ ಸಂಪತ್ತನ್ನೂ ನಿರತಿಶಯವಾದ ಶ್ರೇಯಸ್ಸನ್ನೂ ಹೊಂದುವನು. ಎಲ್ಲಿಯೂ ಭಯವನ್ನು ಹೊಂದುವದಿಲ್ಲ. ಮತ್ತು ವೀರ್ಯವನ್ನೂ ತೇಜಸ್ಸನ್ನೂ ಪಡೆಯುತ್ತಾನೆ. ರೋಗವಿಲ್ಲದವನೂ ಕಾಂತಿಯುಕ್ತನೂ ಬಲ, ರೂಪ, (ದೈವೀ) ಗುಣಗಳಿಂದ ಸಂಪನ್ನನೂ ಆಗುವನು.

1. ಮೂಲಶ್ಲೋಕದಲ್ಲಿರುವ ಕಾಮವೆಂಬ ಶಬ್ದಕ್ಕೆ ಈ ಅರ್ಥವೆಂದು ಭಾವ.

(ಭಾಷ್ಯ)

ಭಕ್ತಿಮಾನ್ ಇತ್ಯಾದಿನಾ ಭಕ್ತಿಮತಃ ಶುಚೇಃ ಸತತಮ್ ಏವಮುದ್ಯುಕ್ತಸ್ಯ ಏಕಾಗ್ರಚಿತ್ತಸ್ಯ ಶ್ರದ್ಧಾಲೋಃ ವಿಶಿಷ್ಟಾಧಿಕಾರಿಣಃ ಫಲವಿಶೇಷಂ ದರ್ಶಯತಿ॥

ಭಾಷ್ಯಾರ್ಥ

ಭಕ್ತಿಮಾನ್ - ಮುಂತಾದ (ಮೂರು ಶ್ಲೋಕಗಳಿಂದ) ಭಕ್ತಿವಂತನೂ, ಶುಚಿಯೂ ಯಾವಾಗಲೂ ಹೀಗೆ (ನಾಮಪಠನೆಯಲ್ಲಿ) ಉದ್ಯುಕ್ತನಾಗಿರುವವನೂ ಏಕಾಗ್ರಮನಸ್ಸುಳ್ಳವನೂ ಶ್ರದ್ಧಾಲುವೂ ಆದ ವಿಶೇಷಾಧಿಕಾರಿಯಾದವನಿಗೆ [1] (ದೊರಕುವ) ಫಲವಿಶೇಷವನ್ನು ತಿಳಿಸುತ್ತಾರೆ.

**ರೋಗಾರ್ತೋ ಮುಚ್ಯತೇ ರೋಗಾತ್ ಬದ್ಧೋ ಮುಚ್ಯೇತ ಬನ್ಧನಾತ್।**
**ಭಯಾನ್ಮುಚ್ಯೇತ ಭೀತಸ್ತು ಮುಚ್ಯೇತಾಪನ್ನ ಆಪದಃ ॥೧೨೮॥**

**ದುರ್ಗಾಣ್ಯತಿತರತ್ಯಾಶು ಪುರುಷಃ ಪುರುಷೋತ್ತಮಮ್।**
**ಸ್ತುವನ್ನಾಮಸಹಸ್ರೇಣ ನಿತ್ಯಂ ಭಕ್ತಿಸಮನ್ವಿತಃ ॥೧೨೯॥**

**ವಾಸುದೇವಾಶ್ರಯೋ ಮರ್ತ್ಯೋ ವಾಸುದೇವಪರಾಯಣಃ।**
**ಸರ್ವಪಾಪವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥೧೩೦॥**

**ನ ವಾಸುದೇವಭಕ್ತಾನಾಮ್ ಅಶುಭಂ ವಿದ್ಯತೇ ಕ್ವಚಿತ್।**
**ಜನ್ಮಮೃತ್ಯುಜರಾವ್ಯಾಧಿಭಯಂ ನೈವೋಪಜಾಯತೇ ॥೧೩೧॥**

೧೨೮-೧೩೧. ರೋಗದಿಂದ ಬಳಲುತ್ತಿರುವವನು ರೋಗದಿಂದ ಬಿಡುಗಡೆ ಹೊಂದಿ (ಆರೋಗ್ಯವಂತನಾಗು)ವನು. ಬಂಧನದಲ್ಲಿರುವವನು ಬಂಧದಿಂದ ಬಿಡಲ್ಪಡುವನು. ಹೆದರಿದವನು ಭಯದಿಂದ ಮುಕ್ತನಾಗುವನು. ಸಂಕಟಕ್ಕೆ ಸಿಕ್ಕಿರುವವನು ಅದರಿಂದ ಪಾರಾಗುವನು. ಪುರುಷೋತ್ತಮನನ್ನು ನಿತ್ಯವೂ ಭಕ್ತಿಯಿಂದ ಕೂಡಿ ನಾಮಸಹಸ್ರದಿಂದ ಸ್ತೋತ್ರಮಾಡುವ ಪುರುಷನು ಬೇಗನೆ ಕಷ್ಟಗಳನ್ನು ದಾಟುವನು. ವಾಸುದೇವನನ್ನೇ ಆಶ್ರಯಿಸಿದ, ವಾಸುದೇವನನ್ನೇ ಪರಮಗತಿಯೆಂದು (ನಂಬಿರುವ) ಮರ್ತ್ಯನಾದ (ಮನುಷ್ಯನು) ಎಲ್ಲಾ ಪಾಪಗಳನ್ನೂ (ಕಳೆದುಕೊಂಡು) ಪರಿಶುದ್ಧನಾಗಿ ಸನಾತನವಾದ ಬ್ರಹ್ಮವನ್ನೇ ಸೇರುವನು. ವಾಸುದೇವನ ಭಕ್ತರಾದವರಿಗೆ ಎಲ್ಲಿಯೂ ಕೆಟ್ಟದ್ದು ಆಗುವದಿಲ್ಲ. ಹುಟ್ಟು, ಸಾವು, ಮುಪ್ಪು, ರೋಗ, ಭಯ - (ಇವುಗಳು) ಎಂದಿಗೂ ಸಂಭವಿಸಲಾರವು.

**ಇಮಂ ಸ್ತವಮಧೀಯಾನಃ ಶ್ರದ್ಧಾಭಕ್ತಿಸಮನ್ವಿತಃ।**
**ಯುಜ್ಯೇತಾತ್ಮಸುಖಕ್ಷಾನ್ತಿಶ್ರೀಧೃತಿಸ್ಮೃತಿಕೀರ್ತಿಭಿಃ ॥೧೩೨॥**

---

1. ಸಹಸ್ರನಾಮಗಳನ್ನು ಸುಮ್ಮನೆ ಓದಿದರೆ ಸಾಲದು. ಭಕ್ತಿ - ಮುಂತಾದ ವಿಶೇಷಗುಣಗಳಿಂದ ಕೂಡಿ ಪಠಿಸಿದವರಿಗೆ ಇಂಥ ಹೆಚ್ಚಿನ ಫಲಗಳುಂಟಾಗುವವು - ಎಂದಭಿಪ್ರಾಯ.

೧೩೨. ಶ್ರದ್ಧಾಭಕ್ತಿಯಿಂದೊಡಗೂಡಿದವನಾಗಿ ಈ ಸ್ತೋತ್ರವನ್ನು ಅಧ್ಯಯನ ಮಾಡುವವನು ಆತ್ಮಸುಖ, ಕ್ಷಾಂತಿ, ಶ್ರೀ, ಧೃತಿ, ಸ್ಮೃತಿ, ಕೀರ್ತಿ - ಇವುಗಳಿಂದ ಒಡಗೂಡಿದವನಾಗುತ್ತಾನೆ.

(ಭಾಷ್ಯ)

ಶ್ರದ್ಧಾ ಆಸ್ತಿಕ್ಯಬುದ್ಧಿಃ। ಭಕ್ತಿಃ ಭಜನಂ ತಾತ್ಪರ್ಯಮ್। ಆತ್ಮನಃ ಸುಖಂ ಆತ್ಮಸುಖಮ್, ತೇನ ಚ ಕ್ಷಾನ್ತ್ಯಾದಿಭಿಶ್ಚ ಯುಜ್ಯತೇ॥

(ಭಾಷ್ಯಾರ್ಥ)

ಶ್ರದ್ಧೆ ಎಂದರೆ ಆಸ್ತಿಕ್ಯ ಬುದ್ಧಿಯು. ಭಕ್ತಿ ಎಂದರೆ ಸೇವೆಯಲ್ಲಿ (ಅನುರಾಗವು) ತತ್ಪರತೆಯಿಂದ (ಕೂಡಿರುವಿಕೆ ಎಂದಭಿಪ್ರಾಯ). ಆತ್ಮನ ಸುಖವು ಆತ್ಮಸುಖವು.[1] ಅದರಿಂದಲೂ ಕ್ಷಾಂತಿ - ಮೊದಲಾದವುಗಳಿಂದಲೂ ಕೂಡಿರುತ್ತಾನೆ.

**ನ ಕ್ರೋಧೋ ನ ಚ ಮಾತ್ಸರ್ಯಂ ನ ಲೋಭೋ ನಾಶುಭಾ ಮತಿಃ।**
**ಭವನ್ತಿ ಕೃತಪುಣ್ಯಾನಾಂ ಭಕ್ತಾನಾಂ ಪುರುಷೋತ್ತಮೇ ॥೧೩೩॥**

೧೩೩. ಪುರುಷೋತ್ತಮನಲ್ಲಿ ಭಕ್ತರಾಗಿರುವ ಪುಣ್ಯವಂತರಿಗೆ ಕೋಪ, ಹೊಟ್ಟೆಕಿಚ್ಚು, ಜಿಪುಣತನ, ಕೆಟ್ಟಬುದ್ಧಿ - ಇವುಗಳು ಉಂಟಾಗುವದಿಲ್ಲ.

(ಭಾಷ್ಯ)

ನ ಕ್ರೋಧಃ ನ ಲೋಭಃ ನಾಶುಭಾ ಮತಿಃ ಇತಿ ಞಕಾರಾನುಬನ್ಧರಹಿತೇನ ನಕಾರೇಣ ಸಮಸ್ತಂ ಪದತ್ರಯಮ್। ಕ್ರೋಧಾದಯೋ ನ ಭವನ್ತಿ, ಮಾತ್ಸರ್ಯಂ ಚ ನ ಭವತೀತ್ಯರ್ಥಃ ॥೧೩೩॥

(ಭಾಷ್ಯಾರ್ಥ)

ನ ಕ್ರೋಧಃ, ನ ಲೋಭಃ, ನಾಶುಭಾ ಮತಿಃ - ಎಂಬಿವುಗಳಲ್ಲಿ ಞಕಾರವಿಲ್ಲದ ನಕಾರದೊಡನೆ (ಸಮಾಸವಾಗಿ) ಮೂರು ಸಮಸ್ತಪದಗಳಾಗಿವೆ.[2] ಕ್ರೋಧವೇ ಮುಂತಾದವುಗಳು ಉಂಟಾಗುವದಿಲ್ಲ.[3] ಮಾತ್ಸರ್ಯವೂ ಉಂಟಾಗುವದಿಲ್ಲ[4] - ಎಂದು ಅಭಿಪ್ರಾಯ.

**ದ್ಯೌಃ ಸಚನ್ದ್ರಾರ್ಕನಕ್ಷತ್ರಾ ಖಂ ದಿಶೋ ಭೂರ್ಮಹೋದಧಿಃ।**
**ವಾಸುದೇವಸ್ಯ ವೀರ್ಯೇಣ ವಿಧೃತಾನಿ ಮಹಾತ್ಮನಃ ॥೧೩೪॥**

---

1. ಅಧಿಕಾರಿಯಾದ ಸಾಧಕನು ತಾನು ಪಡೆದುಕೊಳ್ಳುವ ಈಲೋಕಪರಲೋಕಗಳ ಸುಖವು ಎಂದಭಿಪ್ರಾಯ.
2. ನಞ್‌ಸಮಾಸವಾದರೆ ವ್ಯಾಕರಣದ ಪ್ರಕಾರ ಅಕ್ರೋಧಃ, ಅಲೋಭಃ ಎಂದಾಗಬೇಕು. ಅದಕ್ಕಾಗಿ ನಕಾರದೊಡನೆ ಸಮಾಸವೇ ಹೊರತು 'ನಞ್' ಒಡನೆ ಅಲ್ಲ ಎಂದಿದೆ.
3. ಭವನ್ತಿ ಎಂಬ ಬಹುವಚನಕ್ರಿಯಾಪದಕ್ಕೆ ಹೊಂದಿಕೊಳ್ಳುವದಕ್ಕಾಗಿ ಕ್ರೋಧಾದಿಗಳು (ಕ್ರೋಧ-ಲೋಭ-ಅಶುಭಮತಿಗಳು) ಉಂಟಾಗುವುದಿಲ್ಲ - ಎಂದರ್ಥಮಾಡಿದೆ.
4. 'ನ ಚ ಮಾತ್ಸರ್ಯಮ್' ಎಂಬಲ್ಲಿರುವ ಚಕಾರದಿಂದ ಮಾತ್ಸರ್ಯಶಬ್ದವು ವ್ಯವಹಿತವಾದ್ದರಿಂದ ಸಮಾಸದಲ್ಲಿ ಸೇರಲಿಲ್ಲ. ಅದಕ್ಕಾಗಿ 'ಮಾತ್ಸರ್ಯಂ ಚ ನ ಭವತಿ' ಎಂದು ಬೇರೆ ವಾಕ್ಯವನ್ನು ಮಾಡಿದೆ.

೧೩೪. ಚಂದ್ರ, ಸೂರ್ಯ, ನಕ್ಷತ್ರಗಳಿಂದ ಕೂಡಿದ ದ್ಯುಲೋಕ, ಆಕಾಶ, ದಿಕ್ಕುಗಳು, ಭೂಮಿ, ದೊಡ್ಡಸಮುದ್ರ - (ಇವುಗಳೆಲ್ಲವೂ) ಮಹಾತ್ಮನಾದ ವಾಸುದೇವನ ವೀರ್ಯದಿಂದ ಎತ್ತಿಹಿಡಿಯಲ್ಪಟ್ಟಿರುವವು.

**ಸಸುರಾಸುರಗನ್ಧರ್ವಂ ಸಯಕ್ಷೋರಗರಾಕ್ಷಸಮ್।**
**ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸಚರಾಚರಮ್ ॥೧೩೫॥**

೧೩೫. ದೇವತೆಗಳು, ದಾನವರು, ಗಂಧರ್ವ(ರಿಂದ ಕೂಡಿದ) ಮತ್ತು ಯಕ್ಷ, ಉರಗ, ರಾಕ್ಷಸರುಗಳು (ಸಹಿತವಾದ) ಈ ಚರಾಚರಾತ್ಮಕವಾದ ಜಗತ್ತು ಕೃಷ್ಣನ ಅಧೀನದಲ್ಲಿರುತ್ತದೆ.

**ಇನ್ದ್ರಿಯಾಣಿ ಮನೋ ಬುದ್ಧಿಃ ಸತ್ತ್ವಂ ತೇಜೋ ಬಲಂ ಧೃತಿಃ।**
**ವಾಸುದೇವಾತ್ಮಕಾನ್ಯಾಹುಃ ಕ್ಷೇತ್ರಂ ಕ್ಷೇತ್ರಜ್ಞ ಏವ ಚ ॥೧೩೬॥**

೧೩೬. (ಹತ್ತು) ಇಂದ್ರಿಯಗಳು, ಮನಸ್ಸು, ಬುದ್ಧಿ ಅಂತಃಕರಣ, ತೇಜಸ್ಸು, ಬಲ (ಅವಸಾದವಿಲ್ಲದ) ಧೃತಿ, ಶರೀರ, ಜೀವ ಇವೆಲ್ಲವೂ ವಾಸುದೇವಾತ್ಮಕವಾಗಿವೆಯೆಂದು (ತತ್ತ್ವವನ್ನು ಬಲ್ಲವರು) ಹೇಳುವರು.

(ಭಾಷ್ಯ)

'ದ್ಯೌಃ ಸ ಚನ್ದ್ರಾರ್ಕನಕ್ಷತ್ರಾ' ಇತ್ಯಾದಿನಾ ಸ್ತುತ್ಯಸ್ಯ ವಾಸುದೇವಸ್ಯ ಮಾಹಾತ್ಮ್ಯ ಕಥನೇನೋಕ್ತಾನಾಂ ಫಲಾನಾಂ ಪ್ರಾಪ್ತಿವಚನಂ ಯಥಾರ್ಥಕಥನಂ, ನಾರ್ಥವಾದ ಇತಿ ದರ್ಶಯತಿ ॥

(ಭಾಷ್ಯಾರ್ಥ)

'ದ್ಯೌಃ ಸಚನ್ದ್ರಾರ್ಕನಕ್ಷತ್ರಾ' ಎಂಬಿವೇ (ಮೊದಲಾದ ಶ್ಲೋಕಗಳಿಂದ) ಸ್ತುತ್ಯನಾದ ವಾಸುದೇವನ ಮಾಹಾತ್ಮ್ಯವನ್ನು ಪಠನಮಾಡಿದ್ದರಿಂದ ಉಂಟಾಗುವ ಫಲಗಳನ್ನು ಕುರಿತು ಹೇಳಿರುವದು ಸತ್ಯವಾದ (ಫಲಶ್ರುತಿ) ರೂಪವಾದ ಹೇಳಿಕೆಯೇ ಹೊರತು ಬರೀ ಹೊಗಳಿಕೆಯಲ್ಲ ಎಂಬುದನ್ನು (ಇಲ್ಲಿ) ತಿಳಿಸಿದ್ದಾರೆ.

**ಸರ್ವಾಗಮಾನಾಮಾಚಾರಃ ಪ್ರಥಮಂ ಪರಿಕಲ್ಪತೇ।**
**ಆಚಾರಃ ಪ್ರಥಮೋ ಧರ್ಮಃ[1] ಧರ್ಮಸ್ಯ ಪ್ರಭುರಚ್ಯುತಃ ॥೧೩೭॥**

1. 'ಆಚಾರಪ್ರಭವೋ ಧರ್ಮಃ' ಎಂದು ಪಾಠಾಂತರವೂ ಇದೆ.

೧೩೭. (ಅಧ್ಯಯನ ಮಾಡಬೇಕಾಗಿರುವ) ಎಲ್ಲಾ ವೇದಗಳಿಗೂ ಆಚಾರವು ಮೊದಲನೆಯದಾಗಿ ಹೇಳಲ್ಪಟ್ಟಿರುತ್ತದೆ. ಆಚಾರವು ಮೊದಲನೆಯ ಧರ್ಮವು; ಅಚ್ಯುತನು ಧರ್ಮಕ್ಕೆ ಪ್ರಭುವು.

(ಭಾಷ್ಯ)

'ಸರ್ವಾಗಮಾನಾಮಾಚಾರಃ' ಇತ್ಯನೇನಾವಾನ್ತರವಾಕ್ಯೇನ ಸರ್ವಧರ್ಮಾಣಾಮ್ ಆಚಾರವತ ಏವಾಧಿಕಾರ ಇತಿ ದರ್ಶಯತಿ॥

(ಭಾಷ್ಯಾರ್ಥ)

'ಸರ್ವಾಗಮಾನಾಮಾಚಾರಃ' ಎಂಬ ಈ ನಡುವಣವಾಕ್ಯದಿಂದ ಎಲ್ಲಾ ಧರ್ಮಗಳ (ಅನುಷ್ಠಾನಕ್ಕೂ) ಆಚಾರವಂತನಾದವನಿಗೇ ಅಧಿಕಾರವು - ಎಂದು ತಿಳಿಸಿರುತ್ತಾರೆ.

**ಋಷಯಃ ಪಿತರೋ ದೇವಾಃ ಮಹಾಭೂತಾನಿ ಧಾತವಃ।**
**ಜಙ್ಗಮಾಜಙ್ಗಮಂ ಚೇದಂ ಜಗನ್ನಾರಾಯಣೋದ್ಭವಮ್ ॥೧೩೮॥**

**ಯೋಗೋ ಜ್ಞಾನಂ ತಥಾ ಸಾಙ್ಖ್ಯಂ ವಿದ್ಯಾಃ ಶಿಲ್ಪಾದಿಕರ್ಮ ಚ।**
**ವೇದಾಃ ಶಾಸ್ತ್ರಾಣಿ ವಿಜ್ಞಾನಮೇತತ್ಸರ್ವಂ ಜನಾರ್ದನಾತ್ ॥೧೩೯॥**

**ಏಕೋ ವಿಷ್ಣುರ್ಮಹದ್ಭೂತಂ ಪೃಥಕ್ ಭೂತಾನ್ಯನೇಕಶಃ।**
**ತ್ರೀನ್ ಲೋಕಾನ್ ವ್ಯಾಪ್ಯ ಭೂತಾತ್ಮಾ ಭುಙ್ಕ್ತೇ ವಿಶ್ವಭುಗವ್ಯಯಃ॥**
**॥೧೪೦॥**

೧೩೮-೧೪೦. ಋಷಿಗಳು, ಪಿತೃಗಳು, ದೇವತೆಗಳು, (ಪಂಚ) ಮಹಾಭೂತಗಳು, ಧಾತು (ಇಂದ್ರಿಯಗಳು), ಈ ಚರಾಚರಾತ್ಮಕವಾದ ಜಗತ್ತು (ಎಲ್ಲವೂ) ನಾರಾಯಣನಿಂದ ಹುಟ್ಟಿರುತ್ತವೆ. ಜ್ಞಾನ (ಸಹಿತವಾದ) ಯೋಗ, ಹಾಗೂ ಸಾಂಖ್ಯ (ವಿಚಾರ), ವಿದ್ಯೆ ಮತ್ತು ಶಿಲ್ಪಾದಿಕರ್ಮ (ಗಳು), (ನಾಲ್ಕು) ವೇದಗಳು, (ಆರು) ಶಾಸ್ತ್ರ (ದರ್ಶನ)ಗಳು, ವಿಜ್ಞಾನ, (ಇತಿಹಾಸಪುರಾಣಾದಿವಿದ್ಯೆ) - ಇವೆಲ್ಲವೂ ಜನಾರ್ದನನಿಂದಲೇ ಹೊರಬಂದಿದವೆ.[1] ವಿಷ್ಣು (ವೊಬ್ಬನೇ) ಸರ್ವೋತ್ಕೃಷ್ಟವಾದ ಪರಮಾರ್ಥಸತ್ಯವು. (ಅವನೇ) ಅನೇಕಪ್ರಕಾರವಾಗಿ ವಿಂಗಡವಾಗಿರುವ ಬಿಡಿಬಿಡಿಯ ಪದಾರ್ಥಗಳಾಗಿ (ತೋರುತ್ತಿದ್ದಾನೆ). ಭೂತಾತ್ಮ

1. 'ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದೋ...' ಎಂಬ ಬೃಹದಾರಣ್ಯಕಶ್ರುತಿಯ ಅಭಿಪ್ರಾಯವನ್ನು ಇಲ್ಲಿ ಸೂಚಿಸಿದೆ.

(ನಾದ) ಅವ್ಯಯನಾದ ವಿಷ್ಣುವು ಮೂರು ಲೋಕಗಳನ್ನೂ ವ್ಯಾಪಿಸಿಕೊಂಡು ವಿಶ್ವಭುಜನೆನಿಸಿ ಎಲ್ಲವನ್ನೂ ಅನುಭವಿಸುತ್ತಿದ್ದಾನೆ.

**ಇಮಂ ಸ್ತವಂ ಭಗವತೋ ವಿಷ್ಣೋರ್ವ್ಯಾಸೇನ ಕೀರ್ತಿತಮ್।**
**ಪಠೇದ್ ಯ ಇಚ್ಛೇತ್ ಪುರುಷಃ ಶ್ರೇಯಃ ಪ್ರಾಪ್ತುಂ ಸುಖಾನಿ ಚ॥ ॥೧೪೧॥**

೧೪೧. ಭಗವಂತನಾದ ವಿಷ್ಣುವಿನ ಈ ಸ್ತೋತ್ರವು ವ್ಯಾಸನಿಂದ ಹೇಳಲ್ಪಟ್ಟಿರುತ್ತದೆ. ಯಾವ ಪುರುಷನು ಶ್ರೇಯಸ್ಸನ್ನೂ ಸುಖಗಳನ್ನೂ ಪಡೆದುಕೊಳ್ಳಲೆಳಸುವನೋ (ಅವನು ಇದನ್ನು) ಪಠಿಸಬೇಕು.

(ಭಾಷ್ಯ)

'ಇಮಂ ಸ್ತವಮ್' ಇತ್ಯಾದಿನಾ ಸಹಸ್ರಶಾಖಾಜ್ಞೇನ ಸರ್ವಜ್ಞೇನ ಭಗವತಾ ಕೃಷ್ಣದ್ವೈಪಾಯನೇನ ಸಾಕ್ಷಾನ್ನಾರಾಯಣೇನ ಕೃತಮಿತಿ ಸರ್ವೈರೇವ ಅರ್ಥಿಭಿಃ ಸಾದರಂ ಪಠಿತವ್ಯಂ ಸರ್ವಫಲಸಿದ್ಧಯೇ ಇತಿ ದರ್ಶಯತಿ॥

**(ಭಾಷ್ಯಾರ್ಥ)**

'ಇಮಂ ಸ್ತವಮ್' ಮುಂತಾದದ್ದರಿಂದ ಸಹಸ್ರಶಾಖೆಗಳಾಗಿ (ಹರಡಿಕೊಂಡಿರುವ ವೇದಗಳೆಲ್ಲವನ್ನೂ) ಬಲ್ಲ ಸರ್ವಜ್ಞನಾದ ಪೂಜ್ಯನಾದ ಸಾಕ್ಷಾತ್ ನಾರಾಯಣ (ಸ್ವರೂಪ)ನೇ ಆದ ಕೃಷ್ಣದ್ವೈಪಾಯನ (ವ್ಯಾಸ)ನಿಂದ ಇದು ಮಾಡಲ್ಪಟ್ಟಿದೆಯಾಗಿ ಪುರುಷಾರ್ಥಗಳನ್ನು ಬಯಸುವವರೆಲ್ಲರೂ ಶ್ರದ್ಧಾ ಪೂರ್ವಕವಾಗಿ ಎಲ್ಲಾ ಫಲಗಳ ಸಿದ್ಧಿಗಾಗಿ (ಇದನ್ನು) ಪಠನಮಾಡಬೇಕು ಎಂದು ತಿಳಿಸಿರುತ್ತದೆ.

**ವಿಶ್ವೇಶ್ವರಮಜಂ ದೇವಂ ಜಗತಃ ಪ್ರಭವಾಪ್ಯಯಮ್।**
**ಭಜನ್ತಿ ಯೇ ಪುಷ್ಕರಾಕ್ಷಂ ನ ತೇ ಯಾನ್ತಿ ಪರಾಭವಮ್ ॥೧೪೨॥**

೧೪೨. ವಿಶ್ವೇಶ್ವರನೂ ಅಜನೂ ದೇವನೂ ಜಗತ್ತಿನ ಉತ್ಪತ್ತಿ ಲಯ (ಕಾರಣನೂ) ಆದ ಪುಂಡರೀಕಾಕ್ಷನಾದ (ವಿಷ್ಣು)ವನ್ನು ಯಾರು ಭಜಿಸುವರೋ ಅವರು ಪರಾಭವವನ್ನು ಹೊಂದುವದಿಲ್ಲ.

ಇತಿ ಶ್ರೀಮಹಾಭಾರತೇ ಶತಸಾಹಸ್ರ್ಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಅನುಶಾಸನಪರ್ವಣಿ ಭೀಷ್ಮಯುಧಿಷ್ಠಿರಸಂವಾದೇ ಶ್ರೀವಿಷ್ಣೋರ್ದಿವ್ಯಸಹಸ್ರನಾಮಸ್ತೋತ್ರಂ ನಾಮ ಏಕೋನಪಞ್ಚಾಶದಧಿಕ ಶತತಮೋಽಧ್ಯಾಯಃ

1. 'ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದೃಗ್ವೇದೋ...' ಎಂಬ ಬೃಹದಾರಣ್ಯಕಶ್ರುತಿಯ ಅಭಿಪ್ರಾಯವನ್ನು ಇಲ್ಲಿ ಸೂಚಿಸಿದೆ.

## (ಭಾಷ್ಯ)

'ವಿಶ್ವೇಶ್ವರಮ್' ಇತ್ಯಾದಿನಾ ವಿಶ್ವೇಶ್ವರೋಪಾಸನಾದೇವ ಸ್ತೋತಾರಃ ತೇ ಧನ್ಯಾಃ ಕೃತಾರ್ಥಾಃ ಕೃತಕೃತ್ಯಾಃ ಇತಿ ದರ್ಶಯತಿ॥

ಪ್ರಮಾದಾತ್ ಕುರ್ವತಾಂ ಕರ್ಮ ಪ್ರಚ್ಯವೇತಾಧ್ವರೇಷು ಯತ್।
ಸ್ಮರಣಾದೇವ ತದ್ವಿಷ್ಣೋಃ ಸಂಪೂರ್ಣಂ ಸ್ಯಾದಿತಿ ಶ್ರುತಿಃ॥

ಆದರೇಣ ಯಥಾ ಸ್ತೌತಿ ಧನವನ್ತಂ ಧನೇಚ್ಛಯಾ।
ತಥಾ ಚೇದ್ವಿಶ್ವಕರ್ತಾರಂ ಕೋ ನ ಮುಚ್ಯೇತ ಬನ್ಧನಾತ್॥

ಇತಿ ವ್ಯಾಸವಚನಮ್॥

## (ಭಾಷ್ಯಾರ್ಥ)

'ವಿಶ್ವೇಶ್ವರಮ್' ಎಂದು ಮುಂತಾಗಿ (ಹೇಳಿರುವದೇನೆಂದರೆ) ವಿಶ್ವಕ್ಕೆಲ್ಲ ಒಡೆಯನಾದ (ವಿಷ್ಣುವಿನ) ಉಪಾಸನೆಯಿಂದಲೇ ಆ ಸ್ತೋತ್ರಮಾಡುವವರು ಧನ್ಯರೂ ಕೃತಾರ್ಥರೂ ಕೃತಕೃತ್ಯರೂ ಆಗುವರೆಂಬುದನ್ನು ತೋರಿಸಿದೆ. 'ಯಜ್ಞಗಳಲ್ಲಿ ಕರ್ಮಮಾಡುತ್ತಿರುವಾಗ ಪ್ರಮಾದದಿಂದ ಯಾವ (ಕರ್ತವ್ಯವು) ಬಿಟ್ಟುಹೋಗಬಹುದೋ ಅದು ವಿಷ್ಣುವಿನ ಸ್ಮರಣೆಯಿಂದಲೇ ಪರಿಪೂರ್ಣವಾಗುವದೆಂದು ಶ್ರುತಿಯು ಹೇಳುತ್ತಿದೆ'. 'ಹಣವುಳ್ಳವನನ್ನು ಧನಾರ್ಥಿಯಾದವನು ಹೇಗೆ ಆದರ(ವಿಶ್ವಾಸ)ದಿಂದ ಹೊಗಳುತ್ತಾನೋ ಹಾಗೆ ವಿಶ್ವಕ್ಕೂ (ಸೃಷ್ಟಿ)ಕರ್ತನಾದ (ಭಗವಂತನನ್ನು ಸ್ತುತಿಸಿದರೆ) ಯಾವನು ತಾನೇ ಬಂಧದಿಂದ ಮುಕ್ತನಾಗಲಾರನು?' ಎಂದು ವ್ಯಾಸವಚನವಿದೆ.

## (ಭಾಷ್ಯ)

ಸಹಸ್ರನಾಮಸಂಬನ್ಧಿವ್ಯಾಖ್ಯಾ ಸರ್ವಸುಖಾವಹಾ।
ಶ್ರುತಿಸ್ಮೃತಿನ್ಯಾಯಮೂಲಾ ರಚಿತಾ ಹರಿಪಾದಯೋಃ॥

## (ಭಾಷ್ಯಾರ್ಥ)

ಎಲ್ಲರಿಗೂ ಅನುಕೂಲಕರವಾದ, ಶ್ರುತಿಸ್ಮೃತಿನ್ಯಾಯಗಳ ಆಧಾರವುಳ್ಳ (ವಿಷ್ಣು) ಸಹಸ್ರನಾಮಕ್ಕೆ ಸಂಬಂಧಿಸಿದ ವ್ಯಾಖ್ಯೆಯು ರಚಿತವಾಗಿದ್ದು ಶ್ರೀಹರಿಯ ಪಾದಕಮಲಗಳಿಗೆ ಸಮರ್ಪಿಸಲ್ಪಟ್ಟಿದೆ.

ಇತಿ ಶ್ರೀಪರಮಹಂಸಪರಿವ್ರಾಜಕಾಚಾರ್ಯಸ್ಯ ಶ್ರೀಗೋವಿನ್ದಭಗವತ್ಪೂಜ್ಯಪಾದಶಿಷ್ಯಸ್ಯ
ಶ್ರೀಮಚ್ಛಙ್ಕರಭಗವತಃ ಕೃತೌ ವಿಷ್ಣುಸಹಸ್ರನಾಮಸ್ತೋತ್ರಭಾಷ್ಯಂ
ಸಂಪೂರ್ಣಮ್

ವಿಷ್ಣು ಸಹಸ್ರನಾಮಸ್ತೋತ್ರಮ್

# ಶ್ಲೋಕಾನುಕ್ರಮಣಿಕೆ

**ಸೂಚನೆ:** ಇಲ್ಲಿ ಕೊಟ್ಟಿರುವ ಸಂಖ್ಯೆಗಳಲ್ಲಿ ಮೊದಲನೆಯದು ಶ್ಲೋಕಸಂಖ್ಯೆಯನ್ನೂ ಎರಡನೆಯದು ಪುಟಸಂಖ್ಯೆಯನ್ನೂ ಸೂಚಿಸುವವು.


| | ಶ್ಲೋಕ-ಪುಟ |
|---|---|
| ಅಕ್ರೂರಃ ಪೇಶಲೋ | ೧೧೧-೨೪೭ |
| ಅಗ್ರಣೀರ್ಗ್ರಾಮಣೀಃ ಶ್ರೀಮಾನ್ | ೩೭-೧೨೬ |
| ಅಗ್ರಾಹ್ಯಃ ಶಾಶ್ವತಃ ಕೃಷ್ಣಃ | ೨೦-೯೬ |
| ಅಚ್ಯುತಃ ಪ್ರಥಿತಃ ಪ್ರಾಣಃ | ೪೮-೧೪೨ |
| ಅಜಃ ಸರ್ವೇಶ್ವರಃ ಸಿದ್ಧಃ | ೨೪-೧೦೩ |
| ಅಜೋ ಮಹಾರ್ಹಃ ಸ್ವಾಭಾವ್ಯಃ | ೬೯-೧೭೮ |
| ಅಣುರ್ಬೃಹತ್ ಕೃಶಃ ಸ್ಥೂಲಃ | ೧೦೩-೨೩೨ |
| ಅತುಲಶ್ಶರಭೋ ಭೀಮಃ | ೫೨-೧೪೮ |
| ಅನನ್ತರೂಪೋಽನನ್ತಶ್ರೀಃ | ೧೧೩-೨೫೦ |
| ಅನನ್ತೋ ಹುತಭುಕ್ ಭೋಕ್ತಾ | ೧೦೮-೨೪೧ |
| ಅನಾದಿನಿಧನಂ ವಿಷ್ಣುಮ್ | ೬-೯ |
| ಅನಾದಿರ್ಭೂರ್ಭುವೋ ಲಕ್ಷ್ಮೀಃ | ೧೧೪-೨೫೧ |
| ಅನಿವರ್ತೀ ನಿವೃತ್ತಾತ್ಮಾ | ೭೭-೧೯೧ |
| ಅನಿರ್ವಿಣ್ಣಃ ಸ್ಥವಿಷ್ಠೋಽಭೂಃ | ೬೦-೧೬೩ |
| ಅಪ್ರಮೇಯೋ ಹೃಷೀಕೇಶಃ | ೧೯-೯೩ |
| ಅಮಾನೀ ಮಾನದೋ ಮಾನ್ಯಃ | ೯೩-೨೧೫ |
| ಅಮೃತಾಂಶೂದ್ಭವೋ ಭಾನುಃ | ೪೪-೧೩೬ |
| ಅಮೃತ್ಯುಃ ಸರ್ವದೃಕ್ ಸಿಂಹಃ | ೨೫-೧೨೩ |
| ಅರೌದ್ರಃ ಕುಣ್ಡಲೀ ಚಕ್ರೀ | ೧೧೦-೨೪೫ |
| ಅರ್ಚಿಷ್ಮಾನರ್ಚಿತಃ ಕುಂಭೋ | ೮೧-೧೯೬ |
| ಅಶೋಕಸ್ತಾರಣಃ ತಾರಃ | ೫೦-೧೪೬ |
| ಅಸಙ್ಖ್ಯೇಯೋಽಪ್ರಮೇಯಾತ್ಮಾ | ೪೦-೧೩೧ |
| ಆತ್ಮಯೋನಿಃ ಸ್ವಯಂಜಾತಃ | ೧೧೯-೨೬೧ |
| ಆಧಾರನಿಲಯೋಽಧಾತಾ | ೧೧೫-೨೫೩ |
| ಆವರ್ತನೋಽನಿವೃತ್ತಾತ್ಮಾ | ೩೮-೧೨೭ |
| ಇತೀದಂ ಕೀರ್ತನೀಯಸ್ಯ | ೧೨೧-೨೬೬ |
| ಇನ್ದ್ರಿಯಾಣಿ ಮನೋ ಬುದ್ಧಿಃ | ೧೩೬-೨೭೪ |
| ಇಮಂ ಸ್ತವಂ ಭಗವತೋ | ೧೪೧-೨೭೬ |
| ಇಮಂ ಸ್ತವಮಧೀಯಾನಃ | ೧೩೨-೨೭೨ |
| ಇಷ್ಟೋ ವಿಶಿಷ್ಟಃ ಶಿಷ್ಟೇಷ್ಟಃ | ೪೭-೧೪೧ |
| ಈಶಾನಃ ಪ್ರಾಣದಃ ಪ್ರಾಣಃ | ೨೧-೯೮ |
| ಈಶ್ವರೋ ವಿಕ್ರಮೀ ಧನ್ವೀ | ೨೨-೧೦೦ |
| ಉತ್ತರೋ ಗೋಪತಿರ್ಗೋಪ್ತಾ | ೬೬-೧೭೩ |
| ಉತ್ತಾರಣೋ ದುಷ್ಕೃತಿಹಾ | ೧೧೨-೨೪೮ |
| ಉದೀರ್ಣಃ ಸರ್ವತಃ ಚಕ್ಷುಃ | ೮೦-೧೯೪ |
| ಉದ್ಭವಃ ಕ್ಷೋಭಣೋ ದೇವಃ | ೫೪-೧೫೨ |
| ಉದ್ಭವಃ ಸುನ್ದರಃ ಸುನ್ದೋ | ೯೮-೨೨೨ |
| ಉಪೇನ್ದ್ರೋ ವಾಮನಃ ಪ್ರಾಂಶುಃ | ೩೦-೧೧೫ |
| ಋತುಃ ಸುದರ್ಶನಃ ಕಾಲಃ | ೫೮-೧೬೦ |
| ಋಷಯಃ ಪಿತರೋ ದೇವಾಃ | ೧೩೮-೨೭೫ |
| ಏಕೋ ನೈಕಃ ಸವಃ ಕಃ ಕಿಮ್ | ೯೧-೨೧೨ |
| ಏಕೋ ವಿಷ್ಣುರ್ಮಹದ್ಭೂತಮ್ | ೧೪೦-೨೭೫ |

| | ಶ್ಲೋಕ-ಪುಟ |
|---|---|
| ಏಷ ಮೇ ಸರ್ವಧರ್ಮಾಣಾಮ್ | ೮-೧೨ |
| ಓಜಸ್ತೇಜೋದ್ಯುತಿಧರಃ | ೪೩-೧೩೫ |
| ಕಾಮದೇವಃ ಕಾಮಪಾಲಃ ಕಾಮೀ | ೮೩-೧೯೮ |
| ಕಾಲನೇಮಿನಿಹಾ ವೀರಃ | ೮೨-೧೯೭ |
| ಕಿಮೇಕಂ ದೈವತಂ ಲೋಕೇ | ೨-೩ |
| ಕುಮುದಃ ಕುನ್ದರಃ ಕುನ್ದಃ | ೧೦೦-೨೨೬ |
| ಕೋ ಧರ್ಮಃ ಸರ್ವಧರ್ಮಾಣಾಮ್ | ೩-೫ |
| ಗಭಸ್ತಿನೇಮಿಃ ಸತ್ತ್ವಸ್ಥಃ | ೬೫-೧೭೨ |
| ಗುರುರ್ಗುರುತಮೋ ಧಾಮ | ೩೬-೧೨೪ |
| ಚತುರ್ಮೂರ್ತಿಶ್ಚರ್ಬಾಹುಃ | ೯೫-೨೧೮ |
| ಜಗತ್ಪ್ರಭುಂ ದೇವದೇವಮನನ್ತಂ | ೪-೬ |
| ಜೀವೋ ವಿನಯಿತಾಸಾಕ್ಷೀ | ೬೮-೧೭೭ |
| ತಮೇವ ಚಾರ್ಚಯನ್ ನಿತ್ಯಮ್ | ೫-೮ |
| ತಸ್ಯ ಲೋಕಪ್ರಧಾನಸ್ಯ | ೧೨-೫೩ |
| ತೇಜೋ ವೃಷೋ ದ್ಯುತಿಧರಃ | ೯೪-೨೧೬ |
| ತ್ರಿಸಾಮಾ ಸಾಮಗಃ ಸಾಮ | ೭೫-೧೮೭ |
| ದುರ್ಗಾಣ್ಯತಿತರತ್ಯಾಶು | ೧೨೯-೨೭೨ |
| ದ್ಯೌಃ ಸಚನ್ದ್ರಾರ್ಕನಕ್ಷತ್ರಾ | ೧೩೪-೨೭೪ |
| ಧನುರ್ಧರೋ ಧನುರ್ವೇದೋ | ೧೦೫-೨೩೭ |
| ಧರ್ಮಗುಪ್ ಧರ್ಮಕೃದ್ಧರ್ಮೀ | ೬೪-೧೭೦ |
| ಧರ್ಮಾರ್ಥೀ ಪ್ರಾಪ್ನುಯಾದ್ ..... | ೧೨೪-೨೭೧ |
| ನ ಕ್ರೋಧೋ ನ ಚ.... | ೧೩೩-೨೭೩ |
| ನ ಭಯಂ ಕ್ವಚಿದಾಪ್ನೋತಿ | ೧೨೭-೨೭೧ |
| ನ ವಾಸುದೇವಭಕ್ತಾನಾಮ್ | ೧೩೧-೨೭೨ |
| ಪದ್ಮನಾಭೋಽರವಿನ್ದಾಕ್ಷಃ | ೫೧-೧೪೭ |
| ಪರಮಂ ಯೋ ಮಹತ್ತೇಜಃ | ೯-೧೪ |
| ಪವಿತ್ರಾಣಾಂ ಪವಿತ್ರಂ ಯಃ | ೧೦-೧೬ |
| ಪೂತಾತ್ಮಾ ಪರಮಾತ್ಮಾ ಚ | ೧೫-೮೦ |
| ಪ್ರಮಾಣಂ ಪ್ರಾಣನಿಲಯಃ | ೧೧೬-೨೫೪ |
| ಬ್ರಹ್ಮಣ್ಯಂ ಸರ್ವಧರ್ಮಜ್ಞಮ್ | ೭-೧೦ |
| ಬ್ರಹ್ಮಣ್ಯೋ ಬ್ರಹ್ಮಕೃದ್ ಬ್ರಹ್ಮಾ | ೮೪-೨೦೦ |
| ಭಕ್ತಿಮಾನ್ ಯಃ ಸದೋತ್ಥಾಯ | ೧೨೫-೨೭೧ |
| ಭಗವಾನ್ ಭಗಹಾಽಽನನ್ದೀ | ೭೩-೧೮೫ |
| ಭಾರಭೃತ್ ಕಥಿತೋ ಯೋಗೀ | ೧೦೪-೨೩೪ |
| ಭೂತಭವ್ಯಭವನ್ನಾಥಃ | ೪೫-೧೩೮ |
| ಭೂತಾವಾಸೋ ವಾಸುದೇವಃ | ೮೯-೨೦೯ |
| ಭೂರ್ಭುವಸ್ಸ್ವಸ್ತರುಸ್ತಾರಃ | ೧೧೭-೨೫೬ |
| ಭ್ರಾಜಿಷ್ಣುರ್ಭೋಜನಂ ಭೋಕ್ತಾ | ೨೯-೧೧೪ |
| ಮನೋಜವಸ್ತೀರ್ಥಕರೋ | ೮೭-೨೦೪ |
| ಮರೀಚಿರ್ದಮನೋ ಹಂಸಃ | ೩೪-೧೨೧ |
| ಮಹರ್ಷಿಃ ಕಪಿಲಾಚಾರ್ಯಃ | ೭೦-೧೮೦ |
| ಮಹಾಕ್ರಮೋ ಮಹಾಕರ್ಮಾ | ೮೫-೨೦೨ |
| ಮಹಾಬುದ್ಧಿರ್ಮಹಾವೀರ್ಯೋ | ೩೨-೧೧೮ |
| ಮಹಾವರಾಹೋ ಗೋವಿನ್ದಃ | ೭೧-೧೮೧ |
| ಮಹೇಷ್ವಾಸೋ ಮಹೀಭರ್ತಾ | ೩೩-೧೧೯ |
| ಯ ಇದಂ ಶೃಣುಯಾನ್ನಿತ್ಯಮ್ | ೧೨೨-೨೬೬ |
| ಯಜ್ಞ ಇಜ್ಯೋ ಮಹೇಜ್ಯಶ್ಚ | ೬೧-೧೬೫ |
| ಯಜ್ಞಭೃತ್ ಯಜ್ಞಕೃತ್ಯಜ್ಞೀ | ೧೧೮-೨೫೯ |
| ಯತಃ ಸರ್ವಾಣಿ ಭೂತಾನಿ | ೧೧-೫೨ |

| | ಶ್ಲೋಕ-ಪುಟ |
|---|---|
| ಯಶಃ ಪ್ರಾಪ್ನೋತಿ ವಿಪುಲಮ್ | ೧೨೬-೨೭೧ |
| ಯಾನಿ ನಾಮಾನಿ ಗೌಣಾನಿ | ೧೩-೫೫ |
| ಯುಗಾದಿಕೃತ್ ಯುಗಾವರ್ತೋ | ೪೬-೧೩೯ |
| ಯೋಗೋ ಜ್ಞಾನಂ ತಥಾ .... | ೧೩೯-೨೭೫ |
| ಯೋಗೋ ಯೋಗವಿದಾಂ ನೇತಾ | ೧೬-೮೩ |
| ರಾಮೋ ವಿರಾಮೋ ವಿರತೋ | ೫೬-೧೫೬ |
| ರುದ್ರೋ ಬಹುಶಿರಾ ಬಭ್ರುಃ | ೨೬-೧೦೮ |
| ರೋಗಾರ್ತೋ ಮುಚ್ಯತೇ .... | ೧೨೮-೨೭೨ |
| ಲೋಕಾಧ್ಯಕ್ಷಃ ಸುರಾಧ್ಯಕ್ಷಃ | ೨೮-೧೧೨ |
| ವಸುರ್ವಸುಮನಾಃ ಸತ್ಯಃ | ೨೫-೧೦೫ |
| ವಾಸುದೇವಾಶ್ರಯೋ ಮರ್ತ್ಯೋ | ೧೩೦-೨೭೨ |
| ವಿಕ್ಷರೋ ರೋಹಿತೋ ಮಾರ್ಗೋ | ೫೩-೧೫೦ |
| ವಿಶ್ವಮೂರ್ತಿರ್ಮಹಾಮೂರ್ತಿ | ೯೦-೨೧೦ |
| ವಿಶ್ವಂ ವಿಷ್ಣುರ್ವಷಟ್ಕಾರೋ | ೧೪-೫೯ |
| ವಿಶ್ವೇಶ್ವರಮಜಂ ದೇವಂ | ೧೪೨-೨೭೬ |
| ವಿಸ್ತಾರಃ ಸ್ಥಾವರಃ ಸ್ಥಾಣುಃ | ೫೯-೧೬೨ |
| ವಿಹಾಯಸಗತಿರ್ಜ್ಯೋತಿಃ | ೧೦೭-೨೩೯ |
| ವೃಷಾಹೀ ವೃಷಭೋ ವಿಷ್ಣುಃ | ೪೧-೧೩೨ |
| ವೇದಾನ್ತಗೋ ಬ್ರಾಹ್ಮಣಃ ಸ್ಯಾತ್ | ೧೨೩-೨೬೭ |
| ವೇದ್ಯೋ ವೈದ್ಯಃ ಸದಾಯೋಗೀ | ೩೧-೧೧೭ |
| ವೇದಾಃ ಸ್ವಾಙ್ಗೋಽಜಿತಃ ಕೃಷ್ಣ | ೭೨-೧೮೩ |
| ವೈಕುಣ್ಠಃ ಪುರುಷಃ ಪ್ರಾಣಃ | ೫೭-೧೫೮ |
| ವ್ಯವಸಾಯೋ ವ್ಯವಸ್ಥಾನಃ | ೫೫-೧೫೪ |
| ಶಙ್ಖಭೃನ್ನನ್ದಕೀ ಚಕ್ರೀ | ೧೨೦-೨೬೨ |
| ಶುಭಾಙ್ಗಃ ಶಾನ್ತಿದಃ ಸ್ರಷ್ಟಾ | ೭೬-೧೮೯ |
| ಶುಭಾಙ್ಗೋ ಲೋಕಸಾರಙ್ಗಃ | ೯೭-೨೨೦ |
| ಶ್ರೀದಃ ಶ್ರೀಶಃ ಶ್ರೀನಿವಾಸಃ | ೭೮-೧೯೨ |
| ಶ್ರುತ್ವಾಧರ್ಮಾನಶೇಷೇಣ | ೧-೨ |
| ಸತ್ತ್ವವಾನ್ ಸಾತ್ತ್ವಿಕಃ ಸತ್ಯಃ | ೧೦೬-೨೩೮ |
| ಸದ್ಗತಿಃ ಸತ್ಕೃತಿಃ ಸತ್ತಾ | ೮೮-೨೦೬ |
| ಸನಾತ್ ಸನಾತನತಮಃ | ೧೦೯-೨೪೨ |
| ಸಮಾವರ್ತೋಽನಿವೃತ್ತಾತ್ಮಾ | ೯೬-೨೧೯ |
| ಸರ್ವಗಸ್ಸರ್ವವಿದ್ಭಾನುಃ | ೨೭-೧೧೦ |
| ಸರ್ವಶ್ಶರ್ವಶ್ಶಿವಃ ಸ್ಥಾಣುಃ | ೧೭-೮೬ |
| ಸರ್ವಾಗಮಾನಾಮಾಚಾರಃ | ೧೩೭-೨೭೪ |
| ಸಸುರಾಸುರಗನ್ಧರ್ವಮ್ | ೧೩೫-೨೭೪ |
| ಸಹಸ್ರಾರ್ಚಿಃ ಸಪ್ತಜಿಹ್ವಃ | ೧೦೨-೨೩೦ |
| ಸುಧನ್ವಾಽಖಣ್ಡಪರಶುಃ | ೭೪-೧೮೬ |
| ಸುಪ್ರಸಾದಃ ಪ್ರಸನ್ನಾತ್ಮಾ | ೩೯-೧೨೮ |
| ಸುಭುಜೋ ದುರ್ಧರೋ ವಾಗ್ಮೀ | ೪೨-೧೩೩ |
| ಸುರೇಶಃ ಶರಣಂ ಶರ್ಮ | ೨೩-೧೦೨ |
| ಸುಲಭಃ ಸುವ್ರತಃ ಸಿದ್ಧಃ | ೧೦೧-೨೨೮ |
| ಸುವರ್ಣ ಬಿನ್ದುರಕ್ಷೋಭ್ಯಃ | ೯೯-೨೨೪ |
| ಸುವರ್ಣವರ್ಣೋ ಹೇಮಾಙ್ಗಃ | ೯೨-೨೧೩ |
| ಸುವ್ರತಃ ಸುಮುಖಃ ಸೂಕ್ಷ್ಮಃ | ೬೨-೧೬೭ |
| ಸೋಮಪೋಽಮೃತಪಃ ಸೋಮಃ | ೬೭-೧೭೫ |
| ಸ್ಕನ್ದಃ ಸ್ಕನ್ದಧರೋ ಧುರ್ಯೋ | ೪೯-೧೪೪ |
| ಸ್ತವ್ಯಃ ಸ್ತವಪ್ರಿಯಃ ಸ್ತೋತ್ರಮ್ | ೮೬-೨೦೩ |
| ಸ್ವಕ್ಷಂ: ಸ್ವಙ್ಗಃ ಶತಾನನ್ದಃ | ೭೯-೧೯೩ |
| ಸ್ವಯಂಭೂಃ ಶಮ್ಭುರಾದಿತ್ಯಃ | ೧೮-೮೯ |
| ಸ್ಥಾಪನಃ ಸ್ವವಶೋ ವ್ಯಾಪೀ | ೬೩-೧೬೯ |

# ನಾಮಗಳ ಅಕ್ಷರಾನುಕ್ರಮಣಿಕೆ

ಅ


| | |
|---|---|
| ಅಕ್ರೂರಃ | ೯೧೫ |
| ಅಕ್ಷರಮ್ | ೪೮೧ |
| ಅಕ್ಷರಃ | ೧೭ |
| ಅಕ್ಷೋಭ್ಯಃ | ೮೦೧ |
| ಅಕ್ಷೋಭ್ಯಃ | ೯೯೯ |
| ಅಖಂಡಪರಶುಃ | ೫೬೮ |
| ಅಗ್ರಜಃ | ೮೯೧ |
| ಅಗ್ರಣೀಃ | ೨೧೮ |
| ಅಗ್ರಾಹ್ಯಃ | ೫೫ |
| ಅಚಲಃ | ೭೪೫ |
| ಅಚಿಂತ್ಯಃ | ೮೩೨ |
| ಅಚ್ಯುತಃ | ೧೦೦ |
| ಅಜಃ | ೯೫ |
| ಅಜಃ | ೫೨೧ |
| ಅಜಿತಃ | ೫೪೯ |
| ಅಣುಃ | ೮೩೫ |
| ಅತೀಂದ್ರಃ | ೧೫೭ |
| ಅತೀಂದ್ರಿಯಃ | ೧೬೯ |
| ಅತುಲಃ | ೩೫೫ |
| ಅದೃಶ್ಯಃ | ೩೦೪ |
| ಅದ್ಭುತಃ | ೮೯೫ |
| ಅಧಾತಾ | ೯೫೧ |
| ಅಧಿಷ್ಠಾನಮ್ | ೩೨೪ |
| ಅಧೃತಃ | ೮೪೨ |
| ಅಧೋಕ್ಷಜಃ | ೪೧೫ |
| ಅನಘಃ | ೧೪೬ |
| ಅನಘಃ | ೮೩೧ |
| ಅನಂತಜಿತ್ | ೩೦೭ |
| ಅನಂತರೂಪಃ | ೯೩೨ |
| ಅನಂತಶ್ರೀಃ | ೯೩೩ |
| ಅನಂತಃ | ೬೫೯ |
| ಅನಂತಃ | ೮೮೬ |
| ಅನಂತಾತ್ಮಾ | ೫೧೮ |
| ಅನಂದಃ (ನಂದಃ) | ೫೨೮ |
| ಅನಯಃ | ೬೦೦ |
| ಅನರ್ಥಃ | ೪೩೧ |
| ಅನಲಃ | ೨೯೩ |
| ಅನಲಃ | ೭೧೧ |
| ಅನಾದಿನಿಧನಃ | ೪೨ |
| ಅನಾದಿಃ | ೯೪೧ |
| ಅನಾಮಯಃ | ೬೮೯ |
| ಅನಿಮಿಷಃ | ೨೧೫ |
| ಅನಿಯಮಃ | ೮೬೫ |
| ಅನಿರುದ್ಧಃ | ೧೮೫ |
| ಅನಿರುದ್ಧಃ | ೬೩೮ |
| ಅನಿರ್ದೇಶ್ಯವಪುಃ | ೧೭೭ |
| ಅನಿರ್ದೇಶ್ಯವಪುಃ | ೬೫೯ |
| ಅನಿರ್ವಿಣ್ಣಃ | ೪೩೫ |
| ಅನಿರ್ವಿಣ್ಣಃ | ೮೯೨ |
| ಅನಿಲಃ | ೨೩೪ |
| ಅನಿಲಃ | ೮೧೨ |
| ಅನಿವರ್ತೀ | ೫೯೬ |
| ಅನಿವೃತ್ತಾತ್ಮಾ | ೭೭೪ |
| ಅನೀಶಃ | ೬೨೬ |
| ಅನುಕೂಲಃ | ೩೪೨ |
| ಅನುತ್ತಮಃ | ೮೧ |
| ಅನೇಕಮೂರ್ತಿಃ | ೭೨೧ |
| ಅಂತಕಃ | ೫೭೦ |
| ಅನ್ನಮ್ | ೯೮೩ |
| ಅನ್ನಾದಃ | ೯೮೪ |
| ಅಪರಾಜಿತಃ | ೭೧೬ |
| ಅಪರಾಜಿತಃ | ೮೬೨ |
| ಅಪಾಂನಿಧಿಃ | ೩೨೩ |
| ಅಪ್ಯಯಃ | ೯೦೦ |
| ಅಪ್ರತಿರಥಃ | ೬೩೯ |
| ಅಪ್ರಮತ್ತಃ | ೩೨೫ |
| ಅಪ್ರಮೇಯಃ | ೪೬ |
| ಅಪ್ರಮೇಯಾತ್ಮಾ | ೭೪೮ |
| ಅಭಿಪ್ರಾಯಃ | ೮೭೧ |
| ಅಭೀಮಃ (ಭೀಮಃ) | ೩೫೭ |
| ಅಭೂಃ (ಭೂಃ) | ೪೩೭ |
| ಅಮರಪ್ರಭುಃ | ೪೯ |
| ಅಮಾನೀ | ೭೪೭ |
| ಅಮಿತವಿಕ್ರಮಃ | ೫೧೬ |
| ಅಮಿತವಿಕ್ರಮಃ | ೬೪೧ |
| ಅಮಿತಾಶನಃ | ೩೭೨ |
| ಅಮೂರ್ತಿಮಾನ್ | ೭೨೦ |
| ಅಮೂರ್ತಿಃ | ೮೩೦ |
| ಅಮೃತಪಃ | ೫೦೪ |
| ಅಮೃತವಪುಃ | ೮೧೪ |
| ಅಮೃತಃ | ೧೧೯ |
| ಅಮೃತಾಶಃ | ೮೧೩ |
| ಅಮೃತಾಂಶೂದ್ಭವಃ | ೨೮೩ |
| ಅಮೃತ್ಯುಃ | ೧೯೮ |
| ಅಮೇಯಾತ್ಮಾ | ೧೦೨ |
| ಅಮೇಯಾತ್ಮಾ | ೧೭೯ |
| ಅಮೋಘಃ | ೧೧೦ |

| | |
|---|---|
| ಅಮೋಘಃ | ೧೫೪ |
| ಅಮ್ಭೋನಿಧಿಃ | ೫೧೭ |
| ಅರವಿನ್ದಾಕ್ಷಃ | ೩೪೭ |
| ಅರೌದ್ರಃ | ೯೦೬ |
| ಅರ್ಕಃ | ೭೯೫ |
| ಅರ್ಚಿತಃ | ೬೩೪ |
| ಅರ್ಚಿಷ್ಮಾನ್ | ೬೩೩ |
| ಅರ್ಘಃ | ೪೩೦ |
| ಅರ್ಹಃ | ೮೭೩ |
| ಅವಿಜ್ಞಾತಾ | ೪೮೨ |
| ಅವಿಧೇಯಾತ್ಮಾ | ೬೨೧ |
| ಅವಿಶಿಷ್ಟಃ | ೩೦೯ |
| ಅವ್ಯಕ್ತಃ | ೭೨೨ |
| ಅವ್ಯಙ್ಗಃ | ೧೨೯ |
| ಅವ್ಯಯಃ | ೧೩ |
| ಅಶೋಕಃ | ೩೩೬ |
| ಅಶ್ವತ್ಥಃ | ೮೨೪ |
| ಅಸಂಖ್ಯೇಯಃ | ೨೪೭ |
| ಅಸತ್ | ೪೭೯ |
| ಅಸಮ್ಮಿತಃ | ೧೦೮ |
| ಅಸುಖದಃ | ೮೮೯ |
| ಅಹಸ್ಸಂವರ್ತಕಃ | ೨೩೨ |
| ಅಹಃ | ೯೦ |
| **ಆ** | |
| ಆತ್ಮಯೋನಿಃ | ೯೮೫ |
| ಆತ್ಮವಾನ್ | ೮೪ |
| ಆದಿತ್ಯಃ | ೩೯ |
| ಆದಿತ್ಯಃ | ೫೬೩ |
| ಆದಿದೇವಃ | ೩೩೪ |
| ಆದಿದೇವಃ | ೪೯೦ |
| ಆಧಾರನಿಲಯಃ | ೯೫೦ |
| ಆನನ್ದಃ | ೫೨೬ |
| ಆನನ್ದೀ | ೫೬೦ |
| ಆವರ್ತನಃ | ೨೨೮ |
| ಆಶ್ರಮಃ | ೮೫೨ |
| **ಇ** | |
| ಇಜ್ಯಃ | ೪೪೬ |
| ಇನ್ದ್ರಕರ್ಮಾ | ೭೮೬ |
| ಇಷ್ಟಃ | ೩೦೮ |
| **ಈ** | |
| ಈಶಾನಃ | ೬೪ |
| ಈಶ್ವರಃ | ೩೬ |
| ಈಶ್ವರಃ | ೭೪ |
| **ಉ** | |
| ಉಗ್ರಃ | ೪೨೧ |
| ಉತ್ತರಃ | ೪೯೪ |
| ಉತ್ತಾರಣಃ | ೯೨೩ |
| ಉದೀರ್ಣಃ | ೬೨೪ |
| ಉದುಮ್ಬರಃ | ೮೨೩ |
| ಉದ್ಭವಃ | ೩೭೩ |
| ಉದ್ಭವಃ | ೭೯೦ |
| ಉಪೇನ್ದ್ರಃ | ೧೫೧ |
| **ಊ** | |
| ಊರ್ಜಿತಶಾಸನಃ | ೯೧೦ |
| ಊರ್ಜಿತಃ | ೧೫೬ |
| ಊರ್ಧ್ವಗಃ | ೯೫೪ |
| **ಋ** | |
| ಋತುಃ | ೪೧೬ |
| ಋದ್ಧಃ | ೨೭೮ |
| ಋದ್ಧಃ | ೩೫೧ |
| **ಏ** | |
| ಏಕಪಾತ್ | ೭೭೨ |
| ಏಕಃ | ೭೨೫ |
| ಏಕಾತ್ಮಾ | ೯೬೫ |
| **ಓ** | |
| ಓಜಸ್ತೇಜೋದ್ಯುತಿಧರಃ | ೨೭೫ |
| **ಔ** | |
| ಔಷಧಮ್ | ೨೮೭ |
| **ಕ** | |
| ಕಥಿತಃ | ೮೪೮ |
| ಕನಕಾಙ್ಗದೀ | ೫೪೧ |
| ಕಪಿಲಃ | ೪೯೮ |
| ಕಪಿಃ | ೪೯೯ |
| ಕಪೀನ್ದ್ರಃ | ೫೦೧ |
| ಕರಣಮ್ | ೩೭೮ |
| ಕರ್ತಾ | ೩೮೦ |
| ಕವಿಃ | ೧೩೨ |
| ಕಾನ್ತಃ | ೨೯೬ |
| ಕಾನ್ತಃ | ೬೫೪ |
| ಕಾಮಕೃತ್ | ೨೯೫ |
| ಕಾಮದೇವಃ | ೬೫೧ |
| ಕಾಮಪಾಲಃ | ೬೫೨ |
| ಕಾಮಪ್ರದಃ | ೨೯೮ |
| ಕಾಮಹಾ | ೨೯೪ |
| ಕಾಮಃ | ೨೯೭ |
| ಕಾಮೀ | ೬೫೩ |
| ಕಾರಣಮ್ | ೩೭೯ |
| ಕಾಲನೇಮಿನಿಹಾ | ೬೪೨ |
| ಕಾಲಃ | ೪೧೮ |
| ಕಿಮ್ | ೭೨೯ |

| | |
|---|---|
| ಕುಣ್ಡಲೀ | ೯೦೭ |
| ಕುನ್ದರಃ | ೮೦೮ |
| ಕುನ್ದಃ | ೮೦೯ |
| ಕುಮುದಃ | ೫೮೯ |
| ಕುಮುದಃ | ೮೦೭ |
| ಕುಮ್ಭಃ | ೬೫೫ |
| ಕುವಲೇಶಯಃ | ೫೯೦ |
| ಕೃತಕರ್ಮಾ | ೭೮೮ |
| ಕೃತಜ್ಞಃ | ೮೨ |
| ಕೃತಜ್ಞಃ | ೫೩೬ |
| ಕೃತಲಕ್ಷಣಃ | ೪೮೫ |
| ಕೃತಾಕೃತಃ | ೧೫೬ |
| ಕೃತಾಗಮಃ | ೬೫೫ |
| ಕೃತಾಗಮಃ | ೭೮೯ |
| ಕೃತಾನ್ತಕೃತ್ | ೫೩೭ |
| ಕೃತಿಃ | ೮೩ |
| ಕೃಶಃ | ೮೩೭ |
| ಕೃಷ್ಣಃ | ೫೭ |
| ಕೃಷ್ಣಃ | ೫೫೦ |
| ಕೇಶವಃ | ೨೩ |
| ಕೇಶವಃ | ೬೪೮ |
| ಕೇಶಿಹಾ | ೬೪೯ |
| ಕಃ | ೭೨೮ |
| ಕ್ರತುಃ | ೪೪೮ |
| ಕ್ರಮಃ | ೭೯ |
| ಕ್ರೋಧಕೃತ್ಕರ್ತಾ | ೩೧೫ |
| ಕ್ರೋಧಹಾ | ೩೧೪ |
| ಕ್ಷಮಿಣಾಂ ವರಃ | ೯೧೯ |
| ಕ್ಷರಮ್ | ೪೮೦ |
| ಕ್ಷಮಃ | ೪೪೨ |
| ಕ್ಷಾಮಃ | ೪೪೩ |
| ಕ್ಷಾಮಃ | ೮೫೪ |
| ಕ್ಷಿತೀಶಃ | ೯೯೧ |
| ಕ್ಷೇತ್ರಜ್ಞಃ | ೧೬ |
| ಕ್ಷೇಮಕೃತ್ | ೫೯೯ |
| ಕ್ಷೋಭಣಃ | ೩೭೪ |
| **ಖ** | |
| ಖಣ್ಡಪರಶುಃ | ೫೬೮ |
| **ಗ** | |
| ಗತಿಸತ್ತಮಃ | ೫೬೬ |
| ಗದಾಗ್ರಜಃ | ೭೬೪ |
| ಗದಾಧರಃ | ೯೯೭ |
| ಗಭಸ್ತಿನೇಮಿಃ | ೪೮೬ |
| ಗಭೀರಃ | ೫೪೩ |
| ಗಭೀರಾತ್ಮಾ | ೯೩೭ |
| ಗರುಡಧ್ವಜಃ | ೩೫೪ |
| ಗಹನಃ | ೩೮೮ |
| ಗಹನಃ | ೫೪೪ |
| ಗುಣಭೃತ್ | ೮೩೯ |
| ಗುಪ್ತಃ | ೫೪೫ |
| ಗುರುತಮಃ | ೨೧೦ |
| ಗುರುಃ | ೨೦೯ |
| ಗುಹಃ | ೩೮೩ |
| ಗುಹ್ಯಃ | ೫೪೨ |
| ಗೋಪತಿಃ | ೪೯೫ |
| ಗೋಪತಿಃ | ೫೯೨ |
| ಗೋಪ್ತಾ | ೪೯೬ |
| ಗೋಪ್ತಾ | ೫೯೩ |
| ಗೋವಿದಾಂ ಪತಿಃ | ೧೮೮ |
| ಗೋವಿನ್ದಃ | ೧೮೭ |
| ಗೋವಿನ್ದಃ | ೫೩೯ |
| ಗೋಹಿತಃ | ೫೯೧ |
| ಗ್ರಾಮಣೀಃ | ೨೧೯ |
| **ಘ** | |
| ಘೃತಾಶೀಃ | ೭೪೪ |
| **ಚ** | |
| ಚಕ್ರಗದಾಧರಃ | ೫೪೬ |
| ಚಕ್ರೀ | ೯೦೮ |
| ಚಕ್ರೀ | ೯೯೫ |
| ಚತುರಶ್ರಃ | ೯೩೬ |
| ಚತುರಾತ್ಮಾ | ೧೩೭ |
| ಚತುರಾತ್ಮಾ | ೭೬೯ |
| ಚತುರ್ಗತಿಃ | ೭೬೮ |
| ಚತುರ್ದಂಷ್ಟ್ರಃ | ೧೩೯ |
| ಚತುರ್ಬಾಹುಃ | ೭೬೬ |
| ಚತುರ್ಭಾವಃ | ೭೭೦ |
| ಚತುರ್ಭುಜಃ | ೧೪೦ |
| ಚತುರ್ಮೂರ್ತಿಃ | ೭೬೫ |
| ಚತುರ್ವೇದವಿತ್ | ೭೭೧ |
| ಚತುರ್ವ್ಯೂಹಃ | ೧೩೮ |
| ಚತುರ್ವ್ಯೂಹಃ | ೭೬೭ |
| ಚನ್ದನಾಙ್ಗದೀ | ೭೪೦ |
| ಚನ್ದ್ರಾಂಶುಃ | ೨೮೧ |
| ಚಲಃ | ೭೪೬ |
| ಚಾಣೂರಾನ್ಧ್ರನಿಷೂದನಃ | ೮೨೫ |
| **ಛ** | |
| ಛಿನ್ನಸಂಶಯಃ | ೬೨೩ |
| **ಜ** | |
| ಜಗತಃ ಸೇತುಃ | ೨೮೮ |
| ಜಗದಾದಿಜಃ | ೧೪೫ |

ಜನಜನ್ಮಾದಿಃ ೯೪೭
ಜನನಃ ೯೪೬
ಜನಾರ್ದನಃ ೧೨೬
ಜನೇಶ್ವರಃ ೩೪೧
ಜನ್ಮಮೃತ್ಯುಜರಾತಿಗಃ ೯೬೬
ಜಯನ್ತಃ ೭೯೮
ಜಯಃ ೫೦೯
ಜಹ್ನುಃ ೨೪೪
ಜಿತಕ್ರೋಧಃ ೪೬೨
ಜಿತಮನ್ಯುಃ ೯೩೪
ಜಿತಾಮಿತ್ರಃ ೫೨೪
ಜೀವನಃ ೯೩೦
ಜೀವಃ ೫೧೩
ಜೇತಾ ೧೪೮
ಜ್ಯೇಷ್ಠಃ ೬೭
ಜ್ಯೋತಿರಾದಿತ್ಯಃ ೫೬೪
ಜ್ಯೋತಿರ್ಗಣೇಶ್ವರಃ ೬೧೯
ಜ್ಯೋತಿಃ ೮೭೭
ಜ್ಞಾನಗಮ್ಯಃ ೪೯೭
ಜ್ಞಾನಮುತ್ತಮಮ್ ೪೫೪

ತ

ತತ್ ೭೩೧
ತತ್ತ್ವವಿತ್ ೯೬೪
ತತ್ತ್ವಮ್ ೯೬೩
ತನ್ತುವರ್ಧನಃ ೭೮೫
ತಾರಣಃ ೩೩೭
ತಾರಃ ೩೩೮
ತಾರಃ ೯೬೮
ತೀರ್ಥಕರಃ ೬೯೧
ತುಷ್ಟಃ ೩೯೧
ತೇಜೋವೃಷಃ ೭೫೭
ತ್ರಿಕಕುಬ್ಧಾಮ ೬೧
ತ್ರಿದಶಾಧ್ಯಕ್ಷಃ ೫೩೫
ತ್ರಿಪದಃ ೫೩೪
ತ್ರಿಲೋಕಧೃಕ್ ೭೫೧
ತ್ರಿಲೋಕಾತ್ಮಾ ೬೪೬
ತ್ರಿಲೋಕೇಶಃ ೬೪೭
ತ್ರಿವಿಕ್ರಮಃ ೫೩೦
ತ್ರಿಸಾಮಾ ೫೭೪
ತ್ವಷ್ಟಾ ೫೨

ದ

ದಕ್ಷಃ ೪೨೩
ದಕ್ಷಃ ೯೧೭
ದಕ್ಷಿಣಃ ೯೧೮
ದಣ್ಡಃ ೫೮೯
ದಮನಃ ೧೯೦
ದಮಯಿತಾ ೮೬೦
ದಮಃ ೮೬೧
ದರ್ಪದಃ ೭೧೩
ದರ್ಪಹಾ ೭೧೨
ದಾಮೋದರಃ ೩೬೭
ದಾರುಣಃ ೫೬೯
ದಾಶಾರ್ಹಃ ೫೧೧
ದಿವಃಸ್ಪೃಕ್ ೫೭೧
ದಿಶಃ ೯೪೦
ದೀಪ್ತಮೂರ್ತಿಃ ೭೧೯
ದುರತಿಕ್ರಮಃ ೭೭೬
ದುರಾಧರ್ಷಃ ೮೧
ದುರಾರಿಹಾ ೭೮೧
ದುರಾವಾಸಃ ೭೮೦
ದುರ್ಗಮಃ ೭೭೮
ದುರ್ಗಃ ೭೭೯
ದುರ್ಜಯಃ ೭೭೫
ದುರ್ಧರಃ ೨೬೬
ದುರ್ಧರಃ ೭೧೫
ದುರ್ಮರ್ಷಣಃ ೨೦೫
ದುರ್ಲಭಃ ೭೭೭
ದುಷ್ಕೃತಿಹಾ ೯೨೪
ದುಃಸ್ವಪ್ನನಾಶನಃ ೯೨೬
ದೃಢಃ ೫೫೧
ದೃಪ್ತಃ ೭೧೪
ದೇವಃ ೩೭೫
ದೇವಕೀನನ್ದನಃ ೯೮೯
ದೇವಭೃದ್ ಗುರುಃ ೪೯೩
ದೇವೇಶಃ ೪೯೨
ದ್ಯುತಿಧರಃ ೭೫೮
ದ್ರವಿಣಪ್ರದಃ ೫೭೦

ಧ

ಧನಞ್ಜಯಃ ೬೬೦
ಧನುರ್ಧರಃ ೮೫೭
ಧನುರ್ವೇದಃ ೮೫೮
ಧನೇಶ್ವರಃ ೪೭೯
ಧನ್ಯಃ ೭೫೪
ಧನ್ವೀ ೭೬
ಧರಣೀಧರಃ ೨೩೫
ಧರಾಧರಃ ೭೫೬
ಧರ್ಮಕೃತ್ ೪೭೬
ಧರ್ಮಗುಪ್ ೪೭೫
ಧರ್ಮಯೂಪಃ ೪೩೮
ಧರ್ಮವಿದುತ್ತಮಃ ೪೦೪

| | |
|---|---|
| ಧರ್ಮಃ | ೪೦೩ |
| ಧರ್ಮಾಧ್ಯಕ್ಷಃ | ೧೩೫ |
| ಧರ್ಮಿ | ೪೭೭ |
| ಧಾತಾ | ೯೫೧ |
| ಧಾತುರುತ್ತಮಃ | ೪೫ |
| ಧಾಮ | ೨೧೧ |
| ಧೈರ್ಯಃ | ೩೨೯ |
| ಧೃತಾತ್ಮಾ | ೧೬೦ |
| ಧ್ರುವಃ | ೩೮೮ |

ನ

| | |
|---|---|
| ನಕ್ಷತ್ರನೇಮಿಃ | ೪೪೦ |
| ನಕ್ಷತ್ರೀ | ೪೪೧ |
| ನನ್ದಕೀ | ೯೯೪ |
| ನನ್ದನಃ | ೫೨೭ |
| ನನ್ದಃ | ೫೨೮ |
| ನನ್ದಿಃ | ೬೧೮ |
| ನಯಃ | ೩೯೯ |
| ನರಃ | ೨೪೬ |
| ನಹುಷಃ | ೩೧೨ |
| ನಾರಸಿಂಹವಪುಃ | ೨೧ |
| ನಾರಾಯಣಃ | ೨೪೫ |
| ನಿಗ್ರಹಃ | ೭೬೧ |
| ನಿಧಿರವ್ಯಯಃ | ೩೦ |
| ನಿಮಿಷಃ | ೨೧೪ |
| ನಿಯನ್ತಾ | ೮೬೪ |
| ನಿಯಮಃ | ೧೬೧ |
| ನಿಯಮಃ | ೮೬೫ |
| ನಿರ್ಗುಣಃ | ೮೪೦ |
| ನಿರ್ವಾಣಮ್ | ೫೭೭ |
| ನಿವೃತ್ತಾತ್ಮಾ | ೨೨೯ |
| ನಿವೃತ್ತಾತ್ಮಾ | ೫೯೭ |
| ನಿವೃತ್ತಾತ್ಮಾ | ೭೭೪ |
| ನಿಷ್ಠಾ | ೫೮೩ |
| ನೇತಾ | ೨೨೨ |
| ನೇಯಃ | ೩೯೮ |
| ನೈಕಕರ್ಮಕೃತ್ | ೪೬೯ |
| ನೈಕಜಃ | ೮೯೦ |
| ನೈಕಮಾಯಃ | ೩೦೨ |
| ನೈಕರೂಪಃ | ೨೭೧ |
| ನೈಕಶೃಙ್ಗಃ | ೭೬೩ |
| ನೈಕಃ | ೭೨೬ |
| ನೈಕಾತ್ಮಾ | ೪೬೮ |
| ನ್ಯಗ್ರೋಧಃ | ೮೨೨ |
| ನ್ಯಾಯಃ | ೨೨೧ |

ಪ

| | |
|---|---|
| ಪಣಃ | ೯೫೮ |
| ಪದಮನುತ್ತಮಮ್ | ೭೩೨ |
| ಪದ್ಮಗರ್ಭಃ | ೩೪೮ |
| ಪದ್ಮನಾಭಃ | ೪೮ |
| ಪದ್ಮನಾಭಃ | ೧೯೬ |
| ಪದ್ಮನಾಭಃ | ೩೪೬ |
| ಪದ್ಮನಿಭೇಕ್ಷಣಃ | ೩೪೫ |
| ಪದ್ಮೀ | ೩೪೪ |
| ಪರಮಸ್ಪಷ್ಟಃ | ೩೯೦ |
| ಪರಮಾತ್ಮಾ | ೧೧ |
| ಪರಮೇಶ್ವರಃ | ೩೭೭ |
| ಪರಮೇಷ್ಠೀ | ೪೧೯ |
| ಪರರ್ಧಿಃ | ೩೮೯ |
| ಪರಾಯಣಮ್ | ೫೮೫ |
| ಪರಿಗ್ರಹಃ | ೪೨೦ |
| ಪರ್ಜನ್ಯಃ | ೮೧೦ |
| ಪರ್ಯವಸ್ಥಿತಃ | ೯೩೧ |
| ಪವನಃ | ೨೯೧ |
| ಪವಿತ್ರಮ್ | ೬೨ |
| ಪಾಪನಾಶನಃ | ೯೯೨ |
| ಪಾವನಃ | ೮೧೧ |
| ಪಾವನಃ | ೨೯೨ |
| ಪುಣ್ಡರೀಕಾಕ್ಷಃ | ೧೧೧ |
| ಪುಣ್ಯಕೀರ್ತಿಃ | ೬೮೮ |
| ಪುಣ್ಯಶ್ರವಣಕೀರ್ತನಃ | ೯೨೨ |
| ಪುಣ್ಯಃ | ೬೮೭ |
| ಪುಣ್ಯಃ | ೯೨೫ |
| ಪುನರ್ವಸುಃ | ೧೫೦ |
| ಪುರನ್ದರಃ | ೩೩೫ |
| ಪುರಾತನಃ | ೪೯೮ |
| ಪುರುಜಿತ್ | ೫೦೬ |
| ಪುರುಷಃ | ೧೪ |
| ಪುರುಷಃ | ೪೦೬ |
| ಪುರುಷೋತ್ತಮಃ | ೨೪ |
| ಪುರುಸತ್ತಮಃ | ೫೦೭ |
| ಪುಷ್ಕರಾಕ್ಷಃ | ೪೦ |
| ಪುಷ್ಕರಾಕ್ಷಃ | ೫೫೬ |
| ಪುಷ್ಟಃ | ೩೯೨ |
| ಪುಷ್ಪಹಾಸಃ | ೯೫೨ |
| ಪೂತಾತ್ಮಾ | ೧೦ |
| ಪೂರಯಿತಾ | ೬೮೬ |
| ಪೂರ್ಣಃ | ೬೮೫ |
| ಪೃಥುಃ | ೪೧೦ |
| ಪೇಶಲಃ | ೯೧೬ |

ಪ್ರಕಾಶನಃ ೨೭೪
ಪ್ರಕಾಶಾತ್ಮಾ ೨೭೬
ಪ್ರಗ್ರಹಃ ೭೬೦
ಪ್ರಜಾಗರಃ ೯೫೩
ಪ್ರಜಾಪತಿಃ ೬೯
ಪ್ರಜಾಪತಿಃ ೧೯೭
ಪ್ರಜಾಭವಃ ೮೯
ಪ್ರಣವಃ ೪೦೯
ಪ್ರಣವಃ ೯೫೭
ಪ್ರತರ್ದನಃ ೫೯
ಪ್ರತಾಪನಃ ೨೭೭
ಪ್ರತಿಷ್ಠಿತಃ ೩೨೬
ಪ್ರತ್ಯಯಃ ೯೩
ಪ್ರಥಿತಃ ೩೧೯
ಪ್ರದ್ಯುಮ್ನಃ ೬೪೦
ಪ್ರಧಾನಪುರುಷೇಶ್ವರಃ ೨೦
ಪ್ರಪಿತಾಮಹಃ ೯೭೦
ಪ್ರಭವಃ ೩೪
ಪ್ರಭುಃ ೩೫
ಪ್ರಭುಃ ೨೯೯
ಪ್ರಭೂತಃ ೬೦
ಪ್ರಮಾಣಮ್ ೪೨೮
ಪ್ರಮಾಣಮ್ ೯೫೯
ಪ್ರಮೋದಃ ೫೨೫
ಪ್ರಸನ್ನಾತ್ಮಾ ೨೩೭
ಪ್ರಾಗ್ವಂಶಃ ೮೪೫
ಪ್ರಾಣಜೀವನಃ ೯೬೨
ಪ್ರಾಣದಃ ೬೫
ಪ್ರಾಣದಃ ೩೨೧
ಪ್ರಾಣದಃ ೪೦೮
ಪ್ರಾಣದಃ ೯೫೬
ಪ್ರಾಣನಿಲಯಃ ೯೬೦
ಪ್ರಾಣಭೃತ್ ೯೬೧
ಪ್ರಾಣಃ ೬೬
ಪ್ರಾಣಃ ೩೨೦
ಪ್ರಾಣಃ ೪೦೭
ಪ್ರಾಂಶುಃ ೧೫೩
ಪ್ರಿಯಕೃತ್ ೮೭೪
ಪ್ರಿಯಾರ್ಹಃ ೮೭೨
ಪ್ರೀತಿವರ್ಧನಃ ೮೭೫

ಬ

ಬಭ್ರುಃ ೧೧೬
ಬಹುಶಿರಾಃ ೧೧೫
ಬೀಜಮವ್ಯಯಮ್ ೪೨೯
ಬೃಹತ್ ೮೩೬
ಬೃಹದ್ಭಾನುಃ ೩೩೩
ಬೃಹದ್ರೂಪಃ ೨೭೨
ಬ್ರಹ್ಮ ೬೬೪
ಬ್ರಹ್ಮಕೃತ್ ೬೬೨
ಬ್ರಹ್ಮಜ್ಞಃ ೬೬೯
ಬ್ರಹ್ಮಣ್ಯಃ ೬೬೧
ಬ್ರಹ್ಮವಿತ್ ೬೬೬
ಬ್ರಹ್ಮವಿವರ್ಧನಃ ೬೬೫
ಬ್ರಹ್ಮಾ ೬೬೩
ಬ್ರಹ್ಮೀ ೬೬೮
ಬ್ರಾಹ್ಮಣಪ್ರಿಯಃ ೬೭೦
ಬ್ರಾಹ್ಮಣಃ ೬೬೭

ಭ

ಭಕ್ತವತ್ಸಲಃ ೭೩೬
ಭಗವಾನ್ ೫೫೮
ಭಗಹಾ ೫೫೯
ಭಯಕೃತ್ ೮೩೩
ಭಯನಾಶನಃ ೮೩೪
ಭಯಾಪಹಃ ೯೩೫
ಭರ್ತಾ ೩೩
ಭಾನುಃ ೨೮೪
ಭಾರಭೃತ್ ೮೪೭
ಭಾವನಃ ೩೨
ಭಾವಃ ೭
ಭಾಸ್ಕರದ್ಯುತಿಃ ೨೮೨
ಭಿಷಕ್ ೫೭೯
ಭೀಮಪರಾಕ್ರಮಃ ೯೪೯
ಭೀಮಃ ೩೫೭
ಭೀಮಃ ೯೪೮
ಭುಜಗೋತ್ತಮಃ ೧೯೩
ಭೂಗರ್ಭಃ ೭೧
ಭೂತಕೃತ್ ೫
ಭೂತಭವ್ಯ ಭವತ್ಪ್ರಭುಃ ೪
ಭೂತಭವ್ಯ ಭವನ್ನಾಥಃ ೨೯೦
ಭೂತಭಾವನಃ ೯
ಭೂತಭೃತ್ ೬
ಭೂತಮಹೇಶ್ವರಃ ೪೮೯
ಭೂತಾತ್ಮಾ ೮
ಭೂತಾದಿಃ ೨೯
ಭೂತಾವಾಸಃ ೭೦೮
ಭೂತಿಃ ೬೩೦
ಭೂರಿದಕ್ಷಿಣಃ ೫೦೨
ಭೂರ್ಭುವಸ್ಸ್ವಸ್ತರುಃ ೯೬೭
ಭೂರ್ಭುವಃ ೯೪೨
ಭೂಶಯಃ ೬೨೮

| | |
|---|---|
| ಭೂಷಣಃ | ೬೮೯ |
| ಭೂಃ | ೪೩೨ |
| ಭೇಷಜಮ್ | ೫೭೮ |
| ಭೋಕ್ತಾ | ೧೪೩ |
| ಭೋಕ್ತಾ | ೫೦೦ |
| ಭೋಕ್ತಾ | ೮೮೦ |
| ಭೋಜನಮ್ | ೧೪೨ |
| ಭ್ರಾಜಿಷ್ಣುಃ | ೧೪೧ |
| **ಮ** | |
| ಮಙ್ಗಲಂ ಪರಮ್ | ೬೩ |
| ಮಧುಸೂದನಃ | ೭೩ |
| ಮಧುಃ | ೧೬೮ |
| ಮನುಃ | ೫೧ |
| ಮನೋಜವಃ | ೬೯೦ |
| ಮನೋಹರಃ | ೪೬೧ |
| ಮನ್ತ್ರಃ | ೨೮೦ |
| ಮರೀಚಿಃ | ೧೮೯ |
| ಮಹರ್ದ್ಧಿಃ | ೩೫೦ |
| ಮಹರ್ಷಿಃ ಕಪಿಲಾಚಾರ್ಯಃ | ೫೩೧ |
| ಮಹಾಕರ್ಮಾ | ೬೭೨ |
| ಮಹಾಕರ್ಮಾ | ೭೮೭ |
| ಮಹಾಕೋಶಃ | ೪೩೨ |
| ಮಹಾಕ್ರತುಃ | ೬೭೫ |
| ಮಹಾಕ್ರಮಃ | ೬೭೧ |
| ಮಹಾಕ್ಷಃ | ೩೫೩ |
| ಮಹಾಗರ್ತಃ | ೮೦೪ |
| ಮಹಾತಪಾಃ | ೧೨೨ |
| ಮಹಾತೇಜಾಃ | ೬೭೩ |
| ಮಹಾದೇವಃ | ೪೯೧ |
| ಮಹಾದ್ಯುತಿಃ | ೧೭೬ |
| ಮಹಾದ್ರಿಧೃಕ್ | ೧೮೦ |
| ಮಹಾಧನಃ | ೪೩೪ |
| ಮಹಾನ್ | ೮೪೧ |
| ಮಹಾನಿಧಿಃ | ೮೦೬ |
| ಮಹಾಬಲಃ | ೧೭೨ |
| ಮಹಾಬುದ್ಧಿಃ | ೧೭೩ |
| ಮಹಾಭಾಗಃ | ೩೭೦ |
| ಮಹಾಭೂತಃ | ೮೦೫ |
| ಮಹಾಭೋಗಃ | ೪೩೩ |
| ಮಹಾಮಖಃ | ೪೩೯ |
| ಮಹಾಮನಾಃ | ೫೫೭ |
| ಮಹಾಮಾಯಃ | ೧೭೦ |
| ಮಹಾಮೂರ್ತಿಃ | ೭೧೮ |
| ಮಹಾಯಜ್ಞಃ | ೬೭೭ |
| ಮಹಾಯಜ್ವಾ | ೬೭೬ |
| ಮಹಾರ್ಹಃ | ೫೨೨ |
| ಮಹಾವರಾಹಃ | ೫೩೮ |
| ಮಹಾವೀರ್ಯಃ | ೧೭೪ |
| ಮಹಾಶಕ್ತಿಃ | ೧೭೫ |
| ಮಹಾಶನಃ | ೩೦೩ |
| ಮಹಾಶೃಙ್ಗಃ | ೫೩೬ |
| ಮಹಾಸ್ವನಃ | ೪೧ |
| ಮಹಾಹವಿಃ | ೬೭೮ |
| ಮಹಾಹ್ರದಃ | ೮೦೩ |
| ಮಹೀಧರಃ | ೩೧೭ |
| ಮಹೀಧರಃ | ೩೬೯ |
| ಮಹೀಭರ್ತಾ | ೧೮೨ |
| ಮಹೇಜ್ಯಃ | ೪೪೭ |
| ಮಹೇನ್ದ್ರಃ | ೨೬೮ |
| ಮಹೇಷ್ವಾಸಃ | ೧೮೧ |
| ಮಹೋತ್ಸಾಹಃ | ೧೭೧ |
| ಮಹೋದಧಿಶಯಃ | ೫೧೯ |
| ಮಹೋರಗಃ | ೬೭೪ |
| ಮಾಧವಃ | ೭೨ |
| ಮಾಧವಃ | ೧೬೭ |
| ಮಾಧವಃ | ೭೩೫ |
| ಮಾನದಃ | ೭೪೮ |
| ಮಾನ್ಯಃ | ೭೪೯ |
| ಮಾರ್ಗಃ | ೩೬೫ |
| ಮಾರ್ಗಃ | ೩೯೭ |
| ಮುಕುನ್ದಃ | ೫೧೫ |
| ಮುಕ್ತಾನಾಂ ಪರಮಾ ಗತಿಃ | ೧೨ |
| ಮೇದಿನೀಪತಿಃ | ೫೩೩ |
| ಮೇಧಜಃ | ೭೩೩ |
| ಮೇಧಾವೀ | ೭೩ |
| **ಯ** | |
| ಯಜ್ಞಕೃತ್ | ೯೭೭ |
| ಯಜ್ಞಗುಹ್ಯಮ್ | ೯೮೨ |
| ಯಜ್ಞಪತಿಃ | ೯೭೨ |
| ಯಜ್ಞಭುಕ್ | ೯೭೯ |
| ಯಜ್ಞಭೃತ್ | ೯೭೬ |
| ಯಜ್ಞವಾಹನಃ | ೯೭೫ |
| ಯಜ್ಞಸಾಧನಃ | ೯೮೦ |
| ಯಜ್ಞಃ | ೪೪೫ |
| ಯಜ್ಞಃ | ೯೭೧ |
| ಯಜ್ಞಾಙ್ಗಃ | ೯೭೪ |
| ಯಜ್ಞಾನ್ತಕೃತ್ | ೯೮೧ |
| ಯಜ್ಞೀ | ೯೭೮ |

| | | | |
|---|---|---|---|
| ಯಜ್ವಾ | ೯೭೩ | ವಷಟ್ಕಾರಃ | ೩ |
| ಯತ್ | ೭೩೦ | ವಸುದಃ | ೨೬೯ |
| ಯದುಶ್ರೇಷ್ಠಃ | ೭೦೫ | ವಸುಪ್ರದಃ | ೬೯೪ |
| ಯಮಃ | ೧೬೨ | ವಸುಮನಾಃ | ೧೦೫ |
| ಯಮಃ | ೮೬೬ | ವಸುಮನಾಃ | ೬೯೭ |
| ಯುಗಾದಿಕೃತ್ | ೩೦೦ | ವಸುರೇತಾಃ | ೬೯೨ |
| ಯುಗಾವರ್ತಃ | ೩೦೧ | ವಸುಃ | ೧೦೪ |
| ಯೋಗವಿದಾಂ ನೇತಾ | ೧೯ | ವಸುಃ | ೨೭೦ |
| ಯೋಗಃ | ೧೮ | ವಸುಃ | ೬೯೬ |
| ಯೋಗೀ | ೮೪೯ | ವಹ್ನಿಃ | ೨೩೩ |
| ಯೋಗೀಶಃ | ೮೫೦ | ವಾಗ್ಮೀ | ೨೬೭ |
| **ರ** | | ವಾಚಸ್ಪತಿರಯೋನಿಜಃ | ೫೭೩ |
| ರಕ್ಷಣಃ | ೯೨೮ | ವಾಚಸ್ಪತಿರುದಾರಧೀಃ | ೨೧೭ |
| ರಣಪ್ರಿಯಃ | ೬೮೪ | ವಾಜಸನಃ | ೭೯೬ |
| ರತ್ನಗರ್ಭಃ | ೪೭೩ | ವಾಮನಃ | ೧೫೨ |
| ರತ್ನನಾಭಃ | ೭೯೭ | ವಾಯುವಾಹನಃ | ೩೩೧ |
| ರಥಾಙ್ಗ ಪಾಣಿಃ | ೯೯೮ | ವಾಯುವಾಹನಃ | ೮೫೬ |
| ರವಿಲೋಚನಃ | ೮೮೫ | ವಾಯುಃ | ೪೧೪ |
| ರವಿಃ | ೮೮೧ | ವಾರುಣಃ | ೫೫೪ |
| ರಾಮಃ | ೩೯೪ | ವಾಸವಾನುಜಃ | ೩೨೨ |
| ರುಚಿರಾಙ್ಗದಃ | ೯೪೫ | ವಾಸುದೇವಃ | ೩೩೨ |
| ರುದ್ರಃ | ೧೧೪ | ವಾಸುದೇವಃ | ೬೯೫ |
| ರೋಹಿತಃ | ೩೬೪ | ವಾಸುದೇವಃ | ೭೦೯ |
| **ಲ** | | ವಿಕರ್ತಾ | ೩೮೧ |
| ಲಕ್ಷ್ಮೀವಾನ್ | ೩೬೧ | ವಿಕ್ರಮಃ | ೭೮ |
| ಲಕ್ಷ್ಮೀಃ | ೯೪೩ | ವಿಕ್ರಮೀ | ೭೫ |
| ಲೋಕತ್ರಯಾಶ್ರಯಃ | ೬೧೪ | ವಿಕ್ರಮೀ | ೯೦೯ |
| ಲೋಕನಾಥಃ | ೭೩೪ | ವಿಕ್ಷರಃ | ೩೬೩ |
| ಲೋಕಬನ್ಧುಃ | ೭೩೩ | ವಿಜಯಃ | ೧೪೭ |
| ಲೋಕಸಾರಙ್ಗಃ | ೭೮೩ | ವಿಜಿತಾತ್ಮಾ | ೬೨೦ |
| ಲೋಕಸ್ವಾಮೀ | ೭೫೦ | ವಿದಾರಣಃ | ೪೬೪ |
| ಲೋಕಾಧಿಷ್ಠಾನಮ್ | ೮೯೪ | ವಿದಿಶಃ | ೯೩೮ |
| ಲೋಕಾಧ್ಯಕ್ಷಃ | ೧೩೩ | ವಿದ್ವತ್ತಮಃ | ೯೨೦ |
| ಲೋಹಿತಾಕ್ಷಃ | ೫೮ | ವಿಧಾತಾ | ೪೮೪ |
| **ವ** | | ವಿನಯಃ | ೫೦೮ |
| ವತ್ಸರಃ | ೪೭೦ | ವಿನಯಿತಾಸಾಕ್ಷೀ | ೫೧೪ |
| ವತ್ಸಲಃ | ೪೭೧ | ವಿಭುಃ | ೨೪೦ |
| ವತ್ಸೀ | ೪೭೨ | ವಿಭುಃ | ೮೮೦ |
| ವನಮಾಲೀ | ೫೬೧ | ವಿಮುಕ್ತಾತ್ಮಾ | ೪೫೨ |
| ವರದಃ | ೩೩೦ | ವಿರತಃ | ೩೯೬ |
| ವರಾಙ್ಗಃ | ೭೩೯ | ವಿರೋಚನಃ | ೮೮೨ |
| ವರಾರೋಹಃ | ೧೨೦ | ವಿವಿಕ್ತಃ | ೨೬೩ |
| ವರುಣಃ | ೫೫೩ | ವಿಶಿಷ್ಟಃ | ೨೪೯ |
| ವರ್ಧನಃ | ೨೬೧ | ವಿಶುದ್ಧಾತ್ಮಾ | ೬೩೬ |
| ವರ್ಧಮಾನಃ | ೨೬೨ | ವಿಶೋಕಃ | ೬೩೧ |

| | |
|---|---|
| ವಿಶೋಧನಃ | ೬೩೭ |
| ವಿಶ್ರಾಮಃ | ೪೨೪ |
| ವಿಶ್ರುತಾತ್ಮಾ | ೨೦೭ |
| ವಿಶ್ವಮ್ | ೧ |
| ವಿಶ್ವಕರ್ಮಾ | ೫೦ |
| ವಿಶ್ವದಕ್ಷಿಣಃ | ೪೨೫ |
| ವಿಶ್ವಧೃಕ್ | ೨೩೮ |
| ವಿಶ್ವಬಾಹುಃ | ೩೧೬ |
| ವಿಶ್ವಭುಕ್ | ೨೩೯ |
| ವಿಶ್ವಮೂರ್ತಿಃ | ೭೧೭ |
| ವಿಶ್ವಯೋನಿಃ | ೧೧೭ |
| ವಿಶ್ವಯೋನಿಃ | ೧೪೯ |
| ವಿಶ್ವರೇತಾಃ | ೮೮ |
| ವಿಶ್ವಾತ್ಮಾ | ೨೨೫ |
| ವಿಷಯಃ | ೭೪೨ |
| ವಿಷ್ಣುಃ | ೨ |
| ವಿಷ್ಣುಃ | ೨೫೮ |
| ವಿಷ್ಣುಃ | ೬೫೭ |
| ವಿಷ್ವಕ್ಸೇನಃ | ೧೨೫ |
| ವಿಸ್ತಾರಃ | ೪೨೬ |
| ವಿಹಾಯಸಗತಿಃ | ೮೭೬ |
| ವೀತಭಯಃ | ೯೨೧ |
| ವೀರಬಾಹುಃ | ೪೬೩ |
| ವೀರಹಾ | ೧೬೬ |
| ವೀರಹಾ | ೭೪೧ |
| ವೀರಹಾ | ೯೨೭ |
| ವೀರಃ | ೪೦೧ |
| ವೀರಃ | ೬೪೩ |
| ವೀರಃ | ೬೫೮ |
| ವೃಕ್ಷಃ | ೫೫೫ |
| ವೃದ್ಧಾತ್ಮಾ | ೩೫೨ |
| ವೃಷಕರ್ಮಾ | ೧೧೨ |
| ವೃಷಪರ್ವಾ | ೨೫೯ |
| ವೃಷಪ್ರಿಯಃ | ೫೯೫ |
| ವೃಷಭಃ | ೨೫೭ |
| ವೃಷಭಾಕ್ಷಃ | ೫೯೪ |
| ವೃಷಃ | ೩೧೩ |
| ವೃಷಾಕಪಿಃ | ೧೦೧ |
| ವೃಷಾಕೃತಿಃ | ೧೧೩ |
| ವೃಷಾಹೀ | ೨೫೬ |
| ವೃಷೋದರಃ | ೨೬೦ |
| ವೇಗವಾನ್ | ೩೭೧ |
| ವೇದವಿತ್ | ೧೨೮ |
| ವೇದಃ | ೧೨೭ |
| ವೇದಾಙ್ಗಃ | ೧೩೦ |
| ವೇದ್ಯಃ | ೧೬೩ |
| ವೇಧಾಃ | ೫೪೬ |
| ವೈಕುಣ್ಠಃ | ೪೦೫ |
| ವೈಖಾನಃ | ೯೮೭ |
| ವೈದ್ಯಃ | ೧೬೪ |
| ವಂಶವರ್ಧನಃ | ೮೪೬ |
| ವ್ಯಕ್ತರೂಪಃ | ೩೦೫ |
| ವ್ಯಗ್ರಃ | ೭೬೨ |
| ವ್ಯವಸಾಯಃ | ೩೮೪ |
| ವ್ಯವಸ್ಥಾನಃ | ೩೮೫ |
| ವ್ಯಾದಿಶಃ | ೯೩೯ |
| ವ್ಯಾಪೀ | ೪೬೭ |
| ವ್ಯಾಪ್ತಃ | ೪೧೩ |
| ವ್ಯಾಲಃ | ೯೨ |
| ವ್ಯಾಸಃ | ೫೭೨ |


## ಶ


| | |
|---|---|
| ಶಕ್ತಿಮತಾಂ ಶ್ರೇಷ್ಠಃ | ೪೦೨ |
| ಶಙ್ಖಭೃತ್ | ೯೯೩ |
| ಶತಮೂರ್ತಿಃ | ೭೨೩ |
| ಶತಾನನಃ | ೭೨೪ |
| ಶತಾನನ್ದಃ | ೬೧೭ |
| ಶತಾವರ್ತಃ | ೩೪೩ |
| ಶತ್ರುಘ್ನಃ | ೪೧೨ |
| ಶತ್ರುಜಿತ್ | ೮೨೦ |
| ಶತ್ರುತಾಪನಃ | ೮೨೧ |
| ಶಬ್ದಸಹಃ | ೯೧೨ |
| ಶಬ್ದಾತಿಗಃ | ೯೧೧ |
| ಶಮಃ | ೫೮೧ |
| ಶಮ್ಭುಃ | ೩೮ |
| ಶರಣಮ್ | ೮೬ |
| ಶರಭಃ | ೩೫೬ |
| ಶರೀರಭೂತಭೃತ್ | ೪೮೯ |
| ಶರೀರಭೃತ್ | ೩೪೯ |
| ಶರ್ಮ | ೮೭ |
| ಶರ್ವರೀಕರಃ | ೯೧೪ |
| ಶರ್ವಃ | ೨೬ |
| ಶಶಬಿನ್ದುಃ | ೨೮೫ |
| ಶಾನ್ತಃ | ೫೮೨ |
| ಶಾನ್ತಿದಃ | ೫೮೭ |
| ಶಾನ್ತಿಃ | ೫೮೪ |
| ಶಾರ್ಙ್ಗಧನ್ವಾ | ೯೯೬ |
| ಶಾಶ್ವತಸ್ಥಾಣುಃ | ೧೨೦ |
| ಶಾಶ್ವತಸ್ಥಿರಃ | ೬೨೭ |

| | |
|---|---|
| ಶಾಶ್ವತಃ | ೫೬ |
| ಶಾಸ್ತಾ | ೨೦೬ |
| ಶಿಖಣ್ಡೀ | ೩೧೧ |
| ಶಿಪಿವಿಷ್ಟಃ | ೨೭೩ |
| ಶಿವಃ | ೨೭ |
| ಶಿವಃ | ೬೦೦ |
| ಶಿಶಿರಃ | ೯೧೩ |
| ಶಿಷ್ಟಕೃತ್ | ೨೫೦ |
| ಶಿಷ್ಟೇಷ್ಟಃ | ೩೧೦ |
| ಶುಚಿಶ್ರವಾಃ | ೧೧೮ |
| ಶುಚಿಃ | ೧೫೫ |
| ಶುಚಿಃ | ೨೫೧ |
| ಶುಭಾಙ್ಗಃ | ೫೯೬ |
| ಶುಭಾಙ್ಗಃ | ೭೮೨ |
| ಶುಭೇಕ್ಷಣಃ | ೩೯೩ |
| ಶೂನ್ಯಃ | ೭೪೩ |
| ಶೂರಜನೇಶ್ವರಃ | ೬೪೫ |
| ಶೂರಸೇನಃ | ೭೦೪ |
| ಶೂರಃ | ೩೩೯ |
| ಶೃಙ್ಗೀ | ೭೯೭ |
| ಶೋಕನಾಶನಃ | ೬೩೨ |
| ಶೌರಿಃ | ೩೪೦ |
| ಶೌರಿಃ | ೬೪೪ |
| ಶ್ರಮಣಃ | ೮೫೩ |
| ಶ್ರೀಕರಃ | ೬೧೧ |
| ಶ್ರೀಗರ್ಭಃ | ೩೭೬ |
| ಶ್ರೀದಃ | ೬೦೫ |
| ಶ್ರೀಧರಃ | ೬೧೦ |
| ಶ್ರೀನಿಧಿಃ | ೬೦೮ |
| ಶ್ರೀನಿವಾಸಃ | ೧೮೩ |
| ಶ್ರೀನಿವಾಸಃ | ೬೦೭ |
| ಶ್ರೀಪತಿಃ | ೬೦೩ |
| ಶ್ರೀಮತಾಂ ವರಃ | ೬೦೪ |
| ಶ್ರೀಮಾನ್ | ೨೨ |
| ಶ್ರೀಮಾನ್ | ೧೭೮ |
| ಶ್ರೀಮಾನ್ | ೬೧೩ |
| ಶ್ರೀವತ್ಸವಕ್ಷಾಃ | ೬೦೧ |
| ಶ್ರೀವಾಸಃ | ೬೦೨ |
| ಶ್ರೀವಿಭಾವನಃ | ೬೦೯ |
| ಶ್ರೀಶಃ | ೬೦೬ |
| ಶ್ರುತಿಸಾಗರಃ | ೨೬೪ |
| ಶ್ರೇಯಃ | ೬೧೨ |
| ಶ್ರೇಷ್ಠಃ | ೬೮ |
| **ಸ** | |
| ಸಙ್ಕರ್ಷಣೋಽಚ್ಯುತಃ | ೫೫೨ |
| ಸಙ್ಗ್ರಹಃ | ೧೫೮ |
| ಸತ್ | ೪೭೮ |
| ಸತಾಂ ಗತಿಃ | ೧೮೪ |
| ಸತಾಂ ಗತಿಃ | ೪೫೦ |
| ಸತ್ಕರ್ತಾ | ೨೪೧ |
| ಸತ್ಕೀರ್ತಿಃ | ೬೨೨ |
| ಸತ್ಕೃತಃ | ೨೪೨ |
| ಸತ್ಕೃತಿಃ | ೭೦೦ |
| ಸತ್ತಾ | ೭೦೧ |
| ಸತ್ಪಥಾಚಾರಃ | ೯೫೫ |
| ಸತ್ಪರಾಯಣಮ್ | ೭೦೩ |
| ಸತ್ಯಧರ್ಮಪರಾಕ್ರಮಃ | ೨೨೯ |
| ಸತ್ಯಧರ್ಮಪರಾಯಣಃ | ೮೭೦ |
| ಸತ್ಯಧರ್ಮಾ | ೫೨೯ |
| ಸತ್ಯಪರಾಕ್ರಮಃ | ೨೧೩ |
| ಸತ್ಯಮೇಧಾಃ | ೭೫೫ |
| ಸತ್ಯಸನ್ಧಃ | ೫೧೦ |
| ಸತ್ಯಃ | ೧೦೬ |
| ಸತ್ಯಃ | ೨೧೨ |
| ಸತ್ಯಃ | ೮೬೯ |
| ಸತ್ರಮ್ | ೪೪೯ |
| ಸತ್ತ್ವವಾನ್ | ೮೬೭ |
| ಸತ್ತ್ವಸ್ಥಃ | ೪೮೭ |
| ಸದಾಮರ್ಷೀ | ೮೯೩ |
| ಸದಾಯೋಗೀ | ೧೬೫ |
| ಸದ್ಗತಿಃ | ೬೯೯ |
| ಸದ್ಭೂತಿಃ | ೭೦೨ |
| ಸನಾತ್ | ೮೯೬ |
| ಸನಾತನತಮಃ | ೮೯೭ |
| ಸನ್ತಃ | ೯೨೯ |
| ಸನ್ಧಾತಾ | ೨೦೧ |
| ಸನ್ಧಿಮಾನ್ | ೨೦೨ |
| ಸನ್ನಿವಾಸಃ | ೭೦೬ |
| ಸನ್ನ್ಯಾಸಕೃತ್ | ೫೮೦ |
| ಸಪ್ತಜಿಹ್ವಃ | ೮೨೭ |
| ಸಪ್ತವಾಹನಃ | ೮೨೯ |
| ಸಪ್ತೈಧಾಃ | ೮೨೮ |
| ಸಮಯಜ್ಞಃ | ೩೫೮ |
| ಸಮಃ | ೧೦೯ |
| ಸಮಾತ್ಮಾ | ೧೦೭ |
| ಸಮಾವರ್ತಃ | ೭೭೩ |
| ಸಮಿತಿಂಜಯಃ | ೩೬೨ |
| ಸಮೀಹನಃ | ೪೬೪ |
| ಸಮೀರಣಃ | ೨೨೩ |
| ಸಂಪ್ರಮರ್ದನಃ | ೨೩೧ |

| | |
|---|---|
| ಸಂಭವಃ | ೩೧ |
| ಸರ್ಗಃ | ೧೫೯ |
| ಸರ್ವಕಾಮದಃ | ೮೫೧ |
| ಸರ್ವಗಃ | ೧೨೩ |
| ಸರ್ವಜ್ಞಃ | ೪೫೩ |
| ಸರ್ವಜ್ಞಃ | ೮೧೫ |
| ಸರ್ವತಶ್ಚಕ್ಷುಃ | ೬೨೫ |
| ಸರ್ವತೋ ಮುಖಃ | ೮೧೬ |
| ಸರ್ವದರ್ಶನಃ | ೯೪ |
| ಸರ್ವದರ್ಶೀ | ೪೫೧ |
| ಸರ್ವದೃಕ್ | ೧೯೯ |
| ಸರ್ವದೃಗ್ ವ್ಯಾಸಃ | ೫೭೨ |
| ಸರ್ವಪ್ರಹರಣಾಯುಧಃ | ೧೦೦೦ |
| ಸರ್ವಯೋಗವಿನಿಃಸೃತಃ | ೧೦೩ |
| ಸರ್ವವಾಗೀಶ್ವರೇಶ್ವರಃ | ೮೦೨ |
| ಸರ್ವಲಕ್ಷಣಲಕ್ಷಣ್ಯಃ | ೩೬೦ |
| ಸರ್ವವಿಜ್ಜಯಿ | ೭೯೯ |
| ಸರ್ವವಿದ್ಭಾನುಃ | ೧೨೪ |
| ಸರ್ವಶಸ್ತ್ರಭೃತಾಂ ವರಃ | ೭೫೯ |
| ಸರ್ವಸಹಃ | ೮೬೩ |
| ಸರ್ವಃ | ೨೫ |
| ಸವಃ | ೭೨೭ |
| ಸರ್ವಾದಿಃ | ೯೯ |
| ಸರ್ವಾಸುನಿಲಯಃ | ೭೧೦ |
| ಸರ್ವೇಶ್ವರಃ | ೯೬ |
| ಸವಿತಾ | ೮೮೪ |
| ಸವಿತಾ | ೯೬೯ |
| ಸಹಸ್ರಜಿತ್ | ೩೦೬ |
| ಸಹಸ್ರಪಾತ್ | ೨೨೭ |
| ಸಹಸ್ರಮೂರ್ಧಾ | ೨೨೪ |
| ಸಹಸ್ರಾಕ್ಷಃ | ೨೨೬ |
| ಸಹಸ್ರಾರ್ಚಿಃ | ೮೨೬ |
| ಸಹಸ್ರಾಂಶುಃ | ೪೮೩ |
| ಸಹಃ | ೩೬೮ |
| ಸಹಿಷ್ಣುಃ | ೧೪೪ |
| ಸಹಿಷ್ಣುಃ | ೫೬೫ |
| ಸಾಕ್ಷೀ | ೧೫ |
| ಸಾತ್ವತಾಂ ಪತಿಃ | ೫೧೨ |
| ಸಾತ್ತ್ವಿಕಃ | ೮೬೮ |
| ಸಾಧುಃ | ೨೪೩ |
| ಸಾಮ | ೫೭೬ |
| ಸಾಮಗಃ | ೫೭೫ |
| ಸಾಮಗಾಯನಃ | ೯೮೮ |
| ಸಿದ್ಧಸಙ್ಕಲ್ಪಃ | ೨೫೩ |
| ಸಿದ್ಧಃ | ೯೭ |
| ಸಿದ್ಧಃ | ೮೧೯ |
| ಸಿದ್ಧಾರ್ಥ | ೨೫೨ |
| ಸಿದ್ಧಿದಃ | ೨೫೪ |
| ಸಿದ್ಧಿಸಾಧನಃ | ೨೫೫ |
| ಸಿಂಹಃ | ೪೮೮ |
| ಸಿದ್ಧಿಃ | ೯೮ |
| ಸುಖದಃ | ೪೫೯ |
| ಸುಖದಃ | ೮೮೯ |
| ಸುಘೋಷಃ | ೪೫೮ |
| ಸುತನ್ತುಃ | ೭೮೪ |
| ಸುತಪಾಃ | ೧೯೫ |
| ಸುದರ್ಶನಃ | ೪೧೭ |
| ಸುಧನ್ವಾ | ೫೬೭ |
| ಸುನ್ದರಃ | ೭೯೧ |
| ಸುನ್ದಃ | ೭೯೨ |
| ಸುಪರ್ಣಃ | ೧೯೨ |
| ಸುಪರ್ಣಃ | ೮೫೫ |
| ಸುಪ್ರಸಾದಃ | ೨೩೬ |
| ಸುಭುಜಃ | ೨೬೫ |
| ಸುಮುಖಃ | ೪೫೬ |
| ಸುಮೇಧಾಃ | ೭೫೨ |
| ಸುಯಾಮುನಃ | ೭೦೭ |
| ಸುರಾಧ್ಯಕ್ಷಃ | ೧೩೪ |
| ಸುರಾನನ್ದಃ | ೧೮೬ |
| ಸುರಾರಿಹಾ | ೨೦೮ |
| ಸುರುಚಿಃ | ೮೭೮ |
| ಸುರೇಶಃ | ೮೫ |
| ಸುರೇಶ್ವರಃ | ೨೬ |
| ಸುಲಭಃ | ೮೧೭ |
| ಸುಲೋಚನಃ | ೭೯೪ |
| ಸುವರ್ಣಬಿನ್ದುಃ | ೮೦೦ |
| ಸುವರ್ಣವರ್ಣಃ | ೭೩೭ |
| ಸುವೀರಃ | ೯೪೪ |
| ಸುವ್ರತಃ | ೪೫೫ |
| ಸುವ್ರತಃ | ೮೧೮ |
| ಸುಷೇಣಃ | ೫೪೦ |
| ಸುಹೃತ್ | ೪೬೦ |
| ಸೂಕ್ಷ್ಮಃ | ೪೫೭ |
| ಸೂರ್ಯಃ | ೮೮೩ |
| ಸೋಮಪಃ | ೫೦೩ |
| ಸೋಮಃ | ೫೦೫ |
| ಸಂಕ್ಷೇಪ್ತಾ | ೫೯೮ |
| ಸಂವತ್ಸರಃ | ೯೧ |

ಸಂವತ್ಸರಃ ೪೨೨
ಸಂವೃತಃ ೨೩೦
ಸಂಸ್ಥಾನಃ ೩೮೬
ಸ್ಕನ್ದಃ ೩೨೭
ಸ್ಕನ್ದಧರಃ ೩೨೮
ಸ್ತವಪ್ರಿಯಃ ೬೮೦
ಸ್ತವ್ಯಃ ೬೭೯
ಸ್ತುತಿಃ ೬೮೨
ಸ್ತೋತಾ ೬೮೩
ಸ್ತೋತ್ರಮ್ ೬೮೧
ಸ್ಥವಿರೋ ಧ್ರುವಃ ೫೪
ಸ್ಥವಿಷ್ಠಃ ೫೩
ಸ್ಥವಿಷ್ಠಃ ೪೩೬
ಸ್ಥಾಣುಃ ೨೮
ಸ್ಥಾನದಃ ೩೮೭
ಸ್ಥಾವರಸ್ಥಾಣುಃ ೪೨೭
ಸ್ಥಿರಃ ೨೦೩
ಸ್ಥೂಲಃ ೮೩೮
ಸ್ಫುಟಾಕ್ಷರಃ ೨೭೯
ಸ್ರಗ್ವೀ ೨೧೬
ಸ್ರಷ್ಟಾ ೫೮೮
ಸ್ರಷ್ಟಾ ೯೯೦
ಸ್ವಕ್ಷಃ ೬೧೫
ಸ್ವಙ್ಗಃ ೬೧೬
ಸ್ವಧೃತಃ ೮೪೩
ಸ್ವಯಂಜಾತಃ ೯೮೬
ಸ್ವಯಂಭೂಃ ೩೭
ಸ್ವವಶಃ ೪೬೬
ಸ್ವಸ್ತಿ ೯೦೩
ಸ್ವಸ್ತಿಕೃತ್ ೯೦೨
ಸ್ವಸ್ತಿದಕ್ಷಿಣಃ ೯೦೫
ಸ್ವಸ್ತಿದಃ ೯೦೧
ಸ್ವಸ್ತಿಭುಕ್ ೯೦೪
ಸ್ವಾಙ್ಗಃ ೫೪೮
ಸ್ವಾಪನಃ ೪೬೫
ಸ್ವಾಭಾವ್ಯಃ ೫೨೩
ಸ್ವಾಸ್ಯಃ ೮೪೪


## ಹ


ಹರಿಃ ೬೫೦
ಹಲಾಯುಧಃ ೫೬೨
ಹವಿರ್ಹರಿಃ ೩೫೯
ಹವಿಃ ೬೯೮
ಹಿರಣ್ಯಗರ್ಭಃ ೭೧
ಹಿರಣ್ಯಗರ್ಭಃ ೪೧೧
ಹಿರಣ್ಯನಾಭಃ ೧೯೪
ಹುತಭುಕ್ ೮೭೯
ಹುತಭುಕ್ ೮೮೭
ಹೃಷೀಕೇಶಃ ೪೭
ಹೇತುಃ ೩೬೨
ಹೇಮಾಙ್ಗಃ ೭೩೮
ಹಂಸಃ ೧೯೧

# ಕೆಲವು ಪ್ರಕರಣ ಗ್ರಂಥಗಳು

೧. **ಪ್ರಕರಣಗಳು - ೧ನೆಯ ಸಂಪುಟ : ಉಪದೇಶಸಾಹಸ್ರಿ.** ಇದು ಪದ್ಯಭಾಗವೆಂದೂ ಗದ್ಯಭಾಗವೆಂದೂ ಎರಡು ಭಾಗಗಳಾಗಿವೆ. ಪದ್ಯಪ್ರಬಂಧವು ಶ್ರೀಶ್ರೀಗಳವರಿಂದ (ಪೂರ್ವಾಶ್ರಮ : ವೈ. ಸುಬ್ಬರಾವ್) ಕನ್ನಡಾನುವಾದ, ಟಿಪ್ಪಣಿ, ವಿವರಣೆ- ಮುಂತಾದ ಸೌಕರ್ಯಗಳೊಡನೆ ಪ್ರಥಮ ಬಾರಿಗೆ 1936 ರಲ್ಲಿ ಒಂದನೆಯ ಭಾಗವು ಪ್ರಕಟಿತವಾಯಿತು. 1947 ರಲ್ಲಿ ಎರಡನೆಯ ಮತ್ತು 1956ರಲ್ಲಿ ಮೂರನೆಯ ಭಾಗವೂ ಕ್ರಮವಾಗಿ ಪ್ರಕಟನವಾಗಿ ಪೂರ್ತಿಗೊಂಡಿತ್ತು. 1995 ರಲ್ಲಿ ಮೂರು ಪದ್ಯ ಭಾಗಗಳನ್ನೂ ಒಟ್ಟುಗೂಡಿಸಿ ಮೂಲ, ಅನುವಾದ, ಅನ್ವಯ, ಟಿಪ್ಪಣಿ, ವಿವರಣೆಗಳೊಡನೆ ಒಂದೇ ಸಂಪುಟದಲ್ಲಿ ಹೊರತಂದಿದೆ. ವಿಚಾರಶೈಲಿಯಲ್ಲಿ ಪ್ರಸ್ಥಾನತ್ರಯಗಳೊಡನೆ ಸರಿ ತೂಗುವ ಗ್ರಂಥವಿದು. **(ಮೊದಲನೆಯ ಹೊಸ ಮುದ್ರಣ (1995) ಪು. ಡೆಮ್ಮಿ ೧೬+೫೨೮)**

ಇದೇ ಗ್ರಂಥದ ಗದ್ಯಭಾಗವು 1983ರಲ್ಲಿ ಪ್ರತ್ಯೇಕ ಗ್ರಂಥವಾಗಿ ಪ್ರಕಟವಾಗಿದ್ದು ಈಗ ಪುನರ್ಮುದ್ರಣಕ್ಕಾಗಿ ಕಾದಿದೆ. ಇದರಲ್ಲಿ ಗುರುಶಿಷ್ಯಸಂವಾದರೂಪವಾಗಿ ವೇದಾಂತತತ್ತ್ವವನ್ನು ವಿಚಾರ ಮಾಡಲಾಗಿದೆ. ಪ್ರಸ್ಥಾನತ್ರಯಭಾಷ್ಯಗಳಂತೆಯೇ ಪರಿಶುದ್ಧವೇದಾಂತತತ್ತ್ವವನ್ನು ನಿರೂಪಿಸಲಾಗಿದೆ. **(ಮೂರನೆಯ ಮುದ್ರಣ : (1983) ಪು. ಡೆಮ್ಮಿ ೧೨ + ೧೮೦)**

೨. **ಪ್ರಕರಣಗಳು : ೨ನೆಯ ಸಂಪುಟ :** ಇದರಲ್ಲಿ ಸ್ವಾತ್ಮನಿರೂಪಣ, ಮನೀಷಾ ಪಂಚಕ, ನಿರ್ವಾಣಷಟ್ಕ, ಬ್ರಹ್ಮಾನುಚಿಂತನ, ಸದಾಚಾರಾನುಸಂಧಾನ, ದಶಶ್ಲೋಕೀ - ಈ ಆರು ಪ್ರಕರಣಗಳಿವೆ. ಪ್ರತಿಯೊಂದಕ್ಕೂ ಅರ್ಥ, ಟಿಪ್ಪಣಿಗಳು, ವಿಚಾರಪ್ರಚೋದಕವಾದ ಪೀಠಿಕೆ ಮುಂತಾದವುಗಳಿವೆ. **(ಮೊದಲನೆಯ ಮುದ್ರಣ : (1957) ಪು. ಡೆಮ್ಮಿ ೨೬ + ೧೧೦)**

೩. **ಪ್ರಕರಣಗಳು : ೩ನೆಯ ಸಂಪುಟ ಅಥವಾ ವಿವೇಕಚೂಡಾಮಣಿ :** ಶ್ರೀಶಂಕರಾಚಾರ್ಯರಚಿತವೆಂದು ಪ್ರಸಿದ್ಧವಾಗಿರುವ ಈ ಗ್ರಂಥವು ತನ್ನ ಸರಳವಾದ ಶೈಲಿಯಿಂದ ತತ್ತ್ವಪ್ರತಿಪಾದನೆಮಾಡುವದರಿಂದ ಬಹುಜನಪ್ರಿಯವಾದ ಪ್ರಕರಣವಾಗಿದೆ. **'ಗೀತಾ ತಾತ್ಪರ್ಯಬೋಧಿನೀ'** ಕರ್ತೃಗಳಾದ ಶ್ರೀ ಶಂಕರಾನಂದರ ಕೃತಿಯಿದು - ಎಂಬುದನ್ನು ಶ್ರೀಶ್ರೀಗಳವರು ಪರಿಶಿಷ್ಟದಲ್ಲಿ ಎರಡೂ ಗ್ರಂಥಗಳ ಭಾಗಗಳ ಪರಸ್ಪರ ಹೋಲಿಕೆಯಿಂದ ಪ್ರತಿಪಾದಿಸಿದ್ದಾರೆ. ಮುಮುಕ್ಷುಗಳಿಗೂ ವಿಚಾರಪರರಾದ ಸಂಶೋಧಕರಿಗೂ ಅಗತ್ಯವಾಗಿ ಬೇಕಾದ ಗ್ರಂಥವಾಗಿದೆ.

**(ಮೂರನೆಯ ಮುದ್ರಣ : (1957, 1975, 1993) ಪು. ಡೆಮ್ಮಿ ೧೮ + ೨೨೦)**

೪. **ಪ್ರಕರಣಗಳು - ೪ನೆಯ ಸಂಪುಟ :** ಇದರಲ್ಲಿ ಜೀವನ್ಮುಕ್ತಾನಂದಲಹರೀ, ಯತಿಪಂಚಕ, ಮಾಯಾಪಂಚಕ, ನಿರ್ವಾಣಮಂಜರಿ, ಬ್ರಹ್ಮಜ್ಞಾನಾವಳೀಮಾಲೆ, ಅನಾತ್ಮಶ್ರೀ ವಿಗರ್ಹಣ, ತತ್ತ್ವೋಪದೇಶ, ಪ್ರೌಢಾನುಭೂತಿ, ಉಪದೇಶಪಂಚಕ, ಸ್ವರೂಪಾನುಸಂಧಾನ, ಮಹಾವಾಕ್ಯದರ್ಪಣ - ಈ ಹನ್ನೊಂದು ಪ್ರಕರಣಗಳು ಮೂಲ, ಅರ್ಥ ಸಮೇತ ಇವೆ. ಮಹಾವಾಕ್ಯದರ್ಪಣವು ಸ್ವಲ್ಪ ದೊಡ್ಡ ಪ್ರಕರಣವಾಗಿದ್ದು ಮಹಾವಾಕ್ಯವಿಚಾರವನ್ನೊಳಗೊಂಡಿದೆ. **(ಮೊದಲನೆಯ ಮುದ್ರಣ : (1962) ಪು. ಡೆಮ್ಮಿ ೧೬ + ೧೭೦)**

೫. **ಪ್ರಕರಣಗಳು - ೫ನೆಯ ಸಂಪುಟ : ಸರ್ವವೇಂದಾತಸಿದ್ಧಾಂತಸಾರಸಂಗ್ರಹ :** ವೆಂಬ ಅಪೂರ್ವಪ್ರಕರಣವನ್ನು ಈ ಸಂಪುಟದಲ್ಲಿ ಅಳವಡಿಸಲಾಗಿದೆ. ಅಧ್ಯಾರೋಪಾಪವಾದ, ಅವಸ್ಥಾತ್ರಯ, (ಪಂಚಕೋಶ) ಪರಿಶೀಲನೆಯಿಂದ ವಿಶ್ವ -ವೈಶ್ವಾನರ, ತೈಜಸ - ಹಿರಣ್ಯಗರ್ಭ, ಪ್ರಾಜ್ಞ - ಈಶ್ವರ, ಎಂಬ ಸಮಷ್ಟಿವ್ಯಷ್ಟ್ಯುಪಾಧಿಗಳಿಂದ ಆತ್ಮವಿಭಾಗ ಮತ್ತು ಅವರ ಐಕ್ಯವನ್ನು ಪ್ರತಿಪಾದಿಸಿ ಶ್ರವಣಮನನನಿದಿಧ್ಯಾಸನಗಳನ್ನು ವಾಕ್ಯಾರ್ಥಜ್ಞಾನಕ್ಕೆ ಸಾಧನವಾಗಿ ಹೇಳಿರುವದಲ್ಲದೆ ಸಮಾಧಿಯ ವಿವರಗಳನ್ನೂ ತಿಳಿಸಿದೆ. ವೇದಾಂತವಿಚಾರ ಪರೀಶೀಲಕರು ಅವಶ್ಯವಾಗಿ ಓದಬೇಕಾದ ಗ್ರಂಥವಿದು.

**(ಮೊದಲನೆಯ ಮುದ್ರಣ ( 1969) ಪು. ಡೆಮ್ಮಿ ೧೨ + ೨೫೮)**

೬. **ಪ್ರಕರಣಗಳು - ೬ನೆಯ ಸಂಪುಟ : ವಿಷ್ಣುಸಹಸ್ರನಾಮಭಾಷ್ಯ :** ಶ್ರೀಶಂಕರಾಚಾರ್ಯವಿರಚಿತವೆಂದು ಪ್ರಸಿದ್ಧವಾಗಿರುವ ವಿಷ್ಣುಸಹಸ್ರನಾಮಭಾಷ್ಯವನ್ನು ಮೂಲ, ಅನುವಾದ, ಟಿಪ್ಪಣಿ - ಇತ್ಯಾದಿಗಳೊಡನೆ ಕೊಡಲಾಗಿದೆ. ಅತ್ಯಮೂಲ್ಯವಾದ ಗ್ರಂಥವಿದು. **ಈಗ ಇದು ನಿಮ್ಮ ಕೈಯಲ್ಲಿದೆ.**

**(ಮೂರನೆಯ ಮುದ್ರಣ : ( 1947, 1986, 2000) ಪು. ಡೆಮ್ಮಿ ೧೦+೩೯೨)**

೭. **ಪ್ರಕರಣಗಳು - ೭ನೆಯ ಸಂಪುಟ : ಸನತ್ಸುಜಾತೀಯಮ್ :** ಮಹಾಭಾರತದಲ್ಲಿ ಉದ್ಯೋಗಪರ್ವದಲ್ಲಿರುವ ಈ ಭಾಗವು ಧೃತರಾಷ್ಟ್ರನಿಗೆ ಸನತ್ಸುಜಾತರು ಮಾಡಿರುವ ತತ್ತ್ವೋಪದೇಶಗಳನ್ನು ಒಳಗೊಂಡಿದೆ. ಶಾಂಕರಭಾಷ್ಯ, ಮೂಲ, ಅನುವಾದ, ಟಿಪ್ಪಣಿಗಳೊಡನೆ ಜಿಜ್ಞಾಸುಗಳಿಗೆ ಉಪಯುಕ್ತವಾಗಿದೆ.

**(ಮೊದಲನೆಯ ಮುದ್ರಣ : ( 1976) ಪು. ಡೆಮ್ಮಿ ೧೪ + ೨೪೦)**

೮. **ಪ್ರಕರಣಗಳು - ೮ನೆಯ ಸಂಪುಟ : ಪ್ರಬೋಧಸುಧಾಕರ ಇತ್ಯಾದಿ :** ಶ್ರೀಶಂಕರಭಗವತ್ಪಾದರಚಿತವೆಂದು ಸುಪ್ರಸಿದ್ಧವಾಗಿರುವ **'ಪ್ರಬೋಧಸುಧಾಕರ'** ಎಂಬ ಚಿಕ್ಕ ಪ್ರಕರಣಗ್ರಂಥ. ಭಕ್ತಿ ಹಾಗೂ ಯೋಗದರ್ಶನಗಳಿಂದ ಮಿಶ್ರವಾದ ವೇದಾಂತ ಸಿದ್ಧಾಂತವು ಇದರಲ್ಲಿ ನಿರೂಪಿಸಲ್ಪಟ್ಟಿದೆ. **'ಪ್ರಶ್ನೋತ್ತರಮಾಲಿಕಾ'** ಎಂಬ ಹೆಸರಿನ ಪ್ರಸಿದ್ಧವಾಗಿರುವ ಆಚಾರ್ಯರ ಮತ್ತೊಂದು ಕೃತಿಯನ್ನೂ, **ಶ್ರೀರಾಮಭುಜಂಗಪ್ರಯಾತಸ್ತೋತ್ರ, ದತ್ತಲಹರೀ**- ಎಂಬ ವಿಷಯಗಳನ್ನೂ ಸೇರಿಸಿ ಸಂಪುಟವನ್ನು ಹೊರತಂದಿದೆ.

**(ಎರಡನೆಯ ಮುದ್ರಣ : ( 1978, 1999) ಪು. ಡೆಮ್ಮಿ ೮+೧೦೪)**

**ಹೆಚ್ಚಿನ ವಿವರಗಳಿಗೆ ಮತ್ತು ಪುಸ್ತಕಗಳ ಪೂರ ಬೆಲೆಪಟ್ಟಿಗೆ ಸಂಪರ್ಕಿಸಿ.**

**ಅ.ಪ್ರಕಾ. ಹೊಳೆನರಸೀಪುರ**
ಹಾಸನ ಜಿಲ್ಲೆ - 573211
ದೂ : 08175 - 73820

**ಅ.ಪ್ರ.ಕಾ. ತ್ಯಾಗರಾಜನಗರ**
ಬೆಂಗಳೂರು - 560 028
ದೂ : 080 - 6765548

## ಈ ಗ್ರಂಥದ ಪ್ರಕಟನೆಗೆ ಧನ ಸಹಾಯವನ್ನು ನೀಡಿರುವ ಮಹನೀಯರುಗಳು

### ಶ್ರೀಯುತರುಗಳಾದ

| | | | |
|---|---|---|---|
| 1. | ಅನಂತ ಪದ್ಮನಾಭಯ್ಯ | ಬೆಂಗಳೂರು | ರೂ. 501-00 |
| 2. | ವಿ. ವೆಂಕಟಸುಬ್ಬಾ ಜೋಯಿಸ್ (ಮಾತಾ ಪಿತೃಗಳಾದ ದಿ॥ ಹೆಬ್ಬೂರು ಊರು ಬಾಗಿಲು ವೆಂಕಟನಾರಾಯಣ ಜೋಯಿಸರು ಮತ್ತು ಲಕ್ಷ್ಮೀದೇವಮ್ಮ ಸ್ಮರಣಾರ್ಥ) | ಬೆಂಗಳೂರು | ರೂ. 501-00 |
| 3. | ಶ್ರೀಮತಿ ಗಾಯತ್ರಿ | ಬೆಂಗಳೂರು | ರೂ. 1001-00 |
| 4. | ಶ್ರೀಮತಿ ನಾಗರತ್ನಮ್ಮ- ವಿಶ್ವನಾಥ ಶ್ರೇಷ್ಠೀ | ತಿಪಟೂರು | ರೂ. 2001-00 |
| | ಒಟ್ಟು | | **ರೂ. 4004-00** |

ಇವರುಗಳಿಗೆಲ್ಲಾ ನಮ್ಮ ಕೃತಜ್ಞತಾಪೂರ್ವಕವಾದ ಅಭಿನಂದನೆಗಳು

## ಸಂಸ್ಥಾಪಕರ ಸ್ಮರಣೆ



ಕರ್ನಾಟಕದೇಶದ ಅಭಿನವಶಂಕರಾಚಾರ್ಯರೆಂದೇ ಸುಪ್ರಸಿದ್ಧರಾಗಿರುವ ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾ-ನಂದೇಂದ್ರಸರಸ್ವತೀ ಮಹಾಸ್ವಾಮಿಗಳು ಶಾಂಕರ ವೇದಾಂತದ ವಿಷಯಕ್ಕೆ 20ನೆಯ ಶತಮಾನದ ಅಧಿಕೃತ ವಕ್ತಾರರೂ, ಬರಹಗಾರರೂ ಆಗಿದ್ದರು. ಪೂಜ್ಯಶ್ರೀಶ್ರೀಗಳವರ ಅನುವಾದ, ಟಿಪ್ಪಣಿ, ವಿಮರ್ಶಾತ್ಮಕ ಪೀಠಿಕೆಗಳಿಂದ ಅಲಂಕೃತವಾದ ಶ್ರೀಶಂಕರರ ಪ್ರಸ್ಥಾನತ್ರಯ ಭಾಷ್ಯಗಳು, ಸಂಸ್ಕೃತವು ಬಾರದ ಕನ್ನಡಿಗರಾದ ಅಧ್ಯಾತ್ಮ ವಿಚಾರ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

5. 1. 1880ರಂದು ಜನಿಸಿದ ಪೂಜ್ಯ ಶ್ರೀಶ್ರೀಗಳವರ ಪೂರ್ವಾಶ್ರಮದ ಹೆಸರು ವೈ. ಸುಬ್ಬರಾವ್ ಎಂದಿತ್ತು. 1948ರವರೆಗೆ (68ನೆಯ ವಯಸ್ಸಿನವರೆಗೆ) ಅವರು ''ಸುಬ್ಬ್ರಾಯ''ರೆಂದೇ ಪ್ರಖ್ಯಾತರಾಗಿದ್ದರು. 10. 6. 1948ರಂದು ಸಂನ್ಯಾಸವನ್ನು ಸ್ವೀಕರಿಸಿ **ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳಾದರು.**

'ಬೆಳಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿದಂದಿನಿಂದ ಬದುಕಿರುವವರೆಗೂ ವೇದಾಂತಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು **''ಪುರುಷಸರಸ್ವತಿ''** ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಅವರು ಸಂಸ್ಥಾಪಿಸಿರುವ **ಅಧ್ಯಾತ್ಮಪ್ರಕಾಶ ಕಾರ್ಯಾಲಯವು** ದೇಶ ವಿದೇಶಗಳಲ್ಲೂ ಪ್ರಖ್ಯಾತವಾಗಿದ್ದು ಈಗಲೂ ನಿಜವಾದ ಅಧ್ಯಾತ್ಮವಿದ್ಯೆಯ ಅಂತರರಾಷ್ಟ್ರೀಯ ಕೇಂದ್ರವಾಗಿದೆ.

ಪೂಜ್ಯರು ಕರ್ನಾಟಕದ ಅಭಿನವಶಂಕರಾಚಾರ್ಯರಾಗಿ ಬಾಳಿ 1975ನೇ ಆಗಸ್ಟ್ 5 (1880- 1975)ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿಪೀಠವು ಹೊಳೆನರಸೀಪುರದಲ್ಲಿದೆ.

**ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹಿ ।**
**ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥**
**''ಓಂ ನಮೋ ಭಗವತೇ ಸಚ್ಚಿದಾನಂದಾಯ''**